# ಢುಂಢಿ

ಅರಣ್ಯಕನೊಬ್ಬ ಗಣಪತಿಯಾದ ಕಥೆ

ಯೋಗೇಶ್ ಮಾಸ್ಟರ್

ರಾಜಮಾರ್ಗ

ಸಾಹಿತ್ಯ ಸಂಸ್ಕೃತಿ

899, 19ನೇ ಮುಖ್ಯರಸ್ತೆ,

ಜ್ಞಾನಭಾರತಿ 2ನೇ ಹಂತ

ಮರಿಯಪ್ಪನ ಪಾಳ್ಯ, ಬೆಂಗಳೂರು: 56

Dhundhi:

Aranyakanobba Ganapatiyaada kathe

Kannada novel

First print: 2013

Pages:

Price:

Paper used for this book:

size:

copyrights: Yogesh Master

Cover page: Raghu Kumar

Inside illustrations: Manasa

Design:

Printed at:

Published by: Rajamarga Sahitya Samskriti

899, 19th cross, Jnanabharathi 2nd stage,

Mariyappana Palya, Bengaluru: 560056

Phone: 08880660347

# ಮುನ್ನುಡಿ

ಢುಂಢಿ, ಅರಣ್ಯಕನೊಬ್ಬ ಗಣಪತಿಯಾದ ಕತೆ. ಇದರಲ್ಲಿ ನಾನು ಏನನ್ನು ಹೇಳಬೇಕೆಂದಿದ್ದೇನೆ ಎಂಬುದು ನನಗೆ ನೇರವಾಗಿದೆ ಮತ್ತು ಸ್ಪಷ್ಟವಾಗಿದೆ. ಯಾವುದೇ ಗೊಂದಲಗಳು ಮತ್ತು ಗೋಜಲುಗಳು ಇಲ್ಲ.

ಇಲ್ಲಿ ನಾನು ಕಂಡುಕೊಂಡಂತಹ ಕೆಲವು ಅಂಶಗಳನ್ನು ತಮ್ಮ ಗಮನಕ್ಕೆ ತರಲು ಇಚ್ಛಿಸುತ್ತೇನೆ.

1. ಪೌರಾಣಿಕ ಕಥಾನಕಗಳು ವಾಸ್ತವ ನಿರೂಪಣೆಗಳು ಅಲ್ಲ. ಒಂದೋ ಉತ್ಪ್ರೇಕ್ಷಿತ ವಿವರಣೆಗಳು ಹಾಗೂ ಅಲಂಕಾರಿಕ ನಾಟಕೀಯತೆಗಳು ಅಥವಾ ಮೌಢ್ಯದಿಂದ ಕೂಡಿರುವ ಭ್ರಮಾಧೀನ ಕಾಲ್ಪನಿಕ ಕಥನಗಳು ಅಥವಾ ತಮ್ಮ ನೆಚ್ಚಿನ ಪಾತ್ರವನ್ನು / ನಾಯಕನನ್ನು ವೈಭವೀಕರಿಸಲು ಮಾಡಿರುವ ತಂತ್ರಗಳು.

2. ಯಾವುದೋ ಒಂದು ಸಮಯದಲ್ಲಿ, ಯಾವುದೋ ಒಂದು ಸ್ಥಳದಲ್ಲಿ, ಯಾವುದೋ ವ್ಯಕ್ತಿಯ ಸುತ್ತ ಘಟಿಸಿರುವ ಘಟನೆಗಳು ಕಾಲದಿಂದ ಕಾಲಕ್ಕೆ, ಸ್ಥಳದಿಂದ ಸ್ಥಳಕ್ಕೆ, ತಲೆಮಾರುಗಳಿಂದ ತಲೆಮಾರುಗಳಿಗೆ ನಿರೂಪಿತವಾಗುವಾಗ ಮೂಲರೂಪದಲ್ಲಿ ಉಳಿದಿರುವ ಸಾಧ್ಯತೆಗಳೇ ಇಲ್ಲ.

3. ಒಂದು ವಿಷಯವನ್ನು ನಿರೂಪಿಸುವಾಗ ಆ ವಿಷಯದ ಕುರಿತಾದ ಗುಣಾವಗುಣಗಳ ಪ್ರದರ್ಶನ, ಅದರ ನಿರೂಪಕನಿಗಿರುವ ಅಭಿರುಚಿ, ಸಂಸ್ಕಾರ, ದೃಷ್ಟಿಕೋನ ಹಾಗೂ ಇತರೇ ವೈಯಕ್ತಿಕವಾದ ಮಾನಸಿಕ ಅವಸ್ಥೆಯನ್ನು, ಭಾವನಾತ್ಮಕವಾದ ನಿಲುವನ್ನು ಅವಲಂಬಿಸಿರುತ್ತದೆ.

4. ಭಯದಿಂದಲೋ ಅಥವಾ ಆಸೆಯಿಂದಲೋ ತಮ್ಮ ಶಕ್ತಿಗೆ ಮತ್ತು ಗೋಚರಕ್ಕೆ ಅತೀತವಾದ ಯಾವುದೋ ಒಂದು ನಂಬುಗೆಗೆ ಶರಣಾಗುವ ಬಹುತೇಕ ಜನರ ಜಾಯಮಾನದಂತೆ ಅಸ್ವಾಭಾವಿಕವಾದ ಸಿದ್ಧಾಂತಗಳಿಂದ ಒಡಮೂಡಿರುವ ಕಥೆಗಳು ತಮ್ಮದೇ ಭಯಗಳಲ್ಲಿ, ಆಸೆಗಳಲ್ಲಿ ಬಂಧಿತರಾಗಿರುವ ಜನರಲ್ಲಿ ಯಾವಾಗಲೂ ಜೀವಂತವಾಗಿರುತ್ತದೆ. ಅಥವಾ ಅವರು ಅವುಗಳನ್ನು ಜೀವಂತವಾಗಿರಿಸಿರುತ್ತಾರೆ.

*

ನಾನು ಬಹು ಸಣ್ಣವನಿರುವಾಗ (ಏಳೆಂಟು ವರುಷದವನಿರಬೇಕು) ನಮ್ಮ ಮನೆಯಲ್ಲಿ ಒಂದು ಹಳೆಯ ಕ್ಯಾಲೆಂಡರ್ ಆರ್ಟ್ ಶೈಲಿಯ ಗಣಪತಿಯ ಚಿತ್ರವೊಂದು ದೊರಕಿತ್ತು. ಹಳೆಯ ಜಾಕಾಯಿ ಪೆಟ್ಟಿಗೆಯಲ್ಲಿ ನಮ್ಮ ತಾತನವರ ತಾತರಾದವರಾರೋ ಸಂಗ್ರಹಿಸಿಟ್ಟ ಚಿತ್ರವದು. ಬಹಳ ಹಳತಾಗಿತ್ತು. ಅದು ನನ್ನ ಕೈಗೆ ಬಂದ ಮೇಲೆ ಪೂರ್ತಿ ನಾಶವಾಯ್ತು. ಆ ಚಿತ್ರದಲ್ಲಿ ಗಣಪತಿಯು ಬಹುಕ್ರೂರವಾಗಿ ಮತ್ತು ಅನಾಗರಿಕವಾಗಿ ಚಿತ್ರಿತನಾಗಿದ್ದ. ಮೈಯೆಲ್ಲಾ ರಕ್ತದಿಂದ ಕೊಳಕಾಗಿ, ಋಷಿ ಮುನಿಗಳನ್ನೆಲ್ಲಾ ತುಳಿಯುತ್ತಿರುವಂತೆಯೂ, ದೇವತೆಗಳನ್ನೆಲ್ಲಾ ಹೆದರಿಸುತ್ತಿರುವಂತೆಯೂ ಆ ಚಿತ್ರವಿತ್ತು. ಪ್ರತಿ ಗಣೇಶ ಹಬ್ಬಕ್ಕೆ ಹೊಸ ಬಟ್ಟೆಯ ಭಾಗ್ಯ, ರಜೆಯ ಮಜ, ಪೂಜೆ ಮಾಡುವಾಗ ಪುರೋಹಿತರು ನನಗೇ ಪ್ರಾಶಸ್ತ್ಯಕೊಟ್ಟು ಕೂಡಿಸುತ್ತಿದ್ದುದ್ದಕ್ಕೆಲ್ಲಾ ಕಾರಣವಾಗಿದ್ದ ಸುಂದರ, ಮುದ್ದು ಮುಖದ ಗಣಪನ ಅಷ್ಟೊಂದು ಅನಾಗರಿಕವಾಗಿ ನೋಡಲು ಸಾಧ್ಯವಾಗದೇ ಆ ಚಿತ್ರದ ಪ್ರತಿಯನ್ನು ನಾನು ನಾಶಪಡಿಸಿಬಿಟ್ಟೆ.

ಆದರೆ ಆ ಚಿತ್ರ ನನ್ನ ಮನಸ್ಸಿನಲ್ಲಿ ಉಳಿದುಕೊಂಡಿತ್ತು. ನಾನು ಪ್ರೌಢಶಾಲಾ ವಿದ್ಯಾರ್ಥಿಯಾಗುವ ಹೊತ್ತಿಗೆ ನನ್ನದೇ ಆದಂತಹ ವಿಚಾರಗಳನ್ನು ಬೆಳೆಸಿಕೊಂಡು ಧರ್ಮವನ್ನು, ದೇವರನ್ನು ಮತ್ತು ನಂಬಿಕೆಗಳನ್ನು ಪ್ರಶ್ನಿಸುತ್ತಿದ್ದೆ. ಕೆಲವೊಂದನ್ನು ಈ ರೀತಿಯಾಗಿದ್ದಿರಬೇಕು, ಕಾಲಕ್ರಮೇಣ ಹೀಗೆ ತಿರುಚಲ್ಪಟ್ಟಿದೆ ಎಂದು

ಅಂದುಕೊಂಡರೆ, ಕೆಲವೊಂದನ್ನು ಸಾರಾಸಗಟಾಗಿ ತಿರಸ್ಕರಿಸುತ್ತಿದ್ದೆ. ಹರಿಕಥೆಗಳನ್ನು ಕೇಳುತ್ತಲೇ ಬೆಳೆದು ರಂಗಭೂಮಿ ಕಲಾವಿದನಾಗಿ ರೂಪುಗೊಂಡ ನನಗೆ ನಾಟಕೀಯವಾದಂತಹ, ವೈಭವೀಕರಣಗಳುಳ್ಳ ಪುರಾಣಗಳನ್ನು ತಿರಸ್ಕರಿಸಲು ಸಾಧ್ಯವಾಗಲಿಲ್ಲ. ಆದರೆ, ಅವುಗಳನ್ನು ಇರುವ ರೀತಿಯಲ್ಲಿಯೇ ಒಪ್ಪಿಕೊಳ್ಳಲು ನನ್ನೊಳಗಿದ್ದ ವೈಚಾರಿಕತೆ ಒಪ್ಪಿಕೊಳ್ಳುತ್ತಿರಲಿಲ್ಲ. ಹಾಗಾಗಿ, ಪುರಾಣಗಳನ್ನು ಬೇರೆಯೇ ದೃಷ್ಟಿಕೋನದಿಂದ ನೋಡುವ ಪ್ರಯತ್ನ ನನ್ನೊಳಗಿತ್ತು. ಅಂತಹ ಸಮಯದಲ್ಲೇ ಸಿಕ್ಕಿದ ತಾಪಿ ಧರ್ಮಾರಾವುರವರ ಪುಸ್ತಕ 'ದೇವಾಲಯಗಳು ಮತ್ತು ಲೈಂಗಿಕಶಿಲ್ಪ' ನನ್ನ ಆಲೋಚನೆಗಳಿಗೆ ಮತ್ತಷ್ಟು ಪುಷ್ಟಿಯನ್ನು ನೀಡಿದವು.

ಜನಪ್ರಿಯವಾದ ಗಣಪತಿಯ ಕಥೆಯನ್ನು ಬಾಲಕನಿದ್ದಾಗಲೇ ನನಗೆ ಒಪ್ಪಿಕೊಳ್ಳಲು ತೀರಾ ಇರಿಸುಮುರಿಸಾಗುತ್ತಿತ್ತು. ಮೊದಲನೆಯ ಕಾರಣವೆಂದರೆ ತನ್ನ ಮಡದಿ ಪಾರ್ವತಿಯು ಸೃಷ್ಟಿಸಿದ ಮಗನನ್ನೇ ಸರ್ವಜ್ಞನಾದ ಮಹಾದೇವನು ತಿಳಿಯದೇ ಪೆದ್ದುಪೆದ್ದಾಗಿ ಜಗಳವಾಡಿಕೊಂಡು ಆ ಹುಡುಗನ ತಲೆಯನ್ನು ಕತ್ತರಿಸಿದ್ದು. ನನ್ನ ನೆಚ್ಚಿನ ಶಬರ ಶಂಕರ, ತಾಂಡವ ಮಹೇಶ್ವರ ಇಷ್ಟು ಮೂರ್ಖತನದಿಂದ ವರ್ತಿಸಿದ್ದು ಅಸಹನೀಯ ಮತ್ತು ನಾಚಿಕೆಗೇಡಿನ ಸಂಗತಿ. ಎರಡನೆಯದು, ನನ್ನ ಅತ್ಯಂತ ಇಷ್ಟವಾದ, ಸುಂದರವಾದ ವನ್ಯಜೀವಿ ಆನೆಯು, ಏನೂ ತಿಳಿಯದೇ ಮಲಗಿದ್ದಾಗ ಅಮಾನವೀಯವಾಗಿ ಅದನ್ನ ಕೊಂದಿದ್ದು, ಅದರ ತಲೆಯನ್ನು ತಂದಿದ್ದು. ನನಗೆ ಅಸಹನೀಯವಾದ ಈ ಎರಡು ಅಂಶಗಳನ್ನು ಸರಿಪಡಿಸಿ ನಾನೇ ಒಂದು ಗಣಪತಿಯ ಕಥೆಯನ್ನು ಪೌರಾಣಿಕವಾಗಿಯೇ ಬರೆಯಬೇಕೆಂದು ಆರನೇ ತರಗತಿಯಲ್ಲಿದ್ದಾಗಲೇ ಅಂದುಕೊಂಡಿದ್ದೆ. ಪದ್ಯಗಳನ್ನು ಬರೆಯುವ ಅಭಿರುಚಿ ನನಗೆ ನಾಲ್ಕನೆಯ ತರಗತಿಯಲ್ಲಿದ್ದಾಗಲೇ ಪ್ರಾರಂಭವಾಗಿತ್ತು.

ಇವುಗಳಾಗಿ ಎಷ್ಟೋ ವರ್ಷಗಳ ನಂತರ ನಾನು ಕನ್ನಡ ಚಿತ್ರ ಸಾಹಿತಿ ಮತ್ತು ಸಂಗೀತ ನಿರ್ದೇಶಕ ಹಂಸಲೇಖರ ದೇಸಿ ಶಾಲೆಯಲ್ಲಿ ಉಪಾಧ್ಯಾಯನಾಗಿ ಕಾರ್ಯನಿರ್ವಹಿಸುತ್ತಿದ್ದಾಗ ನಮ್ಮಿಬ್ಬರಲ್ಲಿ ಅನೇಕ ಲೋಕಾಭಿರಾಮದ ವಿಷಯಗಳು, ವಿಚಾರಗಳು ವಿನಿಮಯವಾಗುತ್ತಿದ್ದವು. ಅಂತಹದ್ದೊಂದು ಸಂದರ್ಭದಲ್ಲಿ ನಾನು ಗಣಪತಿಯ ಬಗ್ಗೆ ತಗಾದೆ ತೆಗೆದೆ. ಆಗ ಹಂಸಲೇಖ ನನಗೆ ದೇವಿಪ್ರಸಾದ್ ಚಟ್ಟೋಪಧ್ಯಾಯರ ಲೋಕಾಯತ ಮತ್ತು ಗಾಣಪತ್ಯದ ಬಗ್ಗೆ ಸುಳುಹು ನೀಡಿದ್ದರು. ನಾನು ಆ ಲೋಕಾಯತದ ಬೆನ್ನು ಹತ್ತಿದೆ. ಆಗಲೇ ಗಣಪತಿಯ ಬಗ್ಗೆ ನನ್ನ ವೈಯಕ್ತಿಕ ವಿಚಾರಗಳ ವ್ಯಾಪ್ತಿಯಲ್ಲಿ ಒಪ್ಪಲು ಸಾಧ್ಯವಾಗುವ ಅಂಶಗಳು ನನಗೆ ಒದಗಿದವು.

***ಆದಿವಾಸಿ ಸಮಾಜದಿಂದ ನಮಗೆ ಬಂದ ಎಷ್ಟೋ ಲಕ್ಷಣಗಳು ಆಚಾರಗಳು, ಪದ್ಧತಿಗಳು ಇಂದಿಗೂ ನಮ್ಮ ನರನರಗಳಲ್ಲಿ ಜೀರ್ಣಗೊಂಡಿರುವುವು. ನಾವು ಅರಣ್ಯ ಹಂತದಿಂದ ವಿಮುಕ್ತಿ ಪಡೆದು ಎಷ್ಟೋ ಅಭಿವೃದ್ಧಿ ಹೊಂದಿ ನಾಗರಿಕರೆನ್ನಿಸಿಕೊಂಡಿದ್ದರೂ ಆ ಲಕ್ಷಣಗಳು ಅನೇಕ ರೂಪಗಳಲ್ಲಿ ನಮ್ಮಲ್ಲಿ ಉಳಿದುಕೊಂಡಿರುವುವು. ನಾವು ಗರ್ವಪಡುವ ಭಾರತೀಯ ಸಂಸ್ಕೃತಿಯಲ್ಲಿ ಅರಣ್ಯ ಹಂತದಿಂದ ನಮಗೆ ಬಂದ ಲಕ್ಷಣಗಳು ಒಂದು ಅಂತರ್ಭಾಗ, ನಮ್ಮ ಇತಿಹಾಸಕಾರರು ಈ ಅಂಶದ ಮೇಲೆ ಗೌರವ ಭಾವನೆ ತೋರಿಸಲಾರದೆ ಇದ್ದುದು ಅತ್ಯಂತ ದುರದೃಷ್ಟಕರವಾದ ವಿಷಯ.***

***ನಮ್ಮ ಪುರಾಣಗಳೆಲ್ಲ ಕಾಲ್ಪನಿಕ ಕತೆಗಳಾಗಿರಬಹುದು. ಆದರೆ, ಅವುಗಳಲ್ಲಿ ನಮ್ಮ ಜನರಿಗೆ ಸಂಬಂಧಿಸಿದ ಕೆಲವು ಸತ್ಯಗಳು ಅಡಗಿಕೊಂಡಿರುವುವು. ನಾವು ಗತಕಾಲವನ್ನು ಪುನಃ ಪರಿಶೀಲಿಸಿ ಈ ಸತ್ಯಗಳನ್ನು ಕಂಡುಹಿಡಿದಾಗ ಮಾತ್ರವಲ್ಲದೆ ನಮ್ಮ ಸಮಾಜದ ಕ್ರಮವಾದ ವಿಕಾಸ ನಮಗೆ ಸರಿಯಾಗಿ ಗೊತ್ತಾಗುವುದಿಲ್ಲ.***

*ಗಣಪತಿ ಅರಣ್ಯ ಜನರಿಂದ ಆರಾಧಿಸಲ್ಪಟ್ಟ ದೇವತೆ. ಗಣಪತಿ ವಿಘ್ನನಾಯಕ. ಆತನು ಬಹಳ ತೊಂದರೆ ಕೊಡುವಾತ. ಗೃಹ್ಯ ಸೂತ್ರಗಳನ್ನು ರಚಿಸಿದ ಕ್ರಿ.ಪೂ. 5ನೆಯ ಶತಮಾನಕ್ಕೆ ಗಣಪತಿ ವಿಘ್ನಗಳನ್ನು ಉಂಟು ಮಾಡುವನೆಂದೂ, ಅವನು ಅತ್ಯಂತ ಅಪಾಯಕಾರಿ ದೇವತೆಯೆಂದೂ ಪ್ರಚಾರದಲ್ಲಿತ್ತು. ಗಣಪತಿಗಳನ್ನು ದುಷ್ಟನಾಗಿ, ದುಷ್ಟ ಶಕ್ತಿಗಳಾಗಿ ಪರಿಗಣಿಸುತ್ತಿದ್ದರು. ಇವರು ಕನಸಿನಲ್ಲಿ ಬಂದರೂ ಕೆಟ್ಟ ಪರಿಣಾಮಗಳಾಗುತ್ತವೆ ಎಂದು ಹೇಳುತ್ತಿದ್ದರು.*

*ಗಣಪತಿಯನ್ನು ಹಿಂದುಳಿದ, ಹೀನ ಜಾತಿಯ ದೇವತೆಯೆಂದು ಮನು ಹೇಳಿದಂತೆ ತಿಳಿದುಬಂದಿದೆ. ಜೀರ್ಣವಸ್ತ್ರಗಳನ್ನು, ಇತರರು ಬಿಟ್ಟ ಆಹಾರವನ್ನು ಸ್ವೀಕರಿಸುವ ಶೂದ್ರರ ದೇವತೆ ಈ ಗಣಪತಿ. ಹಾಗಾಗಿಯೇ ಇವನು ಉಚ್ಛಿಷ್ಟ ಗಣಪತಿಯೆಂದು ಕರೆಯುವುದು.*

*ಕಡುಕ್ರೂರಿಯಾದ ಗಣಪತಿಯನ್ನು ರಕ್ತವರ್ಣದಲ್ಲಿ ತೋರಿಸುವರು. ಆತನ ವೈರಿಗಳು ಯಾರು? ಬ್ರಹ್ಮವೈವರ್ತ ಪುರಾಣದಲ್ಲಿರುವ ಕಥೆಯಂತೆ ಗಣಪತಿ ಮತ್ತು ಪರಶುರಾಮರು ವೈರಿಗಳು. ಇದರಲ್ಲಿ ಪರಶುರಾಮನು ಬ್ರಾಹ್ಮಣಾಧಿಕ್ಯತೆಯನ್ನು ಅಥವಾ ಪುರೋಹಿತ ಶಾಹಿವರ್ಗವನ್ನು ಬಿಂಬಿಸುವನು. ಬ್ರಾಹ್ಮಣಾಧಿಕ್ಯತೆಯನ್ನು ಪುರಸ್ಕರಿಸಿಕೊಂಡು ಬರುವ ಪುರಾಣಗಳಲ್ಲಿ ಗಣಪತಿಯ ಬಗ್ಗೆ ಅತ್ಯಂತ ಅಸಹನೆಯನ್ನು ಪ್ರಕಟಿಸುವುದು ನಡೆದಿದೆ. ಪುರಾಣಗಳಲ್ಲಿ ಮಾತ್ರವಲ್ಲ ಪುರಾತನ ಶಿಲ್ಪಗಳಲ್ಲಿ ಆತನ ಮೂರ್ತಿಯನ್ನು ಭಯಂಕರವಾಗಿ, ದಿಗಂಬರವಾಗಿ, ಆಭರಣರಹಿತವಾಗಿದೆ. ನಾವು ಇಂದು ಆರಾಧಿಸುವ ಮೂರ್ತಿಯಾಗಿ ಬದಲಾಯಿಸುವುದಕ್ಕೆ ಗಣಪತಿಗೆ ಬಹಳ ಕಾಲ ಬೇಕಾಯಿತು.*

*ವಿಘ್ನಗಳನ್ನುಂಟು ಮಾಡಿ ತೊಂದರೆ ಕೊಡುವ ದುಷ್ಟನಾಗಿ ಮಾನವ ಗೃಹ್ಯ ಸೂತ್ರಗಳಲ್ಲಿ, ಯಾಜ್ಞವಲ್ಕ್ಯ ಸ್ಮೃತಿಗಳಲ್ಲಿ ವರ್ಣಿಸಲ್ಪಟ್ಟ ಗಣಪತಿ, ವಿಘ್ನೇಶ್ವರ, ಎಲ್ಲಾ ಕಷ್ಟಗಳನ್ನು ತೊಲಗಿಸಿ ವಿಜಯವನ್ನುಂಟು ಮಾಡುವ ದೇವತೆಯಾಗಿ ಹೇಗೆ ಬದಲಾದನು? ಶೂದ್ರರ, ಹೀನ ಜಾತಿಯ ದೇವತೆಯೊಂದಿಗೆ ಬ್ರಾಹ್ಮಣಮತವು ಒಪ್ಪಂದಕ್ಕೆ ಬರಲು ಹೇಗೆ ಸಾಧ್ಯವಾಯಿತು?*

*ವಿನಾಯಕನ ಅಂತಸ್ತನ್ನು ಹೆಚ್ಚಿಸುವುದಕ್ಕೆ ಎಲ್ಲಾ ವರ್ಗಗಳ ಜನರು ಪೂಜಿಸುವ ದೇವತೆಯಾಗಿ ಆತನು ಮೇಲೆ ಬರಲು ಎಷ್ಟೋ ಸುಳ್ಳುಗಳು, ಎಷ್ಟೋ ಕಟ್ಟು ಕತೆಗಳನ್ನು ಸೃಷ್ಟಿಸಿ, ಬಹಳ ಪ್ರಚಾರ ಮಾಡಬೇಕಾಯಿತು. ಬ್ರಹ್ಮ ವೈವರ್ತ ಪುರಾಣ, ಸ್ಕಂದಪುರಾಣದಲ್ಲಿ ಗಣಪತಿಯ ಬಗ್ಗೆ ಅದ್ಭುತವಾಗಿ ವರ್ಣಿಸಿದ್ದಾರೆ.*

*ಗಣೇಶನ ಉಪನಿಷತ್ತು, ಗಣೇಶ ಗೀತೆ (ಭಗವದ್ಗೀತೆಯನ್ನೇ ತಿರುಚಿರುವ ಗೀತೆ) ಇತ್ಯಾದಿಗಳೆಲ್ಲಾ ಸೃಷ್ಟಿಯಾಯ್ತು. ಗಣಪತಿಯ ಜನ್ಮಕಥೆಯಲ್ಲಿ ಪುರಾಣಗಳಿಂದ ತೊಲಗಿಸುವುದಕ್ಕೆ ಸಾಧ್ಯವಾಗದ ವಿಶೇಷವೊಂದಿದೆ. ಅದು ಮಲಿನವಾದ ಮೈಯ ಮಲದಿಂದ ಗಣಪತಿ ಹುಟ್ಟಿದನೆಂದು ಹೇಳುವುದು. ಈ ನಕಲಿ ಗಣಪತಿ ಒಬ್ಬನೇ. ಅಸಲು ಗಣಪತಿಗಳು ಒಬ್ಬರಲ್ಲ, ಅನೇಕರು.*

ಇಷ್ಟಾದ ಮೇಲೆ ನಾನು ಗಣಪತಿ: ಬಂಡಾಯದ ದಳಪತಿ ಎಂದು ನಾಟಕದ ರಚನೆಗೆ ತೊಡಗಿದೆ.

ಅದೇ ಸಮಯದಲ್ಲಿ ಅಯೋಧ್ಯಾಧಿಪತಿ ರಾಮನು ತನ್ನ ಏಕೈಕ ಪತ್ನಿ ಸೀತಾದೇವಿಗೆ ಮಾಡಿದ ಶೋಷಣೆಯನ್ನು ವಿಷಯವಾಗಿಟ್ಟುಕೊಂಡು ಶ್ರೀಮತಿ ಜಾನಕಿರಾಂ ಎಂಬ ಕೃತಿರಚನೆಗೂ ತೊಡಗಿದ್ದೆ. ನನ್ನ ಜೊತೆಗಿದ್ದ ಸ್ತ್ರೀಬಳಗದ ಉತ್ತೇಜನದಿಂದ ಶ್ರೀಮತಿ ಜಾನಕಿರಾಂ ಬಹು ಬೇಗನೆ ಪೂರ್ಣವಾಗಿ, ಪ್ರದರ್ಶನಗಳನ್ನೂ ಕಂಡಿತು. ಹಾಗಾಗಿ ಗಣಪತಿಯು ಕೊಂಚ ಮೂಲೆಗೆ ಸರಿದಿದ್ದ.

ತದನಂತರ ಗಣಪತಿಯ ಬಗ್ಗೆ ವಿಶೇಷ ಒಲವನ್ನು ಹೊಂದಿದ್ದು, ಗಣಪತಿಯ ಎಲ್ಲಾ ಅವತಾರಗಳ ಸಹಸ್ರಾರು ಶಿಲ್ಪಗಳನ್ನು ಹೊಂದಿರುವ ಶ್ರೀ ಗೋವರ್ಧನರಿಂದ ಗಣಪತಿಯ ಕುರಿತು ಇಂಗ್ಲೀಷಲ್ಲಿ ಮತ್ತು ಕನ್ನಡದಲ್ಲಿ ಹತ್ತು ಹಲವು ಸಾಹಿತ್ಯಗಳ ಸುಳುಹು ದೊರಕಿದವು.

ಅದರ ಹಿಂದೆ ಹೋದಂತೆ, ಡಾ. ಸಂಪೂರ್ಣಾನಂದ ಆ. ಮರಿಬಸವರಾಧ್ಯರ ಗಣಪತಿ ತತ್ವ ನನ್ನ ಗಣಪತಿ, ಬಂಡಾಯದ ದಳಪತಿಗೆ ಮತ್ತಷ್ಟು ಉತ್ತೇಜನ ನೀಡಿತು.

*ಆರ್ಯರು ಬ್ರಹ್ಮಾವರ್ತದ ಕಡೆಗೆ ಬಂದಾಗ ದ್ರಾವಿಡರೇ ಮುಂತಾದ ಅನಾರ್ಯರೊಡನೆ ಯುದ್ಧ ಮಾಡಬೇಕಾಗಿ ಬಂದಿತು. ಆ ಯುದ್ಧದಲ್ಲಿ ಎಲ್ಲಾ ಅನಾರ್ಯರು ಹತರಾಗಲಿಲ್ಲ. ಉಳಿದವರಲ್ಲಿ ಕೆಲವರು ಕಾಡಿನಲ್ಲಿ ನೆಲಸಿದರು. ಆರ್ಯರಂತೆ ನಾಗರಿಕತೆಯಲ್ಲಿ ಮೊದಲಿನಿಂದಲೂ ಉನ್ನತ ಸ್ಥಿತಿಯಲ್ಲಿದ್ದ ಅನಾರ್ಯರು ಆರ್ಯರ ಸಂಸ್ಕೃತಿಯನ್ನು ತಮ್ಮ ಸಂಸ್ಕೃತಿಯಲ್ಲಿ ಸೇರಿಸಿಕೊಂಡು ಮೊದಲಿನಂತೆ ನಿರ್ಭೀತರಾಗಿ ವಾಸಿಸುತ್ತಿದ್ದರು.*

*ಗಣೇಶನು ಕ್ರೂರಿಯಾದ್ದರಿಂದ ಹೆದರಿ ಪೂಜಿಸುತ್ತಿದ್ದರು. ಪ್ರೇಮದಿಂದ ಯಾರೂ ಪೂಜಿಸುತ್ತಿರಲಿಲ್ಲ. ಉಗ್ರ ಸ್ವಭಾವದ ರುದ್ರನ ಗಣದಲ್ಲಿ ಅವನಿಗೆ ಸ್ಥಾನ ಕೊಡಲಾಯಿತು.*

*ವಿನಾಯಕರು ಅನ್ನ, ನೀರು, ಮೊದಲಾದ ಪಾನೀಯ ಪಾತ್ರೆಗಳಲ್ಲಿ ಸೇರಿಕೊಂಡು ರೋಗಗಳನ್ನು ಉಂಟು ಮಾಡಿ ಜನರಿಗೆ ತೊಂದರೆಯನ್ನು ಕೊಡುತ್ತಿದ್ದರು.*

*ಪ್ರಾಚೀನ ಆರ್ಯ ವೈದಿಕ ಸಮಾಜವು ತಮ್ಮಿಂದ ಸೋತ ಬರ್ಬರ ಮತ್ತು ನಿಷಾದಾದಿಗಳ ಸಾಮಾಜಿಕ ಸ್ಥಿತಿಗಳನ್ನು ಯಥಾಸ್ಥಾನದಲ್ಲಿರಿಸಲು ಮತ್ತು ಸ್ನೇಹಬುದ್ಧಿಯಿಂದ ಅವರನ್ನು ಸಮಾಧಾನಪಡಿಸಲು ಅವರಲ್ಲಿಯ ಬಹುಪೂಜಿತ ದೇವತೆಗಳನ್ನು ಮತ್ತು ಮುಖ್ಯವಾದ ಪೂಜಾಂಶಗಳನ್ನು ತಮ್ಮ ಶಕ್ತ್ಯಾನುಸಾರ ಪರಿಷ್ಕರಿಸಿ ಅವುಗಳನ್ನು ಒಪ್ಪಿಕೊಂಡರು.*

*ವಿನಾಯಕರು ಸುಖ ಜೀವಿಗಳನ್ನೂ, ಸತ್ಕರ್ಮ ಜೀವಿಗಳನ್ನೂ ಹಿಂಸಿಸುತ್ತಿದ್ದರು. ಸೋಮೇಶ್ವರ, ವಿಷ್ಣು ದರ್ಶನಕ್ಕೂ ತೊಂದರೆಯನ್ನುಂಟು ಮಾಡುತ್ತಿದ್ದರು. ಪುರಾಣ-ಪುಣ್ಯ-ಶ್ರವಣಗಳಿಂದ ಬರುವ ಪುಣ್ಯಗಳನ್ನು, ಯಾಗದಲ್ಲಿ ನೀಡಲಾಗುವ ಹವಿಸ್ಸಿನ ಫಲಗಳನ್ನು ಕದಿಯುತ್ತಿದ್ದರು.*

ಇಂಗ್ಲೀಷಲ್ಲಿ Alice Getty, Robert L. Brown, John A. Grimes ರವರ ಗ್ರಂಥಗಳಿಗಿಂತ Paul B. Courtright ರವರ Ganesa, Lord of obstacles, lord of beginnings ನನ್ನ ವಿಚಾರಗಳಿಗೆ ಬಹಳ ಹತ್ತಿರಕ್ಕೆ ಬಂದಿತು. ಅದೆಲ್ಲದರ ಫಲವೇ ಢುಂಢಿ, ಅರಣ್ಯಕನೊಬ್ಬ ಗಣಪತಿಯಾದ ಕತೆ ನಿಮ್ಮ ಕೈಯಲ್ಲಿ.

ಆದಿವಾಸಿಗಳ ವಾಸನೆ ನನ್ನಲ್ಲಿ ಜಾಗೃತವಿರುವ ಕಾರಣದಿಂದಲೋ ಏನೋ; ನಿಷಾದ ಪಂಗಡದ ಶಿವ, ಗಿರಿಜನರ ಕನ್ಯೆಯಾದ ಪಾರ್ವತಿ, ಶೂದ್ರರ ಒರಟ ಗಣೇಶ, ಗೊಲ್ಲರ ಕಪ್ಪು ಹುಡುಗ ಕೃಷ್ಣ ನನಗೆ ಧಾರ್ಮಿಕವಾಗಲ್ಲದೇ ಪ್ರಿಯವೆನಿಸುತ್ತಾರೆ.

ಇಷ್ಟಾದ ಮೇಲೆ ನಾನು ಒಪ್ಪಿಕೊಳ್ಳಬೇಕಾದ ಬಹುಮುಖ್ಯವಾದ ವಿಷಯವೊಂದಿದೆ. ಅದೇನೆಂದರೆ, ನಾನು ಗಂಭೀರವಾದ ಸಂಶೋಧನಾ ವಿದ್ಯಾರ್ಥಿಯಲ್ಲ. ಆ ಕಾರಣದಿಂದ ಕಾಲನಿರ್ಣಯ ಸರಿಯಾಗಿ

ಮಾಡಲಾಗಲಿಲ್ಲ. ಅಲ್ಲದೇ, ಸಂಶೋಧನಾ ಲೇಖನಗಳಲ್ಲಿ ಬರುವ ಕಾಲಾನುಕ್ರಮಣಿಕೆಗೂ ಮತ್ತು ಪುರಾಣಗಳಲ್ಲಿ ಬರುವ ಘಟನೆಗಳ ಕಾಲಾನುಕ್ರಮಣಿಕೆಗೂ ಬಹಳ ವ್ಯತ್ಯಾಸವಿದೆ. ನನಗೋ, ಪುರಾಣದ ರೋಚಕತೆಯೂ ಬೇಕು, ಸಂಶೋಧನಾ ಸಾಹಿತ್ಯದ ಸತ್ಯಾಂಶಗಳೂ ಬೇಕು! ಪ್ರಾರಂಭದಲ್ಲಿ ಬಹು ಎಚ್ಚರಿಕೆಯಿಂದ ವಸ್ತುಗಳನ್ನು, ಕಾಲವನ್ನು, ಪದ್ಧತಿಗಳನ್ನು ಗಮನಿಸುತ್ತಾ ಬಂದಂತೆ, ರೋಚಕತೆಯು, ನಾಟಕೀಯತೆಯು ತೆಳುವಾಗುತ್ತಾ ಬರುವಾಗ, ಸುಲಭವೆನಿಸುವ ಪುರಾಣಗಳನ್ನು ಗಮನಿಸುತ್ತಾ, ಅವುಗಳನ್ನೇ ನೈಜತೆಗೆ ಸರಿದೂಗಿಸುತ್ತಾ ಬಂದುಬಿಟ್ಟೆ. ಕೆಲವೊಮ್ಮೆ ನಾನು ಹಾಕಿಕೊಂಡ ಚೌಕಟ್ಟನ್ನು ಬಿಟ್ಟ ಕಥೆ ತನಗೆ ತಾನೇ ಬೆಳೆಯುತ್ತಿತ್ತು. ಆಗ ತಾನಾಗೇ ತೆಗೆದುಕೊಂಡ ತಿರುವುಗಳನ್ನು ತಿರುಚುವ ಪ್ರಯತ್ನ ನಾನು ಮಾಡಲಿಲ್ಲ. ಒಟ್ಟಾರೆ ನಾನೂ ಒಬ್ಬ ಕುರುಡನೇ. ಆನೆಯನ್ನು ನನ್ನ ಕೈಗೆಟುಕಿದಂತೆ ಮುಟ್ಟಿ, ನನ್ನ ಒಳಗಣ್ಣಿಗೆ ತೋಚಿದಂತೆ ಹೇಳಿದ್ದೇನೆ. ಸ್ವೀಕರಿಸುವುದು ಬಿಡುವುದು ಅವರವರ ಮನೋಧರ್ಮ.

ನಾನು ಭಾಷಾ ಪಂಡಿತನೂ ಆಗಿಲ್ಲದ ಕಾರಣದಿಂದ ಪ್ರಾಚೀನ ಕಾಲಕ್ಕೆ ಸರಿಯಾಗಿ ಉಪಯೋಗಿಸಬಹುದಾದ ಪಾರಿಭಾಷಿಕ ಪದಗಳಲ್ಲಿ ಲೋಪಗಳಿವೆ. ನನಗೆ ಪರಿಚಯವೇ ಇಲ್ಲದಂತಹ ಅಥವಾ ಸಂಶೋಧನಾ ವಿದ್ಯಾರ್ಥಿಯಂತೆ ಅಧ್ಯಯನ ಮಾಡಿದಂತೆ ಅಲ್ಲದೇ, ಕೇವಲ ದೊರಕಿದ ಆಸಕ್ತಿದಾಯಕ ಪುಸ್ತಕಗಳನ್ನು ಅವಲಂಭಿಸುತ್ತಾ ತಿಳಿದಿರುವ ಕಾಲ, ಜನ, ಭಾಷೆ, ಸ್ಥಳಗಳಾದ್ದರಿಂದ, ಸಮಕಾಲಿನ ಕಥೆಯನ್ನು ಬರೆಯುವಷ್ಟು ಸರಾಗವಾಗಿ ಬರೆಯಲು ನನಗೆ ಆಗಿಲ್ಲ ಎಂಬುದು ನೇರವಾದ ಸತ್ಯ. ಹಾಗಾಗಿ ಕೆಲವು ಕಡೆ ಕೃತಕತೆ ಕಂಡಿದೆ. ಆದರೆ, ನನ್ನ ಉದ್ದೇಶವು ಪೌರಾಣಿಕ ಅಂಶಗಳನ್ನು ಸಂಶೋಧನೆಗಳಲ್ಲಿ ದೊರಕಿರುವ ಸಾಮಗ್ರಿಗಳನ್ನು ಬಳಸಿಕೊಂಡು ನನ್ನ ಕಲ್ಪನೆಯ ಮೂಸೆಯಲ್ಲಿ ಕಥೆಯ ಎರಕ ಹುಯ್ಯುವುದೇ ಆದ್ದರಿಂದ, ಅದನ್ನು ನೆರವೇರಿಸಿಕೊಂಡಿದ್ದೇನೆ.

ಹರಿಕಥೆಗಳ ಪ್ರಭಾವ ನನ್ನ ಮೇಲೆ ಬಹಳವಾಗಿ ಇರುವ ಕಾರಣದಿಂದ ಕಾದಂಬರಿಯ ಮುಖ್ಯ ಕಥೆಯಲ್ಲಿ ಉಪಕಥೆಯಂತೆ ಸಂಬಂಧಿಸಿದ ವಿಷಯಗಳು ಬಂದು, ಮತ್ತೆ ಮುಖ್ಯ ಕಥೆಯ ಪಥಕ್ಕೆ ಒಯ್ಯುತ್ತವೆ. ಇದರಿಂದ ಓದುಗರು ಗೊಂದಲಕ್ಕೀಡಾಗುವವರಲ್ಲ ಎಂದು ನಂಬಿದ್ದೇನೆ.

ಪುರಾಣಗಳನ್ನಾಗಲಿ, ಧಾರ್ಮಿಕ ಸಿದ್ಧಾಂತಗಳನ್ನಾಗಲಿ ಓದುವಾಗ ಪದಗಳನ್ನು ಮೀರಿದ ಸತ್ಯವನ್ನು ಗ್ರಹಿಸುವ (ಅತೀಂದ್ರಿಯ ಶಕ್ತಿಯಲ್ಲ) ಸಾಮಾನ್ಯ ಪ್ರಜ್ಞೆಯಿರಬೇಕು. ಸಂಕೇತಗಳಲ್ಲಿ ತಿಳಿಸಿರುವಂತಹ, ಅಲಂಕಾರಗಳಲ್ಲಿ ವರ್ಣಿಸಿರುವಂತಹ ವಿಷಯಗಳಿಗೆ ತೀರಾ ನೇರವಾದ ಅರ್ಥಗ್ರಹಣ ಮಾಡಿಕೊಂಡು ವಿರೋಧಾಭಾಸಗಳನ್ನು ಸೃಷ್ಟಿಸಬಾರದೆಂದು ತಮ್ಮ ಜೊತೆ ಹಂಚಿಕೊಳ್ಳಬಹುದಾದ ನನ್ನ ಒಂದು ಆಲೋಚನೆ.

ಒಬ್ಬ ನಕಲಿಯೋ ಅಥವಾ ಹಲವಾರು ಅಸಲಿಗಳ ಒಂದು ಸಂಕೇತವೋ ಆಗಿರುವ ಗಣಪತಿಯನ್ನು ಕುರಿತು ಹಲವು ಪುರಾಣಗಳು ಹಲವಾರು ರೀತಿಯ ಕಥೆಗಳನ್ನು ಹೇಳಿವೆ. ಈ ಢುಂಢಿಯೂ ಹಾಗೇ ಒಂದು ಮನೋರಂಜನೆ ಅಥವಾ ವಿಚಾರಕ್ಕೆ ಹಚ್ಚಬಹುದಾದ, ನಿಜವೆಂದು ನಂಬಲು ಇಷ್ಟ ಪಡುವ ಹೂರಣಕ್ಕೆ ಒಂದು ಕಲ್ಪನೆಯ ಪುರಾಣವೇ.

ನಾವು ಎತ್ತೆತ್ತಲೋ ಕಾಣುವ ದೇವರನ್ನು ದೇಸಿಯರು, ಜನಪದರು ತಮ್ಮಂತೆಯೇ ಮಾನವ ಸಹಜವಾದ ರೀತಿಯಲ್ಲಿ ಕಾಣುವ, ಮಾನವ ಗುಣಗಳನ್ನು ಆರೋಪಿಸಿ ಚಿತ್ರಿಸಿರುವ ಅನೇಕ ಜಾನಪದ ಕೃತಿಗಳು ನಮ್ಮಲ್ಲಿವೆ. 'ಗಂಗೆ ಗೌರಿ ಜಗಳ' ಎಂಬ ಜಾನಪದ ಕೃತಿಯನ್ನು ಕ್ಯಾಸೆಟ್ಟೊಂದರಲ್ಲಿ ಕೇಳಿದ್ದೆ. ಅದರಲ್ಲಿ

ಪಾರ್ವತಿಯನ್ನು ಬ್ರಾಂಬ್ರ ಹೆಣ್ಣಾಗಿಯೂ, ಗಂಗೆಯನ್ನು ಬೆಸ್ತರ ಹೆಣ್ಣಾಗಿಯೂ ಚಿತ್ರಿಸಿ ಜಗಳ ಮಾಡಿಸುತ್ತಾರೆ. ಅದರಲ್ಲಿ ಪಾರ್ವತಿಯು ಗಂಗೆಯನ್ನು ರಂಡೆ, ಮುಂಡೆ, ಹಾದರದವಳು ಎಂದು ಬಾಯಿಗೆ ಬಂದಂತೆ ಬೈಯುತ್ತಾಳೆ. ಗಂಗೆಯೂ ಅಷ್ಟೇ ಬೈಯುತ್ತಾಳೆ. ಒಬ್ಬರಿಗೊಬ್ಬರು ನೀನು ಕಾಲಿಟ್ಟ ಕಡೆ ಹಾವು ಹರಿಯ, ಚೇಳು ಕಡಿಯ ಅಂತ ಶಪಿಸುತ್ತಾರೆ. ಅದನ್ನು ಕೇಳಿದಾಗ ಅದನ್ನು ರಚಿಸಿದವರಾರೋ ಅವರ ಪರಿಸರದ ಚಿತ್ರಣ ನನ್ನ ಕಣ್ಣ ಮುಂದೆ ಬಂದಿತು.

ಹಾಗೆಯೇ, ಮಹಾಭಾರತ, ರಾಮಾಯಣಗಳನ್ನು ಅವರವರ ಸ್ಥಳೀಯ ಸಂಸ್ಕೃತಿ, ಅಭಿರುಚಿ, ಆಶಯ, ಆಸಕ್ತಿಗಳಿಗೆ ತಕ್ಕಂತೆ ಹತ್ತಾರು ರೀತಿಗಳಲ್ಲಿ ಬರೆದು ಪ್ರಸ್ತುತ ಪಡಿಸಿರುವಂತೆ, ಗಣಪತಿಯ ಕಥೆಯನ್ನು ನನ್ನ ಸಂಸ್ಕೃತಿ, ಅಭಿರುಚಿ, ಆಶಯ ಮತ್ತು ಆಸಕ್ತಿಗಳಿಗೆ ತಕ್ಕಂತೆ ಹೇಳಿದ್ದೇನೆ.

ನಮಸ್ಕಾರ,

ಯೋಗೇಶ್ ಮಾಸ್ಟರ್

24/07/2013

899, ರಜತಾದ್ರಿ,

ಜ್ಞಾನಭಾರತಿ ಬಡಾವಣೆ

ಬೆಂಗಳೂರು: 560 056

ದೂರವಾಣಿ: 8880660347

# ಅರ್ಪಣೆ

ಆಂಧ್ರದಲ್ಲಿ

ತಮ್ಮ ವಿಚಾರಪೂರ್ಣ ಸಾಹಿತ್ಯಗಳ ಮೂಲಕ ವಿಚಾರಕ್ರಾಂತಿಯನ್ನು ಉಂಟು ಮಾಡಲು ಶ್ರಮಿಸಿದ

ಕವಿ, ಪಂಡಿತ, ವಿಮರ್ಶಕ ಹಾಗೂ ನಾಟಕಕಾರರಾದ

**ಶ್ರೀ ತಾಪಿ ಧರ್ಮಾರಾವ್** ರವರಿಗೆ

ಮತ್ತು

ನನ್ನ ಬಹು ನೆಚ್ಚಿನ ಕನ್ನಡ ಕೃತಿಯಾದ

**'ದೇವರು'** ಬರೆದ

**ಶ್ರೀ ಎ ಎನ್ ಮೂರ್ತಿರಾವ್** ರವರಿಗೆ

ಈ ಕೃತಿಯನ್ನು ಸಮರ್ಪಿಸುತ್ತಿದ್ದೇನೆ

– **ಯೋಗೇಶ್ ಮಾಸ್ಟರ್**

## ಅಧ್ಯಾಯ : 1 ಸುವಾಸ್ತು

**ಕಾಲ:**

ಸುಮಾರು ಕ್ರಿಸ್ತಪೂರ್ವ 400–200ರ ನಡುವಿನ ಅವಧಿ

**ಸ್ಥಳ:**

ಗಂಗೆಯ ದಡದಲ್ಲಿರುವ ಜಹ್ನೂವಸ ಅರಣ್ಯ ಪ್ರದೇಶ

**ಶ**ಬ್ದವನ್ನು ಕೇಳುತ್ತಿದ್ದರೂ, ನಿಶ್ಶಬ್ಧವನ್ನು ಅನುಭವಿಸಲು ಸಾಧ್ಯ. ಅವಿರತವಾಗಿ ಕೇಳುತ್ತಿರುವ ಶಬ್ಧಗಳು ಅನುಭವದಲ್ಲಿ ಒಂದಾಗಿ ನಿಶ್ಶಬ್ಧದ ಅನುಭೂತಿಯನ್ನು ಕೊಡುತ್ತವೆ.

ಶಂಬರನಿಗೂ ಹಾಗೇ. ನೂರಾರು ಹಸುಗಳು ಕ್ರಮವಿಲ್ಲದೇ ಕೂಗುವುದು, ಹಕ್ಕಿಗಳ ಚಿಲಿಪಿಲಿ, ಗಾಳಿಯ ಸದ್ದು, ಅಲ್ಲೆಂಲ್ಲಿಂದಲೋ ಕೇಳುವ ಹುಲಿ–ಸಿಂಹಗಳ ಗರ್ಜನೆ, ಆಗ್ಗಿಂದ್ದಾಗೆ ಊಳಿಡುವ ನರಿ–ತೋಳಗಳು, ಕೊಕ್ಕೊಕ್ಕೊ ತಾಳವನ್ನು ಬಿಡದೇ ಹಾಕುತ್ತಲೇ ಇರುವ ಕೋಳಿಗಳು, ಬೊಗಳುವ ನಾಯಿಗಳು ಈ ಶಂಬರನಿಗೆ ಎಂದೂ ಬೇಸರ ತಂದಿಲ್ಲ. ಅವು ಯಾವಾಗಲೂ ಇರುವಂತವೇ. ಅಲ್ಲದೇ, ಇಂತಿಷ್ಟು ಅವಧಿ ಅಂತಲ್ಲದೇ ಒಂದೇ ಕಡೆ ಒಂದೇ ಸಮನೆ ಕುಳಿತಿರುವುದೂ ಅವನಿಗೆ ಈಗ ಕರಗತವಾಗಿಹೋಗಿದೆ.

ವಸುಮಾ ಅವನಿಗೆ ಎಲ್ಲವನ್ನೂ ಕಲಿಸಿದ್ದಾಳೆ. ಪುರುಳೆಗಳನ್ನು ಒತ್ತಿಟ್ಟ, ಚಕಮಕಿ ಕಲ್ಲುಗಳನ್ನು ಬಳಸಿ ಬೆಂಕಿ ಹಚ್ಚುವುದನ್ನು, ಮಣ್ಣಿನ ಪಾತ್ರೆಯಲ್ಲಿ ಜವೆಗೋಧಿಯನ್ನು ಬೇಯಿಸುವುದನ್ನು, ಆ ಮಣ್ಣಿನ ಪಾತ್ರೆಗಳನ್ನು ಮಾಡುವುದನ್ನು, ಹಾಲು ಕರೆಯುವುದನ್ನು, ಹಸುಗಳನ್ನು ನೋಡಿಕೊಳ್ಳುವುದನ್ನು, ಮಳೆಗಾಲಕ್ಕೆ ಮುನ್ನ ಗೋಡೆಗಳನ್ನು ಜೇಡಿ ಮಣ್ಣಿನಿಂದ ಭದ್ರಪಡಿಸುವುದನ್ನು, ಆಗಾಗ್ಗೆ ಕಾಡಿನ ಮೂಲಕ ಹಾದು ಹೋಗುವ ಪ್ರಯಾಣಿಕರಿಗೆ ತಂಗಲು ಸ್ಥಳಾವಕಾಶ ಮಾಡಿಕೊಟ್ಟು, ಅವರಿಂದ ಉಪ್ಪು, ಬಟ್ಟೆ ಮತ್ತಿತರ ಅವಶ್ಯವಾದ ವಸ್ತುಗಳನ್ನು ವಿನಿಮಯ ಮಾಡಿಕೊಳ್ಳುವುದನ್ನು; ಗಂಗಾ ನದಿಯಿಂದ ಕಾಲುವೆ ಮಾಡಿಕೊಂಡು ಅದರಿಂದ ತಮ್ಮ ನೀರಿನ ಅಗತ್ಯವನ್ನು ಪೂರೈಸಿಕೊಳ್ಳಲು; ಹೀಗೆ ತನ್ನನ್ನು ತಾನು ಅಗತ್ಯವಿರುವಷ್ಟು ಮಟ್ಟಿಗೆ ನೋಡಿಕೊಳ್ಳುವುದಕ್ಕೆ ಆಕೆ ಕಲಿಸಿದ್ದಾಳೆ.

ಆಗಾಗ ಕಾಡಿನ ಮೂಲಕ ಹಾದುಹೋಗುವ ಪ್ರಯಾಣಿಕರಿಗೆ ಆಶ್ರಯ ಕೊಡುವುದರಿಂದಲೇ ಶಂಬರನಿಗೆ ಒಂದಿಷ್ಟು ಲೋಕದ ವಿದ್ಯಮಾನ ತಿಳಿಯುವುದು ಹಾಗೂ ಇವನು ಬೆಳೆದುಕೊಳ್ಳಲಾಗದ ಮತ್ತು ಆ ಕಾಡಿನಲ್ಲಿ ಸಿಗದ ಕೆಲವು ಅಗತ್ಯ ವಸ್ತುಗಳನ್ನು ಪಡೆದುಕೊಳ್ಳುವುದು. ಹಾಗಾಗಿಯೇ ಮೂವತ್ತೆರಡು ವಸಂತಗಳನ್ನು ಕಂಡಿದ್ದ ಅವನು, ಬೇಸರವಿಲ್ಲದೇ ಇಪ್ಪತ್ತೈದು ವಸಂತಗಳನ್ನು ಏಕಾಂಗಿಯಾಗಿಯೇ ಕಳೆದಿರುವುದು.

ಬರುವ ಪ್ರಯಾಣಿಕರಲ್ಲಿ ಅಪರಿಚಿತರು ಬರುತ್ತಾರೆ ಹಾಗೂ ಪರಿಚಿತರೂ ಬರುತ್ತಾರೆ. ಅಪರಿಚಿತರು ಎರಡನೆಯ ಬಾರಿಗೆ ಬರುವಾಗ ಪರಿಚಿತರಾಗಿರುತ್ತಾರೆ. ಆದರೆ, ಹಾಗಾಗುವ ಪರಿಚಿತರಿಗಿಂತ ವಸುಮಾಗೆ

ಬಹಳ ಹಿಂದಿನಿಂದಲೂ ತಿಳಿದಿರುವಂತಹ ಪರಿಚಿತರು ಹೆಚ್ಚು ಅನುಕೂಲಕರವಾಗಿರುತ್ತಾರೆ. ಅವರೊಡನೆ ಕೇವಲ ಕೊಟ್ಟು ತೆಗೆದುಕೊಳ್ಳುವ ವ್ಯವಹಾರವಷ್ಟೇ ಅಲ್ಲದೇ, ತಮ್ಮವರು ಎಂಬ ಅಂತಃಕರಣದ ಸಂಬಂಧವಿರುತ್ತದೆ.

ಹಾಗೆ ಬಂದವರೇ ಒಬ್ಬರು ಶಂಬರ ಸಣ್ಣ ಬಾಲಕನಿದ್ದಾಗ ವಸುಮಾ ನಿನ್ನ ತಾಯಿ ಎಂದು ತಿಳಿಸಿದ್ದು. ಜೊತೆಗೆ ಆಕೆಯನ್ನು "ಮಾತೆ" ಎಂದು ಕರೆಯಬೇಕೆಂದೂ ಹೇಳಿದ್ದರು. ಅದುವರೆಗೂ ಬಾಲಕ ಶಂಬರ ಅವಳನ್ನು ವಸುಮಾ ಎಂದೇ ಕರೆಯುತ್ತಿದ್ದ. ಕೆಲವೊಮ್ಮೆ ಅಂಬಾ ಎಂದೂ ಕರುವಿನ ದನಿಯಲ್ಲಿ ಕೂಗಿ ಕರೆಯುತ್ತಿದ್ದ.

ಅವನು ಐದು ವರ್ಷದ ಹುಡುಗನಿದ್ದಾಗ, ಬಂದವರೊಬ್ಬರು ಬಾಲಕ ಶಂಬರನನ್ನು ಆಡಿಸುತ್ತಾ ವಸುಮಾಳನ್ನು ತೋರಿಸಿ, "ಆಕೆ ಯಾರು?" ಎಂದು ಕೇಳಿದ್ದರು. ಶಂಬರ ಸುಮ್ಮನೆಯೇ ನಿಂತಿದ್ದ. ವಸುಮಾಳೂ ಸಹಾಯ ಮಾಡಲಿಲ್ಲ. ಶಂಬರನೇನು ಹೇಳುವನೋ ನೋಡೋಣವೆಂದುಕೊಂಡು ತಾನು ಮಾಡುತ್ತಿರುವ ಕೆಲಸವನ್ನು ನಿಲ್ಲಿಸದೇ ನಸುನಗುತ್ತಾ ಅವನತ್ತ ನೋಡುತ್ತಿದ್ದಳು. ಪ್ರಯಾಣಿಕರು, "ಆಕೆಯನ್ನು ನೀನು ಏನೆಂದು ಕರೆಯುತ್ತೀಯೇ?" ಎಂದು ಕೇಳಿದ್ದರು. ಆಗಲೂ ಶಂಬರ ಮೌನವಾಗಿ ವಸುಮಾಳ ಕಡೆಗೆ ನೋಡಿದ. ಆ ಪ್ರಯಾಣಿಕರು ಹೋದ ಬಳಿಕ, "ನೀನು ಯಾರು?" ಎಂದು ವಸುಮಾಳನ್ನು ಕೇಳಿದ ಶಂಬರ.

"ನಾನು ಹಸುವಿನಂತೆ, ನೀನು ನನ್ನ ಕರುವಿನಂತೆ." ಎಂದಳು ವಸುಮಾ.

"ನಾನೂ ನಿನ್ನ ಅಂಬಾ ಎಂದು ಕರೆಯಬೇಕೆ?" ಎಂದು ಕೇಳಿದ ಶಂಬರ.

"ಕರೆಯಬಹುದು." ಎಂದಿದ್ದ ವಸುಮಾ, "ನಿನಗೆ ಏನೆಂದು ಕರೆಯಬೇಕೆನಿಸುತ್ತದೋ ಹಾಗೇ ಕರೆಯಬಹುದು." ಎಂದೂ ಸೇರಿಸಿದ್ದಳು.

ತನ್ನ ಹೆಸರು ಶಂಬರನೆಂದು, ಅವಳ ಹೆಸರು ವಸುಮಾಳೆಂದು ತಿಳಿದಿದ್ದ ಶಂಬರ ಅವಳನ್ನು ವಸುಮಾಳೆಂದೂ, ಜೋರಾಗಿ ಕರೆಯಬೇಕಾದ ಸಂದರ್ಭದಲ್ಲಿ ಅಂಬಾ ಎಂದೂ ಕರೆಯುತ್ತಿದ್ದ.

ಮತ್ತೋರ್ವ ಪ್ರಯಾಣಿಕರು ಒಂಭತ್ತು ವರ್ಷದ ಶಂಬರನಿಗೆ ಹೇಳಿದ್ದರು. "ಈಕೆ ನಿನ್ನನ್ನು ಹೆತ್ತವಳು. ನಿನ್ನ ತಾಯಿ. ಹಸು ಕರುವನ್ನು ಈದಂತೆ ಇವಳು ನಿನ್ನ ಹೆತ್ತಿದ್ದಾಳೆ. ಕರುಗಳು ಅಂಬಾ ಎನ್ನುತ್ತವೆ. ಭಾಷೆ ತಿಳಿಯದ ಪ್ರಾಣಿಗಳವು. ಆದರೆ, ನೀನು ಮನುಷ್ಯ. ನಿನಗೆ ಭಾಷೆ ಗೊತ್ತು. ನೀನೀಕೆಗೆ ಮಾತೆಯೆಂದೇ ಕರೆಯಬೇಕು." ಎಂದು ಹೇಳಿಕೊಟ್ಟರು.

ಶಂಬರನಿಗೆ ವಿಷಯ ಅರಿವಾದರೂ ಮಾತೆಯೆಂದು ಅವಳನ್ನು ಕರೆಯಲು ಅವನಿಗೆ ಅಭ್ಯಾಸವಾಗಲಿಲ್ಲ. ತನ್ನ ಹಳೆಯ ರೂಢಿಯನ್ನೇ ಮುಂದುವರಿಸಿದ್ದ.

ಬರುವ ಪ್ರಯಾಣಿಕರಲ್ಲಿ ಕೆಲವರು ಇವರ ಗಟ್ಟಿಮುಟ್ಟಾದ ಮನೆಯನ್ನು ಪ್ರವೇಶಿಸುತ್ತಿದ್ದರು. ಒಳಗೆ ಇರುತ್ತಿದ್ದರು. ಮತ್ತೆ ಕೆಲವರು ಜಗುಲಿಯ ಮೇಲೆಯೇ ತಂಗುತ್ತಿದ್ದರು. ವಸುಮಾಳಂತೂ ಎಲ್ಲರನ್ನೂ ಒಳಕ್ಕೆ ಸ್ವಾಗತಿಸುತ್ತಿದ್ದಳು. ನೋಡಲು ಆರ್ಯಸ್ತ್ರೀಯಂತೆ ಕಾಣುತ್ತಿದ್ದ ಆಕೆ, "ನೀನು ಆರ್ಯಳೇ?" ಎಂದು ಯಾರಾದರೂ ಪ್ರಶ್ನಿಸಿದರೆ, ಆಕೆ ಉತ್ತರಿಸುತ್ತಿರಲಿಲ್ಲ. "ನಿನ್ನ ಮಗನ ಹೆಸರು ಆರ್ಯರದಲ್ಲ." ಎಂದರೆ,

“ದಯಮಾಡಿ ತಮಗೆ ಅಗತ್ಯವಿರುವ ಸಂಗತಿಯನ್ನು ಗಮನಿಸಿ.” ಎಂದು ಗಂಭೀರವಾಗಿ ವಸುಮಾ ಹೇಳುತ್ತಿದ್ದಳು.

ಪ್ರಯಾಣಿಕರಿಲ್ಲದ ಸಮಯದಲ್ಲಿ ತಾಯಿ ಮತ್ತು ಮಗ ಇಬ್ಬರೂ ಸಾಮಾನ್ಯವಾಗಿ ಬೆತ್ತಲಾಗೇ ಇರುತ್ತಿದ್ದರು.

ಬಂದ ಪ್ರಯಾಣಿಕರು ಇವರ ಕೂಡ ಜಿಂಕೆಯ ಕೊಂಬು, ಹುಲಿಯ ಉಗುರು, ಚರ್ಮ, ಕೆಲವು ಮೂಲಿಕೆಗಳು ಇತ್ಯಾದಿ ಕಾಡಿನ ವಸ್ತುಗಳಿಗೆ ವಸ್ತ್ರಗಳನ್ನು ವಿನಿಮಯ ಮಾಡಿಕೊಳ್ಳುತ್ತಿದ್ದರು. ಅದು ಯಾವಾಗಲೂ ಹೊಸವೇನಾಗಿರುತ್ತಿರಲಿಲ್ಲ. ಸುಸ್ಥಿತಿಯಲ್ಲಿದ್ದರೂ ಉಪಯೋಗಿಸಿರುವಂತವೇ ಆಗಿರುತ್ತಿದ್ದವು. ಹೀಗೆ ಯಾವಾಗಲೋ ಒಮ್ಮೊಮ್ಮೆ ಸಿಗುವ ಬಟ್ಟೆಗಳನ್ನು ಸದಾ ತೊಟ್ಟು ಅವರು ಅದನ್ನು ಹಾಳುಮಾಡುವಂತಿರಲಿಲ್ಲ.

ತಮ್ಮ ಮನೆಯ ಪೌಳಿಯ ಹೊರಗೆ ಕಟ್ಟಿಗೆಗಳನ್ನು ಅಥವಾ ಹಣ್ಣು, ಕಂದಮೂಲಗಳನ್ನು ತರಲು ಹೋದಾಗ, ಜಿಂಕೆ ಅಥವಾ ಮೊಲವನ್ನು ಬೇಟೆಯಾಡಲು ಹೋದಾಗ ಜಿಂಕೆಯ ಚರ್ಮವನ್ನು ತೊಡುತ್ತಿದ್ದರು. ಎರಡು ಮೂರು ದಿನಗಳಿಗೊಮ್ಮೆ ಬೇಟೆಯಾಡಲು ಹೋಗುತ್ತಿದ್ದ ವಸುಮಾ ಮತ್ತು ಶಂಬರ ಹೆಚ್ಚು ಇಷ್ಟ ಪಡುತ್ತಿದ್ದದ್ದು ಜಿಂಕೆ ಅಥವಾ ಮೊಲಗಳ ಮಾಂಸವನ್ನೇ. ಅವರಿಬ್ಬರಿಗೆ ಅಷ್ಟೇ ಸಾಕಾಗುತ್ತಿತ್ತು. ಕೆಲವೊಮ್ಮೆ ಜಿಂಕೆಯ ಮಾಂಸವೂ ಹೆಚ್ಚಾಗಿದ್ದು ತಮಗೆ ಬೇಕಾದಷ್ಟನ್ನು ತೆಗೆದುಕೊಂಡು ಉಳಿದುದ್ದನ್ನು ಕಾಡಿನಲ್ಲಿ ಒಂದು ಬಂಡೆಯ ಮೇಲೆ ಪ್ರಾಣಿಗಳಿಗೆಂದೇ ಬಿಟ್ಟು ಬರುತ್ತಿದ್ದರು.

ಮನೆಗೆ ಬರುವ ಪ್ರಯಾಣಿಕರ ಗಾತ್ರವನ್ನು ನೋಡಿಕೊಂಡು, ಅವರು ಎಷ್ಟು ಸಮಯ ಉಳಿಯುವರೋ ಅದನ್ನೂ ನೋಡಿಕೊಂಡು ಎಳೆಯ ಕರುವನ್ನೋ, ಅದಕ್ಕಿಂತ ಬಲಿತಿರುವುದನ್ನೋ ಅಥವಾ ದೊಡ್ಡ ಹಸುವನ್ನೋ ಕಡಿಯುತ್ತಿದ್ದರು. ಅವರಿಬ್ಬರೇ ಇದ್ದಾಗಂತೂ ಅವರು ಎಂದಿಗೂ ಹಸುವಿನ ಮಾಂಸವನ್ನು ತಿನ್ನುವ ಗೋಜಿಗೆ ಹೋಗಲಿಲ್ಲ. ಎಳೆಯ ಕರುವಿನ ಮಾಂಸವನ್ನು ಇಷ್ಟಪಡುತ್ತಿದ್ದ ಶಂಬರ ಯಾರಾದರೂ ಪ್ರಯಾಣಿಕರು ಬಂದರೆ, ತಾನೇ ಉತ್ಸಾಹದಿಂದ ಎಳೆಗರುವನ್ನು ತೋರುತ್ತಿದ್ದ. ಆದರೆ, ವಸುಮಾ ಆಗಿನ ಅಗತ್ಯಕ್ಕೆ ತಕ್ಕಂತೆ ಪ್ರಾಣಿಯ ಗಾತ್ರವನ್ನು ಆಯ್ಕೆ ಮಾಡುತ್ತಿದ್ದಳು.

ಗಂಗಾ ನದಿಯ ದಡದಲ್ಲಿರುವ ಅವಿಮುಕ್ತ ಹಾಗೂ ವಿರಾಟನಗರಕ್ಕೆ ಜಹ್ನೂವಸವು ತಿಳಿದಿದ್ದರೂ, ತೀರ ಒಳಭಾಗಕ್ಕಿರುವ ಅರಣ್ಯವಾಗಿರುವ ಕಾರಣದಿಂದ ತಾಯಿ ಮತ್ತು ಮಗನ ಸ್ವತಂತ್ರ ಜೀವನಕ್ಕೆ ಯಾವ ರೀತಿಯಲ್ಲಿಯೂ ಅಡ್ಡಿಯಾಗಿರಲಿಲ್ಲ.

ದಿನವೆಲ್ಲಾ ಯಾವುದಾದರೊಂದು ಕೆಲಸದಲ್ಲಿ ನಿರತರಾಗಿರುತ್ತಿದ್ದ ಅವರಿಗೆ ದಿನದಲ್ಲಿ ಹೆಚ್ಚು ಕೆಲಸದ ಅಗತ್ಯ ಬರುತ್ತಿದ್ದದ್ದು ಹಸುಗಳ ಕುರಿತಾಗಿ. ಹಸುಗಳ ಸಂಖ್ಯೆ ಕಡಿಮೆ ಇದ್ದಾಗ, ಕ್ರೂರ ಮೃಗಗಳ ಭಯವಿದ್ದು, ಆದಷ್ಟು ಮೇವನ್ನು ತಾವೇ ತಂದು ಹಾಕುತ್ತಿದ್ದರು. ಆದರೆ, ಅವುಗಳು ಈಗ ಬಹಳಷ್ಟು ಹೆಚ್ಚಿವೆ. ಹಾಗಾಗಿ, ಯಾವುದಾದರೊಂದು ಹೋದರೆ ಹೋಗಲಿ ಎಂಬ ಧೋರಣೆಯಲ್ಲಿ ಹಸುಗಳನ್ನು ಮೇಯಿಸಲು ಹೊರಗೆ ಕರೆದುಕೊಂಡು ಹೋಗುತ್ತಾರೆ.

ಕೆಲವೊಮ್ಮೆ ಹಸುವನ್ನು ಮೇಯಿಸಲು ಇಬ್ಬರೂ ಹೋಗುತ್ತಾರೆ. ಆದರೆ, ಬಹುಪಾಲು ಶಂಬರನೊಬ್ಬನೇ ಹೋಗುವುದು. ಹಾಗೆ ಹೋಗುವಾಗೆಲ್ಲಾ ಅವರ ಜೊತೆಗೆ ನಾಯಿಗಳಂತೂ ಬಂದೇ ತೀರುವವು. ಹಸುಗಳನ್ನು ಮೇಯಲು ಬಿಟ್ಟು ಅವರ ಮನೆಗೆ ಹತ್ತಿರವೇ ಇರುವ ಒಂದು ದೊಡ್ಡ ಕೋಡುಗಲ್ಲನ್ನು

ಏರುವರು. ಅದರ ಮೇಲೆ ಹತ್ತಿ ನಿಂತರೆ ಬಹುದೂರದವರೆಗೂ ನೋಡಲು ಸಾಧ್ಯ. ಬಿಟ್ಟಿರುವ ಹಸುಗಳನ್ನು ನೋಡಬಹುದು. ಆನೆಗಳು ಘೀಳಿಡುತ್ತಿದ್ದರೆ ಅಥವಾ ಸಿಂಹಗಳು ಗರ್ಜಿಸುತ್ತಿದ್ದರೆ ಅವುಗಳ ಸಧ್ಯಕ್ಕೆ ಇರುವ ತಾಣವನ್ನು ಗುರುತಿಸಬಹುದು. ಅವರ ಮನೆಯಿರುವ ಎಡೆಯ ಆಗ್ನೇಯ ದಿಕ್ಕಿನಿಂದ ಬರುವ ಪ್ರಯಾಣಿಕರನ್ನೂ ದೂರದಿಂದಲೇ ನೋಡಬಹುದು.

ವಸುಮಾ ಎಂದೂ ಮಗನಿಗೆ ಯಾವುದೇ ಹಾಡು–ಕಥೆಗಳನ್ನಾಗಲಿ ಅಥವಾ ತನ್ನ ಜೀವನದಲ್ಲಿ ನಡೆದಿರುವ ಘಟನೆಗಳನ್ನಾಗಲಿ ಹೇಳಿದವಳೇ ಅಲ್ಲ. ಅಗತ್ಯಕ್ಕಿಂತ ಹೆಚ್ಚು ಮಾತಾಡುವ ಅಭ್ಯಾಸವಿರದಿದ್ದ ವಸುಮಾ ಸಂದರ್ಭಾನುಸಾರವೇ ಮಾತಾಡುತ್ತಿದ್ದು. ಆದರೆ, ಬಿಡುವಿನ ವೇಳೆಯಲ್ಲಿ ತಾಯಿ ಮಗ ಆಟವಾಡುತ್ತಾರೆ. ಅವನಿಗೆ ಅವಳನ್ನು ತಬ್ಬುವುದು, ಬಳಸುವುದು, ಕುಸ್ತಿಯಾಡುವಂತೆ ಅವಳೊಂದಿಗೆ ಆಟವಾಡುವುದು ಬಹಳ ಇಷ್ಟ. ಹಾಗೆ ಆಟವಾಡುವಾಗ ಬೇಕೆಂದೇ ಅವಳ ಮೊಲೆಗಳನ್ನು ಹಿಸುಕುತ್ತಾನೆ. ಅವಳಿಗೇನಾದರೂ ನೋವಾಗಿ ಮುನಿಸಿಕೊಂಡು ಆಟದಿಂದ ಹೊರತಾದರೆ, ನೋವುಂಟಾದ ಭಾಗವನ್ನು ಮೆಲ್ಲನೆ ಸವರಿ, ಮತ್ತೆ ಹಾಗೆ ಮಾಡುವುದಿಲ್ಲವೆಂದು ಹೇಳಿ ಆಟಕ್ಕೆ ಕರೆಯುತ್ತಾನೆ. ವಸುಮಾಳಲ್ಲಿ ಅವನಿಗೆ ಆಕರ್ಷಣೀಯವಾದುದೆಂದರೆ, ಅವಳ ಮೊಲೆಗಳೇ!

ಕೆಲವೊಮ್ಮೆ ರಾತ್ರಿಯ ಹೊತ್ತು ಅವಳು ಅವನಿಂದ ದೂರ ಮಲಗಿದ್ದರೂ, ತಾನೊಬ್ಬನೇ ಮಲಗಲು ಬೇಸರವಾಗುತ್ತದೆ ಅಥವಾ ಭಯವಾಗುತ್ತಿದೆ ಎಂದೇನೋ ಹೇಳಿ ಅವಳನ್ನು ಅಪ್ಪಿಕೊಂಡು ಮಲಗಲು ಇಷ್ಟಪಡುತ್ತಾನೆ. ಅವಳನ್ನು ಅಪ್ಪಿಕೊಂಡು ಮಲಗಿದಾಗ ಅವನ ಮೈಯಲ್ಲಿ ಮೆಲ್ಲನೆ ಬಿಸಿಯೇರಿ, ಅವಳನ್ನು ಬಿಗಿಯಾಗಿ ಅಪ್ಪಿ ಹಿಡಿಯುತ್ತಾನೆ. ತನ್ನ ಉದ್ರಿಕ್ತಗೊಂಡ ಶಿಶ್ನವನ್ನು ಅವಳ ತೊಡೆಗೋ ಅಥವಾ ನಿತಂಬಕ್ಕೋ ಬಿಗಿಯಾಗಿ ಒತ್ತುತ್ತಾನೆ. ವಸುಮಾಗೆ ನಿದ್ರೆ ಬಂತೆಂದರೆ, ಸುಲಭವಾಗಿ ಎಚ್ಚರವಾಗುವುದಿಲ್ಲ. ಹಾಗಾಗಿ ಇವನ ಉದ್ರಿಕ್ತ ಚೇಷ್ಟೆಗಳು ತಿಳಿಯುವುದಿಲ್ಲ. ಕೆಲವೊಮ್ಮೆ ಎಚ್ಚರವಿದ್ದರೂ ನಿದ್ರಿಸುತ್ತಿರುವಂತೆಯೇ ನಟಿಸಿ ಅವನ ಕಾವನ್ನು ನಿರ್ಲಕ್ಷಿಸುತ್ತಾಳೆ.

ಒಮ್ಮೊಮ್ಮೆ ಅವಳು ಏನಾದರೂ ಕೆಲಸ ಮಾಡುತ್ತಿದ್ದಾಗ, ಅವಳನ್ನು ತಬ್ಬಿ ಹಿಡಿದುಕೊಂಡು, ಅವಳ ಮೊಲೆಯನ್ನು ಹಿಡಿದು ಅದುಮುತ್ತಾ ಮೈ ಕಾವೇರಿ ತನ್ನ ಉದ್ರಿಕ್ತ ಶಿಶ್ನವನ್ನು ಅವಳಿಗೆ ಪ್ರದರ್ಶಿಸುತ್ತಾ ಏರಿ ಹೋದಾಗ, ವಸುಮಾ ಬೇರೆ ಕೆಲಸವನ್ನು ಹಿಡಿದು ಹೋಗುತ್ತಿದ್ದಳು ಅಥವಾ "ಶಂಬರ ನನಗೆ ರೇಗಿಸಬೇಡ." ಎಂದು ಗದರುತ್ತಿದ್ದಳು. ಅದಕ್ಕೆ ಮುನಿಸಿಕೊಂಡು ಶಂಬರನೇನಾದರೂ ಒಂದು ಮೂಲೆ ಹಿಡಿದರೆ, "ಶಂಬರಾ, ನಿನಗೆ ಈ ರೀತಿಯ ಆಟಗಳನ್ನು ಆಡಲು ಯಾರಾದರೂ ಒಬ್ಬಳು ನಿನಗೆ ಮುಂದೆ ಸಿಗುವಳು. ನನಗೆ ಇದು ಇಷ್ಟವಿಲ್ಲ." ಎಂದು ರಮಿಸುತ್ತಿದ್ದಳು. "ನೀನೇ ಆಡಿದರೀಗ ಏನಂತೆ?" ಎಂದು ಶಂಬರ ಮೊಂಡಾಟ ಮಾಡಿದಾಗ, "ನಾನು ಮಾತೆ ಮತ್ತು ನೀನು ನನ್ನ ಸುತ." ಎಂದು ವಸುಮಾ ಹೇಳಿದರೆ, "ಆದರೀಗ ಏನು?" ಎಂದು ತನ್ನ ಮೊಂಡಾಟವನ್ನು ಮುಂದುವರಿಸಿಯೇ ತೀರುತ್ತಿದ್ದ ಶಂಬರ.

"ನಿನ್ನ ಮೈಯಲ್ಲಿ ಇನ್ನೂ ಆದಿವಾಸಿಗಳ ರಕ್ತ ಹರಿಯುತ್ತಿದೆ. ಬಹಳ ಹಿಂದೆ, ಈ ರೀತಿ ತಾಯಿ ಮಗ ಅಂತೇನೂ ಇರಲಿಲ್ಲ. ಬರೀ ಬೇಟೆ ಆಡಿಕೊಂಡೇ ಇರುತ್ತಿದ್ದಾಗ, ಗುಂಪಿನ ನಾಯಕಿ, ನಾನು ಹೆತ್ತ ಗಂಡು ಮಕ್ಕಳಲ್ಲೇ ಗಟ್ಟಿಮುಟ್ಟಾಗಿರುವವನನ್ನು ತನ್ನ ಜೊತೆ ಕೂಡಲು ಆಯ್ಕೆ ಮಾಡಿಕೊಳ್ಳುತ್ತಿದ್ದಳು. ಈಗ ಹಾಗಿಲ್ಲ." ಎಂದು ವಸುಮಾ ಸಮಾಧಾನ ಮಾಡಿದರೆ, "ನಾವೂ ಹಾಗೇ ಇರೋಣ." ಎನ್ನುತ್ತಾ ಶಂಬರ ತನ್ನ ಇಷ್ಟವನ್ನು ಪ್ರದರ್ಶಿಸುತ್ತಿದ್ದ.

“ಆದರೆ, ನನಗೆ ಇದು ಇಷ್ಟವಿಲ್ಲ ಶಂಬರ. ಈಗ ನಿನಗೆ ಆಗುತ್ತಿರುವುದು ಕಾಮಾತುರ. ಇದು ಹಾಗೆ ಬರುತ್ತದೆ. ಸರಿ. ಆದರೆ, ಮತ್ತೊಬ್ಬರೊಡನೆ ಕೂಡುವುದಕ್ಕೆ ಸಮ್ಮತಿ ಬೇಕು. ಬಲವಂತ ಮಾಡಬಾರದು. ಹೀಗೆ ಗಂಡು ಹೆಣ್ಣು ಕೂಡುವುದಕ್ಕೆ ಸಂಭೋಗ ಎನ್ನುತ್ತಾರೆ.”

ಶಂಬರನಿಗೆ ಸಂಭೋಗವೆಂದರೇನೆಂದು ತಿಳಿದಿತ್ತು. ತನ್ನ ಮನೆಯ ಸುತ್ತಮುತ್ತಲಿನ ಪ್ರಾಣಿಗಳಲ್ಲಿ ಅವನು ಗಮನಿಸಿದ್ದ. ಅದರಲ್ಲೂ ವಸುಮಾಳೇ ಹಿತ್ತಲಿನಲ್ಲಿ ಬಸವನಿಂದ ಹಸುವಿಗೆ ಮಾಡಿಸುವುದನ್ನು ಅನೇಕ ಬಾರಿ ನೋಡಿದ್ದ. ಮನೆಯ ಪೌಳಿಯಲ್ಲಿಯೇ ನಾಯಿಗಳು ಸಂಭೋಗಿಸುವಾಗ ಗಂಟೆಗಟ್ಟಲೆ ಕುಳಿತು ಅವುಗಳ ಗಲಾಟೆಗಳನ್ನು ನೋಡುತ್ತಿದ್ದ. “ಸಂಭೋಗವನ್ನು ಪರಸ್ಪರ ಒಪ್ಪಿಗೆಯಿಂದ ಮಾಡಿದರೆ ಮಾತ್ರ ಹಿತ ಮತ್ತು ಸುಖ. ಬಲತ್ಕಾರವಾಗಿ ಮಾಡಿದರೆ, ಅದು ದೌರ್ಜನ್ಯ. ನನಗೆ ಈ ಬಗೆಯ ಸಂಭೋಗಗಳು ಬೇಕಾದಷ್ಟು ಆಗಿ ಹೋಗಿವೆ. ನನಗೀಗ ಇದರಲ್ಲಿ ಚೂರೂ ಆಸಕ್ತಿ ಇಲ್ಲ. ನೀನಿನ್ನೂ ಚಿಕ್ಕ ಬಾಲಕ. ನೀನು ತಕ್ಕ ಪ್ರಾಯದವನಾದಾಗ ನಿನಗೆ ತಕ್ಕನಾದವಳು ಸಿಗುತ್ತಾಳೆ. ಆಗ ದಿನವೆಲ್ಲಾ ಸಂಭೋಗ ಮಾಡಿಕೊಂಡಿರು." ಅವಳ ಸಂಯಮದ ಮಾತಿನಿಂದ ಶಂಬರನ ಮೈಯಲ್ಲಿ ಕಾವಿಳಿದು ಹೋಗಿರುತ್ತಿತ್ತು.

ಅದಾದ ಮೇಲೂ ಅವನ ಶಿಶ್ನ ಉದ್ರಿಕ್ತವಾದಾಗೆಲ್ಲಾ ವಸುಮಾಳ ಬಳಿಗೆ ಓಡಿ ಹೋಗಿ, “ಅಂಬಾ, ಇಲ್ಲಿ ನೋಡು, ಇಲ್ಲಿ ನೋಡು.” ಎಂದು ತೋರಿಸುತ್ತಿದ್ದ. ವಸುಮಾ ನಕ್ಕು ತಾನು ಮಾಡುತ್ತಿದ್ದ ಕೆಲಸವನ್ನು ಅವನೊಂದಿಗೆ ಹಂಚಿಕೊಂಡು ಅವನ ಗಮನ ಬೇರೆಡೆ ಸೆಳೆಯುತ್ತಿದ್ದಳು.

ಆದರೆ ಮುಂದೊಂದು ದಿನ ನಡೆದ ಘಟನೆಯಿಂದಾಗಿ ಅವನು ಎಂದೂ ಅವಳ ಮುಂದೆ ತನ್ನ ಉದ್ರಿಕ್ತ ಶಿಶ್ನವನ್ನು ಪ್ರದರ್ಶಿಸಲಿಲ್ಲ.

ಒಂದು ಸಂಜೆ ಓರ್ವ ಕ್ಷತ್ರಿಯ ವೀರ ಕುದುರೆಯ ಮೇಲೆ ಅರಣ್ಯ ಮಾರ್ಗವಾಗಿ ಬಂದವನು, ಇವರ ಮನೆಯಿಂದ ಹೊಗೆಯೇಳುತ್ತಿದ್ದುದ್ದನ್ನು ಕಂಡು ಅಂದು ರಾತ್ರಿ ಅಲ್ಲಿ ತಂಗಲು ಅವಕಾಶ ಕೇಳಲು ಬಂದ.

ಅವನು ಬಂದಾಗ ಮನೆಯ ಮುಂದೆ ಚರ್ಮದಿಂದ ಹಗ್ಗವನ್ನು ಹೊಸೆಯುತ್ತಿದ್ದ ವಸುಮಾ ತನ್ನ ಎದೆಯ ಮೇಲೆ ಏನನ್ನೂ ಹೊದ್ದಿರಲಿಲ್ಲ. ಆತ ಬಂದನೆಂದು ಒಳಗೆ ಹೋಗಿ ಎದೆಯ ಮೇಲೆ ಹೊದಿಕೆಯೊಂದನ್ನು ಹೊದ್ದು ಹೊರಗೆ ಬಂದಳು. ಅವನ ಕೋರಿಕೆಯನ್ನು ಮನ್ನಿಸಿದ ವಸುಮಾ ಅವನಿಗೆ ಮನೆಯ ಜಗುಲಿಯ ಮೇಲೆ ಅವನೊಡನಿದ್ದ ವಸ್ತುಗಳನ್ನು ಇಟ್ಟುಕೊಳ್ಳಲು ಅವಕಾಶ ನೀಡಿದಳು.

ಆತ ತನ್ನ ಕುದುರೆಯನ್ನು ಗೂಟಕ್ಕೆ ಕಟ್ಟುತ್ತಾ ವಸುಮಾಗೆ ಹೇಳಿದ. “ನೀನು ನಿನ್ನ ಉಪವಸನವಿಲ್ಲದೆಯೇ ಸುಂದರವಾಗಿ ಕಾಣುತ್ತೀಯೆ.”

ವಸುಮಾ ಅದಕ್ಕೇನೂ ಉತ್ತರಿಸಲಿಲ್ಲ. ಬದಲಾಗಿ, “ನಿಮಗೆ ರಾತ್ರಿಯೂಟಕ್ಕೆ ಜವೆಗೋಧಿಯ ಅಡುಗೆ ಸಾಕೇ? ಅಥವಾ ಮಾಂಸ ಬೇಕೆ?” ಎಂದು ಕೇಳಿದಳು.

“ಹಸುಗಳು ಕೂಗುವುದು ಕೇಳುತ್ತಿದೆ. ಒಂದು ಎಳೆಗರುವನ್ನು ಅಡುಗೆಗೆ ಬಳಸು.” ಎಂದ ಆತ. ವಸುಮಾ ಅವನ ದನಿಯಲ್ಲಿದ್ದ ಆಜ್ಞೆಯನ್ನು ಸಹಿಸದೇ ತೀಕ್ಷ್ಣವಾಗಿ ಅವನತ್ತ ನೋಡಿದಳು.

“ಏನು ಹಾಗೆ ನೋಡುವೆ? ನೀನು ಗಣಿಕೆಯೇ? ಅಥವಾ ದಾಸಿಯೇ?” ಎಂದು ಕೇಳಿದ ಆತ.

“ನಾನು ಈ ಮನೆಯ ಯಜಮಾನಿ. ಈಗ ನೀನು ಇಲ್ಲಿರುವುದು ನನ್ನ ಔದಾರ್ಯದಿಂದ.” ಎಂದಳು ವಸುಮಾ ಗಡುಸಾಗಿ.

“ಮಾತನಾಡುವ ರೀತಿಯಲ್ಲಿ ಆರ್ಯಸ್ತ್ರೀಯಂತೆ ತೋರುವುದು. ಆದರೆ, ನಿನ್ನ ಮೈ ಮತ್ತು ಕೆನ್ನೆಯ ಮೇಲಿನ ಕೆಂಪು ಬಣ್ಣವನ್ನು ನೋಡಿದರೆ, ನೀನು ಕಾಮರೂಪದ ಕಡೆಯವಳಿರಬೇಕು.” ಎಂದ ಆತನ ತುಟಿಗಳಲ್ಲಿ ನಗು ಮಾಸಿರಲಿಲ್ಲ.

ಶಂಬರನಿಗೂ ಆತನ ಮೇಲೆ ಸಿಟ್ಟು ಬಂದಿತ್ತು. ಅವನು ಅಲ್ಲಿಯೇ ನಿಂತಿದ್ದರೂ ಇತರ ಪ್ರಯಾಣಿಕರು ಅವನೊಂದಿಗೆ ಪ್ರೀತಿಯಿಂದ ಮಾತಾಡಿಸಿದಂತೆ ಆ ಪ್ರಯಾಣಿಕ ಅವನನ್ನು ಮಾತನಾಡುವುದಿರಲಿ, ಕೊಂಚವೂ ಗಣಿಸಿರಲಿಲ್ಲ!

ಆತ ಮನೆಯ ಮುಂದಿನ ಕಟ್ಟೆಯ ಮೇಲೆ ಕುಳಿತು ವಿರಮಿಸಿಕೊಂಡ. ವಸುಮಾ ಮನೆಯ ಹಿಂದುಗಡೆ ಕೊಟ್ಟಿಗೆಗೆ ಹೋದಳು ಅಂದಿನ ರಾತ್ರಿಯ ಅಡುಗೆಗೆ ಒಂದು ಎಳೆಯ ಕರುವನ್ನು ಆಯ್ದು ತರಲು.

ಆ ಕ್ಷತ್ರಿಯ ಪ್ರಯಾಣಿಕ ತನ್ನ ಚರ್ಮದ ಚೀಲದಿಂದ ಸುರೆಯನ್ನು ತೆಗೆದು ಸೇವಿಸುತ್ತಾ, ಶಂಬರನನ್ನು ನೋಡಿ, “ಬಾ ಇಲ್ಲಿ. ನನ್ನ ಕಾಲುಗಳನ್ನು ಒತ್ತು.” ಎಂದು ಕರೆದ. ಶಂಬರ ಏನನ್ನೂ ಹೇಳದೇ ಅವನ ಚಾಚಿದ ಕಾಲುಗಳನ್ನು ಮೃದುವಾಗಿ ಒತ್ತಿದ.

“ಗಡುಸಾಗಿ ಒತ್ತು.” ಎಂದ ಆತ. ಅದರಂತೇ ನಡೆದುಕೊಂಡ ಶಂಬರ.

ತನ್ನ ಕೆಲಸದ ಮಧ್ಯೆ ಅಲ್ಲಿಗೆ ಬಂದ ವಸುಮಾ ಈ ದೃಶ್ಯವನ್ನು ನೋಡಿ, “ಶಂಬರ. ಏಳು ಮೇಲೆ. ನೀನು ಅವನ ಸೇವಕ ಅಲ್ಲ. ನೀನು ಈ ಮನೆಯ ಯಜಮಾನ. ಆತ ವಿನೀತನಾಗಿ ತನಗೆ ಕಾಲು ನೋವೆಂದು ಹೇಳಿ, ಒತ್ತಲು ಕೋರಿದರೆ ಮುಂದುವರೆಸು. ಹಾಗಲ್ಲದೇ ಅಧಿಕಾರದಿಂದ ಆಜ್ಞೆ ಮಾಡಿದ್ದಲ್ಲಿ ಮೇಲೆದ್ದು ಬಾ.” ಎಂದಳು.

ಶಂಬರ ಮೇಲೆದ್ದು ತನ್ನ ತಾಯಿಯ ಕಡೆಗೆ ನಡೆದ. ವಸುಮಾ ಜೋರಾಗಿ ನಗುತ್ತಿದ್ದ ಆ ಪ್ರಯಾಣಿಕನ ಕೋಪದಿಂದ ನೋಡಿ ಮನೆಯೊಳಗೆ ನಡೆದಳು. ಹಿಂದೆಯೇ ಕದ ಹಾಕಿದಳು.

“ಶಂಬರ, ಆತ ನಿನಗೆ ಕಾಲು ಒತ್ತಲು ಹೇಳಿದ ತಕ್ಷಣ ಒತ್ತಿಬಿಡುವುದೇ?” ವಸುಮಾ ಒಳಗೆ ಹೋದ ಮೇಲೆ ಶಂಬರನ ಗದರಿಕೊಂಡಳು. ಶಂಬರ ಏನೂ ಹೇಳಲಿಲ್ಲ. ಅವನಿಗೂ ತಾನು ಹಾಗೆ ಹೋಗಿಬಿಡಬಾರದಿತ್ತು ಎಂದೆನಿಸಿತ್ತು. ಆದರೆ, ಅಂತಹ ಮಹಾಕಾಯನು ಆಜ್ಞೆ ನೀಡಿದಾಗ ಧಿಕ್ಕರಿಸಲು ಅವನಿಗೆ ಆಗಲಿಲ್ಲ. ಭಯದಿಂದಲೇ ಒಪ್ಪಿಕೊಂಡಿದ್ದ. ಈಗ ವಸುಮಾಳ ಧೈರ್ಯ ಸ್ಫೂರ್ತಿಯಾಗಿತ್ತು.

“ಹೇ....”

ತಮ್ಮ ಬೆನ್ನ ಹಿಂದೆ ಬಂದ ದನಿಗೆ ವಸುಮಾ ಮತ್ತು ಶಂಬರ ಇಬ್ಬರೂ ತಿರುಗಿ ನೋಡಿದರು. ಒಳಗೆ ಬಂದಿದ್ದ ಆ ಪ್ರಯಾಣಿಕ ನಗ್ನವಾಗಿದ್ದ. ಪಾನಮತ್ತನಾಗಿ ತನ್ನ ಮೈ ಮೇಲಿನ ಬಟ್ಟೆಯನ್ನು ಕಳಚಿದ್ದ. ಉದ್ರಿಕ್ತನಾಗಿದ್ದ ಆತ ತನ್ನ ಮಿಥುನಾಸಕ್ತಿಯನ್ನು ಆತುರದಿಂದ ಪ್ರದರ್ಶಿಸುತ್ತಾ ವಸುಮಾಳ ತೀರಾ ಹತ್ತಿರಕ್ಕೆ ಹೋದ.

“ನೀನು ಹಾಗೆಲ್ಲಾ ಮಾಡಲಾರೆ. ಮರ್ಯಾದೆಯನ್ನು ಮೀರದೆಯೇ ಹೊರಗೆ ಹೊರಟು ಹೋಗು. ನಾನು ಗಣಿಕೆ ಅಲ್ಲ.” ವಸುಮಾ ಕೋಪದಿಂದ ಕೂಗಿದಳು.

ಅವನು ಬರಿದೇ ನಗುತ್ತಿದ್ದ. ತನ್ನ ಉದ್ರಿಕ್ತ ಶಿಶ್ನವನ್ನು ಸವರಿಕೊಂಡು, ಸೊಂಟವನ್ನು ಮುಂದಕ್ಕೆ ಚಾಚಿ ವಕ್ರವಾಗಿ ನಗುತ್ತಾ ಮುಂದೆ ಮುಂದೆ ಬರುತ್ತಿದ್ದ.

“ಶಂಬರ, ಸೃಣಿಯನ್ನು ಕೊಡು.” ವಸುಮಾ ಕುಡುಗೋಲಿಗಾಗಿ ಕೈ ಚಾಚಿ ಕೂಗಿದಳು. ಶಂಬರ ಕೂಡಲೇ ಗೋಡೆಯ ಮೇಲೆ ತಗುಲಿ ಹಾಕಿದ್ದ ಕುಡುಗೋಲನ್ನು ಅವಳ ಕೈಗೆ ಕೊಟ್ಟ.

ಆ ಪ್ರಯಾಣಿಕನನ್ನು ಹೆದರಿಸಲು, ಅಥವಾ ತನ್ನ ಆತ್ಮರಕ್ಷಣೆಗೆ ಕುಡುಗೋಲನ್ನು ವಸುಮಾ ಕೇಳಿದ್ದಾಳೆಂದುಕೊಂಡಿದ್ದ ಶಂಬರ, ಕ್ಷಣಾರ್ಧದಲ್ಲಿ ಮುಂದೆ ನಡೆದುದನ್ನು ನೋಡಿ ಹೆದರಿದ. ತನಗೇ ಏನೋ ಆಗಿಬಿಟ್ಟವನಂತೆ ಥರಥರ ನಡುಗುತ್ತಾ ಕೂಗುತ್ತಾ ಕೆಳಕ್ಕೆ ಬಿದ್ದು ಬಿಟ್ಟ.

ವಸುಮಾ ಕುಡುಗೋಲಿನಿಂದ ಆ ಪ್ರಯಾಣಿಕನ ಶಿಶ್ನ ಭಾಗಕ್ಕೇ ಬೀಸಿದ್ದಳು. ಆತ ನೋವಿನಿಂದ ಕೂಗುತ್ತಾ, ಕೋಪದಿಂದ ಅಬ್ಬರಿಸುತ್ತಾ ಆಕೆಯನ್ನು ಹಿಡಿಯಲು ಮುಂದಾದಾಗ, ವಸುಮಾ ಕ್ಷಿಪ್ರವೇಗದಲ್ಲಿ ಚಲಿಸುತ್ತಾ, ಅವನಿಗಿಂತ ಮೊದಲೇ ಅವನ ಮೇಲೆ ದಾಳಿ ಮಾಡಿದಳು. ಆತನ ಮುಖ, ಕುತ್ತಿಗೆ, ತೋಳುಗಳನ್ನು ಆಳವಾಗಿ ಘಾಸಿಗೊಳಿಸಿದಳು. ಅವಳು ಮಾಡುತ್ತಿದ್ದ ಆಕ್ರಮಣದಲ್ಲಿ ತಂತ್ರಗಾರಿಕೆ ಇತ್ತು. ಅವಳು ಅವನಿಂದ ತಪ್ಪಿಸಿಕೊಂಡು ಪ್ರತ್ಯಾಕ್ರಮಣ ಮಾಡುತ್ತಿದ್ದ ರೀತಿಯಲ್ಲಿ ನೈಪುಣ್ಯತೆ ಇತ್ತು. ಒಮ್ಮೆ ಅವನ ಮೈಯೊಳಗೆ ತೂರುವಂತೆ ಕುಡುಗೋಲನ್ನು ಬೀಸಿದ ಮೇಲೆ ಅದನ್ನು ಹಿಂದಕ್ಕೆ ಎಳೆದುಕೊಂಡು ಮತ್ತೆ ಬೀಸುವಲ್ಲಿ ಅನುಭವದಿಂದ ಬಂದಿರಬಹುದಾದ ಬಿರುಸಿತ್ತು. ಅವಳ ಹಿಡಿತದಲ್ಲಿ ಗಡುಸಿತ್ತು.

ತನ್ನ ವಸುಮಾಳನ್ನು ಎಂದಿಗೂ ಹಾಗೆ ನೋಡದಿದ್ದ ಶಂಬರ ಚೀರುತ್ತಾ ಬಿದ್ದುಬಿಟ್ಟಿದ್ದ. ಆ ಪ್ರಯಾಣಿಕ ವಸುಮಾಳನ್ನು ಯಾವ ರೀತಿಯಲ್ಲಾದರೂ ಘಾಸಿಗೊಳಿಸುವನೇನೋ ಎಂಬ ಭಯ ಅವನಿಗೆ ಸ್ವಲ್ಪವೂ ಬರಲಿಲ್ಲ. ಬದಲಾಗಿ ವಸುಮಾಳ ಕೋಪ ಮತ್ತು ಆವೇಶ ಅವನ ಕಡೆಯಿಂದ ತನ್ನ ಕಡೆಗೆ ತಿರುಗಿಬಿಟ್ಟೀತೋ ಎಂದು ಹೆದರಿದ್ದ. ವಸುಮಾಳ ಕೈಗಳು, ಮುಖ ಮತ್ತು ವಸ್ತ್ರವೆಲ್ಲವೂ ರಕ್ತಸಿಕ್ತವಾಗಿತ್ತು.

“ನೀನು ಹೆದರಬೇಡ, ಶಂಬರ. ನನಗೆ ಇದೇನೂ ಹೊಸತಲ್ಲ. ನೀನು ನೋಡಿರಲಿಲ್ಲ. ನಾನು ಎಚ್ಚರಿಕೆಯಲ್ಲಿದ್ದೇನೆ. ಮೈ ಮರೆತಿಲ್ಲ. ನೀನು ಹೆದರಬೇಡ.” ವಸುಮಾ ಅವನಿಗೆ ಸಾಂತ್ವಾನ ಹೇಳುತ್ತಿದ್ದರೂ ಅವಳ ಎದೆ ಆವೇಶದಿಂದ ಏರಿಳಿಯುತ್ತಿತ್ತು. ಧ್ವನಿಯಲ್ಲಿ ಈ ಮೊದಲು ಇರದಿದ್ದ ಗಡಸುತನವಿತ್ತು. ಮುಖದಲ್ಲಿ ಕೋಪ ಮಾಸಿದ್ದರೂ, ಅದರ ನೆರಳಿತ್ತು.

ಶಂಬರ ಅಳುತ್ತಲೇ ಇದ್ದ. ಆದರೆ ಸದ್ದು ಮಾಡುವುದನ್ನು ನಿಲ್ಲಿಸಿದ್ದ. ಇನ್ನೂ ಸದ್ದು ಮಾಡಿಕೊಂಡು ಅತ್ತರೆ ತನ್ನನ್ನೂ ಹೊಡೆದುಬಿಟ್ಟಾಳು ಎಂಬ ಭಯ ಅವನದ್ದು. ಅದಾದ ನಂತರ ಶಂಬರ ವಸುಮಾಗೆ ತನ್ನ ಶಿಶ್ನ ಪ್ರದರ್ಶನ ಮಾಡುವ ಸಾಹಸ ಮಾಡಲಿಲ್ಲ. ಹುಡುಗ ತನ್ನ ಬಗ್ಗೆ ಹೆದರಿದ್ದಾನೆಂದು ವಸುಮಾ ಗ್ರಹಿಸಿದ್ದಳು. ಅದನ್ನು ಹೋಗಲಾಡಿಸಲು ತನ್ನ ಎಂದಿನ ವಾತ್ಸಲ್ಯ ಪ್ರದರ್ಶನವನ್ನು ಇನ್ನಷ್ಟು ತೀವ್ರಗೊಳಿಸಿದ್ದಳು.

ಶಂಬರನ ಸಹಾಯವಿಲ್ಲದೇ ತಾನೇ ಆ ಕ್ಷತ್ರಿಯ ಪ್ರಯಾಣಿಕನ ದೇಹವನ್ನು ಮನೆಯ ಹಿತ್ತಲಲ್ಲಿ ಸುಟ್ಟು ಹಾಕಿದಳು. ಆತನ ಚರ್ಮದ ಸುರೆಯ ಚೀಲ, ಎರಡು ಖಡ್ಗಗಳು, ಎರಡು ಕಿರುಗತ್ತಿಗಳು, ಒಂದು ಗುರಾಣಿ, ಎದೆಯ ಕವಚ ಇತ್ಯಾದಿ ವಸ್ತುಗಳನ್ನು ತೆಗೆದಿರಿಸಿಕೊಂಡಿದ್ದಳು.

ಆತನ ಕುದುರೆಯನ್ನು ಪಳಗಿಸಲು ಯತ್ನಿಸಿದಳು. ಮೊದ ಮೊದಲು ಆ ಕುದುರೆ ಇವಳ ಮಾತನ್ನು ಕೇಳುತ್ತಿರಲಿಲ್ಲ. ಕ್ರಮೇಣ ಅದರೊಂದಿಗೆ ಗೆಳತನ ಬೆಳೆಸಿ ನಂತರ ಅದನ್ನು ನಿಧಾನವಾಗಿ ಪಳಗಿಸಿದಳು. ಶಂಬರ ಹನ್ನೆರಡುವರ್ಷದ ಹುಡುಗನಾಗುವ ಹೊತ್ತಿಗೆ ಅದರ ಮೇಲೇರಿ ಕಾಡಿನಲ್ಲಿ ಅಲ್ಲಿಲ್ಲಿಗೆ ಹೋಗುತ್ತಿದ್ದ.

ಒಮ್ಮೆ ಶಂಬರ ಮನೆಯ ಹೊರಗೆ ಕುದುರೆಗೆ ನೀರು ಕುಡಿಸುತ್ತಿದ್ದಾಗ ಒಂದು ಪ್ರಯಾಣಿಕರ ತಂಡ ಬಂದಿತು. ಅದರಲ್ಲಿ ಕಾವಲಿನ ಭಟರಾಗಿ ಈರ್ವರು ಗಂಡಸರನ್ನು ಬಿಟ್ಟರೆ, ಉಳಿದ ಎಂಟು ಮಂದಿ ಹೆಂಗಸರಿದ್ದರು. ಎಲ್ಲರೂ ಕೆಂಪುಕೆಂಪಾಗಿದ್ದರು. ಹೆಂಗಸರೆಲ್ಲರೂ ವಸುಮಾಳಂತೆಯೇ ಗಟ್ಟಿಮುಟ್ಟಾಗಿದ್ದರು. ಎಲ್ಲಾ ಹೆಂಗಸರೂ ನಗುನಗುತ್ತಿದ್ದರು. ಶಂಬರ ಅಚ್ಚರಿಯಿಂದ ಅವರನ್ನು ನೋಡಿದ. ಅವರ ನೋಡುವಿಕೆಯಲ್ಲಿ ಅಪರಿಚಿತ ಭಾವನೆಯಿರಲಿಲ್ಲ. ಒಬ್ಬಾಕೆ ಮತ್ತೊಬ್ಬಳೊಡನೆ ಹೇಳಿದಳು. "ಇವನು ವಸುಮಾಳ ಮಗನಿರಬೇಕು."

ಅಷ್ಟರಲ್ಲಿ ವಸುಮಾ ಮನೆಯಿಂದ ಹೊರಗೆ ಬಂದವಳೇ ಇವರನ್ನು ನೋಡಿ, "ಹೋಯ್...." ಎಂದು ಸಂತೋಷದಿಂದ ಕೂಗಿದಳು. ಸರಸರನೆ ಪೌಳಿಯ ದ್ವಾರದ ಬಳಿಗೆ ಬಂದು ಅಡ್ಡವಾಗಿದ್ದ ತಟ್ಟಿಗೆಯನ್ನು ಸರಿಸುತ್ತಾ ಬೊಗಳುತ್ತಿದ್ದ ನಾಯಿಗಳನ್ನು ದೂರಕ್ಕೆ ಓಡಿಸುತ್ತಾ, ಕಾವಲು ಭಟರಾದ ಪುರುಷರನ್ನು ಹೊರತುಪಡಿಸಿ, ಒಬ್ಬೊಬ್ಬರನ್ನಾಗಿ ಎಲ್ಲಾ ಹೆಂಗಸರನ್ನೂ ತಬ್ಬಿಕೊಂಡಳು.

"ಇವನು ನಿನ್ನ ಮಗನೇನು?" ಒಬ್ಬಾಕೆ ಕೇಳಿದಳು.

"ಹೌದು, ಶಂಬರ ಅವನ ಹೆಸರು."

"ಹೋಯ್...." ಎಂದು ಹೆಂಗಸರು ಕುಲುಕುಲು ನಗುತ್ತಾ ಉದ್ಗರಿಸಿದರು.

"ಹೋ.... ಅವನ ಹೆಸರನ್ನೇ ಇಟ್ಟಿದ್ದೀಯ. ಆದರೆ ಇವನು ಅವನ ಮಗನಲ್ಲ." ಎಂದಳು ಮತ್ತೊಬ್ಬಳು.

"ಖಂಡಿತ ಅಲ್ಲ." ಎಂದ ವಸುಮಾ ಎಲ್ಲರನ್ನೂ ಆತ್ಮೀಯವಾಗಿ ಒಳಗೆ ಕರೆದುಕೊಂಡು ಹೋದಳು. ಕುದುರೆಯ ಮೇಲೆ ಇಳಿಬಿಟ್ಟಿದ್ದ ಚೀಲಗಳನ್ನು ಕಾವಲು ಭಟರು ಹೊತ್ತುಕೊಂಡು ಬಂದು ಮನೆಯ ಬಾಗಿಲಲ್ಲಿ ಇಟ್ಟರು. ಕುದುರೆಯ ಮೇಲಿದ್ದ ಜೀನನ್ನು ತೆಗೆದಿರಿಸಿ, ಬಾಚಣಿಗೆಯಿಂದ ಕುದುರೆಯ ಮೈಯನ್ನು ಆ ಕಾವಲು ಭಟರು ಬಾಚುತ್ತಿದ್ದರು.

ಆಗ ವಸುಮಾ ಶಂಬರನನ್ನು ಒಳಕ್ಕೆ ಕರೆಯಲೇ ಇಲ್ಲ. ಆ ಎಲ್ಲಾ ಹೆಂಗಸರ ಜೊತೆ ಮುಕ್ತವಾಗಿ ನಗುತ್ತಾ, ಮಾತಾಡುತ್ತಾ ಕೇಕೆ ಹಾಕುತ್ತಿದ್ದದ್ದು ಹೊರಗಿದ್ದ ಶಂಬರನಿಗೆ ಕೇಳಿಸುತ್ತಿತ್ತು. ಭಟರು ಕುದುರೆಯನ್ನು ನೋಡಿಕೊಳ್ಳುತ್ತಿದ್ದ ಪರಿಯನ್ನು ಅವನು ಗಮನಿಸುತ್ತಿದ್ದ. ಯಾವಾಗಲೋ ಒಮ್ಮೆ ಶಂಬರ ಕಿಟಕಿಯಿಂದ ಒಳಗೆ ನೋಡಿದಾಗ, ವಸುಮಾ ತಾನು ಕೊಂದ ಪ್ರಯಾಣಿಕನ ಖಡ್ಗ ಮತ್ತು ಕಿರುಗತ್ತಿಗಳನ್ನು

ತೋರಿಸುತ್ತಿದ್ದಳು. ಅವಳು ತಾನು ಅವನ ಕೊಂದ ಕಥೆಯನ್ನು ಹೇಳುತ್ತಿದ್ದಾಳೆ ಎಂದುಕೊಂಡ ಶಂಬರ. ಅವಳು ಅವರೊಡನೆ ಇರುವ ರೀತಿ ಮತ್ತು ಸಲುಗೆಯನ್ನು ನೋಡಿದರೆ, ಈ ಮೊದಲು ಅವರೆಲ್ಲಾ ಒಟ್ಟಿಗೆ ಇದ್ದವರಿರಬೇಕು ಎಂದುಕೊಂಡ ಶಂಬರ.

ಅಂದು ರಾತ್ರಿ, ಮನೆಯ ಮುಂದೆ ದೊಡ್ಡದಾಗಿ ಬೆಂಕಿಯನ್ನು ಹಾಕಿ, ಅದರ ಸುತ್ತಲೂ ಎಲ್ಲಾ ಹೆಂಗಸರೂ ಸುರೆಯನ್ನು ಕುಡಿಯುತ್ತಾ ನರ್ತಿಸಿದರು. ಅವರೆಲ್ಲರೂ ಶಂಬರನೆಂದೂ ಕೇಳದ ಭಾಷೆಯಲ್ಲಿ ಮಾತಾಡುತ್ತಿದ್ದರು. ಅದೇ ಭಾಷೆಯಲ್ಲಿ ಹಾಡುತ್ತಿದ್ದರು. ತನ್ನ ತಾಯಿಗೆ ಆ ಬಗೆಯ ಭಾಷೆಯೊಂದು ಬರುತ್ತದೆಯೆಂದೂ ಅವನಿಗೆ ಕಲ್ಪನೆಯಿರಲಿಲ್ಲ. ಇದ್ದಕ್ಕಿದ್ದಂತೆ ಅವನ ವಸುಮಾ ಅವನಿಂದ ತೀರ ದೂರವಾಗಿಬಿಟ್ಟಳು ಎಂದೆನಿಸಿತು. ಯಾರೋ ಬೇರೆಯೇ ಹೆಂಗಸೆಂದು ಅವನಿಗೆ ಅನಿಸತೊಡಗಿತು. ಅಲ್ಲದೇ, ತಾನು ನೋಡಿರುವುದಕ್ಕಿಂತ ಹೆಚ್ಚಿನ ರಹಸ್ಯಗಳು ಅವಳಲ್ಲಿ ಅಡಗಿವೆ ಎಂದು ಅವನಿಗೆ ಅನ್ನಿಸಿತು. ಮೌನವಾಗಿ ಕುಳಿತುಕೊಂಡು ಆ ಹೆಂಗಸರ ಗುಂಪಿನಲ್ಲಿ ನರ್ತಿಸುತ್ತಿದ್ದ ತನ್ನ ತಾಯಿಯನ್ನು ಗಮನಿಸುತ್ತಿದ್ದ.

ಮರುದಿನ ಪೂರ್ತಿ ಅವರು ವಸುಮಾಳ ಮನೆಯಲ್ಲಿಯೇ ತಂಗಿದ್ದರು. ಒಂದು ಚೆನ್ನಾಗಿ ಬೆಳೆದುನಿಂತಿದ್ದ ಎತ್ತೊಂದನ್ನು ಅಡುಗೆಗೆ ಬಳಸಲಾಗಿತ್ತು. ಬಂದಿರುವ ಹೆಂಗಸರೇ ಅಡುಗೆ ಮಾಡಿದರು. ಅವರ ಅಡುಗೆಯ ರುಚಿ ವಸುಮಾ ಮಾಡಿರುವುದನ್ನೇ ಹೋಲುತ್ತಿದ್ದರೂ ಇನ್ನೂ ಸ್ವಲ್ಪ ಚೆನ್ನಾಗಿತ್ತು.

ಮೂರನೆಯ ದಿನ ಶಂಬರ ತಾನು ನಿದ್ದೆಯಿಂದ ಎದ್ದಾಗ ಅವರು ಇರಲಿಲ್ಲ. ಬೆಳಗಿನ ಜಾವವೇ ಅವರೆಲ್ಲರೂ ಹೊರಟು ಹೋಗಿದ್ದರು. ಶಂಬರನಿಗೆ, 'ಅವರೆಲ್ಲ ಹೋಗಿಬಿಟ್ಟರಲ್ಲಾ, ಸಧ್ಯ!' ಎಂದು ಸಮಾಧಾನವಾಯಿತು. ಅವರು ಇವನೊಂದಿಗೆ ಸ್ನೇಹವಾಗಿಯೂ, ವಿಶ್ವಾಸದಿಂದಲೂ ನಡೆದುಕೊಳ್ಳುತ್ತಿದ್ದರೂ, ಅವರ ಬಗ್ಗೆ ಅಪರಿಚಿತ ಭಾವ ಇವನಲ್ಲಿತ್ತು. ಜೊತೆಗೆ ತನ್ನ ತಾಯಿಯು ಅವರ ಜೊತೆ ಸೇರಿಕೊಂಡು ತನಗೆ ದೂರವಾಗಿದ್ದಾಳೆ ಎಂದೆನಿಸಿತ್ತು. ಈಗ ನೆಮ್ಮದಿಯಾಯ್ತು, ತೀರಾ ಸಂತೋಷವೂ ಆಯ್ತು. ಅವರು ಹಾಗೆ ಇನ್ನೂ ಒಂದೆರಡು ದಿನಗಳು ತಮ್ಮಲ್ಲೇ ತಂಗಿದ್ದರೆ, ತನ್ನ ತಾಯಿಯನ್ನು ತನ್ನಿಂದ ಸಂಪೂರ್ಣವಾಗಿ ದೂರ ಮಾಡಿಬಿಡುತ್ತಾರೆಂದೇ ಹೆದರಿದ್ದ.

ಆದರೆ, ಅವರು ಅಲ್ಲಿರದಿದ್ದರೂ, ಅವನ ಭಯವು ನಿಜವೇ ಆಗಿತ್ತು.

ಅಂದು ಮಧ್ಯಾಹ್ನ ಊಟವಾದ ಮೇಲೆ ವಸುಮಾ ಅವನೊಂದಿಗೆ ಕುಳಿತು ಮಾತಾಡಿದಳು.

"ನಿನ್ನೆ ಬಂದಿದ್ದವರೆಲ್ಲಾ ನಮ್ಮ ಊರಿನವರು. ನಾನು ಹುಟ್ಟಿದ್ದು ಬೆಳೆದಿದ್ದು ಕಾಮರೂಪದಲ್ಲಿ. ಕಾಮಾಕ್ಷ್ಯದ ಸಮೀಪ. ಇಲ್ಲಿಯೇ ಬೇರೆ ಬೇರೆ ಕಡೆ ಇದ್ದಾರೆ. ನಾವೆಲ್ಲರೂ ನಮ್ಮ ಊರಿಗೆ ಹೋಗಿ ಬರಬೇಕೆಂದುಕೊಂಡಿದ್ದೇವೆ. ನಾವು ಹೋಗಿ ಬರುವವರೆಗೂ ನೀನು ಎಚ್ಚರಿಕೆಯಿಂದ ಮನೆಯನ್ನು ಮತ್ತು ಈ ಪಶುಗಳನ್ನು ನೋಡಿಕೊಂಡು ಇರುತ್ತೀಯ ಅಲ್ಲವೇ?"

ಶಂಬರನಿಗೆ ಗಾಬರಿಯಾಯಿತು. "ನಾನೊಬ್ಬನೇ ಇರಬೇಕೆ!"

"ಹೌದಲ್ಲವೇ? ನಾನು ಮತ್ತು ನೀನು ಇಬ್ಬರೂ ಹೊರಟು ಹೋದರೆ ಈ ಪಶುಗಳನ್ನು ನೋಡಿಕೊಳ್ಳುವವರು ಯಾರು?"

ಶಂಬರ ಅಳತೊಡಗಿದ.

"ನೀನು ಜಾಣ. ನೀನು ಒಬ್ಬನೇ ಮನೆಯನ್ನು ನೋಡಿಕೊಳ್ಳಲು ಮತ್ತು ನಿನ್ನನ್ನು ನೀನು ನೋಡಿಕೊಳ್ಳುವುದನ್ನೂ ಕಲಿತಿದ್ದೀಯ. ನಾವು ಇಲ್ಲಿಂದ ಹೊರಡಲು ಇನ್ನೂ ತುಂಬಾ ದಿನಗಳಾಗುತ್ತವೆ. ಅದುವರೆಗೂ ನಾನು ನಿನಗೆ ಅಡುಗೆ ಮಾಡುವುದನ್ನು, ಮದ್ದು ಮಾಡುವುದನ್ನು, ಗಿಡ ಮೂಲಿಕೆಗಳನ್ನು ಗುರುತಿಸುವುದನ್ನು, ನಿನ್ನ ನೀನು ರಕ್ಷಿಸಿಕೊಳ್ಳಲು ಕೆಲವು ರಕ್ಷಣಾ ತಂತ್ರಗಳನ್ನು, ಹೋರಾಟ ತಂತ್ರಗಳನ್ನು; ಇನ್ನೂ ಏನೇನೋ ಹೇಳಿಕೊಡುತ್ತೇನೆ. ನೀನು ಎಲ್ಲವನ್ನೂ ಕಲಿತುಕೊಳ್ಳಬೇಕು. ನೀನು ಈ ಮನೆಯ ಯಜಮಾನ. ನೀನು ಗೋಪ. ಇಷ್ಟು ದೊಡ್ಡ ಗೋವುಗಳ ಸಂಪತ್ತು ಈ ಪ್ರದೇಶದಲ್ಲಿಯೇ ಯಾರ ಬಳಿಯೂ ಇಲ್ಲ. ಇವನ್ನು ನಿನ್ನಿಂದ ಕಸಿದುಕೊಳ್ಳಲು ಯಾರಾದರೂ ಬರಬಹುದು. ಆದರೆ, ನೀನು ಹೋರಾಡುವ ಮಟ್ಟಿಗೆ ಸಿದ್ಧವಾಗಿರಬೇಕು. ಮೋಸದ ಆರ್ಯರನ್ನು ನಂಬಬೇಡ. ಅದರಲ್ಲಿಯೂ ಬ್ರಾಹ್ಮಣರನ್ನು ಎಂದಿಗೂ ಸೇರಿಸಬೇಡ. ಮುಂದೊಂದು ದಿನ ಯಾರಾದರೂ ನಿನ್ನ ಕೂಡ ಜೊತೆಯಾಗಿರಲು ಬಂದರೆ, ಒಂದು ವೇಳೆ ಅವರು ಕ್ಷತ್ರಿಯರಾಗಿದ್ದರೆ, ವೈಶ್ಯರಾಗಿದ್ದರೆ ಅಥವಾ ಬ್ರಾಹ್ಮಣರಾಗಿದ್ದರೆ ಖಂಡಿತ ಸೇರಿಸಬೇಡ. ಶೂದ್ರರೋ ಅಥವಾ ಇನ್ನ್ಯಾರೇ ಅನಾರ್ಯರಾಗಿದ್ದರೆ, ಅರಣ್ಯಕರಾಗಿದ್ದರೆ, ಅವರೊಂದಿಗೆ ಹೊಂದಿಕೋ." ಎಂದ ವಸುಮಾ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಇತರ ಅನಾರ್ಯರನ್ನು, ಶೂದ್ರರನ್ನು, ವಿವಿಧ ಬುಡಕಟ್ಟುಗಳನ್ನು, ಅರಣ್ಯಕರನ್ನು ಗುರುತಿಸುವುದನ್ನು ಹೇಳಿಕೊಟ್ಟಳು.

"ನಾವು ಯಾರು?" ಎಂದು ಕೇಳಿದ ಶಂಬರ.

"ನಿನ್ನ ತಂದೆಯಾಗಿ ಹೊಣೆ ಹೊರಲಿದ್ದವನು ಒಬ್ಬ ದಸ್ಯು. ನಾನು ಅರಣ್ಯಕಳು. ನಿನ್ನ ತಂದೆಯಾಗಬೇಕಿದ್ದವನು ಮತ್ತು ನಾನು ಆರ್ಯರ ಬಳಿ ದಾಸ್ಯದಲ್ಲಿದ್ದೆವು. ನಾನು ದಾಸಿಯಾಗಿದ್ದರಿಂದ ಆರ್ಯರು ನನ್ನನ್ನು ಬೇಕಾದಂತೆ ಉಪಯೋಗಿಸಿಕೊಂಡರು. ಕೊನೆಗೆ ಹುಟ್ಟಲಿರುವ ನಿನ್ನನ್ನು ಅವರ ದಾಸ್ಯದಿಂದ ಪಾರು ಮಾಡಲು ಈ ಅರಣ್ಯಕ್ಕೆ ಓಡಿ ಬಂದೆ.

ನಿನ್ನ ಮೈಯಲ್ಲಿ ಯಾವ ರಕ್ತ ಹರಿಯುತ್ತಿದೆಯೋ ನನಗೆ ಗೊತ್ತಿಲ್ಲ. ನಿನ್ನ ಜನ್ಮಕ್ಕೆ ಕಾರಣರಾದವರು ಯಾರೋ ನನಗೆ ಗೊತ್ತಿಲ್ಲ. ಆದರೆ ನಿನಗೆ ಪಿತೃವಾಗಲು ಇದ್ದವನು ಒಬ್ಬ ದಸ್ಯು. ತುಂಬಾ ಧೀಮಂತ. ಅವನ ಹೆಸರೇ ಶಂಬರ. ಅವನೊಂದಿಗೆ ನಾನು ಆರ್ಯರ ಹಿಡಿತದಿಂದ ತಪ್ಪಿಸಿಕೊಂಡು ಹುಟ್ಟುವ ಮಗುವಿನೊಂದಿಗೆ ಯಾವುದಾದರೂ ಅರಣ್ಯದಲ್ಲಿ ಗುಪ್ತವಾದ ಜೀವನ ನಡೆಸಲು ಸಿದ್ಧವಿದ್ದೆ. ಆದರೆ, ಆರ್ಯರು ಅವನನ್ನು ಕೊಂದುಬಿಟ್ಟರು.

ನೀನು ದಸ್ಯುವಲ್ಲ, ಅರಣ್ಯಕನಲ್ಲ, ಏನೂ ಅಲ್ಲ. ಆದರೆ, ಖಂಡಿತ ಆರ್ಯನಲ್ಲ. ಆರ್ಯನಾಗಕೂಡದು. ಈ ಕಾಡಿನಲ್ಲಿರು, ನಿನ್ನ ಪಶು ಸಂಪತ್ತನ್ನು ಪಾಲನೆ ಮಾಡು. ನಿನಗೆ ಅನುಕೂಲಕರವಾಗಿ ಬದುಕು. ಯಾವುದೇ ವರ್ಣದವರು ಯಾತ್ರಿಕರಾಗಿ ಬಂದರೆ ಅವರನ್ನು ಉಪಚರಿಸು. ಅತಿಥಿಗಳಿಗೆ ಗೌರವ ನೀಡುವುದು ಮತ್ತು ತೊಂದರೆಯಲ್ಲಿದ್ದವರಿಗೆ ಸಹಾಯ ಮಾಡುವುದು ನಮ್ಮ ನೀತಿ. ಆದರೆ, ನಿನ್ನ ಯಜಮಾನಿಕೆಗೆ ಭಂಗ ಬರುವಂತಹುದಕ್ಕೆ ಎಂದಿಗೂ ತಲೆಬಾಗಬೇಡ.

ಈ ಪ್ರದೇಶ, ಈ ಮನೆ ಸುವಾಸ್ತು. ವಾಸಿಸಲು ಅತ್ಯಂತ ಶ್ರೇಷ್ಠವಾದ ಸ್ಥಳ. ನೀನು ಇಲ್ಲಿಯೇ ಇರು. ನಾನು ನನ್ನ ಊರಿಗೆ ಹೋಗುತ್ತೇನೆ ಮತ್ತು ಮರಳಿ ಬರುತ್ತೇನೆ. ಆದರೆ ಎಂದು ಬರುತ್ತೇನೋ ತಿಳಿಯದು.

ನೀನು ಈ ಮನೆಯನ್ನು ಬಿಟ್ಟು ಎಲ್ಲಿಗೂ ಹೋಗಬೇಡ. ನಾನು ಹಿಂದುರುಗಿ ಬಂದಾಗ ನೀನಿಲ್ಲದೇ ಹೋದರೆ, ನಾನು ನಿನ್ನನ್ನು ಪೂರ್ತಿ ಕಳೆದುಕೊಂಡುಬಿಟ್ಟೆ ಎಂದು ತಿಳಿದುಕೊಳ್ಳುತ್ತೇನೆ." ವಸುಮಾ ಹೇಳಿದಳು.

ವಸುಮಾ ತನಗೆ ತಿಳಿದಿರುವುದನ್ನೆಲ್ಲಾ ಶಂಬರನಿಗೆ ಹೇಳಿಕೊಟ್ಟಳು. ತನ್ನ ಸ್ನೇಹಿತರು ತರಲಿರುವ ಮತ್ತಷ್ಟು ಗೋವುಗಳಿಗೆಂದು ಮನೆಯ ಹಿಂದಿನ ಕೊಟ್ಟಿಗೆಯನ್ನು ಮತ್ತಷ್ಟು ವಿಸ್ತಾರ ಮಾಡಿದಳು. ಕುದುರೆಯ ಲಾಯವನ್ನು ಸಿದ್ಧಪಡಿಸಿದಳು. ಮನೆಯ ಗೋಡೆಯನ್ನು ಮತ್ತಷ್ಟು ಭದ್ರಪಡಿಸಿದಳು.

ವಸುಮಾಳ ಗೆಳತಿಯರ ತಂಡ ಬಂದ ದಿನವನ್ನು ಶಂಬರ ಕಂಡೇ ತೀರಿದ. ಅವರೊಂದಿಗೆ ಅವರ ಹಸುಗಳನ್ನು ಮತ್ತು ಅವರಿಗೆ ಮುಖ್ಯವೆನಿಸುವ ವಸ್ತುಗಳನ್ನೂ ತಂದಿದ್ದರು. ಅವೆಲ್ಲವನ್ನೂ ಇವರ ಮನೆಯಲ್ಲಿ ಇರಿಸಿ, ಸುಮಾರು ಅಲ್ಲಿಯೇ ನಲವತ್ತು ದಿನಗಳ ಕಾಲ ಇದ್ದರು.

ಒಂದು ಮುಂಜಾನೆ ಶಂಬರ ಏಳುವ ಮುನ್ನವೇ ಪ್ರಯಾಣಕ್ಕೆ ಅಗತ್ಯವಿರುವ ವಸ್ತುಗಳೊಂದಿಗೆ ಏರಿಬಂದಿದ್ದ ಕುದುರೆಗಳೊಂದಿಗೆ ಹೊರಟು ಹೋಗಿದ್ದರು. ಅವರೊಂದಿಗೆ ವಸುಮಾಳೂ ಕೂಡ.

ಶಂಬರ ನಿದ್ರೆಯಿಂದ ಕಣ್ಬಿಟ್ಟಾಗ ಅವನ ಪಕ್ಕದಲ್ಲಿ ಜವೆಗೋಧಿ ತುಂಬಿರುವ ಮಡಿಕೆ ಮತ್ತು ಖಡ್ಗವಿತ್ತು. ಹೊರಗೆ ನಾಲ್ಕು ಕುದುರೆಗಳು ಇದ್ದವು.

ಅವಳು ಹೋಗುವುದು ಅವನಿಗೆ ಗೊತ್ತಿದ್ದರೂ, ತನಗೆ ಹೇಳದೇ ಹೊರಟು ಹೋಗುವಳು ಎಂದು ಅವನು ನಿರೀಕ್ಷಿಸಿರಲಿಲ್ಲ. ಮನೆಯಿಂದ ಹೊರಗೆ ಓಡಿ ಬಂದ ಶಂಬರ ಅವಳಿಗಾಗಿ ಹುಡುಕಿದ, ಜೋರಾಗಿ ಅತ್ತ.

"ಅಂಬಾ, ಅಂಬಾ......" ಎಂದು ಚೀರಿದ. "ವಸುಮಾ, ನನ್ನ ಮಾತೆ..... ಅಂಬಾ, ಅಂಬಾ." ಎಂದು ಕೂಗೇ ಕೂಗಿದ.

ಗೋವುಗಳ ಕೂಗಿನಲ್ಲಿ ಇವನದೂ ಒಂದಾಗಿಹೋಗಿತ್ತು.

## ಅಧ್ಯಾಯ : 2 ಗೋಘ್ನ

**ವ**ಸುಮಾ ಹಾಗೆ ಹೋಗಿ ಇಪ್ಪತ್ತೈದು ವಸಂತಗಳೇ ಕಳೆದಿವೆ. ಶಂಬರನೀಗಲೂ ಮನೆಗೆ ಸಮೀಪವಿರುವ ಕೋಡುಗಲ್ಲ ತುದಿಯವರೆಗೂ ಹತ್ತಿ ಕಣ್ಣು ಹಾಯುವಷ್ಟು ದೂರ ಗಮನಿಸಿ ನೋಡುತ್ತಾನೆ. ತನ್ನ ಮನೋಭಾರವಿಳಿಸಿಕೊಳ್ಳಲು ಆ ಕೋಡುಗಲ್ಲಿನ ತುದಿಯಲ್ಲಿ ನಿಂತು, “ಅಂಬಾ, ಅಂಬಾ.” ಎಂದು ಕಾಡಿನಲ್ಲಿ ತನ್ನ ದನಿಯನ್ನು ಮೊಳಗಿಸುತ್ತಾನೆ. ಕಣ್ಣುಗಳು ನೀರಿನಿಂದ ತುಂಬಿ ಮಂಜಾದರೆ, ಅದನ್ನು ತೊಡೆದುಕೊಂಡು, “ಬೇಗ ಬಾ.” ಗದ್ದರಿಸಿ ಅಲ್ಲಿಂದ ಕೆಳಗಿಳಿಯುತ್ತಾನೆ. ಪ್ರತಿದಿನದ ಬೆಳಗಿನಲ್ಲೂ ಹೊರಗೆ ಬಂದ ತಕ್ಷಣ ಕಾಮರೂಪದಿಂದ ಬರುವ ಹೆಂಗಸರ ತಂಡವೇನಾದರೂ ಕಂಡೀತೇ, ತನ್ನ ಅಂಬಾ, ವಸುಮಾ, ಮಾತೆ ಬರುವಳೇ ಎಂದು ಪ್ರಯಾಣಿಕರು ಬರುವ ದಾರಿಯನ್ನು ನೋಡುತ್ತಾನೆ.

ಸುವಾಸ್ತುವಿನಲ್ಲಿ ಶಂಬರ ಈ ಹೊತ್ತಿಗೆ ಬಹಳಷ್ಟು ಕಲಿತಿದ್ದಾನೆ. ಈಗ ಮೊದಲಿನ ಹಾಗೆ ಹೆಚ್ಚು ಪ್ರಯಾಣಿಕರು ಆ ಮಾರ್ಗವಾಗಿ ಬರದಿದ್ದರೂ ಅಪರೂಪಕ್ಕೊಮ್ಮೆ ಬರುತ್ತಾರೆ. ಅವರನ್ನು ತನ್ನ ತಾಯಿ ಹೇಳಿದ ರೀತಿಯಲ್ಲೇ ಸತ್ಕರಿಸುತ್ತಾನೆ. ಉಪ್ಪು, ಬಟ್ಟೆ ಮುಂತಾದ ವಸ್ತುಗಳಿಗೆ ತನ್ನ ಕಾಡಿನ ವಸ್ತುಗಳನ್ನು, ಅಥವಾ ಹಸುವನ್ನು ವಿನಿಮಯ ಮಾಡಿಕೊಳ್ಳುತ್ತಾನೆ. ಕಾಡಿನಲ್ಲಿ ಖಡ್ಗಧಾರಿಯಾಗಿ ಕುದುರೆಯ ಮೇಲೇರಿ ಸಂಚಾರ ಹೋಗುತ್ತಾನೆ. ಜಿಂಕೆ, ಸಾರಂಗ, ಮೊಲ ಇತ್ಯಾದಿಗಳ ಬೇಟೆಯಾಡುತ್ತಾನೆ. ಕಾಡುಮೃಗಗಳ, ಪಕ್ಷಿಗಳ, ಚಿಟ್ಟೆಗಳ ಕಾಮಕ್ರೀಡೆಯನ್ನು ನೋಡುತ್ತಾನೆ. ನಗುತ್ತಾನೆ.

ಜಹ್ನೂವಸ ಅರಣ್ಯ ಪ್ರದೇಶದಿಂದ ದೂರಕ್ಕೆ ಹೋದಾಗ, ಕಾಡಿನ ತನಗೆ ತಿಳಿದಿರುವ ಹೆಬ್ಬಾಲದ ಮರಕ್ಕೆ ತನ್ನ ಕುದುರೆಯನ್ನು ಕಟ್ಟಿ, ಮೇವು ಹಾಕಿ, ಅದರ ಅಂಚಿನಲ್ಲಿರುವ ವಿರಾಟಪುರಕ್ಕೆ ಹೋಗುತ್ತಾನೆ. ಬರುವ ಪ್ರಯಾಣಿಕರಲ್ಲಿ ವ್ಯಾಪಾರದ ಉದ್ದೇಶದಿಂದ ಸಂಚಾರ ಮಾಡುವ ಪಣಿಗಳು ಕೆಲವು ಬಾರಿ ಅವನಿಗೆ ನಾಣ್ಯಗಳನ್ನು ಕೊಟ್ಟಿರುತ್ತಿದ್ದರು. ಅವುಗಳನ್ನು ನಿಷ್ಕವೆನ್ನುತ್ತಿದ್ದರೋ, ಪಣವೆನ್ನುತ್ತಿದ್ದರೋ ಅವನಿಗೆ ಅಷ್ಟಾಗಿ ತಿಳಿಯುವುದಿಲ್ಲ. ಆದರೆ, ಅವುಗಳನ್ನು ಒಂದು ಸಣ್ಣ ಚರ್ಮದ ಚೀಲದಲ್ಲಿ ಹಾಕಿಕೊಂಡು ಹೋಗುವನು. ವಿರಾಟಪುರದ ರಸ್ತೆಯ ಬದಿಯಲ್ಲಿಯೇ ನಿಂತುಕೊಂಡು ವಯ್ಯಾರ ತೋರುವ ಗಣಿಕೆಯರಿಗೆ ತನ್ನಲ್ಲಿರುವ ನಾಣ್ಯಗಳನ್ನು ತೋರುವನು. ಅವರ ಶೃಂಗಾರ ಗೃಹಗಳಿಗೆ ಹೋಗಿ ಆ ಹೆಣ್ಣುಗಳೊಡನೆ ಕಾಮಕ್ರೀಡೆ ನಡೆಸಿ ಬರುವನು. ಅವನು ಹೀಗೆ ಅದೆಷ್ಟೋ ಸುಂದರ ವೇಶ್ಯೆಯರೊಡನೆ ಮಲಗಿ ಬಂದರೂ ಅವನಲ್ಲಿ ಅವನ ತಾಯಿಯಷ್ಟು ಸುಂದರ ಹೆಣ್ಣು ತನಗೆ ಸಿಕ್ಕಿಲ್ಲವೆಂದು ಒಂದು ಸಣ್ಣ ಕೊರಗಿದೆ.

“ನಾನು ಸುಂದರವಾಗಿದ್ದೇನೆಯೇ?” ಎಂದು ಕಾಮಕ್ರೀಡೆಯ ಸಮಯದಲ್ಲಿ ಯಾವ ಗಣಿಕೆಯಾದರೂ ಕೇಳಿದರೆ, “ನೀನು ಸುಂದರವಾಗಿದ್ದೀಯ. ಆದರೆ, ನನ್ನ ಮಾತೆಯಷ್ಟು ಸುಂದರವಾಗಿಲ್ಲ.” ಎನ್ನುವನು ಶಂಬರ.

“ಸಂಭೋಗದ ಸಮಯದಲ್ಲಿ ನಿನ್ನ ಮಾತೆಯನ್ನು ಏಕೆ ನೆನಪಿಸಿಕೊಳ್ಳುತ್ತೀಯೆ? ಅವಳನ್ನು ನೆನೆಸಿಕೊಳ್ಳಲು ಇದು ತಕ್ಕನಾದ ಸ್ಥಳವಲ್ಲ.” ಎಂದಿದ್ದಳು ಒಬ್ಬ ವೇಶ್ಯೆ.

“ಅವಳಿಗೆ ಯಾರೋ ಸಂಭೋಗಿಸಿದ್ದರಿಂದಲೇ ನಾನು ಹುಟ್ಟಿದ್ದು. ನನಗೆ ಈ ಸಂಭೋಗದ ಬಗ್ಗೆ ತಿಳುವಳಿಕೆ ಬಂದಿದ್ದೂ ಆಕೆಯಿಂದಲೇ.” ಎಂದಿದ್ದ ಶಂಬರ, ಜೊತೆಗೆ ಇನ್ನೊಂದು ಮಾತೂ ಸೇರಿಸಿದ್ದ. “ನನ್ನ ಹೃದಯದಲ್ಲಿರುವ ಭಾವನೆ ಮತ್ತು ವಿಚಾರಗಳು ನಾನು ಎಲ್ಲಿಗೇ ಹೋದರೂ ಇದ್ದೇ ಇರುತ್ತವೆ.”

ಶಂಬರನಿಗೆ ಈಗ ಜಹ್ನೂವಸದ ಅರಣ್ಯ ಪ್ರದೇಶದ ಸಂಪೂರ್ಣ ಪರಿಚಯವಿದೆ. ವಸುಮಾಳಿದ್ದಾಗ ತನ್ನ ಸುವಾಸ್ತುವಷ್ಟೇ ತಿಳಿದಿದ್ದದ್ದು. ಈಗ ಇಡೀ ಅರಣ್ಯವೇ ಸುವಾಸ್ತುವಾಗಿದೆ. ಸುವಾಸ್ತುವಿನ ಹೊರಗೆ ಲೋಕರೀತಿಗಳು ಬಹಳಷ್ಟು ಬದಲಾಗಿವೆ. ರೂಢಿಗಳು ತಿದ್ದಲ್ಪಟ್ಟಿವೆ. ಆದರೆ, ಶಂಬರನಿಗೆ ಲೋಕದ ಗೊಡವೆ ಇಲ್ಲದಿರುವ ಕಾರಣದಿಂದ ಯಾವುದೇ ರೂಢಿಗಳ ತಿದ್ದುಪಡಿಗಳನ್ನು ತಿಳಿಯುವ ಅಗತ್ಯವಿಲ್ಲ. ವರ್ಣಭೇದವಾಗಲಿ, ವೈದಿಕರ ಕ್ರಮದಲ್ಲಿ ನಡೆದಿರುವ ತಿದ್ದುಪಡಿಗಳಾಗಲಿ, ಆರ್ಯರ ಅಥವಾ ಆರ್ಯೇತರರ ಯಾವುದೇ ರಾಜಕೀಯಗಳಾಗಲಿ ತಿಳಿಯುವುದಿಲ್ಲ. ಪ್ರಯಾಣಿಕರಿಂದ ತಿಳಿದುಕೊಳ್ಳುವ ಸಂದರ್ಭ ಬಂದಾಗಲೂ ತಿಳಿದುಕೊಳ್ಳುವ ಮನಸ್ಸು ಮಾಡುವುದಿಲ್ಲ.

ಹಾಗೆ ಅವನಿಗೆ ಬೇಡದೇ ಇದ್ದರೂ ಹಲವು ರೀತಿ–ನೀತಿಗಳನ್ನು, ವೈದಿಕ ಕ್ರಮಗಳನ್ನು, ಸುರರು ಮತ್ತು ಅಸುರರ ನಡುವೆ ನಡೆಯುವ ಸಂಘರ್ಷಗಳನ್ನು, ಕುರುವಂಶದ ಕೌರವರು ಮತ್ತು ಪಾಂಡವರಿಗೆ ಕುರುಕ್ಷೇತ್ರದಲ್ಲಿ ಯುದ್ಧವಾಗಿದ್ದನ್ನು, ಆ ಈ ಋಷಿಗಳ ವಿಚಾರಗಳನ್ನು ತಿಳಿಸುವುದು ಯಾಜ್ಞಿಕ.

ಆರ್ಯರ ಹಿರಿಮೆಯನ್ನು ಸದಾ ಸಾರುವ ವೈದಿಕ ಬ್ರಾಹ್ಮಣ ಯಾಜ್ಞಿಕ ಯಾವುದೋ ಒಂದು ಸಂದರ್ಭದಲ್ಲಿ ದಾರಿ ತಪ್ಪಿ ಶಂಬರನ ಮನೆಗೆ ಬಂದಿದ್ದ. ಆಗ ಪರಿಚಯವಾದ ಈ ಬ್ರಾಹ್ಮಣನಿಗೆ ಶಂಬರನ ಸುವಾಸ್ತು ಬಹಳ ಆಕರ್ಷಣೀಯವಾಗಿದ್ದು ಅಲ್ಲಿರುವ ಗೋವುಗಳ ಸಂಪತ್ತಿನಿಂದ.

ಆರ್ಯರಿಂದ, ಅದರಲ್ಲೂ ಬ್ರಾಹ್ಮಣರಿಂದ ದೂರವಿರಲು ಹೇಳಿದ್ದ ವಸುಮಾಳ ಮಾತನ್ನು ಶಂಬರ ಮರೆತಿರಲಿಲ್ಲ. ಆದ್ದರಿಂದಲೇ ಯಾಜ್ಞಿಕನಿಗೆ ತನ್ನ ಹೆಸರನ್ನೂ ಹೇಳಿರಲಿಲ್ಲ ಶಂಬರ.

“ತಮ್ಮ ಹೆಸರೇನು? ತಮ್ಮನ್ನು ನಾನು ಏನೆಂದು ಕರೆಯಲಿ?” ಎಂದು ಯಾಜ್ಞಿಕ ಕೇಳಿದಾಗ, “ತಮಗೆ ಏನೆಂದು ಕರೆಯುವುದಕ್ಕೆ ಇಚ್ಛೆಯಾಗುತ್ತದೆಯೋ ಹಾಗೇ ಕರೆಯಿರಿ.” ಎಂದಿದ್ದ ಶಂಬರ.

“ಗೋಮತ್!” ಎಂದು ಕರೆದ ಯಾಜ್ಞಿಕ. “ಗೋವುಗಳಿಂದ ಸಂಪದ್ಭರಿತವಾಗಿರುವ ನೀವು ಗೋಮತ್. ನಾನು ಹಾಗೆಯೇ ಎಂದು ಕರೆಯುತ್ತೇನೆ.”

ಯಾಜ್ಞಿಕನ ಮಾತಿನಲ್ಲಿ ಬಹಳ ನಯ–ವಿನಯವಿರುತ್ತಿತ್ತು. ನಗುನಗುತ್ತಾ ಕೈ ಜೋಡಿಸಿಕೊಂಡು ಗೋಮತ್‌ನ ಬಳಿಗೆ ಬರುತ್ತಿದ್ದ.

ಹಾಗೆ ಅವನು ಬಂದ ದಿನ ಶಂಬರನೂ, “ಆಗಮಿಸಿ.” ಎಂದು ಕೈ ಮುಗಿದಿದ್ದ. ಯಾಜ್ಞಿಕ ಆಸನವನ್ನು ಸ್ವೀಕರಿಸಿದ ಮೇಲೆ, “ಆಹಾರಕ್ಕಾಗಿ ಏನು ಮಾಡಬಹುದು? ತಾವು ಏನು ಸೇವಿಸುವಿರಿ?” ಎಂದು ಕೇಳಿದ.

“ಗೋಮತ್‌ನ ಬಳಿ ಗೋವಲ್ಲದೇ ಮತ್ತೆಂಥಾ ಆಹಾರ ಬಯಸುವುದು?”

“ಗೋವೇ?”

"ಅಥೋ ಅನ್ನಂ ವೈ ಗೋಃ..... ಗೋವು ಆಹಾರವಲ್ಲದೇ ಮತ್ತಿನ್ನೇನು? ದಯಮಾಡಿ ಈ ದಿನ ಈ ಬ್ರಾಹ್ಮಣನ ಹಸಿವು ಗೋ ಮಾಂಸದಿಂದ ತೃಪ್ತವಾಗಲಿ." ಎಂದ ಯಾಜ್ಞಿಕ.

"ಖಂಡಿತವಾಗಿ ತಮಗೆ ಈ ದಿನ ಗೋ ಮಾಂಸ ಬಡಿಸುವೆ. ಆದರೆ, ನೀವು ಬ್ರಾಹ್ಮಣರು ಎಂದಲ್ಲ. ನೀವೊಬ್ಬ ಅತಿಥಿ ಎಂದು ಮಾತ್ರ." ಎಂದ ಶಂಬರ.

"ಖಂಡಿತ!" ಜೋರಾಗಿ ನಕ್ಕ ಯಾಜ್ಞಿಕ ಹೇಳಿದ. "ಅತಿಥಿ ಎಂದರೆ ಯಾರು ಹೇಳು ಹೇ ಗೋಮತ್. ಗೋಘ್ನ! ಅತಿಥಿ ಎಂದರೆ ಗೋವುಗಳ ಹಂತಕ. ಗೋ ಭಕ್ಷಕ." ಎಂದು ಹಾಸ್ಯ ಚಟಾಕಿ ಹಾರಿಸಿದವನಂತೆ ತಾನೇ ಜೋರಾಗಿ ನಕ್ಕ.

ಆದರೆ ಶಂಬರ ನಗಲಿಲ್ಲ. ಆರ್ಯರ ನಗು ತನ್ನ ನಗುವಲ್ಲ. ಅದರಲ್ಲೂ ವೈದಿಕ ಬ್ರಾಹ್ಮಣನ ಹಾಸ್ಯ ತನ್ನ ಅಪಹಾಸ್ಯ ಎಂದೇ ತಿಳಿದಿದ್ದ ಶಂಬರ.

ಇತ್ತೀಚೆಗೆ ಶಂಬರ ವಿರಾಟನಗರಕ್ಕೆ ಹೋದಾಗ ಯಜ್ಞಗಳ ನೆಪದಲ್ಲಿ, ಆಹಾರದ ನೆಪದಲ್ಲಿ, ಕೃಷಿಗೆ ಅತ್ಯಗತ್ಯವಾಗಿರುವ ಹಸುವನ್ನು ತಿನ್ನಕೂಡದೆಂಬ ನಿರ್ಬಂಧವನ್ನು ಮಾಡಿಕೊಂಡಿದ್ದು, ಗೋವು ಪವಿತ್ರ, ಅದನ್ನು ತಿನ್ನುವುದು ಪಾಪ ಎಂಬ ಸಂದೇಶವನ್ನು ಹರಡುತ್ತಿರುವ ವೈದಿಕ ಬ್ರಾಹ್ಮಣರದೇ ತಂಡವೊಂದು ಸಂಖ್ಯೆಯಲ್ಲಿ ಕುಗ್ಗುತ್ತಿರುವ ಹಸುಗಳ ಸಂಖ್ಯೆಯನ್ನು ರಕ್ಷಿಸಲು ಹೆಣಗಾಡುತ್ತಿರುವ ವಿಷಯವನ್ನು ಕೇಳಿದ್ದ.

ಆದರೆ, ಈ ಆಸೆಬುರುಕ ಬ್ರಾಹ್ಮಣ ಆ ಆಂದೋಲನದ ಸಂದೇಶಕ್ಕೆ ಮಾನ್ಯತೆ ಕೊಡದೇ ಹಳೆಯ ಆರ್ಯ ಬುಡಕಟ್ಟಿನವರ ಅಭ್ಯಾಸವನ್ನೇ ಮುಂದುವರೆಸುವುದನ್ನು ಟೀಕಿಸಲು ಶಂಬರ ಹೇಳಿದ.

"ಗೋವು ಪವಿತ್ರವಲ್ಲವೇ? ಗೋ ಮಾಂಸವನ್ನು ತಿನ್ನುವುದು ಸರಿಯೇ?"

"ಹೇ ಗೋಮತ್, ಪವಿತ್ರವಾದುದನ್ನು ಸೇವಿಸಬೇಕಲ್ಲದೇ ಅಪವಿತ್ರವಾದುದನ್ನು ಸೇವಿಸಿ ನಮ್ಮನ್ನು ಕೊಳಕಾಗಿಸಿಕೊಳ್ಳುವುದೇ? ಪವಿತ್ರವಾದುದನ್ನು ಸೇವಿಸಿದರೆ ಮಾತ್ರವೇ ನಮ್ಮ ಪಾವಿತ್ರ್ಯ ಉಳಿಯುವುದು." ಎಂದ ಯಾಜ್ಞಿಕ.

ಶಂಬರ ಅವನ ದುರಾಸೆಯ ಎಳೆಗಳನ್ನು ಗಮನಿಸುತ್ತಾ, "ನಾನು ನಿಮಗೆ ಹಸುವಿನ ಮಾಂಸದ ಅಡುಗೆ ಮಾಡಿಟ್ಟು, ನಿಮಗಿಲ್ಲಿ ತಂಗಲು ರಾತ್ರಿ ಅವಕಾಶ ಮಾಡಿಕೊಟ್ಟರೆ, ನೀವು ನನಗೆ ಏನನ್ನು ಕೊಡುವಿರಿ?" ಎಂದು ಕೇಳಿದ.

ಯಾಜ್ಞಿಕ ಮೆಟ್ಟಿ ಬಿದ್ದಂತೆ ಶಂಬರನ ನೋಡಿದ.

"ಹೇ ಗೋಮತ್, ನಾನು ನಿಮ್ಮ ಅತಿಥಿ. ನೀವು ಮಾಡುತ್ತಿರುವುದು ಅತಿಥಿ ಸತ್ಕಾರ. ಅತಿಥಿ ಎಂದರೆ ಸಾಕ್ಷಾತ್ ಭಗವಂತನ ಸ್ವರೂಪ. ಅತಿಥಿಗಳನ್ನು ಸತ್ಕರಿಸುವುದು ಪುಣ್ಯದ ಕೆಲಸ."

"ಭಗವಂತ! ಹಾಗೆಂದರೇನು? ಪುಣ್ಯ ಎಂದರೇನು?" ಶಂಬರ ಕೇಳಿದ.

"ಭಗವಂತನೆಂದರೆ ದೇವರು. ಪುಣ್ಯವೆಂದರೆ ಸತ್ಕಾರ್ಯದಿಂದ ಒದಗುವ ಸತ್ಫಲ."

"ನಾನು ದೇವರನ್ನು ನಂಬುವುದಿಲ್ಲ. ನನಗೆ ಪುಣ್ಯ ಬೇಡ."

"ನೀವು ಚಾರ್ವಾಕರೋ?"

"ಹಾಗೆಂದರೆ ಯಾರು?"

"ಹೇ ಗೋಮತ್, ನಾನು ಒಬ್ಬ ಬ್ರಾಹ್ಮಣ. ನಾನು ನಿನಗೆ ಏನನ್ನು ಕೊಡಬಲ್ಲೆ. ನನ್ನ ನಿನಗೆ ಮಿಕ್ಕೆಲ್ಲವನ್ನೂ ದೊರಕಿಸಿಕೊಡುವಂತಹ ಆಶೀರ್ವಾದಗಳನ್ನು ಕೊಡಬಲ್ಲೆ."

"ನನಗೆ ನಿಮ್ಮ ಆಶೀರ್ವಾದಗಳು ಬೇಡ." ಎಚಿದ ಶಂಬರ ಆತನನ್ನು ಅಲ್ಲಿಯೇ ಇರಿಸಿಕೊಂಡು ಅಡುಗೆ ಮಾಡಿಡಲು ಮಾನಸಿಕವಾಗಿ ಸಿದ್ಧವಾಗಿದ್ದ. ಅವನು ಬ್ರಾಹ್ಮಣನೇ ಆಗಲಿ, ಅಥವಾ ಇನ್ನಾವನೇ ಆಗಲಿ ಆ ಕಾಡಿನಲ್ಲಿ ಆ ರಾತ್ರಿ ಕಾಡುಮೃಗಗಳ ಆಹಾರವಾಗಲು ಬಿಡುವವನಲ್ಲ. ಆದರೆ, ಈತನು ಬ್ರಾಹ್ಮಣನೆಂದಾಗಿರುವುದರಿಂದ ಕೊಂಚ ಛೇಡಿಸಲು ಮನಸ್ಸು ಮಾಡಿದ್ದ.

ಯಾಜ್ಞಿಕ ತನ್ನ ಬ್ರಾಹ್ಮಣತ್ವದ ಉಗ್ರ ಸ್ವರೂಪವನ್ನು ತೋರಿಸುವ ತಂತ್ರ ಮಾಡಿದ. "ಹೇ ಗೋಮತ್! ನಿನಿಗಿನ್ನೂ ಬ್ರಾಹ್ಮಣರ ಆಗ್ರಹದ ಪರಿಚಯ ಆಗಿಲ್ಲವೆಂದು ಕಾಣುತ್ತದೆ. ಬ್ರಾಹ್ಮಣನ ವರವನ್ನು ತಿರಸ್ಕರಿದ್ದೇ ಆದರೆ ಶಾಪವನ್ನು ಆಹ್ವಾನಿಸಿದಂತೆ." ಎಂದು ಎದ್ದು ನಿಂತು ಬಿರುಸಿಲ್ಲದ ಕಣ್ಣುಗಳನ್ನು ಅರಳಿಸಿ, ಕಟುತ್ವವಿಲ್ಲದ ಹಲ್ಲುಗಳನ್ನು ಕಡೆದ ಯಾಜ್ಞಿಕನ ನಾಟಕ ನೋಡಿ ಶಂಬರನಿಗೆ ನಗುಬಂತು.

"ನಿಮಗೆ ಬೇಕಾದ ಶಾಪವನ್ನು ನೀವು ಕೊಟ್ಟುಕೊಳ್ಳಿ. ಈ ರಾತ್ರಿ ಇಲ್ಲಿನ ಕಾಡುಪ್ರಾಣಿಗಳು ತಮಗೆ ಬೇಕಾದ ಊಟ ಮಾಡಿಕೊಳ್ಳಲಿ." ಎಂದ ಶಂಬರ ಮನೆಯೊಳಗೆ ಹೋಗಿ ಬಾಗಿಲು ಹಾಕಿಕೊಂಡ.

ಕೆಲವು ಹೊತ್ತು ಯಾಜ್ಞಿಕ ಮಾತನಾಡಲಿಲ್ಲ. ಎಲ್ಲಿಯೋ ದೂರದಿಂದ ಯಾವುದೋ ಪ್ರಾಣಿ ಗರ್ಜಿಸಿದಂತೆ ಕೇಳಿಸಿತು.

ಬೆದರಿದ ಯಾಜ್ಞಿಕ, "ಹೇ ಗೋಮತ್, ದಯಮಾಡಿ ನನ್ನ ಮನ್ನಿಸು. ಶಾಪ ಕೊಡುವಷ್ಟು ಆಗ್ರಹ ಶಕ್ತಿ ನನ್ನಲ್ಲಿಲ್ಲ. ಆದರೆ ಒಳ್ಳೆಯದಾಗಲಿ ಎಂದು ಹರಸುವಂತಹ ಗುಣ ನನ್ನಲ್ಲಿ ಖಂಡಿತ ಇದೆ. ನನ್ನಲ್ಲಿರುವ ಜ್ಞಾನವನ್ನು ನಿನ್ನೊಡನೆ ಹಂಚಿಕೊಳ್ಳುವೆ. ಹಾಗೆ ನಾನು ಹಂಚಿಕೊಳ್ಳುವ ಜ್ಞಾನ ನಿನಗೆ ಯಾವುದೇ ಸಮಯದಲ್ಲಿ ಉಪಯೋಗಕ್ಕೆ ಬಂದೀತು. ಹಾಗೊಂದು ವೇಳೆ ನಿನಗೆ ನನ್ನ ಜ್ಞಾನ ಅಗತ್ಯವಿಲ್ಲ ಎನ್ನುವುದಾದರೂ, ಈ ನಿರ್ಗತಿಕ, ಅಸಹಾಯಕ ಮನುಷ್ಯನಿಗೆ ಸಹಾಯ ಮಾಡುವುದಕ್ಕೆ ಎಂದಾದರೂ ನನಗೆ ಆಶ್ರಯ ಕೊಡು. ಹಸಿದಿದ್ದೇನೆ, ಆಹಾರ ನೀಡು." ಎಂದ ಯಾಜ್ಞಿಕ ತೆರೆದಿದ್ದ ಕಿಟಕಿಯ ಬಳಿ ಕೈ ಮುಗಿದು ಕೇಳಿಕೊಂಡ.

ಬಾಗಿಲು ತೆರೆಯಿತು. ಯಾಜ್ಞಿಕ ಒಳಗೆ ಬಂದ.

"ತಾವು ಯಾವ ಜ್ಞಾನವನ್ನು ನನ್ನೊಡನೆ ಹಂಚಿಕೊಳ್ಳುವಿರಿ?" ಶಂಬರ ಕೇಳಿದ.

"ಸಮಯೋಚಿತ ಜ್ಞಾನ!" ಯಾಜ್ಞಿಕ ಹೇಳಿದ. "ಹಾ, ನೋಡಿ, ಈಗ ನಿಮ್ಮ ತಲೆಯಲ್ಲಿ ಕೂದಲು ಹೆಚ್ಚು ಉದುರುತ್ತಿವೆ. ಮುಂಭಾಗದಲ್ಲಿ ಎರಡೂ ಕಡೆ ಹೆಚ್ಚು ಕೂದಲು ಉದುರಿ ಬೋಳಾಗುತ್ತಿದೆ. ಇದಕ್ಕೆ ಕಾರಣ, ನಿಮ್ಮ ಮನೆಯ ಬಲಭಾಗದಲ್ಲಿರುವ ಶಮೀ ವೃಕ್ಷ. ಅದರ ಗಾಢವಾಸನೆಗೆ ನಿಮ್ಮ ಕೂದಲು ಉದುರುತ್ತಿರುವುದು."

ಶಂಬರನಿಗೆ ಇದು ತೀರಾ ತಿಳಿಯದ ವಿಚಾರ. ತನಗೆ ಕೂದಲು ಉದುರುತ್ತಿರುವುದು ನಿಜ. ಮನೆಯ ಪಕ್ಕದಲ್ಲಿ ಶಮೀ ವೃಕ್ಷವಿರುವುದು ನಿಜ. ಆದರೆ, ಈತ ಕಲ್ಪಿಸಿದ ಸಂಬಂಧ ತಿಳಿಯದ್ದು. ಆದ್ದರಿಂದ ಸುಮ್ಮನಾದ. ಆದರೆ ಸಮ್ಮತಿಸಿದಂತೆ ಯಾವ ಸೂಚನೆಯನ್ನೂ ತೋರಲಿಲ್ಲ.

"ವಿಶ್ರಮಿಸಿ." ಎಂದ ಶಂಬರ ದೀಪದ ಬೆಳಕನ್ನು ಹೆಚ್ಚಿಸಿ, ಬಾಗಿಲನ್ನು ಹಾಕಿ, "ಇಲ್ಲಿಯೇ ಇರಿ. ನಾನು ಕೊಟ್ಟಿಗೆಗೆ ಹೋಗಿ ಮಾಂಸ ತರುವೆ." ಎಂದು ಹಿಂಬಾಗಿಲನ್ನು ತೆರೆದುಕೊಂಡು ಶಂಬರ ಮನೆಯ ಹಿತ್ತಲಿಗೆ ಹೋದ.

ಯಾಜ್ಞಿಕ ತಾನು ಕುಳಿತಲ್ಲಿಂದಲೇ ಎಲ್ಲಾ ವಸ್ತುಗಳನ್ನು ಅವಲೋಕಿಸುತ್ತಿದ್ದ. ಮನೆಯ ಹಿಂದಿನಿಂದ ತನಗೆ ಆಹಾರವಾಗಲಿರುವ ಕರುವಿನ ಚೀರುವಿಕೆ ಕೇಳುತಿತ್ತು.

ಸ್ವಲ್ಪ ಹೊತ್ತಿಗೆ ಮಾಂಸವನ್ನು ಹೊತ್ತು ತಂದ ಶಂಬರ ಯಾಜ್ಞಿಕನ ಎದುರಲ್ಲಿಯೇ ಅಡುಗೆಗೆ ತೊಡಗಿದ.

"ತಮ್ಮಲ್ಲಿ ಸೋಮರಸವಿದೆಯೇ?" ಎಂದು ಕೇಳಿದ ಯಾಜ್ಞಿಕ.

ಇದೆಯೆಂಬಂತೆ ಶಂಬರ ತಲೆಯಾಡಿಸಿದ.

"ಅಂತಾದರೆ, ಇದು ಸೋಮರಸ ಸುಧಾ–ಸಂಜೆ. ಆನಂದ, ಅಪರಿಮಿತ ಆನಂದ." ಎಂದು ಉದ್ಗರಿಸಿದ ಯಾಜ್ಞಿಕ.

"ಇದು ಯಾವ ಕರು?"

"ಗಂಡು ಕರು."

"ಪರವಾಗಿಲ್ಲ. ಗಂಡು ಕರುವಾದರೆ ಪರವಾಗಿಲ್ಲ. ಬಲಿತ ಎತ್ತಿನ ಮಾಂಸ ಆರೋಗ್ಯಕ್ಕೆ ಒಳ್ಳೆಯದಲ್ಲ. ವಿಷಮಶೀತ ಜ್ವರಕ್ಕೆ ದಾಳಿಂಬೆ ಮತ್ತು ಗೋಮಾಂಸದ ಗಂಜಿ ಔಷಧವಾಗಿ ಕೆಲಸ ಮಾಡುತ್ತದೆ. ನೆಗಡಿ, ಅಜೀರ್ಣ, ಕೆಮ್ಮು, ಶೀತ ಇತ್ಯಾದಿಗಳಿಗೆ ಗೋವಿನ ಮಾಂಸ ತುಂಬಾ ಒಳ್ಳೆಯ ಕೆಲಸ ಮಾಡುತ್ತದೆ."

ಶಂಬರ ಸುಮ್ಮನೆ ತಲೆದೂಗಿದ. "ನೋಡಿ, ಇದನ್ನೇ ನಾನು ಸಮಯೋಚಿತ ಜ್ಞಾನವನ್ನು ಹಂಚಿಕೊಳ್ಳುತ್ತೇನೆ ಎಂದು ಹೇಳಿದ್ದು. ಇದು ನಿಮಗೆ ವಿಷಮಶೀತ ಜ್ವರ ಬಂದಾಗ ಸಹಾಯವಾಗುತ್ತದೆ." ಎಂದು ನಕ್ಕ ಯಾಜ್ಞಿಕ.

ಅದಕ್ಕೂ ಶಂಬರ ಸುಮ್ಮನೆ ತಲೆದೂಗಿದ.

"ನಾನು ಇಷ್ಟರಲ್ಲಿಯೇ ಧೀರ್ಘಾಯುಷ್ಯದ, ಸಾಹಸಿಯಾದ ಒಂದು ಗಂಡು ಮಗುವಿನ ತಂದೆಯಾಗುತ್ತಿದ್ದೇನೆ." ಎಂದ ಯಾಜ್ಞಿಕ. ಶಂಬರ ತಲೆಯೆತ್ತಿ ಅವನ ನೋಡಿದ.

"ಹುಟ್ಟುವ ಮಗು ಗಂಡೆಂದೂ, ಸಾಹಸಿಯೆಂದೂ ಹೇಗೆ ನನಗೆ ತಿಳಿಯಿತು ಎಂದೋ ಸಂಶಯ?" ಯಾಜ್ಞಿಕ ನಕ್ಕು ಹೇಳಿದ "ನನ್ನ ಮಗುವನ್ನು ಗರ್ಭದಲ್ಲಿ ಹೊತ್ತಿರುವ ಗರ್ಭಿಣಿಯು ಎತ್ತುಗಳ ಮಾಂಸಕ್ಕಾಗಿ ಹಾತೊರೆಯುತ್ತಿದ್ದಾಳೆ. ಇದು ಅಂತಹ ಸಾಹಸ ಪ್ರವೃತ್ತಿಯ ಮಗುವು ಹುಟ್ಟುವುದರ ಸೂಚನೆ."

ಯಾಜ್ಞಿಕನ ವಟಗುಟ್ಟುವಿಕೆ ನಿರಂತರವಾಗಿತ್ತು. ಶಂಬರ ಕೆಲವು ವಿಷಯಗಳನ್ನು ಗಮನಿಸಿದ, ಅವು ಅವನಿಗೆ ಉಪಯುಕ್ತವಾಗುವಂತಹವು. ಕೆಲವು ವಿಷಯಗಳನ್ನು ಬರಿದೇ ಕೇಳಿಸಿಕೊಳ್ಳಲೂ ಅವನು ಮನಸ್ಸು ಮಾಡಲಿಲ್ಲ. ಅವನ ವಟಗುಟ್ಟುವಿಕೆ ಅವನಿಗೆ ಯಾವ ತೊಂದರೆಯನ್ನೂ ಮಾಡದಿರುವ ಕಾರಣದಿಂದ ಸುಮ್ಮನೆಯೇ ತಲೆದೂಗುತ್ತಾ ಇದ್ದ. ಎಲ್ಲಾ ಬಗೆಯ ಸದ್ದುಗಳಿಗೆ ಸುಮ್ಮನೆಯೇ ಕಿವಿಗೊಡುವುದು ಅವನಿಗೆ ರೂಢಿಯಾಗಿದೆ.

ರಾತ್ರಿ ಸೋಮರಸವನ್ನು ಸೇವಿಸಿತ್ತಾ ಇಬ್ಬರೂ ಆಹಾರ ಸೇವಿಸಿದರು. ಯಾಜ್ಞಿಕ ತುಂಬಾ ಉತ್ಸಾಹದಲ್ಲಿ ಆಶುಕವಿತ್ವಗಳನ್ನು ರಚಿಸಿ ಹಾಡುತ್ತಿದ್ದ. ಅವನ ಹಾಡಿಗೆ ಶಂಬರ ಕೆಲವೊಮ್ಮೆ, "ಓಹೋ, ಆಹಾ..." ಎಂದು ಉದ್ಗರಿಸಿದಾಗ ಯಾಜ್ಞಿಕ ಇನ್ನೂ ಉತ್ಸಾಹದಿಂದ ಕವಿತ್ವಗಳನ್ನು ಹೇಳುತ್ತಿದ್ದ.

ಯಾವುದೋ ಒಂದು ಸಮಯದಲ್ಲಿ ಶಂಬರ ನಿದ್ರೆ ಹೋದ. ಹಾಗೆಯೇ ಯಾಜ್ಞಿಕನೂ ಕೂಡ.

ಶಂಬರ ಬೆಳಗ್ಗೆ ಎದ್ದಾಗ ಯಾಜ್ಞಿಕನು ಕಾಣಲಿಲ್ಲ. ಹೊರಬಾಗಿಲು ತೆರೆದಿತ್ತು. ಹೊರಗೆ ಬಂದಾಗ ದೂರದಲ್ಲಿ ಸ್ನಾನ ಮುಗಿಸಿಕೊಂಡು ತನ್ನ ಬೆಳಗಿನ ವೈದಿಕ ಕರ್ಮವನ್ನು ಮುಗಿಸಿಕೊಂಡು ಬರುತ್ತಿರುವ ಯಾಜ್ಞಿಕ ಕಂಡ.

"ಶುಭವಾಗಲಿ ಹೇ ಗೋಮತ್." ಎಂದು ಹಾರೈಸಿದ ಯಾಜ್ಞಿಕ.

ಶಂಬರ ಬರಿದೇ ಮನ್ನಿಸಿದಂತೆ ತಲೆದೂಗಿದ.

ಅಂದು ಬೆಳಗ್ಗೆ ಶಂಬರ ಅವನಿಗೆ ಜವೆಗೋಧಿಯ ಗಂಜಿ ಮಾಡಿಕೊಟ್ಟ. ಯಾಜ್ಞಿಕ ಹಾಲು ಕರೆಯುವ ಮಡಿಕೆಯನ್ನು ತೋರಿಸಿ, "ಈ ಬೆಳಗ್ಗೆ ತಾವು ಈ ಸ್ಥಾಲಿಯನ್ನು ಬಳಸದಿದ್ದರೆ, ಹಾಲು ಕೆಚ್ಚಲಿನಲ್ಲಿಯೇ ವ್ಯರ್ಥವಾಗಿಬಿಡುತ್ತದೆ." ಎಂದ. ಶಂಬರ ಹಾಲು ಕರೆಯುವ ಮಡಿಕೆಯನ್ನು ತೆಗೆದುಕೊಂಡು ಕೊಟ್ಟಿಗೆಗೆ ಹೋಗಿ ಯಾಜ್ಞಿಕನಿಗೆ ಕುಡಿಯಲು ಹಾಲನ್ನೂ ಕರೆದುಕೊಟ್ಟ.

ಸೂರ್ಯನ ಬಿಸಿಲು ಕೊಂಚ ಪ್ರಖರವಾಗಿ ಕಾಣುತ್ತಿದ್ದಂತೆ ಹೊರಡಲು ಸಿದ್ಧನಾದ ಯಾಜ್ಞಿಕ, "ನನ್ನ ಸಂಗಾತಿ ನಾಲ್ಕು ತಿಂಗಳ ಗರ್ಭಿಣಿ. ಅವಳಿಗೆ ಈಗ ಸೀಮಂತೋನ್ನಯನದ ಕಾರ್ಯ ನೇವರಿಸಬೇಕು. ದೀರ್ಘಾಯುಷ್ಯದ ಆರೋಗ್ಯವಂತ ಮಗುವನ್ನು ಹೆರಲು ಈ ಸೀಮಂತೋನ್ನಯನದಲ್ಲಿ ಆಕೆಗೆ ಕರುವಿನ ಮಾಂಸವನ್ನು ಅನ್ನದೊಂದಿಗೆ ತುಪ್ಪ ಬೆರೆಸಿ ತಿನ್ನಿಸಬೇಕು. ಇದು ನನ್ನ ಒಂದು ವಿನಮ್ರ ಕೋರಿಕೆ. ತಾವು ಗರ್ಭಿಣಿ ಹೆಂಗಸಿಗೆ ಒಳ್ಳೆಯದಾಗಲಿ ಎಂದು ಹಾರೈಸಿ, ಒಂದು ಕರುವನ್ನು ಕೊಟ್ಟರೆ ನಾನು ಕೃತಾರ್ಥನಾಗುತ್ತೇನೆ."

ಶಂಬರ ಅವನ ಮುಖವನ್ನು ದಿಟ್ಟಿಸಿ ನೋಡಿದ.

"ಈಗ ಆಕೆ ಬರಿದೇ ಗೋಮಾಂಸವನ್ನಷ್ಟೇ ಸೇವಿಸಬೇಕು. ಪುತ್ರನ ಜನನವಾದ ಆರು ಮಾಸಗಳ ಬಳಿಕ ಭರಧ್ವಾಜಿ, ತಿತ್ತಿರ, ಕ್ರಿಕಾಸ ಇತರ ಪಕ್ಷಿಗಳ ಮತ್ತು ಮೀನಿನ ಮಾಂಸ ಬಳಸಬಹುದು. ಆದರೆ, ಸೀಮಂತೋನ್ನಯನದಲ್ಲಿ...." ಆತ ದಯೆ ಹುಟ್ಟಿಸುವಂತೆ ನಸುನಕ್ಕು ತಲೆದೂಗಿದ. ನುಣ್ಣನೆ ಬೋಡಾಗಿರುವ ತಲೆ, ಹಿಂಬದಿಯಲ್ಲಿ ಗೋಪಾದದಷ್ಟು ಜುಟ್ಟು, ಅದರ ಸಮೇತ ಕುತ್ತಿಗೆಯ ಮೇಲೆ

ತೂಗುವ ಮುಖವು ನಗೆ ತರಿಸಿದರೂ, ಶಂಬರ ಮುಂದೇನೂ ಮಾತಾಡದೇ ಕೊಟ್ಟಿಗೆಗೆ ಹೋಗಿ ಬೆಳೆದು ನಿಂತ ಒಂದು ಹೆಣ್ಗರುವನ್ನು ಬಿಡಿಸಿಕೊಂಡು ತಂದು ಯಾಜ್ಞಿಕನಿಗೆ ನೀಡಿದ.

ಸಂತೃಪ್ತಗೊಂಡ ಯಾಜ್ಞಿಕ ತನ್ನ ಬಲಗೈಯನ್ನೆತ್ತಿ ಆಶೀರ್ವಚನವನ್ನು ಪಠಿಸಿ ಆಕಳಗರುವಿನೊಂದಿಗೆ ಹೊರಟುಹೋದ.

ಅದಾದ ಮೇಲೆ ಆಗಾಗ ಯಾಜ್ಞಿಕ ಬರುತ್ತಿದ್ದ.

"ಹೇ ಗೋಮತ್." ಎಂದು ಬಾಗಿಲಲ್ಲಿ ದನಿ ಕೇಳಿದೊಡನೆ, "ಬಂದ ಯಾಚಕ." ಎಂದುಕೊಂಡೇ ಮೇಲೇಳುತ್ತಿದ್ದ ಶಂಬರ. ಒಂದೊಂದು ಸಲ ಒಂದೊಂದು ವಿಷಯವನ್ನು ಅವನೊಡನೆ ಹಂಚಿಕೊಂಡು ಹಸುವಿನ ಮಾಂಸವನ್ನು ಗಡದ್ದಾಗಿ ತಿಂದು, ಮನೆಗೂ ಒಯ್ಯುವನು. ಕಾಡಿನ ಜೇನು, ಮೇಣ, ಮೂಲಿಕೆಗಳು, ಚರ್ಮದ ಹಗ್ಗಗಳು, ಜಿಂಕೆಯ ಚರ್ಮ; ಹೀಗೆ ಏನಾದರೊಂದು ತೆಗೆದುಕೊಂಡು ಹೋಗದೇ ಇರಲು ಅವನಿಗೆ ಸಾಧ್ಯವಾಗುತ್ತಿರಲಿಲ್ಲ.

ಹೀಗೆ ಅವನು ಬಂದಾಗೊಮ್ಮೆ, "ಹೇ ಗೋಮತ್, ನೀವು ಆರ್ಯ. ನೀವೂ ವೈದಿಕ ಬ್ರಾಹ್ಮಣ." ಎಂದ ಯಾಜ್ಞಿಕ ಶಂಬರನ ಮನೆಯ ಮಗ್ಗುಲಲ್ಲಿ ಮುರಿದು ಬಿದ್ದಿದ್ದ ಸ್ತಂಭವನ್ನು ತೋರಿಸಿ ಹೇಳಿದ. "ಇದು ಯೂಪ ಸ್ತಂಭ. ಯಜ್ಞದಲ್ಲಿ ಬಲಿಕೊಡಲಿರುವ ಯೂಪ ಸ್ತಂಭ. ನೋಡಿ, ಇದಕ್ಕೆ ಎಂಟು ಮೂಲೆಗಳಿವೆ." ಎಂದು ಅಷ್ಟಕೋನವಾಗಿರುವ ಸ್ತಂಭವನ್ನು ಪರೀಕ್ಷಿಸುತ್ತಾ ಯಾಜ್ಞಿಕ ಹೇಳಿದ. "ಇದು ಬಿಲ್ವವೃಕ್ಷದ ಮರದಿಂದ ಮಾಡಿದೆ. ಬಿಲ್ವವೃಕ್ಷದ ವಿಶೇಷತೆಯೇನು ಗೊತ್ತೇ? ಪ್ರತಿ ವರ್ಷವೂ ಬುಡದಿಂದ ಹಿಡಿದು ತುದಿಯವರೆಗೂ ಬೆಳೆಯುತ್ತದೆ. ಆರೋಗ್ಯದಿಂದ, ದಷ್ಟಪುಷ್ಟವಾಗಿ ಬೆಳೆಯಲು ಆಹಾರವನ್ನು ಅಪೇಕ್ಷಿಸಲು ಯಜ್ಞದಲ್ಲಿ ಈ ಸ್ತಂಭವನ್ನು ಬಳಸುತ್ತಾರೆ. ಸ್ವರ್ಗಾಪೇಕ್ಷೆಯಿದ್ದರೆ ಯೂಪಸ್ತಂಭವನ್ನು ಖದಿರ ವೃಕ್ಷದಿಂದ ಮಾಡಬೇಕು. ಸೌಂದರ್ಯಾಪೇಕ್ಷಿಯಾಗಿದ್ದರೆ ಫಲಾಶ ವೃಕ್ಷವನ್ನು ಬಳಸಬೇಕು."

ಶಂಬರ ಆ ಮುರಿದು ಬಿದ್ದಿರುವ ಸ್ತಂಭವನ್ನು ನೋಡಿದ್ದ. ತಾನು ಚಿಕ್ಕ ಹುಡುಗನಿದ್ದಾಗಿನಿಂದಲೂ ಅದು ಅಲ್ಲಿರುವುದನ್ನು ಗಮನಿಸಿದ್ದ. ಆದರೆ, ಅದು ಯೂಪಸ್ತಂಭವೆಂದು ತಿಳಿದಿರಲಿಲ್ಲ. ಅವನ ತಾಯಿಯೂ ಅದರ ಬಗ್ಗೆ ಏನನ್ನೂ ಹೇಳಿರಲಿಲ್ಲ. ವೈದಿಕ ಯಜ್ಞದಲ್ಲಿ ಬಳಸುವ ಈ ಬಲಿಗಂಬ ಇಲ್ಲೇಕಿದೆಯೆಂದು ಅವನಿಗೆ ಅರ್ಥವಾಗಲಿಲ್ಲ. ಆದರೆ, ಯಾಜ್ಞಿಕನೆದುರು ಏನನ್ನೂ ಹೇಳಲಿಲ್ಲ. ತಾನು ಸಂಶಯ ವ್ಯಕ್ತಪಡಿಸಿದರೆ, ಅಜ್ಞಾನ ಪ್ರಕಟಿಸಿದರೆ ಅವನು ನೀಡುವಂತಹ ಅತಿ ದೀರ್ಘ ವಿವರಣೆಯನ್ನು ಕೇಳಲು ಅವನಿಗೆ ವ್ಯವಧಾನವಿರಲಿಲ್ಲ. ಒಂದು ವೇಳೆ ಅವನು ಹೇಳುವುದರಲ್ಲಿ ಸತ್ಯಾಂಶವು ಇದ್ದರೂ ಇದ್ದಿರಬಹುದು ಎಂದು ಎನಿಸಿತು. ಆದರೂ, ತನ್ನ ಸತ್ಯವನ್ನು ತಾನೇ ಕಂಡುಕೊಳ್ಳುವ, ಈ ಯಾಚಕನ ಹಂಗು ಬೇಡವೆಂದು ಸುಮ್ಮನಾದ ಶಂಬರ.

ಆದರೂ, ಅವನು ಏನನ್ನೇ ಕೇಳದಿದ್ದರೂ, ದೇವತೆಗಳ ವಿಷಯಗಳನ್ನು, ಅಸುರರ ವಿಷಯಗಳನ್ನು, ಕೃಷ್ಣನೆಂಬ ಗೊಲ್ಲರ ನಾಯಕನ ವಿಷಯವನ್ನು, ಢುಂಢಿ ಎಂಬ ಶೂದ್ರ ದಾಳಿಕೋರನ ವಿಷಯವನ್ನು, ಹಾಗೆ ಬಂಡೆದ್ದ ಶೂದ್ರರ ಯುವಕ ಗಣಪತಿಯಾದ ವಿವರಣೆಗಳನ್ನು, ವಿನಾಯಕರ ಹಾವಳಿಗಳನ್ನು, ರುದ್ರಗಣದ ಅತಿರೇಕಗಳನ್ನು, ಪಾರ್ವತಿ ಎಂಬ ಮಾತಂಗಕನ್ಯೆಯ ಪ್ರಭಾವಗಳನ್ನು, ಯಾದವರಲ್ಲಿ, ಕುರುವಂಶದ ದಾಯಾದಿಗಳಲ್ಲಿ ನಡೆಯುವ ಕಲಹಗಳನ್ನು ಹೇಳುತ್ತಿದ್ದ.

ಎಲ್ಲಾ ವಿಷಯಗಳಿಗೆ, "ಹೌದಾ?" ಎಂಬಂತೆ ತಲೆದೂಗುತ್ತಿದ್ದ ಶಂಬರನಿಗೆ ನಿಜವಾಗಿಯೂ ಯಾವುದರ ಬಗ್ಗೆಯೂ ಅಂತಹ ಆಸಕ್ತಿಯಿರಲಿಲ್ಲ.

ಮುಖ್ಯವಾಗಿ ಶಂಬರನ ಸುವಾಸ್ತುವಿನ ಸಹವಾಸಕ್ಕೆ ಯಾರೂ ಬಂದಿರಲಿಲ್ಲ. ಅಲ್ಪ ಬಲಿಷ್ಟರು ಅಥವಾ ಪಣಿಗಳನ್ನು ಬಿಟ್ಟರೆ ಯಾರೂ ಅಂತಹ ದಂಗೆಕೋರ ಪ್ರಯಾಣಿಕರು ಬಂದಿರಲಿಲ್ಲ. ಅಷ್ಟೇಕೆ ಜಿಂಕೆ, ಸಾರಂಗ ಮತ್ತು ಮೊಲಗಳು, ಕತ್ತೆ–ಕಿರುಬಗಳು ಧಾರಾಳವಾಗಿದ್ದ ಆ ಕಾಡಿನಲ್ಲಿ ಆಹಾರದಿಂದ ಸಂತೃಪ್ತವಾಗಿದ್ದ ಚಿರತೆ ಮತ್ತು ವ್ಯಾಘ್ರಾದಿ ವನ್ಯಮೃಗಗಳು ಸುವಾಸ್ತುವಿನ ಹಸುಗಳ ಕೊಟ್ಟಿಗೆಗೆ ಧಾಳಿ ಇಟ್ಟಿರಲಿಲ್ಲ. ಮನೆಯ ಪೌಳಿಯ ಸುತ್ತಲೂ ಆಳವಾದ ಕಂದಕವನ್ನು ಏರ್ಪಡಿಸಿದ್ದರಿಂದ ಆನೆಗಳಾಗಲಿ, ಕಾಡೆಮ್ಮೆಗಳಾಗಲಿ, ಸರ್ಪಗಳಾಗಲಿ ಸುವಾಸ್ತುವಿನ ಪೌಳಿಯ ಒಳಗೆ ಬಂದಿರಲಿಲ್ಲ. ಆರ್ಯರ ಮತ್ತು ಆರ್ಯೇತರ ಬುಡಕಟ್ಟುಗಳ ನಡುವೆ ಗೋವುಗಳಿಗಾಗಿ ಹೋರಾಟಗಳು ನಡೆಯುತ್ತಲಿದ್ದದ್ದು ಸಾಮಾನ್ಯವೇ ಆಗಿದ್ದರೂ, ಶಂಬರನ ಗೋಪತಿಯ ಸ್ಥಾನಕ್ಕೆ ಎಂದಿಗೂ ಚ್ಯುತಿ ಬಂದಿರಲಿಲ್ಲ.

ಜಹ್ನೂವಸ ಅರಣ್ಯದ ತೀರಾ ಒಳಕ್ಕಿರುವ ಕಾರಣವೋ ಅಥವಾ ಕಾಕತಾಳೀಯವೋ, ಅಂತೂ ವಸುಮಾ ಸುವಾಸ್ತುವೆಂದು ಕರೆದಿದ್ದ ಆ ಮನೆ ಮತ್ತು ಮನೆಯ ಸುತ್ತಲಿನ ಪ್ರದೇಶವು ಶಂಬರನಿಗೆ ಸುವಾಸ್ತುವೇ ಆಗಿತ್ತು.

ಒಮ್ಮೆ ಯಾಜ್ಞಿಕನೇ ಮಾತಾಡುವಾಗ, ಸುವಾಸ್ತುವೆಂದರೆ ಸಿಂಧೂ ನದಿಯ ಉಪನದಿಯೆಂದೂ, ಗಂಗೆಯ ದಡದಲ್ಲಿರುವ ನೀವೇಕೆ ಸುವಾಸ್ತುವೆಂದು ನಿಮ್ಮ ಸ್ಥಳವನ್ನು ಕರೆಯುತ್ತೀರಿ ಎಂದು ಕೇಳಿದ್ದ.

"ನನ್ನ ತಾಯಿ ಹಾಗೆಂದು ಹೆಸರಿಟ್ಟದ್ದು." ಎಂದಿದ್ದ ಶಂಬರ ಎಂದಿನಂತೆ ಹೆಚ್ಚು ಮಾತು ಬೆಳೆಸಿರಲಿಲ್ಲ.

ಒಮ್ಮೆ ಶಂಬರ ಗಂಗಾನದಿಯಿಂದ ತನ್ನ ತೋಟಕ್ಕೆ ಮತ್ತು ಕಂದಕಕ್ಕೆ ನೀರು ಹಾಯಿಸಲು ಕಾಲುವೆ ತೋಡಲು ತೊಡಗಿದ್ದಾಗ ಯಾಜ್ಞಿಕ ಅದೇ ಮಾರ್ಗವಾಗಿ ಬಂದಿದ್ದ. ಶಂಬರ ಕಾಲುವೆ ತೋಡುತ್ತಿರುವುದನ್ನು ಕಂಡು, "ನಿಮ್ಮ ಮನೆಯಲ್ಲಿ ಸ್ವರ್ಣಪಾತ್ರೆಯಿದೆಯೇ?" ಎಂದು ಕೇಳಿದ್ದ.

ಶಂಬರನಿಗೆ ಮಣ್ಣಿನ ಪಾತ್ರೆಗಳನ್ನಷ್ಟೇ ಉಪಯೋಗಿಸುತಲಿದ್ದು, ಯಾವುದೇ ಲೋಹದ ಪಾತ್ರೆ ಅವನ ಕಣ್ಣಿಗೆ ಬಿದ್ದಿರಲಿಲ್ಲ. ಆದರೆ, ವಸುಮಾ ಬೇಡದ ವಸ್ತುಗಳನ್ನು ಬುಟ್ಟಿಯೊಂದರಲ್ಲಿ ಇಟ್ಟು ಮರದ ಹಲಗೆಯ ಕೆಳಗೆ ಇಟ್ಟಿರುವುದು ನೆನಪಿಗೆ ಬಂತು. ಕೂಡಲೇ ಅದರಲ್ಲಿ ಹುಡುಕಿ ನೋಡಿದ. ಅದರಲ್ಲಿ ಹಲವಾರು ಲೋಹದ ಪಾತ್ರೆಗಳು ಸಿಕ್ಕವು.

"ಆಹಾ, ಲೋಹಿತಾಯಸ, ಸ್ವರ್ಣಾಯಸ, ಶ್ಯಾಮಾಯಸ....." ಎಂದು ತಾಮ್ರದ, ಚಿನ್ನದ ಮತ್ತು ಕಬ್ಬಿಣದ ಪಾತ್ರೆಗಳನ್ನು ವಿಂಗಡಿಸಿದ ಯಾಜ್ಞಿಕ ಆ ಪಾತ್ರೆಗಳ ಆಕೃತಿಗಳನ್ನು ಗಮನಿಸಿ, "ಹೇ ಗೋಮತ್, ನೀವು ಖಂಡಿತವಾಗಿಯೂ ಆರ್ಯರೇ, ಅದರಲ್ಲಿಯೂ ವೈದಿಕ ಬ್ರಾಹ್ಮಣರೇ.... ಅಥವಾ ನಿಮ್ಮಲ್ಲಿ ಹರಿಯುತ್ತಿರುವುದು ಆರ್ಯರ ರಕ್ತ. ನಿಮ್ಮ ಹಿರಿಯರು ಖಂಡಿತ ವೈದಿಕ ಬ್ರಾಹ್ಮಣರು." ಎಂದ.

"ನಿನ್ನ ಮೈಯಲ್ಲಿ ಇನ್ನೂ ಆದಿವಾಸಿಗಳ ರಕ್ತವೇ ಹರಿಯುತ್ತಿರುವುದು." ಎಂದಿದ್ದ ವಸುಮಾಳ ಮಾತು ನೆನಪಾಗಿ ನಕ್ಕ ಶಂಬರ.

ತನ್ನ ಮಾತಿಗೆ ಆತ ನಕ್ಕನೆಂದು ತಿಳಿದ ಯಾಜ್ಞಿಕ, “ನೀವು ನನ್ನೊಡನೆ ಹೆಸರನ್ನು ಕೂಡ ಹೇಳದೇ ಮುಚ್ಚುಮರೆ ಮಾಡಿದರೂ, ನೀವು ಆರ್ಯರೆಂದು ನಾನು ಕಂಡುಹಿಡಿದೆ. ಆರ್ಯಾತ್ಮದ ಸೂರ್ಯನನ್ನು ಯಾವ ವರ್ಣದ ಮೋಡಗಳೂ ಮರೆಮಾಡವು.” ಎಂದ.

ಇದನ್ನು ಕೇಳಿ, “ನೀನು ಖಂಡಿತ ಆರ್ಯನಲ್ಲ.” ಎಂದು ವಸುಮಾ ಹೇಳಿದ್ದು ನೆನಪಿಗೆ ಬಂದು ಮತ್ತಷ್ಟು ಜೋರಾಗಿ ನಕ್ಕ ಶಂಬರ.

ಗಂಗೆಯ ಬದಿಯ ಹುಲ್ಲುಜೊಂಡಲಿ ಅವಿತಿದ್ದ ಕಪ್ಪೆಯೊಂದನ್ನು ಹಿಡಿದ ಯಾಜ್ಞಿಕ ಅದನ್ನು ಕೆಂಪು ಮತ್ತು ನೀಲಿದಾರದಿಂದ ಸುತ್ತಿ, ಅದರ ಮೇಲೆ ಜೇಡಿ ಮಣ್ಣನ್ನಿಟ್ಟು, ಅದೇ ಸ್ಥಿತಿಯಲ್ಲಿ ಕಪ್ಪೆಯನ್ನು ಚಿನ್ನದ ಬಟ್ಟಲಿನಲ್ಲಿ ಇರಿಸಿ, ಅದನ್ನು ತೋಡಿದ್ದ ಕಾಲುವೆಯಲ್ಲಿ ಇರಿಸಿ, ಪ್ರಥಮವಾಗಿ ಒಡ್ಡನ್ನು ಒಡೆದು ನೀರನ್ನು ಕಾಲುವೆಯಲ್ಲಿ ಹರಿಸಿದನು.

“ಹಸುವಿನಿಂದ ಬಂದ ಕರುವು ಮತ್ತೊಂದು ಹಸುವಾಗಿ ಸಮೃದ್ಧವಾಗುವಂತೆ, ಈ ಕಾಲುವೆ ಇಡೀ ಗಂಗಾ ನದಿಯ ಪಾವಿತ್ರ್ಯತೆಯನ್ನು, ಸಮೃದ್ಧಿಯನ್ನು, ಜೀವಂತಿಕೆಯನ್ನು ನಿಮ್ಮ ಸುವಾಸ್ತುವಿಗೆ ತರಲಿ. ಆಹಾರದ ದೇವತೆಯಾದ ಪಿತುವು ಇಡೀ ಸುವಾಸ್ತುವಿಗೆ, ನಿಮಗೆ, ಗೋವುಗಳಲ್ಲಕ್ಕೂ ಫಲವನ್ನು ತರಲಿ.” ಎಂದು ಹಾರೈಸಿದ ಯಾಜ್ಞಿಕ ಮನಸಾರೆ ಆನಂದದಿಂದ ತನ್ನ ಆಶುಕವಿತ್ವವನ್ನು ಹಾಡಿದ.

***“ಹೇ ಮಧು ಪಿತು, ಹೇ ಸವಿ ಪಿತು, ಶಕ್ತ ಪಿತುವೇ ಬಾ***
***ಮನಕೆ ಮಧುವನು, ರುಚಿಗೆ ಸವಿಯನು, ತನುವಿಗೆ ಬಲವ ತಾ***

***ನೀನೇ ಫಲಕಾರಿ ಫಲವಾಗಿ ಬಾ, ಮೋದದ ಸೆಲೆಯೇ ಮುದವಾಗಿ ಬಾ***
***ದಣಿಯದುತ್ಸಾಹ, ಮಣಿಯದಾಮೋದ, ಕುಣಿವ ಚೇತನವ ನಿರುತ ತಾ***

***ಯವದಿ, ಧಾನ್ಯದಲಿ, ಫಲದಿ, ಕ್ಷೀರದಿ ಸಕಲ ಸೇವನೆಯಲಿ ನೀ ಬಾ***
***ಗಾಳಿ ಗಂಧವನು, ಜಲ ತರಂಗವನು, ಇಳೆಯ ಫಲವತ್ತತೆಯ ನೀ ತಾ***

***ಹರಡಿದೆ ಭೂಮಿಯ ಹಸಿರ ಚಾಪೆಯು, ಬೋರಲಾಗಿದೆ ನಭದ ಬಟ್ಟಲು***
***ವರುಣನು ತರುವನು ಮಳೆಯನು ಇಳೆಗೆ, ಬೆಳಗುವ ಮಿತ್ರನ ರಥವು ಸಾಗಿದೆ***
***ಚಲಿಸುವ ಗಿರಿಗಳ ಇಂದ್ರ ಹಿಡಿದನು, ಜಡದ ನದಿಗಳ ವರುಣ ಸರಿಸಿದನು***

*ಗಗನವ ಘಟ್ಟಿಸಿ ಹಿಡಿದ ಸವಿತೃವು, ಹೇ ಪಿತುವೇ ನನ್ನ ಪೋಷಿಸು ಬಾ*

*ಸುರಿಯುತಲಿರಲಿ ಅವಿರತ ಅನುಗ್ರಹ ಮುಸಲಧಾರೆಯ ಮಳೆಯಂತೆ*

*ಸುತ್ತೆಲ್ಲಾ ಸುರರು ಸಾವಧಾನದಲಿ ಹಿಡಿದಿರಲಿ ನನ್ನ ಮಗುವಂತೆ*

*ಒಳಿತೆಂಬುದೆಲ್ಲವೂ ಹೊರಳಲೆನ್ನೆಡೆ, ಅರ್ಹ ಅನರ್ಹವ ಲೆಕ್ಕಿಸದೇ*

*ಒಕ್ಕಲಾಗಲಿ ಸಕಲ ಸಜ್ಜನರು ನನ್ನ ಸಂಗಡದಿ ಸಂಪೂರ್ಣದೇ॥"*

ಹಾಗೆ ಅಂದು ಹಾಡಿ ಹರಸಿ, ಗೋಮಾಂಸ ಭಕ್ಷಣೆ ಮಾಡಿ, ಕಂಠಪೂರ್ತಿ ಸುರೆ ಕುಡಿದು ಹೋದ ಯಾಜ್ಞಿಕ ಬಹುಕಾಲ ಶಂಬರನ ಕಡೆ ಸುಳಿಯಲಿಲ್ಲ. ಬಹುಶಃ ಅವನ ಹೆಂಡತಿ ಮಗುವನ್ನು ಹೆತ್ತಿದ್ದು, ಅದರ ಲಾಲನೆ ಪಾಲನೆಯಲ್ಲಿ ಯಾಜ್ಞಿಕ ಈ ಜಗತ್ತನ್ನು ಮರೆತಿದ್ದಾನೆ ಎಂದುಕೊಂಡ ಶಂಬರ.

## ಅಧ್ಯಾಯ : 3 ಅಗ್ರಜ ಮತ್ತು ಅನುಜ

ಅಂದು ಶಂಬರ ಸುವಾಸ್ತುವಿನ ಪೌಳಿಯ ಬದಿಯಲ್ಲಿ ನಿಂತುಕೊಂಡು ಕಂದಕದಲ್ಲಿ ಬಿದ್ದಿದ್ದ ಘಟಸರ್ಪಗಳನ್ನು ಕೋಲಿನಿಂದ ಎತ್ತಿ ಕಂದಕದ ಹೊರಬದಿಗೆ ಬಿಡುತ್ತಿದ್ದ. ಅವುಗಳು ಕಂದಕದಲ್ಲಿಯೇ ಉಳಿದುಬಿಟ್ಟರೆ ಆಹಾರವಿಲ್ಲದೇ ಹೋಗುತ್ತದೆ ಎಂಬುದು ಅವನ ಕಾಳಜಿ.

ಪೌಳಿಯ ದ್ವಾರದ ಬಳಿ, ಕಂದಕದ ಮೇಲೆ ಚಾಚಿದ ಕಟ್ಟಿಗೆಯ ಸೇತುವೆಯ ಮೇಲೆ ಯಾರೋ ಮೌನವಾಗಿ ನಿಂತಿರುವುದು ಶಂಬರನಿಗೆ ಕಾಣಿಸಿತು. ಗಮನಿಸಿ ನೋಡಲು, ಯಾಜ್ಞಿಕ! ಬಂದ ಕೂಡಲೇ, "ಹೇ ಗೋಮತ್...." ಎಂದು ಕೂಗುವ ಸದ್ದಿಲ್ಲ. ಶುಭಾಶಯ ಕೋರುವ ಮಾತಿಲ್ಲ. ಅವನು ಅಷ್ಟು ಮೌನವಾಗಿ ನಿಂತಿರುವುದನ್ನು ಶಂಬರ ಇದುವರೆಗೂ ನೋಡಿರಲಿಲ್ಲ. ನುಣುಪಾಗಿದ್ದ ತಲೆಯ ಮೇಲೆ ಕೂದಲು ಬೆಳೆದಿದೆ. ಗಡ್ಡ ಮತ್ತು ಮೀಸೆಯೂ ಬೆಳೆದಿದೆ. ಆದರೆ, ಗೋಪಾದದ ಜುಟ್ಟು ಹಾಗೆಯೇ ಇದೆ.

ಇನ್ನೂ ಎರಡು ನಾಗರಹಾವುಗಳು ಶಂಬರನ ಕೋಲಿಗೆ ಸರಿಯಾಗಿ ಸಿಗದೇ ಕ್ಷಿಪ್ರವಾಗಿ ಚಲಿಸುತ್ತಾ ಅವನೊಂದಿಗೆ ಸಹಕರಿಸುತ್ತಿರಲಿಲ್ಲ.

"ಬಂದೆ. ನೀವು ಒಳಗೆ ದಯಮಾಡಿಸಿ." ಎಂದ ಶಂಬರ ತನ್ನ ಕೆಲಸ ಮುಗಿಸಿಯೇ ಒಳಗೆ ಬಂದ.

ಇವನು ಬರುವಷ್ಟರಲ್ಲಿ ತುಂಬಾ ದೂರದಿಂದ ನಡೆದು ದಣಿದಿದ್ದ ಯಾಜ್ಞಿಕ ಜಗುಲಿಯ ಮೇಲೆ ಮಲಗಿಕೊಂಡು ನಿದ್ರೆ ಹೋಗಿದ್ದ. ಅವನನ್ನು ಎಚ್ಚರಿಸದೇ ಅವನ ಮಲಗಿರುವ ಸ್ಥಿತಿಯಲ್ಲೇ ಅವನ ಅವಲೋಕಿಸಿದ. ಅವನಿರುವ ಅವಸ್ಥೆಯನ್ನು ನೋಡಿದರೆ ಬಹುಶಃ ಅವನ ಮಗುವಿಗೆ ಮತ್ತು ತಾಯಿಗೆ

ಏನೋ ಪ್ರಮಾದ ಸಂಭವಿಸಿರಬಹುದು ಎಂದು ಶಂಬರ ತರ್ಕಿಸಿದ. ಅವನ ಎಚ್ಚರಿಸದೆಯೇ, ವಿಶ್ರಾಂತಿ ತೆಗೆದುಕೊಳ್ಳಲಿ ಎಂದು ಶಂಬರ ಮನೆಯ ಹಿತ್ತಲಿಗೆ ಹೋಗಿ ಎಳೆಯ ಕರುವನ್ನು ಅಂದಿನ ಆಹಾರಕ್ಕೆ ಅಣಿಗೊಳಿಸಿದ.

ಮಧ್ಯಾಹ್ನದ ನಂತರ ಮೇಲೆದ್ದ ಯಾಜ್ಞಿಕ ಏನೂ ಸದ್ದು ಮಾಡದೇ ಹಾಗೆಯೇ ಜಗುಲಿಯ ಮೇಲೆ ಕುಳಿತಿರುವುದನ್ನು ಕಂಡ  ಶಂಬರ, ಮೆಲ್ಲನೆ ಕೇಳಿದ.

“ಯಾಕೆ ಏನಾಯ್ತು?”

ಯಾಜ್ಞಿಕ ಉತ್ತರಿಸಲಿಲ್ಲ.

“ತಾಯಿ ಮತ್ತು ಮಗು ಚೆನ್ನಾಗಿದ್ದಾರೆಯೇ?”

ಚೆನ್ನಾಗಿದ್ದಾರೆಂದು ಸೂಚಿಸುವಂತೆ ತಲೆದೂಗಿದ ಯಾಜ್ಞಿಕ.

“ಎಂತಹ ಮಗು ಹುಟ್ಟಿತು?”

“ಹೆಣ್ಣು ಮಗು.”

ಹುಟ್ಟಲಿರುವ ಮಗುವಿನ ಬಗ್ಗೆ ಯಾಜ್ಞಿಕ ಹೇಳುತ್ತಲಿದ್ದುದ್ದೆಲ್ಲಾ ನೆನಪಿಗೆ ಬಂದು ಶಂಬರನಿಗೆ ನಗು ಬಂತು. “ಸಾಹಸ ಪ್ರವೃತ್ತಿಯ, ದೀರ್ಘಾಯುಷ್ಯದ ಗಂಡು ಮಗುವು ಹುಟ್ಟಲಿಲ್ಲವೆಂದೇನು ನಿಮ್ಮ ಬೇಸರ?” ಎಂದು ಕೇಳಿದ ಶಂಬರ.

“ಇಲ್ಲ ಗೋಮತ್...” ಯಾಜ್ಞಿಕನ ಕಣ್ಣುಗಳಿಂದ ನೀರು ಸುರಿಯತೊಡಗಿತು. “ಆಕೆ ನನ್ನ ತೊರೆದಳು!”

“ಯಾರು? ನಿಮ್ಮ ಸಂಗಾತಿಯೇ?” ಶಂಬರ ಕೇಳಿದ.

“ಅವಳು ನನ್ನ ಅಣ್ಣನ ಹೆಂಡತಿ. ನನ್ನ ಅಣ್ಣ ನದಿಯಲ್ಲಿ ಈಜಾಡುವಾಗ ನೀರಿನ ರಭಸಕ್ಕೆ ಸಿಕ್ಕಿ ಸತ್ತುಹೋದ. ಸಣ್ಣವಯಸ್ಸಿನ ನನ್ನ ಅಣ್ಣನ ಹೆಂಡತಿಗೆ ಮಕ್ಕಳಿರಲಿಲ್ಲ. ಆದ್ದರಿಂದ ನನ್ನಿಂದ ಮಗುವಾಗಲೆಂದು ಹಿರಿಯರು ನಿಯೋಗದಿಂದ ನನ್ನ ಕೂಡಲು ಆಕೆಯನ್ನು ಒಪ್ಪಿಸಿದ್ದರು. ಮಗುವಾದ ಮೇಲೆ ನಾನು ನಿನ್ನ ಭಾರ್ಯೆಯಲ್ಲ, ನಾನು ನಿನ್ನ ಜೊತೆ ಇರುವುದಿಲ್ಲ ಎಂದು ಆಕೆ ತನ್ನ ಮಗುವಿನೊಂದಿಗೆ ಹೊರಟು ಹೋದಳು.” ಯಾಜ್ಞಿಕ ಜೋರಾಗಿ ಅತ್ತ.

“ನಾನು ಆಕೆಯನ್ನು ಪ್ರೀತಿಸುತ್ತಿದ್ದೆ.”

ಶಂಬರ ಅದರ ಬಗ್ಗೆ ಏನೂ ಹೇಳಲಿಲ್ಲ. ಬದಲಾಗಿ ನಿಡುದಾಗಿ ನಿಟ್ಟುಸಿರೊಂದನ್ನು ಬಿಟ್ಟು, “ಏಳಿ, ಕೈ ಕಾಲು ತೊಳೆದುಕೊಳ್ಳಿ. ಅಥವಾ ಸ್ನಾನ ಮಾಡಿ ಬನ್ನಿ. ಊಟಕ್ಕೆ ಬಡಿಸುತ್ತೇನೆ. ನಿಮ್ಮ ನೆಚ್ಚಿನ ಎಳೆಯಗರುವನ್ನು ಬೇಯಿಸಿದ್ದೇನೆ.”

“ನನಗೆ ಯವದ ಗಂಜಿ ಸಾಕಿತ್ತು.” ಎಂದ ಯಾಜ್ಞಿಕ.

ಎಳೆಗರುವಿನ ಮಾಂಸವನ್ನು ನಿರಾಕರಿಸಿ ಬರಿಯ ಜವೆಗೋಧಿಯ ಗಂಜಿ ಕೇಳುತ್ತಿರುವ ಯಾಜ್ಞಿಕನ ನೋವು ಶಂಬರನಿಗೆ ಅರ್ಥವಾಗಿತ್ತು.

"ಏಳಿ. ವಸ್ತು ವಿಷಯಗಳು ಹಾಗೆಯೇ ಇರುವಾಗ ನಮ್ಮನ್ನು ನಾವು ಸಮಾಧಾನ ಪಡಿಸಿಕೊಳ್ಳದೇ ಏನನ್ನು ಮಾಡಲು ಸಾಧ್ಯ? ಏಳಿ. ಸ್ನಾನ ಮಾಡಿ ಬನ್ನಿ. ಸೋಮರಸವಿದೆ. ಊಟದೊಂದಿಗೆ ಸೇವಿಸೋಣ."

ಯಾಜ್ಞಿಕ ಸ್ನಾನ ಮಾಡಲು ನದಿಯ ಕಡೆಗೆ ಹೋದ. ಅವನು ಬರುವಷ್ಟರಲ್ಲಿ ಶಂಬರ ಊಟಕ್ಕೆ ಸಿದ್ಧ ಮಾಡಿದ್ದ.

"ಸೋಮಲತೆ ನಿಮ್ಮಲ್ಲಿದೆಯೇ ಅಥವಾ ನೀವು ಸೋಮರಸವನ್ನು ಬೇರೆ ಕಡೆಯಿಂದ ತರುತ್ತೀರೋ?" ಯಾಜ್ಞಿಕ ಕೇಳಿದ.

"ಯಾಕೆ?"

"ನಾನು ಬೇರೆ ಕಡೆ ಕುಡಿಯುವುದಕ್ಕಿಂತ ಬೇರೆಯೇ ರೀತಿಯಲ್ಲಿ ಇದರ ರುಚಿಯಿದೆ."

"ನಾನೇ ಮಾಡುವುದು. ಇಲ್ಲಿ ಸೋಮಲತೆ ಅವಶ್ಯ ಬೆಳೆದಿದೆ."

"ನೀವು ಅರಣ್ಯಕರಂತೆ ವೇಷ ತೊಟ್ಟಿದ್ದರೂ, ನೀವು ಮಾತಾಡುವುದು ಆರ್ಯರಂತೆಯೇ." ಎಂದ ಯಾಜ್ಞಿಕ.

ಸೋಮರಸವನ್ನು ಕುಡಿಯುತ್ತಾ ಕುಡಿಯುತ್ತಾ ಮದವೇರುತ್ತಿದ್ದಂತೆ, ತನ್ನ ಅತ್ತಿಗೆಯನ್ನು ನೆನೆದು ಬಹುವಾಗಿ ಅತ್ತ ಯಾಜ್ಞಿಕ.

"ಅವಳನ್ನು ನಾನು ಬಹಳ ಪ್ರೀತಿಸುತ್ತಿದ್ದೆ ಹೇ ಗೋಮತ್. ನನ್ನ ತಂದೆ ಅವಳನ್ನು ನನ್ನ ಅಣ್ಣನಿಗೆ ಮದುವೆ ಮಾಡಿಬಿಟ್ಟರು. ಹಾಳಾದ ಮದುವೆ ಎಂಬ ಈ ವ್ಯವಸ್ಥೆ ನಾನು ಅವಳನ್ನು ಬೆರೆಯದಂತೆ ಮಾಡಿಬಿಟ್ಟಿತು. ಈ ದರಿದ್ರ ಮದುವೆಯ ವ್ಯವಸ್ಥೆಯನ್ನು ನಮ್ಮಲ್ಲಿ ಪಾಲಿಸದೇ ಇದ್ದಿದ್ದರೆ, ನಾನೂ ನನ್ನ ಅಣ್ಣ ಇಬ್ಬರೂ ಕೂಡಿ ಅಥವಾ ಪ್ರತ್ಯೇಕವಾಗಿಯೇ ಆಕೆಯನ್ನು ಸುಖಿಸಬಹುದಿತ್ತು." ಮದವೇರುತ್ತಿದ್ದಂತೆ ಯಾಜ್ಞಿಕ ಜೋರು ದನಿಯಲ್ಲಿ ಮಾತಾಡುತ್ತಿದ್ದ.

"ಆ ಶ್ವೇತಕೇತು ಹಾಳಾಗಲಿ!"

"ಯಾರು? ನಿಮ್ಮಣ್ಣನೇ?"

"ಅಲ್ಲ, ಉದ್ದಾಲಕ ಋಷಿಯ ಮಗ ಶ್ವೇತಕೇತು. ಅವನೇ.... ಹಾಳಾದವನು ಈ ಮದುವೆಯ ವ್ಯವಸ್ಥೆಗೆ ನಾಂದಿ ಹಾಕಿದ್ದು."

"ಹೌದೇ?"

"ಅದಕ್ಕೂ ಮುಂಚೆ ಮದುವೆ ಅಂತ ಎಲ್ಲಿತ್ತು ಹೇ ಗೋಮತ್? ಯಾರು ಯಾರನ್ನಾದರೂ ಸೇರಬಹುದಿತ್ತು. ಅಂದೊಂದು ದಿನ ಉದ್ದಾಲಕ ಮತ್ತು ಶ್ವೇತಕೇತುವಿನ ಎದಿರೇ ಆತನ ಮಾತೆಯನ್ನು ಯಾರೋ ಒಬ್ಬಾತ ಬಲತ್ಕಾರದಿಂದ ಕೂಡಿಕೆಗೆ ಎಳೆದಾಡುತ್ತಿದ್ದಾಗ, ಈ ಶ್ವೇತಕೇತು ಕೇಳಿದನಂತೆ.....

'ನಾವ್ಯಾಕೆ ಸುಮ್ಮನಿರಬೇಕು? ನಾವ್ಯಾಕೆ ಅವನನ್ನು ವಿರೋಧಿಸಬಾರದು? ಎದುರಿಸಬಾರದೂಂತ....' ಅದಕ್ಕೆ ಅವನ ತಂದೆ, 'ವ್ಯವಸ್ಥೆಯೇ ಹಾಗಿರುವಾಗ ನಾವು ಏನು ಮಾಡಕ್ಕೆ ಆಗತ್ತೆ,' ಅಂತ ಹೇಳಿದನಂತೆ. ಇದರಿಂದ ಮನಸ್ಸಿಗೆ ನೋವಾಗಿ, ಶ್ವೇತಕೇತು ದುರ್ಬಲರ ಪತ್ನಿಯರು ಶಕ್ತಿವಂತರ ಸೊತ್ತಾಗುವುದನ್ನು ತಪ್ಪಿಸಲು, ನೀತಿ ರೀತಿ ಕ್ರಮ ಅಂತ ಮದುವೆಯ ವ್ಯವಸ್ಥೆಯನ್ನು ಪ್ರಾರಂಭಿಸಿದನಂತೆ. ಅವನೇ ಮೊದಲು ಮದುವೆಯಾದನಂತೆ. ಅವನ ಮದುವೆ ಹಾಳಾಗಲಿ..."

"ಈಗೆಲ್ಲಿದ್ದಾನೆ ಅವನು?"

"ಅಯ್ಯೋ, ಇದಾಗಿದ್ದು ಎಷ್ಟೋ ಕಾಲದ ಹಿಂದೆ. ಅವನು ಸತ್ತು ಬೂದಿಯಾಗಿದ್ದಾನೆ." ಯಾಜ್ಞಿಕ ಮತ್ತಷ್ಟು ಸೋಮರಸವನ್ನು ಸೇವಿಸಿ ಮತ್ತೆ ಜೋರಾಗಿ ಹೇಳಿದ. "ಆ ಹಾಳಾದ ನನ್ನ ಅಣ್ಣನಿಗೆ ನಾನು ಪ್ರೀತಿಸಿದ ಹುಡುಗಿಯನ್ನು ಕೊಟ್ಟು ಮದುವೆ ಮಾಡಿದರು. ನಿಯೋಗ ಅಂತ ಈ ಒಂದು ಪದ್ಧತಿಯಿಂದಾದರೂ ನಾನು ಅವಳನ್ನು ಸೇರಿ ಬದುಕಬಹುದು ಎಂದೇ ನನ್ನ ಅಣ್ಣ ನೀರಿನಲ್ಲಿ ಕೊಚ್ಚಿಕೊಂಡು ಹೋಗುವಾಗಲೂ ನಾನು ಸುಮ್ಮನಿದ್ದೆ. ಈಜು ಬಂದರೂ ಸುಮ್ಮನಿದ್ದು, ಈಕೆಗಾಗಿ ನನ್ನ ಅಣ್ಣನನ್ನು ತ್ಯಾಗ ಮಾಡಿದೆ. ಆದರೆ, ಈ ಉಪಕೃಷ್ಟೆ ನನ್ನಿಂದ ಮಗುವಾದ ಮೇಲೆ ನೀನು ಬೇಡ ಎಂದು ಹೊರಟು ಹೋದಳು. ನೋಡು ಹೇ ಗೋಮತ್..... ನನ್ನ ಒಂದು ಯಂತ್ರದ ಹಾಗೆ ಉಪಯೋಗಿಸಿಕೊಂಡಳು. ಈಗ ನನಗೆ ನನ್ನ ಅಣ್ಣನ ಕೊಂದ ಪಾಪ ಸುತ್ತಿಕೊಂಡಿತು."

"ಅವಳು ನಿನ್ನ ಸೇರಿದ್ದರೆ, ನೀನು ನಿನ್ನ ಅಣ್ಣನ ಕೊಂದಿದ್ದ ಪಾಪ ನಿನಗೆ ಇರುತ್ತಿರಲಿಲ್ಲವೇ?"

"ಕೊಂದ ಪಾಪ ತಿಂದರೆ ತೀರುವುದು. ಮಾಡಿದ ತಪ್ಪಿಂದ ಒಪ್ಪಾಗಿ ಜೀವನ ಮಾಡಿದರೆ ಪಾಪವಿಲ್ಲ..." ಎಂದ ಯಾಜ್ಞಿಕ.

'ಎಲಾ ಬ್ರಾಹ್ಮಣ!' ತನ್ನ ತಾಯಿ ಈ ವೈದಿಕ ಬ್ರಾಹ್ಮಣರನ್ನು ಸೇರಿಸದಿರಲು ಹೇಳಿದ್ದು, ಏಕೆಂದು ಶಂಬರನಿಗೆ ಈಗ ತಿಳಿಯಿತು.

ಸೋಮರಸವು ಕಡಿಮೆಯೇ ಇತ್ತು. ಇತ್ತೀಚೆಗೆ ಮಾಡಿರಲಿಲ್ಲ. ಹಾಗಾಗಿ ಶಂಬರ ಅಕ್ಕಿ ಮತ್ತು ಬೆಲ್ಲದಿಂದ ಮಾಡಿದ್ದ ಸುರೆಯನ್ನು ಅವನ ಮುಂದಿಟ್ಟ. ಸೋಮರಸ, ಸುರೆ ಅಥವಾ ಗವುಡ ಯಾವುದರ ವ್ಯತ್ಯಾಸವಿಲ್ಲದೇ ಮದ್ಯವನ್ನು ಬರಿದೇ ಹೊಟ್ಟೆಗೆ ಸುರಿದುಕೊಳ್ಳುತ್ತಿದ್ದ ಯಾಜ್ಞಿಕ ಮನೆಯ ಜಗುಲಿಯ ಮೇಲೆ ಮೈಮರೆತು ಮಲಗಿ ನಿದ್ರೆ ಹೋದ. ಶಂಬರ ಮೈಮರೆಯುವಷ್ಟು ಕುಡಿಯಲಿಲ್ಲ. ಅವನೆಂದೂ ಮೈ ಮರೆಯುವಷ್ಟು ಕುಡಿದಿಲ್ಲ. ಆದರೂ ಮಧ್ಯಾಹ್ನದ ಬಿಸಿಲಿಗೆ ಸುರೆಯ ಮತ್ತು ಹೆಚ್ಚಿದಂತಾಗಿ ಹಾಗೆಯೇ ಮಲಗಿಬಿಟ್ಟ.

ನಾಯಿಗಳು ಬೊಗಳುತ್ತಿದ್ದ ಮತ್ತು ಗೋವುಗಳು ಬೆದರಿ ಚೀರಾಡುತ್ತಿದ್ದ ಗಲಾಟೆಗೆ ಮೇಲೆದ್ದ ಶಂಬರ. ನಾಯಿಗಳು ಕೊಟ್ಟಿಗೆಯ ಕಡೆಗೆ ಮುಖ ಮಾಡಿಕೊಂಡು ಯಾರೋ ಅಪರಿಚಿತರನ್ನು ಸೂಚಿಸುತ್ತಾ ಬೊಗಳುತ್ತಿದ್ದವು. ಸೂರ್ಯ ಪಡುವಣದ ಕಡೆ ಜಾರುತ್ತಿದ್ದ.

ಆದರೆ ಕೊಟ್ಟಿಗೆಯಲ್ಲಿನ ಜೋರು ಗಲಾಟೆಗೆ ಕಾರಣವೇನೆಂದು ಶಂಬರನಿಗೆ ತಿಳಿಯಲಿಲ್ಲ. ಪೌಳಿಯ ದ್ವಾರದ ಕಡೆ ನೋಡಿದ. ದ್ವಾರದಿಂದ ಕಂದಕದ ಆ ಬದಿಗೆ ಕಟ್ಟಿಗೆಯ ಸೇತುವೆಯನ್ನು ಎತ್ತಿ ಮಡಿಸಲಾಗಿತ್ತು. ಅಂದರೆ ಯಾವುದೇ ಪ್ರಾಣಿಯೂ ಪ್ರವೇಶಿಸಿರಲಾರದು. ಲಗುಬಗೆಯಿಂದ ಮೇಲೆದ್ದ ಶಂಬರ ಕೊಟ್ಟಿಗೆಯ ಕಡೆಗೆ ನಡೆದ. ತೀರಾ ತುಡುಗು ಮಾಡುವ ಹಸುಗಳನ್ನಷ್ಟೇ ಕಟ್ಟಿದ್ದದ್ದು. ಇನ್ನೂ ಕೆಲವು ದನಗಳನ್ನು ಮೇಯಿಸಲೆಂದು ಹಗ್ಗದಿಂದ ಬಿಡಿಸಿದ್ದು, ಯಾಜ್ಞಿಕ ಬಂದ ಕಾರಣದಿಂದ ಅವುಗಳನ್ನು ಮೇಯಿಸಲು ಹೊರಗೆ ಹೊಡೆದುಕೊಂಡು ಹೋಗಿರಲಿಲ್ಲ. ಮನೆಯ ಹಿಂಬದಿಯ ಕಂದಕದ ಮೇಲೆ ಕಟ್ಟಿಗೆಯ ಸೇತುವೆಯನ್ನು ಇಳಿಬಿಟ್ಟಿತ್ತು. ಅಲ್ಲಿಂದ ಯಾವುದಾದರೂ ಪ್ರಾಣಿ ಪ್ರವೇಶಿಸಿರಬಹುದೆಂದು ಶಂಬರ ತರ್ಕಿಸಿದ. ಗೋವುಗಳು ಚೀರಾಡುತ್ತಾ ಎಗರಾಡುತ್ತಿದ್ದವು. ಸ್ಥೂಲವಾದ ದೃಷ್ಟಿಗೆ ಏನೂ ಕಾಣಲಿಲ್ಲ. ಕೂಡಲೇ ಮನೆಯೊಳಗೆ ಓಡಿದ ಶಂಬರ ಖಡ್ಗವನ್ನು ಹಿಡಿದು, ಅಪರಿಚಿತ ಜೀವಕ್ಕಾಗಿ ಕಣ್ಣು ಹಾಯಿಸುತ್ತಾ ಕೊಟ್ಟಿಗೆಯೊಳಗೆ ಪ್ರವೇಶಿಸಿದ. ಆ ಬಗೆಯ ಗಲಭೆ, ಅಪರಿಚಿತ ಪ್ರಾಣಿಯೊಂದು ಗೋವುಗಳ ಗುಂಪಿಗೆ ನುಗ್ಗಿದರೆ ಮಾತ್ರ ಆಗುವುದು. ಈ ಮೊದಲು ತೋಳ ಮತ್ತು ಕಿರುಬಗಳು ಹಾಗೆ ಪ್ರವೇಶಿಸಿದ್ದಾಗಲೂ ಗೋವುಗಳು ಇದೇ ರೀತಿಯ ಗಲಭೆಯನ್ನು ಎಬ್ಬಿಸಿದ್ದವು.

“ಏನು? ಏನಾಯ್ತು?” ಯಾಜ್ಞಿಕನೂ ಮೇಲೆದ್ದು ಬಂದಿದ್ದ.

ಶಂಬರ ಎಚ್ಚರಿಕೆಯಿಂದ ಖಡ್ಗವನ್ನು ಹಿಡಿದುಕೊಂಡು ಗಲಿಬಿಲಿಗೊಂಡಿದ್ದ ಗೋವುಗಳ ನಡುವೆ ಗಮನಿಸಿದ. ಆ ಗೋವುಗಳಿಗಿಂತಲೂ ಹೆಚ್ಚು ಬೆದರಿದ್ದ ವ್ಯಕ್ತಿಯೊಬ್ಬ, ಗೋವುಗಳ ಕೊಂಬುಗಳ ದಾಳಿಗೆ ಮತ್ತು ಕಾಲ್ತುಳಿತಕ್ಕೆ ಸಿಕ್ಕದಂತೆ ಹೆಣಗಾಡುತ್ತಿರುವುದು ಕಾಣಿಸಿತು.

“ಹೇಯ್...” ಎಂದು ಗದರಿಸುವಂತೆ ಕೂಗಿದ ಶಂಬರ.

“ಯಾರು? ಯಾರಿದ್ದಾರೆ? ತಸ್ಕರನೇ?” ಎಂದು ಯಾಜ್ಞಿಕ ಕೂಗಿದ.

“ನಾನು ಅಮ್ಮಿತ... ಶರಣಾಗಿದ್ದೇನೆ. ಈ ಗೋವುಗಳ ಪದಘಾತದಿಂದ ನನ್ನ ರಕ್ಷಿಸಿ.” ಎಂದು ಆ ವ್ಯಕ್ತಿ ತನ್ನ ಎರಡೂ ಕೈಗಳನ್ನೆತ್ತಿ ಕೂಗಿದ.

“ನಿನ್ನ ಹತ್ತಿರ ಆಯುಧಗಳಿವೆಯೇ?” ಕೇಳಿದ ಶಂಬರ.

“ಇಲ್ಲ.” ಅಮ್ಮಿತ ತನ್ನ ಎರಡೂ ಕೈಗಳನ್ನು ತೋರಿಸಿದ. ಕಪ್ಪು ಬಣ್ಣದ ಕುಳ್ಳನೆಯ ಶರೀರ, ಮೊಂಡು ಮೂಗಿನ ಅವನ ಮುಖದಲ್ಲಿ ಅಮಾಯಕತೆ ಕಾಣುತ್ತಿತ್ತು.

“ಶೂದ್ರನನ್ನೂ, ಚೋರನನ್ನೂ ನಂಬಲಾಗದು!” ಎಂದ ಯಾಜ್ಞಿಕ.

ಶಂಬರ ಅಮ್ಮಿತನನ್ನು ಎಚ್ಚರಿಕೆಯಿಂದ ತನ್ನ ಎಡಗೈಯಿಂದ ಹಿಡಿದು ಗೋವುಗಳಿಂದ ಪಾರು ಮಾಡುತ್ತಾ ಹೇಳಿದ. “ಸ್ತ್ರೀಯೊಬ್ಬಳ ಮೇಲಿನ ಮೋಹದಿಂದಾಗಿ ತನ್ನ ಸೋದರನನ್ನು ನೀರು ಪಾಲು ಮಾಡಿದ ಬ್ರಾಹ್ಮಣನನ್ನು ನಂಬಬಹುದೇ?”

ಯಾಜ್ಞಿಕನಿಗೆ ಆ ಮಾತಿನಿಂದ ಆಘಾತವಾಗಿತ್ತು. ತಾನು ಕುಡಿದ ಅಮಲಿನಲ್ಲಿ ಏನೇನೆಲ್ಲಾ ಮಾತಾಡಿದ್ದೇನೆ ಎಂದು ಪಶ್ಚಾತ್ತಾಪವಾಯಿತು.

"ನೀನು ಯಾರು? ನೀನು ಇಲ್ಲಿಗೆ ಏಕೆ ಬಂದೆ?" ಶಂಬರ ಅಮ್ಮಿತನನ್ನು ಮನೆಯ ಗೋಡೆಗೆ ತಳ್ಳಿ, ಅವನ ಕಡೆಗೆ ಖಡ್ಗವನ್ನು ಹಿರಿದು ಕೇಳಿದ.

"ನನ್ನ ಹೆಸರು ಅಮ್ಮಿತ. ಗಂಗಾತೀರದಲ್ಲಿರುವ ಅವಿಮುಕ್ತ ಪ್ರದೇಶದವನು."

"ಇಲ್ಲೇನು ಮಾಡುತ್ತಿದ್ದೆ?" ಶಂಬರನ ಕಂಠದಲ್ಲಿರುವ ಗಡಸುತನ ಇನ್ನೂ ಕಡಿಮೆಯಾಗಿರಲಿಲ್ಲ.

"ಗೋಗ್ರಹಣಕ್ಕಾಗಿಯೇ ಬಂದೆ. ಕ್ಷಮಿಸಿ. ಬಡತನ..... ಪಣಿಗಳೊಬ್ಬರ ಮನೆಯಲ್ಲಿ ಸೇವಕನಾಗಿದ್ದೆ. ನಾನು ಮಾಡುವ ಕೆಲಸ ಸಾಲದ್ದೆಂದು ನನಗೆ ಸಾಕಾಗುವಷ್ಟು ಆಹಾರ ಕೊಡುತ್ತಿರಲಿಲ್ಲ. ಹಿಂದೊಮ್ಮೆ ಸಾರ್ಥದ ಜೊತೆ ಇದೇ ಮಾರ್ಗವಾಗಿ ನನ್ನ ಒಡೆಯನ ಜೊತೆಗೆ ಬಂದಾಗ, ಇಲ್ಲಿ ಸಾಕಷ್ಟು ಹಸುಗಳಿರುವುದನ್ನು ಕಂಡುಕೊಂಡಿದ್ದೆ. ನಾಲ್ಕಾರು ಹಸುಗಳನ್ನು ಕದಿಯಲು ಸಾಧ್ಯವಾದರೆ ಕದ್ದು, ಇಲ್ಲಿಂದ ಎಲ್ಲಿಗಾದರೂ ಹೋಗಿ ಸ್ವತಂತ್ರವಾಗಿ ನಿಲ್ಲಲು ಯೋಚಿಸಿದ್ದೆ. ಒಂದು ವೇಳೆ ಸಿಕ್ಕಿಬಿದ್ದರೆ, ನಿಮ್ಮಲ್ಲಿಯೇ ಸೇವಕನಾಗಿ ಕೆಲಸ ಮಾಡುವುದಾಗಿ ನಿಶ್ಚಯಿಸಿಕೊಂಡಿದ್ದೆ."

"ನಿನ್ನ ಒಡೆಯ ಯಾರು?"

"ರತ್ನಿ."

ಶಂಬರನಿಗೆ ಅವನ ಒಡೆಯನೂ ನೆನಪಿಗೆ ಬರಲಿಲ್ಲ. ಈ ಅಮ್ಮಿತನ ಮುಖವೂ ನೆನಪಿಗೆ ಬರಲಿಲ್ಲ.

"ಈಗೇನು ಮಾಡುವೆ?"

"ನೀವು ಹೇಳಿದಂತೆ."

"ನಿನ್ನ ನಿರ್ಧಾರವೇನು?"

"ಸಿಕ್ಕಿಬಿದ್ದರೆ, ನಿಮ್ಮಲ್ಲೇ ಸೇವಕನಾಗಿ ಕೆಲಸ ಮಾಡುವುದೆಂದು ಆಲೋಚಿಸಿದ್ದೆ."

"ಹಾಗೆಯೇ ಮಾಡುವೆಯಾ? ನನಗೂ ಸಹಾಯಕ್ಕೆ ಕೈಗಳ ಅಗತ್ಯವಿದೆ." ಶಂಬರ ತನ್ನ ಖಡ್ಗವನ್ನು ಹಿಂದಕ್ಕೆ ತೆಗೆದುಕೊಂಡ.

"ಧನ್ಯವಾದಗಳು. ನಾನು ಸೇವಕನಾಗಿ ಉಳಿದ ಮೇಲೆ ಕದಿಯುವ ಕೆಲಸ ಮಾಡುವುದಿಲ್ಲ." ಎಂದ ಅಮ್ಮಿತ.

"ನೀನು ಹಾಗೆ ಮಾಡಲಾರೆ." ಎಂದ ಶಂಬರ, "ನೀನು ನನ್ನ ಸೇವಕನಾಗುವ ಅಗತ್ಯವಿಲ್ಲ. ಈ ಮನೆಯಲ್ಲಿ ಒಬ್ಬ ಬಂಧುವಾಗಿರು. ಆದರೆ ಅತಿಥಿಯಾಗಲ್ಲ! ಅತಿಥಿಗಳು ಮನೆಯಲ್ಲಿ ಉಳಿಯಲಾರರು." ಎಂದು ಅಮ್ಮಿತನಿಗೆ ಕೈ ಕೊಟ್ಟು ಮೇಲಕ್ಕೆಬ್ಬಿಸಿದ.

"ಅತಿಥಿಗಳಾಗಿ ಬಂದು ಮನೆಯಲ್ಲಿಯೇ ಉಳಿದರೆ ಬಂಧುಗಳಾಗುತ್ತಾರೆ. ಬಂಧುಗಳಾಗಿರುವವರು ಹೊರಟುಹೋದರೆ ಅತಿಥಿಯಾದರು ಎಂದೆಣಿಸಬೇಕು." ಎಂದ ಯಾಜ್ಞಿಕನ ಮಾತಿಗೆ ಏನೂ ಪ್ರತಿಕ್ರಿಯಿಸದ ಶಂಬರ, "ಹೋಗು, ಕೈಕಾಲುಗಳನ್ನು ತೊಳೆದುಕೊಂಡು ಬಾ. ಬೇರೆ ವಸ್ತ್ರವನ್ನು ಕೊಡುತ್ತೇನೆ." ಎಂದು ಅಮ್ಮಿತನಿಗೆ ಹೇಳಿ ಮನೆಯೊಳಗೆ ನಡೆದ.

“ಆತನನ್ನು ಪರೀಕ್ಷಿಸಬೇಕಿತ್ತು.” ಎಂದ ಯಾಜ್ಞಿಕ ಶಂಬರನ ಹಿಂಬಾಲಿಸುತ್ತಾ.

“ಹೇಗೆ?”

“ತಿಳಿಯದು.” ಎಂದ ಯಾಜ್ಞಿಕ ಮುಂದೆ ಹೇಳಿದ, “ವಸ್ತುವನ್ನಾಗಲಿ, ಪಶುವನ್ನಾಗಲಿ, ಸೇವಕನನ್ನಾಗಲಿ ಪರೀಕ್ಷಿಸದೆಯೇ ಸ್ವೀಕರಿಸಬಾರದು.”

“ಅಮ್ಮಿತನು ನೀವು ಹೇಳಿದ ಮೂರೂ ಅಲ್ಲ.” ಎಂದು ಶಂಬರ ನಕ್ಕು ಪೆಟ್ಟಿಯ ಮೇಲಿಟ್ಟಿದ್ದ ಬಟ್ಟೆಯ ಗಂಟು ತೆರೆದ.

ಅದರಿಂದ ಮೇಲುಡುಗೆ, ತಲೆಯುಡಿಗೆ, ಕಂಬಳಿಯನ್ನು ತೆಗೆದು ಅವನಿಗೆಂದು ಪಕ್ಕಕ್ಕಿಟ್ಟ ಶಂಬರ.

“ಆತನಿಗೆ ವಾಪ್ರಿ, ಉಷ್ಣೀಷ, ಕಂಬಲವೇ..... ಉಪಾನಹವನ್ನೂ ಕೊಡುತ್ತೀರೋ?” ಯಾಜ್ಞಿಕ ಕೇಳಿದ.

ಶಂಬರ ಪೆಟ್ಟಿಗೆಯ ಪಕ್ಕದಲ್ಲಿದ್ದ ಉರುಟಾದ ಒಂದು ಜೊತೆ ಚರ್ಮದ ಚಪ್ಪಲಿಯನ್ನು ತೋರಿದ. “ಇದು ಅವನ ಉಪಾನಹ.”

“ಹೂಂ....” ಎಂದು ಅಡ್ಡಲಾಗಿ ತಲೆಯಾಡಿಸಿದ ಯಾಜ್ಞಿಕನ ಚರ್ಯೆ ಶಂಬರನಿಗೆ ಅರ್ಥವಾಗಲಿಲ್ಲ. “ಶೂದ್ರ ಸೇವಕರು ಕಾಲಿಗೆ ಉಪಾನಹವನ್ನು ತೊಡುವಂತಾದರೆ.......” ಯಾಜ್ಞಿಕ ಗೊಣಗಿದ್ದು ಶಂಬರನಿಗೆ ಸರಿಯಾಗಿ ಕೇಳಿಸಲಿಲ್ಲ. ಆದರೆ ಏನೆಂದು ಕೇಳಲಿಲ್ಲ.

ಕೈ ಕಾಲುಗಳನ್ನು ತೊಳೆದು ಬಂದಿದ್ದ ಅಮ್ಮಿತ ಬಾಗಿಲಿನಲ್ಲಿಯೇ ನಿಂತ.

“ನೀನು ಒಳಗೆ ಬರಬಹುದು. ಈ ಮನೆ ಆರ್ಯರದ್ದೋ ಅಥವಾ ಬ್ರಾಹ್ಮಣರದ್ದೋ ಅಲ್ಲ.” ಶಂಬರನ ಮಾತು ಕೇಳಿ ಧೈರ್ಯವಾಗಿ ಒಳಗೆ ಬಂದ ಅಮ್ಮಿತ.

“ಆದರೆ, ಶೂದ್ರರದೆಂದು ತಿಳಿಯಬೇಡ!” ಎಂದ ಯಾಜ್ಞಿಕ. ಅದನ್ನು ಕೇಳಿದರೂ ಕೇಳಿಸದಂತೆಯೇ ಇದ್ದ ಶಂಬರ ಕೊಟ್ಟ ವಸ್ತ್ರಗಳನ್ನು ಧರಿಸಿದ ಅಮ್ಮಿತ ಶಂಬರನಿಗೆ ಮತ್ತು ಯಾಜ್ಞಿಕನಿಗೆ ವಂದಿಸಿದ.

“ನೀನು ಸಾಲದ ಬಾಧೆಗೆ ಬಿದ್ದು ಪಣಿಯ ಬಳಿಯೇ ಸೇವಕನಾಗಿರುವ ವೈಶ್ಯನೋ ಅಥವಾ ಸೇವಕ ವರ್ಗದ ಶೂದ್ರನೋ?” ಎಂದು ತಾನೇ ಮತ್ತೆ ಕೇಳಿದ ಯಾಜ್ಞಿಕ.

“ನಾನು ದಾಸ.”

“ಓಹೋ, ನಿನ್ನ ಕಪ್ಪು ಮೈ, ದಪ್ಪ ತುಟಿಗಳು, ಮೊಂಡು ಮೂಗನ್ನು ನೋಡಿ, ನೀನಾಡುವ ಅನಾರ್ಯ ಭಾಷೆಯನ್ನು ಕೇಳಿಯೇ ನೀನು ದಾಸನೆಂದುಕೊಂಡೆ. ಶಿಶ್ನಾರಾಧಕರು.....” ಎಂದು ನಕ್ಕ ಯಾಜ್ಞಿಕ.

“ಹೌದು.” ಎಂದ ಅಮ್ಮಿತನ ಮಾತಿನ ಭಾವ ಗುರುತಿಸಲಾಗದಂತಿತ್ತು.

“ಹೋಗು, ಮನೆಯ ಮುಂಭಾಗದಲ್ಲಿ ಮಿಕ್ಕ ಅಡುಗೆಯಿದೆ. ಬೇಕಾದಷ್ಟನ್ನು ಬಡಿಸಿಕೊಂಡು ತಿನ್ನು.” ಎಂದು ಆಜ್ಞಾಪಿಸಿದ ಯಾಜ್ಞಿಕ.

ತಲೆಯಾಡಿಸಿದ ಅಮ್ಮಿತ ಕೈ ಕಟ್ಟಿಕೊಂಡು ಹೋಗಲು ಸಿದ್ಧನಾದ.

"ಹೇಯ್!" ಶಂಬರನ ಕೂಗಿಗೆ ಅಮ್ಮಿತ ಬೆಚ್ಚಿಬಿದ್ದು ನೋಡಿದ.

"ನಾನು ನಿನ್ನನ್ನು ಈ ಮನೆಯ ಬಂಧುವಾಗಿ ಸ್ವೀಕರಿಸಿದ್ದೇನೆ. ನೀನು ದಾಸನಲ್ಲ ಅಥವಾ ಸೇವಕನಲ್ಲ." ಎಂದ ಶಂಬರ ಯಾಜ್ಞಿಕನ ಕಡೆ ನೋಡಿದ, "ಇವರು ನಮ್ಮ ಅತಿಥಿಗಳು. ಯಾರು ಯಾರ ಮನೆಯಲ್ಲಿ ಅತಿಥಿಯಾಗಿರುವನೋ ಆತ ಅದೇ ಮನೆಯ ಬಂಧುವಿಗೆ ಆಜ್ಞೆ ನೀಡಲು ಸಾಧ್ಯವಿಲ್ಲ. ಈ ಮನೆಯ ಬಂಧುವಿನಂತೆ ನೀನು ಮುಕ್ತವಾಗಿ ಆಹಾರ ಸೇವಿಸು."

ಅಮ್ಮಿತ ಅದಕ್ಕೂ ಯಾಜ್ಞಿಕನಿಗೆ ತಲೆಯಾಡಿಸಿದಂತೆಯೇ ತಲೆಯಾಡಿಸಿ ಮನೆಯ ಮುಂಭಾಗಕ್ಕೆ ಹೋದ.

"ಯಾವುದೋ ಅನುಬಂಧದಿಂದ ಲಭ್ಯವಾಗಿರುವ ಈ ಪವಿತ್ರ ಬ್ರಾಹ್ಮಣನಿಗಿಂತಲೂ ಈಗ ಸಿಕ್ಕಿ ಬಿದ್ದಿರುವ ಒಬ್ಬ ತಸ್ಕರ, ಚೋರ ನಿನಗೆ ಬಂಧುವಾದನೇ?" ಯಾಜ್ಞಿಕ ಯಾಚಿಸುವಂತೆ ಕೇಳಿದ.

"ನಿನ್ನ ಬ್ರಾಹ್ಮಣ್ಯದ ಪಾವಿತ್ರ್ಯತೆಯು ನಿನ್ನ ಯಾರೊಡನೆಯಾದರೂ ಬಂಧುವಾಗಲು ಬಿಡುವುದೇ?" ಎಂದು ಕೇಳಿದ ಶಂಬರ.

ಯಾಜ್ಞಿಕ ಮಾತನಾಡಲಿಲ್ಲ. ಅವನು ತೀರಾ ಗಂಭೀರನಾದ. ಅಂತರ್ಮುಖಿಯಾದ. ಶಂಬರನ ಮಾತುಗಳು ಅವನನ್ನು ಗಂಭೀರ ಚಿಂತನೆಗೆ ಒಳ ಮಾಡಿದವು.

ಮನೆಯೊಳಗೆ ದೀಪಗಳನ್ನು ಹೊತ್ತಿಸಿದ ಶಂಬರ, ಹೊರಗೆ ಊಟ ಮಾಡುತ್ತಿದ್ದ ಅಮ್ಮಿತನ ಕಡೆಗೆ ದೀಪವೊಂದನ್ನು ಹಿಡಿದು ಬಂದ.

ಕುಕ್ಕರಗಾಲಿನಲ್ಲಿ ಕುಳಿತು ಊಟ ಮಾಡುತ್ತಿದ್ದ ಅಮ್ಮಿತ ಕೂಡಲೇ ಮೇಲೆದ್ದು ನಿಂತ.

"ನಿನ್ನ ಅಂಡನ್ನು ತಳಕ್ಕಿಟ್ಟೇ ಕುಳಿತಿಕೋ. ಯಾವುದೇ ಸಮಯದಲ್ಲಿ ಎದ್ದು ಓಡಲು ಸಿದ್ಧವಾಗಿರುವಂತೆ ಕುಳಿತುಕೊಳ್ಳಬೇಡ. ಆ ಚರ್ಮಾಸನವನ್ನು ಉಪಯೋಗಿಸು." ಶಂಬರ ತಮಗೆಂದು ಹಾಸಿಕೊಂಡಿದ್ದ ಜಿಂಕೆಯ ಚರ್ಮವನ್ನು ತೋರಿದ.

ಅಮ್ಮಿತ ಚರ್ಮಾಸನದ ಮೇಲೆ ಕುಳಿತುಕೊಳ್ಳದಿದ್ದರೂ ನೆಲದ ಮೇಲೆಯೇ ತನ್ನ ಅಂಡನ್ನು ತಳಕ್ಕಿಟ್ಟ.

"ನಾನು ನಿಮ್ಮನ್ನು ಏನೆಂದು ಕರೆಯಲಿ?"

ತನ್ನ ಹೆಸರನ್ನು ಹೇಳಲು ಹೋದ ಶಂಬರ, ತಾನು ಯಾಜ್ಞಿಕನಿಗೆ ಹೆಸರು ಹೇಳದೇ ಇರುವುದು ನೆನಪಿಗೆ ಬಂತು. "ನಿನಗೆ ಇಷ್ಟವಾದ ರೀತಿಯಲ್ಲಿ ನನ್ನ ಕರೆಯಬಹುದು." ಎಂದ ಶಂಬರ.

ಒಂದು ಚೂರೂ ತಡಮಾಡದೇ, "ಅಗ್ರಜನೆಂದು ಕರೆಯುತ್ತೇನೆ." ಎಂದ ಅಮ್ಮಿತ.

ಸಂತೋಷಗೊಂಡ ಶಂಬರ, "ಹಾಗಿದ್ದರೆ, ನಾನು ನಿನ್ನ ಅನುಜನೆಂದು ಕರೆಯುತ್ತೇನೆ." ಎಂದು ಕುಳಿತುಕೊಂಡೇ ಅಮ್ಮಿತನನ್ನು ಆಲಂಗಿಸಿದ. ಅವನ ಅಪ್ಪುಗೆಗೆ ಸಿಕ್ಕ ಅಮ್ಮಿತ ಒಮ್ಮಿಂದೊಮ್ಮೆಲೇ ಜೋರಾಗಿ ಅಳತೊಡಗಿದ.

"ಅಯ್ಯೋ, ಹಲ್ಲುಗಳನ್ನು ತೋರಿಸಿ ಅವಿಮುಕ್ತದ ಮಾರುಕಟ್ಟೆಯಲ್ಲಿ ಮಾರಾಟವಾದ ದಾಸನಿಗೆ ಅನುಜಾ ಎಂದು ಕರೆಯುವ ಅಗ್ರಜನು ಬಯಸದೆಯೇ ಸಿಕ್ಕಿದನೆಂದರೆ ಅದು ಎಂತಹ ಭಾಗ್ಯ? ಕಳುವು ತಪ್ಪೆಂದು

ನಾನು ಇಂದು ಕದಿಯಲು ಬಾರದೇ ಇದ್ದಿದ್ದರೆ, ಹಾಗೆ ಬಂದು ನನ್ನ ಕಳ್ಳತನ ವಿಫಲವಾಗದೇ ಹೋಗಿ, ನಿಮ್ಮ ಕೈಯಲ್ಲಿ ಸಿಕ್ಕಿ ಬೀಳದಿದ್ದರೆ ನನ್ನ ಅದೃಷ್ಟದ ಬೀಜ ವೈಶ್ಯನೊಬ್ಬನ ಚರ್ಮದ ಚೀಲದಲ್ಲಿಯೇ ಇರುತ್ತಿತ್ತು."

ಅಗ್ರಜ ಮತ್ತು ಅನುಜರ ಸಂಭಾಷಣೆಯನ್ನು ಕೇಳುತ್ತಾ ಯಾಜ್ಞಿಕ ಒಳಗೆಯೇ ಕುಳಿತಿದ್ದ.

ಅಮ್ಮಿತನನ್ನು ತಬ್ಬಿಕೊಂಡಾಗ ಶಂಬರನಿಗೆ ಆನಂದವಾಯಿತು. ಇದುವರೆಗೂ ಅವನು ತನ್ನ ತಾಯಿಯನ್ನು ಮತ್ತು ಕೆಲವೊಮ್ಮೆ ಕರುಗಳನ್ನು ಬಿಟ್ಟರೆ ಇನ್ನಾರನ್ನೂ ತಬ್ಬಿಕೊಂಡಿರಲಿಲ್ಲ. ಅಮ್ಮಿತನನ್ನು ತಬ್ಬಿಕೊಂಡಾಗ ಮೈ ಬಿಸಿಯಾಗುವುದರೊಂದಿಗೆ, ಕಣ್ಣಿಂದ ಬೆಚ್ಚಗಿನ ನೀರು ಬಳಬಳನೆ ಉಕ್ಕಿತ್ತು.

ಊಟವಾದ ಕೆಲವು ಸಮಯದ ಬಳಿಕ ಅಗ್ರಜ ಮತ್ತು ಅನುಜರು ಮನೆಯೊಳಗೆ ಪ್ರವೇಶಿಸಿದಾಗ ಯಾಜ್ಞಿಕ ನೆಲದ ಮೇಲೆ ತನ್ನ ಉಪವಸ್ತ್ರವನ್ನೇ ಹಾಸಿಕೊಂಡು, ತೋಳನ್ನೇ ದಿಂಬಾಗಿಸಿಕೊಂಡು ಮಲಗಿ ನಿದ್ರಿಸಿಬಿಟ್ಟಿದ್ದ.

ಬೆಳಗ್ಗೆ ಶಂಬರ ಮತ್ತು ಅಮ್ಮಿತರು ಮೇಲೆದ್ದಾಗ ಯಾಜ್ಞಿಕ ಸುವಾಸ್ತುವಿನಲ್ಲಿ ಇರಲಿಲ್ಲ.

## ಅಧ್ಯಾಯ : 4 ಐಂ ಈಂ ಓಂ ಲಿಂಗ

ಶಂಬರ ಅಮ್ಮಿತನನ್ನು ತನ್ನ ಕಿರಿಯ ಸೋದರನಂತೇ ಕಂಡರೂ, ಅಮ್ಮಿತನು ಶಂಬರನನ್ನು ಹಿರಿಯಣ್ಣ ಎಂದೇ ಕರೆದರೂ, ಅವನಲ್ಲಿ ಒಡೆಯನ ಕಂಡರೆ ಇರಬಹುದಾದ ಭಯ ಮತ್ತು ಭಕ್ತಿ ಇತ್ತು. ಆದರೆ ಅದು ಪ್ರೀತಿಯಿಂದ ಉಂಟಾಗಿರುವುದು ಎಂಬುದು ಮಾತ್ರ ಸ್ಫುಟ ಮತ್ತು ದಿಟ.

ದೈಹಿಕವಾಗಿ ಬಲಿಷ್ಠನಾಗಿದ್ದ ಅಮ್ಮಿತ, ಶಂಬರನಿಗೆ ಕೆಲಸಗಳಲ್ಲಿ ಉತ್ತಮವಾಗಿ ನೆರವಾಗುತ್ತಿದ್ದ. ಹೀಗಾಗಿ ಶಂಬರನಿಗೆ ಹೆಚ್ಚು ಬಿಡುವು ಸಿಗುತ್ತಿತ್ತು. ತಾಳೆಯ ಮರದಿಂದ ಕಳ್ಳನ್ನು ಇಳಿಸಲು ಬಲ್ಲವನಾಗಿದ್ದ ಅಮ್ಮಿತ ಗಡಿಗೆಗಟ್ಟಲೆ ಮದ್ಯವನ್ನು ಸೇರಿಸಿಟ್ಟ. ಈ ಹಿಂದೆ ಅಪರೂಪಕ್ಕೆ ಕುಡಿಯುತ್ತಿದ್ದ ಶಂಬರ ಈಗ ದಿನವೂ ಅಮ್ಮಿತನ ಜೊತೆ ಕುಳಿತು, ಮನೆಯ ಮುಂದೆ ಬೆಂಕಿಯನ್ನು ಹಾಕಿಕೊಂಡು, ಅದರಲ್ಲಿ ಮಾಂಸವನ್ನು ಸುಟ್ಟುಕೊಂಡು ಕಳ್ಳು ಕುಡಿಯುತ್ತಿದ್ದ. ಇಬ್ಬರೂ ಚೆನ್ನಾಗಿ ಕುಡಿದಾದ ಮೇಲೆ ಮನಸೋಯಿಚ್ಛೆ ಕುಣಿಯುತ್ತಿದ್ದರು.

ಅಮ್ಮಿತನೂ ಆರ್ಯರ ದ್ವೇಷಿಯಾಗಿದ್ದ. "ಬ್ರಹ್ಮಾವರ್ತದ ಕಡೆಗೆ ಬಂದ ಅಲೆಮಾರಿ ಆರ್ಯರು ನಮ್ಮ ಪೂರ್ವಿಕರನ್ನೆಲ್ಲಾ ಸೋಲಿಸಿದರು. ಅಲೆದುಕೊಂಡು ಬೇಟೆಯಾಡಿಕೊಂಡಿದ್ದ ಆರ್ಯರು ನಮ್ಮ ಪ್ರದೇಶಕ್ಕೇ ಬಂದು ನಮ್ಮನ್ನೇ ಆಳಲು ಯತ್ನಿಸುತ್ತಾರೆ. ಅವರನ್ನು ಹಾಗೆ ಬಿಡಕೂಡದು." ಎಂದು ಹೇಳುವ ಅಮ್ಮಿತನಿಗೆ ಯಾದವರ ಕೃಷ್ಣನ ಕಂಡರೆ ಪ್ರೀತಿ.

"ಇಂದ್ರ ದಸ್ಯುಗಳ ಶತ್ರು. ದಸ್ಯುಹಂತ. ಪುರಂದರ! ನಮ್ಮ ಪೂರ್ವಿಕರು ಕಟ್ಟುಕೊಂಡಿದ್ದ ಕೋಟೆಗಳನ್ನೆಲ್ಲಾ ಆಗಿನ ಇಂದ್ರ ಧ್ವಂಸ ಮಾಡಿದ್ದನಂತೆ. ಇಂದ್ರನಾಗುವವರೆಲ್ಲಾ ನೀತಿ ಇಲ್ಲದವರು. ಸೋಮರಸ

ಕುಡಿದುಕೊಂಡು ಅಧಿಕಾರಕ್ಕೆ ಆಸೆ ಪಡುವವರು. ಅಂಶುಮತಿ ದಂಡೆಯ ಮೇಲೆ ಹತ್ತು ಸಾವಿರ ಪುರುಷರೊಡನೆ ಕೃಷ್ಣ; ಆರ್ಯರ, ದೇವತೆಗಳ ರಾಜನಾದ ಇಂದ್ರನನ್ನು ಎದುರಿಸಿದ. ಇಂದ್ರನು ಕೃಷ್ಣನನ್ನು ಎದುರಿಸಲು ಬೃಹಸ್ಪತಿಯನ್ನು, ಮರುತರನ್ನೆಲ್ಲಾ ಒಗ್ಗೂಡಿಸಿಕೊಂಡು ಬಂದಿದ್ದ. ಇವತ್ತು ಅವನೇ ನಮ್ಮ ಕೃಷ್ಣನ ಮುಂದೆ ಕೈ ಮುಗಿಯುತ್ತಾನೆ.

ಕೃಷ್ಣನ ತಂದೆ ನಂದ ನಿಮ್ಮಂತೆಯೇ ಗೋಪ. ಗೋಪಾಲರ ಹಬ್ಬದಲ್ಲಿ ಅವರು ಗೋವರ್ಧನ ಗಿರಿಗೆ ಆರಾಧನೆ ಸಲ್ಲಿಸಿ ಹಬ್ಬ ಮಾಡುವರು. ಆ ಗಿರಿಯಲ್ಲಿಯೇ ಅವರ ಗೋವುಗಳೆಲ್ಲಾ ಮೇಯುವುದು. ಅಂಥಾ ಸಮೃದ್ಧವಾದ ಮೇವನ್ನು ಕೊಟ್ಟು ಅವರ ಗೋ–ಸಂಪತ್ತನ್ನು ವರ್ಧಿಸುವ ಆ ಗೋವರ್ಧನ ಗಿರಿಗೆ ಇವರು ಹಬ್ಬ ಮಾಡುವರು. ಆ ಗೋವರ್ಧನಾರಾಧನೆ ಮಾಡುವ ಬದಲು ಆಗಿನ ಇಂದ್ರ ಯಜ್ಞ ಮಾಡಿ ತನಗೆ ಹವಿಸ್ಸನ್ನು ಸಲ್ಲಿಸಬೇಕೆಂದು ಅಪ್ಪಣೆ ಮಾಡಿದ.

ಅಗ್ರಜಾ, ಈ ಆರ್ಯರ ದೇವತೆಗಳಿಗೆ ಯಜ್ಞ ಮಾಡಿ ಹವಿಸ್ಸನ್ನು ನೀಡದೇ ಹೋದರೆ ಶಕ್ತಿಯಿರುವುದಿಲ್ಲ. ಯಜ್ಞದಿಂದಲೇ ಶಕ್ತಿ. ಹಾಗಿದ್ದರೂ ಪೊಗರು. ಅಧಿಕಾರದಲ್ಲಿ ತಿರಿದು ತಿನ್ನುವವರು.

ನಂದ ಗೋಪನು ಇಂದ್ರನಿಗೆ ಎದುರುಹಾಕಿಕೊಂಡರೆ ಕಷ್ಟವೆಂದು ಒಪ್ಪಿಕೊಂಡನಂತೆ. ಆದರೆ, ನಮ್ಮ ಕೃಷ್ಣ ಅದಕ್ಕೆ ಒಪ್ಪಲಿಲ್ಲ. ನಾವು, ಯಾದವ ಬುಡಕಟ್ಟಿನವರಂತೆ ನಮ್ಮ ಗೋವುಗಳನ್ನು ವೃದ್ಧಿಸುತ್ತಿರುವ ಗೋವರ್ಧನ ಗಿರಿಗೇ ವಂದನೆ ಸಲ್ಲಿಸೋಣ. ಅಲ್ಲಿಯೇ ಹಬ್ಬ ಮಾಡೋಣ ಎಂದು ಗೋವರ್ಧನಗಿರಿಯಲ್ಲಿಯೇ ಹಬ್ಬ ಮಾಡಿದರಂತೆ.

ಇಂದ್ರ ಮಳೆಯ ದೇವರಂತೆ, ಭಯಂಕರವಾಗಿ ಮಳೆ ಸುರಿದಂತೆ ತನ್ನ ಮರುತರನ್ನು, ಸುರರ ಸೈನ್ಯವನ್ನು ತಂದು ಅವರ ಮೇಲೆ ಧಾಳಿ ಮಾಡಿದನಂತೆ. ಆಗ ಕೃಷ್ಣ, ಎಲ್ಲಾ ಹೆಂಗಸರನ್ನು, ಮಕ್ಕಳು ಮರಿಗಳನ್ನು, ಹಿರಿಯರನ್ನು; ಇಡೀ ನಂದಗೋಕುಲವನ್ನು ಗೋವರ್ಧನಗಿರಿಯ ಗವಿಗಳಲ್ಲಿ ಅವಿಸಿಟ್ಟು ಅಂಶುಮತಿ ದಂಡೆಯ ಮೇಲೆ ತನ್ನ ಹತ್ತು ಸಾವಿರ ಸ್ನೇಹಿತರೊಡನೆ ಇಂದ್ರನ ಸೋಲಿಸಿದ. ವಾರಗಟ್ಟಲೆ ಯುದ್ಧ ನಡೆದರೂ, ಗೋವರ್ಧನ ಗಿರಿಯ ಗುಹೆಗಳಲ್ಲಿ, ಕಣಿವೆಯಲ್ಲಿ ಏನೂ ತೊಂದರೆಯಾಗದಂತೆ ತನ್ನ ಜನರೆಲ್ಲರನ್ನೂ ನೋಡಿಕೊಳ್ಳಲು ಕೃಷ್ಣ ವ್ಯವಸ್ಥೆ ಮಾಡಿದ್ದನಂತೆ." ತನಗೆ ತಿಳಿದಿದ್ದ ವಿಚಾರವನ್ನು ತಿಳಿಸಿದ ಅಮ್ಮಿತ ನಿಡುದಾಗಿ ಉಸಿರುಬಿಟ್ಟ.

ನಂತರ ನಿಧಾನವಾಗಿ, "ಈ ಆರ್ಯರ ದೇವತೆಗಳು, ಈ ಕೃಷ್ಣನನ್ನೂ ದೇವರು ಎಂದು ಮಾಡಿಕೊಂಡು ಅವನನ್ನು ತಣ್ಣಗೆ ಮಾಡಿಬಿಟ್ಟಿದ್ದಾರೆ. ಅವನೂ ಅವರಂತೆ ಕಿರೀಟ ಧರಿಸಿಕೊಂಡು, ಮಾಲೆಗಳನ್ನು ಹಾಕಿಕೊಂಡು, ರಥದಲ್ಲಿ ಓಡಾಡುತ್ತಾ; ಈಗ ಅವರದೇನಾದರೂ ಸಮಸ್ಯೆಗಳು ಬಂದರೆ ತಾನೇ ಸಂಧಾನಕ್ಕೆಲ್ಲಾ ಓಡಾಡುತ್ತಿರುತ್ತಾನೆ. ಈ ಹಾಳಾದ ಆರ್ಯರ ಬ್ರಾಹ್ಮಣರು ಅದೇನೋ ಮೋಡಿ ಮಾಡಿ, ಶಕ್ತಿಶಾಲಿಗಳಾಗಿರುವ ನಮ್ಮವರನ್ನೆಲ್ಲಾ ದೈವತ್ವದ ಆಸೆ ತೋರಿಸಿ ತಮ್ಮ ಕಡೆಗೇ ಮಾಡಿಕೊಂಡುಬಿಡುತ್ತಾರೆ. ಇಲ್ಲವಾದರೆ, ಆರ್ಯರ ದ್ವೇಷಿ ಕೃಷ್ಣ ಅವರ ಪರವಾಗೆಲ್ಲಾ ಸಂಧಾನ ಮಾಡಲು ಓಡಾಡುತ್ತಿದ್ದನೇ?"

ಕೃಷ್ಣನ ಹೆಸರನ್ನಷ್ಟೇ ಕೇಳಿದ್ದ ಶಂಬರ ಮೌನವಾಗಿ ಎಲ್ಲವನ್ನೂ ಕೇಳಿದ.

"ಈ ಆರ್ಯರನ್ನು, ಬ್ರಾಹ್ಮಣರನ್ನು, ದೇವತೆಗಳನ್ನು ಕಂಡರೇನೇ ಆಗದ ನಮ್ಮ ನಿಷಾದರ ರುದ್ರನೂ ದೇವತೆಗಳನ್ನು ಸುಮ್ಮನೆ ಬಿಟ್ಟನೆಂದರೆ ಏನು ಮಾಡುವುದು?"

"ರುದ್ರ ಯಾರು?" ಶಂಬರ ಕೇಳಿದ.

"ಬೇಡರ ಕುಲದ ನಮ್ಮ ರುದ್ರ ಹಿಮಪ್ರದೇಶ ತ್ರಿಬಿಸ್ಪಪದಿಂದ ಬಂದವನು. ಅವರು ಬೇಟೆಗಾರರು. ನಿಷಾದರು. ಆದರೆ, ಇತರ ನಿಷಾದರಂತಲ್ಲ. ಅವರ ವಿಚಾರಗಳು ಆಚಾರಗಳೇ ಬೇರೆ. ಅವರು ಯಾರಿಗೂ ಮಣಿಯುವವರಲ್ಲ. ಅವರದೇ ಧ್ಯಾನದ ತಂತ್ರಗಳಿವೆ. ಸ್ಮಶಾನದಲ್ಲಿ ಮಲಗುತ್ತಾರೆ. ಹೆಣವನ್ನು ಎಬ್ಬಿಸುತ್ತಾರೆ. ಸ್ಮಶಾನದಲ್ಲಿ ಸಿಗುವ ಕಪಾಲಗಳಲ್ಲಿ ಉಣ್ಣುತ್ತಾರೆ. ಹಸಿ ಮಾಂಸ ತಿನ್ನುತ್ತಾರೆ, ಹಸಿ ರಕ್ತ ಕುಡಿಯುತ್ತಾರೆ. ಮದ್ಯ ಕುಡಿಯುತ್ತಾರೆ. ಅವರ ಕೂದಲು ಬಾಚದೇ ಜಟೆಗಟ್ಟಿರುತ್ತದೆ. ಒಪ್ಪಿದ ಹೆಂಗಸಿನ ಜೊತೆಗೆಲ್ಲಾ ಸಂಭೋಗ ಮಾಡುತ್ತಾರೆ. ಬೀಜ ಬಿಡುಗಡೆ ಮಾಡದೇ, ಆ ವೀರ್ಯದ ಶಕ್ತಿಯನ್ನು ಮಹಾಶಕ್ತಿಯನ್ನಾಗಿ ಮಾಡಿಕೊಳ್ಳುತ್ತಾರೆ. ಬೇಕಾದಷ್ಟು ಹೆಂಗಸರನ್ನು ಅವರು ಸಂಭೋಗಿಸುತ್ತಾರೆ. ಆದರೂ, ಅವರಿಗೆ ಆಯಾಸವೇ ಆಗುವುದಿಲ್ಲ, ಬೀಜವನ್ನೂ ಬಿಡುವುದಿಲ್ಲ. ವಿಷದ ಸರ್ಪಗಳೂ ಅವರನ್ನು ಏನು ಮಾಡುವುದಿಲ್ಲ. ವಿಷ ಕುಡಿದರೂ ಅವರಿಗೇನೂ ಆಗುವುದಿಲ್ಲ. ಅಂಥವನು ರುದ್ರ. ಅವನ ಗಣಕ್ಕೆ ರುದ್ರಗಣವೆಂದೇ ಕರೆಯುವುದು. ಅವನೂ ಪಶುಪತಿ. ಅವನ ನೇಮ-ನಿಯಮಗಳೆಲ್ಲಾ ಆರ್ಯರಿಗೆ ವಿರುದ್ಧ. ಬರಿಯ ತನ್ನ ಶಿಶ್ನದಿಂದಲೇ ಈ ಆರ್ಯರ, ದೇವತೆಗಳ ಗರ್ವ ಮುರಿದ. ಅವನ ಶಿಶ್ನದ ಮುಂದೆ ಈ ಆರ್ಯರು ಮೊಣಕಾಲೂರಿದರು.

ಅಂತಹ ರುದ್ರನಿಗೆ ಈ ಆರ್ಯರ ದೇವತೆಗಳು ಮೆಲ್ಲನೆ ಸೋಗಲಾಡಿತನ ಮಾಡುತ್ತಾ ತಮ್ಮ ಕಡೆಯವನಾದ ಗಿರಿರಾಜನ ಮಗಳನ್ನು ಮದುವೆ ಮಾಡಿಸಿ ಕಟ್ಟಿ ಹಾಕಿಬಿಟ್ಟಿದ್ದಾರೆ. ಅವನಿಗೂ ದೈವತ್ವದ ಪಟ್ಟ ಕೊಟ್ಟು ಸುಮ್ಮನಾಗಿಸಿಬಿಟ್ಟಿದ್ದಾರೆ." ಎಂದ ಅಮ್ಮಿತ.

"ಅವತ್ತು ಯಾಜ್ಞಿಕ ನಿಮ್ಮನ್ನು ಶಿಶ್ನಾರಾಧಕ ಎಂದು ಕರೆದನಲ್ಲವೇ?" ಎಂದು ಶಂಬರ ನೆನಪಿಸಿಕೊಂಡು ಕೇಳಿದ.

"ಹೌದು, ನಾವು ದಸ್ಯುಗಳು ಅವನ ಶಿಶ್ನವನ್ನು ಗೌರವಿಸುತ್ತೇವೆ. ಆರಾಧಿಸುತ್ತೇವೆ. ಅದೇ ಅಲ್ಲವೇ ಆ ದುಷ್ಟ ಆರ್ಯರ ಅಹಂಕಾರ ಮುರಿದಿದ್ದು?"

"ಹೇಗೆ?"

"ಈ ಆರ್ಯರ ಪ್ರಜಾಪತಿ ಬ್ರಹ್ಮನ ಮಗ ದಕ್ಷ. ಅವನಿಗೆ ಎಪ್ಪೊಂದು ಜನ ಹೆಣ್ಣು ಮಕ್ಕಳು. ಅವನ ಹದಿಮೂರು ಜನ ಹೆಣ್ಣು ಮಕ್ಕಳನ್ನು ಕಚ್ಛಪ ಗಣದ ಕಶ್ಯಪನೇ ಮದುವೆಯಾದ. ಅವರಿಂದ ಹುಟ್ಟಿದ ಮಕ್ಕಳನ್ನೆಲ್ಲಾ ದೇವ, ದೈತ್ಯ, ಮಾನವ, ಪಶು, ಸರ್ಪ ಗಣಗಳಿಗೆಲ್ಲಾ ಒಡೆಯರನ್ನಾಗಿ ಮಾಡಿದ.

ಆದರೆ, ಈ ದಕ್ಷನಿಗೆ ರುದ್ರಗಣದ ಮೇಲೆ ಅಧಿಕಾರ ಸಾಧಿಸಲು ಆಗಲಿಲ್ಲ. ರುದ್ರ ಯಾವಾಗಲೂ ಇವರ ವಿರುದ್ಧವೇ ಇದ್ದ. ಈ ದಕ್ಷನಿಗೆ ಒಬ್ಬಳು ಮಗಳಿದ್ದಳು. ಅವಳ ಹೆಸರು ಸತಿ ಎಂದು. ಅವಳು ಈ ರುದ್ರನ ಬಗ್ಗೆ ತಿಳಿದು, ಅವನ ಇರುವ ರೀತಿಗೇ ಅವಳು ಮಾರುಹೋದಳು. ಹೇ, ಅಗ್ರಜಾ, ಗಂಡಸೆಂದರೆ ಅವನು ರುದ್ರ. ಅವನ ನಿಜವಾದ ಪುರುಷತ್ವಕ್ಕೆ ಯಾವ ಹೆಣ್ಣೇ ಆಗಲಿ ಶರಣಾಗುವುದಿಲ್ಲ? ಈ ರುದ್ರನ ಪ್ರೀತಿಸಿ ಅವನ ಹಿಂದೆ ಬಿದ್ದು, ತಂದೆಯ ವಿರೋಧ ಕಟ್ಟಿಕೊಂಡು ಅವನ ಮದುವೆಯಾಗಿಬಿಟ್ಟಳು.

ಹಿಮಾಲಯದ ಆಚೆ ಕುಬೇರನ ಕಾಂಚನಪುರಿಯನ್ನು, ಇಂದ್ರನ ಅಲಕಾಪುರಿಯನ್ನು ದಾಟಿಕೊಂಡು ಹೋದರೆ, ನಾಗಲೋಕ! ಈ ನಾಗಲೋಕವನ್ನು ನಮ್ಮ ರುದ್ರ ಅಧೀನದಲ್ಲಿ ಇಟ್ಟುಕೊಂಡಿದ್ದಾನೆ. ಆ

ನಾಗಲೋಕದ ಮಧ್ಯೆಯೇ ಕೈಲಾಸ ಪರ್ವತ ಇದೆ. ಅಲ್ಲಿಯೇ ಇವನು ವಾಸ ಇರುವುದು. ಈ ಸತಿ ಇವನನ್ನು ಮದುವೆಯಾಗಿ ಕೈಲಾಸಕ್ಕೆ ಬಂದುಬಿಟ್ಟಳು.

ದಕ್ಷ ದೇವತೆಗಳ ಜೊತೆಗೆ ರುದ್ರನ ಮೇಲೆ ದಂಡೆತ್ತಿ ಹೋಗಿದ್ದ. ರುದ್ರನ ಗಣದ ಜೊತೆ ಇಡೀ ನಾಗಲೋಕ, ಬೇತಾಳಗಣ, ಪ್ರಮಥಗಣ ಇವರೆಲ್ಲಾ ಸೇರಿಕೊಂಡು ದಕ್ಷನನ್ನೂ, ಇಂದ್ರನನ್ನೂ ಸೋಲಿಸಿ ಕಳುಹಿಸಿಬಿಟ್ಟರು. ಅದಾದ ಮೇಲೆ ದಕ್ಷನ ಅಪ್ಪ ಬ್ರಹ್ಮ, ಇಂದ್ರ ಮತ್ತು ಮರುತರೆಲ್ಲಾ ಸೇರಿ ರುದ್ರನ ಬಳಿ ಸಂಧಾನಕ್ಕೆಂದು ಹೋದರು. ಹಾಗೆ ಹೋಗಿರದಿದ್ದರೆ, ಈ ನಿಷಾದರು ಆ ಆರ್ಯರನ್ನು ಬೇರು ಸಮೇತ ಕಿತ್ತು ಬ್ರಹ್ಮಾವರ್ತದ ಆಚೆಗೆ ಬಿಸಾಡಿಬಿಡುತ್ತಿದ್ದರು. ರುದ್ರನಿಗೂ ದೈವತ್ವದ ಪಟ್ಟ ಕೊಟ್ಟು ತಮ್ಮ ಕಡೆಗೆಂದು ಮಾಡಿಕೊಂಡರು. ಈ ರುದ್ರನಿಗೆ ಇವರ ದೈವೀಪಟ್ಟದ ಮೇಲೆ ಏನೂ ಆಸೆಯಿಲ್ಲ. ಅವನ ಪಾಡಿಗೆ ಅವನು ತನ್ನ ತಂತ್ರ ಸಾಧನೆಗಳನ್ನು ಮಾಡಿಕೊಂಡು ಸ್ಮಶಾನದಲ್ಲಿ ಅಲೆದುಕೊಂಡು ಇದ್ದ.

ಒಂದು ಸಲ ಈ ದಕ್ಷ ಒಂದು ದೊಡ್ಡ ಯಜ್ಞ ಮಾಡಿ, ರುದ್ರನನ್ನು ಮತ್ತು ಅವನ ಮಗಳು ಸತಿಯನ್ನು ಕರೆಯಲಿಲ್ಲ. ರುದ್ರ ಈ ಆರ್ಯ ಸಮಾಜದ ರೀತಿ ನೀತಿಗೇ ವಿರುದ್ಧವಾಗಿರುವವನು, ಅವರ ಹವಿಸ್ಸಿನ ಭಿಕ್ಷೆಗೆ ಕೈ ಒಡ್ಡುತ್ತಾನೆಯೇ? ಆದರೆ, ಅವನ ಹೆಂಡತಿ ಸತಿ ತಾನು ಅಲ್ಲಿಗೆ ಹೋಗಲೇ ಬೇಕು ಎಂದು ದಕ್ಷ ಮಾಡುತ್ತಿರುವ ಯಜ್ಞಕ್ಕೆ ಹೋದಳು. ಅಲ್ಲಿ ಬ್ರಹ್ಮ, ವಿಷ್ಣು ಮತ್ತು ಇತರ ದೇವರುಗಳಿಗೆಲ್ಲಾ ಹವಿಸ್ಸು ಕೊಟ್ಟು, ರುದ್ರನಿಗೆ ಕೊಡದೇ ಹೋದಾಗ, 'ತನ್ನ ಗಂಡ ರುದ್ರನಿಗೂ ಹವಿಸ್ಸು ಕೊಡಿ' ಎಂದು ಪ್ರತಿಭಟಿಸಿದಳು. ಆ ದಕ್ಷ ಇವಳಿಗೆ ಸಮಾಧಾನ ಮಾಡುವ ಬದಲು ನಮ್ಮ ರುದ್ರನನ್ನು ನಿಂದಿಸಿದ. ಅದಕ್ಕೆ ಅವಮಾನ ತಡೆಯಲಾಗದೇ ಸತಿ ಆ ಯಜ್ಞಕುಂಡದ ಬೆಂಕಿಗೇ ಬಿದ್ದು, ದಕ್ಷನ ಯಾಗವನ್ನು ನಾಶ ಮಾಡಿದಳು. ತಾನು ಸುಟ್ಟಗಾಯಗಳಿಂದ ಸತ್ತು ಹೋದಳು.

ರುದ್ರನಿಗೆ ವಿಷಯ ತಿಳಿದು, ತುಂಬಾ ಕೋಪ ಬಂದು, ಅವನ ರುದ್ರಗಣದಲ್ಲಿ ವೀರಭದ್ರ ಎಂಬುವನ ನಾಯಕತ್ವದಲ್ಲಿ ಮನಸೋಯಿಚ್ಛೆ ದಾಳಿ ಮಾಡಲು ಕಳುಹಿಸಿದ. ಮೊದಲೇ ನಿಷಾದರು, ವ್ಯಾಧರು ಎಲ್ಲಾ ಇರುವಂತ ಗಣ. ದಕ್ಷನ ಪರಿವಾರವನ್ನ, ಹವಿಸ್ಸಿನ ಎಂಜಲಾಸೆಗೆ ಬಾಯಿಬಿಟ್ಟುಕೊಂಡಿರುವ ದೇವತೆಗಳನ್ನೆಲ್ಲಾ ಬಗ್ಗು ಬಡಿದರು. ಅವರ ಮುಖಂಡರನ್ನೆಲ್ಲಾ ಕೊಲ್ಲುತ್ತಾ ಬಂದರು. ಆಗ ದಕ್ಷನ ಹೆಂಗಸರು ರುದ್ರಗಣದ ಮುಂದೆ ಬಿದ್ದು ತಮ್ಮನ್ನು ಉಳಿಸುವಂತೆ ಕೇಳಿಕೊಂಡರು. ಅವರ ದೇವಗಣದ ಎಲ್ಲಾ ಪದವಿಗಳನ್ನು ಕಿತ್ತುಕೊಂಡು, ಬದುಕಿಕೊಂಡಿರಲು ಅಜಗಣವೊಂದನ್ನು ಅವರಿಗೆ ಬಿಟ್ಟುಕೊಟ್ಟು ಇವರು ಇತ್ತ ಬಂದರು.

ರುದ್ರನಿಗೆ ಈ ದೇವತೆಗಳ, ಆರ್ಯರ ವ್ಯವಸ್ಥೆಯ ಮೇಲೆಯೇ ಅಸಹ್ಯವಾಗಿ, ಅವರ ತಂಟೆಯೇ ಬೇಡ ಎಂದು ಮೊದಲಿದ್ದ ಹಾಗೆ ಹಿಮಾಲಯದ ಅರಣ್ಯಗಳಲ್ಲಿ ತನ್ನ ತಾಂತ್ರಿಕ ಸಾಧನೆ ಮಾಡಿಕೊಂಡು ಇದ್ದ. ರುದ್ರ ಈ ಆರ್ಯರ ಮೇಲೆ ಮುನಿಸಿಕೊಂಡು ಹೊರಟುಹೋದ ಎಂದು ತಿಳಿದ ಮೇಲೆ, ರಾಕ್ಷಸರು ಈ ದೇವತೆಗಳಿಗೆ ಕಾಟ ಕೊಟ್ಟರು."

"ಈ ರಾಕ್ಷಸರು ಯಾರು?"

"ಅವರೇ ನಿಜವಾಗಿ ಈ ನೆಲದವರು. ಕಾಡುಗಳಲ್ಲಿ ಇದ್ದ ಅರಣ್ಯಕರು. ಕಾಡಿನ ರಕ್ಷಕರು. ನಾಡಿನ ಗಡಿಗಳಲ್ಲಿರುವ ಈ ಕಾಡುಗಳಲ್ಲಿ ತಮ್ಮ ಪಾಡಿಗೆ ತಾವು ಇದ್ದ ಬುಡಕಟ್ಟಿನ ಜನ. ಇವರ ಜೊತೆ ರಾಜರುಗಳೂ ಚೆನ್ನಾಗಿರುತ್ತಿದ್ದರು. ಈ ಆರ್ಯರು ಬಂದು ಈ ಇಬ್ಬರ ಸಂಬಂಧವನ್ನು ಹಾಳು

ಮಾಡಿದರು. ಯಜ್ಞ ಮಾಡಿ ನಿಮಗೆ ವಿಶೇಷವಾದ ಶಕ್ತಿ ಕೊಡ್ತೀವಿ ಅಂತ ಈ ವೈದಿಕ ಬ್ರಾಹ್ಮಣರೆಲ್ಲಾ ಸೇರಿಕೊಂಡು ಅದೇನೇನೋ ಮಂತ್ರಗಳನ್ನು ಹೇಳಿ ಇವರಲ್ಲಿ ಭ್ರಮೆ ಹುಟ್ಟಿಸಿಬಿಡುತ್ತಿದ್ದರು. ಇವರ ಬಿಳಿಯ ಚರ್ಮಕ್ಕೆ, ನವುರು ಮಾತಿಗೆ, ನಾಜೂಕು ನಡವಳಿಕೆಗಳಿಗೆ ಈ ರಾಜಪರಿವಾರದವರು ಮರುಳಾಗಿಬಿಡುತ್ತಿದ್ದರು. ಪಟ್ಟಾಭಿಷೇಕದ ಸಮಯದಲ್ಲಿ, ಅಥವಾ ಇತರ ಸಮಯಗಳಲ್ಲಿ ಈ ಪುರೋಹಿತರು ದೇವತೆಗಳನ್ನು ಆಹ್ವಾನಿಸಿ ತಮ್ಮ ಶಕ್ತಿ, ಸಾಮರ್ಥ್ಯಗಳನ್ನು ಧಾರೆ ಎರೆಯುತ್ತಾರೆ ಅಂತ ನಂಬಿಕೊಂಡು ಈ ರಾಜರು ಈ ಆಶೆಬುರುಕ ಪುರೋಹಿತರು ಹೇಳುವುದನ್ನೆಲ್ಲಾ ಕೇಳುತ್ತಿದ್ದರು. ಈ ರಾಜರು ಪುರೋಹಿತರ ರಕ್ಷಕರಾಗಿ ತಮ್ಮದೇ ಜನಗಳ ಭಕ್ಷಕರಾಗಿಬಿಟ್ಟಿದ್ದರು.

ಈ ಪುರೋಹಿತರಿಗೆ, ಆರ್ಯರಿಗೆ ಕೃಷಿ ಮಾಡಲು, ನೆಲೆ ಮಾಡಿಕೊಳ್ಳಲು ರಾಜರು ಕಾಡನ್ನು ಸುಟ್ಟು ಸ್ಥಳಾವಕಾಶ ಮಾಡಿಕೊಡುತ್ತಿದ್ದರು. ಇದರಿಂದಾಗಿ ಮೊದಲಿಂದಲೂ ಅಲ್ಲಿ ವಾಸ ಇದ್ದ ರಾಕ್ಷಸರಿಗೆ ತುಂಬಾ ತೊಂದರೆಯಾಗುತ್ತಿತ್ತು. ತಮ್ಮ ತೊಂದರೆ ಹೇಳಲು ಹೋದರೆ, ರಾಜ ಕೇಳುತ್ತಿರಲಿಲ್ಲ. ಅದಕ್ಕೂ ಮೊದಲೇ ಈ ರಾಕ್ಷಸರ ಬಗ್ಗೆ ಕೆಟ್ಟದಾಗಿ ಈ ಪುರೋಹಿತರು ತಿಳಿಸಿರುತ್ತಿದ್ದರು. ಅದಕ್ಕೆ ತಮ್ಮ ಕೋಪ ತೋರಿಸಿಕೊಳ್ಳಲು, ಪ್ರತಿಭಟಿಸಲು ರಾಕ್ಷಸರು ಈ ಆರ್ಯರ ಮೇಲೆ, ಅವರ ಪುರೋಹಿತರ ಮೇಲೆ, ದೇವತೆಗಳ ಮೇಲೆ ದಾಳಿ ಮಾಡುತ್ತಾರೆ. ಈ ರಾಜರುಗಳು ಈ ರಾಕ್ಷಸರ ಮೇಲೆ ದಾಳಿ ಮಾಡುತ್ತಾರೆ.

ಇಲ್ಲಿ ಕೇಳು ಅಗ್ರಜಾ, ಸಾಕೇತದಲ್ಲಿ ರಾಮಚಂದ್ರ ಎಂತೊಬ್ಬ ರಘುವಂಶದ ರಾಜನಿದ್ದ. ಆತನ ತಂದೆಯ ಕಾಲದಿಂದಲೂ ಸಾಕೇತದ ಅರಸರು ಇಂದ್ರನ ಜೊತೆ ಸೇರಿಕೊಂಡು ಅವನಿಗೆ ಯುದ್ಧದಲ್ಲಿ ಸಹಾಯ ಮಾಡುತ್ತಿದ್ದರು. ಈ ರಾಜ, ಬಹಳ ಜನಪ್ರಿಯನಾದವನು. ಪುರೋಹಿತರ ಮಾತನ್ನು ಕೇಳಿಕೊಂಡು ಸ್ವರ್ಗದ ಆಕಾಂಕ್ಷಿಯಾಗಿ ತಪಸ್ಸು ಮಾಡಿದ ಶಂಬಕನೆಂಬ ಶೂದ್ರನನ್ನು, ರಾಜನಾದವನೇ ತನ್ನ ಕೈಗಳಿಂದ ಕತ್ತರಿಸಿ ಹಾಕಿಬಿಟ್ಟ. ಅವನು ಎಂತವನು ಗೊತ್ತೇ? ತನ್ನ ರಾಜ್ಯಭಾರದಲ್ಲಿ ಅವನೇ ತಾನು ಕಟ್ಟಿಕೊಂಡ ಹೆಂಡತಿ ಗರ್ಭಿಣಿಯಾಗಿದ್ದ ಸಮಯದಲ್ಲಿ ಕಾಡುಪಾಲು ಮಾಡಿದ. ಅವಳ ಬಗ್ಗೆ ಯಾರೋ ಕೆಟ್ಟ ದೃಷ್ಟಿಯಲ್ಲಿ ಮಾತಾಡಿಕೊಂಡರೆಂಬುದು ಕಾರಣ. ತನ್ನ ಹೆಂಡತಿಯ ಬಗ್ಗೆ ಲೋಕವೇ ಕೆಟ್ಟದಾಗಿ ಮಾತಾಡಿದರೂ, ಪಾಣಿಗ್ರಹಣ ಮಾಡಿರುವ ನನಗೆ ಆಕೆಯ ಸತ್ಯಾಸತ್ಯತೆ ಗೊತ್ತು ಎಂದು ಅವಳ ಪರವಾಗಿ ನಿಂತು ಮಾದರಿಯಾಗಬೇಕಿದ್ದವನು, ಸಾಮಾನ್ಯ ರೀತಿ ನೀತಿ ಪಾಲನೆ ಮಾಡುವವನೂ ಮಾಡದ ನಿರ್ದಯ ಕೃತ್ಯ ಮಾಡಿದ. ಅಂತಹ ಅಯೋಗ್ಯ ರಾಜ ಈಗಿನ ನಮ್ಮ ಎಷ್ಟೋ ರಾಜರಿಗೆ ಮಾದರಿ. ಇನ್ನು ನಮ್ಮ ರಾಜರುಗಳ ಯೋಗ್ಯತೆ ನೀನೇ ನಿರ್ಧರಿಸಿಕೋ.

ಹೂಂ, ಇಂಥಾ ರಾಜರುಗಳನ್ನು ಮರುಳು ಮಾಡುತ್ತಿರುವ ಪುರೋಹಿತರಿಗೆಲ್ಲಾ, ದೇವತೆಗಳಿಗೆಲ್ಲಾ ರಾಕ್ಷಸರು ಉಪಟಳ ಕೊಡತೊಡಗಿದರು. ರುದ್ರನ ಮೇಲಿನ ಗೌರವದಿಂದ ಆಕ್ರಮಣಗಳನ್ನು ಅಷ್ಟಾಗಿ ಮಾಡದಿದ್ದ ರಾಕ್ಷಸರು ಮತ್ತೆ ಎದ್ದರು. ಈ ಪ್ರತಿಭಟನೆಗಳನ್ನು ಸಹಿಸದೇ, ಈ ರುದ್ರನ ಹೇಗಾದರೂ ಮಾಡಿ ಮತ್ತೆ ತಮ್ಮ ಕಡೆಗೆ ಕರೆಯಿಸಿಕೊಳ್ಳಬೇಕೆಂದು, ಹಿಮಾಲಯದ ಅರಸನ ಜೊತೆ ಒಪ್ಪಂದ ಮಾಡಿಕೊಂಡು, ಅವನ ಮಗಳು ಪಾರ್ವತಿಯನ್ನು ರುದ್ರನ ಬಳಿ ಬಿಟ್ಟು, ಅವನ ಸಾಧನೆಗಳನ್ನು ಕೆಡಿಸಿ, ಮುಗ್ಧ ಸ್ವಭಾವದ ರುದ್ರನ ಮನಸ್ಸನ್ನು ಕೆಡಿಸಿ, ರಾಜಕೀಯದ ಮದುವೆ ಮಾಡಿದರು.

ಪಾರ್ವತಿಯೂ ಹಿಮಾಲಯದ ಅರಣ್ಯಕಳೇ. ನಮ್ಮ ಹಾಗೆ ಕಪ್ಪು ಹುಡುಗಿ. ಅವಳ ತಂದೆ ದೇವತೆಗಳ ರಾಜಕೀಯಕ್ಕೆ ಸಿಕ್ಕಿಬಿದ್ದ. ಸರಿ, ಮದುವೆಯಾದ ಮೇಲೆ ಅಲ್ಲಿಯೇ ಹಿಮಾಲಯದ ತಪ್ಪಲಲ್ಲಿ, ದಾರುಕಾವನದಲ್ಲಿ ರುದ್ರ ವಿಹಾರ ಮಾಡಿಕೊಂಡಿದ್ದ. ಅವನು ಯಾವಾಗಲೂ ಓಡಾಡಿಕೊಂಡಿರುವುದೇ

ಕೌಪಿನದಲ್ಲಿ. ಅವನ ಶಿಶ್ನವೆಂದರೆ ಊರ್ಧ್ವಲಿಂಗ. ಅದನ್ನು ಮೇಲಕ್ಕೆ ನಿಲ್ಲಿಸಿಕೊಂಡು ಸಿದ್ಧರು ಯೋಗಿಗಳ ನಡುವೆ ಕುಳಿತುಕೊಂಡು ಅದರ ಬಗ್ಗೆ ಏನೇನೋ ರಹಸ್ಯ ತಂತ್ರಗಳನ್ನು ಹೇಳುತ್ತಿರುತ್ತಾನೆ.

ಹಾಗೇ ಒಂದು ದಿನ, ದಾರುಕಾವನದ ನದಿಯಲ್ಲಿ ಸ್ನಾನ ಮಾಡಿಕೊಂಡು ರುದ್ರ ದಡಕ್ಕೆದ್ದು ಬರುವಾಗ, ಆರ್ಯ ಋಷಿಗಳ ಹೆಂಡತಿಯರು ನೋಡಿದರಂತೆ. ಈ ರುದ್ರನೂ ಅವರುಗಳನ್ನು ನೋಡುತ್ತಾ, ತನ್ನ ಶಿಶ್ನವನ್ನು ಉದ್ರಿಕ್ತಗೊಳಿಸಿಕೊಂಡನಂತೆ. ಅದೋ ಅವನ ಕೌಪಿನದಿಂದ ಹೊರಗಿಣುಕುತ್ತಿದ್ದು, ಋಷಿ ಪತ್ನಿಯರಿಗೆ ಮೋಹಕವಾಗಿದೆ. ಅವರೂ ರುದ್ರನ ಲಿಂಗವನ್ನು ನೋಡುತ್ತಾ, ಒಬ್ಬರಿಗೊಬ್ಬರು ತೋರಿಸಿಕೊಂಡು ನಿಂತಿದ್ದಾರೆ. ಆಗ ಅಲ್ಲಿಗೆ ಬಂದ ಆರ್ಯೋತ್ತಮರು ನಮ್ಮ ರುದ್ರನ ಊರ್ಧ್ವಲಿಂಗವನ್ನು ನೋಡಿ ಕೆರಳಿ, ಅಸಹ್ಯ ಎಂದು ತೆಗಳಿ, ತಮ್ಮ ಕೈಯಲ್ಲಿರುವ ದಂಡದಿಂದ ಅದಕ್ಕೇ ಹೊಡೆದುಬಿಟ್ಟರಂತೆ."

ಶಂಬರ ಜೋರಾಗಿ ನಕ್ಕ. ಅಮ್ಮಿತನೂ ನಗುತ್ತಾ ತಾನು ಹೇಳುವುದನ್ನು ಮುಂದುವರಿಸಿದ. "ನಮ್ಮ ರುದ್ರನಿಗೆ ಕೋಪ ಬಂದಿದೆ. ಅವನ ಸಮಸ್ತ ಗಣಪರಿವಾರಕ್ಕೆಲ್ಲಾ ಕೋಪ ಬಂದಿದೆ. ನಮ್ಮ ರುದ್ರನ ಲಿಂಗವನ್ನೇ ಅಸಹ್ಯವೆಂದಿರಾ ಎಂದು ತಾವು ತೊಡುವ ವಾವ್ರಿಗಳನ್ನು ಕಿತ್ತೊಗೆದು, ಒಳಗೆ ತೊಡುವ ನೀವಿಯನ್ನೂ ಕಿತ್ತೆಸೆದು ಆರ್ಯರ ಶಿಷ್ಟ ಸಮಾಜದಲ್ಲಿ ತಮ್ಮ ತಮ್ಮ ಲಿಂಗಗಳನ್ನು ತೋರಿಸಿಕೊಂಡು ಗಲಭೆ ಎಬ್ಬಿಸಿದರು. ಮೊದಲೇ ಒರಟರು, ಇನ್ನೂ ಏನೇನು ಮಾಡಿದರೋ ತಿಳಿಯದು. ರುದ್ರಗಣಗಳ ಅದ್ಭುತ, ಊಧ್ವಲಿಂಗಗಳನ್ನು ನೋಡಿ ಯಾವ್ಯಾವ ಆರ್ಯ ಸ್ತ್ರೀಯರು ತಮ್ಮ ಬಟ್ಟೆಗಳನ್ನು ಹರಿದುಕೊಂಡು ಅವರ ಮೇಲೆ ಬೀಳಲು ಇವರ ಶಿಷ್ಟ ಗೃಹಗಳನ್ನು ತೊರೆದು ಓಡಿದರೋ ತಿಳಿಯದು. ಒಟ್ಟಿನಲ್ಲಿ ಆರ್ಯರ ಲೋಕವೆಲ್ಲಾ ರುದ್ರಗಣದ ಲಿಂಗಮಯ."

ಶಂಬರ ಹೊಟ್ಟೆ ಹಿಡಿದುಕೊಂಡು ಹೊರಳಾಡುತ್ತಾ ನಗುತ್ತಿದ್ದ.

"ತರುವಾಯ ಪ್ರಜಾಪಿತ ಬ್ರಹ್ಮ, ಇಂದ್ರ ಈ ಎಲ್ಲರನ್ನೂ ಮುಂದಿಟ್ಟುಕೊಂಡು ಋಷಿಗಳೆಲ್ಲರೂ ರುದ್ರನ ಬಳಿಗೆ ಬಂದು ಕ್ಷಮಾಪಣೆ ಕೇಳಿದರು. ದಯಮಾಡಿ ಲಿಂಗಗಳನ್ನು ಒಳಗಿಟ್ಟುಕೊಳ್ಳಿ ಎಂದು ಪ್ರಾರ್ಥಿಸಿದರು. ತ್ರಿಮೂರ್ತಿಗಳಲ್ಲಿ ಒಬ್ಬನಾದ ತನ್ನ ಆರಾಧಿಸಲು ನನ್ನ ಲಿಂಗವನ್ನೇ ಸಂಕೇತವಾಗಿರಿಸಿಕೊಳ್ಳಿ ಎಂದು ರುದ್ರ ಆಜ್ಞಾಪಿಸಿದ. ಆಯಿತೆಂದು ದೇವತೆಗಳು ಮತ್ತು ಋಷಿಗಳು ಸಂಧಾನ ಮಾಡಿಕೊಂಡರು. ಅದೇ ರುದ್ರನ ಶಿಶ್ನವನ್ನು ಲಿಂಗಾಕಾರದಲ್ಲಿ ಎಲ್ಲರೂ ಪೂಜಿಸುವುದು. ಆರ್ಯರ ಅಹಂಕಾರ ಮುರಿದ ಆ ರುದ್ರನ ಶಿಶ್ನವನ್ನೇ ನಾವೂ ಆರಾಧಿಸುವುದು.

ಅಣ್ರಜಾ, ಆರ್ಯರ ಶಿಷ್ಟಾಚಾರದ ಅತಿರೇಕದ ಮೇಲೆ ಇದು ನಮ್ಮ ಅರಣ್ಯಕರ ವಿಜಯ. ನಮ್ಮ ನಿಷಾದ ನಾಯಕನ ಶಿಶ್ನದ ಮುಂದೆ ಅವರೆಲ್ಲಾ ಮೊಣಕಾಲೂರಬೇಕು. ಜಯಜಯ ಶಿವಲಿಂಗ, ಮಹಾಲಿಂಗ, ಐಂ ಲಿಂಗ, ಈಂ ಲಿಂಗ, ಓಂ ಲಿಂಗ ಎಂದು ಕೈ ಜೋಡಿಸಿ ಪ್ರಾರ್ಥನೆ ಮಾಡಬೇಕು." ಎಂದು ಗಹಗಹಿಸಿ ನಕ್ಕ ಅಮ್ಮಿತ.

ಇಬ್ಬರೂ ನಗುನಗುತ್ತಲೇ ಊಟ ಮುಗಿಸಿ ಮಲಗಿದರು.

ಮಲಗಿದ್ದರೂ ಶಂಬರನಿಗೆ ಐಂ ಲಿಂಗ, ಈಂ ಲಿಂಗ, ಓಂ ಲಿಂಗ ನೆನಪಿಗೆ ಬಂದು ಒಬ್ಬನೇ ನಗುತ್ತಿದ್ದ.

**ಅಧ್ಯಾಯ : 5 ಶುಭಾರಂಭ**

ಅದೊಂದು ಬೆಳಗ್ಗೆ ಶಂಬರ ಮತ್ತು ಅಮ್ಮಿತ ಇಬ್ಬರೂ ಗುದ್ದಲಿ, ಹಾರೆಗಳನ್ನು ಹಿಡಿದು ಮನೆಯಿಂದ ಹೊರಗೆ ಬರುವಾಗ, "ಶುಭವಾಗಲಿ ಅಗ್ರಜ ಮತ್ತು ಅನುಜರಿಗೆ." ಎಂದು ಹಾರೈಸುತ್ತಲೇ ಯಾಜ್ಞಿಕ ಪ್ರವೇಶಿಸಿದ.

"ದಯಮಾಡಿಸಿ, ಆಗಮಿಸಿ." ಎಂದು ಇಬ್ಬರೂ ಕೈ ಮುಗಿದರು.

"ಯಾವುದೋ ಭೂ ಕಾರ್ಯಕ್ಕೆ ಅಥವಾ ಜಲ ಕಾರ್ಯಕ್ಕೆ ಹೊರಟಂತಿದೆ ಸೋದರದ್ವಯರು?"

"ಒಂದು ಬಾವಿ ತೋಡುವ ಆಲೋಚನೆ." ಶಂಬರ ಹೇಳಿದ.

"ಜಲಸ್ಥಾನ ಎಲ್ಲೆಂದು ಗುರುತಿಸಿದ್ದೀರಿ?"

"ಇನ್ನೂ ಗೊತ್ತಿಲ್ಲ." ಎಂದ ಶಂಬರ.

"ಹಾ, ಈಗ ನಿಮಗೆ ಈ ಬ್ರಾಹ್ಮಣನ ಅಗತ್ಯವಿದೆ." ನಗುತ್ತಾ ಹೇಳಿದ ಯಾಜ್ಞಿಕ, "ಏನೆಂದುಕೊಂಡಿದ್ದೀರಿ ಬ್ರಾಹ್ಮಣನನ್ನು? ತಿಳಿದವನೇ ಬ್ರಾಹ್ಮಣ. ಪ್ರಾಜ್ಞಃ ಬ್ರಾಹ್ಮಣಃ...." ಎನ್ನುತ್ತಾ ಮನೆಯ ಸುತ್ತ ಮುತ್ತ ಸ್ಥಳಾವಲೋಕನ ಮಾಡುತ್ತಾ ನಡೆದು ಒಂದು ಕಡೆ ನಿಂತ. "ಹೇ ಗೋಮತ್, ಅಲ್ಲಿ ಜಂಬೂ ವೃಕ್ಷವಿದೆ. ಅದರ ಪೂರ್ವ ದಿಕ್ಕಿನಲ್ಲಿ ಹತ್ತಿರವೇ ಇರುವೆಗಳ ಹುತ್ತವಿದೆ. ಆ ಮರದ ದಕ್ಷಿಣ ದಿಕ್ಕಿನಲ್ಲಿ ತೋಡಿದರೆ ನಿಮಗೆ ನೀರು ಸಿಗುವುದು."

"ಖಚಿತವೇ?" ಶಂಬರ ಕೇಳಿದ.

"ಹಾಗೆಂದು ಶಾಸ್ತ್ರ ಹೇಳುತ್ತದೆ. ಶಾಸ್ತ್ರ ಹೇಳುವಂತಹ ಕ್ಷೇತ್ರ ಲಕ್ಷಣ ಇಲ್ಲಿದೆ. ಇಲ್ಲಂತೂ ನಾನು ನೀರು ತೆಗೆದಿಲ್ಲ. ನೋಡಿ.... ಪರೀಕ್ಷಿಸಿ." ಎಂದ ಯಾಜ್ಞಿಕ.

ಶಂಬರ ಮತ್ತು ಅಮ್ಮಿತರಿಬ್ಬರೂ ಪರಸ್ಪರ ಮುಖ ನೋಡಿಕೊಂಡರು.

"ವಿರೋಧಿಸುವುದಕ್ಕಾಗಿಯೇ ವಿರೋಧಿಸಬೇಡಿ. ತೆರೆದ ಮನಸ್ಸಿನಿಂದ ತಿಳಿಯುವುದಕ್ಕೆ ಸಿದ್ಧವಾಗಿ. ಇಲ್ಲವಾದರೆ ಪೂರ್ವಾಗ್ರಹದ ವಿರೋಧಗಳಿಂದ ತಿಳುವಳಿಕೆ ಪ್ರಾಪ್ತವಾಗುವುದಿಲ್ಲ."

ಯಾಜ್ಞಿಕನ ಮಾತಿಗೆ ಶಂಬರ ಹುಬ್ಬೇರಿಸಿ ಕೇಳಿದ. "ಅಂದರೆ?"

"ನೀವು ಬ್ರಾಹ್ಮಣರನ್ನು ವಿರೋಧಿಸುವುದನ್ನೇ ನಿಮ್ಮ ನಿಲುವನ್ನಾಗಿ ಮಾಡಿಕೊಂಡಿರುವಿರಿ. ಬ್ರಾಹ್ಮಣ ಎಂದಾಕ್ಷಣ ನಿಮ್ಮಲ್ಲಿ ವಿರೋಧಿಸುವ ಚಪಲ ಹುಟ್ಟುತ್ತದೆ. ಹಾಗೆ ಮಾಡದೇ ಈ ಬ್ರಾಹ್ಮಣನೆಂಬುವನೂ ಒಬ್ಬ ವ್ಯಕ್ತಿ, ಆತನೂ ಈ ಲೋಕವ್ಯವಹಾರದಲ್ಲಿ ಒಂದಿಷ್ಟು ಅರಿತಿದ್ದಾನೆ, ನಾವೂ ಈ ಲೋಕವ್ಯವಹಾರದಲ್ಲಿದ್ದೇವೆ. ಅವನ ತಿಳುವಳಿಕೆ ಈ ನಮ್ಮ ವ್ಯವಹಾರಕ್ಕೆ ಏನಾದರೂ ಉಪಯೋಗವಾಗುವುದೋ ಎಂದು ತೆರೆದ ಮನಸ್ಸಿನಿಂದ ವಿವೇಚಿಸಿ."

"ಕ್ಷಮಿಸಿ....." ಅಮ್ಮಿತ ಹೇಳಿದ. "ನೀವು ನಮ್ಮನ್ನು ಬ್ರಾಹ್ಮಣ ವಿರೋಧಿಗಳೆಂದು ತಪ್ಪಾಗಿ ತಿಳಿದಿರುವಂತಿದೆ. ನಾವು ವೈದಿಕಾಚರಣೆಯ ಹೆಸರಿನಲ್ಲಿ ಪುರೋಹಿತರು ಮಾಡುವ ಅಡ್ಡರಾಜಕೀಯಗಳಿಗೆ ವಿರೋಧಿಗಳೇ ಹೊರತು, ಬ್ರಾಹ್ಮಣರ ವಿರೋಧಿಗಳಲ್ಲ."

ಶಂಬರ ಮುಂದುವರೆಸಿದ, "ನಾವು ಬ್ರಾಹ್ಮಣನ್ನು ವಿರೋಧಿಸುತ್ತಿದ್ದೇವೆಂದರೆ, ಪೌರೋಹಿತ್ಯ ಮಾಡುವ ವೈದಿಕ ಬ್ರಾಹ್ಮಣರನ್ನು ಕುರಿತೇ ಹೊರತು, ಬ್ರಾಹ್ಮಣರ ಪಂಗಡದಲ್ಲಿ ಗುರುತಿಸಿಕೊಳ್ಳುವ ಎಲ್ಲಾ ಮನುಷ್ಯರನ್ನಲ್ಲ. ಹಾಗಿದ್ದರೆ, ನಿಮ್ಮನ್ನು ನಾವು ಪದೇ ಪದೇ ಅತಿಥಿಯನ್ನಾಗಿ ಸ್ವೀಕರಿಸುತ್ತಿರಲಿಲ್ಲ."

"ಅರೆ ಗೋಮತ್. ನೀವು ನಿಜವಾಗಿ ಆರ್ಯರೆಂದು ನನಗೆ ಮತ್ತೆ ಮನದಟ್ಟು ಮಾಡಿದಿರಿ. ಇರಲಿ, ನೆಲವನ್ನು ಅರ್ಧ ಆಳು ತಗ್ಗು ತೆಗೆದಾಗ, ಬೂದು ಬಣ್ಣದ ಕಲ್ಲು ಕಾಣಿಸಿದರೆ, ಅಥವಾ ನೀಲಿ ಬಣ್ಣದ ಮಣ್ಣು ಕಾಣಿಸಿದರೆ, ಅಲ್ಲಿ ಬಹುಕಾಲ ಬಳಸಿದರೂ ಮುಗಿಯಲಾರದಷ್ಟು ಪ್ರಮಾಣದ ನೀರು ಸಿಗುವುದು." ಎಂದ ಯಾಜ್ಞಿಕ, "ಹಾ, ಈಗ ನೀರಿಗಾಗಿ ತೋಡುವುದಕ್ಕೆ ಪ್ರಾರಂಭಿಸಬೇಡಿ. ಈ ಜ್ಯೇಷ್ಠ ಮಾಸದಲ್ಲಿ ಅಷ್ಟೇನೂ ಅನುಕೂಲಕರವಾಗಿರುವುದಿಲ್ಲ. ಗ್ರೀಷ್ಮ ಋತುವು ಮುಗಿದು ಹೋಗಲಿ, ಆಷಾಢ ಕಳೆದು ಶ್ರಾವಣ ಪ್ರಾರಂಭವಾದಾಗ, ವರ್ಷ ಋತುವಿನಲ್ಲಿ ಮಳೆಯಿಲ್ಲದ ದಿನದಲ್ಲಿ ನೀರಿಗೆ ತೋಡುವುದು ಸೂಕ್ತ." ಎಂದೂ ಸೇರಿಸಿದ.

ಶಂಬರ ಮತ್ತು ಅಮ್ಮಿತರು ಮತ್ತೆ ಪರಸ್ಪರ ಮುಖ ನೋಡಿಕೊಂಡರು.

"ಬನ್ನಿ, ನಾನು ನಿಮಗೊಂದು ವಿಷಯ ಹೇಳಬೇಕು. ಬಹಳ ಮುಖ್ಯವಾದ ವಿಷಯ." ಎಂದ ಯಾಜ್ಞಿಕ ಮನೆಯ ಜಗುಲಿಯ ಮೇಲೆ ಕುಳಿತ.

ಶಂಬರ ತನ್ನ ಕೈಯಲ್ಲಿದ್ದ ಗುದ್ದಲಿಯನ್ನು ಪಕ್ಕಕ್ಕಿಟ್ಟು ಯಾಜ್ಞಿಕನ ಪಕ್ಕದಲ್ಲಿ ಕುಳಿತ. ಅಮ್ಮಿತ ತನ್ನ ಕೈಯಲ್ಲಿದ್ದ ಹಾರೆಯನ್ನು ಕೆಳಗಿಳಿಸಿ ನಿಂತಲ್ಲಿಯೇ ಉಳಿದ.

"ನಾನೊಂದು ಸುದ್ದಿ ತಂದಿದ್ದೇನೆ. ನಿಮಗೆ ಇದು ಒಂದು ರೀತಿಯಲ್ಲಿ ಮುಖ್ಯವಾದದ್ದು." ಯಾಜ್ಞಿಕ ಅಮ್ಮಿತನ ಕಡೆ ನೋಡಿದ. "ನಿನ್ನ ವರ್ಗಕ್ಕೆ ಸಂಬಂಧಿಸಿದವರ ವಿಚಾರ."

ಅಮ್ಮಿತ ಹುಬ್ಬುಗಂಟಿಕ್ಕಿ ಪ್ರಶ್ನಾರ್ಥಕವಾಗಿ ಯಾಜ್ಞಿಕನ ಕಡೆ ನೋಡಿದ. ಶಂಬರ ಅಮ್ಮಿತನ ಕಡೆ ನೋಡಿದ.

"ಢುಂಢಿ ಗಣಪತಿ ಈಗ ತನ್ನ ಕೊನೆಯ ದಿನಗಳನ್ನು ಎಣಿಸುತ್ತಿದ್ದಾನೆ." ಯಾಜ್ಞಿಕ ಹೇಳಿದ ಕೂಡಲೇ ಅಮ್ಮಿತನ ಮುಖ ಕಳೆಗುಂದಿತು. ಯಾಜ್ಞಿಕ ಇಬ್ಬರ ಮುಖವನ್ನೂ ಗಮನಿಸುತ್ತಾ ಹೇಳಿದ. "ಗಣಪತಿ ಇಷ್ಟರಲ್ಲೇ ಸಾಯಲಿದ್ದಾನೆ." ಶಂಬರ ಯಾವುದೇ ಭಾವ ಪ್ರಕಟಣೆಯಿಲ್ಲದೇ ಯಾಜ್ಞಿಕನ ಕಡೆ ನೋಡುತ್ತಿದ್ದ. ಆದರೆ, ಅಮ್ಮಿತನ ಮುಖ ಕೋಪದಿಂದ ಗದಗುಟ್ಟುತ್ತಿತ್ತು. ಅವನ ಕಣ್ಣುಗಳು ಕೆಂಪಾಗಿ ನೀರ್ತುಂಬಿಕೊಂಡವು. ತುಟಿಗಳು ಅದರತೊಡಗಿದವು.

"ಇದು ಆರ್ಯರ, ದೇವತೆಗಳ ಅಥವಾ ನಿಮ್ಮಂತಹ ವೈದಿಕ ಬ್ರಾಹ್ಮಣರ ಕುತಂತ್ರದಿಂದಲೇ ಆಗಿರುತ್ತದೆ. ಹೇಳು, ಹೇಗೆ ಸಾಯುತ್ತಿದ್ದಾನೆ. ಏಕೆ ಸಾಯುತ್ತಿದ್ದಾನೆ. ಅವನು ಈಗಾಗಲೇ ಸಾವನ್ನು ಗೆದ್ದು ಬಂದವನು. ಅವನನ್ನು ಮತ್ತೊಮ್ಮೆ ಕೊಲ್ಲಲು ಯಾವನಿಗೂ ಆಗದು." ಆವೇಶದಿಂದ ಅಮ್ಮಿತ ಬುಸುಗುಡುತ್ತಿದ್ದ.

"ಶಾಂತವಾಗು, ಶಾಂತವಾಗು ಶೂದ್ರ ಮಿತ್ರಾ. ಆಗ್ರಹ ಮತ್ತು ಆವೇಶಗಳಿಗೆ ನಾಲಗೆ ಬಂದರೆ, ಅರಿವು ಮತ್ತು ವಿವೇಕಗಳೆರಡೂ ಕಣ್ಣು ಮತ್ತು ಕಿವಿಗಳನ್ನು ಕಳೆದುಕೊಳ್ಳುತ್ತವೆ. ಗಣಪತಿಯ ಸಾವು ಸ್ವ–ತಂತ್ರದಿಂದ ಆಗುತ್ತಿದೆಯೇ ಹೊರತು, ಯಾರದೇ ಕುತಂತ್ರದಿಂದಲ್ಲ. ವಯೋಸಹಜವಾದ ಬಳಲಿಕೆಯಿಂದ ಪಕ್ವವಾಗಿರುವ ಹಣ್ಣು ಮರದಿಂದ ಉದುರುವಂತೆ ಲೋಕವೃಕ್ಷದಿಂದ ಢುಂಢಿ ಗಣಪತಿ ಉದುರಿಹೋಗಲಿದ್ದಾನೆ." ಯಾಜ್ಞಿಕ ಸಾವಧಾನದಿಂದ ಉತ್ತರಿಸಿದ.

ಕುಸಿದು ಕುಳಿತ ಅಮ್ಮಿತ ಬಿಕ್ಕಿ ಬಿಕ್ಕಿ ಅಳತೊಡಗಿದ. ಶಂಬರ ಅವನನ್ನು ಸಮಾಧಾನಿಸಲು ಅವನ ಭುಜದ ಮೇಲೆ ಕೈಯಿಟ್ಟು ಮೆಲ್ಲನೆ ಅದುಮಿದ.

"ಢುಂಢಿ ನಮ್ಮವನು. ನಮ್ಮ ಅವಿಮುಕ್ತ ಪ್ರದೇಶದವನು. ಗಂಗಾ ನದಿಯ ತೀರದ ವಯನದಲ್ಲಿ ಬೆಳೆದವನು. ಅಗ್ರಜಾ, ಗಣಪತಿ ನಮ್ಮವನು. ದೇವತೆಗಳ, ಆರ್ಯರ, ಈ ದುರಹಂಕಾರದ ಬ್ರಾಹ್ಮಣರ ಸೊಕ್ಕಡಗಿಸಿದವನು. ಕ್ಷತ್ರಿಯರನ್ನು ನಾಶ ಮಾಡಿ ತನ್ನ ಪಾರುಪತ್ಯೆ ಮಾಡಲು ಹೋದ ಕೊಡಲಿ ರಾಮನ ಗರ್ವ ಮುರಿದವನು. ದೇವತೆಗಳಿಟ್ಟ ಕಿರೀಟವನ್ನಿಟ್ಟುಕೊಂಡು, ಅವರಂತೆ ಪೀತಾಂಬರ ತೊಟ್ಟುಕೊಂಡು, ಅವರಿಂದ ಪುಷ್ಪವೃಷ್ಟಿ ಮಾಡಿಸಿಕೊಂಡು ನಮ್ಮ ಕರಿಗೊಲ್ಲ ಕೃಷ್ಣ ದೇವತೆಗಳ ಪಕ್ಷಪಾತಿಯಾಗಿ ಹೋದ. ತನ್ನದೇ ತನ್ನದ್ದನ್ನು ಸಾಧಿಸಿಕೊಂಡು, ಅತ್ತ ಕಡೆಯೂ ಇಲ್ಲ, ಇತ್ತ ಕಡೆಯೂ ಇಲ್ಲವೆಂಬಂತೆ, ಭೈರವ ತಂತ್ರಗಳನ್ನು ಆಚರಿಸಿಕೊಂಡು ಸ್ಮಶಾನ ಸಾಧನೆ ಮಾಡುತ್ತಾ, ಮದ್ಯ, ಮಾಂಸ, ಮಹಿಳೆಯರನ್ನು ಸೇವಿಸುತ್ತಾ ರುದ್ರ ಏಕಾಂತ ಯೋಗಿಯಾಗಿ, ಕೊನೆಗೆ ಪ್ರಳಯಾಧಿಪತಿಯಾಗಿ ಹೋದ. ದಾಸರಿಗೆ, ಅರಣ್ಯಕರಿಗೆ, ಶೂದ್ರರಿಗೆ ನಾಯಕನಾಗಿಯೇ ಉಳಿದಿದ್ದವನು ನಮ್ಮ ಢುಂಢಿ. ಎಷ್ಟೋ ಜನ ಗಣಪತಿಗಳಿದ್ದರೂ ನಮ್ಮ ಢುಂಢಿ ಮಹಾಗಣಪತಿಯಾಗಿ ನಮ್ಮ ನಾಯಕನಾಗಿದ್ದ. ಆರ್ಯರಿಗೆ ಮಣ್ಣು ಮುಕ್ಕಿಸುತ್ತಿದ್ದ. ಹೊಣೆಗಾರಿಕೆಯ ವಿಷಯಕ್ಕೆ ಬಂದಾಗ, ರುದ್ರನಿಗೂ ಹೆದರಲಿಲ್ಲ... ಅಂತಹ ನಾಯಕ... ನಮ್ಮ ಗಣನಾಯಕ. ಅಯ್ಯೋ, ಇನ್ನು ಈ ಜಂಬೂದ್ವೀಪದಲ್ಲಿ ಶೂದ್ರರಿಗೆ, ಅರಣ್ಯಕರಿಗೆ ಈ ಆರ್ಯರ ದೌರ್ಜನ್ಯದಿಂದ ಬಿಡುಗಡೆಗೊಳಿಸಲು ಮಾಡುವ ಹೋರಾಟಕ್ಕೆ ಯಾರು ನಾಯಕರು?"

ಶಂಬರ ಮತ್ತು ಯಾಜ್ಞಿಕರಿಬ್ಬರೂ ಅಮ್ಮಿತ ಸಂಪೂರ್ಣವಾಗಿ ತನ್ನ ದುಃಖವನ್ನು ತೋಡಿಕೊಳ್ಳಲು ಬಿಟ್ಟು ಅವನ ಗಮನಿಸುತ್ತಾ ಕುಳಿತಿದ್ದರು.

"ಹೋಗು ಅನುಜಾ." ಶಂಬರ ಹೇಳಿದ. "ಕೈಕಾಲು ಮುಖ ತೊಳೆದುಕೊಂಡು ಬಾ."

ಅಮ್ಮಿತ ಹಾಗೆಯೇ ದುಃಖಿಸುತ್ತಾ ಕುಳಿತಿದ್ದ. ನಿಧಾನವಾಗಿ ಯಾಜ್ಞಿಕ ಹೇಳಿದ. "ಏಳು ಅಮ್ಮಿತ. ಗಣಪತಿ ಅಸು ನೀಗಿಲ್ಲ. ನೀನಿಷ್ಟು ದುಃಖಿಸುವ ಅಗತ್ಯವಿಲ್ಲ. ಹೋರಾಟವೆಂಬುದು ಸಾಮಯಿಕವಾದ ಪ್ರತಿಕ್ರಿಯೆಯೇ ಹೊರತು, ಅದು ಒಂದು ಗುರಿಯಲ್ಲ. ಕಣ್ಣ ಮುಂದೆ ಗುರಿಯಿಟ್ಟುಕೊಂಡು ದಾರಿ ಹಿಡಿಯಬೇಕು. ಗುರಿಗೆ ದಾರಿ ಹೋರಾಟ ಮಾತ್ರವೇ ಅಲ್ಲ. ನೀನು ಭವಿಷ್ಯದ ಬಗ್ಗೆ ಅತಿಯಾಗಿ ಚಿಂತಿಸುತ್ತಾ ವ್ಯಾಕುಲಪಡುತ್ತಿದ್ದೀಯ. ನನ್ನಂತಲ್ಲದೇ ನೀನು ನಿನ್ನ ಸಮುದಾಯದಲ್ಲಿ ಗುರುತಿಸಿಕೊಂಡಿರುವ ರೀತಿ ಮತ್ತು ಕಳಕಳಿಯ ಬಗ್ಗೆ ನನಗೆ ಗೌರವ ಮೂಡುತ್ತಿದೆ. ಆದರೆ, ಈಗ ನೀನು ತಾಳಬೇಕಾಗಿರುವುದು ಸಮಾಧಾನ ಮತ್ತು ಹೊಂದಬೇಕಿರುವುದು ಸೂಕ್ಷ್ಮದೃಷ್ಟಿಯ ಅವಲೋಕನ."

"ಹೌದು." ಎಂದ ಶಂಬರ. ಇದೇ ಮೊದಲಬಾರಿಗೆ ಶಂಬರ ಯಾಜ್ಞಿಕನ ಮಾತಿಗೆ ಸಂಪೂರ್ಣ ಒಪ್ಪಿಗೆಯಿಂದ ಹೌದು ಎಂದದ್ದು.

ಅಂದು ರಾತ್ರಿ ಯಾಜ್ಞಿಕ ಮನೆಯ ಹೊರಗೆ ಅಗ್ಗಿಷ್ಟಿಕೆಯ ಎದುರಲ್ಲಿ ಸೋಮರಸವನ್ನು ಸೇವಿಸುತ್ತಾ ಮೆಲ್ಲನೆ ಹೇಳಿದ. "ನಾನು ಮೃತ್ಯುಮುಖನಾಗಿರುವ ಗಣಪತಿಯನ್ನು ನೋಡಲು ಹೋಗುತ್ತಿದ್ದೇನೆ."

ಕೂಡಲೇ, "ನಾನೂ ಬರುತ್ತೇನೆ." ಎಂದ ಅಮ್ಮಿತ ಮತ್ತೆ ಕುತೂಹಲದಿಂದ ಕೇಳಿದ. "ಅವರೀಗ ಎಲ್ಲಿದ್ದಾರೆ?"

"ಅಂತರ್ವೇದಿಯಲ್ಲಿ."

"ಅದೆಲ್ಲಿದೆ?"

"ಅಂತರ್ವೇದಿ, ಅಂಶುಮತಿ ಮತ್ತು ಗಂಗಾನದಿಗಳ ನಡುವಿದೆ. ಈ ಮೊದಲು ಕೆಲಕಾಲ ಸಹ್ಯಾದ್ರಿಯ ದಕ್ಷಿಣಭಾಗದ ಮಲಯದಲ್ಲಿದ್ದ ಗಣಪತಿ ಈಗ ಇಲ್ಲಿಗೆ ಬಂದಿದ್ದಾನೆ. ನನಗೆ ಅವಿಮುಕ್ತದ ದಕ್ಷಿಣಕ್ಕಿರುವ ಚಿತ್ರಕೂಟವನ್ನು ಸಂದರ್ಶಿಸುವ ಮನಸ್ಸಿದೆ. ಅಲ್ಲಿಂದ ನೇರ ಅಂತರ್ವೇದಿಗೆ ಹೋಗಿ ಗಣಪತಿಯನ್ನು ಜೀವಂತವಾಗಿಯೇ ನೋಡಿ ಬರುವ ಬಯಕೆಯಿದೆ." ಎಂದ ಯಾಜ್ಞಿಕ.

"ನಾನೂ ನಿಮ್ಮೊಡನೆ ಬರಬಹುದೇ?" ಅಮ್ಮಿತ ವಿನೀತವಾಗಿ ಕೇಳಿದ. "ನಿಮ್ಮ ಬೆಂಗಾವಲಿನಂತೆ, ಸೇವಕನಾಗಿ ಬರುತ್ತೇನೆ. ನನ್ನನ್ನೂ ನಿಮ್ಮೊಡನೆ ಕರೆದುಕೊಂಡು ಹೋಗಿ."

ಇದನ್ನು ಕೇಳಿ ಶಂಬರ ಜೋರಾಗಿ ನಕ್ಕುಬಿಟ್ಟ. ಅವನು ನಕ್ಕ ಕಾರಣ ಅಮ್ಮಿತ ಮತ್ತು ಯಾಜ್ಞಿಕನಿಗೆ ತಿಳಿಯಲಿಲ್ಲ.

"ಹೇ ಗೋಮತ್, ವಿಡಂಬನೆಯಿಂದ ಕೂಡಿರುವ ಈ ನಿನ್ನ ನಗುವಿಗೆ ಕಾರಣವೇನು?"

"ಹೇಳುತ್ತೇನೆ..." ಶಂಬರ ನಗುವನ್ನು ಮುಗಿಸಿ ಹೇಳಿದ. "ಅನುಜಾ, ಈಗ ಈ ಮನೆಯಲ್ಲಿ ನೀನು ಬಂಧುವಾಗಿದ್ದೀಯ. ಈ ಯಾಜ್ಞಿಕ ಅತಿಥಿಯಾಗಿ ನಿನ್ನ ಸುಪರ್ದಿನಲ್ಲಿದ್ದಾನೆ. ನೀನೇ ಅವನನ್ನು ನಾನು ನಿಮ್ಮ ಬೆಂಗಾವಲಿನಂತೆ, ಸೇವಕನಾಗಿ ಬರುತ್ತೇನೆ ಎಂದು ಯಾಚಿಸುತ್ತೀಯ. ಈ ಜಂಬೂದ್ವೀಪದಲ್ಲಿ ನಮ್ಮನ್ನು ಆರ್ಯರಿಂದ ಬಿಡುಗಡೆ ಮಾಡುವವರು ಯಾರು ಎಂದು ಗೋಳಾಡುತ್ತೀಯ. ನೀನು ಸೇವಕನಾಗಿರಲು ಕಲಿತುಬಿಟ್ಟಿದ್ದೀಯ ಅನುಜಾ. ಪಟ್ಟದಾನೆಯನ್ನು ಏರಿದರೂ ನೀನು ಮುದುರಿ ಕುಳಿತುಕೊಳ್ಳುವವನು."

"ನಮ್ಮ ನಾಯಕನನ್ನು ನೋಡಲು ನನ್ನ ಕರೆದುಕೊಂಡು ಹೋಗದಿದ್ದರೆ ಎಂಬ ಅಂಜಿಕೆ ಅಗ್ರಜಾ." ಅಮ್ಮಿತ ಮುಗ್ಧನಾಗಿ ಹೇಳಿದ.

"ಆಗಲೇ ಯಾಜ್ಞಿಕ ಹೇಳಿದ್ದನ್ನು ಗಮನಿಸು. ನೀನು ಗಣಪತಿಯನ್ನು ನೋಡಲು ಹೋಗುವುದು ನಿನ್ನ ಗುರಿ. ಆದರೆ, ಯಾಜ್ಞಿಕನ ಜೊತೆಯಾಗಿ ಹೋಗುವುದೊಂದೇ ದಾರಿಯಲ್ಲ. ಸ್ವಾವಲಂಬನಾ ಅಥವಾ ಪರಾವಲಂಬನಾ ಎನ್ನುವುದೂ ಒಂದು ರೂಢಿಯೇ ಅನುಜಾ." ಶಂಬರ ನಸುನಗುತ್ತಾ ಹೇಳಿದ.

"ಅಹೋ, ಅಹೋ..." ಯಾಜ್ಞಿಕ ಜೋರಾಗಿ ಚಪ್ಪಾಳೆ ತಟ್ಟುತ್ತಾ ತನ್ನ ಮೆಚ್ಚುಗೆ ವ್ಯಕ್ತಪಡಿಸಿದ.

ಅಮ್ಮಿತನಿಗೆ ನಾಚಿಕೆಯಾಯಿತು. ಮತ್ತಷ್ಟು ಮುದುಡಿದ.

“ಚಿಂತಿಸಬೇಡ ಗೆಳೆಯ. ನಿನ್ನನ್ನು ನನ್ನೊಡನೆ ಕರೆದುಕೊಂಡು ಹೋಗುತ್ತೇನೆ.” ಯಾಜ್ಞಿಕ ತನ್ನ ಅಭಯ ಹಸ್ತವನ್ನು ಅಮ್ಮಿತನಿಗೆ ತೋರಿದ.

“ಅಗ್ರಜಾ, ನೀವೂ ನಮ್ಮೊಡನೆ ಬನ್ನಿ.” ಎಂದು ಅಮ್ಮಿತ ಶಂಬರನ ಕಡೆ ನೋಡಿದ.

“ಹಾಗೆ ನಾನು ಬರಲಾರೆ. ಇಲ್ಲಿ ಗೋವುಗಳನ್ನು ನೋಡಿಕೊಳ್ಳುವವರು ಯಾರು? ಸುವಾಸ್ತುವಿನ ಸ್ಥಿತಿಗತಿಗಳನ್ನು ಹೀಗೆಯೇ ಇರಿಸುವವರು ಯಾರು?”

ಶಂಬರನ ಮಾತು ಕೇಳಿ ಅಮ್ಮಿತ ಸುಮ್ಮನಾದ. ಶಂಬರ ಮತ್ತೂ ಹೇಳಿದ. “ನಾನು ಗೋವುಗಳನ್ನು ಗೂಟಗಳಿಗೆ ಕಟ್ಟಿಹಾಕಿರುವೆ. ಆ ಕರ್ಮವೇ ನನ್ನನ್ನು ಇಲ್ಲಿ ಕಟ್ಟಿ ಹಾಕಿದೆ. ಇಲ್ಲವಾದರೆ ನಾನು ಅನ್ವೇಷಣೆಯಲ್ಲಿ ಕ್ಷೇತ್ರಗಳನ್ನು ಸಂದರ್ಶಿಸುತ್ತಿದ್ದೆ.”

“ಹಾಗಾದರೆ, ನೀವು ಇದುವರೆಗೂ ಎಲ್ಲಿಗೂ ಹೋಗಿಲ್ಲವೇ?” ಅಮ್ಮಿತ ಆಶ್ಚರ್ಯದಿಂದ ಕೇಳಿದ.

“ಜಹ್ನೂವಸ ಅರಣ್ಯವನ್ನೇ ನಾನು ಮಾಸಗಳ ಕೂಸಾದಾಗಿಂದಲೂ ನೋಡುತ್ತಿರುವುದು. ಯೌವನಸ್ಥನಾದಾಗ, ಗಣಿಕೆಯರಿಗಾಗಿ ಕೆಲವು ಬಾರಿ ವಿರಾಟಪುರವನ್ನು ಸಂದರ್ಶಿಸಿದ್ದೆ. ಇನ್ನೇನೂ ನನಗೆ ಗೊತ್ತಿಲ್ಲ.”

“ಅಗ್ರಜಾ, ತಮಗೆ ಇಚ್ಛೆಯಿಲ್ಲವೇ ಈ ಅರಣ್ಯದಿಂದ ಹೊರಗೆ ಹೋಗಲು?”

“ಹರಿಯುವ ಗುಣವಿರುವ ನದಿಯೇಕೆ ಇಚ್ಚಿಸುವುದಿಲ್ಲ ಧುಮ್ಮುಕ್ಕಿ ಹರಿಯಲು?”

“ಹಾಗಾದರೆ, ಅಗ್ರಜಾ, ಈಗ ನಾನಿರುವೆ. ನೀವು ಈ ಮಹಾಶಯರ ಜೊತೆಗೆ ಹೋಗಿ ಬನ್ನಿ. ಈ ನಮ್ಮ ಸುವಾಸ್ತುವನ್ನು ನಿರ್ವಂಚನೆಯಿಂದ ಕಾಪಾಡುತ್ತೇನೆ.” ಅಮ್ಮಿತ ಹೇಳಿದ.

“ನಿನ್ನ ಪ್ರಾಮಾಣಿಕತೆಯ ಬಗ್ಗೆ ನನಗೆ ಸಂದೇಹವಿಲ್ಲ. ಆದರೆ, ಈ ಯಾತ್ರೆ ನಾನು ಬಯಸಿ ಮಾಡುವಂತಹುದೇ ಎಂದು ಸಂಶಯ.”

ಶಂಬರನ ಮಾತು ಮುಗಿಯುವ ಮುನ್ನವೇ ಯಾಜ್ಞಿಕ ಹೇಳಿದ.

“ಹೇ ಗೋಮತ್, ನಿಮ್ಮ ಆಸಕ್ತಿ ಅನಾಸಕ್ತಿಗಳ ಬಗ್ಗೆ ನಿರಾಸಕ್ತಿ ತೋರಿ. ಏಕೆಂದರೆ, ನೀವು ಸೂಕ್ಷ್ಮಗ್ರಹಣಕಾರರು. ತೆರೆದ ಕಣ್ಣುಗಳು ಮತ್ತು ಕಿವಿಗಳು ನಿಮ್ಮ ಸಂಪತ್ತು. ಗ್ರಾಹ್ಯಕ್ಕೆ ಬಂದುದನ್ನೆಲ್ಲದರ ರಸಗ್ರಹಿಸಿ ವೇದ್ಯ ಮಾಡಿಕೊಳ್ಳುವವರು. ಆದರೆ, ಅಗ್ರಜ ಅನುಜರಿಬ್ಬರ ನಡುವೆಯೇ ಇತ್ಯರ್ಥವಾಗಲಿ. ಚಿಂತಕನಾಗಲಿ, ಭಾವುಕನಾಗಲಿ ಈ ರಸಿಕ ವೈದಿಕನಿಗೆ ಸಮಸ್ಯೆಯಿಲ್ಲ.”

“ಅಗ್ರಜಾ, ನೀವೇ ಹೋಗಿ. ನಿಮ್ಮ ಪ್ರಯಾಣಕ್ಕೆ ನಾನು ಎಲ್ಲಾ ಸಿದ್ಧತೆಗಳನ್ನೂ ಮಾಡುತ್ತೇನೆ. ನಮ್ಮ ನಾಯಕನಾದ, ಗಣಪತಿಯಾದ ಢುಂಢಿಯನ್ನು ನೋಡಲು ಹೋಗುವ ಮೂಲಕ ನಿಮ್ಮ ಲೋಕ ಸಂಚಾರಗಳ ಶುಭಾರಂಭವಾಗಲಿ.”

“ಹೌದು, ಹೌದು..... ಆರಂಭದಲ್ಲಿಯೇ ವಿಘ್ನ ತಂದಿಡುವನ ದರ್ಶನದಿಂದ ಇವರ ಶುಭಾರಂಭ! ವಿಪರ್ಯಾಸ, ವಿಪರ್ಯಾಸ....” ಎಂದು ನಕ್ಕ ಯಾಜ್ಞಿಕ.

ಅಮ್ಮಿತನಿಗೆ ಪ್ರಯಾಣಕ್ಕೆ ಹೋಗಲು ಸಿದ್ಧಪಡಿಸುವ ಅಭ್ಯಾಸದಲ್ಲಿ ನುರಿತನಾಗಿದ್ದ. ಪಣಿಗಳ ಜೊತೆಯಲ್ಲಿದ್ದು ಸಾರ್ಥದಲ್ಲಿ ವರ್ಷಾನುಗಟ್ಟಲೆ ಅನುಭವಪಡೆದಿರುವವನು. ಶಂಬರ ತಾವು ಈಗ ಹೋಗಬೇಕಾಗಿರುವ ಸ್ಥಳಕ್ಕೆ ನಡೆದು ಹೋಗುವುದೇನೋ ಎಂದು ತಿಳಿದಿದ್ದ.

“ಅರಟ್ಟದ ಅತ್ಯುತ್ತಮ ಕುದುರೆಗಳಿರುವಾಗ ನಡೆದು ಹೋಗುವುದು ಅಶ್ವಜಾತಿಗೇ ಅವಮಾನ.” ಎಂದು ನಕ್ಕ ಅಮ್ಮಿತ.

ತಮ್ಮ ಸುವಾಸ್ತುವಿನಲ್ಲಿರುವ ಕುದುರೆಗಳು, ಕುದುರೆಗಳಿಗೇ ಹೆಸರಾದ ಅರಟ್ಟ ಪ್ರದೇಶದಿಂದ ಬಂದಿರುವುದೆಂದೂ ಶಂಬರನಿಗೆ ತಿಳಿದಿರಲಿಲ್ಲ.

ಅಪರೂಪಕ್ಕೆ ಯಾಜ್ಞಿಕ ಅಮ್ಮಿತನನ್ನು ಪ್ರಶಂಸಿಸುತ್ತಿದ್ದ. “ನೀನು ಅನಾರ್ಯ ಭಾಷೆಯನ್ನು ಮಾತಾಡಿದರೂ, ನಿನ್ನ ಸಂಭಾಷಣಾ ಶೈಲಿ ಆರ್ಯರದ್ದಾಗಿದೆ. ಬಹುಶಃ ನೀನು ವೇದೋಪನಿಷತ್ತುಗಳ ಋಷಿಗಳಿರುವ, ಶಾಸ್ತ್ರಗಳ ಬಲ್ಲ ಪಂಡಿತರಿರುವ ಅವಿಮುಕ್ತದವನಾದ್ದರಿಂದ ಇರಬೇಕು.”

“ಇರಬಹುದು, ಆದರೆ, ನಾನು ವೈಶ್ಯರ ಸೇವಕನಾಗಿ ಸಾರ್ಥದ ಜೊತೆಯಲ್ಲಿ ತಕ್ಕಮಟ್ಟಿಗೆ ಲೋಕಪರ್ಯಟಣೆ ಮಾಡಿದ ಅನುಭವವಿದೆ.” ಎಂದ ಅಮ್ಮಿತ.

ಮರುದಿನ ಬೆಳಗಿನ ಜಾವವೇ ಎರಡು ಕುದುರೆಗಳು ಸುವಾಸ್ತದ ಕಂದಕವನ್ನು ಕಟ್ಟಿಗೆಯ ಸೇತುವೆಯ ಮೇಲಿಂದ ದಾಟಿದವು. ಅಮ್ಮಿತ, “ಶುಭವಾಗಲಿ, ಒಳಿತಾಗಲಿ. ಹೋಗಿಬನ್ನಿ.” ಎಂದು ಕೈಗಳನ್ನೆತ್ತಿ ಹಾರೈಸಿದ.

ಕುದುರೆಗಳ ಮೇಲೆ ನಾಲ್ಕು ಹೆಜ್ಜೆಗಳು ಸಾಗಿದ ಮೇಲೆ, “ಯಾಜ್ಞಿಕ... ಇದೋ ಬಂದೆ.” ಎಂದು ಶಂಬರ ಕುದುರೆಯಿಂದ ಕೆಳಗಿಳಿದು, ಅದರ ಮೇಲಿಟ್ಟಿದ್ದ ಸಾಮಾನುಗಳ ಗಂಟನ್ನು ಸರಿಯಾಗಿಟ್ಟು ಹಿಂದಕ್ಕೆ ಬಂದ.

ಏನಾದರೂ ಮರೆತಿರಬಹುದು ಎಂದು ಅಮ್ಮಿತ ಏನೆಂದು ವಿಚಾರಿಸಲು ಮುಂದೆ ಬಂದ. ಅವನ ತೀರ ಸಮೀಪಕ್ಕೆ ಬಂದ ಶಂಬರ ಅವನ ಕೈಗಳನ್ನು ಹಿಡಿದು, “ಅನುಜಾ, ದಯಮಾಡಿ ನಾನು ಬರುವವರೆಗೂ ಸುವಾಸ್ತುವನ್ನು ಬಿಟ್ಟು ಎಲ್ಲಿಗೂ ಹೋಗಬೇಡ. ಇದು ನನ್ನ ವಿನಮ್ರ ಕೋರಿಕೆ.” ಎಂದು ಹೇಳುತ್ತಾ ಅವನ ಕಂಠ ನಡುಗಿತು, ಕಣ್ಣುಗಳು ತುಂಬಿದ್ದವು. “ಏಕೆಂದರೆ, ಕಾಮರೂಪದಿಂದ ಒಂದು ಹೆಂಗಸರ ತಂಡವೊಂದು ಇಲ್ಲಿಗೆ ಬರಬಹುದು. ಅವರನ್ನು ಚೆನ್ನಾಗಿ ನೋಡಿಕೋ. ಹಾಗೆ ಬರುವ ಅವರಲ್ಲಿ ವಸುಮಾ ಎಂಬಾಕೆಯೇ ಈ ಮನೆಯ ಒಡತಿ. ಅವಳಿಗೆ, ನಿಮ್ಮ ಕರು ಈಗಲೂ ಅಂಬಾ ಅಂಬಾ ಎಂದು ಕೂಗುತ್ತಲೇ ಇದೆ, ಇಲ್ಲೇ ಅಲೆದುಕೊಂಡು ಹೋಗಿದೆ. ಬೇಗನೇ ಬಂದುಬಿಡುತ್ತದೆ ಎಂದು ಹೇಳು.”

ಅಮ್ಮಿತ ಹೆಚ್ಚಿನ ವಿವರ ಕೇಳುವಷ್ಟರಲ್ಲಿ ಅವನಿಗೆ ಕಾಣದಂತೆ ತನ್ನ ಕಣ್ಣೀರನ್ನು ವರೆಸಿಕೊಂಡು ಶಂಬರ ತನ್ನ ಕುದುರೆಯತ್ತ ಹೆಜ್ಜೆ ಹಾಕಿದ.

## ಅಧ್ಯಾಯ : 6 ವದೀರಜ್ಜ

ಎಲ್ಲಿಯೂ ನಿಲ್ಲದೇ ಒಂದೇ ಸಮನೆ ಯಾಜ್ಞಿಕ ಮತ್ತು ಶಂಬರರನ್ನು ಹೊತ್ತ ಅರಟ್ಟದ ಕುದುರೆಗಳು ಕಾಡಿನಲ್ಲಿ ಬಿಸಿಲೇರುವವರೆಗೂ ನಡೆದು ಬಂದವು. ಅಲ್ಲಲ್ಲಿ ಸ್ವಲ್ಪ ನೀರನ್ನು ಕುಡಿದು ದಾಳಿಂಬೆ ಹಣ್ಣನ್ನು ತಿಂದುದಲ್ಲದೇ ಹೆಚ್ಚು ಕಾಲ ಎಲ್ಲಿಯೂ ವಿಶ್ರಮಿಸಿರಲಿಲ್ಲ.

"ಇಲ್ಲಿ ಸ್ವಲ್ಪ ಕಾಲ ತಂಗೋಣ. ಒಳ್ಳೆಯ ನೀರಿನ ಹೊಂಡವಿದೆ ಮತ್ತು ಕುದುರೆಗೂ ಮೇಯಲು ಒಳ್ಳೆಯ ಹಸುರಿದೆ." ಎಂದ ಶಂಬರ.

ಅದಕ್ಕೊಪ್ಪಿದ ಯಾಜ್ಞಿಕ ಕುದುರೆಯಿಂದ ಕೆಳಗಿಳಿದ. ಅದರ ಮೇಲಿದ್ದ ಜೀನನ್ನು ತೆಗೆದು, ಬಾಚಣಿಗೆಯಿಂದ ಅದರ ಮೈಯನ್ನು ಬಾಚಿದ ಶಂಬರ ಕುದುರೆಯನ್ನು ಮೇಯಲು ಬಿಟ್ಟು ತಾನೂ ಮರದ ಕೆಳಗೆ, ಹುಲ್ಲ ಹಾಸಿನ ಮೇಲೆ ಉರುಳಿಕೊಂಡ. ಯಾಜ್ಞಿಕ ನೀರಿನ ಹೊಂಡದ ಬಳಿಗೆ ಹೋಗಿ ಕೈ ಕಾಲುಗಳನ್ನು ತೊಳೆದುಕೊಂಡು ಬಂದು ಅಶ್ವಥ ಮರವೊಂದರ ಕೆಳಗೆ ಕೃಷ್ಣಾಜಿನವನ್ನು ಹಾಸಿಕೊಂಡು ಅದರ ಮೇಲೆ ಧ್ಯಾನಕ್ಕೆ ಕುಳಿತ.

ಹುಲ್ಲಿನ ಮೇಲೆ ಮಲಗಿಕೊಂಡು ಮರದ ರೆಂಬೆಕೊಂಬೆಗಳ ನಡುವಿನಿಂದ ನೀಲಾಕಾಶವನ್ನು ನೋಡಲು ಪ್ರಯತ್ನಿಸುತ್ತಿದ್ದ ಶಂಬರನಿಗೆ ಮೋಡದ ಪದರಗಳು ಮರದ ಮೇಲಿಂದ ಹಾದು ಹೋಗುತ್ತಿದೆ ಎಂದೆನಿಸಿತು. ಮೋಡಗಳು ಇಷ್ಟು ಕೆಳಕ್ಕೆ ಬರುವವೇ ಎಂದು ಧುತ್ತನೆ ಮೇಲೆದ್ದು ಹಾಗೆ ಬೆಳ್ಳಗೆ ಸಾಗುತ್ತಿರುವ ಹೊಗೆಯನ್ನು ಕಂಡ. ಅದೇನೆಂದು ಯಾಜ್ಞಿಕನ ಕೇಳಲು ಮುಂದಾದರೂ, ಅವನ ಧ್ಯಾನಕ್ಕೆ ಭಂಗ ತರಕೂಡದೆಂದು, ತಾನೇ ಮೇಲೆದ್ದು, ಖಡ್ಗವನ್ನು ಹಿಡಿದು ಎಚ್ಚರಿಕೆಯಿಂದ, ಮೆಲ್ಲನೆ ಹೆಜ್ಜೆಗಳನ್ನು ಇಡುತ್ತಾ ಹೊಗೆಯ ಜಾಡನ್ನು ಹಿಡಿದು ನಡೆದ.

ಅದೊಂದು ಕಡೆ ಏಳು ಜನರಿದ್ದರು. ಒಂದು ದೊಡ್ಡ ಬಿದಿರಿನ ಬುಟ್ಟಿಯಲ್ಲಿ ವಯಸ್ಸಾದ ವೃದ್ಧರೊಬ್ಬರು ಇರುವುದು ಕಂಡಿತು. ಆ ಬುಟ್ಟಿಗೆ ಇಬ್ಬರು ಈಗಾಗಲೇ ಕಟ್ಟಿರುವ ಗಳಗಳನ್ನು ಸರಿಯಾಗಿ ಬಿಗಿಯುತ್ತಿದ್ದರು. ಇನ್ನು ನಾಲ್ವರು, ಪುರುಳೆಗಳನ್ನು ಒಟ್ಟಿಸಿ ಹಾಕಿದ್ದ ಬೆಂಕಿಯಿಂದ ಏಳುತ್ತಿರುವ ಹೊಗೆಯನ್ನು ನೋಡುತ್ತಾ, ಅಲ್ಲಲ್ಲಿ ಕೈ ತೋರಿಸಿಕೊಂಡು ಮಾತಾಡಿಕೊಳ್ಳುತ್ತಿದ್ದರು. ಅವರ ವೇಷಗಳನ್ನು ನೋಡಿದರೆ ಕುಲೀನರಂತೆ ಕಾಣುತ್ತಿರಲಿಲ್ಲ. ಬಹುಶಃ ಯಾವುದೋ ಬುಡಕಟ್ಟಿನವರಿರಬೇಕು. ಬುಟ್ಟಿಯಲ್ಲಿರುವವನು ನಾಯಕನೋ ಅಥವಾ ಜಡ್ಡು ಬಿದ್ದಿರುವ ವೃದ್ಧನೋ ಇದ್ದಿರಬೇಕು. ಮದ್ದಿಗೆ  ಕರೆದೊಯ್ಯುತ್ತಿದ್ದರೂ ಇರಬಹುದು ಎಂದುಕೊಂಡ.

"ಅವರೂ ನಮ್ಮಂತೆ ಪ್ರಯಾಣಿಕರು." ಹಿಂಬದಿಯಿಂದ ಬಂದ ಯಾಜ್ಞಿಕ ಹೇಳಿದ.

"ಈ ಹಗಲಲ್ಲಿ ಅಷ್ಟು ಸಣ್ಣದಾಗಿ ಬೆಂಕಿ ಹಚ್ಚಿಕೊಂಡು ಏನು ಮಾಡುತ್ತಿದ್ದಾರೆ?" ಶಂಬರ ಕೇಳಿದ.

"ಅವರಲ್ಲಿ ಯಾರೋ ಒಬ್ಬರು ಶಕಧೂಮನಿರಬೇಕು. ಅಗ್ನಿಯನ್ನು ಹೊತ್ತಿಸಿ, ಧೂಮವು ಚಲಿಸುವ ಜಾಡನ್ನು ಗಮನಿಸಿ, ಗಾಳಿಯು ಹೇಗೆ ಬೀಸುತ್ತಿದೆ ಎಂದು ತಿಳಿದು ಹವಾಮಾನವನ್ನು ತರ್ಕಿಸುತ್ತಿದ್ದಾರೆ. ಬಹುಶಃ ಆ ಬುಟ್ಟಿಯಲ್ಲಿರುವ ವೃದ್ಧರಿಗೆ ಪ್ರತಿಕೂಲವಾದ ವಾತಾವರಣ ಒಗ್ಗುವುದಿಲ್ಲ ಎನಿಸುತ್ತದೆ. ಬನ್ನಿ,

ಮಾತಾಡಿಸೋಣ. ಆದರೆ, ನಿಮ್ಮ ಖಡ್ಗವನ್ನು ಒಳಗಿಟ್ಟುಕೊಳ್ಳಿ." ಎಂದ ಯಾಜ್ಞಿಕ ಶಂಬರ ಒಪ್ಪಿಗೆ ಸೂಚಿಸುವ ಮೊದಲೇ ತಾನು ಅವರತ್ತ ಕಡೆ ನಡೆದ.

"ಶುಭವಾಗಲಿ ಪ್ರಯಾಣಿಕರೇ."

ವೃದ್ಧನೊಬ್ಬನ ಹೊರತು ಉಳಿದವರೆಲ್ಲರೂ ಯಾಜ್ಞಿಕನ ಕಡೆಗೆ ತಿರುಗಿದರು. ಹಾಗೆಯೇ ಹಿಂದೆ ಬಂದ ಶಂಬರನನ್ನೂ ಗಮನಿಸಿದರು.

"ಶಕಧೂಮರು ಇಂದಿನ ಹವಾಮಾನದ ಬಗ್ಗೆ ಏನು ಹೇಳುತ್ತಾರೆ?" ಯಾಜ್ಞಿಕ ನಗುತ್ತಾ ಕೇಳಿದ.

ತಲೆಯ ಮೇಲೆ ಉಷ್ಣೀಷವನ್ನು ತೊಟ್ಟಿದ್ದವನು ಮುಂದೆ ಬಂದು ಹೇಳಿದ. "ಉತ್ತರದಿಂದ ಶೀತದ ಗಾಳಿ ಬೀಸುತ್ತಿದೆ. ನಾವೂ ಉತ್ತರದ ಕಡೆಗೇ ಮುಖಮಾಡಿ ಹೋಗಬೇಕಾದ್ದರಿಂದ, ಈ ವೃದ್ಧರಿಗೆ ಉಬ್ಬಸದ ರೋಗ ಉಲ್ಬಣಿಸುತ್ತದೆ. ಹಾಗಾಗಿ, ಬೇರೆ ಮಾರ್ಗವನ್ನು ಹಿಡಿಯುವುದರ ಬಗ್ಗೆ ಆಲೋಚಿಸುತ್ತಿದ್ದೇವೆ."

"ನೀವೆಲ್ಲಿಗೆ ಹೋಗಬೇಕು?"

"ನಾವು ಅಂತರ್ವೇದಿಯ ಕಡೆ ಹೊರಟಿದ್ದೇವೆ." ಶಕಧೂಮ ಹೇಳಿದ.

"ಢುಂಢಿ ಗಣಪತಿಯನ್ನು ನೋಡಲೇ?"

"ಹೌದು. ನೀವು?"

"ನಾವೂ ಕೂಡ ನಿಮ್ಮ ಗುರಿಯವರೇ, ಆದರೆ, ನಿಮ್ಮ ದಾರಿಯವರಲ್ಲ. ಉತ್ತರದ ದಿಕ್ಕಿಗೇ ಪ್ರಯಾಣ ಬೆಳಸುತ್ತೇವೆ." ಎಂದ ಯಾಜ್ಞಿಕ.

"ನಾವು ಇಲ್ಲಿಂದ ಅವಿಮುಕ್ತದ ಮಾರ್ಗವಾಗಿ, ದಕ್ಷಿಣಕ್ಕೆ ಚಿತ್ರಕೂಟದ ಮೂಲಕ ಅಂತರ್ವೇದಿಗೆ ಹೋಗಲಿದ್ದೇವೆ." ಶಕಧೂಮ ಹೇಳಿದ.

"ನಾವು ಅಂತರ್ವೇದಿಯಿಂದ ಮರಳಿ ಬರುವಾಗ ಚಿತ್ರಕೂಟಕ್ಕೆ ಹೋಗುವ ಆಲೋಚನೆ ಮಾಡಿದ್ದೆವು. ಆದರೆ, ಹೇ ಗೋಮತ್..." ಯಾಜ್ಞಿಕ ಶಂಬರನ ಕಡೆಗೆ ತಿರುಗಿ ಕೇಳಿದ. "ತಮ್ಮ ಆಲೋಚನೆಯೇನು?"

"ಹೇಗಾದರೂ ಸರಿಯೇ." ಎಂದ ಶಂಬರ.

"ಒಂದಷ್ಟು ಹರಿದಾರಿ ಹೆಚ್ಚುತ್ತದೆಯಾದರೂ ನಮಗೆ ಕಾಡಿನಲ್ಲಿ ಈ ಮಂದಿಯ ಸಹವಾಸ ಸಿಗುತ್ತದೆ. ದುರ್ವಿಧಿಯಿಂದ ಎರಗುವ ಕಾಡಿನ ಅಪಾಯಗಳನ್ನು ಒಟ್ಟಿಗೆ ಎದುರಿಸಬಹುದು. ಆದರೆ ಕುದುರೆಯಿದ್ದರೂ ಕಾಲ್ನಡೆಯಷ್ಟೇ ಸಮಯ ಹಿಡಿಯುತ್ತದೆ." ಎಂದ ಯಾಜ್ಞಿಕ.

"ನನ್ನದೇನೂ ಅಭ್ಯಂತರವಿಲ್ಲ." ಎಂದ ಶಂಬರ.

ಅಲ್ಲಿಯೇ ಕೊಂಚ ಹೊತ್ತು ವಿಶ್ರಮಿಸಿ ಎಲ್ಲರೂ ಹೊರಟರು.

ಅವರು ಹಾಗೆ ಹೊರಡುತ್ತಿದ್ದಂತೆ ಸಾರ್ಥವೊಂದು ಅವರಿಗೆ ಎದುರಾಯಿತು. ವ್ಯಾಪಾರಸ್ಥರನ್ನು ನೋಡುತ್ತಿದ್ದಂತೆ ಯಾಜ್ಞಿಕನು ಎಂದಿನಂತೆ ಅವರನ್ನು ತಡೆದು ನಿಲ್ಲಿಸಿ, ವಂದನೆಗಳನ್ನು ಸಲ್ಲಿಸಿ, ಅವರು

ಎಲ್ಲಿಗೆ ಹೋಗುತ್ತಿರುವರೆಂದು ಕೇಳಿ ತಿಳಿದುಕೊಂಡ. ಜಹ್ನೂವಸ ಅರಣ್ಯದ ಮಾರ್ಗವಾಗಿಯೇ ಹೋಗುತ್ತಿರುವ ಅವರು ದಶಾರ್ಣದ ರಾಜಧಾನಿ ವಿದಿಶಾಗೆ ಹೋಗುತ್ತಿದ್ದರು. ಬೆಳ್ಳಿ, ಚಿನ್ನ ಮತ್ತು ತಾಮ್ರದ ಆಭರಣಗಳು ಮತ್ತು ವಸ್ತ್ರಗಳ ವ್ಯಾಪಾರಕ್ಕೆಂದು ಹೋಗುತ್ತಿದ್ದಾರೆಂದು ತಿಳಿಯಿತು. ಯಾಜ್ಞಿಕನು ಜಹ್ನೂವಸ ಅರಣ್ಯ ಮಾರ್ಗವಾದರೆ, ರಾತ್ರಿಯಾಗುವುದರೊಳಗೆ ಅರಣ್ಯವನ್ನು ದಾಟಲಾಗುವುದಿಲ್ಲ. ಹಾಗಾಗಿ, ಸುವಾಸ್ತುವೆಂಬ ಪ್ರಯಾಣಿಕರ ವಿಶ್ರಾಂತಿ ಗೃಹವೊಂದಿದೆ. ಅಲ್ಲಿ ರಾತ್ರಿ ತಂಗಿದ್ದು, ಧಾರಾಳವಾಗಿ ಗೋ ಮಾಂಸ ಭಕ್ಷಣೆ ಮಾಡಿ, ಬೆಳಗ್ಗೆ ಎದ್ದು ಹೋಗಬಹುದೆಂದು ಸಲಹೆ ಕೊಟ್ಟ. "ಅಲ್ಲಿ ನಮ್ಮವರು ಇರುತ್ತಾರೆ. ಯಾಜ್ಞಿಕರು ಹೇಳಿದರೆಂದು ತಿಳಿಸಿದರೆ, ತಮಗೆ ಆತಿಥ್ಯ ಸಿಗುತ್ತದೆ." ಎಂದೂ ಹೇಳಿದ. ಶಂಬರ, ಯಾಜ್ಞಿಕನು ತಿಳಿಸಿದ್ದಾನೆಂದು ಕೇಳಿ ಅಮ್ಮಿತನು ಅವರನ್ನು ಓಡಿಸದಿದ್ದರೆ ಸರಿ ಎಂದುಕೊಂಡು ನಕ್ಕ. ಯಾಜ್ಞಿಕನು ತಾವು ಈಗ ಯಾವ ಮಾರ್ಗವಾಗಿ, ಯಾರ ಜೊತೆಗೆ ಹೇಗೆ ಹೋಗುತ್ತಿದ್ದೇವೆಂದು ಹೇಳಿ, ಈ ವಿಷಯವನ್ನು ಅಲ್ಲಿರುವ ಹುಡುಗನಿಗೆ ತಿಳಿಸಬೇಕೆಂದೂ ವಿನಂತಿಸಿಕೊಂಡ. ಪಣಿಗಳು ಯಾಜ್ಞಿಕ ಕೊಟ್ಟ ಸಲಹೆಯನ್ನು ಸಂತೋಷದಿಂದ ಒಪ್ಪಿ, ಇವರ ತಂಡದ ವಿಷಯವನ್ನು ಅವರಿಗೆ ತಿಳಿಸುವುದಾಗಿ ಮಾತುಕೊಟ್ಟು ಬಹು ಗೌರವಪೂರ್ವಕವಾಗಿ ಒಬ್ಬರಿಗೊಬ್ಬರು ವಿದಾಯ ಹೇಳಿಕೊಂಡು ಬೀಳ್ಕೊಂಡರು.

ಯಾಜ್ಞಿಕನು ಮತ್ತು ಶಕಧೂಮರಿಬ್ಬರೂ ನಾನಾ ವಿಷಯಗಳಲ್ಲಿ ಜ್ಞಾನಿಗಳು. ಹಾಗಾಗಿ ತಮ್ಮ ಜ್ಞಾನ ಭಂಡಾರದಿಂದ ಪರಸ್ಪರ ಹಂಚಿಕೊಳ್ಳುತ್ತಾ ಕುದುರೆಯನ್ನು ನಡೆಸಿಕೊಂಡು ಮುನ್ನಡೆಯುತ್ತಿದ್ದರು.

ಇಬ್ಬರು ಹಣ್ಣುಹಣ್ಣಾಗಿದ್ದ ಮುದುಕನ ಕೂರಿಸಿದ್ದ ಬುಟ್ಟಿಯನ್ನು ಹೊತ್ತುಕೊಂಡು ಬರುತ್ತಿದ್ದರು. ಒಬ್ಬಾತ ದಂಡವನ್ನು ಹಿಡಿದುಕೊಂಡು ಎಲ್ಲರಿಗಿಂತ ಮುಂದೆ ಮತ್ತು ಮತ್ತೊಬ್ಬ ದಂಡಧಾರಿ ಎಲ್ಲರಿಗಿಂತ ಹಿಂದೆ ಬರುತ್ತಿದ್ದ. ಆತ ತನ್ನ ಮುಂದೆ ನಡೆಯುತ್ತಿದ್ದ ಶಂಬರನ ಕುರಿತು, "ಸ್ವಾಮೀ, ತಾವು ಕುದುರೆಯನ್ನೇರಿ ಬನ್ನಿ." ಎಂದ.

"ನನಗೆ ಕಾಡಿನಲ್ಲಿ ನಡೆದು ಅಭ್ಯಾಸವಿದೆ." ಎಂದ ಶಂಬರ ಸ್ನೇಹದಿಂದ ನಕ್ಕು, "ನಿನ್ನ ಹೆಸರೇನು?" ಎಂದು ಕೇಳಿದ.

"ನನ್ನ ಯದುವೆಂದು ಕರೆಯುತ್ತಾರೆ. ಇದೇ ಗಂಗಾ ತೀರದ ವಯನದಲ್ಲಿರುವ ವನವಾಸಿಗಳು. ನಾವೆಲ್ಲರೂ ಢುಂಢಿಯನ್ನು ನೋಡಲು ಹೋಗುತ್ತಿದ್ದೇವೆ. ಈ ವದೀರಜ್ಜನಿಗೆ ಎರಡು ನೂರು ವರ್ಷಗಳು ದಾಟಿರಬಹುದು. ಈತ ಢುಂಢಿಯನ್ನು ಎತ್ತಿ ಆಡಿಸಿದವನು. ಢುಂಢಿಗೂ ಈ ವದೀರಜ್ಜನ ಕಂಡರೆ ಅಕ್ಕರೆ. ನಮ್ಮ ಢುಂಢಿಯು ಗಣಪತಿಯಾದ ಮೇಲೂ ಈ ವದೀರಜ್ಜನ ನೋಡಲು ಹಲವು ಸಲ ಬಂದಿದ್ದಾನೆ."

"ನೀವು ಗಣಪತಿಯನ್ನು ನೋಡಿದ್ದೀರಾ?" ಶಂಬರ ಕೇಳಿದ.

"ಗಣಪತಿ ನಮ್ಮ ನಾಯಕ. ನಮ್ಮ ನಾಯಕನ ಜೊತೆಯಲ್ಲಿಯೇ ಕೆಲಸ ಮಾಡುವವರು. ಈ ವದೀರಜ್ಜನ ಕರೆದುಕೊಂಡು ಬರಲು ನಮ್ಮ ನಾಯಕನ ಅಪ್ಪಣೆಯಾದ್ದರಿಂದ ನಾವು ವಯನಕ್ಕೆ ಬಂದು ಮತ್ತೆ ಅಂತರ್ವೇದಿಗೆ ತೆರಳುತ್ತಿದ್ದೇವೆ." ಯದುವಿನ ಮಾತಿನಲ್ಲಿ ಅಭಿಮಾನವಿತ್ತು.

ಸಂಜೆ ಸೂರ್ಯಾಸ್ತಮದ ಸಮಯಕ್ಕೆ ತಂಗಲು ಯೋಗ್ಯವಾದ ಸ್ಥಳವನ್ನು ನೋಡಿ, ನೀರಿನ ಪಾತ್ರಕ್ಕೆ ಕೊಂಚ ದೂರವಾಗಿ ಎತ್ತರದ ಸ್ಥಳದಲ್ಲಿ ಬೀಡುಬಿಟ್ಟರು. ಅಲ್ಲಿಗೆ ಬಂದ ಆನೆಗಳ ಗುಂಪು ನೀರು

ಕುಡಿಯುತ್ತಿತ್ತು. ಯದು ಮತ್ತು ಅವನ ಜೊತೆಗಾರರು ಆನೆಗಳ ತೀರ ಸಮೀಪಕ್ಕೇ ಹೋಗಿ ಅಗತ್ಯವಿರುವಷ್ಟು ನೀರನ್ನು ಚರ್ಮದ ಚೀಲದಲ್ಲಿ ತಂದುದ್ದನ್ನು ನೋಡಿದ ಶಂಬರನಿಗೆ ಅವರು ಆನೆಗಳ ಜೊತೆಗೆ ಚೆನ್ನಾಗಿ ಪಳಗಿರುವವರೆಂದು ಅನ್ನಿಸಿತು.

ಅಗ್ಗಿಷ್ಟಿಕೆಯನ್ನು ಉರಿಸಿ ಎಲ್ಲರೂ ಅದರ ಸುತ್ತಲೂ ವಿಶ್ರಾಂತರಾದರು. ಯಾಜ್ಞಿಕ ಬರಿಯ ಹಣ್ಣುಗಳಷ್ಟನ್ನೇ ಸೇವಿಸಿ ಮಲಗಿದ.

ಯದುವಿನ ಇನ್ನೊಬ್ಬ ಜೊತೆಗಾರನ ಹೆಸರು ಕುಶಿಕ.

ಎಲ್ಲರೂ ವಿಶ್ರಮಿಸಿಕೊಳ್ಳುತ್ತಿದ್ದಾಗ ಯದು ಮತ್ತು ಕುಶಿಕ ಸಾರಂಗವೊಂದನ್ನು ಬೇಟೆಯಾಡಿ ತಂದರು. ಅದನ್ನು ಸುಟ್ಟುಕೊಂಡು ಎಲ್ಲರೂ ತಿಂದರು. ವದೀರಜ್ಜನಿಗೆ ಮಾತ್ರ ಯಾವುದೋ ಎಲೆಯ ರಸವನ್ನು ಕುಡಿಸಿದರು.

ಶಕಧೂಮ ಅವರ ಭಾಷೆಯ ಹಾಡುಗಳನ್ನು ಹಾಡುತ್ತಿದ್ದರೆ, ಉಳಿದವರು ಗೋಧ ಮತ್ತು ಆಘಾಟಿಗಳನ್ನು ನುಡಿಸುತ್ತಾ ನರ್ತಿಸುವುದನ್ನು ನೋಡುನೋಡುತ್ತಾ ಶಂಬರನೂ ಹುಮ್ಮಸ್ಸಿನಿಂದ ಮೇಲೆದ್ದು ಅವರೊಂದಿಗೆ ತನ್ನ ಮನದ ಆನಂದದಂತೆ ಹೆಜ್ಜೆ ಹಾಕಿ ಕುಣಿತವೆಂದೆನಿಸಿದ.

ಬುಟ್ಟಿಯೊಳಗಿದ್ದ ವದೀರಜ್ಜನನ್ನು ಮರದ ಕೆಳಗೆ ಎಲೆಗಳನ್ನು ಹರವಿ, ಅದರ ಮೇಲೆ ಚರ್ಮವನ್ನು ಹಾಸಿ ಅದರ ಮೇಲೆ ಕೂರಿಸಿದ್ದರು. ಆತನೂ ಗೋಧವನ್ನು ಬಡಿಯುವ ಹಾಗೆ ತನ್ನ ಬೆರಳುಗಳನ್ನು ತೊಡೆಯ ಮೇಲೆ ಮೆಲ್ಲನೆ ಬಡಿಯುತ್ತಿರುವುದನ್ನು ನೋಡಿದರೆ, ಆತ ಗೋಧವನ್ನು ಚೆನ್ನಾಗಿ ನುಡಿಸುವವನಿದ್ದಿರಬೇಕೆಂದು ಶಂಬರ ತರ್ಕಿಸಿದ. ಇಷ್ಟೆಲ್ಲಾ ಮನರಂಜನೆಯಿದ್ದರೂ ಯಾಜ್ಞಿಕ ಮಾತ್ರ ಚೆನ್ನಾಗಿ ನಿದ್ರಿಸುತ್ತಿದ್ದ. ಕುಶಿಕ ಆಗಾಗ್ಗೆ ವದೀರಜ್ಜನ ಬಳಿಗೆ ಬಂದು ಆತನ ಉಸಿರಾಟವನ್ನು ಗಮನಿಸಿ ಮತ್ತೆ ಕುಣಿಯಲು ಹೋಗುತ್ತಿದ್ದ.

ಕೆಲವು ಹೊತ್ತಿನ ನಂತರ ಕುಶಿಕನ ಹೊರತು ಎಲ್ಲರೂ ಮಲಗಿಕೊಂಡರು. ಕುಶಿಕ ತಂಡದ ಕಾವಲಿಗಿದ್ದ. ಮಧ್ಯರಾತ್ರಿ ಕಳೆದ ಮೇಲೆ ಯದುವನ್ನು ಎಬ್ಬಿಸಿ ಕಾವಲಿಗೆ ಕೂರಿಸುವುದೆಂದು ಮಾತಾಡಿಕೊಂಡಿದ್ದರು. ಶಂಬರನಿಗೆ ನಿದ್ರೆ ಹತ್ತಲಿಲ್ಲ. ಬಹಳ ಹೊತ್ತು ಮಗ್ಗಲು ಬದಲಿಸುತ್ತಾ ಹೊರಳಾಡಿ ಕೊನೆಗೆ ಮೇಲೆದ್ದು ಕುಶಿಕನ ಬಳಿಗೆ ಹೋದ.

ಉರಿಯುತ್ತಿರುವ ಬೆಂಕಿಯ ಬೆಳಕಲ್ಲಿ ಕುಶಿಕ ಕಡೆದಿಟ್ಟಿದ್ದ ವಿಗ್ರಹದಂತೆ ಕಂಡ. ಶಂಬರನೆದ್ದು ತನ್ನ ಕಡೆ ಬಂದುದ್ದನ್ನು ನೋಡಿ, “ನಿನಗೆ ನಿದ್ರೆ ಬರದಿದ್ದರೆ, ನಾನು ಒಂದು ಕೆಲಸ ಕೊಡುತ್ತೇನೆ.” ಎಂದ ಕುಶಿಕ. ವದೀರಜ್ಜನ ಬಳಿಯೇ ಕುಳಿತಿದ್ದು ಅವರು ನಿದ್ರಿಸುತ್ತಿರುವಾಗ ಉಸಿರಾಟವನ್ನು ಗಮನಿಸುತ್ತಿದ್ದು, ಒಂದು ವೇಳೆ ಉಸಿರಾಟದಲ್ಲಿ ವ್ಯತ್ಯಾಸವಾಗಿ ಎದೆಯನ್ನು ಉಬ್ಬಿಸಿದರೆ ಅವನ ಗಮನಕ್ಕೆ ತರುವುದು. ಇದೇ ಕುಶಿಕ ಕೊಟ್ಟ ಕೆಲಸ.

ಶಂಬರ ಸಂತೋಷದಿಂದಲೇ ಅದಕ್ಕೆ ಒಪ್ಪಿದ.

ಬೆಂಕಿಯ ಬೆಳಕಲ್ಲಿ ಅಜ್ಜನ ಬೋಳು ತಲೆಯ ಮುಂಭಾಗ ಹೊಳೆಯುತ್ತಿತ್ತು. ಗಡ್ಡ ಮತ್ತು ಮೀಸೆ ಉದ್ದವಾಗಿದ್ದು ಬೆಳ್ಳಗಿದ್ದವು. ಅವರು ಕಣ್ಣುಗಳನ್ನು ಪೂರ್ತಿ ಮುಚ್ಚಿರಲಿಲ್ಲ ಅಥವಾ ಅರ್ಧ ತೆರೆದಿದ್ದರು.

ಮೈ ಚರ್ಮ ಪೂರ್ತಿ ಸುಕ್ಕುಗಟ್ಟಿದ್ದರೂ ಅದು ತೀರಾ ಪಕ್ವವಾಗಿರುವ ಮಾವಿನ ಹಣ್ಣಿನ ಸಿಪ್ಪೆಯಂತೆ ಇತ್ತು. ಹುಬ್ಬುಗಳು ದಟ್ಟವಾಗಿದ್ದು, ಅದುವೂ ಪೂರ್ತಿ ಬೆಳ್ಳಗಾಗಿ ಸುರುಟಿಕೊಂಡಿದ್ದವು.

ತಾನು ಆಡಿಸಿ ಬೆಳೆಸಿದ ಒಬ್ಬ ಬಂಡಾಯದ ನಾಯಕನ ತಾನು ನೋಡಲು ಹೋಗುತ್ತಿದ್ದೇನೆ ಎಂದು ಇವನಿಗೆ ಅರಿವಿದೆಯೇ ಅಥವಾ ಇಲ್ಲವೇ ಎಂದು ಶಂಬರ ಯೋಚಿಸಿದ.

ತೊಡೆಯ ಮೇಲೆ ನಿಶ್ಚೇತವಾಗಿದ್ದ ಅವರ ಎಡಗೈಯನ್ನು ಮೆಲ್ಲನೆ ತೆಗೆದು ತನ್ನ ಬಲಗೈಯಲ್ಲಿಟ್ಟುಕೊಂಡು ಮೃದುವಾಗಿ ಸವರಿದ. ಮಹಾ ಗಣಪತಿಯನ್ನು ಆಡಿಸಿದ್ದ, ಪಾಲನೆ, ಪೋಷಣೆ ಮಾಡಿದ್ದ ಕೈಯೊಳಗಿನ ತರಂಗಗಳನ್ನು ಸ್ವೀಕರಿಸಲು, ಸ್ಪಂದಿಸಲು ಯತ್ನಿಸಿದ. ಆ ಅಜ್ಜನ ತುಟಿಗಳು ಮೆಲ್ಲನೆ ಅಲುಗಿದವು. ಶಂಬರ ಅವರ ಮುಖವನ್ನೇ ನೋಡುತ್ತಾ ಅವರ ಕೈಯನ್ನು ತನ್ನ ಎರಡೂ ಕೈಗಳ ಬೊಗಸೆಯಲ್ಲಿ ಹಿಡಿದು ಮೆಲ್ಲನೆ ತನ್ನ ಕೆನ್ನೆಗಿಟ್ಟುಕೊಂಡ. ವದೀರಜ್ಜನ ಕಿವಿಗಳಲ್ಲಿ ಜೋತುಬಿದ್ದಿದ್ದ ವಂಟಿಗಳು ಅಲುಗಿದಂತೆ ಕಂಡವು. ಅವನ ಕಣ್ಣುಗಳನ್ನೇ ನೋಡುತ್ತಿದ್ದ ಶಂಬರನಿಗೆ ಅವರ ಕಣ್ಣುಗಳು ಮತ್ತಷ್ಟು ತೆರೆದಂತೆ ಭಾಸವಾಯ್ತು. ಶೂನ್ಯದತ್ತ ದಿಟ್ಟಿಸುತ್ತಿದ್ದ ಆ ವೃದ್ಧ ಕಣ್ಣುಗಳಲ್ಲಿ ಬೆಂಕಿಯ ಹೊಳಪು ನರ್ತಿಸುವಂತೆ ಕಾಣುತ್ತಿತ್ತು.

*

ರಾತ್ರಿಯ ಆ ನೀರವ ಮೌನವನ್ನು ನುಂಗಿಹಾಕಲು ಗಂಗೆಗೆ ಇಷ್ಟವಿಲ್ಲದೇ ಆದಷ್ಟು ಮೆಲ್ಲನೆಯೇ ಹರಿಯುತ್ತಿದ್ದರೂ, ಸಣ್ಣ ಕಾಲಂದುಗೆಯ ಗೆಜ್ಜೆಗಳನ್ನು ನುಣುಪು ಕಲ್ಲುಹಾಸಿನ ಇಳಿಜಾರಿನಲ್ಲಿ ಒಂದೇ ಸಮನೇ ಉರುಳಲು ಬಿಟ್ಟಿದ್ದಳು. ತುಂಬುತಿಂಗಳು ನದಿಯಲ್ಲಿ ಅಲ್ಲಲ್ಲಿ ಉಬ್ಬಿದ್ದ ತೆರೆಗಳಿಗೆ ಬೆಳ್ಳಿ ನೆರಿಗೆಗಳನ್ನಿಟ್ಟಿತ್ತು. ದಡದ ಮೇಲಿರುವ ಬಂಡೆಗಳಲ್ಲಿ ವಿಶಾಲವಾಗಿರುವ ಹೆಬ್ಬಂಡೆಯ ಮೇಲೆ ಸಣ್ಣ ಸಣ್ಣ ಕಲ್ಲುಗಳನ್ನಿಟ್ಟಂತೆ ಒಂದಷ್ಟು ಮಾನವಾಕೃತಿಗಳು ಕುಳಿತಿದ್ದವು. ಹೊಳೆಯುವ ಕಣ್ಣುಗಳನ್ನು ಬಿಟ್ಟರೆ ಅವರ ಮೈ ಬಣ್ಣ ಕತ್ತಲಲ್ಲಿ ಬೇರಾಗದಷ್ಟು ಹೊಂದಿಕೊಂಡಿತ್ತು. ಆಗಾಗ ಮಿಟುಕಿಸುವ ಕಣ್ಣುಗಳನ್ನು ಬಿಟ್ಟರೆ ಅಲ್ಲಿರುವವರ ಯಾರಲ್ಲೂ ಚಲನೆಯಿರಲಿಲ್ಲ ಮೆಲ್ಲನೆ ಮಾತಾಡುತ್ತಿರುವ ವದೀರಜ್ಜನ ಹೊರತು. ಆತನೋ, ತನ್ನ ಮಬ್ಬಾಗಿರುವ ಕಣ್ಣುಗಳ ಮುಂದೆ ಕಾಣುತ್ತಿರುವ ಚಿತ್ರಗಳನ್ನು ಸಾವಧಾನವಾಗಿ ಗಮನಿಸಿ, ಅದನ್ನು ಹೇಳುವ ಮುನ್ನ ಸರಿಯಾಗಿದೆಯೋ ಇಲ್ಲವೋ ಎಂದೊಮ್ಮೆ ತನ್ನೊಳಗೇ ಪರೀಕ್ಷಿಸಿಕೊಂಡು ನಿಧಾನವಾಗಿ ನುಡಿಗಳನ್ನು ಹರಿಯಬಿಡುತ್ತಿದ್ದಂತೆ ಮಾತಾಡುತ್ತಿದ್ದ. ಅದುವರೆಗೂ ಆ ಹುಡುಗರ ಕುಣಿತಕ್ಕೆ ಲಯ ಒದಗಿಸಿದ್ದ ಗೋಧ ವದೀರಜ್ಜನ ಪಕ್ಕದಲ್ಲಿ ವಿಶ್ರಮಿಸಿತ್ತು.

"ಮೊದಲನೆಯ ಸಲ ನಮ್ಮ ಕಾಡಿಗೆ ಆ ಬಿಳಿಜನ ಬಂದಾಗ, ಯಾರಪ್ಪಾ ಇವರು ಅಂತ ಅಂದ್ಕೊಂಡು ನೋಡ್ಕೊಂಡು ನಾವು ನಿಂತಿದ್ವಿ. ಅವರು ನೋಡಕ್ಕೆ ತುಂಬಾ ಚೆನ್ನಾಗಿದ್ದರು. ಬೆಳ್ಳಗೆ, ಕೆಂಪು ಕೆಂಪಾಗಿ ಇದ್ದರು. ಎತ್ತರಕ್ಕೆ, ಮೈ ಕೈ ತುಂಬಿಕೊಂಡು ಫಲಕ್ಕೆ ಬಂದಿರೋ ಹಸುಗಳಂಗೆ ಇದ್ದರು. ನಗ್ತಾ ನಗ್ತಾಯಿರೋ ಮುಖಗಳು. ಅವರ ಜೊತೆಗೆ ನಮ್ಮ ನಾಡಿನ ರಾಜ ಕಳುಹಿಸಿದ್ದ ಮಂತ್ರಿಗಳು, ಸೈನಿಕರೂ ಬಂದಿದ್ದರು. ಆ ಬಿಳಿಯ ಜನ ನಮ್ಮ ನಾಯಕನಿಗೆ ನಗುತ್ತಾ ನಮಸ್ಕಾರ ಅಂದರು. ನಮ್ಮ ನಾಯಕ ಕಣ್ಣು ಬಾಯಿ ಬಿಟ್ಟುಕೊಂಡು ನಿಂತಿದ್ದ. ನಮ್ಮ ನಾಯಕನ ತೋರಿಸಿದ ಮಂತ್ರಿಗಳು, ಆ ಬಿಳಿಯ ಜನಕ್ಕೆ ಪರಿಚಯ ಮಾಡಿಕೊಟ್ಟರು. ಇವರು ಕಾಡುಜನರು, ನಮ್ಮ ನಾಡಿನ ಸುತ್ತ ಇರೋ ಕಾಡುಗಳಲ್ಲಿ ಈ ತರದ ಕಾಡುಜನರ ಗುಂಪುಗಳಿವೆ. ಅವರೇ ನಮ್ಮ ನಾಡನ್ನೂ ಮತ್ತು ಕಾಡನ್ನೂ ಕಾಪಾಡ್ತಾ ಇರೋದು, ಅಂತೆಲ್ಲಾ

ಹೇಳಿದರು. ಓಹೋ, ಇವರು ಅರಣ್ಯಕರೇನು? ನಾಡಿನ ಮತ್ತು ಕಾಡಿನ ರಾಕ್ಷಸರು! ಸಂತೋಷ, ಸಂತೋಷ! ಅಂತ ಬಿಳಿಯ ಜನದವನೊಬ್ಬ ಹೇಳಿದ. ಅವರು ಸಂಸ್ಕೃತ ಮಾತಾಡೋ ಜನ. ಅವರು ಮಾತಾಡಿದರೆ ಹಾಡಿನಂತೆ ಇತ್ತು. ಅವರು ನವಿರಾಗಿ, ಮೆಲ್ಲನೆ ವೀಣೆ ತಂತಿ ಮೀಟಿದಂತೆ ಮಾತಾಡುತ್ತಿದ್ದರು. ಅವರು ಮಾತಾಡುವುದು ನಮಗೆ ಏನೂ ತಿಳಿಯದೇ ಹೋದರೂ ಮತ್ತೆ ಕೇಳೋಣ ಅಂತ ಅನ್ನಿಸುತ್ತಿತ್ತು. ನಾವು ಹುಡುಗರು, ಅವರು ಮಾತಾಡೋ ರೀತಿಗೆ ಮುಖ ಮುಖ ನೋಡಿಕೊಂಡು ನಕ್ಕೆವು. ನಾವು ಮತ್ತು ದೊಡ್ಡವರೂ ಸಹ ಅವರು ಎಲ್ಲಿಗೆ ಹೋದರೂ ಗುಂಪು ಗುಂಪಾಗಿ ಅವರ ಹಿಂದೆಯೇ ಹೋಗುತ್ತಿದ್ದೆವು. ಬರೀ ತಿಕಕ್ಕೆ ಚರ್ಮ ಕಟ್ಟಿಕೊಳ್ಳುತ್ತಿದ್ದ ನಮಗೆ, ಅವರು ಹತ್ತಿಯಲ್ಲಿ ಮಾಡಿರೋ ಬಟ್ಟೆಯನ್ನು ಸೊಂಟದಿಂದ ಕಾಲಿನವರೆಗೂ ಹಾಕ್ಕೊಂಡಿರೋದ್ದನ್ನ ನೋಡಿ ನಮ್ಮಲ್ಲಿ ಕೆಲವರು ನಗುತ್ತಿದ್ದರು. ಮಂತ್ರಿಗಳು ಮತ್ತು ಸೈನಿಕರು ಬಿಳಿಯ ಜನರ ಜೊತೆ ನಮ್ಮ ಕಾಡಿನಲ್ಲೆಲ್ಲಾ ಓಡಾಡಿದರು. ಅವರು ಅವರಿಗೆ ಸರಿಹೋಗುವ ಜಾಗಕ್ಕಾಗಿ ನೋಡ್ತಿದ್ದರು. ಕೊನೆಗೆ ಇದೇ ನದಿಯ ಮೇಲ್ಭಾಗದಲ್ಲಿ, ದಡದಲ್ಲಿ ಜಾಗ ನೋಡಿ ಇದು ಸರಿಯಾಗಿದೆ ಅಂತ ತಲೆಯಾಡಿಸಿದರು."

ಅಲ್ಲಿದ್ದವರಲ್ಲಿ ಯಾರಿಗೂ ಅವಸರವಿರಲಿಲ್ಲ. ದಿನದ ಕೊನೆಯ ಚಟುವಟಿಕೆಯಾಗಿ ಮಲಗಲು ಸಿದ್ಧವಾಗಿದ್ದವರು ಅವರು. ತಾನು ಕೇಳಿದ್ದರ ಬಗ್ಗೆ ಆ ವೃದ್ಧ ಮತ್ತೆ ಪ್ರಶ್ನಿಸನೆಂಬ ಖಾತ್ರಿಯಿದ್ದವರಂತೆ, ಅವನ ಮಾತುಗಳನ್ನು ಕಿವಿಗಳ ಮೇಲೆ ತಮ್ಮ ಪಾಡಿಗೆ ತಾವು ಬೀಳಲು ಬಿಟ್ಟಿದ್ದರು. ತಾವು ಸಣ್ಣ ಹುಡುಗರಿದ್ದಾಗಿನಿಂದ ಈ ರೀತಿ ಇವನಿಂದ ಕೇಳಿ ಅನುಭವವಿದ್ದ ನಡುವಯಸ್ಸಿನವರು ಆಗಲೇ ನಿದ್ದೆಗೇ ಜಾರಿದ್ದರು.

ಹತ್ತನ್ನೆರಡು ವರುಷದ ಹುಡುಗರು ಯಾವುದೋ ಮಾಯಾಜಾಲದ ಕಥೆಯನ್ನು ಕೇಳುವಂತೆ ಕುತೂಹಲದಿಂದ ಕಿವಿಗೊಟ್ಟು ಅವನನ್ನೇ ಪಿಳಿಪಿಳಿ ನೋಡುತ್ತಿದ್ದರು. ಮಾರ, ಆಸುರ, ಪಿಚುಡಲ ಮತ್ತು ಮಿತ ಆಗಾಗ್ಗೆ ಆಕಳಿಸುತ್ತಿದ್ದರೂ, 'ನೀನು ಹೇಳು ಅಜ್ಜ," ಎಂದು ಸರಿಯಾಗಿ ಸೆಟೆದು ಕುಳಿತುಕೊಳ್ಳುತ್ತಿದ್ದರು. ವದೀರಜ್ಜನ ಹೇಳುವಿಕೆ ಮುಂದುವರಿಯಲು ಅವರೇ ಸ್ಫೂರ್ತಿ. ಆ ಹುಡುಗರಲ್ಲಿ ಢುಂಢಿ ರೆಪ್ಪೆಯನ್ನೂ ಮಿಟುಕಿಸದೇ ವದೀರಜ್ಜನ ನೋಡುತ್ತಲೇ ಇದ್ದ. ಆ ವದೀರಜ್ಜನೇ ಇವನಿಗೆ ಎಷ್ಟೋ ವಿಷಯಗಳಲ್ಲಿ ಆಚಾರ್ಯ. ಯಾವುದೇ ಪ್ರಾಣಿಯನ್ನು ವದೀರಜ್ಜ ಕೊಂದರೂ ಆ ಪ್ರಾಣಿ ನೋವಿನಿಂದ ಸತ್ತಿತು ಎಂದು ಎನಿಸುತ್ತಿರಲಿಲ್ಲ. ಅರ್ಧ ಮೊಳದಷ್ಟಿದ್ದ ಹರಿತವಾದ ಚೂರಿಯನ್ನು ಬೆಣ್ಣೆಯಲ್ಲಿ ಕೂದಲು ತೆಗೆದಂತೆ ನಾಜೂಕಾಗಿ ಆ ಪ್ರಾಣಿಯ ಕುತ್ತಿಗೆಯ ಮೂಲಕ ಹಾಯಿಸುತ್ತಿದ್ದನು. ಬೇರೆಯವರು ಕೊಯ್ದಾಗ ನರಳಾಡುತ್ತಾ ಸಾಯುವಂತೆ ವದೀರಜ್ಜನ ಕೈಯಲ್ಲಿ ಪ್ರಾಣಿಗಳು ಸಾಯುತ್ತಿರಲಿಲ್ಲ. ತಾವಾಗಿ ವದೀರಜ್ಜನಿಗೆ ಸಮರ್ಪಿಸಿಕೊಳ್ಳುತ್ತಿದ್ದವು.

ಕೆಲವೊಮ್ಮೆ ವದೀರಜ್ಜ ಕೆಲವು ಪ್ರಾಣಿಗಳನ್ನು ಕೊಯ್ಯದೇ ಬಿಟ್ಟುಬಿಡುತ್ತಿದ್ದ.

ಈ ವದೀರಜ್ಜ ಎಂತಹ ಪ್ರಾಣಿಯನ್ನಾದರೂ ಕೊಯ್ದುಬಿಡುತ್ತಾನೆಂದು ನಂಬಿದ್ದ ಢುಂಡಿ, "ಯಾಕಜ್ಜಾ, ಅದನ್ನು ಕೊಯ್ಯದೇ ಬಿಟ್ಟುಬಿಟ್ಟೆ?" ಎಂದು ಕೇಳಿದರೆ, "ಇಲ್ಲವೋ, ಅದು ನಮ್ಮ ಅಡುಗೆಯ ಮಡಿಕೆಗೆ ಬರಕ್ಕೆ ಒಪ್ತಾಯಿಲ್ಲ." ಅನ್ನುತ್ತಿದ್ದ ವದೀರಜ್ಜ.

"ನಾವು ಅದನ್ನ ತಿನ್ನಕ್ಕೆ ಅದು ಒಪ್ಕೋ ಬೇಕಾ?"

"ಹೌದು, ನಮ್ಮ ಊಟ ಆಗಕ್ಕೆ ಬರುತ್ತೀಯಾ? ಅಂತ ಕೇಳ್ಕೊಂಡಾಗ ಅದು ಒಪ್ಕೊಳ್ಳತ್ತೆ. ಹಾಗೆ ಒಪ್ಕೊಂಡ ಪ್ರಾಣಿಗಳು, ಮರದಿಂದ ಮಾಗಿರೋ ಹಣ್ಣು, ಕೀಳೋ ಮುಂಚೆ ಮುಟ್ಟಿದ ತಕ್ಷಣ ಕೈಗೆ ಬರೋಹಾಗೆ ಬಂದುಬಿಡತ್ವೆ. ಆಗಲೇ ಅವು ಕುಯ್ಯುವಾಗ ಬಾಯಿ ಬಡ್ಕೋಳ್ಳೋದಿಲ್ಲ."

ಒಂದು ಪ್ರಾಣಿಯನ್ನು ಕುಯ್ಯುವಾಗಲೂ, ಒಂದು ಮರವನ್ನು ಕಡೆಯುವಾಗಲೂ, ಒಂದು ಮರದಿಂದ ಅಥವಾ ಗಿಡದಿಂದ ಹಣ್ಣನ್ನೋ, ಕಾಯನ್ನೋ, ಹೂವನ್ನೋ ಅಥವಾ ಬರೀ ಎಲೆಯನ್ನೋ ಕೀಳುವಾಗಲೂ ಬೊಗಸೆಯೊಡ್ಡಿ, ಕಣ್ಮುಚ್ಚಿ ವದೀರಜ್ಜ ನಿಲ್ಲುತ್ತಿದ್ದುದ್ದನ್ನು ಥುಂಥಿ ನೋಡಿದ್ದ. ಆದರೆ ಏಕೆಂದು ಅವನಿಗೆ ಅರ್ಥವಾಗಿರಲಿಲ್ಲ.

"ಈ ಮಣ್ಣಲ್ಲಿ ನಾವಿದ್ದಂಗೇ ಅವೂ ಕೂಡ. ನಮ್ಗೂ, ಅವುಗಳಿಗೂ ಒಂದು ಕಡೆಯಿಂದಾನೇ ಜೀವಾಂತ ಅನ್ನೋದು ಬಂದಿರೋದು. ನಾವು ಕೇಳ್ಕೊಂಡಾಗ, ಅವುಗಳು ಸರೀ, ನಿನ್ನ ಜೀವಕ್ಕೆ ನನ್ನ ಜೀವ, ನಿನ್ನ ಬದ್ಕಿಗೆ ನನ್ನ ಬದ್ಕು ಅಂತ ಹೂಂ ಅಂತಂದ್ರೇನೇ ನಾನು ಕೈ ಹಾಕಕ್ಕೆ ಅಪ್ಪಣೆ. ಇಲ್ಲದೇ ಓದ್ರೆ ನಾನು ಕೈ ಹಾಕಕ್ಕೆ ಹಕ್ಕೇ ಇಲ್ಲ." ಎನ್ನುತ್ತಿದ್ದ ವದೀರಜ್ಜನ ಕಂಡೇ ಥುಂಥಿಯೂ ಏನನ್ನೇ ತಿನ್ನುವ ಮುನ್ನ ಅಂದಿನ ಆ ಊಟ ಕೊಟ್ಟಿದ್ದಕ್ಕೆ ಕಾಣದೇ ಇರೋ ಒಡೆಯನಿಗೆ ವಂದನೆ ಹೇಳಿ ಮೊದಲ ತುತ್ತನ್ನ ಬಾಯಿಗಿಟ್ಟುಕೊಳ್ಳುತ್ತಿದ್ದದ್ದು. ವಯನದವರೆಲ್ಲರೂ ಹಾಗೆಯೇ ಮಾಡುವುದನ್ನು ಥುಂಥಿ ನೋಡಿದ್ದಾನೆ. ಯಾರೋ ಕೆಲವರು ಆತುರಗೇಡಿಗಳು ಊಟದ ಒಡೆಯನಿಗೆ ವಂದನೆ ಹೇಳದೇ ಊಟ ಮಾಡುತ್ತಿದ್ದದ್ದು.

ಊಟಕ್ಕಿದ್ದಂತೆ, ನೀರಿಗೂ, ನದಿಗೂ, ಮರ–ಗಿಡಗಳಿಗೂ, ಮಣ್ಣಿಗೂ, ಪ್ರಾಣಿಗಳಿಗೂ, ಮನುಷ್ಯರಿಗೂ, ಕೋಪಕ್ಕೂ, ಸಂತೋಷಕ್ಕೂ, ಮಳೆಗೂ, ಗುಡುಗಿಗೂ, ಬಿಸಿಲಿಗೂ, ಪ್ರವಾಹಕ್ಕೂ, ಗಾಳಿಗೂ ಎಲ್ಲಕ್ಕೂ ಒಡೆಯರಿದ್ದಾರಂತೆ. ಈ ಒಡೆಯರು ಹೆಣ್ಣೂ ಅಲ್ಲವಂತೆ, ಗಂಡೂ ಅಲ್ಲವಂತೆ. ನಮ್ಮ ಹಾಗೆ ಮುಖ ಮೂತಿ ಏನೂ ಇಲ್ಲವಂತೆ. ಕಾಲುಗಳು ಇಲ್ಲದಿದ್ದರೂ ನಡೀತಾವಂತೆ, ಕೈಗಳು ಇಲ್ಲದಿದ್ದರೂ ಹಿಡಿತಾವಂತೆ, ಕಣ್ಣುಗಳು ಇಲ್ಲದಿದ್ದರೂ ನೋಡ್ತಾವಂತೆ, ಬಾಯಿ ಇಲ್ಲದೇ ಇದ್ದರೂ ಮಾತಾಡ್ತಾವಂತೆ, ಕಿವಿಗಳು ಕೇಳ್ದೇ ಇದ್ದರೂ ಕೇಳ್ತಾವಂತೆ. ಆ ಒಡೆಯರುಗಳಿಗೆ ಭಾಷೆನೇ ಇಲ್ಲವಂತೆ. ಆದರೂ ಎಲ್ಲಾ ತಿಳಿಸ್ತಾವಂತೆ. "ಈ ಒಡೆಯರು ಹೇಳೋದು ನಮಗೆ ಎಂಗೆ ತಿಳೀತಾದೆ ವದೀರಜ್ಜಾ?" ಅಂದರೆ, ನಮ್ಮ ಕಾಲುಗಳನ್ನ ನಾವು ನಡಿಸಬಾರದು, ಅವೇ ನಡೀಬೇಕು. ನಮ್ಮ ಕಣ್ಣುಗಳಿಂದ ನಾವು ನೋಡಬಾರದು, ಅವೇ ನೋಡಬೇಕು. ನಾವು ನಮ್ಮ ಕಿವಿಗಳಿಂದ ಕೇಳಕ್ಕೆ ಹೋಗಬಾರದು, ಅವೇ ಕೇಳಿಸಬೇಕು. ಒಟ್ಟಾರೆ, ನಾವು ಏನೂ ಮಾಡದೇ ಅಂಗೇ ಏನೇಳ್ತೀಯಾಪ್ಪಾ ಅಂತ ಸುಮ್ಮನಿದ್ದರೆ ಅದೇ ಹೇಳತ್ತಂತೆ. ವದೀರಜ್ಜನ ಹಿರೀಕರೆಲ್ಲರೂ ಹಂಗೇನೇ ಕೇಳಿದ್ದು, ನೋಡಿದ್ದು, ಆಡಿದ್ದು.

"ನೀನು ಕೇಳಲಿಲ್ಲಾಂದ್ರೆ ನಾನು ನಿನಗೆ ಹೇಳಬಾರದು. ನೀನು ಕಣ್ಮುಂದೆ ಬರಲಿಲ್ಲಾಂದ್ರೆ ನಾನು ನಿನ್ನ ನೋಡಬಾರದು." ಅಂದು ತಾವಾಡಿದ್ದ ಬೇಟೆಯನ್ನು ಹೊತ್ತು ತರುತ್ತಿದ್ದ ವದೀರಜ್ಜ ಥುಂಥಿಗೆ ಹೇಳಿದ.

"ನಾನು ಕೇಳಲಿಲ್ಲಾಂದ್ರೆ ನೀನು ಹೇಳ್ತಿರಲಿಲ್ಲವಾ ಅಜ್ಜಾ?" ಎಂದು ಥುಂಥಿ ಕೇಳಿದರೆ, ಇಲ್ಲವೆಂದು ತಲೆಯಾಡಿಸಿದ ವದೀರಜ್ಜ.

ಆದರೆ, ತಾನು ಏನೂ ಕೇಳದಿದ್ದರೂ, ಮಾಗಿದ ಹಣ್ಣಿಂದ ವಾಸನೆ ತಾನೇ ಬರುವಂತೆ, ಅರಳಿರುವ ಹೂವಿನಿಂದ ಪರಿಮಳ ತಾನೇ ಬರುವಂತೆ ವದೀರಜ್ಜನ ಬದುಕಿದ್ದ ಬಾಯಿಂದ ಮಾತುಗಳು ಬರುತ್ತಿದ್ದವು. ಅವು ಬರುವಾಗ ತಂಪಾಗೇ ಇರುವ ತನ್ನೊಡಲಿಗೆ ಇನ್ನಷ್ಟು ತಂಪು ನೀಡಿ ಜೊತೆಯಾಗಿ ಹರಿಯುತ್ತಾ

ಕರೆದೊಯ್ಯಲು ಬೀಳುವ ಮಳೆಯನ್ನು ಬೊಗಸೆಯೊಡ್ಡಿ ಸ್ವೀಕರಿಸುವ ಇಳೆಯಂತೆ ಢುಂಢಿಯ ಕಿವಿಗಳು ಬೊಗಸೆಯಾಗುತ್ತವೆ.

“ಮಂತ್ರಿಗಳು ನಮ್ಮ ನಾಯಕನಿಗೆ ಹೇಳಿದರು. ಇವರು ಆರ್ಯರು ಅಂತಾರಲ್ಲಾ ಆ ಜನದವರು. ಅವರಲ್ಲಿ ಇವರಿಗೆ ಋಷಿಗಳು ಅಂತಾರೆ. ಬಹು ದೊಡ್ಡ ವಿದ್ಯಾವಂತರು. ಅವರಿಗೆ ಜನಗಳ ಗಲಾಟೆ ಇಲ್ಲದ ಜಾಗ ಬೇಕೂಂತ ಕೇಳಿಕೊಂಡು ನಮ್ಮ ರಾಜನ ಕಡೆ ಬಂದಿದ್ದರು.

ಇವರಿಗೆ ದೇವರುಗಳ ವಿಷಯ ಚೆನ್ನಾಗಿ ಗೊತ್ತು. ದೇವರುಗಳ ಜೊತೆ ಮಾತಾಡುತ್ತಾರೆ. ದೇವರುಗಳಿಗೆ ಇವರೇ ಶಕ್ತಿ ಕೊಡುವವರು. ನದಿಗೆ, ಮಳೆಗೆ, ಪ್ರಾಣಿಗಳಿಗೆ ಒಡೆಯರಿಲ್ಲವಾ? ಆ ಒಡೆಯರಿಗೇ ಇವರು ದೇವರು ಅಂತ ಹೇಳುವುದಂತೆ. ನಾಡಲ್ಲಿ ಇದ್ದರೆ ಗದ್ದಲ ಇರತ್ತೆ. ಇವರಿಗೆ ವಿದ್ಯಾಭ್ಯಾಸ, ತಪಸ್ಸು, ಧ್ಯಾನ ಮಾಡಕ್ಕೆ ಆಗಲ್ಲ ಅಂತ ಇಲ್ಲಿಗೆ ಬಂದಿದ್ದಾರೆ. ಅವರಿಗೆ ಏನೂ ತೊಂದರೆ ಆಗದ ಹಾಗೆ ನೋಡಿಕೊಳ್ಳಿ ಅಂತ.

ಆ ಜನಕ್ಕೆ ಏನೇನೋ ವಿದ್ಯೆಗಳು ಗೊತ್ತಿದ್ದವು. ಅವರಿಗೆ ಮಂತ್ರದ ವಿದ್ಯೆಗಳೆಲ್ಲಾ ಗೊತ್ತಿದ್ದವು. ಒಳ್ಳೆಯದಾಗಲಿ ಅಂದರೆ ಒಳ್ಳೆಯದಾಗತ್ತೆ, ಕೆಟ್ಟದಾಗಲಿ ಅಂದರೆ ಕೆಟ್ಟದಾಗತ್ತೆ ಅಂತೆಲ್ಲಾ ಪುಕಾರಿತ್ತು. ಈ ಕಾಡಲ್ಲಿರೋ ಗಿಡಗಳಿಗೆ, ಮರಗಳಿಗೆ ಇಂತವೇ ಹೆಸರು ಅಂತ ಹೇಳ್ತಿದ್ದರು. ಅವುಗಳನ್ನ ತಕ್ಕೊಂಡು ಅವರಿಗೆ ಮದ್ದು ಮಾಡೋದು ಬರುತ್ತಿತ್ತು. ಕೆಲವರಂತೂ ಮಾತಾಡೋದನ್ನ ಕೈಯಿಂದ ಗೀಚಿ, ಆಮೇಲೆ ಅದನ್ನ ಹೇಳುತ್ತಿದ್ದರು. ಒಂದೊಂದು ಮಾತಿಗೂ ಒಂದೊಂದು ಗೆರೆ–ಗುಂಡು–ಏನೇನೋ ಗೀಚುತ್ತಿದ್ದರು. ಎಲ್ಲಾರೂ ಒಟ್ಟಾಗಿ ಕುಳಿತುಕೊಂಡು ಒಬ್ಬರೇ ದಪ್ಪ ದನಿಯಲ್ಲಿ ಹಾಡುವಂತೆ ಒಂದೇ ಸಮನೆ ಹಾಡುತ್ತಿದ್ದರು.

ನಮ್ಮ ಹಾಗೇ ಗುಡಿಸಲುಗಳನ್ನು ಕಟ್ಟಿಕೊಂಡರೂ, ಅವರದು ಏನೋ ಒಂದು ರೀತಿಯಲ್ಲಿ ಚೆನ್ನಾಗಿರುತ್ತಿದ್ದವು. ಅಲ್ಲಲ್ಲಿ ಕಟ್ಟೆಗಳನ್ನು ಕಟ್ಟಿಕೊಂಡು ಅದರಲ್ಲಿ ಬೆಂಕಿ ಹಾಕಿಕೊಂಡು ಮಂತ್ರ ಹೇಳುತ್ತಿದ್ದರು. ರಾಜನೂ ಇಲ್ಲಿಗೆ ಅವಾಗಾವಾಗ ಬಂದು ಈ ಬಿಳಿಯ ಜನಕ್ಕೆ ನಮಸ್ಕಾರ ಮಾಡಿ ಹೋಗುತ್ತಿದ್ದ. ನಮಗೆ ಇವರು ಮಾತಾಡುವುದನ್ನು ನೋಡಿದರೆ ನಗುವೋ ನಗು. ಗಂಡಸರೂ ಹೆಂಗಸರಂತೆ ಮಾತಾಡುತ್ತಿದ್ದರು. ಎಲ್ಲದಕ್ಕೂ ನಗುತ್ತಾ ಇರುತ್ತಿದ್ದರು.”

“ಮತ್ತೆ ಗಲಾಟೆಗೆ ಹೆಂಗೆ ಹತ್ತಿಕೊಂಡಿತು?” ಢುಂಢಿ ಕೇಳಿದ.

“ಮೊದಲು ಮೊದಲು ಎಲ್ಲಾ ಚೆನ್ನಾಗೇ ಇತ್ತು. ಈ ಬಿಳಿಯ ಜನ, ನಾವು ಇರೋ ಕಡೆ ನದಿಗೆ ಬರಬೇಡಿ, ಅಲ್ಲಿ ಉಚ್ಚೆ–ಕಕ್ಕಸ್ಸು ಮಾಡಬೇಡಿ, ಸ್ನಾನ ಮಾಡಬೇಡಿ ಅಂತ ನಮಗೆ ಹೇಳಿದರು. ನಮ್ಮ ಕಡೆ ಕೆಲವು ಹುಡುಗರು, ಅವರು ಯಾರು ಕೇಳಕ್ಕೆ, ಅದು ನಮ್ಮ ಜಾಗ ಅಂತ, ಬೇಕಂತಾನೇ ಹೋಗಿ ಉಚ್ಚೆ–ಕಕ್ಕಸ್ಸು ಮಾಡೋದು, ಸ್ನಾನ ಮಾಡೋದು ಮಾಡಿ ಬರ್ತಿದ್ದರು. ಹಾಗೆ ಮಾಡಿದರೆ ಅವರಿಗೆ ಮೈಲಿಗೆ ಆಗ್ತಿತ್ತಂತೆ.

ಅದಕ್ಕೆ ನಮ್ಮ ರಾಜ, ನಮ್ಮ ನಾಯಕನಿಗೆ ಹೇಳಿ ಕಳುಹಿಸಿದ. ಹಾಗೆಲ್ಲಾ ಮಾಡಿದರೆ ನಿಮಗೆ ಶಿಕ್ಷೆ ಕೊಡಬೇಕಾಗತ್ತೆ ಅಂತ. ನಮ್ಮ ನಾಯಕನಿಗೆ ಕೋಪ ಬಂದಿತ್ತು. ಆದರೆ, ಏನು ಮಾಡೋದು? ಅವರ ಹತ್ತಿರ ಕತ್ತಿ ಗುರಾಣಿ ಎಲ್ಲಾ ಇರೋ ಸೈನ್ಯ ಇತ್ತು. ಸರಿ, ನಮ್ಮ ನಾಯಕ ಇಲ್ಲಿಗೆ ಬಂದು ಕಾಡಿನಲ್ಲಿ ನಮ್ಮ ಜನಕ್ಕೆಲ್ಲಾ ಹೇಳಿದ, ಆ ಬಿಳಿಯ ಜನರ ತಂಟೆಗೆ ಹೋಗಬೇಡಿ ಅಚಿತ.

ರಾಜನಿಗೆ ಹೋಗಿ ದೂರಿತ್ತಿದ್ದಾರಲ್ಲಾ ಅಂತ ನಮ್ಮ ಪಡ್ಡೆ ಹುಡುಗರು ಬೇಕಂತಾನೇ ಚೆನ್ನಾಗಿ ಗವುಡ ಕುಡಿದು ನೆತ್ತಿಗೇರಿದ್ದಾಗ, ಅವರು ಯಾಗ ಮಾಡೋ ಹೊತ್ತಿಗೆ ಹೋಗಿ ಅವರ ಪೂಜೆ ಮಾಡೋ ಬೆಂಕಿಯಲ್ಲಿ ಮಾಂಸವೆಲ್ಲಾ ಬಿಸಾಕಿ ಚೆನ್ನಾಗಿ ಬೇಯಲಿ ಆಮೇಲೆ ಬಂದು ತಿಂತೀವಿ ಅಂತನ್ನೋದು. ಅವರಿಗೂ ಬಲವಂತವಾಗಿ ಗವುಡ ಕುಡಿಸೋದು ಎಲ್ಲಾ ಮಾಡ್ತಿದ್ದರು."

"ಅವರು ಗವುಡ ಕುಡಿತಿರಲಿಲ್ಲವಾ? ಮಾಂಸ ತಿನ್ನುತ್ತಿರಲಿಲ್ಲವಾ?" ಘುಂಡಿ ಕೇಳಿದ.

"ಅವರೂ ಕುಡಿತಿದ್ದರು. ಆದರೆ ಅವರು ನಮ್ಮ ಹಾಗೆ ಈಚಲ ಮರದಿಂದ, ತಾಳೇ ಮರದಿಂದ ಇಳಿಸುತ್ತಿರಲಿಲ್ಲ. ಅದೆಂತದ್ದೋ ಗಿಡ ಮೂಲಿಕೆಯನ್ನು ಕಾಯಿಸಿ ಮಾಡ್ತಿದ್ದರು. ಸೋಮ ಅಂತಿದ್ದರು. ಅದಕ್ಕೂ ಒಬ್ಬ ದೇವರೂಂತ ಇದ್ದ. ಅವನಿಗೆ ಹಾಡು ಹೇಳಿಕೊಂಡು ಸೋಮ ಮಾಡ್ತಿದ್ದರು. ಕುಡಿತಿದ್ದರು. ಮಾಂಸ ತಿನ್ನುತ್ತಿದ್ದರು. ಅಯ್ಯೋ, ಅವರಿಗೆ ಎಲ್ಲದಕ್ಕೂ ಹಸುವಿನ ಮಾಂಸವೇ ಆಗಬೇಕು. ಅದನ್ನೇ ಬಲಿ ಕೊಡ್ತಾಯಿದ್ದದ್ದು. ಮನೆಗೆ ಬರೋ ನೆಂಟರಿಷ್ಟರಿಗೆ ಎಳೆಯ ಹಸುವಿನದೋ, ಕರುವಿನದೋ ಮಾಂಸ ಮಾಡಿಡುತ್ತಿದ್ದರು. ತಮಗೆ ದಿನಾ ತಿನ್ನೋ ಊಟಕ್ಕೆ ದನಗಳನ್ನ ತಿನ್ನುತ್ತಿದ್ದರು. ಇನ್ನೂ ಕೆಲವರು ಮಾಂಸವೇ ಬೇಡ, ಅದು ನಮಗೆ ಮನುಷ್ಯರಿಗೆ ಒಗ್ಗೋದಲ್ಲ, ತಪಸ್ಸು ಮಾಡುವವರಿಗೆ ಒಳ್ಳೆಯದಲ್ಲ ಅಂತ ಬರೀ ತರಕಾರಿ, ಗೆಡ್ಡೆ ಗೆಣಸು, ಹಣ್ಣುಗಳನ್ನು, ಕಾಳುಗಳನ್ನು ಕೆಲವು ಸಲ ಬೇಯಿಸಿಕೊಂಡು, ಕೆಲವನ್ನು ಹಾಗೇ ಹಸಿಯಾಗೇ ತಿನ್ನುತ್ತಿದ್ದರು.

ಅವರ ಹೆಂಗಸರು ಕೆಲವರು ನೀರಿಗೆ ಅಂತ ಹೋದಾಗ ನಮ್ಮ ಪಡ್ಡೆ ಹುಡುಗರು ಕೂಟ ಮಾಡಕ್ಕೆ ಹೋದರು. ಕೆಲವರು ತಾವೇ ಮೆತ್ತಗೆ ಕದ್ದು ಮುಚ್ಚಿ ಬಂದು ಸದ್ದಿಲ್ಲದೇ ಮಾಡಿಸಿಕೊಂಡು ಹೋಗ್ತಿದ್ದರು. ಕೆಲವರು ಗಲಾಟೆ ಮಾಡಿಕೊಂಡು ಹೋಗುತ್ತಿದ್ದರು. ಅವರಲ್ಲಿ ಮದುವೆ ಅಂತ ಮಾಡಿಕೊಂಡಿದ್ದಾರಲ್ಲಾ, ಅದಕ್ಕೆ ಮದುವೆಯಾದವರಿಗೆ ಇನ್ನೊಬ್ಬ ಹೋಗಿ ಕೂಟ ಮಾಡಬಾರದು ಅಂತ."

"ಅವರೂ ಮುಂಚೆಗೆ ಮದುವೆ ಮಾಡ್ಕೊಳ್ತಿರಲಿಲ್ಲವಾ?" ಘುಂಡಿ ಕೇಳಿದ.

"ಛೇ, ಈ ದರಿದ್ರ ಮದುವೆಯನ್ನ ಯಾರೂ ಮಾಡ್ಕೊತ್ತಿರಲಿಲ್ಲ. ಯಾರು ಯಾರು ಜೊತೆ ಬೇಕಾದರೂ ಕೂಡ ಕೂಟ ಮಾಡ್ಕೋಬೋದಿತ್ತು. ಅವರ ಕಡೆ ಯಾರೊ ಒಬ್ಬ ಋಷಿ ಹೆಂಡ್ತೀನಾ, ಇನ್ನೊಬ್ಬ ಯಾವನೋ ಬಂದು ಬಲವಂತವಾಗಿ ಎಳ್ಕೊಂಡು ಹೋಗ್ತಿರೋದನ್ನ ಅವರ ಮಗ ನೋಡಿದನಂತೆ. ತನ್ನ ಅಮ್ಮನಿಗೆ ಹೀಗೆ ಆಗ್ತಿರೋದನ್ನ ನೋಡಿ, ಅವನು ಒಂದು ಗಂಡಸು ಒಂದು ಹೆಂಗಸಿನ ಜೊತೆ ಕೂಟ ಮಾಡಬೇಕಂದ್ರೆ ಮದುವೆ ಅಂತ ಮಾಡ್ಕೋಬೇಕು. ಅವನು ಅವಳನ್ನು ನೋಡಿಕೊಳ್ಳಬೇಕು. ಮದುವೆಯಾದವಳನ್ನು ಬಲವಂತವಾಗಿ ಕೂಟಕ್ಕೆ ಕರೆಯಬಾರದು ಅಂತ ನೀತಿ ಮಾಡಿದನಂತೆ. ಇದು ಚೆನ್ನಾಗಿದೆ ಅಂತ ಅವರೆಲ್ಲಾ ಪಾಲಿಸ್ಕೊಂಡು ಬರ್ತಿದ್ದಾರೆ. ಈವಾಗೀವಾಗ ನಮ್ಮ ಕಡೆಲೂ ಕೆಲವರು ಮದುವೆ ಅಂತ ಮಾಡ್ಕೊಳ್ತಾರೆ."

"ಮದುವೆ ಅಂತ ಆದರೆ ಒಬ್ಬರ ಜೊತೆನೇ ಕೂಟ ಮಾಡಬೇಕಾ?"

"ಹೂ, ಅದು ಬೇಜಾರು. ಅದಕ್ಕೇ ನಾನು ಮದುವೆ ಮಾಡ್ಕೊಳ್ಳಲಿಲ್ಲ. ಈವಾಗ ಮದುವೆ ಆಗಿರೋ ಹುಡುಗಿಯರು ನಮಗೆ ಸಿಗೊಲ್ಲ. ಅದೊಂದು ಬೇಜಾರು." ಮುದುಕನ ನಗೆಯಲ್ಲಿ ರಸಿಕತನದ ತುಂಟತನವಿತ್ತು.

"ನಮ್ಮ ಅಮ್ಮ?" ಢುಂಢಿ ಕೇಳಿದ.

"ಅವಳೂ ಮದುವೆ ಆಗಲಿಲ್ಲ. ನನ್ನ ಥರ. ನಿಮ್ಮಮ್ಮನ ಜೊತೆ ಕೂಟ ಮಾಡೋದು ಬಲೇ ಚೆನ್ನಾಗಿರತ್ತೆ. ಮಾಡಿಸ್ಕೊಳ್ಳೋವಾಗ ಒಳ್ಳೆ ಹೆಣ್ಣು ಹುಲಿ ಆಡಿದ ಹಾಗೆ ಆಡ್ತಾಳೆ."

ಢುಂಢಿ ಮತ್ತು ವದೀರಜ್ಜ ಇಬ್ಬರೂ ನಕ್ಕರು.

"ನಾನು ನಿನಗೇನ ಹುಟ್ಟಿದ್ದು?" ಢುಂಢಿ ಕೇಳಿದ.

"ಇಲ್ಲ. ಯಾರಿಗೆ ಅಂತ ಗೊತ್ತಿಲ್ಲ. ನನಗಂತೂ ಅಲ್ಲ. ಓ, ನಿಮ್ಮ ಅಮ್ಮ ಬೇರೆ ಬೇರೆ ಗುಂಪಿನವರ ಜೊತೆಗೆಲ್ಲಾ ಓಡಾಡುತ್ತಿದ್ದಳು. ರುದ್ರನ ಕಡೆಯವರ ಜೊತೆಗೆಲ್ಲಾ ಇರ್ತಿದ್ದಳು. ಮಾತಂಗದವರ ಗುಂಪಿನಲ್ಲೆಲ್ಲಾ ಮಲಕ್ಕೊಂಡು ಎದ್ದು ಬರ್ತಿದ್ದಳು. ಬಲೇ ಸೋಗಲಾಡಿ." ವದೀರಜ್ಜನ ಮಾತಿಗೆ ಢುಂಢಿ ನಕ್ಕ.

"ಈಗ ನೋಡು, ಅವಳು ಎದ್ದು ಬರದೇ ಮಲಗೇ ಇರ್ತಾಳೆ. ಒಡೆಯನ ಜೊತೆ ಕೂಟ ಮುಗಿಯೊಲ್ಲದ್ದು." ವದೀರಜ್ಜ ಢುಂಢಿಯ ತಾಯಿ ಮಾಲಿನಿಯನ್ನು ಹೂತು ಹಾಕಿದ್ದ ಮಣ್ಣಿನ ಸಮಾಧಿಯ ಮೇಲೆ ಕೋಲನ್ನಿಟ್ಟು ಹೇಳಿದ.

ಢುಂಢಿಗೆ ಅವನ ತಾಯಿ ಕೈ ಕಾಲುಗಳನ್ನು ಆಡಿಸದೇ, ಏನೂ ಮಾತಾಡದೇ, ಬಿಟ್ಟಗಣ್ಣುಗಳಿಂದ ನೋಡುತ್ತಲೇ ತಣ್ಣಗಾದಾಗ, ವಯನದವರೆಲ್ಲಾ ಮರದ ಕೊರಡಂತೆ ಜಡವಾಗಿ ಬಿರುಸಾದ ಅವಳ ಮೈಗೆ ಬಿಳಿಯ ಸುಣ್ಣವನ್ನೂ, ಕೆಮ್ಮಣ್ಣನ್ನೂ ಬಳಿದು ಹಳ್ಳದೊಳಗಿಟ್ಟು, ಜೊತೆಗೆ ಜವೆಗೋಧಿ ತುಂಬಿದ ಮಡಿಕೆಯನ್ನು, ಉಪ್ಪು, ಹಣ್ಣುಗಳನ್ನು, ಮಾಂಸವನ್ನು, ಇನ್ನಿತರ ವಸ್ತುಗಳನ್ನು ಇಟ್ಟು ಎಲ್ಲರೂ ಕೂಗುತ್ತಾ ಮಣ್ಣು ಹಾಕಿದ್ದು, ತನ್ನ ಕೈಗಳಿಂದಲೂ ಮಣ್ಣು ಹಾಕಿಸಿದ್ದು ಅವನಿಗೆ ನೆನಪಿದೆ.

ಮಾಲಿನಿ ಗಂಗಾ ನದಿಯ ದಡದಲ್ಲಿ ಒಣಗಿದ್ದ ಮಣ್ಣಿನ ನೆಲದ ಭೂಮಿಯಿಂದ ಹಿಮದ ನೆಲದವರೆಗೂ ಓಡಾಡುತ್ತಿದ್ದಳು. ಹಿಮಾಲಯದ ಒಡೆಯನ ಮಗಳು ಪಾರ್ವತಿ ಶುಕ್ತಿಮತ್‌ನಲ್ಲಿ ಮೊದಲ ಬಾರಿಗೆ ಋತುಮತಿಯಾದಾಗ, ಆ ರಕ್ತವನ್ನು ಹಸಿರುಸೊಪ್ಪಿನ ರಸದಿಂದ ತೊಳೆದವಳು. ಮೈಗೆ ಮುಳ್ಳಿನ ಗಿಡದ ಹಸಿರ ಸಿಪ್ಪೆ ಬಿಡಿಸಿ, ಅದರ ಲೋಳೆಯಿಂದ ತಿಕ್ಕಿದ್ದಳು. ಮೊಲೆಗಳನ್ನು, ಅಂಡುಗಳನ್ನು ಮತ್ತು ಬೆನ್ನಿನ ಮೂಳೆಯನ್ನು ಬೇರುಗಳ ಜತೆಗೆ ನೆನೆಹಾಕಿದ್ದ ಎಣ್ಣೆಯಿಂದ ತೀಡಿರುವವಳು.

ಪಾರ್ವತಿ ಮಾತಂಗರ ಗುಂಪಿನಲ್ಲಿ ಕಾಡುಗಳಲ್ಲಿ ಓಡಾಡುತ್ತಿದ್ದಾಗ ಜೊತೆಯಾಗಿದ್ದವಳು. ಆನೆಗಳನ್ನು ಪಳಗಿಸುವ ಅವರ ಪರಿ, ವರಸೆ ಇವುಗಳನ್ನು ಪಾರ್ವತಿ ಆಸೆಯಿಂದ ನೋಡಿದಾಗ, ನೀನೂ ಮಾಡುವಿಯಂತೆ ಎಂದು ಅವಳ ಬಯಕೆಗಳಿಗೆ ಇಂಬು ಕೊಟ್ಟವಳು. ಮಾತಂಗದವರೇನೂ ಕಡಿಮೆಯಿರಲಿಲ್ಲ. ಪಾರ್ವತಿ ಒಂದು ಮರಿಯಾನೆ ಏರಿ ಕಾಡಿನಲ್ಲಿ ಒಂದು ಸವಾರಿ ಹೋಗಬೇಕೆಂದರೆ, ಮಾಲಿನಿ ಬೆನ್ನ ಮೇಲೆ ಮಲಗಿ ಕಾಲುಗಳನ್ನು ಹಿಂದಕ್ಕೆತ್ತಿ ಚಾಚಿ, ಮಾತಂಗದವರು ಅವಳ ಮೇಲೆ ಸವಾರಿ ಮಾಡಬೇಕಿತ್ತು.

ತನ್ನ ಸೇವೆ ಮಾಡುತ್ತಿದ್ದ ಮಾಲಿನಿ ಇನ್ನೂ ಹಲವು ಸೋಜಿಗಳನ್ನು ತೋರಿಸುವಳೆಂದು ಪಾರ್ವತಿಗೆ ತಿಳಿದಿರಲಿಲ್ಲ. ದಿನದಿಂದ ದಿನಕ್ಕೆ ಉಬ್ಬುತ್ತಿರುವ ಅವಳ ಹೊಟ್ಟೆಯನ್ನು ಅಚ್ಚರಿಯ ಬೆರಗುಗಣ್ಣುಗಳಿಂದ

ಪಾರ್ವತಿ ನೋಡುತ್ತಿದ್ದಳು. ಹೊಟ್ಟೆಯಲ್ಲಿದ್ದ ಆ ಜೀವ ಹಾಗೆ ಹೀಗೆ ಆಡುವುದನ್ನು, ಹೊಟ್ಟೆಯ ಚರ್ಮವನ್ನು ಅಲ್ಲಲ್ಲಿ ಉಬ್ಬಿಸಿ ತನ್ನ ಇರುವನ್ನು ತೋರಿಸುವುದನ್ನು ನೋಡಲು ಪಾರ್ವತಿಗೆ ಬಲು ಸಂತೋಷ. ಕೇಕೆ ಹಾಕಿಕೊಂಡು ನಗುತ್ತಾ ಅದನ್ನು ಮುಟ್ಟುವಳು. ಈಗೇನು ಮಾಡುತ್ತಿದೆ? ಎಂದು ಕೇಳುವಳು. ಮಾಲಿನಿ ಒಳಗಿರುವ ಕಂದ ಕುಣಿಯುತ್ತಿರುವನೋ, ಹೊರಳಾಡುತ್ತಿರುವನೋ, ಸುಮ್ಮನೆ ಮಲಗಿರುವನೋ ಪಾರ್ವತಿಗೆ ಹೇಳಲೇ ಬೇಕಿತ್ತು.

"ಮಗು ಹೀಗೆ ಹೊಟ್ಟೆಯೊಳಕ್ಕೆ ಹೇಗೆ ಬಂದಿತು?" ಪಾರ್ವತಿಯ ಕುತೂಹಲಕ್ಕೆ ಮಾಲಿನಿ ಉತ್ತರ ನೀಡಿದ್ದಳು. "ಬೀಜದಿಂದ ಮರ, ತತ್ತಿಯಿಂದ ಮರಿ. ಬೀಜ ಮತ್ತು ತತ್ತಿಯಿಂದ ಮಗು. ಗಂಡಿನಲ್ಲಿ ಬೀಜ. ಹೆಣ್ಣಿನಲ್ಲಿ ತತ್ತಿ. ಮೈ ಬಿಸಿಯಾಗಿ ಬಿರುಸಾಗುವ ಶಿಶ್ನ, ಕಾವೇರಿ ಜಿನುಗುವ ಯೋನಿಯೊಳಕ್ಕೆ ಸೇರಿ ಆಡು ಆಡುತ್ತಲೇ ಕಾಯುತ್ತಿರುವ ತತ್ತಿಗೆ ಬೀಜವನ್ನು ಸೇರಿಸುತ್ತದೆ.

ಹಕ್ಕಿಯ ತತ್ತಿಯೊಳಗೆ ದಿನದಿಂದ ದಿನಕ್ಕೆ ಮೂಗು, ಮೂತಿ, ಕಣ್ಣು, ಕಾಲು ಮತ್ತು ರೆಕ್ಕೆಗಳನ್ನು ಪಡೆದುಕೊಂಡು ಒಂದು ದಿನ ಮೊಟ್ಟೆಯ ಚಿಪ್ಪನ್ನು ಒಡೆದುಕೊಂಡು ಮರಿ ಬಂದಂತೆ, ಹೊಟ್ಟೆಯೊಳಗೆ ಬೆಳೆದ ಮಗುವನ್ನು ಯೋನಿಯ ಬಾಗಿಲಿಂದ ದಬ್ಬಬೇಕು."

"ಅಬ್ಬಾ, ಅದೆಂತಾ ಸೋಜಿಗ!" ಪಾರ್ವತಿ ಬೆರಗಾಗಿ ಮಾಲಿನಿಯ ಮಗು ತುಂಬಿದ್ದ ಹೊಟ್ಟೆಯನ್ನು ಸವರುತ್ತಿದ್ದಳು.

"ಮಾಲಿನಿ, ನನ್ನ ಹೊಟ್ಟೆಯ ಒಳಗೂ ಮಗು ಬೇಕು."

"ಹೂಂ, ನಿನ್ನ ಯೋನಿಯಲ್ಲಿ ರಕ್ತ ಸುರಿಯಲು ಆರಂಭ ಆಯ್ತಲ್ಲ. ಒಳಗೆ ತತ್ತಿಗಳು ಸಿದ್ಧವಾಗುತ್ತಿವೆ. ಮುಂದೆ ನಿನ್ನ ಯೋನಿಯಲ್ಲಿ ಯಾರೋ ಒಬ್ಬ ಬೀಜ ಬಿಡುತ್ತಾನೆ. ಆಗ ಈ ಸೋಜಿಗ ನಿನ್ನ ಹೊಟ್ಟೆಯಲ್ಲೂ ಆಗುತ್ತದೆ."

"ಅರೆ! ಅದು ಹೇಗಿರತ್ತೆ?" ಪಾರ್ವತಿಗೆ ಮಗುವು ಹೊಟ್ಟೆಯಲ್ಲಿ ಇರುವುದನ್ನು ನೆನೆದೇ ರೋಮಾಂಚನವಾಗುತ್ತಿತ್ತು.

"ಯೋನಿಯಲ್ಲಿ ಶಿಶ್ನವನ್ನು ತೂರಿಸಿದಾಗ ಹೇಗಿರತ್ತೆ?"

"ಮೈಗೆ ಬಿಸಿನೂ ಆಗತ್ತೆ, ಚಳಿನೂ ಆಗತ್ತೆ. ಒಳಗಡೆಯಿಂದ ಕಚುಗುಳಿ ಕೊಟ್ಟಂತೆ ಒಂದು ತರಹ ನೋವು. ಆ ನೋವಿನಲ್ಲಿ ಆನಂದ. ಆನಂದದಲ್ಲಿ ನೋವು. ಅದು ನೋವೋ, ಆನಂದವೋ; ಆದರೆ, ಇದು ಅದ್ಭುತ!" ಎಂದು ಮಾಲಿನಿ ತನ್ನ ತಾಯ್ತನದ ಆನಂದವನ್ನು ಅನುಭವಿಸುತ್ತಾ ಮಗು ತುಂಬಿರುವ ಹೊಟ್ಟೆಯನ್ನು ಮೃದುವಾಗಿ ಸವರಿಕೊಂಡಳು. ದಿನಗಳು ತುಂಬುತ್ತಿದ್ದಂತೆ, ಅವಳು ಅದೇನು ಮಗುವನ್ನು ತನ್ನ ಯೋನಿಯ ದ್ವಾರದಿಂದ ಹೊರಕ್ಕೆ ದಬ್ಬುವಳೋ ಎಂದು ನೋಡುವ ಕುತೂಹಲ ಪಾರ್ವತಿಗೆ. ಆದರೆ, ಮಾಲಿನಿಗೆ ಗಂಗಾ ನದಿಯ ದಡದಲ್ಲಿರುವ ತನ್ನ ವಯನದಲ್ಲಿ ತನ್ನ ಮಗುವನ್ನು ಹೆರುವ ಬಯಕೆ.

"ಮಗು ಹುಟ್ಟಿದ ಮೇಲೆ ಬೇಗ ಬಾ. ನಾನು ಹೊಟ್ಟೆಯಲ್ಲಿ ಹೇಗೇಗೋ ಆಡುತ್ತಿದ್ದ ಮಗು ಹೊರಗೆ ಬಂದಾಗ ಹೇಗಿರುತ್ತದೆ ಎಂದು ನೋಡಬೇಕು. ಅದರ ಜೊತೆ ಆಡಬೇಕು. ಆ ಮಗು ನನ್ನದು. ನಿನಗಲ್ಲ!"

ಎಂದು ತಾಕೀತು ಮಾಡಿಯೇ ಪಾರ್ವತಿ ಮಾಲಿನಿಯನ್ನು ಶುಕ್ತಿಮತ್‌ನಿಂದಕಳುಹಿಸಿದ್ದಳು.

ಮಾಲಿನಿ ಮಗುವಿನೊಂದಿಗೆ ಮರಳಿ ಬಂದೇ ಬರುತ್ತೇನೆ ಎಂದು ಪಾರ್ವತಿಗೇನೋ ಹೇಳಿ ವಯನಕ್ಕೆ ಹೋದಳು. ಆದರೆ, ವಯನಕ್ಕೆ ಬಂದ ಮಾಲಿನಿ ಮತ್ತೆ ಹಿಮಾಲಯಕ್ಕೆ ಮರಳಲಿಲ್ಲ. ಮಗುವು ಒಂದಷ್ಟು ಬೆಳೆದಾದ ಮೇಲೆ ಜೊತೆಗೇ ಕರೆದುಕೊಂಡು ಹೋಗುತ್ತಿದ್ದಳೋ ಏನೋ. ಆದರೆ, ಹೇಗೆ ಬಂತೆಂದೇ ತಿಳುವಳಿಕೆಗೆ ಗೋಚರವಾಗದಂತೆ ನುಸುಳಿದ್ದ ರೋಗ ಅವಳನ್ನು ತಣ್ಣಗೆ ಮಾಡಿಬಿಟ್ಟಿತ್ತು. ಹಿಮಾಲಯದ ತಪ್ಪಲ ಶುಕ್ತಿಮತ್‌ನಲ್ಲಿ ಬೆಳೆಯಬೇಕಿದ್ದ ಢುಂಢಿ ಗಂಗೆಯ ಮಡಿಲಿನ ವಯನದ ಹಟ್ಟಿಯಲ್ಲೇ ಉಳಿದ.

ಯಾರೋ ತಿನ್ನಿಸಿದರು, ಯಾರೋ ಕುಡಿಸಿದರು, ಯಾರೋ ತಿಕ ತೊಳೆದರು. ಢುಂಢಿಗೆ ವದೀರಜ್ಜ ಮಾತ್ರ ಬೇರೆಲ್ಲಕ್ಕೂ ಜತೆಗಿದ್ದ. ಹಸುವಿನ ಚರ್ಮವನ್ನು ಬಿಡಿಸಿ, ಅದನ್ನು ತೊಳೆದು, ಉಪ್ಪು ಹಾಕಿಟ್ಟು, ಹದ ಮಾಡಿ, ಒಣಗಿಸಿ, ಬಟ್ಟಲಿನಂತಹ ಮರದ ಬುಡ್ಡೆಗೆ ಆ ಚರ್ಮವನ್ನು, ಚರ್ಮದ್ದೇ ಹುರಿಗಳಿಂದ ಬಿಗಿದು, ಕಡ್ಡಿಯಿಂದಲೋ ಅಥವಾ ಬೆರಳುಗಳಿಂದಲೋ, 'ಡಂಪ ಡಪಂ, ಡಂಪ ಡಪಂ ಢುಂ ಢುಂ ಢುಂ ಡಂಪ ಡಪಂ, ಢುಂಢುಂಢಿ, ಢುಂಢುಂಢಿ ಢಂಪ ಢಪಂ' ಎಂದು ನುಡಿಸುತ್ತಿದ್ದರೆ ತನ್ನನ್ನೇ ಕರೆಯುತ್ತಿರುವಂತೆ ಢುಂಢಿಗೆ ಭಾಸವಾಗುತ್ತಿತ್ತು. ವದೀರಜ್ಜಾ, ಢುಂಢಿ ಎಂದು ಹೆಸರಿಡಿದು ಕೂಗುವಷ್ಟೇನೂ ಇಲ್ಲ. ಹಸುವಿನ ಚರ್ಮದಿಂದ ಮಾಡಿರುವ ಆ ಗೋಧವನ್ನು ನುಡಿಸಿದರೆ ಸಾಕು. ವದೀರಜ್ಜ ತನ್ನ ಕರೆಯುತ್ತಿದ್ದಾನೆ ಎಂದೇ ಢುಂಢಿಗೆ ಅನ್ನಿಸುತ್ತಿತ್ತು.

ತಾನಿನ್ನೂ ತನ್ನ ಗುಡಿಸಲಿನಲ್ಲೇ ಮಲಗಿದ್ದ ಢುಂಢಿಗೆ ವದೀರಜ್ಜನ ಆರ್ತನಾದ, ಹೆಂಗಸರು ಗೋಳಾಡುವ, ಗಂಡಸರು ಕೂಗಾಡುವ ಸದ್ದು ನಿದ್ರೆಯಿಂದ ಎಚ್ಚರಿಸಿತ್ತು. ಕನಸಿನಲ್ಲೆಲ್ಲೋ ಆಗುತ್ತಿರುವಂತೆ ನಿಧಾನವಾಗೇ ಶಬ್ದದಿಂದ ಎಚ್ಚರವಾದರೂ, ಗಮನಿಸಿ ಕೇಳಿದಂತೆ, ಆಕ್ರಂದನ, ಆರ್ತನಾದಗಳು ಹಾಗೂ ಕೋಪದಿಂದ ಕೂಗಾಡುವ ಶಬ್ದಗಳು ಏನೋ ದುರಂತವನ್ನು ವಯನದ ಹಟ್ಟಿ ಕಂಡಿದೆಯೆಂದೇ ಢುಂಢಿಗೆ ಊಹಿಸಲು ಸಾಧ್ಯವಾಯಿತು. ಕೂಡಲೇ ಧುತ್ತನೆ ಎದ್ದು, ಗಲಭೆ ಗಾಢವಾಗಿದ್ದ ಕಡೆಗೆ ಓಡಿದ. ದಟ್ಟವಾಗಿ ಹೊಗೆ ಏಳುತ್ತಿರುವ ದಿಕ್ಕಿನಲ್ಲಿಯೇ ಗಲಭೆಯಾಗುತ್ತಿರುವುದು ಅವನಿಗೆ ತಿಳಿಯಿತು.

ವದೀರಜ್ಜನ ಗುಡಿಸಲೂ ಸೇರಿದಂತೆ ಹಲವರು ಗುಡಿಸಲುಗಳು ಬೆಂಕಿ ಹೊತ್ತಿ ಉರಿಯುತ್ತಿವೆ. ಅದರ ಬೆನ್ನಲ್ಲೇ ನಿತ್ಯ ನೆರಳಾಗಿ, ಒತ್ತೊತ್ತಾಗಿಯೇ ಬೆಳೆದಿದ್ದ ಮರಗಳೂ ಉರಿಯುತ್ತಿವೆ. ತನ್ನ ಗೋಧಗಳೊಂದಿಗೆ ವದೀರಜ್ಜ ತನ್ನ ಉರಿಯುತ್ತಿರುವ ಗುಡಿಸಲ ಮುಂದೆ ಕುಳಿತುಕೊಂಡು ರೋಧಿಸುತ್ತಿದ್ದಾನೆ. ಮಾರ, ಮಿತ, ಪಿಚುಡಲ ಮತ್ತು ಆಸುರರೂ ಒಬ್ಬೊಬ್ಬರಾಗಿ ಓಡಿಬಂದು ನಿಲ್ಲುತ್ತಿದ್ದಾರೆ.

ರೋಷಾವೇಶದಿಂದ ತಮ್ಮ ಕೋಲು, ಈಟಿಗಳನ್ನು ಹಿಡಿದುಕೊಂಡು ಬೆಂಕಿಹಾಕುತ್ತಿರುವ ಆಳುಗಳನ್ನು ಎದುರಿಸಲು ಹೆಣಗಾಡುತ್ತಿರುವ ಗಂಡಸರು ಮತ್ತು ಹೆಂಗಸರನ್ನು ಬಡಿದು ಎಳೆದು ಹಾಕುವ ಪ್ರಯತ್ನ ಸೈನಿಕರದು. ಈ ಕೆಲಸ ಮಾಡಿಸುತ್ತಿರುವ ಮಂತ್ರಿಗಳು ಮತ್ತು ಆರ್ಯ ಮುಂದಾಳುಗಳು ಸುಡುತ್ತಿರುವ ಮರಗಳನ್ನೂ ಮತ್ತು ಸಿಡಿಯುತ್ತಿರುವ ವಯನದ ಜನರನ್ನೂ ನೋಡುತ್ತಿದ್ದಾರೆ.

ಢುಂಢಿಯ ವಯಸ್ಸಿನ ಹುಡುಗರು ಹೆದರಿಕೆಯಿಂದ ದೂರದಲ್ಲಿ ನಿಂತು ನೋಡುತ್ತಿದ್ದಾರೆ. ಅವರ ಜೊತೆಗೇ ಹೋಗಿ ಮಾರ, ಮಿತ, ಪಿಚುಡಲ ಮತ್ತು ಆಸುರ ಕೂಡ ನಿಂತರು. ಆದರೆ, ಢುಂಢಿ ವದೀರಜ್ಜನ ಬಳಿಗೆ ಓಡಿದ. ಕೇಳಿದ ಆಗುತ್ತಿರುವುದೇನೆಂದು.

ಆರ್ಯ ಜನರ ವಸತಿಗಳಿಗಾಗಿ, ಕೃಷಿ ಮಾಡಲು ಭೂಮಿಗಳಿಗಾಗಿ, ಈ ಭಾಗದ ಕಾಡು ಬೇಕಾಗಿದೆ. ಆರ್ಯ ಮುಖಂಡರ ಕೋರಿಕೆಯ ಮೇರೆಗೆ ರಾಜನು ಅಧಿಕಾರಿಗಳನ್ನು, ಆಳುಗಳನ್ನು ಮತ್ತು ಸೈನಿಕರನ್ನು ಕಳುಹಿಸಿದ್ದಾನೆಂದು ತಿಳಿಯಿತು.

"ಅಜ್ಜಾ, ಗುಡಿಸಲುಗಳನ್ನು ಸುಡುವ ಮುನ್ನ ಅವರು ನಿಮ್ಮನ್ನು ಕೇಳಲಿಲ್ಲವಾ? ಕಾಡಿಗೆ ಬೆಂಕಿ ಹಚ್ಚುವ ಮುನ್ನ ಮರಗಳನ್ನು, ಅವುಗಳಲ್ಲಿರುವ ಹಕ್ಕಿಗಳನ್ನು, ಜೇನುಹುಳುಗಳನ್ನು ಕೇಳಲಿಲ್ಲವೇ?" ಢುಂಢಿ ಕೇಳಿದ.

"ಕೇಳಿದ್ದಕ್ಕೆ ಕೊಡುತ್ತಿದ್ದರೆ, ನಾವೇಕೆ ಅಳಬೇಕು? ಮರಗಳೇಕೆ ಅಳಬೇಕು? ಪಕ್ಷಿಗಳೇಕೆ ಚೀರುತ್ತಾ ಹಾರಬೇಕು? ಆಹಾರವಾಗಲು ಒಪ್ಪಿದ ಪ್ರಾಣಿ ಕುತ್ತಿಗೆಯಿಂದ ತಾವೇ ರಕ್ತ ಸುರಿಸುತ್ತಾ ಮಲಗಿದಂತೆ ನಾವು ಇರುತ್ತಿರಲಿಲ್ಲವೇ? ಅವರು ನಮ್ಮಿಂದ ಕಸಿಯುತ್ತಿದ್ದಾರೆ ಢುಂಢಿ, ನಮ್ಮನ್ನು ನಂಬಿ ನಮ್ಮನ್ನು ಕಾಪಾಡುತ್ತಿರುವ ಮರಗಳನ್ನು ನಮಗೆ ಕಾಪಾಡುವುದಕ್ಕಾಗುತ್ತಿಲ್ಲ ಢುಂಢಿ." ಢುಂಢಿಗೆ ವದೀರಜ್ಜನ ಮಾತು ಸ್ಪಷ್ಟವಾಗಿತ್ತು. ಅವನ ರಕ್ತ ಕುದಿಯಿತು. ಅವನ ಕಣ್ಣುಗಳು ಕೆಂಪಾದವು. "ಹೇಯ್...." ಎಂದು ಕೂಗುತ್ತಾ ಎದುರಿಗೆ ಬಿದ್ದಿದ್ದ ದಪ್ಪ ದಪ್ಪ ಕಲ್ಲುಗಳನ್ನು ಎತ್ತಿ ವಯನದವರ ಪ್ರತಿಭಟನೆಯನ್ನು ಹತ್ತಿಕ್ಕಲು ಪ್ರಯತ್ನಿಸುತ್ತಿದ್ದ ಸೈನಿಕರ ಮೇಲೆ ಎಸೆಯತೊಡಗಿದ. ಢುಂಢಿಯ ವಯಸ್ಸಿನ ಹುಡುಗರಿಗೆ ಈಗ ಸ್ಫೂರ್ತಿಯೂ ಸಿಕ್ಕಿತು, ಧೈರ್ಯವೂ ಬಂತು. ಅವರೂ ಕೂಗುತ್ತಾ ಕಲ್ಲುಗಳನ್ನು ಎತ್ತಿ ಸೈನಿಕರಿಗೆ ಮಾತ್ರವಲ್ಲ, ಅಲ್ಲಿದ್ದ ರಾಜನ ಅಧಿಕಾರಿಗಳ ಕಡೆಗೂ, ಆರ್ಯ ಮುಖಂಡರ ಕಡೆಗೂ ಬೀಸತೊಡಗಿದರು.

*

ಅರ್ಧರಾತ್ರಿ ಕಳೆದ ಮೇಲೆ ಕುಶಿಕ ತನ್ನ ಕಾವಲು ಪಾಳಿಯನ್ನು ಯದುವಿಗೆ ವಹಿಸಿ ತಾನು ಮಲಗಿದ್ದ. ಯದು ಕಾವಲಿಗೆ ಕುಳಿತ ಮೇಲೆ ಶಂಬರ ಕೆಲ ಹೊತ್ತಿನ ತರುವಾಯ ತೂಕಡಿಸುವುದನ್ನು ನೋಡಿ ಯದು ಅವನಿಗೆ ಮಲಗಲು ಹೇಳಿದ್ದ.

ವದೀರಜ್ಜನಿಗೆ ಸಮೀಪವಾಗಿಯೇ ಮಲಗಿದ್ದ ಶಂಬರನಿಗೆ ನಿದ್ರೆ ಅರೆಬರೆ. ತನಗೂ, ತನ್ನ ಬದುಕಿಗೆ ತಾಳೆಯಾಗದು ಎನಿಸುವ ಎಂತೆಂತದ್ದೋ ಕನಸುಗಳು. ಅವುಗಳನ್ನು ಒಂದು ಕ್ರಮದಲ್ಲಿ ಜೋಡಿಸಿದರೆ ಏನೋ ತಿಳಿಯಬಹುದು ಎನಿಸುತ್ತಿದೆ. ಆದರೆ ಅದು ಸಾಧ್ಯವಾಗದೇ ಅಪೂರ್ಣ ನಿದ್ರೆಯಿಂದ ಎದ್ದು ಮಲಗಿದ್ದಲ್ಲಿಂದಲೇ ಕಣ್ಣು ಬಿಟ್ಟು ನೋಡುತ್ತಿದ್ದ. ಬೆಳಗಿನ ಜಾವ ಸೂರ್ಯೋದಯಕ್ಕೂ ಮೊದಲೇ ಯಾಜ್ಞಿಕ ಮತ್ತು ಶಕಧೂಮರು ಎದ್ದಿದ್ದರು. ಯಾಜ್ಞಿಕ ಹರಿಯುವ ನೀರಿನಲ್ಲಿ ಸ್ನಾನ ಮಾಡಿ ಸೂರ್ಯನಿಗೆ ಅರ್ಘ್ಯ ತರ್ಪಣ ಕೊಡುತ್ತಿದ್ದ. ಶಕಧೂಮರು ತಮ್ಮ ತಲೆಗೆ ಉಷ್ಣೀಷವನ್ನು ಕಟ್ಟಿಕೊಳ್ಳುತ್ತಿದ್ದರು. ಅವರ ಸಹಾಯಕರಿಬ್ಬರು ಹವಾಮಾನವನ್ನು ತಿಳಿದುಕೊಳ್ಳಲು ಸಹಾಯವಾಗಲು ರಾತ್ರಿ ಹೊತ್ತಿಸಿದ್ದ ಬೆಂಕಿಯನ್ನೇ ಮತ್ತೆ ಬೆಳಗಿಸುತ್ತಿದ್ದರು. ಯದು ಮತ್ತು ಕುಶಿಕ ವದೀರಜ್ಜನನ್ನು ಬುಟ್ಟಿಯಲ್ಲಿಡಲು ನೆರವಾಗುತ್ತಿದ್ದರು.

ಧುತ್ತನೆ ಎದ್ದು ಕುಳಿತ ಶಂಬರ ತಾನೊಬ್ಬನೇ ಪ್ರಯಾಣಕ್ಕೆ ಸಿದ್ಧವಾಗಿಲ್ಲ ಎಂದು ಅರಿವಾಗಿ ಬೇಗಬೇಗನೆ ತನ್ನ ತಾನು ಸಿದ್ಧಗೊಳಿಸಿಕೊಂಡ.

ಶಕಧೂಮ, 'ಹೂಂ ಹೊರಡೋಣ.' ಎಂದಾಗ ಇಡೀ ತಂಡ ನಡೆಯತೊಡಗಿತು. ಪ್ರಯಾಣದ ಮಾರ್ಗದಲ್ಲೇ ಕುಶಿಕ ಜಿಂಕೆಯ ಬೇಟೆಯಾಡಿ ಮುಗಿಸಿದ್ದ. ಒಂದು ಕಡೆ ವಿಶ್ರಮಿಸಿದಾಗ, ಎಲ್ಲರೂ ಊಟಕ್ಕೆ ಕುಳಿತರು. ಜಿಂಕೆಯ ಮಾಂಸವನ್ನು ಸುಟ್ಟು ವದೀರಜ್ಜನ ಹೊರತಾಗಿ ಎಲ್ಲರೂ ತಿಂದರು. ವದೀರಜ್ಜನಿಗೆ ಅದೇ ಜಿಂಕೆಯ ಮೃದು ಮಾಂಸದ ತುಂಡನ್ನು ಮಡಿಕೆಯಲ್ಲಿ ನೀರಲ್ಲಿ ನೆನೆಹಾಕಿ, ನಂತರ ಚೆನ್ನಾಗಿ ಕಾಯಿಸಿ, ಗಂಜಿ ತೆಗೆದು ಕುಡಿಸಿದರು. ವದೀರಜ್ಜನ ಹುಬ್ಬುಗಳು ಗಂಟಿಕ್ಕಿಕೊಂಡವು. ಬಾಯಿಯೊಳಗೆ ಉಣಿಸುವ ಗಂಜಿಯನ್ನು ನಾಲಗೆಯಿಂದ ಹೊರಕ್ಕೆ ತಳ್ಳಿದ. ಕುಡಿಸುತ್ತಿದ್ದಾತನಿಗೆ ಏಕೆಂದು ತಿಳಿಯಲಿಲ್ಲ. "ಅಜ್ಜ ಗಂಜಿಯನ್ನು ಉಗಿಯುತ್ತಿದ್ದಾರೆ." ಎಂದು ಕೂಗಿ ಹೇಳಿದ.

ಯದು ಮತ್ತು ಕುಶಿಕ ಮುಖ ಮುಖ ನೋಡಿಕೊಂಡರು. ಅವರಿಬ್ಬರಿಗೆ ಕಾರಣವೇನೆಂದು ತಿಳಿದಿರುವ ಕಾರಣ ಭಾವ ವಿನಿಮಯವಾಯ್ತು.

"ತುಂಬಾ ದೂರ ಹೋಗಬೇಕು, ಕುಡಿಯಿರಿ ಅಂತ ಹೇಳಿ ಕುಡಿಸು." ಎಂದ ಕುಶಿಕ. ಆತ ಒತ್ತಾಯದ ಮೇರೆ ಒಂದಿಷ್ಟು ಗಂಜಿಯನ್ನು ವದೀರಜ್ಜನಿಗೆ ಇಳಿಸಿದ. ಆದರೆ, ಅದನ್ನು ವದೀರಜ್ಜ ಸ್ವೀಕರಿಸಿದ್ದಂತೆ ಕಾಣಲಿಲ್ಲ.

"ಯಾಕೆ?" ಎಂದು ಕೇಳಿದ ಶಂಬರ ಯದುವಿಗೆ.

ಪ್ರಯಾಣ ಮುಂದುವರಿದ ಮೇಲೆ ನಡೆಯುತ್ತಾ ಹೇಳಿದ ಯದು.

"ನಾವು ತಿಂದ ಅಡುಗೆಯ ಜಿಂಕೆಯು ನಮಗೆ ಅನ್ನವಾಗಲು ಸಿದ್ಧವಿರಲಿಲ್ಲ. ಕುಶಿಕ ಅದರ ಸಮ್ಮತಿ ಕೇಳಿರಲಿಲ್ಲ."

"ಬೇಟೆಯಾಡುವಾಗ ಸಮ್ಮತಿಯನ್ನು ಹೇಗೆ ಕೇಳುವುದು? ಬೇಟೆಯಾಡುವಾಗ ಪ್ರಾಣಿಯ ಬೆನ್ನಟ್ಟಿ, ಬಾಣ ಬಿಟ್ಟು ಕೊಂದೇ ತಿನ್ನಬೇಕು ಅಲ್ಲವೇ? ಆಗ ಪ್ರಾಣಿಯ ಅನುಮತಿ ಹೇಗೆ ಪಡೆಯಲು ಸಾಧ್ಯ?" ಶಂಬರ ಕೇಳಿದ.

"ಬೇಟೆ ಆಡುವವರು ನಿಷಾದರು. ಪ್ರಾಣಿಗಳಂತೆಯೇ ಹೊಂಚು ಹಾಕಿ ಅವನ್ನು ಹಿಡಿದು ಕೊಂದು ತಿನ್ನುವವರು ಕಿರಾತರು. ಆದರೆ, ನಾವು ಬೇಟೆಗಾರರಲ್ಲ. ನಾವು ಅರಣ್ಯಕರು. ಕಾಡಿನಲ್ಲಿ ಯಾವುದೇ ಪ್ರಾಣಿಯನ್ನು ಹಿಡಿಯಬೇಕಾದರೆ ಅದನ್ನು ಬಲೆ ಹಾಕಿ ಹಿಡಿದು, ಬಂಧಿಸಿ ತರುತ್ತೇವೆ. ನಂತರ ಅದಕ್ಕೆ ತಕ್ಕನಾದ ಊಟ ಮತ್ತು ನೀರು ಕೊಟ್ಟು ನೋಡಿಕೊಳ್ಳುತ್ತೇವೆ. ನಂತರ ಅದರ ಅನುಮತಿ ಪಡೆದು ಕುಯ್ಯುತ್ತೇವೆ. ಇವತ್ತು ಕುಶಿಕ ವ್ಯಾಧ ಅಥವಾ ಕಿರಾತರಂತೆ ಜಿಂಕೆಯನ್ನು ಹೊಂಚಿಹಾಕಿ ಕೊಂದ. ಅದರಿಂದ ಮಾಡಿದ ಅಡುಗೆಯನ್ನು ತಿನ್ನುವಾಗ ವದೀರಜ್ಜನಿಗೆ ತಿಳಿಯಿತು, ಈ ಪ್ರಾಣಿ ನಮಗೆ ಆಹಾರವಾಗಲು ಸಮ್ಮತಿಸಿಲ್ಲ ಎಂದು."

ಯದುವಿನ ಮಾತು ಕೇಳಿ ಶಂಬರನಿಗೆ ಆಶ್ಚರ್ಯವಾಯಿತು.

"ಆದರೆ, ಅಜ್ಜನಿಗೆ ಇದು ಹೇಗೆ ತಿಳಿಯುತ್ತದೆ?"

"ವದೀರಜ್ಜ ನೋಡದೆಯೇ ತಿಳಿಯಬಲ್ಲರು. ನುಡಿಯದೇ ತಿಳಿಸಬಲ್ಲರು. ಹೇಳದಿದ್ದರೂ ಆಲಿಸಬಲ್ಲರು. ಅವರು ಬೀಜವಿಡಲು ಮಣ್ಣನ್ನೂ ಕೇಳುತ್ತಾರೆ. ಹೂಬಿಡಲು ಗಿಡವನ್ನು, ಫಲ ಕೊಡಲು ಮರವನ್ನು ಕೇಳಿಕೊಳ್ಳುತ್ತಾರೆ. ಅವು ಅವರ ಮಾತನ್ನು ಕೇಳುತ್ತವೆ."

ಶಂಬರನ ಬುದ್ಧಿಗೆ ಈಗ ಗೋಚರವಾಗತೊಡಗಿತು. ನಿನ್ನೆ ರಾತ್ರಿ ತಾನು ಏನೂ ಹೇಳದಿದ್ದರೂ ವದೀರಜ್ಜ ಆಲಿಸಿದ್ದಾನೆ. ಅವನು ನುಡಿಯದಿದ್ದರೂ ತಿಳಿಸಿದ್ದಾನೆ. ಮಾಲಿನಿ, ಪಾರ್ವತಿ, ಮಾತಂಗರು, ವದೀರಜ್ಜ, ಢುಂಢಿ.... ಎಲ್ಲರೂ ತನ್ನ ತಿಳುವಳಿಕೆಗೆ ಬಂದುಹೋಗಿದ್ದಾರೆ.

ಶಂಬರ ಕೃತಜ್ಞತೆಯಿಂದ ತನ್ನ ಪರಿಗಣಿಸಿದ್ದ ವದೀರಜ್ಜನ ನೋಡಿದ.

## ಅಧ್ಯಾಯ : 7 ಮಿಥುನ

ಶಕಧೂಮ ಮತ್ತು ಯಾಜ್ಞಿಕನ ನೇತೃತ್ವದ ಗುಂಪು ಅವಿಮುಕ್ತವನ್ನು ತಲುಪಿದಾಗ ಸಂಜೆಯಾಗಿತ್ತು. "ಅವಿಮುಕ್ತ ಸೇರಿದೆವು." ಎಂದು ಶಕಧೂಮ ಘೋಷಿಸಿದಾಗ ಶಂಬರನಿಗೆ ತಕ್ಷಣ ನೆನಪಾಗಿದ್ದು ಅಮ್ಮಿತ.

ಆದರೆ, "ಹೇ ಗೋಮತ್, ನಾವು ಅಮ್ಮಿತನ ಊರಿಗೆ ಬಂದಿದ್ದೇವೆ." ಎಂದ ಯಾಜ್ಞಿಕ ತನ್ನ ಮಾತನ್ನು ಮುಂದುವರಿಸಿ, "ಇಲ್ಲಿ ರತ್ನಿ ಎಂಬ ವೈಶ್ಯ ಎಲ್ಲಿದ್ದಾನೋ ಕೇಳಬೇಕು. ಅವನೊಂದಿಗೆ ಅವನ ಹಿಂದಿನ ಕೆಲಸದಾಳು ಅಮ್ಮಿತನೆಂಬುವನು ಹೇಗಿದ್ದ, ಏಕೆ ಈಗಿಲ್ಲ ಎಂಬುದನ್ನು ತಿಳಿಯಬೇಕು. ನಂತರ ನೀವು ಅವನನ್ನು ತಮ್ಮ ಸುವಾಸ್ತದಲ್ಲಿ ಬಿಟ್ಟು ಬಂದಿರುವುದು ಸೂಕ್ತವೋ ಅಲ್ಲವೋ ತಿಳಿಯುತ್ತದೆ." ಎಂದು ಹೇಳಿದ.

"ಅದರ ಅಗತ್ಯವೇನೂ ಇಲ್ಲ." ಎಂದ ಶಂಬರನಿಗೆ ಯಾಜ್ಞಿಕನ ಮೇಲೆ ಸಿಟ್ಟು ಬಂತು. ಈತ ಅನಗತ್ಯವಾಗಿ ನನ್ನ ವಿಷಯಗಳಲ್ಲಿ ತಲೆಹಾಕುತ್ತಿದ್ದಾನೆ ಎನಿಸಿತು. ಇನ್ನೊಮ್ಮೆ ಆತ ಆ ರೀತಿ ಮಾತಾಡಿದರೆ ಕಟುವಾಗಿ ಎಚ್ಚರಿಸಬೇಕು ಎಂದುಕೊಂಡ ಶಂಬರ.

ಅವಿಮುಕ್ತದಲ್ಲಿ ಗಂಗಾ ನದಿಯ ಅಂಚಿನುದ್ದಕ್ಕೂ ಸ್ನಾನದ ಘಟ್ಟಗಳು. ಸ್ನಾನದ ಘಟ್ಟಗಳಿಗೆ ಹೊಂದಿಕೊಂಡಂತಹ ಕಲ್ಲುಹಾಸುಗಳ ಮೇಲೆ ಅಲ್ಲಲ್ಲಿ ಆರ್ಯ ಪಂಡಿತರು ಕುಳಿತುಕೊಂಡು ವಿವಿಧ ವಿಷಯಗಳನ್ನು ಚರ್ಚಿಸುತ್ತಿದ್ದಾರೆ. ಇನ್ನೂ ಕೆಲವು ಕಡೆ ವಿವಿಧ ರೀತಿಯ ತಾಂತ್ರಿಕ ಸಾಧಕರು ತಮ್ಮ ಸಾಧನೆಗಳಲ್ಲಿ ನಿರತರಾಗಿದ್ದಾರೆ. ಕೆಲವು ಕಡೆ ಸುಮಧುರವಾದ ಗೀತೆಗಳನ್ನು ಹಾಡುತ್ತಿರುವ ಸಂಗೀತಗಾರರು. ವೀಣೆ, ಕೊಳಲು, ಮದ್ದಲೆ ಮತ್ತು ಆಘಾಟಿಗಳನ್ನು ಗೀತೆಗಳಿಗೆ ತಕ್ಕಂತೆ ನುಡಿಸುತ್ತಿದ್ದ ವಾದ್ಯ ನಿಪುಣರು. ಅವುಗಳಿಗೆ ನರ್ತಿಸುತ್ತಿದ್ದ ಸುಂದರವಾದ ಬಾಲೆಯರು.

ತಾನು ಜೀವನದಲ್ಲೇ ನೋಡಿರದಿದ್ದ ಅಥವಾ ಕೇಳಿರದಿದ್ದ ವಿಶೇಷಣಗಳನ್ನು ಶಂಬರ ಬೆರಗಿನಿಂದ ನೋಡುತ್ತಾ ಬರುತ್ತಿದ್ದ. ಆ ಅನುಭವದ ಆನಂದದಲ್ಲಿ ತನ್ನ ತಾನೇ ಮರೆತುಹೋಗಿದ್ದ.

ಅವಿಮುಕ್ತದ ಕೆಲವು ಉದ್ಯಾನಗಳಲ್ಲಿಯೂ ಸಂಗೀತ ಮತ್ತು ನೃತ್ಯ ಕಾರ್ಯಕ್ರಮಗಳು ನಡೆಯುತ್ತಿದ್ದವು. ಗಣಿಕೆಯರು ವಯ್ಯಾರವಾಗಿ ನಡೆಯುತ್ತಾ, ಮಾರುಕಟ್ಟೆ ಮತ್ತು ಉದ್ಯಾನದ ಬೀದಿಗಳಲ್ಲಿ ಪುರುಷರನ್ನು ಆಕರ್ಷಿಸುತ್ತಿದ್ದರು. ಅವರಿಗೆ ಪರಿಚಿತವಾದ ಪುರುಷರು ಅಥವಾ ಹೊಸ ಪುರುಷನು ಬಂದರೆ ಅವನೊಂದಿಗೆ ತಮ್ಮ ನಿರ್ಧಿಷ್ಟ ಸ್ಥಳಗಳಿಗೆ ತೆರಳುತ್ತಿದ್ದರು.

ಸ್ವರ್ಣ ನಾಣ್ಯಗಳು ಮತ್ತು ಬೆಳ್ಳಿಯ ನಾಣ್ಯಗಳನ್ನು ಕೊಡುವ ಮತ್ತು ತೆಗೆದುಕೊಳ್ಳುವ ವ್ಯವಹಾರದಲ್ಲಿ ಅಷ್ಟೊಂದು ಬಳಕೆಯಾಗುವುದನ್ನು ಶಂಬರ  ನೋಡುತ್ತಿರುವುದು ಇದೇ ಮೊದಲು.

ರಾಜ ಪೋಷಾಕಿನಲ್ಲಿ ಬಂದ ಒಬ್ಬ ವ್ಯಕ್ತಿ ತನ್ನ ಸಹಚರರೊಂದಿಗೆ ಇವರ ಗುಂಪಿನ ಮುಂದೆಯೇ ನಡೆದು ಹೋಗುತ್ತಿದ್ದ. ಬುಟ್ಟಿಯಲ್ಲಿ ಹಿರಿಯನೊಬ್ಬನನ್ನು ಹಿಡಿದುಕೊಂಡು ಬರುತ್ತಿರುವ ಅರಣ್ಯಕ, ಶಕಧೂಮ ಮತ್ತು ಬ್ರಾಹ್ಮಣನೊಬ್ಬನ ಇವರ ಗುಂಪನ್ನು ಕಂಡು ತನ್ನ ಅಧಿಕಾರಿಗಳನ್ನು ಇವರ ಬಳಿಗೆ ಕಳುಹಿಸಿದ. ಅಧಿಕಾರಿಯೊಬ್ಬ ಈ ಗುಂಪಿನ ಬಳಿಗೆ ಬಂದು ವಂದಿಸಿ ವಿನಯದಿಂದ ಹೇಳಿದ. “ಅವಿಮುಕ್ತದ ರಾಜರಾದ ನೃಪೇಶರು ಪಂಡಿತ ಗೋಷ್ಠಿಗೆ ತೆರಳುವಾಗ ತಮ್ಮ ಈ ಗುಂಪನ್ನು ಕಂಡರು. ತಾವು ಹೊಸಬರಾಗಿ ಕಾಣುತ್ತಿದ್ದು, ತಾವು ಯಾರೆಂದು ತಿಳಿಯುವ ಕುತೂಹಲ ಅವರಿಗಿದೆ. ತಾವು ಹೇಳಿದಿರಾದರೆ, ಪ್ರಭುಗಳು ಪ್ರಸನ್ನಚಿತ್ತದಿಂದ ತಮ್ಮ ಇಲ್ಲಿನ ವಾಸಕ್ಕೆ ಅನುಕೂಲ ಒದಗಿಸಿಕೊಡಲು ಅನುಕೂಲವಾಗುತ್ತದೆ.”

“ತಮಗೆ ನಮಸ್ಕಾರ ಮತ್ತು ಅವಿಮುಕ್ತದ ಉದಾರ ಹೃದಯದ, ವಿಚಾರಪೂರ್ಣ ಮನಸ್ಸಿನ ರಾಜರಿಗೆ ಜಯವಾಗಲಿ.” ಯಾಜ್ಞಿಕ ಹೇಳಿದ. “ನಾವು ಪ್ರಯಾಣಿಕರು. ನನ್ನ ಹೆಸರು ಯಾಜ್ಞಿಕ. ಇವರು ವಯನದ ಅರಣ್ಯಕರು. ಚಿತ್ರಕೂಟದ ಮಾರ್ಗವಾಗಿ ಅಂತರ್ವೇದಿಗೆ ಹೋಗುತ್ತಿದ್ದೇವೆ. ಪ್ರಭುಗಳ ಈ ಸೌಜನ್ಯಕ್ಕೆ ನಾವು ಋಣಿಗಳು. ಅಂತರ್ವೇದಿಯಲ್ಲಿ ಕೊನೆಯುಸಿರು ಎಳೆಯುತ್ತಿರುವ ಗಣಪತಿಯಾದ ಢುಂಢಿಯನ್ನು ನೋಡಲು ಹೋಗುತ್ತಿದ್ದೇವೆ. ಬಾಲ್ಯದಲ್ಲಿ ಢುಂಢಿಯನ್ನು ಆಡಿಸಿದ್ದ ಹಿರಿಯ ವದೀರಜ್ಜನನ್ನು ಅಲ್ಲಿಗೆ ಕರೆದುಕೊಂಡು ಹೋಗುತ್ತಿದ್ದೇವೆ.”

“ಧನ್ಯವಾದಗಳು.” ಎಂದ ಅಧಿಕಾರಿ, “ದಯಮಾಡಿ ಕೆಲಕಾಲ ಇಲ್ಲಿಯೇ ತಂಗಿರಿ.” ಎಂದು ರಾಜನ ಬಳಿಗೆ ಹೋದ. ಇವರ ವಿಷಯ ತಿಳಿದ ಕೂಡಲೇ ರಾಜ ನೃಪೇಶ ನೇರವಾಗಿ ತಾನೇ ಗುಂಪಿನ ಕಡೆಗೆ ನಡೆದು ಬಂದ.

“ಎಲ್ಲರಿಗೂ ನಮಸ್ಕಾರ. ನಾನು ವದೀರಜ್ಜನ ಬಗ್ಗೆ ಕೇಳಿದ್ದೆ. ಬಹಳ ಹಿಂದೆ ನಾನು ವಯನಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಅವರನ್ನು ಕಂಡು ಮಾತಾಡಿದ್ದೆ. ಅವರಿಗೆ ನಾನು ನನ್ನ ವಂದನೆಯನ್ನು ಸಲ್ಲಿಸುತ್ತಿದ್ದೇನೆ.” ಎಂದು ರಾಜ ನೃಪೇಶ ವದೀರಜ್ಜನ ಮುಂದೆ ಕೈ ಜೋಡಿಸಿ ತಲೆಬಾಗಿದ.

ಕುಶಿಕ ಮತ್ತು ಯದು ನೃಪೇಶನನ್ನು ಗಂಭೀರವಾಗಿ ನೋಡುತ್ತಿದ್ದರು. ಶಕಧೂಮ ಮತ್ತು ಯಾಜ್ಞಿಕನ ಹೊರತಾಗಿ ಇತರರೂ ರಾಜ ಮತ್ತು ಅವನ ಅಧಿಕಾರಿಗಳ ಬಗ್ಗೆ ಪ್ರಸನ್ನ ಚಿತ್ತರಾಗಿರಲಿಲ್ಲ ಎಂಬುದನ್ನು ಶಂಬರ ಗಮನಿಸಿದ.

ರಾಜ ಮತ್ತು ರಾಜಾಧಿಕಾರಿಗಳೆಂದರೆ ಎಲ್ಲೋ ಹೇಗೋ ತುಂಬಾ ಎತ್ತರದಲ್ಲಿ ಮತ್ತು ಅಂತರದಲ್ಲಿ ಇರುತ್ತಾರೆ ಎಂದು ಭಾವಿಸಿದ್ದ ಶಂಬರನಿಗೆ ಈ ದೃಶ್ಯ ಕೊಂಚ ಆಶ್ಚರ್ಯವಾಯಿತು.

ಕುಶಿಕ ಮುಂದೆ ಬಂದು, "ಕೇವಲ ಪ್ರಯಾಣಿಕರಾಗಿ ನಾವು ಅವಿಮುಕ್ತದ ಮೂಲಕ ಹೋಗುತ್ತಿರುವುದು. ರಾತ್ರಿ ಇಲ್ಲಿ ತಂಗಿದ್ದು ಬೆಳಗ್ಗೆಯೇ ಎದ್ದು ಹೊರಟು ಹೋಗುತ್ತೇವೆ." ಎಂದು ಹೇಳಿದ.

"ನಾವು ಎಲ್ಲರೂ ಪ್ರಯಾಣಿಕರೇ. ನೀವು ನಾಳೆ ಬೆಳಗ್ಗೆ ಎದ್ದು ಹೊರಟು ಹೋಗುತ್ತೀರಿ. ನಾವು ಇನ್ನು ಯಾವಾಗಲೋ. ಹಳೆಯ ಪ್ರಯಾಣಿಕರು ಹೊಸ ಪ್ರಯಾಣಿಕರಿಗೆ ತಮ್ಮ ಅನುಭವದ ಸಹಾಯವನ್ನು ನೀಡುವುದು ಒಂದು ಸೌಜನ್ಯ." ರಾಜ ನೃಪೇಶ ಕುಶಿಕನಂತಹ ಭಟನಿಗೂ ಅಷ್ಟೇ ಸೌಜನ್ಯ ಪೂರ್ವಕವಾಗಿ ಹೇಳಿದ್ದು ಶಂಬರನಿಗೆ ಸಂತೋಷವೂ, ಸೋಜಿಗವೂ ಆಯಿತು.

ನೃಪೇಶ ತನ್ನ ಅಧಿಕಾರಿಗಳತ್ತ ತಿರುಗಿ, "ವದೀರಜ್ಜ ಮತ್ತು ಅವರ ಸಂಗಡಿಗರಿಗೆ ಎಂಟನೆಯ ಸ್ನಾನ ಘಟ್ಟದ ಬಳಿಯ ಮಂದಿರದಲ್ಲಿ ಉಳಿದುಕೊಳ್ಳಲು ವ್ಯವಸ್ಥೆ ಮಾಡಿ. ಅವರ ಸೌಕರ್ಯವನ್ನು ಗಮನಿಸಲು ಇಬ್ಬರು ಭಟರನ್ನು ನೇಮಕ ಮಾಡಿ. ಎಂಟನೆಯ ಸ್ನಾನಘಟ್ಟದಲ್ಲಿನ ಮಂದಿರದಲ್ಲಿದ್ದರೆ, ಬೆಳಗ್ಗೆ ಎದ್ದ ಕೂಡಲೇ ಚಿತ್ರಕೂಟದ ಮಾರ್ಗವನ್ನು ಹಿಡಿಯಲು ಅನುಕೂಲವಾಗುತ್ತದೆ. ವಂದನೆಗಳು." ಎಂದ ನೃಪೇಶನು ಹಿಂದಕ್ಕೆ ನಡೆದ. ಹಾಗೆ ಹೋಗುವ ಮುನ್ನ "ನಾವು ಚರ್ಚಾಗೋಷ್ಠಿಯೊಂದಕ್ಕೆ ಹೋಗಬೇಕಾದ ಅಗತ್ಯವಿರುವುದರಿಂದ ತೆರಳುತ್ತಿದ್ದೇವೆ. ಮನ್ನಿಸಿ." ಎಂದೂ ಹೇಳಿದ.

ಅಲ್ಲಿಯೇ ಉಳಿದ ಅಧಿಕಾರಿಯೊಬ್ಬರು, "ದಯವಿಟ್ಟು ಹಿಂಬಾಲಿಸಿ." ಎಂದು ತಂಡವನ್ನು ಎಂಟನೆಯ ಸ್ನಾನಘಟ್ಟಕ್ಕೆ ಕರೆದುಕೊಂಡು ಹೋದರು.

ಶಂಬರನಿಗೆ ಎಲ್ಲವೂ ಹೊಸತು. ಅರಮನೆ, ಆಸ್ಥಾನ, ವಂದಿಮಾಗಧರು, ತಡೆಭಟರು ಇತ್ಯಾದಿಗಳನ್ನು ಕೇಳಿದ್ದವನಿಗೆ ಆ ಪ್ರದೇಶದ ರಾಜನೊಬ್ಬ ರಸ್ತೆಯಲ್ಲಿ ಸಾಮಾನ್ಯ ಪ್ರಜೆಯಂತೆ ನಡೆದುಕೊಂಡು ಬಂದು, ಊರಿಗೆ ಪ್ರವೇಶಿಸಿದವರನ್ನು ಉಪಚರಿಸಿದ ರೀತಿ ಸೋಜಿಗವೆನಿಸಿತು.

ಆದರೆ ಯದು ಹೇಳಿದ. "ಅದೆಲ್ಲಾ ಸರಿ. ಆದರೆ, ಅವನ ತಂದೆ, ಈ ಹಿಂದಿನ ರಾಜನಾಗಿದ್ದ ಮಹಿಪಾಲನೇ ನಮ್ಮ ವಯನದ ದುಃಸ್ಥಿತಿಗೆ ಕಾರಣರಾದವನು. ಅವನೇ ಆರ್ಯ ಮುಖಂಡರ, ಋಷಿಗಳ, ಪುರೋಹಿತರ ಪಕ್ಷವಹಿಸಿ ಅರಣ್ಯಕರ ನಾಶಕ್ಕೆ ನಾಂದಿ ಹಾಡಿದವರು. ನೀವು ಇವತ್ತು ಏನು ಈ ರಾಜ್ಯದ ವ್ಯವಸ್ಥೆಯನ್ನು ನೋಡಿತ್ತಿದ್ದೀರೋ, ಇದು ನಿಂತಿರುವುದು ಅರಣ್ಯಕರ ಸಮಾಧಿಯ ಮೇಲೆ."

ಶಂಬರನಿಗೆ ನಿಧಾನವಾಗಿ ಅರ್ಥವಾಗತೊಡಗಿತು.

ಯಾಜ್ಞಿಕ ಸ್ನಾನಘಟ್ಟದಲ್ಲಿ ಸ್ನಾನ ಮಾಡಿ ತನ್ನ ವೈದಿಕ ಕ್ರಮಗಳಲ್ಲಿ ನಿರತನಾಗಿದ್ದಾಗ ಶಂಬರ ಮೆಟ್ಟಿಲುಗಳ ಮೇಲೆ ಕುಳಿತುಕೊಂಡು ಹರಿಯುತ್ತಿದ್ದ ಗಂಗೆಯನ್ನು ನೋಡಿದ. ಗಂಗೆಯೇ ಒಂದು ಸೋಜಿಗವೆನಿಸಿತು. ಎಲ್ಲಿಯೋ ದೂರದಲ್ಲಿ ಹಿಮಾಲಯದಲ್ಲಿ ಹುಟ್ಟಿ ಎಂತೆಂತಹ ನೆಲಗಳ ಸ್ವರೂಪಕ್ಕೆ, ಎಂತೆಂತಹ ಸಮುದಾಯಗಳಿಗೆ, ಎಂತೆಂತಹ ಸಂಸ್ಕೃತಿಗಳಿಗೆ, ಎಂತೆಂತಹ ಸಂಘರ್ಷಗಳಿಗೆ, ಉನ್ನತಿ–ಅವನತಿಗಳಿಗೆ, ಉತ್ಥಾನ–ಪತನಗಳಿಗೆ ಸಾಕ್ಷಿಯಾಗಿದ್ದು ಹಾಗೆಯೇ ಹರಿಯುತ್ತಿದೆ. ಏನೇನೆಲ್ಲಾ ಹರಿಯಬಿಟ್ಟಿದೆ. ಏನೇನೆಲ್ಲಾ ತೊಳೆದುಹಾಕಿದೆ, ಬೆಳೆಸಿದೆ, ಕೊಚ್ಚಿಹಾಕಿದೆ; ಆದರೂ ಹರಿಯುತ್ತಲೇ ಇದೆ.

ಯಾರೋ ಮೃತರಾಗಿದ್ದು, ಅವರ ಸಂಬಂಧಿಗಳು, ಶವವನ್ನು ನೀರಿನಲ್ಲಿ ವಿಧ್ಯುಕ್ತವಾಗಿ ವಿಸರ್ಜಿಸುತ್ತಿರುವುದನ್ನು ಕಂಡ. ಅವನು ಶವದ ಸಂಸ್ಕಾರವೆಂದು ನೋಡುತ್ತಿರುವುದು, ವಸುಮಾ ತಾನೇ ಕೊಂದ ಕ್ಷತ್ರಿಯ ಯೋಧನ ಸಂಸ್ಕಾರ ಬಿಟ್ಟರೆ, ಇದು ಎರಡನೆಯದು.

ಶಂಬರ ನೀರನ್ನು ನೋಡುತ್ತಾ ಸ್ನಾನ ಘಟ್ಟಗಳ ಮೇಲಿಂದ ನಡೆದುಕೊಂಡು ದೂರ ನಡೆದ. ಘಟ್ಟಗಳು ಕಟ್ಟಿರದ ನದಿಯ ದಡಗಳಲ್ಲಿ ಎತ್ತರೆತ್ತರವಾಗಿ ಜೊಂಡು ಬೆಳೆದಿರುವುದನ್ನು ನೋಡಿ, ಅದನ್ನು ಸನಿಹದಿಂದ ನೋಡಲು ನಡೆದು, ನೀರಿನಲ್ಲಿ ಮೆಲ್ಲನೆ ಕಾಲುಗಳನ್ನು ಇಳಿಸಿದ. ಮೆಲ್ಲನೆ ಬಾಗಿ ನೀರನ್ನು ಬೊಗಸೆಯಲ್ಲಿ ಎತ್ತಿಕೊಂಡ. ಯಾವುದೋ ಘಟ್ಟದಿಂದ, ಯಾರದೋ ಕೈಯಿಂದ ಜಾರಿರುವ ನೀರಿನ ಚರ್ಮದ ಚೀಲ ತೇಲುತ್ತಾ ಬರುತ್ತಿತ್ತು. ಅದನ್ನು ಕೈಗೆತ್ತಿಕೊಂಡು ನೋಡಿದ. ಅದು ಬಿಸಾಡಿರದಾಗಿರದೇ ಸುಸ್ಥಿತಿಯಲ್ಲಿತ್ತು. ಅದರಲ್ಲಿ ನೀರನ್ನು ತುಂಬಿಸಿಕೊಂಡ, ‘ಈ ನೀರು ಅಷ್ಟೆಲ್ಲಾ ಸಾಕ್ಷಿಯಾಗಿದ್ದರೂ ಮಲಿನವಾಗಿಲ್ಲ. ಅದೇ ಒಂದು ಸೋಜಿಗ. ಈಗ ಇಲ್ಲಿ ನನ್ನ ಕೈಯಲ್ಲಿರುವ ನೀರು ನಿರ್ಮಲ, ಶುಭ್ರ ಮತ್ತು ಹೊಸತು, ಹೇಗೆ?’ ಶಂಬರನ ಮುಖದಲ್ಲಿ ನಗುಬಂತು. ಚರ್ಮದ ಚೀಲದಲ್ಲಿ ನೀರನ್ನು ತುಂಬಿಸಿಕೊಂಡು ಹಿಂದಿರುಗಿ ತಮಗಾಗಿ ವ್ಯವಸ್ಥೆ ಮಾಡಿದ್ದ ಮಂದಿರದ ಕಡೆಗೆ ಬಂದ. ಅಲ್ಲಿಯೇ ಕಟ್ಟೆಯ ಮೇಲೆ ಅಶ್ವಥಮರದ ಕೆಳಗೆ ಆಸನವೊಂದನ್ನು ಸಿದ್ಧಪಡಿಸಿ ವದೀರಜ್ಜನ ಕೂರಿಸಿದ್ದರು.

ಅಜ್ಜನ ಎಡಗೈಯ ಮೇಲ್ಭಾಗದಲ್ಲಿ ಮರದ ಮೇಲಿಂದ ಹಕ್ಕಿಯೊಂದು ಹಿಕ್ಕೆ ಹಾಕಿತ್ತು. ಅದನ್ನು ಗಮನಿಸಿದ ಶಂಬರ ತಾನು ತಂದಿದ್ದ ನೀರಿನ ಚೀಲದಿಂದ ನೀರನ್ನು ಅವರ ಕೈ ಮೇಲೆ ಹಾಕಿ ಅದನ್ನು ನಿಧಾನವಾಗಿ ಶುದ್ಧಗೊಳಿಸಿದ. ಹಾಗೆ ನೀರನ್ನು ಹಾಕುತ್ತಾ ಶುದ್ಧಗೊಳಿಸುವಾಗ, ನೀರಿನಲ್ಲಿ ನಿಂತಾಗ ಬಂದ ಪ್ರಶ್ನೆಗೆ ಉತ್ತರ ದೊರಕಿತ್ತು. ‘ನದಿಯ ನೀರು ಸದಾ ಹೊಸತಾಗಿರುವುದಕ್ಕೆ ಕಾರಣ, ಅದರ ದಂಡೆಯ ಮೇಲೆ ಏನೆಲ್ಲಾ ನಡೆಯುತ್ತಿದ್ದರೂ ಅವುಗಳಿಗೆ ಸಾಕ್ಷಿಯಾಗಿದೆಯೇ ಹೊರತು ಅದರಲ್ಲಿ ಭಾಗವಹಿಸಿಲ್ಲ. ಯಾವುದರಲ್ಲಿ ಯಾವುದು ಭಾಗವಹಿಸುತ್ತದೋ ಆಗ ಅದು ತನ್ನತನ ಕಳೆದುಕೊಂಡು ತಾನು ಭಾಗವಹಿಸಿದರ ರೂಪ ಪಡೆದುಬಿಡುತ್ತದೆ. ಆದರೆ, ನದಿ ತಾನು ಬರಿದೇ ಹರಿಯುತ್ತದೆ. ಸಾಕ್ಷಿಯಾಗಿರುತ್ತದೆ. ಯಾವುದರ ಭಾಗ ಪಡೆಯುವುದಿಲ್ಲ. ಸಾಕ್ಷಿಯಾಗಿರುತ್ತದೆ.’ ಶಂಬರನಿಗೆ ಒಂದು ತರಹದ ಭಾವ. ಈ ಉತ್ತರ ತಾನು ಚಿಂತಿಸಿದ್ದಲ್ಲ, ಯಾರೋ ಹೇಳಿದ್ದು ಎಂದು. ತಾನು ತೊಳೆಯುತ್ತಿರುವ ಕೈಗಳ ಒಡೆಯನ ಮುಖ ನೋಡಿದ. ಉತ್ತರಿಸಿದ ವದೀರಜ್ಜ ನಸುನಕ್ಕಂತೆ ಕಂಡಿತು.

ಆ ರಾತ್ರಿ ರಾಜ್ಯಾಧಿಕಾರಿಗಳೇ ಭೋಜನಕ್ಕೆ ವ್ಯವಸ್ಥೆ ಮಾಡಿದ್ದರು. ಗೋಧಿಯ ಚಪಾತಿಗಳು, ಅದಕ್ಕೆ ಬೆಣ್ಣೆ, ಕೆಂಪು ಅಕ್ಕಿಯ ಅನ್ನ, ಹುರುಳಿಕಾಯಿಯ ಪಲ್ಯ ಒದಗಿಸಿದ್ದರು. ಅದಕ್ಕೆ ಎಳ್ಳು ಮತ್ತು ಕರಿಮೆಣಸು ಇತ್ಯಾದಿ ಮಸಾಲೆ ಪದಾರ್ಥಗಳನ್ನು ಹಾಕಿದ್ದು ಶಂಬರನಿಗೆ ತೀರಾ ಹೊಸತು ರುಚಿಯನ್ನು ನೀಡಿತ್ತು. ಪರ್ಪಟ ಮತ್ತು ವಡಕ ಎಂದು ಅವರು ಕರೆಯುತ್ತಿದ್ದ ಉದ್ದಿನ ಹಪ್ಪಳ ಮತ್ತು ಬೇಳೆಯ ವಡೆಯೂ ಅವರ ಊಟದ ತಟ್ಟೆಯಲ್ಲಿತ್ತು. ಸುವಾಸ್ತುವಿನಲ್ಲಿ ಕುಂಬಳಕಾಯಿ, ಸವತೆಕಾಯಿ, ಪಡವಲಕಾಯಿ ಹಾಗೂ ಸೋರೆಕಾಯಿಯ ಬಳ್ಳಿಗಳನ್ನು ಹಬ್ಬಿಸಿದ್ದು, ಬದನೆಕಾಯಿ ಗಿಡಗಳನ್ನು ಹಾಕಿದ್ದು, ಸಿಹಿಗೆಣಸುಗಳನ್ನು ಬೆಳೆಯುತ್ತಿದ್ದ. ಮೆಣಸು, ಬೆಳ್ಳುಳ್ಳಿ ಮತ್ತು ಈರುಳ್ಳಿಯನ್ನೂ ಬೆಳೆಯುತ್ತಿದ್ದು ಅದನ್ನು ತನ್ನ ಅಡುಗೆಯಲ್ಲಿ ಉಪಯೋಗಿಸುತ್ತಿದ್ದ. ಆದರೆ, ಬೆಳ್ಳುಳ್ಳಿ ಮತ್ತು ಮೆಣಸು ಬಿಟ್ಟರೆ ಯಾವುದೇ ಇತರ ಮಸಾಲೆಯ ಪದಾರ್ಥಗಳನ್ನು ಅಡುಗೆಗೆ ಉಪಯೋಗಿಸುತ್ತಿರಲಿಲ್ಲ. ಮೊಸರು ಧಾರಾಳವಾಗಿತ್ತು.

ಸೋಮವನ್ನಾಗಲಿ ಅಥವಾ ಸುರೆಯನ್ನಾಗಲಿ ಕುಡಿಯುವುದನ್ನು ಬ್ರಾಹ್ಮಣರಿಗೆ ಅವಿಮುಕ್ತದಲ್ಲಿ ನಿಷೇಧವಿದ್ದುದರಿಂದ ಯಾಜ್ಞಿಕ ಅಂದು ಮದ್ಯ ಸೇವಿಸಲಿಲ್ಲ. ಸುರೆಯ ಬದಲು ಅಂದು ಎಲ್ಲರೂ ಶೀಕರಣಿಯನ್ನು ಸೇವಿಸಿದರು. ಹಸುವಿನ ಗಟ್ಟಿಯಾದ ಮೊಸರಿಗೆ ಹರಳಿನ ಸಕ್ಕರೆ, ಕೆನೆ ಇತ್ಯಾದಿಗಳನ್ನು ಸೇರಿಸಿ ಕೆಲವು ಮೂಲಿಕೆಗಳನ್ನು ಸೇರಿಸಿ ಮಾಡುತ್ತಿದ್ದ ಶೀಕರಣಿಯನ್ನು ಶಂಬರ ಸಣ್ಣ ಹುಡುಗನಿದ್ದಾಗ ವಸುಮ ಮಾಡಿಕೊಡುತ್ತಿದ್ದಳು. ಅವಳು ಸುವಾಸ್ತುವನ್ನು ಬಿಟ್ಟು ಹೋದಾಗಿನಿಂದ ಶೀಕರಣಿಯನ್ನು ತಿಂದೇ ಇರಲಿಲ್ಲ. ಆದರೆ ಅವಳು ಹೇಳಿಕೊಟ್ಟಿದ್ದ ಮೊಸರನ್ನು ನೀರಿನಲ್ಲಿ ಹಾಕಿ ಕಡೆದು ಸಗವನ್ನು ಮಾಡುವುದನ್ನು ಕಲಿತಿದ್ದ. ಜೊತೆಗೆ ಬೆಣ್ಣೆ ತೆಗೆಯುವುದನ್ನೂ ಕಲಿತಿದ್ದ. ತುಪ್ಪವನ್ನು ಕಾಯಿಸುವುದು ಗೊತ್ತಿದ್ದರೂ, ಬೆಣ್ಣೆಯೇ ಅವನಿಗೆ ತುಪ್ಪಕ್ಕಿಂತ ಪ್ರೀತಿಯಾಗಿದ್ದರಿಂದ ಬೆಣ್ಣೆಯನ್ನು ಸೇವಿಸುತ್ತಿದ್ದ. ಒಂದು ವೇಳೆ ಬೆಣ್ಣೆ ಜಾಸ್ತಿಯಿದ್ದ ಸಂದರ್ಭಗಳಲ್ಲಿ ತುಪ್ಪ ಕಾಯಿಸಿಡುತ್ತಿದ್ದ. ಬಂದ ಪ್ರಯಾಣಿಕರಿಗೆ ಕೊಡುತ್ತಿದ್ದ.

ಈಗ ಅವಿಮುಕ್ತದಲ್ಲಿ ಕೇಸರಿ ಬೆರೆಸಿದ್ದ ಗಟ್ಟಿ ಹಾಲನ್ನು ಮತ್ತು ಘಮಘಮಿಸುತ್ತಿದ್ದ ಶೀಕರಣಿಯನ್ನು ಸೇವಿಸಿದ ಶಂಬರನಿಗೆ ವಸುಮ ಪದೇ ಪದೇ ನೆನಪಿಗೆ ಬಂದಳು.

ರಾಜಾಧಿಕಾರಿಗಳು ಇವರು ಇರುವಲ್ಲಿಗೇ ಬಂದು, "ಎಲ್ಲಾ ಸೌಕರ್ಯವಾಗಿದೆಯೇ ತಾನೇ? ತಮಗೇನಾದರೂ ಕೇಳಬೇಕಿದ್ದರೆ ದಯಮಾಡಿ ಕೇಳಿ." ಎಂದು ವಿನಂತಿಸಿಕೊಂಡರು.

ಯಾರೂ ಏನೂ ಕೇಳುವಷ್ಟಿಲ್ಲ ಎನ್ನುವಂತೆ ಒಬ್ಬರ ಮುಖವನ್ನೊಬ್ಬರು ನೋಡಿಕೊಂಡರು. ಆದರೆ ಯಾಜ್ಞಿಕ ಕೇಳಿದ. "ನಿಮ್ಮಲ್ಲಿ ಮಾಡಿದ್ದಂತಹ ಶೀಕರಣಿಯನ್ನು ನಾನು ಸೇವಿಸಿಯೇ ಇರಲಿಲ್ಲ. ಅದಕ್ಕೆ ಏನೇನು ಹಾಕಿದ್ದಾರೆಂದು ತಿಳಿಯಬೇಕಿತ್ತು."

ಶಂಬರ ಮತ್ತು ಯದು ಮುಖ ಮುಖ ನೋಡಿಕೊಂಡರು. ಇದೂ ಒಂದು ಅಂತಹ ಅಗತ್ಯವಾಗಿರುವಂತಹ ವಿಷಯವೇ ಎಂಬಂತೆ.

ಆದರೆ ಅವನ ಪ್ರಶ್ನೆಗೆ ಮಹತ್ವ ಕೊಟ್ಟ ಅಧಿಕಾರಿಗಳು, "ಖಂಡಿತ ಸಂಬಂಧಿಸಿದವರು ನಿಮಗೆ ಹೇಳುತ್ತಾರೆ." ಎಂದು ಅಲ್ಲಿಂದ ಹೊರಟರು. ಕೆಲವೇ ನಿಮಿಷಗಳಲ್ಲಿ ಓರ್ವ ಆರ್ಯ ಸ್ತ್ರೀಯು ಬಂದು ವಂದಿಸಿ ಎಲ್ಲರ ಮುಂದೆ ಕುಳಿತಳು.

"ನನ್ನ ಹೆಸರು ವಸುಂಧರಾ, ನಾನೇ ಶೀಕರಣಿಯನ್ನು ಮಾಡಿದ್ದು. ಇಂದು ನೀವು ಸೇವಿಸಿದ ಶಿಖರಿಣಿಯನ್ನು ಮಾಡುವ ಬಗ್ಗೆ ಹೇಳುತ್ತೇನೆ. ಲವಂಗದ ಮೊಗ್ಗು, ನಾಗಕೇಸರದ ಕುಸುಮ, ಮೆಣಸು, ಸೈಂಧವ, ಬೆಲ್ಲ, ಲವಂಗಪತ್ರ, ಕಚೋರ ಇವುಗಳನ್ನು ನವುರಾಗಿ ಚೂರ್ಣಮಾಡಿ ಅದನ್ನು ಮೊಸರಿನಲ್ಲಿ ಹಾಕಬೇಕು. ನಂತರ ಅಣಿಲೆಯ ಕಾಯಿ, ಅರಗು, ಜೇನುತುಪ್ಪ ಇವುಗಳಿಂದ ಆ ಮೊಸರಿಗೆ ಧೂಪವನ್ನು ಕೊಡಬೇಕು. ಕರ್ಪೂರದ ವಾಸನೆಯನ್ನೂ ಕೊಡಬೇಕು. ಆಗ ಆ ಮೊಸರು ಶಿಖರಿಣಿಯಾಗುವುದು."

ಶಂಬರನು ವಸುಂಧರಾ ಹೇಳಿದ ಎಷ್ಟೋ ವಸ್ತುಗಳನ್ನು ಕೇಳಿಯೇ ಇರಲಿಲ್ಲ. ಮೊಸರಿಗೆ ಧೂಪವನ್ನು ಹೇಗೆ ಕೊಡುವುದೂ ತಿಳಿಯಲಿಲ್ಲ. ಆದರೆ, ಆಮೇಲೆ ಯಾಜ್ಞಿಕನಿಗೆ ಕೇಳಿದರಾಯ್ತು ಎಂದು ಸುಮ್ಮನಾದ.

ಯಾಜ್ಞಿಕ ಆಕೆಗೆ ವಂದನೆ ಸಲ್ಲಿಸಿ ಹಣ್ಣುಗಳ ಸ್ವಾದದ ಮೊಸರನ್ನು ಹೇಗೆ ಮಾಡುವುದೆಂದು ಕೇಳಿದ. ಆಕೆ ಮಾವಿನ ಸ್ವಾದದ ಮೊಸರನ್ನು ಹೇಗೆ ಮಾಡಬೇಕೆಂದು ಯಾಜ್ಞಿಕನಿಗೆ ತಿಳಿಸುತ್ತಿದ್ದಳು. ಅಷ್ಟರಲ್ಲಿ ಯದುವು

ದಾಳಿಂಬೆಯ ರಸವನ್ನು ವದೀರಜ್ಜನಿಗೆ ಕುಡಿಸಲು ತಂದುದನ್ನು ಕಂಡು ಮೇಲೆದ್ದು, ಅವನಿಂದ ಅದನ್ನು ಪಡೆದು ತಾನೇ ವದೀರಜ್ಜನಿಗೆ ಕುಡಿಸಿದ.

ಚಿತ್ರಮೂಲದ ಬೇರಿನಿಂದ ಮಡಿಕೆಯನ್ನು ಪೂಸಿ ಅದರಲ್ಲಿ ಮೊಸರನ್ನು ಮಾಡಿದರೆ ಅದು ಹೇಗೆ ಸಂಪಿಗೆ ಹೂವಿನ ವಾಸನೆಯನ್ನು ನೀಡುತ್ತದೆ ಇತ್ಯಾದಿಗಳನ್ನು ವಸುಂಧರಾ ಯಾಜ್ಞಿಕನಿಗೆ ವಿವರಿಸಿ ಹೊರಟಳು.

ನಂತರ ಯಾಜ್ಞಿಕ, ಶಂಬರ, ಯದು ಮತ್ತು ಕುಶಿತ ತಮ್ಮ ವಿಶ್ರಾಂತಿ ಮಂದಿರದಿಂದ ಹೊರಗೆ ಬಂದು ವಿಶಾಲವಾದ ಸ್ನಾನ ಘಟ್ಟದ ಹಾಸುಗಲ್ಲಿನ ಮೇಲೆ ಕುಳಿತರು. ಉರಿಯುವ ದೊಂದಿಗಳನ್ನು ಹಿಡಿದುಕೊಂಡು ನರ್ತಿಸುವ ಯುವಕರಿಗೆ ಮದ್ದಲೆಗಳನ್ನು ನುಡಿಸುತ್ತಾ, ಆಘಾಟಿಗಳನ್ನು ಹಾಕುತ್ತಾ ಹಾಡುವ ಗಾಯಕರೂ ಗೋಷ್ಠಿಯನ್ನು ಲವಲವಿಕೆಯಿಂದ ಇರಿಸಿದ್ದರು.

ಶಂಬರನಿಗೆ ಈ ಬಗೆಯ ನರ್ತನಗಳು ಮತ್ತು ಗಾಯನ ಸಂಗೀತಗಳು ತೀರಾ ಹೊಸಬಗೆಯದ್ದಾದ್ದರಿಂದ ಬಹಳ ಆನಂದದಿಂದ ವೀಕ್ಷಿಸುತ್ತಿದ್ದ.

ಯುವಕರ ನರ್ತನ ಮುಗಿದ ಮೇಲೆ ಕೆಲವು ಯುವತಿಯರು ಗಿರಿಜಾ ಕಲ್ಯಾಣದ ನೃತ್ಯನಾಟಕ ಮಾಡಿದರು.

'ಓಂ ನಮಃ ಶಿವಾಯ,' ಎಂದು ಆರಂಭವಾದ ನೃತ್ಯನಾಟಕದಲ್ಲಿ ರುದ್ರನು ಸತಿಯನ್ನು ಕಳೆದುಕೊಂಡು ಕಾಡಿಗೆ ಹೋಗಿ ತಪಸ್ಸಿಗೆ ಕುಳಿತುಕೊಳ್ಳುವ ದೃಶ್ಯವೇ ಮೊದಲಿನದಾಗಿತ್ತು.

ವದೀರಜ್ಜನನ್ನು ಕೈಗಳುಳ್ಳ ಆಸನದ ಮೇಲೆ ಕೂರಿಸಿಕೊಂಡು ವಯನದ ಹುಡುಗರು ಶಂಬರ ಮತ್ತು ಇತರರು ಕುಳಿತಿರುವ ಕಡೆಗೆ ಬಂದರು. ಶಕಧೂಮನೂ ಅವರ ಜೊತೆಗೆ ಬಂದ. ವದೀರಜ್ಜನ ಕಂಡು ಶಂಬರ ಮೇಲೆದ್ದು ಹೋಗಿ ಅವರ ಪಕ್ಕದಲ್ಲಿ ಕುಳಿತ.

ತಪಸ್ಸು ಮಾಡುವ ರುದ್ರನ ಮುಂದೆ ಮನ್ಮಥ ಮತ್ತು ರತಿದೇವಿಯು ನರ್ತಿಸುತ್ತಾ ಅವನ ಸಮಾಧಿ ಭಂಗ ಮಾಡುವ ಯತ್ನ ಮಾಡುತ್ತಾರೆ.

ತಪೋನಿರತನಾದ ರುದ್ರನ ಸೇವೆಯಲ್ಲಿರುವ ಪಾರ್ವತಿಯು ತನ್ನ ಸಖಿಯರೊಡನೆ ಮನ್ಮಥ ಮತ್ತು ರತಿಯರು ಮಾಡುವ ಪ್ರಯತ್ನಕ್ಕೆ ಪೂರಕವಾಗಿ ಅಲ್ಲಿ ಸಂಚರಿಸುತ್ತಿರುತ್ತಾರೆ. ರುದ್ರ ತನ್ನ ಕಣ್ಣನ್ನು ಬಿಟ್ಟಾಗ ಪಾರ್ವತಿಯನ್ನು ಕಾಣುತ್ತಾನೆ. ಮೋಹಿತನಾಗುತ್ತಾನೆ. ಆದರೆ ತಾನು ಮೋಹಿತನಾಗುತ್ತಿರುವುದಕ್ಕೆ ಕಾರಣ ತಮ್ಮನ್ನು ಈ ಪ್ರಚೋದನೆಗೆ ತಳ್ಳುತ್ತಿರುವ ಮನ್ಮಥ ಮತ್ತು ರತಿಯರು ಎಂದು ತಿಳಿದು ಕ್ರೋಧದಿಂದ ಕಣ್ಣುಗಳನ್ನು ಅರಳಿಸಿ ತನ್ನ ಕೈಯೊಳಗಿನ ತ್ರಿಶೂಲದಿಂದ ತಿವಿದು ಮನ್ಮಥನನ್ನು ಕೊಲ್ಲುತ್ತಾನೆ.

ಶೃಂಗಾರ ಭಾವದಿಂದ ರೌದ್ರ ಮತ್ತು ಭಯಾನಕಕ್ಕೆ ತಿರುಗಿದ ನೃತ್ಯ ನಾಟಕದಲ್ಲಿ ಈಗ ರತಿದೇವಿಯ ಪ್ರಲಾಪ ಕರುಣಾ ರಸವನ್ನು ಸ್ಫುರಿಸುತ್ತದೆ. ರುದ್ರನ ಆಗ್ರಹವನ್ನು ಕಂಡು ಪಾರ್ವತಿಯು ಬೆದರಿ ತನ್ನ ಸಖಿಯರೊಡನೆ ಹೊರಟು ಹೋಗುತ್ತಾಳೆ.

ರತಿದೇವಿಯ ಪ್ರಲಾಪವನ್ನು ಕಂಡು ಮರುಗಿದ ರುದ್ರ ಅವಳು ತನ್ನ ಸಂಗಾತಿಯಾದ ಮನ್ಮಥನ ಜೊತೆಗೆ ಅಲ್ಲಿಗೆ ಬಂದು ಈ ರೀತಿ ತನ್ನನ್ನು ತಪಸ್ಸಿನಿಂದ ಹೊರಗೆಳೆಯಲು ಕಾರಣವೇನು ಎಂದು ಕೇಳುತ್ತಾನೆ. ಆಗಲೇ ಇಂದ್ರನೂ, ವಿಷ್ಣುವೂ, ಬ್ರಹ್ಮನೂ ಮತ್ತು ಇತರ ದೇವತೆಗಳು ಋಷಿಗಳೊಡನೆ ಸೇರಿ ಅಲ್ಲಿಗೆ

ಬಂದು ರುದ್ರನು ತಪಸ್ಸಿನಲ್ಲಿರುವ ಕಾರಣದಿಂದ ತಾರಕಾದಿ ರಾಕ್ಷಸರು ಉಪಟಳವನ್ನು ಕೊಡುತ್ತಿರುವ ವಿಷಯವನ್ನು ತಿಳಿಸುವರು. ನಂತರ ಸತಿಯು ಸತ್ತುಹೋದುದನ್ನು ಮನ್ನಿಸಿ ಮತ್ತೆ ವಿವಾಹವಾಗಬೇಕೆಂದು ಪ್ರಾರ್ಥಿಸುವರು. ಆದರೆ ಅದನ್ನು ನಿರಾಕರಿಸುವ ರುದ್ರ ಅಲ್ಲಿಂದ ಹೊರಟು ಹೋಗುತ್ತಾನೆ.

ತನ್ನ ಜೊತೆಗೆ ಸಖ್ಯವನ್ನು ನಿರಾಕರಿಸಿ ಹೋದ ಎಂದು ತಿಳಿದ ಪಾರ್ವತಿ ಖೇದಗೊಂಡು ಆ ರುದ್ರನ ಪ್ರೀತಿಯನ್ನು ಬಯಸಿ ತಪಸ್ಸಿಗಾರಂಭಿಸುತ್ತಾಳೆ. ಅವಳು ತಾನಿದ್ದ ಅರಮನೆಯನ್ನು ತೊರೆದು, ಆಹಾರಾದಿಗಳನ್ನು ತೊರೆದು, ಅರಣ್ಯದಲ್ಲಿ ತಪಸ್ಸನ್ನು ಆಚರಿಸುವಾಗ ತನ್ನ ಗಣದ ಇತರರಿಂದ ಈ ವಿಷಯ ತಿಳಿವ ರುದ್ರನು ಪ್ರಸನ್ನನಾಗಿ ಅವಳ ಬಳಿಗೆ ಬರುತ್ತಾನೆ. ದೇವತೆಗಳು, ಋಷಿಗಳು ಬಹು ಸಂತೋಷದಿಂದ ರುದ್ರನಿಗೂ ಮತ್ತು ಪಾರ್ವತಿಗೂ ವಿವಾಹ ಮಾಡುತ್ತಾರೆ.

ವಿವಾಹವಾದ ಬಳಿಕ ಶೃಂಗಾರ. ರುದ್ರನಾದವನು ಶಿವನಾಗಿ ಪಾರ್ವತಿಯೊಂದಿಗೆ ಮೋಹಕವಾಗಿ ನರ್ತಿಸುತ್ತಾನೆ. ಶಿವ ಮತ್ತು ಪಾರ್ವತಿಯರ ಶೃಂಗಾರ ನೃತ್ಯಕ್ಕೆ ವೀಣೆ, ಕೊಳಲು ಸಂಮೋಹಕ ಸ್ವರಗಳಗಳನ್ನು ಹೊರಡಿಸುತ್ತಿದ್ದವು. ಮದ್ದಲೆ, ತಾಳಗಳು ಬಹು ರಮ್ಯವಾಗಿ ಲಯವನ್ನು ಒದಗಿಸಿದ್ದವು.

*

ರುದ್ರ ತನ್ನ ಅನಂತವೆನಿಸುವಂತಹ ಮೈಥುನದ ಲೀಲೆಗೆ ಪಾರ್ವತಿಯನ್ನು ಎಳೆದುಕೊಂಡಿದ್ದ. ರುದ್ರನ ಹಣೆಯಲ್ಲಿ ಮತ್ತು ಕಂಕುಳಲ್ಲಿ ಬೆವರು ಹರಿಯುತ್ತಿತ್ತು. ಪಾರ್ವತಿ ಬೆವರಿನಿಂದ ತೋಯ್ದು ಹೋಗಿದ್ದಳು. ರುದ್ರನ ಮುಖದಲ್ಲಿ ಒಂದು ತೆರನಾದ ಒರಟು ನಗು, ಸೊಂಟದಲ್ಲಿ ಆವೇಶ ಹೆಚ್ಚುತ್ತಿರುವ ಲಯ. ಪಾರ್ವತಿ ಮುಖದಲ್ಲಿ ನೋವು. ಸಾಕು ಎಂಬಂತೆ ಅತ್ತಿತ್ತ ಮುಖವನ್ನು ಹೊರಳಿಸುತ್ತಿದ್ದಳು. ಕೊನೆಗೊಮ್ಮೆ ಅವನ ಭಾರವನ್ನು, ಕಾಲುಗಳನ್ನು ಎತ್ತಿ ಒಂದೇ ಸಮನೆ ಹಿಂದಕ್ಕೆ ಮಡಿಸಿದ್ದು ತೊಡೆಗಳು ನೋಯತೊಡಗಿ ಅಕ್ಕ ಪಕ್ಕಕ್ಕೆ ಹೊರಳಾಡತೊಡಗಿದಳು. ಸಾಧ್ಯವಾದಷ್ಟು ರುದ್ರನನ್ನು ಹಿಂದಕ್ಕೆ ತಳ್ಳಿ, ಅವನ ಹಿಡಿತದಿಂದ ನುಸುಳಿಕೊಳ್ಳಲು ಯತ್ನಿಸಿದಳು.

“ಬಿಡು ಸಾಕು. ಸಾಕಾಯ್ತು ಬಿಡು.” ಎಂದು ಕೂಗುತ್ತಾ ಪಾರ್ವತಿ ಅವನನ್ನು ತಳ್ಳಲು ಯತ್ನಿಸಿದರೂ ಅವನು ಅವಳನ್ನು ಬಿಡುತ್ತಿರಲಿಲ್ಲ. ಇನ್ನೂ ಒರಟಾಗಿ ಕೈಗಳಿಂದ ಅವಳ ಭುಜಗಳನ್ನು ಒತ್ತಿ ಹಿಡಿದಿದ್ದ ಮಿಥುನೇಶ್ವರ.

“ಹೇ ಬಿಡು... ಹೇ ರುದ್ರ... ಬಿಡು....” ನೋವಿನಿಂದ ಪಾರ್ವತಿಯು ಕೂಗುತ್ತಾ, “ದನೂ, ದನೂ.... ನನ್ನ ಬಿಡಿಸು... ಹೇ ದನೂ.” ಎಂದು ಕರೆದ ದನಿಯೇನೋ ಹೊರಗೆಯೇ ಬಾಗಿಲಿಲ್ಲದ ದ್ವಾರದ ಹೊರಗೆ ಕಾಯುತ್ತಿದ್ದ ದನುವಿಗೆ ಕೇಳಿತಾದರೂ, ಅವಳಿಗೆ ರುದ್ರನ ಭಯವಿತ್ತು.

“ಏ ದನೂ... ಅಲ್ಲೇ ಇದ್ದೀಯಾ? ಕೂಗ್ತಿರೋದು ನಿನಗೇ ದನೂ.” ಪಾರ್ವತಿ ಕೂಗಿದಳು ಆರ್ತಳಾಗಿ.

“ಇಲ್ಲೇ ಇದ್ದೇನೆ.” ದನೂ ಅಸಹಾಯಕಳಾಗಿ ಹೇಳಿದಳು.

“ಬಾ ಒಳಗೆ. ಬಾರೇ ಒಳಗೆ.... ನನ್ನ ಈ ನಿಷಾದನಿಂದ ಬಿಡಿಸು.” ಪಾರ್ವತಿ ಕೂಗಿದಷ್ಟೂ ಹೆಚ್ಚು ಹೆಚ್ಚು ಜೋರಾಗಿ ನಗುತ್ತಾ ರುದ್ರ ತನ್ನ ಕಾಮಕೇಳಿಯ ಬಿರುಸನ್ನು ಹೆಚ್ಚಿಸುತ್ತಿದ್ದ.

“ನನಗೆ ರುದ್ರ ದೇವರದ್ದೇ ಭಯ.” ಎಂದಳು ದನು ಹೊರಗಿನಿಂದಲೇ.

“ಇವನು ದೇವರಾ? ನಿಷಾಧ ಪಿಶಾಚಿ...... ನನ್ನ ಕೊಂದುಬಿಡುತ್ತಾನೆ. ನೀನು ಈಗ ಬಾರೇ... ನೀನು ಈಗ ಬರದಿದ್ದರೆ...... ಬಂದು ಬಿಡಿಸದಿದ್ದರೆ, ನಾನು ನಿನ್ನ ಕೊಂದುಬಿಡುತ್ತೇನೆ.” ಎಂದು ಆಗ್ರಹದಿಂದ ಪಾರ್ವತಿ ಕೂಗಿದಳು.

ರುದ್ರ ಜೋರಾಗಿ ಅಟ್ಟಹಾಸ ಮಾಡುತ್ತಾ ಕೂಗಿದ. “ಬಾ ದನೂ... ನೋಡೋಣ ಇವಳನ್ನು ಹೇಗೆ ಬಿಡಿಸುತ್ತೀಯೋ.”

ದನು ಒಳಗೆ ಬಂದಳು. ದೂರದಲ್ಲಿಯೇ ನಿಂತಳು ರುದ್ರ–ಪಾರ್ವತಿಯ ರುದ್ರಕೂಟವನ್ನು ನೋಡುತ್ತಾ.

“ಬಾ ಅಲ್ಲಿಯೇ ನಿಂತು ಏನು ಮಾಡ್ತಿದ್ದೀಯ. ತಳ್ಳು ಇವನ....” ಪಾರ್ವತಿ ದನುವನ್ನು ಕರೆದಳು.

ದನು ತನ್ನ ಕೈಯಲ್ಲಾದಷ್ಟು ಪಾರ್ವತಿಯ ಮೇಲಿದ್ದ ರುದ್ರನ ತಳ್ಳಲು ಯತ್ನಿಸಿದಳು. ಆದರೆ, ಅವಳ ಬಲ ಏತಕ್ಕೂ ಸಾಲುತ್ತಿರಲಿಲ್ಲ. ರುದ್ರ ನಗುತ್ತಲೇ ದನುವನ್ನು ತನ್ನ ಎಡಗೈಯಿಂದ ತಳ್ಳಿ ತನ್ನ ಕಾರ್ಯವನ್ನು ಮುಂದುವರಿಸಿದ್ದ.

“ದನೂ.... ನಿನ್ನ ಎರಡೂ ಕೈಗಳಿಂದ ಅವನನ್ನು ಎಳೆದುಹಾಕು.” ಪಾರ್ವತಿ ಕೂಗಿದಳು.

ದನು ಬಹುಪಾಲು ರುದ್ರನ ಬೆನ್ನಿನ ಮೇಲೆಯೇ ಬಿದ್ದು ತನ್ನ ಎರಡೂ ಕೈಗಳಿಂದ ಅವನ ಕಂಕುಳುಗಳಿಂದ ಬಳಸಿ ಭುಜವನ್ನು ಹಿಡಿದು ಹಿಂದಕ್ಕೆ ಎಳೆಯಲು ಯತ್ನಿಸಿದಳು. ಆಗಲೇ ಪಾರ್ವತಿಯೂ ಅವನನ್ನು ಮೇಲಕ್ಕೆ ತಳ್ಳಿ ಪಕ್ಕಕ್ಕೆ ಹೊರಳಲು ಯತ್ನಿಸಿದಳು. ಅವಳ ಈ ಪ್ರಯತ್ನ ಅವನ ಕೂಟಕ್ಕೆ ಕೊಂಚ ಭಂಗ ತಂದಿತು. ಹೆಂಗಸರಿಬ್ಬರ ಈ ಪ್ರಯತ್ನಗಳು ರುದ್ರನಿಗೆ ಹಾಸ್ಯವಾಗಿ ಕಂಡಿತಾದರೂ ತನಗೆ ಭಂಗ ತರಲು ಯತ್ನಿಸಿದ ದನುವಿಗೆ ಶಾಸ್ತಿ ಮಾಡಲು ತನ್ನ ಬೆನ್ನ ಮೇಲಿಂದಲೇ ಅವಳ ಮೇಲೆ ಹೊರಳಿ, ಅವಳ ತೋಳೊಂದನ್ನು ಹಿಡಿದೆಳೆದು ತನ್ನ ಕೆಳಕ್ಕೆ ಹಾಕಿಕೊಂಡು ಅವಳು ತೊಟ್ಟಿದ್ದ ಚರ್ಮದ ವಸ್ತ್ರವನ್ನು ಕಿತ್ತು ಅವಳ ಮೇಲೆ ಬಿದ್ದ. ದನು ಕೂಗತೊಡಗಿದಳು.

“ಒಡತಿ, ನನ್ನ ಬಿಡಿಸಿ.”

“ಬಿಡು ಅವಳ....” ಎಂದು ಕೂಗುತ್ತಾ ಪಾರ್ವತಿ ಅವನನ್ನು ಹಿಂದಕ್ಕೆ ಎಳೆದುಹಾಕಲು ಯತ್ನಿಸಿದಳು. ದನುವನ್ನು ಪಾರ್ವತಿಯನ್ನು ಹಿಡಿದಷ್ಟು ಬಿಗಿಯಾಗಿ ಹಿಡಿಯದೇ, “ಅವಳನ್ನು ಬಿಡಿಸಕ್ಕೆ ಬರ್ತೀಯಾ? ಹೀಗೆ ಸಿಕ್ಕಿ ಹಾಕಿಕೊಳ್ಳಲು ಬಂದೆಯಾ?” ಎಂದು ಉನ್ಮತ್ತನಂತೆ ನಗುತ್ತಿದ್ದ.

ಪಾರ್ವತಿ ಅವನನ್ನು ಬಹು ಸಾಹಸದಿಂದ ಹಿಂದಕ್ಕೆ ಎಳೆದು ತಳ್ಳಿದಳು. ಅವಳು ತಳ್ಳುವಿಕೆ ತಾನೇ ಸಹಕರಿಸಿದಂತೆ ರುದ್ರ ಬೆನ್ನಿನ ಮೇಲೆ ಬಿದ್ದು ಮಲಗಿದ. ಕೂಗುತ್ತಿದ್ದ ದನು ಮೇಲಕ್ಕೆದ್ದು ತನ್ನ ವಸನಗಳನ್ನು ಆಯ್ದುಕೊಂಡು ಅಲ್ಲಿಂದ ಹೊರಗೆ ಓಡಿದಳು.

ರುದ್ರನ ಮಹಾಲಿಂಗ ಊರ್ಧ್ವಮುಖವಾಗಿ ನಿಂತು ಬೆಂಕಿಯ ಬೆಳಕಿನಲ್ಲಿ ರೇತಸ್ಸಿನ ಮಹಿಮೆಯಿಂದ ಹೊಳೆಯುತ್ತಿತ್ತು. ರುದ್ರನಿಗೆ ಆಯಾಸವಾಗಿದ್ದಂತೆ ಕಾಣಲಿಲ್ಲ. ಮಲಗಿದ್ದಲ್ಲಿಂದ ಪಾರ್ವತಿಯನ್ನು ನೋಡುತ್ತಾ ಚೇಷ್ಟೆಯಿಂದ ನಗತೊಡಗಿದ.

“ಸಾಕಾಯ್ತು ನಿನ್ನ ಮಿಥುನ. ಬೀಜ ಬಿಡದೇ ಮಾಡುವ ನಿನ್ನ ಮೈಥುನದಿಂದ ಬರಿಯ ನೋವು. ನನಗೆ ಸಾಕಾಯ್ತು...... ನಿಜವಾಗಿಯೂ ಒಳಗೆ ನೋವಿನ ಬಾವಿದೆ. ಏಕೆ? ಏಕೆ ಹೀಗೆ ಹೇ ಶಿವ....”

“ಉಪವಸನ ಜಾರಿಸಿಕೊಂಡು, ನಿನ್ನ ಮೊಲೆಗಳನ್ನು ತೋರಿಸಿಕೊಂಡು ತಪಸ್ಸು ಮಾಡುತ್ತಿದ್ದ ನನ್ನ ಮುಂದೆ ಓಡಾಡಿಕೊಂಡು, ನನ್ನಲ್ಲಿರುವ ಕಾಮವನ್ನು ಕೆರಳಿಸಲು ರತಿ–ಮನ್ಮಥರನ್ನು ನನ್ನ ಮುಂದೆ ಕುಣಿಸಿಕೊಂಡು ವಯ್ಯಾರ ಮಾಡಿದೆಯಲ್ಲೇ ಕರಿಹೆಣ್ಣೇ. ಈಗ ಅನುಭವಿಸಬೇಕು. ಈ ರುದ್ರನ ಲಿಂಗ ಎಂತದ್ದು ಅಂತ ನೋಡು.” ಎಂದು ಇನ್ನೂ ಬಿರುಸಾಗಿಯೇ ನಿಂತಿದ್ದು, ಯೋನಿಯ ತೇವದಿಂದ ಬೆಂಕಿಯ ಬೆಳಕಿನಲ್ಲಿ ಹೊಳೆಯುತ್ತಿದ್ದ ತನ್ನ ಲಿಂಗವನ್ನು ಅಭಿಮಾನದಿಂದ ಹಿಡಿದು ಸವರಿದ.

“ಸಂಭೋಗದ ಫಲ, ಬೀಜವನ್ನು ಯೋನಿಯೊಳಗೆ ಸುರಿಯುವಲ್ಲಿದೆ. ಬೀಜವನ್ನು ಬಿಡದ ನಿನ್ನ ಶಿಶ್ನ ನನಗೆ ಬರಿಯ ಮರದ ಕೊರಡು. ಏಕೆ ರುದ್ರ? ಹೇಳು ಶಿವನೇ ನಾನು ತಾಯಿಯಾಗುವುದು ಬೇಡವೇ? ನಾನು ತಾಯಿಯಾಗಬೇಕು. ನನ್ನ ಒಳಗೆ ತತ್ತಿಗಳು ಕಾಯುತ್ತಿವೆ. ನಿನ್ನ ಬೀಜಗಳಿಗಾಗಿ ನನ್ನ ತತ್ತಿಗಳು ಕಾಯುತ್ತಿವೆ.” ಎಂದ ಪಾರ್ವತಿಯ ಕಣ್ಣಂಚು ಒದ್ದೆಯಾಗಿತ್ತು. ಅವಳ ಕಣ್ಣುಗಳಿಂದ ನೀರೊಸರಲು ಸಿದ್ಧವಾಗಿರುವುದನ್ನು ನೋಡಿದ ರುದ್ರ ನಿಧಾನವಾಗಿ ನಿಟ್ಟುಸುರುಬಿಟ್ಟ.

“ಯೋನಿಯೊಳಗೆ ಬೀಜ ಬಿಡದ ಶಿಶ್ನದಿಂದಾಗುವ ಪ್ರಯೋಜನವೇನು? ನಿನ್ನ ಕೂಟಕ್ಕೆ ನಾನೊಂದು ವಸ್ತುವಷ್ಟೇ. ಬೀಜವನ್ನು ನಿನ್ನದರ ಒಳಗೇ ಇಟ್ಟುಕೊಂಡು ನೀನು ಏನು ಮಾಡ್ತೀಯಾ?” ಕ್ರೋಧ ಮತ್ತು ದುಃಖವೆರಡೂ ಬೆರೆತ ದನಿಯಲ್ಲಿ ಪಾರ್ವತಿ ಹೇಳಿದಳು.

“ರಾಕ್ಷಸರ ಹಾಗೆ ಬೀಜ ಎನ್ನುತ್ತೀಯೆ. ಅದು ಶುಕ್ರ, ವೀರ್ಯ! ವೀರ್ಯ ಎಂದರೆ ಏನು? ಶಕ್ತಿ! ಭೋಗಿಗಳು ಮೋಹದಾನಂದದಲ್ಲಿ ಸಂಭೋಗಗಳನ್ನು ಮಾಡಿ ಹೆಂಗಸರ ತತ್ತಿಗಳ ಮೇಲೆ ವೀರ್ಯವನ್ನು ಚೆಲ್ಲಿ ಮಕ್ಕಳನ್ನು ಮಾಡುತ್ತಾರೆ. ಯೋಗಿಗಳು ಸಚ್ಚಿದಾನಂದದಲ್ಲಿ ವೀರ್ಯವನ್ನು ತಮ್ಮಲ್ಲಿಯೇ ಇರಿಸಿಕೊಂಡು ಎಲ್ಲಿಯೂ ಚೆಲ್ಲದೇ ಆ ರಸವನ್ನು ಓಜಸ್ಸನ್ನಾಗಿಸಿಕೊಳ್ಳುತ್ತಾರೆ. ಆಸೆಗಳಿಲ್ಲದ, ಮೋಹಗಳಿಲ್ಲದ ಯೋಗಿ ನಾನು.”

“ನನ್ನನ್ನು ಹಿಂಸಿಸುವಂತೆ ಸಂಭೋಗ ಮಾಡುವ ಆಸೆ ನಿನಗಿಲ್ಲವೇ?”

“ಅದು ಆಸೆಯಲ್ಲವೇ ಕರಿಹೆಣ್ಣೇ. ನಿನ್ನ ಯೋನಿಯು ಶಕ್ತಿಯ ಕರಣ. ನನ್ನ ಶಿಶ್ನವು ಪುರುಷ ಕರಣ. ಈ ಎರಡೂ ಒಂದರಲ್ಲೊಂದು ಸೇರಿದಾಗ, ಆ ಸಂಭೋಗದಲ್ಲಿ ಐಕ್ಯ ಬಿಂದು ಗೋಚರವಾಗುತ್ತದೆ. ಪ್ರಕೃತಿ ಮತ್ತು ಪುರುಷರ ಮಿಥುನದಿಂದ ಮೂಲಶಕ್ತಿಯ ಬಿಂದು ಫಲಿಸುತ್ತದೆ. ಆ ಬಿಂದುವಿನಲ್ಲಿ ನಾನು, ನನ್ನಲ್ಲಿ ಆ ಬಿಂದು ಒಂದಾಗುತ್ತದೆ. ಈ ಬಿಂದುವಿನ ಸಾಕ್ಷಾತ್ಕಾರ ಮಾಡಿಕೊಳ್ಳಲು ಈ ಸಂಭೋಗ ಒಂದು ತಂತ್ರ. ಈ ಬಿಂದುವಿನ ಸಾಕ್ಷಾತ್ಕಾರವಾದವರು ಜನನ ಮತ್ತು ಮರಣಗಳ ಚಕ್ರದಿಂದ ಹೊರತಾಗುತ್ತಾರೆ.” ರುದ್ರ ಸಾವಧಾನವಾಗಿ ಹೇಳಿದ.

“ನೀನು ಯಾವುದರಿಂದಲಾದರೂ ಹೊರತಾಗು. ನನ್ನಿಂದಲೂ ಹೊರತಾಗಿ ಬಿಡು. ನೀನೇನೂ ನನ್ನೊಡನೆ ಯಾವಾಗಲೂ ಇರುವುದಿಲ್ಲವಲ್ಲ. ಗೃಹಸ್ಥನಲ್ಲ, ಅದಕ್ಕೆ ಗೃಹದಲ್ಲಿ ಇರಲಾರೆ. ಶಕ್ತಿಯ ಬಿಂದುವನ್ನು ಸಾಕ್ಷಾತ್ಕರಿಸಿಕೊಳ್ಳುವ ಸಂಭೋಗ–ತಂತ್ರವನ್ನು ಪ್ರಯೋಗ ಮಾಡಲು ಬೆಸ್ತರವಳು, ರಾಕ್ಷಸರವಳು, ಗಣಿಕೆಯವಳು, ಹೀಗೇ ಯಾರ್ಯಾರೋ ನಿನಗೆ ಸಿಗುತ್ತಿರುತ್ತಾರೆ. ನಾನು ಈ ಜಾಗದಲ್ಲೇ ಇರುತ್ತೇನೆ. ಇದೇ

ನನ್ನ ಪ್ರಪಂಚ. ಅದಕ್ಕೇ ನನಗೆ ಮಗುವೊಂದನ್ನು ಕೊಟ್ಟುಬಿಡು. ನಿನ್ನ ಶಿಶ್ನವೋ ಮಹಾಲಿಂಗ. ಅದು ಆರ್ಯರನ್ನು ಬಾಗಿಸಿದೆ. ಅದರ ಮುಂದೆ ಅನಾರ್ಯರೂ ಬಾಗುವರು. ಅಂತಹ ಆ ಮಹಾಲಿಂಗ ಒಂದು ಸಲ ಕರುಣೆಯಿಂದಲಾದರೂ ವೀರ್ಯವನ್ನು ನನ್ನ ಯೋನಿಯಲ್ಲಿ ಸುರಿಸಿ, ಮಗುವಿನ ಭಾಗ್ಯ, ಒಂದೇ ಒಂದು ಮಗುವಿನ ಭಾಗ್ಯ ಕರುಣಿಸಲಿ. ನಾನು ನಿನ್ನ ಸಂಭೋಗತಂತ್ರದಿಂದ ಮಾಡುವ ಯೋಗ ಸಾಧನೆಗೆ ಅಡ್ಡಿ ಬರುವುದಿಲ್ಲ." ಪಾರ್ವತಿ ಬೇಡುವಂತೆ ಕಣ್ಣೀರು ಸುರಿಸುತ್ತಾ ಗೋಗರೆದು ಕೋರಿದಳು.

"ಹೇ ಪಾರ್ವತೀ, ನಾನು ಗೃಹಸ್ಥನಲ್ಲ. ನನಗೆ ಮಕ್ಕಳಾಗುವ ಅಗತ್ಯವಿಲ್ಲ. ಸಾಮಾನ್ಯ ಜನರಿಗೆ ಇರುವ ಹಾಗೆ ನನಗೆ ಸಾವಿನ ಭಯವಿಲ್ಲ. ಹಾಗಾಗಿ ನನಗೆ ಸತ್ತ ಮೇಲೆ ಆ ಆರ್ಯರ ಹಾಗೆ ಪಿಂಡವಿಟ್ಟು ಅಪರ ಕರ್ಮ ಮಾಡಲು ನನಗೆ ಮಗನು ಬೇಕಾಗಿಲ್ಲ. ವಾಸ್ತವವಾಗಿ ನನಗೆ ಮದುವೆಯ ಅಗತ್ಯವೇ ಇಲ್ಲ. ಮದುವೆಯೆಂಬುದೇ ಕರ್ಮ ಬಂಧನ. ಆ ಸತಿ ಎಂಬುವಳು ಒಲವಿನಿಂದ ನನ್ನ ಬೆನ್ನ ಹಿಂದೆ ಬಿದ್ದು, ಕನಿಕರದಿಂದ ಕರಗಿ ಜೊತೆಗಿಟ್ಟುಕೊಂಡೆ. ಅವಳೋ ಅವಳ ತಂದೆಯ ಯಾಗವನ್ನು ಭಂಗಮಾಡಲು ನನಗೆ ನೋವು ಕೊಟ್ಟು ಹೊರಟು ಹೋದಳು. ಇಂಥಾ ನೋವು, ವಿರಹ, ವಿಯೋಗಗಳು ಉಂಟಾಗುವುದು ಸಾಮಾನ್ಯರಿಗೆ. ಅರೆ, ನನಗೆ ಹೀಗಾಯಿತಲ್ಲಾ ಎಂದು ನಾನು ನನ್ನ ರುದ್ರಶಕ್ತಿಯನ್ನು ಸಾಧನೆ ಮಾಡಲು ಮತ್ತೆ ತಪಸ್ಸಿಗೆ, ಯೋಗಕ್ಕೆ ಮರಳಿದೆ. ಸ್ವಾರ್ಥಿ ದೇವತೆಗಳು, ಕುತಂತ್ರಿ ಪುರೋಹಿತರು ನಿನ್ನ ನನಗೆ ಗಂಟು ಹಾಕಿ ರಾಜಕೀಯದ ಮದುವೆ ಮಾಡಿದರು. ಸಂಪತ್ತು, ಮನೆ, ಮಕ್ಕಳು, ಪದವಿ, ಅಧಿಕಾರ; ಈ ರೀತಿಯ ಲೌಕಿಕವಾದುದೇನನ್ನೂ ಬೇಡದ ನನಗೆ, ಲೌಕಿಕದಲ್ಲಿಯೇ ನೀಚವಾದ ಮದುವೆಯೆಂಬುದನ್ನು ಮಾಡಿದರು. ನಾನು ಮುಕ್ತ ಪುರುಷ. ಮದುವೆ ಎಂಬುದು ಒಂದು ಬಂಧನ. ಅದರಲ್ಲಿಯೂ ಒಬ್ಬರಿಗೊಬ್ಬರು ಎಂಬುದು ಕಟ್ಟುಪಾಡಿನ ಅತಿಬಂಧನ. ನಿನ್ನ ಜೊತೆಗೆ ನನ್ನ ಮದುವೆ ಎಂದರೆ ಅದು ನೀವು ಕರೆದುಕೊಂಡಿರುವುದೇ ಹೊರತು. ನನಗೇನೂ ಇಲ್ಲ. ನನಗೆ ನೀನೊಂದು ಯೋನಿಯುಳ್ಳ ಶಕ್ತಿಯ ಕರಣ. ಪ್ರಕೃತಿಯ ಸ್ವರೂಪ. ಈ ಪುರುಷನಿಗೆ ಆನಂದದಿಂದ ಶಕ್ತ್ಯೋತ್ಥಾನದ ಲೀಲೆಯಾಡಲು ನೀನೊಂದು ಅಂಗಳ. ನೀನೂ ನನ್ನಂತೆ ಸಾಧನೆ ಮಾಡಿಕೊಂಡು ಪ್ರಕೃತಿಯಾಗಿರು. ಈ ಪುರುಷನಿಗೆ ಜೊತೆಯಾಗಿದ್ದುಕೊಂಡು ಯಾವ ರೀತಿಯಲ್ಲಿಯೂ ಒಬ್ಬರಿಗೊಬ್ಬರು ಬಂಧಿಸಿಕೊಳ್ಳದೇ ನಿನ್ನ ಐಕ್ಯಬಿಂದುವನ್ನು ಕಂಡುಕೋ. ಈ ಜಗತ್ತಿನಲ್ಲಿ ಸಚ್ಚಿದಾನಂದ ಪಡೆದುಕೊಂಡು ಲೀಲೆಯಾಡುತ್ತಿರು. ವಿಶ್ವಕ್ಕೇ ತಾಯಿಯಾಗುತ್ತೀಯೆ. ಇನ್ನೊಮ್ಮೆ ಮಗುವನ್ನು ಹೆರಲು ವೀರ್ಯದಾನ ಮಾಡಲು ಖಂಡಿತ ಕೇಳಬೇಡ. ನೀನಾಗೇ ಬಯಸಿ ಈ ಯೋಗ ತಾಂತ್ರಿಕನ ಗೂಟಕ್ಕೆ ನೇತುಬಿದ್ದುದ್ದೀಯ. ಇದಕ್ಕೆ ತಕ್ಕುದಾಗಿ ಇದ್ದುಬಿಡು." ಕಡೆಯಲ್ಲಿ ಎಚ್ಚರಿಸುವಂತೆ ಹೇಳಿದ ರುದ್ರ.

ರುದ್ರನ ಮಾತುಗಳನ್ನು ಕೇಳುತ್ತಿದ್ದ ಪಾರ್ವತಿಯ ಕಣ್ಣುಗಳಿಂದ ಧಾರಾಕಾರವಾಗಿ ನೀರು ಸುರಿಯುತ್ತಿತ್ತು. ಇಷ್ಟು ಮಾತುಗಳನ್ನು ಹೇಳುತ್ತಿದ್ದ ರುದ್ರನ ಶಿಶ್ನ ಯಾವಾಗಲೋ ಬಿರುಸನ್ನು ಕಳೆದುಕೊಂಡು ಅವನ ಹೊಟ್ಟೆಯ ಮೇಲೆ ಬಿದ್ದುಕೊಂಡಿತ್ತು. ಮೇಲೆದ್ದ ರುದ್ರ ತನ್ನ ಕೌಪಿನವನ್ನು ಸರಿಯಾಗಿ ಕಟ್ಟಿಕೊಂಡು, ಗಜಚರ್ಮದ ಹೊದಿಕೆಯನ್ನು ಮೈಮೇಲೆ ಎಳೆದುಕೊಂಡು ಸರಸರನೆ ಹೊರಗೆ ಹೊರಟು ಹೋದ. ಅವನು ಹೋಗುವುದನ್ನೇ ಕಾಯುತ್ತಾ ದ್ವಾರದಲ್ಲಿ ಕುಳಿತಿದ್ದ ದನು ಮೇಲೆದ್ದು ಒಳಗೆ ಬಂದಳು. ಪಾರ್ವತಿಯ ಪಕ್ಕದಲ್ಲಿ ಬಂದು ನಿಂತು ಮೃದುವಾಗಿ ಸಾಂತ್ವಾನ ಪಡಿಸುವಂತೆ ಅವಳ ಭುಜವನ್ನು ಮೃದುವಾಗಿ ಒತ್ತಿದಳು. ಪಾರ್ವತಿ ಅವಳತ್ತ ನೋಡಲಿಲ್ಲ. ಆದರೂ, ಮೆಲ್ಲನೆ ನುಡಿದಳು.

"ನೀನಿನ್ನೂ ಇಲ್ಲೇ ಇದ್ದೀಯಾ?"

"ಹಾ, ನಾನಿಲ್ಲೇ ದ್ವಾರದಲ್ಲಿ ರುದ್ರದೇವರು ಹೊರಗೆ ಹೋಗುವುದನ್ನೇ ಕಾಯುತ್ತಾ ಕುಳಿತಿದ್ದೆ."

"ಎಲ್ಲವನ್ನೂ ಕೇಳಿಸಿಕೊಂಡೆಯಾ?"

ದನು ಉತ್ತರಿಸಲಿಲ್ಲ.

"ನನಗೆ ಮಾತೆಯಾಗುವ ಅಧಿಕಾರವನ್ನೇ ಈ ರುದ್ರ ಕಿತ್ತುಕೊಂಡುಬಿಟ್ಟಿದ್ದಾನಲ್ಲೇ ದನು. ಇದು ಯಾವ ನ್ಯಾಯ? ನಾನೊಬ್ಬ ಸ್ತ್ರೀ. ನನಗೆ ತಾಯ್ತನವೆಂಬುದು ನನ್ನ ಹಕ್ಕು. ಅದನ್ನು ಯಾವ ಅಧಿಕಾರದಿಂದ ಅವನು ಕಿತ್ತುಕೊಳ್ಳುತ್ತಾನೆ?" ಪಾರ್ವತಿ ಕ್ರೋಧತಪ್ತ ಕಣ್ಣೀರನ್ನು ಹೊರಹಾಕಿದಳು.

*

"ವದೀರಜ್ಜನನ್ನು ಮಂದಿರದ ಒಳಗೆ ಒಯ್ಯೋಣ." ಯದುವಿನ ದನಿ ಕೇಳಿ ಶಂಬರ ಬೆಚ್ಚಿ ಎಲ್ಲಿಂದಲೋ ಹೊರಕ್ಕೆ ಬಿದ್ದಂತೆ ನೋಡಿದ.

"ಅಜ್ಜನನ್ನು ಒಳಕ್ಕೊಯ್ಯಬೇಕು ಎಂದೆ." ತಾನು ಹೇಳಿದ್ದು ಶಂಬರನಿಗೆ ಸರಿಯಾಗಿ ಕೇಳಲಿಲ್ಲ ಎಂದು ಗ್ರಹಿಸಿದ ಯದು ಮತ್ತೊಮ್ಮೆ ನಿಧಾನವಾಗಿ ಹೇಳಿದ. ಆದರೆ, ತನಗೇಕೆ ಹೇಳುತ್ತಿದ್ದಾನೆ ಎಂದುಕೊಳ್ಳುವ ಹೊತ್ತಿಗೇ ವದೀರಜ್ಜನ ಮೇಲೆ ಹೊದಿಸಿದ್ದ ಕಂಬಲದ ಮೂಲೆಯನ್ನು ತಾನು ಹಿಡಿದು ಕುಳಿತಿರುವುದು ಶಂಬರನಿಗೆ ಗಮನಕ್ಕೆ ಬಂದಿತು. ತಕ್ಷಣ ಹಿಡಿದಿದ್ದ ಕಂಬಲವನ್ನು ಬಿಟ್ಟ ಶಂಬರ ಮೇಲೆದ್ದು ನಿಂತ.

ವಿಶಾಲವಾದ ಹಾಸುಗಲ್ಲಿನ ಮೇಲೆ ನರ್ತಿಸಿದ್ದ ನರ್ತಕರು ಮತ್ತು ನರ್ತಕಿಯರು ತಾವು ಕಟ್ಟಿದ್ದ ಗೆಜ್ಜೆಗಳನ್ನು ಬಿಚ್ಚುತ್ತಿದ್ದರು. ಸಂಗೀತ ವಾದ್ಯದವರು ತಮ್ಮ ತಮ್ಮ ವಾದ್ಯಗಳನ್ನು ಬಟ್ಟೆಯಲ್ಲಿ ಸುತ್ತಿಡುತ್ತಿದ್ದರು. ನೋಡುತ್ತಿದ್ದವರೆಲ್ಲರೂ ನಿಧಾನವಾಗಿ ಎದ್ದು ಹೋಗುತ್ತಿದ್ದರು.

"ಆಹಾ, ಆಹಾ, ಯುವಕರು ಭೈರವ ತಾಂಡವನ್ನು ಎಷ್ಟು ಅದ್ಭುತವಾಗಿ ಪ್ರದರ್ಶಿಸಿದರಲ್ಲವೇ?" ಎಂದು ಯಾಜ್ಞಿಕ ಶಂಬರನನ್ನು ಕೇಳಿದ.

ಆಗಲೇ ತಾನು ಬೇರೆ ಏನನ್ನೋ ನೋಡುತ್ತಿದ್ದದ್ದು ಶಂಬರನ ಅರಿವಿಗೆ ಬಂದರೂ, "ಹೌದು." ಎಂಬಂತೆ ತಲೆಯಾಡಿಸಿದ. ಯದು ಇತರರ ಸಹಾಯದಿಂದ ವದೀರಜ್ಜನನ್ನು ಮಂದಿರದೊಳಕ್ಕೆ ಸಾಗಿಸುತ್ತಿದ್ದ.

## ಅಧ್ಯಾಯ : 8 ಬೆಂಕಿಗೆ ಬೆಂಕಿ

ಶಂಬರ ಮೇಲೇಳುವಷ್ಟರಲ್ಲಿ ಎಲ್ಲರೂ ಸಿದ್ಧವಾಗುತ್ತಿದ್ದರು. ಶಂಬರ ಕೂಡಲೇ ತನ್ನ ಅಂಗವಸ್ತ್ರವನ್ನು ಎಳೆದುಕೊಂಡು ಸ್ನಾನದ ಘಟ್ಟದ ಕಡೆಗೆ ಓಡಿದ. ಬೆಳಗಿನ ಜಾವದ ಸೂರ್ಯನ ಕಿರಣಗಳು ಸ್ನಾನ ಘಟ್ಟದ ಹಾಸುಗಲ್ಲುಗಳಿಗೂ, ಹರಿವ ನದಿನೀರಿಗೂ ಬೇರೆಯೇ ಹೊಳಪನ್ನು ಕೊಟ್ಟಿತ್ತು. ಪ್ರಾತಃವಿಧಿ ಮುಗಿಸಿ ಬರುತ್ತಿದ್ದ ಬ್ರಾಹ್ಮಣರು, ಕಂಠಮಟ್ಟ ಮುಳುಗಿಕೊಂಡು ಧ್ಯಾನದಲ್ಲಿರುವ ಸಂಗೀತ ಸಾಧಕರು, ದಡದಲ್ಲಿ ಸಂಗೀತ ವಾದ್ಯಗಳನ್ನು ಅಭ್ಯಾಸ ಮಾಡುತ್ತಿರುವ ವಾದ್ಯಕಾರರು, ಸಾಮವೇದದ ಸುಸ್ವರದಲ್ಲಿ

ವೇದಗಳಲ್ಲಿನ ಸೂಕ್ತಗಳನ್ನು ಅಭ್ಯಾಸ ಮಾಡುತ್ತಿರುವ ಋತ್ವಿಕ್ಕುಗಳು; ಅವಿಮುಕ್ತ ಎಂತಹ ಪ್ರದೇಶವೆಂದು, ಎಷ್ಟರ ಮಟ್ಟಿಗೆ ಆರ್ಯಮಯವಾಗಿದೆ ಎಂದು ಅನ್ನಿಸಿತು ಶಂಬರನಿಗೆ. ಆರ್ಯರ ವಿದ್ಯಾ ಸಂಪತ್ತು, ಅವರ ಪದ್ಧತಿಗಳು ಇಷ್ಟು ಸುಂದರವಾಗಿರುವುದಾದರೆ ಇಡೀ ವಿಶ್ವವೇ ಆರ್ಯಮಯವಾಗಲೇಳು ಎಂದುಕೊಳ್ಳುತ್ತಲೇ ಶಂಬರ ನೀರಿಗಿಳಿಯಲು ಹೋದ.

"ತಡೆಯಿರಿ!" ನೀರಿನಲ್ಲಿದ್ದ ಬ್ರಾಹ್ಮಣನೊಬ್ಬ ಶಂಬರನ ತಡೆದ.

"ತಮ್ಮ ಎದೆಯ ಮೇಲೆ ಯಜ್ಞೋಪವೀತವಿಲ್ಲ. ತಾವು ಬ್ರಾಹ್ಮಣರಲ್ಲ ಎಂದು ತೋರುತ್ತದೆ." ಆ ಬ್ರಾಹ್ಮಣ ಹೇಳಿದ. "ಅಬ್ರಾಹ್ಮಣ ಆರ್ಯರಿಗೆ ಇಲ್ಲಿಂದ ಕೆಳಗಿನ ಘಟ್ಟ. ಅನಾರ್ಯರಿಗೆ ಅದಕ್ಕೂ ಮುಂದಿನ ಘಟ್ಟ."

ಶಂಬರ ಒಂದು ಕ್ಷಣ ಅವಕ್ಕಾದ. ನೀರಿನಲ್ಲಿದ್ದ ಬ್ರಾಹ್ಮಣನನ್ನು ದಿಟ್ಟಿಸಿದ. ಅವನಿಗೂ ಇವನ ದೃಷ್ಟಿಯ ಪ್ರಶ್ನೆಯೂ, ಪ್ರತಿಭಟನೆಯೂ ಅರ್ಥವಾಯ್ತು. ಆದರೂ, ಏನನ್ನೂ ಗಮನಿಸದವನಂತೆ ಮತ್ತೆ ತನ್ನ ಪ್ರಾತಃವಿಧಿಗೆ ಮುಂದುವರಿದ.

ಹಿಂದಿನ ದಿನದಿಂದ ಆ ಆರ್ಯಸಾಮ್ರಾಜ್ಯದಲ್ಲಿ ಪಟ್ಟ ಆನಂದವೆಲ್ಲಾ ಒಮ್ಮಿಂದೊಮ್ಮೆಲೇ ಕೃತಕವೆನಿಸಿಬಿಟ್ಟಿತು ಶಂಬರನಿಗೆ. ನಿಧಾನವಾಗಿ ಪಾವಟಿಗೆಗಳನ್ನು ಏರಿ ಮಂದಿರದ ಕಡೆ ನಡೆದ. ಎದುರಾದ ಯಾಜ್ಞಿಕ ಕೇಳಿದ.

"ಹೇ ಗೋಮತ್, ಸ್ನಾನವಿಲ್ಲದೇ ಹಿಂದಿರುಗುತ್ತಿದ್ದೀರಿ? ಅದೋ ಅಲ್ಲಿ ನೋಡಿ..." ನೀರಿನಲ್ಲಿ ಇವನ ತಡೆದ ಬ್ರಾಹ್ಮಣ ತೋರಿಸಿದ ಸ್ನಾನಘಟ್ಟದ ಕಡೆಗೇ ತೋರಿಸಿ, "ಅಲ್ಲಿ ಸ್ನಾನಕ್ಕೆ ಪ್ರಶಸ್ತವಾಗಿದೆ." ಎಂದ.

"ನನಗೆ ಸ್ನಾನದ ಅಗತ್ಯವಿಲ್ಲ." ಎಂದ ಶಂಬರ ಪ್ರಯಾಣಕ್ಕೆ ಸಿದ್ಧವಾದ.

ಮಧ್ಯಾಹ್ನದ ಹೊತ್ತಿಗೆ ಅವರು ಸುಂದರವಾದ ಅರಣ್ಯ ಪ್ರದೇಶವನ್ನು ತಲುಪಿದ್ದರು.

"ಚಿತ್ರಕೂಟವನ್ನು ತಲುಪಿದೆವು." ಎಂದ ಯಾಜ್ಞಿಕ.

ಈ ಅರಣ್ಯವನ್ನು ಪ್ರವೇಶಿಸುವಾಗ ಸುಂದರವಾದ ನವಿಲುಗಳು, ಜಿಂಕೆಗಳು ಮತ್ತು ಕಾಡುಮೊಲಗಳು ಇವರನ್ನು ಸ್ವಾಗತಿಸಿದವು. ಜಹ್ನೂವಸ ಅರಣ್ಯವನ್ನೇ ಹೋಲುತ್ತಿದ್ದರೂ ದೇವದಾರು ವೃಕ್ಷಗಳು ಇಲ್ಲಿ ಹೇರಳವಾಗಿದ್ದವು. ಜಹ್ನೂವಸದಲ್ಲಿದ್ದಂತೆ ಮರಗಳು ಇಲ್ಲಿ ಎಲ್ಲೆಂದರಲ್ಲಿ ಬೆಳೆದಿರದೇ ಒಂದು ಕ್ರಮದಲ್ಲಿ ಬೆಳೆದಿರುವಂತೆ ತೋರಿದವು.

"ಇಲ್ಲಿ ಅಶ್ವಿನಿ ದೇವತೆಗಳು ನೆಲಸಿದ್ದಾರೆ. ಇಲ್ಲಿ ಜೀವಕ್ಕೆ ಅಮೂಲ್ಯವಾದ ಗಿಡ ಮೂಲಿಕೆಗಳು ದೊರಕುತ್ತವೆ." ಎಂದ ಯಾಜ್ಞಿಕ ತನಗೆ ಪರಿಚಯವಿರುವ ಕೆಲವು ಮದ್ದಿನಗಿಡಗಳನ್ನು ತೋರಿಸುತ್ತಾ ನಡೆದ. "ಅಜಶೃಂಗಿ ಬಳ್ಳಿಯೂ ಕೂಡ ಹೇರಳವಾಗಿ ಇಲ್ಲಿದೆ."

ಶಕಧೂಮ ಅದನ್ನು ಕೇಳಿದ ಕೂಡಲೇ ರೋಮಾಂಚನಗೊಂಡು ಕೇಳಿದ. "ಹೌದೇ, ನಾನು ಅದನ್ನು ಬಹುದಿನಗಳಿಂದ ಹುಡುಕುತ್ತಿದ್ದೆ. ಅದು ಹೇಗಿರುತ್ತದೆ ಎಂದೂ ನನಗೆ ತಿಳಿದಿಲ್ಲ. ಆದರೆ ಅದರ ಬಗ್ಗೆ ತೀರಾ ಕೇಳಿದ್ದೇನೆ. ಪಿಶಾಚಿಗಳಂತೆ ಕಾಟಕೊಡುವ ಗಂಧರ್ವರನ್ನೂ ಅದು ಓಡಿಸುತ್ತದೆ. ಅದರ ತಾಯಿತವನ್ನು ಕಟ್ಟಿಕೊಳ್ಳುವುದರಿಂದ ಪ್ರೇತಬಾಧೆಗಳು ಇರುವುದಿಲ್ಲ."

ಅದು ಯಾವುದೋ ಅಮೂಲ್ಯವಾದ ಮದ್ದಿನ ಬಳ್ಳಿ ಎಂದು ಕುತೂಹಲ ತಾಳಿದ್ದ ಶಂಬರ ಶಕಧೂಮನ ವಿವರಣೆ ಕೇಳಿ ನಿರಾಸಕ್ತಿ ತಾಳಿದ.

ಸುವಾಸ್ತುವಿಗೆ ಬರುತ್ತಿದ್ದ ಪ್ರಯಾಣಿಕರಲ್ಲಿ ಹಲವರು ಮಾರ್ಗದಲ್ಲಿ ಕಾಡುವ ಪ್ರೇತಗಳ ಬಗ್ಗೆ, ಪಿಶಾಚಿಗಳ ಬಗ್ಗೆಯೆಲ್ಲಾ ಹೇಳುತ್ತಿದ್ದದ್ದು ಅವನ ಗಮನಕ್ಕೆ ಬಂದಿದ್ದು, ಜಹ್ನೂವಸವೆಲ್ಲಾ ಕಾಡುವ ಪ್ರೇತಗಳಿಗಾಗಿ, ಪಿಶಾಚಿಗಳಿಗಾಗಿ ಅಲೆದಾಡುತ್ತಾ ಹುಡುಕಾಡಿದ್ದ. ಅವುಗಳ ರೂಪವು ಹೇಗಿರುತ್ತದೋ, ಅವುಗಳೊಂದಿಗೆ ಆಗುವ ಅನುಭವ ಎಂತದ್ದೋ ನೋಡುವ ಹಂಬಲವಿತ್ತು ಶಂಬರನಿಗೆ. ಒಂಟಿಯಾಗಿದ್ದು ಬೇಸರವಾದಾಗ, ಇಂತದ್ದಾದರೂ ಜೊತೆಗಿದ್ದರೆ ತನ್ನ ಏಕತಾನತೆಯು ಮುರಿದು, ಕೊಂಚ ಹೊಸ ಅನುಭವವಾಗುತ್ತದೇನೋ ಎಂದು. ಆದರೆ, ಅವರಿಗ್ಯಾರಿಗೋ ಸಿಕ್ಕು ಕಾಡಿಸಿದ ಪ್ರೇತಗಳು ಅಥವಾ ಪಿಶಾಚಿಗಳು, ಮೋಹಿನಿಗಳು ಎಂದಿಗೂ ಇವನ ಸಂಧಿಸಿರಲೇ ಇಲ್ಲ.

“ಹೇ ಗೋಮತ್....” ಯಾಜ್ಞಿಕ ಮೆಲ್ಲನೆ ಶಂಬರನ ಕಿವಿಯಲ್ಲಿ ಹೇಳಿದ. “ನಾವು ಅಂತರ್ವೇದಿಗೆ ಢುಂಢಿಯನ್ನು ನೋಡಲು ಹೋಗುತ್ತಿದ್ದೇವೆ. ಆರ್ಯರ ನಾಯಕ–ಲಕ್ಷಣಗಳೇನೂ ಇರದ ಅವನು ಒಬ್ಬ ವಿನಾಯಕ. ಸಾತ್ವಿಕವಾಗಿರುವವನಲ್ಲ. ಸಾತ್ವಿಕತೆಯಾಗಲಿ, ತಾಮಸಿಕತೆಯಾಗಲಿ ಅವರಲ್ಲೂ ಶಕ್ತಿ ಎಂಬುದುಂಟು. ಈ ತಾಮಸಿಕ ಶಕ್ತಿಯ ವಿನಾಯಕರು ಕನಸಿನಲ್ಲಿ ಬಂದರೇನೇ ಎಷ್ಟೋ ಕೇಡು. ಕೇಡಿನ ಅಪರಾವತಾರವೇ ವಿನಾಯಕರು. ಇಂಥಾ ಕ್ಷುದ್ರ ಶಕ್ತಿಯಿರುವ ಈ ವಿನಾಯಕರು ಒಮ್ಮೆ ಸೋಂಕಿದರೆಂದರೆ, ಆಳ್ವಿಕೆ ನಡೆಸುವ ಯೋಗ್ಯತೆಯಿದ್ದು, ಸಾಮರ್ಥ್ಯ ಇದ್ದು ರಾಜಲಕ್ಷಣಗಳು ಇದ್ದರೂ ರಾಜನಾಗಲಾರ. ಅತ್ಯಂತ ಪಂಡಿತನಾಗಿದ್ದು, ಸರ್ವಶಾಸ್ತ್ರ ಸಂಪನ್ನನಾಗಿದ್ದರೂ, ಅತ್ಯಂತ ಯೋಗ್ಯವಾದ ಗುರುವಾಗಿದ್ದರೂ ಅವರಿಗೆ ಶಿಷ್ಯರು ಲಭಿಸುವುದಿಲ್ಲ. ಸಾಲಕ್ಷಣವಾದ ಕನ್ಯೆಗೆ ಮದುವೆಯಾಗಲು ಸೂಕ್ತ ವರ ದೊರಕುವುದಿಲ್ಲ. ಆರೋಗ್ಯವಾಗಿದ್ದರೂ ಆ ಹೆಣ್ಣು ಹೆರುವುದಿಲ್ಲ. ವ್ಯಾಪಾರಗಳು ಕೈಗೂಡುವುದಿಲ್ಲ, ಫಲವತ್ತಾಗಿರುವ ಭೂಮಿಯಲ್ಲಿ ಕೃಷಿಯಾಗುವುದಿಲ್ಲ. ಅಂತಹುದರಲ್ಲಿ, ನಾವು ಜೀವಂತವಾಗಿರುವ ವಿನಾಯಕನನ್ನು ನೋಡಲು ಹೋಗುತ್ತಿದ್ದೇವೆ. ಅಲ್ಲಿ ಇನ್ನು ಯಾವ ಯಾವ ವಿನಾಯಕರು ಬಂದಿರುವರೋ. ಯಾವ ಬಗೆಯ ಪ್ರಭಾವಗಳು ಅಲ್ಲಿರುವವೋ ಏನೋ. ಯಾವುದಕ್ಕೂ ನಿಮಗೂ ಅಜಶೃಂಗಿಯ ಬಳ್ಳಿಯನ್ನು ಕೊಡುತ್ತೇನೆ, ನೀವೂ ಕಟ್ಟಿಕೊಳ್ಳಿ.”

“ಅದು ಮೊದಲು ಸಿಗಲಿ.” ಎಂದ ಶಂಬರ ನಿರಾಸಕ್ತಿಯಿಂದ.

ಯಾಜ್ಞಿಕ ಶಂಬರನನ್ನು ಹಿಂದೆಯೇ ಉಳಿಸಿಕೊಂಡು ತಂಡದ ಇತರರಿಗೆ ಕೇಳದಂತೆ ಪಿಸುಗುಡುತ್ತಲೇ ನಡೆದ. “ಈಗ ಗಣಪತಿಯಾದ ಢುಂಢಿಯ ಕಥೆ ಮುಗಿಯುತ್ತಿದೆ. ಅಲ್ಲಿಗೆ ಆರ್ಯರ, ಬ್ರಾಹ್ಮಣರ ಮತ್ತು ಅನಾರ್ಯ ಶೂದ್ರರ ಹೋರಾಟದ ಒಂದು ಅಧ್ಯಾಯವೂ ಮುಗಿಯುತ್ತದೆ.”

ಆ ಮಾತಿಗೆ ಶಂಬರ ನಕ್ಕು, “ಯಾವ ಉದ್ದೇಶಕ್ಕೆ ಹೋರಾಟವಾಗುತ್ತಿತ್ತೋ ಆ ಉದ್ದೇಶ ನೆರವೇರುವವರೆಗೂ ಹೋರಾಟ ನಡೆಯುತ್ತಲೇ ಇರುತ್ತದೆ. ಇವತ್ತು ಢುಂಢಿ, ನಾಳೆ ಯಾರೋ.” ಎಂದ.

“ಯಾರೇ ಬಂದರೂ ಈ ಢುಂಢಿಯಂತಹ ಗಣಪತಿ ಬರಲಾರರು. ಇವನಷ್ಟು ಒರಟ, ಕ್ರೂರಿ, ಅನಾರ್ಯತನ... ಅಬ್ಬಬ್ಬಬ್ಬ.... ಇವನು ಇಷ್ಟು ಪ್ರಖ್ಯಾತನಾಗಿರುವುದೇ ಇವನ ಕ್ರೂರತನದಿಂದ. ಇವನ ಮುಂದೆ ಸುರರು, ನರರು, ಋಷಿಗಳು ಮತ್ತು ಇತರರು ಬಾಗುತ್ತಿದ್ದದ್ದು ಪ್ರೀತಿಯಿಂದಲೋ, ಭಕ್ತಿಯಿಂದಲೋ ಖಂಡಿತ ಅಲ್ಲ. ಅದೇನಿದ್ದರೂ ವಿಷ್ಣುವಿಗೆ. ವಿಷ್ಣುವಿಗೆ ಸುರ, ನರ, ಮುನಿ ಜನ ಹಾಗೆ

ಬಾಗುವುದು. ಭಗವಾನ್ ಮಹಾವಿಷ್ಣು ನಿಜವಾದ ದೇವತೆ. ಅವನೇ ವಿಶ್ವದ ಸ್ಥಿತಿಯನ್ನು ಕಾಪಾಡುವುದು. ತಂಟೆಕೋರ ತಾಂತ್ರಿಕ ರುದ್ರನಿಗೆ, ಕ್ರೂರಿಯಾದ ಒರಟ ಗಣಪತಿಗೆ ಎಲ್ಲರೂ ಬಾಗುವುದು ಭಯದಿಂದ. ನೀವು ಯಾರ ಪಕ್ಷದವರೂ ಅಲ್ಲ ಎಂದು ನಿಮ್ಮೊಂದಿಗೆ ನಿಜ ಸಂಗತಿಯನ್ನು ತಿಳಿಸುತ್ತಿದ್ದೇನೆ. ಈ ಅರಣ್ಯಕರ ಮುಂದೆ ನಾನು ಢುಂಢಿಯನ್ನು ತೆಗಳಿದರೆ ನನ್ನ ಸುಮ್ಮನೆ ಬಿಟ್ಟಾರಾ? ಅಂತಹ ಕ್ರೂರಿ, ಅಂತಹ ಒರಟ, ಅಷ್ಟೊಂದು ರಕ್ತಪಾತ ಮಾಡಿದ ಕೊಲೆಗಡುಕ ತನ್ನದೇ ಸಾವಿನಲ್ಲಿ ಎಂತಹ ಪೌರುಷ ತೋರಿಸುತ್ತಾನೆ ಎಂಬ ಕುತೂಹಲ ನನಗೆ. ಹೇಗೆ ಸಾಯುತ್ತಾನೆ, ಎಲ್ಲರನ್ನೂ ತನಗೆ ಶರಣಾಗತರನ್ನಾಗಿ ಮಾಡಿಕೊಂಡವನು ತಾನು ಹೇಗೆ ಸಾವಿಗೆ ಶರಣಾಗುತ್ತಾನೆ ಎಂದು ನೋಡುವ ಕುತೂಹಲ. ನೋಡಿ, ಇದೆಂಥಾ ವಿಪರ್ಯಾಸ…" ಯಾಜ್ಞಿಕ ಮಾತಾಡುವ ತೆವಲಿನಲ್ಲಿ ಇನ್ನೂ ಏನೋ ಹೇಳುತ್ತಿದ್ದ.

ಆದರೆ, "ಹೇಯ್……" ಎಂದು ಒಂದಷ್ಟು ಜನ ಕೂಗಿದ ಸದ್ದಿಗೆ ಶಂಬರನಾದಿಯಾಗಿ ಎಲ್ಲರೂ ಬೆಚ್ಚಿಬಿದ್ದರು. ಈಟಿಗಳನ್ನು ಹಿಡಿದ ಅರಣ್ಯಕರ ಗುಂಪೊಂದು ಇವರ ತಂಡವನ್ನು ಸುತ್ತುವರೆದಿತ್ತು. ನೋಡಲು ಅರಣ್ಯಕರ ಉಡುಪುಗಳಲ್ಲಿದ್ದರೂ, ಅವರು ಎತ್ತರೆತ್ತರವಾಗಿ, ಕೆಂಪು ಕೆಂಪಾಗಿ ದಷ್ಟಪುಷ್ಟವಾಗಿ ಆರ್ಯರನ್ನೇ ಹೋಲುತ್ತಿದ್ದರು.

"ಯಾರು ನೀವು?" ಸುತ್ತುವರೆದ ತಂಡದ ಮುಂದಿದ್ದವನು ಕೇಳಿದ.

ಶಂಬರ ತನ್ನ ಸೊಂಟದ ಪಟ್ಟಿಯಿಂದ ಖಡ್ಗವನ್ನು ಹೊರಗೆ ತೆಗೆದಿದ್ದ. ಯದು ಮತ್ತು ಕುಶಿಕ ಹಾಗೂ ಇತರರು ತಮ್ಮ ತಮ್ಮ ಖಡ್ಗ ಮತ್ತು ಉದ್ದನೆಯ ಚೂರಿಗಳನ್ನು ಹೊರಗೆ ತೆಗೆದಿದ್ದರು.

"ತಮಗೆ ಶುಭವಾಗಲಿ, ನಾವು ಇದೇ ಚಿತ್ರಕೂಟದ ಮಾರ್ಗವಾಗಿ ಅಂತರ್ವೇದಿಗೆ ಹೋಗುತ್ತಿದ್ದೇವೆ. ಈ ಶಕಧೂಮ ಮತ್ತು ಅರಣ್ಯಕರು ವಯನದವರು. ನಾನು ಮೂಲತಃ ಸೌವೀರ ಪ್ರದೇಶದ ವೈದಿಕ ಬ್ರಾಹ್ಮಣ." ಯಾಜ್ಞಿಕ ಎಲ್ಲರ ಪರಿಚಯ ಮಾಡುತ್ತಾ ಶಂಬರನನ್ನು ತೋರಿಸಿ, "ಇವರು ಜಹ್ನೂವಸದ ವೀರಗೋಪ." ಎಂದು ಹೇಳಿ ಧೈರ್ಯದಿಂದ, "ತಾವು ಯಾರೆಂದು ನಮಗೆ ಹೇಳಿ, ನಮ್ಮ ಪ್ರಯಾಣ ಮುಂದುವರಿಸಲು ಅವಕಾಶ ಮಾಡಿಕೊಡಬೇಕು." ಎಂದ.

ಮುಖಂಡನಂತೆ ಮುಂದೆ ನಿಂತಿದ್ದ ಆತ ಹಿಂದಕ್ಕೆ ನಡೆದು ಅಲ್ಲಿ ಹಿರಿಯರಂತೆ ತೋರುತ್ತಿದ್ದವರಲ್ಲಿ ಏನನ್ನೋ ಚರ್ಚಿಸಿ ಹಿಂದಕ್ಕೆ ಬಂದ. "ಇದು ಚಿತ್ರಕೂಟವಲ್ಲ. ನೀವು ದಕ್ಷಿಣಕ್ಕೆ ನಡೆದಿದ್ದರೆ ಚಿತ್ರಕೂಟ ತಲುಪುತ್ತಿದ್ದಿರಿ. ನೀವು ಪಡುವಣಕ್ಕೆ ತಿರುಗಿದ್ದೀರಿ. ನಮ್ಮದು ಮಯೂರ ಗಣ. ಇದೊಂದು ಸ್ವತಂತ್ರ ಗಣ. ಇಲ್ಲಿಗೆ ಯಾರೂ ಬರಕೂಡದು. ಹಾಗೊಂದು ವೇಳೆ ಬಂದರೆ ನಮಗೆ ಸಲ್ಲಬೇಕಾದ ದಂಡವನ್ನು ತೆತ್ತು ಹಿಂದಕ್ಕೆ ಮರಳಬೇಕು. ಕಾಣಿಕೆಗಳನ್ನು ಸಲ್ಲಿಸಿದರೆ ನೀವು ಇಲ್ಲಿಯೇ ಒಂದು ರಾತ್ರಿ ಉಳಿದುಕೊಳ್ಳಲು ಉಪಚಾರ ಮಾಡುತ್ತೇವೆ."

"ಅಯ್ಯಾ ಗಣಶ್ರೇಷ್ಠ, ನಾವು ದಾರಿ ತಪ್ಪಿ ಇಲ್ಲಿಗೆ ಬಂದಿರುವ ಪ್ರಯಾಣಿಕರು. ದಕ್ಷಿಣಕ್ಕೆ ನಡೆಯಬೇಕಾಗಿದ್ದವರು ಪಡುವಣಕ್ಕೆ ತಿರುಗಿದ್ದೇವೆ. ಶಕಧೂಮರು ನಮ್ಮೊಡನಿದ್ದೂ ಈ ರೀತಿ ಅನಿರೀಕ್ಷಿತವಾಗಿ ತೊಂದರೆ ಆಗಿದೆ. ನಾವು ನಮ್ಮ ಪ್ರಯಾಣದ ದಿಕ್ಕನ್ನು ಬದಲಿಸುತ್ತೇವೆ. ನಮ್ಮನ್ನು ಬಿಟ್ಟುಬಿಡಿ." ಎಂದ ಯಾಜ್ಞಿಕ.

“ಏನೇ ಆದರೂ ನೀವು ವೈರದೇಯವನ್ನು ತೆತ್ತು ಇಲ್ಲಿಂದ ಹೋಗಬಹುದು.” ಮಯೂರ ಗಣದವನು ಪಟ್ಟುಬಿಡಲಿಲ್ಲ.

“ವೈರದೇಯವೇ? ನಾವು ಶೂದ್ರರೂ ಅಲ್ಲ, ನೀವು ನಮ್ಮ ಯಜಮಾನರೂ ಅಲ್ಲ. ನಿಮಗೇಕೆ ನಾವು ವೈರವನ್ನು ಕಟ್ಟಬೇಕು?” ಯಾಜ್ಞಿಕನಿಗೆ ಆಶ್ಚರ್ಯವಾಯಿತು. ಆರ್ಯ ಒಡೆಯನಿಗೆ ಅವನ ಶೂದ್ರ ಸೇವಕನು ತಪ್ಪೇನಾದರೂ ಮಾಡಿದ ಪಕ್ಷದಲ್ಲಿ, ಶಿಕ್ಷೆಯಿಂದ ತಪ್ಪಿಸಿಕೊಳ್ಳಲು ತೆರಬೇಕಾದ ದಂಡಕ್ಕೆ ವೈರದೇಯ ಎಂದು ಹೆಸರು.

“ಮಯೂರವು ಆರ್ಯಗಣ. ನಮ್ಮ ಅನುಮತಿಯಿಲ್ಲದೇ ನಮ್ಮ ಗಡಿಯೊಳಗೆ ಬರುವವರು, ಅಥವಾ ಅತಿಥಿಗಳಾಗಿ ಆಹ್ವಾನ ಪಡೆಯದೇ ಬರುವವರು ನಮ್ಮಲ್ಲಿ ವೈರದೇಯವನ್ನು ಕಟ್ಟಿ ಮುಂದೆ ಹೋಗಬೇಕು. ನಮ್ಮಲ್ಲಿ ಮರುತ್ತರು, ಅಗ್ನಿ, ವರುಣ, ಇಂದ್ರ ಮತ್ತು ವಶಿಷ್ಠಾದಿ ಋಷಿಗಳು ಈ ಕ್ಷೇತ್ರದ ಆಶ್ರಯ ಬಯಸಿ ಹಿಂದೆಲ್ಲಾ ಬಂದಿದ್ದಾರೆ. ಈಗಲೂ ದೇವತೆಗಳು ಇಲ್ಲಿಗೆ ಬರುತ್ತಾರೆ.” ಮಯೂರ ಗಣದವನು ಹೇಳಿದ.

“ನಾವು ಪಣಿಗಳಲ್ಲ. ಇದು ಸಾರ್ಥವಲ್ಲ. ನಮ್ಮಲ್ಲಿ ಪಣವಿಲ್ಲ. ನಮ್ಮಿಂದ ನಿಮಗೆ ಯಾವ ರೀತಿಯಲ್ಲಿಯೂ ವೈರ ತೆರಲು ಸಾಧ್ಯವಾಗುವುದಿಲ್ಲ.” ಯಾಜ್ಞಿಕ ಹೇಳಿದ.

“ನಿಮ್ಮ ಆ ಎರಡು ಅರಟ್ಟದ ಕುದುರೆಗಳನ್ನು ಬಿಟ್ಟು ಹೋಗಿ.” ಹಿಂದೆ ನಿಂತಿದ್ದ ಹಿರಿಯರೊಬ್ಬರು ಹೇಳಿದರು.

“ಕುದುರೆಗಳನ್ನು ಕೊಡದೇ ಹೋದರೆ?” ಕುಶಿಕ ಕೇಳಿದ.

“ಬಂಧಿಸುತ್ತೇವೆ.” ಎಂದರು ಮಯೂರಗಣದ ಮುಖಂಡನೊಬ್ಬ.

“ಸ್ವಲ್ಪ ಸಮಯಾವಕಾಶ ಕೊಡಿ.” ಯಾಜ್ಞಿಕ ಹಿಂದಕ್ಕೆ ಬಂದು ವದೀರಜ್ಜನ ಮುಂದೆ ತಂಡದ ಎಲ್ಲಾ ಸದಸ್ಯರನ್ನೂ ಒಟ್ಟಾಗಿಸಿಕೊಂಡು ಸಭೆ ಸೇರಿಸಿದ.

“ಈಗೇನು ಮಾಡೋಣ?”

“ಅವರು ನಮಗಿಂತ ಬಹಳ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ನಮ್ಮಲ್ಲಿ ಹೋರಾಡುವವರು; ಗೋಮತ್‌ರವರನ್ನೂ ಸೇರಿಸಿಕೊಂಡರೆ ಏಳು ಜನ ಮಾತ್ರ.” ಎಂದ ಯದು.

“ಇದ್ಯಾವುದಿದು ಮಯೂರ ಗಣ? ನಾನು ಈ ಹಿಂದೆ ಎಲ್ಲಿಯೂ ಕೇಳಿಲ್ಲ.” ಎಂದ ಕುಶಿಕ.

“ನಾನೂ ಕೇಳಿಲ್ಲ.” ಎಂದರೊಟ್ಟಿಗೆ ಯಾಜ್ಞಿಕ ಮತ್ತು ಶಕಧೂಮ.

“ನನಗೆ ತೋರುವುದು.....” ಶಂಬರ ಹೇಳಿದ. “ನಾವು ಕೊನೆಯ ಉಸಿರನ್ನು ಬಿಡಲು ಸಿದ್ಧವಿರುವ ಢುಂಢಿಯನ್ನು ನೋಡಲು ಹೋಗುತ್ತಿರುವುದು. ನಮಗೆ ಈಗ ಪ್ರತಿ ಗಳಿಗೆಯೂ ಅಮೂಲ್ಯ. ನಾವೆಲ್ಲರೂ ತಂಡದಲ್ಲಿ ಒಟ್ಟಾಗಿ ಹೋಗುತ್ತಿರುವುದರಿಂದ ನಮಗೆ ಸಧ್ಯಕ್ಕೆ ಈ ಕುದುರೆಗಳಿಂದೇನೂ ಪ್ರಯೋಜನವಿಲ್ಲ. ವಿಪರೀತವಾಗಿ ನಮ್ಮ ಸಾಮರ್ಥ್ಯಗಳ ಬಗ್ಗೆ ಯೋಚಿಸದೇ, ಈ ಕುದುರೆಗಳನ್ನು ಕೊಟ್ಟು, ಅವರು ಮನಸ್ಸನ್ನು ಬದಲಿಸುವ ಮುನ್ನ ಹೊರಟು ಹೋಗೋಣ.”

"ಸ್ವಲ್ಪ ಇಲ್ಲಿ ಕೇಳಿ." ಯಾಜ್ಞಿಕ ತೀರ ಮೆಲ್ಲನೆ ಪಿಸುಗುಟ್ಟಿದ. "ನಮ್ಮ ಹಾಗೇ ಇನ್ನೂ ಯಾರಾದರೂ ಒಳಗೆ ಬಂಧಿತರಾಗಿರಬಹುದು. ಇವರು ಆರ್ಯರ ಗಣದವರು ಎಂದು ಅವರೇ ಹೇಳಿದ್ದರಿಂದ ಅವರ ಒಳಗಿನ ಶಕ್ತಿಯನ್ನು ನಾವು ಒಳಗೇ ಹೋಗಿ ನೋಡಬೇಕು. ಅವರು ನಿಜವಾಗಿ ಆರ್ಯರೋ ಅಥವಾ ಆರ್ಯರಂತೆ ಆಡಲು ಯತ್ನಿಸುತ್ತಿರುವ ಅನಾರ್ಯರೋ ಎಂದು.

ವಿನಾಕಾರಣ ಶತ್ರುತ್ವ ಸಾಧಿಸುವವನು ಒಂದು ದುರಾಸೆಯವನಾಗಿರುತ್ತಾನೆ ಅಥವಾ ಹುಚ್ಚನಾಗಿರುತ್ತಾನೆ. ಇವರಿಗಿರುವುದು ದುರಾಸೆ ಎಂದು ತೋರುತ್ತದೆ. ನಾವು ಇವರೊಡನೆ ಹೋರಾಡಿ ಶತ್ರುತ್ವವನ್ನು ವೃದ್ಧಿಸಿಕೊಳ್ಳುವುದಕ್ಕಿಂತ ಒಳಗೆ ಹೋಗಿ ಪರಿಶೀಲಿಸುವುದು ಒಳಿತು. ಇವರು ಆರ್ಯರ ಬಣದವರೇ ಆದ ಪಕ್ಷದಲ್ಲಿ ನನ್ನ ಬ್ರಾಹ್ಮಣ ಸಂಧಾನದಿಂದ ಅವರನ್ನು ಮಣಿಸಬಲ್ಲೆ. ಅದಲ್ಲದೇ, ನಮ್ಮ ಹಾಗೇ ಇನ್ನಾರಾದರಾದರೂ ಬಂಧಿತರಾಗಿದ್ದ ಪಕ್ಷದಲ್ಲಿ ಅವರೊಂದಿಗೆ ಸೇರಿ ಈ ಗಣಕ್ಕೊಂದು ಗತಿ ಕಾಣಿಸಿ ನಾವು ಅಲ್ಲಿನ ಕುದುರೆಗಳನ್ನು ಪಡೆದುಕೊಂಡು ಎಲ್ಲರೂ ಅಶ್ವಧಾರಿಗಳಾಗಿ ಅಂತರ್ವೇದಿಗೆ ಹೋಗಬಹುದು."

ಯಾಜ್ಞಿಕ ಹೇಳುತ್ತಿರುವುದು ಅಪಾಯಕರವೆಂದೂ, ಪ್ರಾಯೋಗಿಕವಾಗಿ ಸರಿಹೊಂದುತ್ತಿಲ್ಲವೆಂದೂ ಯದು, ಕುಶಿಕ ಮತ್ತು ಶಂಬರ ಹೇಳಿದರು.

ಆದರೆ ಶಕಧೂಮ ಮತ್ತು ಇತರರು ಯಾಜ್ಞಿಕನ ಬೆಂಬಲಿಸಿದರು.

ಮುಂದೆ ನಡೆದ ಯಾಜ್ಞಿಕ ಹೇಳಿದ. "ನಿಮ್ಮ ನಿಬಂಧನೆಗಳಿಗೆ ನಾವು ಒಪ್ಪುವುದಕ್ಕೆ ಸಿದ್ಧವಿದ್ದರೂ, ನಮ್ಮ ಕುದುರೆಗಳನ್ನು ನೀಡಲು ಸಾಧ್ಯವಿಲ್ಲ. ನಿಮ್ಮ ಮುಂದಿನ ಕ್ರಮದಂತೆ ನಮ್ಮನ್ನು ನಿಮ್ಮ ಒಡೆಯನ ಬಳಿಗೆ ಕರೆದುಕೊಂಡು ಹೋಗಬಹುದು."

ನೆಲದ ಮೇಲೆ ಇದ್ದ ಮಯೂರಗಣದವರು ಈಟಿಗಳನ್ನು ಹಿಡಿದಿದ್ದರು. ಮರಗಳ ಮೇಲೆ ಕುಳಿತಿದ್ದವರು ಬಾಣಗಳನ್ನೆಳೆದು ಗುರಿಯಿಟ್ಟಿದ್ದರು. ಯಾಜ್ಞಿಕ ಮತ್ತು ವದೀರಜ್ಜನಿಗೆ ಹೊರತಾಗಿ ಮಿಕ್ಕವರೆಲ್ಲರಿಗೂ ಕೈಗಳನ್ನು ಚರ್ಮದ ಹುರಿಯಿಂದ ಹಿಂದಕ್ಕೆ ಕಟ್ಟಿದರು. ಎಲ್ಲರ ಆಯುಧಗಳನ್ನು ವಶಪಡಿಸಿಕೊಂಡರು. ಎಲ್ಲರನ್ನೂ ಈಟಿಯ ಮೊನೆಯಲ್ಲಿಯೇ ಒಳಕ್ಕೆ ಕರೆದೊಯ್ದರು. ಮುಂದೆ ಸಾಗಿದಂತೆ ವಿಶಾಲವಾದ ಆವರಣಗಳಲ್ಲಿ ಹಲವಾರು ಗುಡಿಸಲುಗಳಿದ್ದವು. ಅಲ್ಲಲ್ಲಿ ಯಜ್ಞಕುಂಡಗಳಿದ್ದವು. ಮನೆಯಲ್ಲಿ ಕೆಲಸ ಮಾಡುತ್ತಿದ್ದವರು ಹೊರಗೆ ಬಂದು ಬಂಧಿತರನ್ನು ನೋಡುತ್ತಿದ್ದರು.

"ಮಯೂರವನಕ್ಕೆ ಸ್ವಾಗತ." ಎಂದು ಎದುರಿಗೆ ಬಂದ ಓರ್ವ ಬ್ರಾಹ್ಮಣ ಯುವಕ ಚೇಷ್ಟೆ ಮಾಡಿ ನಾಟಕೀಯವಾಗಿ ಸ್ವಾಗತ ಬಯಸಿ ತನ್ನ ಕೈಯಲ್ಲಿದ್ದ ಕೋಲಿಂದ ಯದುವಿನ ಭುಜಕ್ಕೆ ಹೊಡೆದ.

ಕೋಪದಿಂದ ಕುದಿಯುತ್ತಿದ್ದರೂ ಯದು ಏನೂ ಮಾಡುವಂತಿರಲಿಲ್ಲ. ವನ್ಯಮೃಗಗಳ ದಾಳಿಯನ್ನೂ ಕೂಡ ನಿರೀಕ್ಷಿಸದಿದ್ದ ಅವರಿಗೆ ಈ ಬಗೆಯ ಬಂಧನ ಮತ್ತು ಆಯುಧಹರಣ ತೀರಾ ಅನಿರೀಕ್ಷಿತ.

ಒಂದು ದೊಡ್ಡ ಮನೆಯ ವಿಶಾಲವಾದ ಅಂಗಳದಲ್ಲಿ ಇವರನ್ನು ನಿಲ್ಲಿಸಿ ಮಯೂರ ಗಣದ ಮುಖಂಡರಂತೆ ಕಾಣುತ್ತಿದ್ದವರು ಒಳಗೆ ನಡೆದರು.

ಸ್ವಲ್ಪ ಹೊತ್ತಿಗೇ ಮಯೂರ ಗಣದ ನಾಯಕರು ಹೊರಗೆ ಬಂದರು.

“ಶುಭವಾಗಲಿ. ನಾಯಕರಿಗೆ ನಮ್ಮ ವಂದನೆಗಳು ಸಲ್ಲಲಿ.” ಯಾಜ್ಞಿಕ ವಂದನೆಗಳನ್ನು ಸಲ್ಲಿಸಿದ.

“ಅಯ್ಯಾ ವೈದಿಕ ಬ್ರಾಹ್ಮಣನೇ, ನೀನೇಕೆ ಈ ಅನಾರ್ಯರ ಗುಂಪಿನಲ್ಲಿ? ದೇವತೆಗಳ ವಿರೋಧಿಗಳಿವರು ಹಾಗೂ ನಮ್ಮ ಆರ್ಯ ಸಮುದಾಯಕ್ಕೇ ಪ್ರಬಲ ಶತ್ರುಗಳಿವರು. ವಯನದವರೆಂದು ಕೇಳ್ಪಟ್ಟೆ. ಈ ಬುಟ್ಟಿಯಲ್ಲಿರುವ ವೃದ್ಧರು ಯಾರು? ಮಾತಂಗ ಗಣದವರೋ ಅಥವಾ ಮೂಷಿಕ ಗಣದವರೋ?” ನಾಯಕ ಕೇಳಿದ.

“ನಾವು ಯಾವ ಗಣಕ್ಕೂ ಸೇರಿದವರಲ್ಲ. ಗಣಪತಿಯಾದ ಢುಂಢಿಯ ಕಡೆಯವರು. ಯಾವುದೇ ಗಣವಾದರೂ ನಮಗೆ ಗಣನೆಯಿಲ್ಲ. ಎಲ್ಲಾ ಗಣಗಳಿಗೂ ಢುಂಢಿಯೇ ಮಹಾಗಣಪತಿ.” ಎಂದ ಯದು.

ಪಟ್ಟನೆ ಅವನ ಮುಖದ ಮೇಲೆ ತನ್ನ ಕೈಯಲ್ಲಿದ್ದ ದಂಡದಿಂದ ಹೊಡೆದ ನಾಯಕ, “ಉಪಕೃಷ್ಟ.” ಎಂದು ಗೊಣಗಿದ.

“ನೀನೇಕೆ ಇವರ ಜೊತೆ ಅಂತರ್ವೇದಿಗೆ ಹೋಗುತ್ತಿದ್ದೀಯೆ?” ನಾಯಕ ಯಾಜ್ಞಿಕನನ್ನು ಕೇಳಿದ. ಅವನು ಉತ್ತರಿಸುವ ಮುನ್ನವೇ ನಾಯಕ ತಾನೇ ಹೇಳಿದ. “ಸಾಯುತ್ತಿರುವ ಢುಂಢಿಯನ್ನು ನೋಡುವ ದೌರ್ಭಾಗ್ಯ ಈ ಶ್ವಪಚರಿಗಿರಬಹುದು. ಆದರೆ, ನಿನಗೇಕೆ ಈ ಪಾಡು? ಆ ಮಹಾಶೂದ್ರ ಸತ್ತ ಮೇಲೆ ಅಪರಕರ್ಮವನ್ನು ನಿನ್ನ ಕೈಯಿಂದ ಮಾಡಿಸಿ, ನಿನಗೆ ದಕ್ಷಿಣೆ ನೀಡುವರು ಎಂದು ದುರಾಸೆಯಿಂದ ಹೋಗುತ್ತಿದ್ದೀಯಾ?” ಮಾತನಾಡುತ್ತಲೇ ನಾಯಕ ವದೀರಜ್ಜನ ಬಳಿಗೆ ಬಂದ.

“ವದೀರ! ಕೇಡಿನ ಮುದುಕ. ಢುಂಢಿಗೆ ಹಾಲಿನ ಬದಲು ವಿಷ ಎರೆದು ಬೆಳೆಸಿದೆ. ಢುಂಢೀ, ಹೋಗು ಕೊಲ್ಲು, ಕೊಲ್ಲು ಎಂದು ನಾಗ, ಮಾತಂಗ, ಮೂಷಿಕ, ರುದ್ರ ಗಣಗಳಿಗೆಲ್ಲಾ ಕೇಡಿನ ಸ್ವಪ್ನನಾದವನು. ವಿನಾಯಕರ ಗುರು. ಅಂತರ್ವೇದಿಗೆ ಹೋಗಿ ಇನ್ನಾವ ಸಾಧನೆ ಮಾಡಬೇಕಾಗಿದೆಯೋ ಈ ಚಾಂಡಾಲ ಮುದುಕನಿಗೆ. ಈ ಅನಾರ್ಯರಿಗೆ, ಶಿಶ್ನಾರಾಧಕರಿಗೆ ಆರ್ಯರ ದೈವ ಪಟ್ಟಗಳ ಮೇಲೆ ಕಣ್ಣು! ಆರ್ಯರಿಗೆ ವಿಘ್ನಗಳನ್ನೊಡ್ಡುವ ಅನಾರ್ಯ ಢುಂಢಿಗೆ, ಅಸಹನೀಯ ವಿನಾಯಕನಿಗೆ ದೈವತ್ವದ ಪಟ್ಟ ಕಟ್ಟುವ ಹುನ್ನಾರ. ಪವಿತ್ರವಾದ ಯಜ್ಞದಲ್ಲಿ ಅತಿ ಶ್ರೇಷ್ಟ ದೇವತೆಗಳಿಗೆ ಕೊಡುವ ಹವಿಸ್ಸಿನಲ್ಲಿ ಕಳ್ಳಪಾಲು ಬೇಕೇ ನಿಮಗೆ? ಆರ್ಯರ ಪಶು ಸಂಪತ್ತು, ವಸ್ತ್ರ, ಆಭರಣಗಳನ್ನು, ದವಸ ಧಾನ್ಯಗಳನ್ನು ಕೊಳ್ಳೆ ಹೊಡೆದಂತೆ ಯಜ್ಞಫಲವನ್ನೂ ಕದ್ದು ಕಸಿಯಲು ಬಂದಿರಾ? ಎಂದಿಗೂ ಸಾಧ್ಯವಿಲ್ಲ! ರಾಕ್ಷಸರೆಲ್ಲಾ ದೇವರುಗಳಾಗಿ ಹೋದರೆ ದೇವರುಗಳು ಇನ್ನೇನಾಗಬೇಕು?”

ನಾಯಕ ವದೀರಜ್ಜನ ಮುಂದೆ ಬಾಗಿ ನುಡಿದ. “ಹೇ ವದೀರ, ನಾನು ಯಾರು ತಿಳಿಯಿತೇ? ಸೋಮನಾಥದಲ್ಲಿ ನೀನು ಢುಂಢಿಯಿಂದ ಕೊಲ್ಲಿಸಿದ ಸಮಪ ಮತ್ತು ಮನಪರ ತಂದೆ ವಿತೃಪ ನಾನು. ನಿಶ್ಚಯವಾಗಿ ನೀನು ಇಲ್ಲಿಯೇ ಹೆಣವಾಗಿ ಈ ಮಯೂರ ವನದಲ್ಲಿರುವ ಕಾಗೆ ಹದ್ದುಗಳಿಗೆ ಆಹಾರವಾಗುತ್ತೀಯ. ಇನ್ನುಳಿದವರದೂ ಅದೇ ಗತಿ. ಈ ದಿನಕ್ಕಾಗಿ ನಾನು ಎಷ್ಟು ವರ್ಷಗಳಿಂದ ಕಾದಿದ್ದೆ ಗೊತ್ತೇನೋ ವದೀರ? ರಾಕ್ಷಸೀವೇಶ್ಯೆಯ ಮಗನಾದ ಢುಂಢಿಯ ಹಿಂಬಾಲಕರನ್ನು ಕೊಲ್ಲುವುದು ಅದೆಷ್ಟು ಆನಂದದ ಸಂಗತಿ.” ಎಂದು ವಿತೃಪ ಯದುವನ್ನು ನೋಡುತ್ತಾ ಹೇಳಿದ ನಂತರ ಯಾಜ್ಞಿಕನ ಕಡೆ ತಿರುಗಿದ, “ಅಯ್ಯಾ, ಅತ್ಯಾಸೆಯ ದರಿದ್ರ ಬ್ರಾಹ್ಮಣನೇ, ನಿನ್ನ ಕ್ರೂರ ಭವಿಷ್ಯವನ್ನು ನಂತರ ನಿರ್ಧರಿಸಲಾಗುವುದು.” ಎಂದ ವಿತೃಪ ತನ್ನ ಭಟರ ಕಡೆಗೆ ತಿರುಗಿ ಹೇಳಿದ. “ಇವರೆಲ್ಲರನ್ನೂ ಕತ್ತಲ ಕೋಣೆಗಳಿಗೆ ತಳ್ಳಿ. ಈ ಮುದುಕನಿಗೆ ವಿಶೇಷವಾದ ಶಿಕ್ಷೆಗಳನ್ನು ನಾವು ನಿರ್ಧರಿಸುತ್ತೇವೆ.”

ಹಾಗೆ ಹೇಳಿ ಒಳಗೆ ಹೊರಟು ಹೋದ ನೀವು ಮತ್ತೆ ಹಿಂದಿರುಗಿ ಬಂದು ಇವರನ್ನು ಹಿಡಿದು ತಂದಿದ್ದ ಮುಖಂಡರ ಕಡೆ ನೋಡಿದ.

"ನಿಮಗೇ ತಿಳಿಯದಂತೆ ಇಂದು ಬಹು ಅದ್ಭುತವಾದ ಕೆಲಸವನ್ನು ನೀವು ಮಾಡಿದ್ದೀರಿ. ನಿಮಗೆ ಬಹುಮಾನಿಸಬೇಕೆಂದು ನನಗೆ ಇಷ್ಟವಾಗುತ್ತಿದೆ. ನೀವು ಆರೂ ಜನರು ಇಂದು ಸಂಜೆ ಅವಿಮುಕ್ತಕ್ಕೆ ಹೋಗಿ ನೃತ್ಯ ಸಂಗೀತಗಳಿಂದ ಸಂತೋಷಪಟ್ಟು, ಗಣಿಕೆಯರೊಡನೆ ಆನಂದಿಸಿ ಬನ್ನಿ. ಅದಕ್ಕೆ ಬೇಕಾದ ಪಣವನ್ನು ಪಡೆದುಕೊಂಡು ಹೋಗಿ. ಸುರರಂತೆ ಸುರೆಯನ್ನು ಕುಡಿಯಿರಿ. ಆರ್ಯ ಕ್ಷತ್ರಿಯರಂತೆ ನಿಮಗೆ ಬೇಕಾದಂತೆ ವಿಹಾರ ಮಾಡಿಕೊಂಡು ಬನ್ನಿ." ಎಂದು ಹೇಳಿ ಮತ್ತೆ ಒಳಕ್ಕೆ ಹೋದ.

"ಹೇ ಆರ್ಯ ನಾಯಕ, ಮಾನ್ಯಶ್ರೀ ವಿತೃಪ, ಹೇ ಗೌರವಾದರಣೀಯನೇ.... ದಯಮಾಡಿ ನಿಲ್ಲಿ. ನನ್ನ ಮಾತನ್ನು ಕೇಳಿ." ಎಂದು ಯಾಜ್ಞಿಕ ಬೊಬ್ಬೆ ಹೊಡೆಯುತ್ತಿದ್ದ.

ಭಟರು ಎಲ್ಲರನ್ನೂ ಎಳೆದುಕೊಂಡು ಅಡಗುತಾಣಗಳಿಗೆ ಒಯ್ದರು. ಕತ್ತಲ ಕೋಣೆಗಳಲ್ಲಿ ದೂಡಿ ಬಾಗಿಲುಗಳನ್ನು ಹಾಕಿಕೊಂಡರು.

"ಅಯ್ಯೋ, ನಾವು ಅಲ್ಲಿಯೇ ಕುದುರೆಗಳನ್ನು ಕೊಟ್ಟು ಮಾರ್ಗ ಬದಲಿಸಿದ್ದರೆ ಹೀಗಾಗುತ್ತಿರಲಿಲ್ಲ. ಯಾವುದೋ ದುರ್ವಿಧಿಯಿಂದಾಗಿ ಈ ಕೇಡಿನ ಸೂಚನೆ ನನಗೆ ಸಿಗಲೇ ಇಲ್ಲ." ಎಂದು ಯಾಜ್ಞಿಕ ಗೋಳಾಡುತ್ತಿದ್ದ.

ಅಲ್ಲಿದ್ದವರು ಶಂಬರನ ಮಾತು ಕೇಳದೇ ಯಾಜ್ಞಿಕನ ಮಾತುಗಳಿಗೆ ಮನ್ನಣೆ ಕೊಟ್ಟದ್ದಕ್ಕೆ ತಮ್ಮನ್ನು ತಾವೇ ಹಳಿದುಕೊಂಡರು. ಯದು ಮತ್ತು ಕುಶಿಕರಿಬ್ಬರೂ ಮುಂದಿನದರ ಬಗ್ಗೆ ಆಲೋಚಿಸುತ್ತಿದ್ದರು. ಯದು ಮತ್ತು ಕುಶಿಕರ ಆಲೋಚನೆಗಳಿಗಿಂತಲೂ ವದೀರಜ್ಜನ ಪ್ರಭಾವವು ಇಲ್ಲಿ ಏನೋ ಒಂದು ಕೆಲಸ ಮಾಡುವುದು ಎಂದು ಶಂಬರನಿಗೆ ಅನ್ನಿಸಿತು.

ಅಚಿದು ರಾತ್ರಿ ಶಂಬರನಿಗೆ ನಿದ್ರೆ ಹತ್ತಲಿಲ್ಲ. ಯದು ಮತ್ತು ಕುಶಿಕರು ಅವಮಾನದಿಂದ ಕುಗ್ಗಿ ಹೋಗಿದ್ದರು. ಯಾರೂ ದೂರದಿದ್ದರೂ ಯಾಜ್ಞಿಕನಿಗೆ ಎಲ್ಲವೂ ತನ್ನಿಂದಲೇ ಆಗಿರುವಂತೆ ಅಪರಾಧ ಪ್ರಜ್ಞೆಯಿಂದ ತಲೆ ತಗ್ಗಿಸಿ ಕುಳಿತಿದ್ದ. ಮಯೂರ ಗಣದ ಕಡೆಯವರಿಂದ ಕನಿಷ್ಠ ಪಕ್ಷ ರಾತ್ರಿಯ ಊಟವೂ ದೊರೆಯಲಿಲ್ಲ. ಅವರ ಜೊತೆಗಿದ್ದ ಪ್ರಯಾಣದ ಎಲ್ಲಾ ಸಾಮಗ್ರಿಗಳನ್ನು ಅವರೇ ಕಸಿದುಕೊಂಡಿದ್ದರು. ಎಲ್ಲರೂ ಎಚ್ಚರದಲ್ಲಿಯೇ ಕುಳಿತಿದ್ದರು. ಕೈಗಳನ್ನು ಬೆನ್ನ ಹಿಂದೆ ಕಟ್ಟಿದ್ದು, ಕಾಲುಗಳನ್ನೂ ಕಟ್ಟಿದ್ದು, ಅವರಿಗೆ ಸರಿಯಾಗಿ ಕುಳಿತುಕೊಳ್ಳಲೂ ಸಾಧ್ಯವಿರುತ್ತಿರಲಿಲ್ಲ.

"ಎಂಥಾ ಅವಮಾನಕರವಾದ ಬಂಧನ!" ಎಂದ ಕುಶಿಕ.

"ಇವರು ಇದರ ಫಲವನ್ನು ಇಷ್ಟರಲ್ಲೇ ಅನುಭವಿಸುತ್ತಾರೆ." ಎಂದ ಯದು ಕಷ್ಟಪಟ್ಟು ತನ್ನ ಕೈಗಳನ್ನು ಕುಶಿಕನ ಕಟ್ಟಿರುವ ಕೈಗಳ ಬಳಿಗೆ ತೆಗೆದುಕೊಂಡು ಹೋದ. ಕುಶಿಕ ಬಹಳ ಹೊತ್ತು ಪ್ರಯಾಸಪಟ್ಟು ಅವನ ಕೈಗಳನ್ನು ಬಿಡಿಸಿದ. ನಂತರ ಸುಲಭವಾಯಿತು. ಎಲ್ಲರೂ ಬಂಧ ಮುಕ್ತರಾದರು. ಆದರೆ, ಅಲ್ಲಿಂದ ಎಲ್ಲಿಗೂ ಹೋಗಲು ಸಾಧ್ಯವಿರಲಿಲ್ಲ. ಗಟ್ಟಿಯಾದ ಗೋಡೆಯುಳ್ಳ ಆ ವಿಶಾಲವಾದ ಮನೆಯನ್ನು ಸೆರೆಮನೆಯಾಗಿ ಮಾರ್ಪಾಡು ಮಾಡಿದ್ದರು. ಕಿಟಕಿಗಳೇನೂ ಇಲ್ಲದ ಆ ಸೆರೆಮನೆಗೊಂದೇ ಬಾಗಿಲು ಇದ್ದದ್ದು.

ಎಲ್ಲರೂ ಕುಳಿತು ಮೆಲ್ಲ ದನಿಯಲ್ಲಿ ಚರ್ಚಿಸಿದರು. ಈಗ ನಿರಾಯುಧರಾಗಿರುವ ಇವರು ಯಾವುದೇ ರೀತಿಯಲ್ಲಿ ಮಯೂರ ಗಣವನ್ನು ಎದುರು ಹಾಕಿಕೊಳ್ಳಲು ಸಾಧ್ಯವಿಲ್ಲ. ಆದರೆ, ನಾಳೆ ಬೆಳಗ್ಗೆಯವರೆಗೂ ಕಾದರೆ, ಅವರನ್ನು ಎದುರಿಸುವುದು ಅಸಾಧ್ಯದ ಮಾತು. ಅಷ್ಟೊಂದು ಜನರನ್ನು ಎದುರಿಸಲು ಸಾಧ್ಯವೇ ಇಲ್ಲ. ಘುಂಢಿಯ ಹೆಸರಿನಲ್ಲಿ ಇಲ್ಲಿ ಬಲಿದಾನವಾಗಿ ಹೋಗುತ್ತದೆ!

ಯೋಚಿಸಿದ್ದಷ್ಟೂ ಸಮಸ್ಯೆ ಕಗ್ಗಂಟಾಯಿತು.  ತಿಣುಕಿದಷ್ಟೂ ವಿಷಯ ಜಟಿಲವಾಯಿತು. ಬೆಳಗಾಗಿ ಹೋಗಲಿ. ಅವರು ಇದರ ಬಾಗಿಲು ತೆರೆಯಲಿ. ಒಮ್ಮತದಿಂದ ನಾವು ಸಾಂದರ್ಭಿಕವಾಗಿ ವರ್ತಿಸೋಣ ಎಂದು ಎಲ್ಲರೂ ನಿರ್ಧರಿಸಿದರು.

ಆ ರಾತ್ರಿ ಯಾರಿಗೂ ನಿದ್ರೆ ಬರಲಿಲ್ಲ. ಶಂಬರ ವದೀರಜ್ಜನಿಂದ ತನಗೇನಾದರೂ ಸೂಚನೆ ಸಿಗಬಹುದೆಂದು ಅವರ ಪಕ್ಕದಲ್ಲಿಯೇ ಕುಳಿತಿದ್ದ. ಆದರೆ ವದೀರಜ್ಜ ಶಾಂತವಾಗಿ ನಿದ್ರಿಸುತ್ತಿದ್ದಾರೆ ಎಂದು ಅವನಿಗೆ ಅನ್ನಿಸಿತು. ಮನಸ್ಸಿನಲ್ಲಿಯೇ ಹಲವು ಬಾರಿ ಅಂದುಕೊಂಡ, 'ವದೀರಜ್ಜ ದಯಮಾಡಿ ಈ ಮೊದಲು ನನಗೆ ಸೂಚನೆಗಳನ್ನು ಕೊಟ್ಟಂತೆ ಈಗಲೂ ನನಗೆ ಸೂಚನೆಗಳನ್ನು ನೀಡಿ. ನಾನು ಖಂಡಿತ ಪಾಲಿಸುತ್ತೇನೆ.' ಎಂದು. ಆದರೆ ಆ ತಕ್ಷಣಕ್ಕೆ ಅವನಿಗೆ ಏನೂ ಸೂಚನೆ ಸಿಗಲಿಲ್ಲ. ಅವನಿಗೆ ಮಯೂರ ಗಣದ ನಾಯಕ ವಿತೃಪನ ಮಾತುಗಳು ಪದೇ ಪದೇ ನೆನಪಿಗೆ ಬಂದವು. "ಘುಂಢಿಗೆ ಹಾಲೆಯುವ ಬದಲು ವಿಷವೆರೆದು ಬೆಳೆಸಿದವನು.... ಘುಂಢೀ ಹೋಗು ಕೊಲ್ಲು, ಕೊಲ್ಲು ಎಂದು....."

*

"ಘುಂಢೀ, ಕಲ್ಲಿಗೆ ಕಲ್ಲು. ಕತ್ತಿಗೆ ಕತ್ತಿ. ಬೆಂಕಿಗೆ ಬೆಂಕಿ." ವದೀರಜ್ಜ ಆರ್ಯರ ಪರವಾಗಿ ಬಂದ ಅಧಿಕಾರಿಗಳಿಗೆ ಕಲ್ಲುಗಳನ್ನು ಬೀಸುತ್ತಿದ್ದ ಘುಂಢಿ ಮತ್ತು ಅವನ ಗೆಳೆಯರಿಗೆ ಕೂಗಿ ಕರೆದ ವದೀರಜ್ಜ. "ಘುಂಢೀ ಅವರು ನಮ್ಮನ್ನು ಸುಡುತ್ತಿದ್ದಾರೆ. ಬೆಂಕಿಯಿಂದ ನಮ್ಮನ್ನು ಸುಡುತ್ತಿದ್ದಾರೆ."

ವದೀರಜ್ಜನ ಈ ನುಡಿ ತನ್ನ ಕಿವಿಗೆ ಕೇಳಿದಾಕ್ಷಣವೇ ಕಲ್ಲುಗಳನ್ನು ಎಸೆಯುತ್ತಿದ್ದ ಘುಂಢಿ ಕಲ್ಲುಗಳನ್ನು ಬಿಟ್ಟು ಉರಿಯುತ್ತಿದ್ದ ಗುಡಿಸಲುಗಳ ಕಡೆಗೆ ಓಡಿದ. ಉರಿಯುತ್ತಿರುವ ಬೆಂಕಿಯ ಗಳಗಳನ್ನು ಹಿಡಿದು ಘುಂಢಿ ಮತ್ತು ಅವನ ಸ್ನೇಹಿತರು ಅಧಿಕಾರಿಗಳ ಕಡೆಗೆ ನುಗ್ಗಿದರು. "ಘುಂಢಿ ಅವರನ್ನು ಬಿಡಬೇಡ." ಎಂದು ಅವನ ಗೆಳೆಯರು ತಮಗೆ ಸಿಕ್ಕ ಸಿಕ್ಕ ಅಧಿಕಾರಿಗಳನ್ನು ಬೆಂಕಿಯಿಂದ ಅಪ್ಪಳಿಸತೊಡಗಿದರು. ಕಾಲವರೆಗೂ ತೊಟ್ಟಿದ್ದ ಆರ್ಯರ ವಸ್ತ್ರಗಳಿಗೆ ಬೆಂಕಿ ಹೊತ್ತಿಕೊಂಡವು. ವಯನದ  ಪುರುಷರನ್ನು ಮತ್ತು ಸ್ತ್ರೀಯರನ್ನು ನಿಯಂತ್ರಿಸುತ್ತಿದ್ದ ಸೈನಿಕರು ತಮ್ಮ ಅಧಿಕಾರಿಗಳನ್ನು ಉಳಿಸಲು ಅವರ ಬಳಿಗೆ ಓಡಬೇಕಾಯಿತು. ಎಲ್ಲಾ ಗಂಡಸರು ಮತ್ತು ಹೆಂಗಸರು ತಮ್ಮ ಕೈಗೆ ಸಿಕ್ಕಿದ ಕೋಲು, ಕಲ್ಲು ಮತ್ತು ಉರಿಯುವ ಗಳಗಳಿಂದ ಅಧಿಕಾರಿಗಳ ಮೇಲೆ ಮತ್ತು ಸೈನಿಕರ ಮೇಲೆ ದಾಳಿ ಮಾಡಿದರು.

ದುರ್ಬಲರ ಮೇಲೆ ಹಕ್ಕುದಾರಿಕೆಯಿಂದೆಂಬಂತೆ ಆಕ್ರಮಣ ಮಾಡಿದವರು ತಮ್ಮ ಮೇಲೆಯೇ ಅವರಿಂದ ಆಕ್ರಮಣವಾರಂಭವಾದಾಗ ಆ ನೋವು ಮುಟ್ಟಿಸುವ ಚುರುಕು ದ್ವೇಷವನ್ನು ಮತ್ತಷ್ಟು ಜ್ವಲಿಸುವಂತೆ ಮಾಡೀತೇ ಹೊರತು, ಈ ನೋವು ಅವರಿಗೂ ಆಗುತ್ತಿತ್ತು ಎಂದು ಹೇಗೆ ಅನ್ನಿಸೀತು? ತಮ್ಮ ಮೇಲೆಯೇ ಕೈ ಮಾಡಿದವರ ಸೊಕ್ಕನ್ನು ಇಳಿಸಲು ಮತ್ತಷ್ಟು ಸೇನೆಯ ಕಿರುಪಡೆಗಳೊಂದಿಗೆ ಮರುದಿನ ಬಂದರು.

ಆದರೆ, ವದೀರಜ್ಜನ ಮಾರ್ಗದರ್ಶನದಲ್ಲಿ, ಘುಂಢಿಯ ನಾಯಕತ್ವದಲ್ಲಿ ಇಡೀ ವಯನವೇ ಆಕ್ರಮಣವನ್ನು ಎದುರಿಸಲು ಸಿದ್ಧವಾಗಿತ್ತು. ವಯನದ ಅರಣ್ಯಕರಲ್ಲಿ ಹೋರಾಡಲೆಂದೇ ಒಂದು ತಂಡವಿಲ್ಲ. ಅರಣ್ಯಕರ ಸಮುದಾಯಕ್ಕೆ ವಿಪತ್ತು ಒದಗಿದರೆ, ಇಡೀ ಸಮುದಾಯವೇ ಅದನ್ನು ಎದುರಿಸಲು ಸಿದ್ಧವಾಗುತ್ತದೆ.

"ನಮ್ಮ ಅರಣ್ಯದ ಕೊಡುಗೆ ಅವರ ಕೈಗೆ, ಅವರ ಹೇಸಿಗೆ ನಮ್ಮ ಕೈಗೆ. ನಾವು ಕೊಡುವ ಅರಣ್ಯದ ಹೊಚ್ಚ ಹೊಸ, ತಾಜಾ ಜೇನನ್ನು, ಗಿಡ ಮೂಲಿಕೆಗಳನ್ನು, ಹಣ್ಣುಗಳನ್ನು, ಪ್ರಾಣಿಗಳ ಚರ್ಮಗಳನ್ನು ತೆಗೆದುಕೊಂಡು, ನಮಗೆ ತಾವು ಉಟ್ಟು ಬಿಟ್ಟ ಹಳೆಯ ವಸ್ತ್ರಗಳನ್ನು, ಉಂಡು ಉಳಿದ ಎಂಜಲನ್ನು ನಮಗೆ ಕೊಡುತ್ತಾರೆ. ಇಲ್ಲಿ ನಾವು ಹಂಚಿಕೊಳ್ಳುತ್ತಿರುವುದೇನನ್ನು? ನಮ್ಮಿಂದ ಅವರಿಗೆ ಉತ್ಕೃಷ್ಟವಾದವು, ಅವರಿಂದ ನಮಗೆ ಉಚ್ಛಿಷ್ಟವಾದುವು.

ತಾವು ಶಾಸ್ತ್ರಗಳನ್ನು ಊಳಿಡುತ್ತಾ, ಇತರರನ್ನು ವಿದ್ಯೆಯಿಂದ ವಂಚಿತರನ್ನಾಗಿ ಮಾಡಿ ಅವರ ಕೈಗೆ ಶಸ್ತ್ರಗಳನ್ನು ಕೊಟ್ಟು ತಮ್ಮ ತಲೆಗಳನ್ನು ಪೊಟರೆಗಳಲ್ಲಿಟ್ಟುಕೊಂಡು ರಕ್ಷಿಸಿಕೊಳ್ಳುವ ಆ ಶಿಷ್ಟ ನರಿಗಳಿಗೆ ಬುದ್ಧಿ ಕಲಿಸುವ ಕಾಲ ಬಂದಿದೆ. ಹೋರಾಡುತ್ತಲೇ ಹುಟ್ಟಿದವರು ನಾವು. ಮರಣ ಬಂದರೂ ಹೋರಾಟದಿಂದಲೇ ಬರಲಿ. ಬೆಳೆಗಳಲ್ಲಿ ಬೆಳೆದು ನಿಲ್ಲುವ ಕಳೆಗಳನ್ನು ಕತ್ತರಿಸಲು ಹಿಡಿವ ಕುಡುಗೋಲುಗಳನ್ನು ಹಿಡಿದ ಹೆಂಗಸರು ವಿಪರೀತ ಬುದ್ಧಿಯ ತಲೆಗಳನ್ನು ಕತ್ತರಿಸಲಿ. ಪ್ರಾಣಿಗಳನ್ನು ಕತ್ತರಿಸಲು ಹಿಡಿಯುವ ಕತ್ತಿಗಳನ್ನು ಪುರುಷರು ಹಿಡಿದು, ತಮ್ಮ ಸಂತತಿಯನ್ನು ನಾಶ ಮಾಡಲು ಬರುತ್ತಿರುವ ಆ ದುರಾಸೆಯ ಎದೆಗಳನ್ನು ಸೀಳಿ." ಎಂದು ವದೀರಜ್ಜ ಕೂಗೆತ್ತಿದ್ದ. ಕರೆಯಿತ್ತಿದ್ದ.

ವದೀರಜ್ಜ ಇಷ್ಟೂ ವರುಷಗಳ ಕಾಲ ಅವರ ಎಲ್ಲಾ ಅತಿಕ್ರಮಣದ ಅತಿರೇಕಗಳನ್ನು ನೋಡಿಕೊಂಡು ಸಹಿಸಿಕೊಂಡು ಬಂದಿದ್ದವನು. ಪ್ರಾಣಿಯನ್ನೂ ಅನುಮತಿಯಿಲ್ಲದೇ ಕೊಲ್ಲದವನು, ಅಪ್ಪಣೆ ಕೇಳಿಯೇ ವೃಕ್ಷಗಳಿಂದ ಫಲಗಳನ್ನು ಪಡೆವವನು ಭೂಮಿಯವರೆಗೂ ಬಾಗಿದ್ದ. ಈಗ ಸೆಟೆಯಲೇ ಬೇಕಾಗಿತ್ತು. ನಿಲ್ಲಲೇ ಬೇಕಾಗಿತ್ತು. ಉದುರಲು ಸಿದ್ಧವಿದ್ದ ಮಾಗಿದ ಹಣ್ಣಿನ ಕಣ್ಣಲ್ಲಿ ಚಿಗುರುಗಳ ಚಿತ್ರವಿತ್ತು, ಸಸಿಗಳ ಆಸೆಯಿತ್ತು.

ಪುರುಷರು, ಯುವಕರು, ಹೆಂಗಸರು, ಮಕ್ಕಳು, ವೃದ್ಧರು; ವಯನದ ಸಮಸ್ತರೂ ತಮಗೆ ತೋರಿದ ಆಯುಧಗಳನ್ನು ಹಿಡಿದು ತಮ್ಮ ಅರಣ್ಯದ ರಕ್ಷಣೆಗೆ, ತಮ್ಮ ಹಟ್ಟಿಯ ರಕ್ಷಣೆಗೆ ನಿಂತಿದ್ದರು.

ಅವಿಮುಕ್ತದ ಸೇನಾಧಿಪತಿ ತನ್ನ ಕಿರುಪಡೆಯೊಡನೆ ಬಂದವನು ಈ ಜನರ ಪ್ರತಿಭಟನೆಯನ್ನು ಕಂಡು ಅವಕ್ಕಾದ. ಅಲ್ಲಿಗೆ ರಥ ಹಾಗೂ ಕುದುರೆಗಳ ಪಡೆಯೊಡನೆ ಬಂದಿದ್ದ ಸೇನಾಧಿಪತಿ ಮಾತ್ರವೇ ಅಲ್ಲಿದ್ದಿದ್ದರೆ ರಕ್ತಪಾತವಾಗಿಬಿಡುತ್ತಿತ್ತೇನೋ. ಆದರೆ, ಅವನ ಜೊತೆಗೆ ಮಂತ್ರಿ ಸಂಬೋಧಿಯೂ ಬಂದಿದ್ದರಿಂದ ಹೋರಾಟವೆಂಬುದು ತಕ್ಷಣ ಆಗಲಿಲ್ಲ.

ಸಂಬೋಧಿ ವದೀರಜ್ಜನ ಕಡೆಗೆ ನಡೆದ.

"ವದೀರ, ಇದೇನಿದು?" ಸಂಬೋಧಿಯು ವದೀರನನ್ನು ತನ್ನ ಸಣ್ಣವಯಸ್ಸಿನಿಂದಲೂ ಬಲ್ಲವನು.

"ರಾಜನ ವಿರುದ್ಧವಾಗಿ ನೀವು ಹೀಗೆ ಬಂಡಾಯವೇಳುವುದೇ? ಇದೇ ಏನು ನಿಮ್ಮ ರಾಜಭಕ್ತಿ? ರಾಜನೇ ಪ್ರತ್ಯಕ್ಷ ದೈವವಲ್ಲವೇ?"

“ಹಾಗೆನ್ನುವವರು ಆಸೆಯಿಂದ ಕಾರ್ಯಸಾಧಿಸಿಕೊಳ್ಳಬರುವವರು, ಅಥವಾ ಭಯದಿಂದ ರಕ್ಷಣೆ ಬೇಡುತ್ತಾ, ಕರುಣೆಗಾಗಿ ಅಂಗಲಾಚುವವರು. ನನಗೆ ಆಸೆಯೂ ಇಲ್ಲ. ಭಯವೂ ಇಲ್ಲ. ಇರುವುದು ಬರಿಯ ಹೊಣೆಗಾರಿಕೆ.” ಮುಂದುವರೆಸಿದ ವದೀರಜ್ಜ ಗಡುಸಾಗಿ ಕೇಳಿದ. “ಯಾರಪ್ಪಾ ರಾಜ? ನಾನು ನನಗೆ ರಾಜ. ನಿಮ್ಮ ರಾಜ ತಮಗೇ ರಾಜ. ಅವನ ಕಾಲು ನೆಕ್ಕುವ ಜನ ಅವನನ್ನು ತಮ್ಮ ರಾಜನೆಂದುಕೊಳ್ಳುವರು. ಇಲ್ಲಿ ಅರಣ್ಯದಲ್ಲಿ, ಆಕಾಶದ ಕೆಳಗೆ, ಭೂಮಿಯ ಮೇಲೆ ಎಲ್ಲರೂ ಮಕ್ಕಳು. ಅವರವರ ಹೊಣೆಗಾರಿಕೆಗಳನ್ನು ನಿಭಾಯಿಸುವುದಕ್ಕೆ ಅಧಿಕಾರವೇ ಹೊರತು, ಯಾರ ಮೇಲೂ ಸವಾರಿ ಮಾಡುವುದಕ್ಕಲ್ಲ. ನಿಮ್ಮ ರಾಜನಿಗೆ ಅವನ ಹೊಣೆಗಾರಿಕೆಯ ಅರಿವಾಗಲಿ. ಹೊಣೆಗೇಡಿಗಳಾದಾಗ ಅದನ್ನು ಹೀಗೆ ಗಟ್ಟಿಯಾಗಿ ಹೇಳಲೇಬೇಕು.” ಈ ರೀತಿಯಾಗಿ ವದೀರಜ್ಜ ತನ್ನ ನಿಲುವನ್ನು ಸ್ಪಷ್ಟವಾಗಿ ಹೊಂದಿದ್ದ.

ಸಂಬೋಧಿಗೆ ಏನನ್ನೂ ಹೇಳಲಾಗಲಿಲ್ಲ. ತಾವು ಹಿಂದಿರುಗಿ ಬರುವವರೆಗೂ ಯಾವ ಆಗ್ರಹದ, ಆವೇಶದ ಕೆಲಸಗಳಿಗೂ ಮುಂದಾಗ ಕೂಡದೆಂದು ಸೈನ್ಯಾಧಿಕಾರಿಗಳಿಗೆ ತಿಳಿಸಿ ವಿಷಯವನ್ನು ಅರಸ ಮಹಿಪಾಲನೊಂದಿಗೆ ಚರ್ಚಿಸಲು ಅವಿಮುಕ್ತಕ್ಕೆ ನಡೆದ.

ವಯನದ ಮಂದಿ ಮುಂದಾಗುವುದನ್ನು ಕಾದು ಕುಳಿತಿದ್ದರು. ಇನ್ನೊಂದು ಬದಿಯಲಿ ಅವಿಮುಕ್ತದ ಸೈನ್ಯವೂ ಕಾದು ಕುಳಿತಿತ್ತು.

ಸೂರ್ಯ ನೆತ್ತಿಯ ಮೇಲೆ ಬರತೊಡಗಿದ. ವಯನದ ಮಕ್ಕಳು ಹಸಿವಿನಿಂದ ಅಳತೊಡಗಿದಾಗ, ಹೆಂಗಸರು ಮನೆಗಳಿಗೆ ತೆರಳಿ ಜವೆಗೋಧಿಯ ಗಂಜಿ ಮಾಡಿ ಮಕ್ಕಳಿಗೂ ಕೊಟ್ಟು ದೊಡ್ಡವರಿಗೂ ನೀಡಿದರು. ತಾವು ಸಂಗ್ರಹಿಸಿದ್ದ ಬಾಳೆಹಣ್ಣುಗಳನ್ನು ವಿತರಿಸಿಕೊಂಡರು. ಹಸಿವಿನಿಂದ ಇವರ ಕಡೆಗೇ ನೋಡುತ್ತಿದ್ದ ಸೈನ್ಯಾಧಿಕಾರಿಗಳಿಗೂ ಹಣ್ಣುಗಳನ್ನು ಕೊಡಲು ವದೀರಜ್ಜ ಹೇಳಿದ.

“ನಮ್ಮ ಮೇಲೆ ಧಾಳಿಗೆ ಬಂದವರು ಜೊತೆಗೆ ಆಹಾರವನ್ನು ತರದೇ ಬಂದಿರುತ್ತಾರೆಯೇ? ಬೇಡ ಅಜ್ಜಾ.” ಎಂದ ಒಬ್ಬ.

“ಅವರೂ ನಮ್ಮ ಹಾಗೇ ಈ ಬಿಸಿಲಿನಲ್ಲಿ ಎದುರಿಗೇ ಕಾದು ಕುಳಿತಿದ್ದಾರೆ. ಏನಾದರಾದರೂ ತಂದಿರುವವರಾಗಿದ್ದರೆ ಈಗ ಅವರು ತಿನ್ನಬಹುದಿತ್ತಲ್ಲವೇ? ಆದರೆ, ಅವರು ಹಾಗೆಯೇ ಕುಳಿತಿದ್ದಾರೆ.” ಎಂದ ವದೀರಜ್ಜ.

ಸೈನ್ಯದಲ್ಲಿದ್ದವರು ಆಗ್ಗಾಗ್ಗೆ ಪಕ್ಕದಲ್ಲಿಯೇ ಹರಿಯುತ್ತಿರುವ ಗಂಗಾನದಿಗೆ ಹೋಗಿ ನೀರು ಕುಡಿದು ಬರುತ್ತಿದ್ದರು. ಆದರೆ, ಯಾರೂ ಏನೂ ತಿನ್ನುವ ಸೂಚನೆ ಕಾಣಲಿಲ್ಲ.

“ಈ ಊಟ ನಮಗೆ ಕಾಡು ಕೊಡುವುದು. ಯಾವುದೇ ಊಟವನ್ನು ಒಬ್ಬರೇ ತಿನ್ನಲು ಬಾರದು. ಹಂಚಿಕೊಂಡೇ ಉಣಬೇಕು. ಶತ್ರುವಿರಲಿ, ಮಿತ್ರನಿರಲಿ. ಆದರೆ, ಇವರು ನಮಗೆ ಶತ್ರುಗಳಲ್ಲ. ಯಾರದೋ ಪರವಾಗಿ ಹೋರಾಡಲು ಬಂದಿರುವ ಕೂಲಿಯಾಳುಗಳು. ಇವರು ನಮಗೆ ತಿಳಿದೂ ಇಲ್ಲ. ಅಪರಿಚಿತರೊಂದಿಗೆ ಶತ್ರುತ್ವ ಹೇಗೆ ಸಾಧ್ಯ?” ಎಂದ ವದೀರಜ್ಜ.

“ಅಜ್ಜಾ, ನಾನು ಅವರನ್ನು ಕೇಳುತ್ತೇನೆ. ಅವರು ಆಹಾರ ಬೇಕೆಂದರೆ, ನಾನೇ ಹೋಗಿ ಬಾಳೇಹಣ್ಣುಗಳನ್ನು ಕೊಟ್ಟು ಬರುತ್ತೇನೆ.” ಎಂದ ಢುಂಢಿ.

ಢುಂಢಿ ಸೈನ್ಯಕ್ಕೆ ಅನತಿದೂರದಲ್ಲಿ ನಿಂತು ಕೂಗಿ ಕೇಳಿದ.

"ನಿಮಗೆ ಹಸಿವಾಗ್ತಿದೆಯಾ? ತಿನ್ನಕ್ಕೆ ಹಣ್ಣುಬೇಕಾ?"

ಸೈನಿಕರು ಉತ್ತರಿಸಲಿಲ್ಲ. ಅವರು ಸೈನ್ಯಾಧಿಕಾರಿಯ ಕಡೆಗೆ ನೋಡಿದರು. ಸೈನ್ಯಾಧಿಕಾರಿ ಬೇಕೆಂದು ತಲೆದೂಗಿದ.

ಢುಂಢಿ ಎರಡು ಬಾಳೆಹಣ್ಣಿನ ಗೊನೆಗಳನ್ನು ತನ್ನ ಎರಡೂ ಭುಜಗಳ ಮೇಲೆ ಹೊತ್ತು ಅವರತ್ತ ನಡೆದ. ಅವನ ಹಿಂದೆ ಇನ್ನೂ ಎಂಟು ಜನ ಪುರುಷರು ತಮ್ಮ ತಮ್ಮ ಭುಜಗಳ ಮೇಲೆ ಬಾಳೆಹಣ್ಣುಗಳ ಗೊನೆಗಳನ್ನು ಹೊತ್ತು ನಡೆದರು.

ಢುಂಢಿಯು ಸೈನ್ಯಾಧಿಕಾರಿಯ ಮುಂದೆ ಗೊನೆಗಳನ್ನು ಇಳಿಸುವಾಗ ಆತ ವ್ಯಂಗ್ಯವಾಗಿ ನಗುತ್ತಾ, "ಏನೋ ಹುಡುಗ, ನೀನು ನನ್ನ ತಲೆಗೆ ಮಾಡಿರುವ ಗಾಯಕ್ಕೆ ನಿನಗೆ ಏನು ಕೊಡಲಿ?" ಎಂದು ಕೇಳಿದ.

ಢುಂಢಿ ಹಿಂದಿನ ದಿನ ಹೊಡೆದ ಕಲ್ಲಿನ ಏಟಿನಿಂದಾಗಿ ಅವನ ಹಣೆ ಮತ್ತು ತಲೆಯ ಮೇಲ್ಭಾಗದಲ್ಲಿ ಗಾಯವಾಗಿತ್ತು. ಢುಂಢಿ ಏನೂ ಮಾತಾಡಲಿಲ್ಲ. ನೇರವಾಗಿ ನಿಂತು ಅವನ ಮುಖ ನೋಡಿದ.

"ಹಾಗೆ ನೋಡಬೇಡ. ತಲೆ ತಗ್ಗಿಸು. ಕಣ್ಣುಗಳನ್ನು ಕಿತ್ತು ಹಾಕಿಬಿಟ್ಟೇನು?" ಸೈನ್ಯಾಧಿಕಾರಿ ಹೇಳಿದ.

ಢುಂಢಿ ಅವನನ್ನು ದುರದುರನೆ ನೋಡುತ್ತಲೇ ಅವನಿಗೆ ಮುಖಕೊಟ್ಟು ಹಿಂದುಹಿಂದಕ್ಕೆ ಹೆಜ್ಜೆ ಹಾಕುತ್ತಾ ಬಂದ.

"ಬಾ ಇಲ್ಲಿ." ಸೈನ್ಯಾಧಿಕಾರಿ ಕರೆದ. "ಹಾಗೇ ಹೋಗ್ತಿದ್ದೀಯ. ಬಾ ಮಾತಾಡು."

ಢುಂಢಿ ನಿಂತ.

"ಬಾ ಇಲ್ಲಿ!" ಸೈನ್ಯಾಧಿಕಾರಿ ಗರ್ಜಿಸಿದ.

ಢುಂಢಿಯ ನೇರ ನೋಟವು ಅವನಿಗೆ ತೀರಾ ಇರಿಸುಮುರಿಸು ಉಂಟು ಮಾಡಿತು. ಜೊತೆಗೆ ತನಗೆ ಗೌರವ ಕೊಡುತ್ತಿಲ್ಲವೆಂದು ಅವನಿಗೆ ಅನ್ನಿಸಿತು. ಸೈನ್ಯಾಧಿಕಾರಿ ರಥದಿಂದ ಇಳಿದವನೇ ಕುದುರೆಯನ್ನು ನಿಯಂತ್ರಣದಲ್ಲಿಡಲು ಉಪಯೋಗಿಸುತ್ತಿದ್ದ ಚಾವುಟಿಯನ್ನು ತೆಗೆದು ಢುಂಢಿಯ ಮುಖದ ಮೇಲೆ ಬಾರಿಸಿದ. ಈ ಅನಿರೀಕ್ಷಿತ ಹೊಡೆತಕ್ಕೆ ಬೆಚ್ಚದ ಢುಂಢಿ ಅವನನ್ನು ನೋಡುತ್ತಾ ಹಾಗೆಯೇ ಹಿಂದಕ್ಕೆ ನಡೆದ. ಅಧಿಕಾರಿ ಇನ್ನೊಂದು ಬಾರಿ ಚಾವುಟಿಯನ್ನು ಅವನ ಮೇಲೆ ಬೀಸಿದಾಗ, ತನ್ನ ಎಡಗೈಯಿಂದ ಚಾವುಟಿಯ ಸಮೇತ ಅವನ ಕೈಯನ್ನು ಹಿಡಿದು, ತನ್ನ ಬಲಗೈಯಿಂದ ಬೆನ್ನಿನ ಹಿಂದೆ ಸೊಂಟಕ್ಕೆ ಸಿಕ್ಕಿಸಿಕೊಂಡಿದ್ದ ಹರಿತವಾದ ದೊಡ್ಡ ಕುಡುಗೋಲನ್ನು ತೆಗೆದು ಬೀಸಿದ. ಈ ಅನಿರೀಕ್ಷಿತವಾದ ಬೀಸುವಿಕೆಗೆ ಸಿದ್ಧನಾಗಿರದಿದ್ದ ಅಧಿಕಾರಿ ಆಯತಪ್ಪಿ ಮುಂದಕ್ಕೆ ಬಿದ್ದ. ಕುಡುಗೋಲು ಕುತ್ತಿಗೆಗೆ ನಾಟಿತು.

ಕುತ್ತಿಗೆಯಿಂದ ರಕ್ತಸ್ರಾವವಾಗುತ್ತಾ ತಮ್ಮ ಸೈನ್ಯಾಧಿಕಾರಿ ಪ್ರಾಣ ಕಳೆದುಕೊಂಡು ನೆಲ ಕಚ್ಚಿದ ಕೂಡಲೇ ಅವರ ಪಾಳಯದಲ್ಲಿ ಅಲ್ಲೋಲಕಲ್ಲೋಲವಾಯಿತು. ಅವಿಮುಕ್ತದ ಆವೇಶಭರಿತ ಸೈನಿಕರು ವಯನದ ಮೇಲೆ ಎರಗಿದರು. ಸಿದ್ಧವಾಗಿಯೇ ಇದ್ದ ವಯನದ ಮಂದಿ ಅವರ ಮೇಲೆ ಎರಗಿದರು. ಸೇನಾಧಿಪತಿಯೇ ಇಲ್ಲದ ಆ ಸೈನ್ಯವು ವಯನದವರೊಡನೆ ಹೋರಾಡುವುದಕ್ಕಿಂತ ಅವರಿಂದ

ತಪ್ಪಿಸಿಕೊಂಡು ಹೋಗುವುದಕ್ಕೆ ಯತ್ನಿಸುವಂತಾಯ್ತು. ಉಪಸೇನಾಧಿಕಾರಿಯಿದ್ದರೂ ತನ್ನ ಮುಖ್ಯಾಧಿಕಾರಿ ನೆಲಕ್ಕೆ ಬೀಳುತ್ತಿದ್ದಂತೆ, "ಅವರನ್ನು ಬಿಡಬೇಡಿ. ಕೊಲ್ಲಿ!" ಎಂದು ಕೂಗಿ ತಾನು ಕಾಲ್ಕಿತ್ತಿದ್ದ.

'ರಕ್ತಪಾತ ಕೂಡದು, ವದೀರನನ್ನು ಅರಮನೆಗೆ ಕರೆಯಿಸಿಕೊಂಡು ಮಾತಾಡಿ ನಂತರ ನಿರ್ಧಾರ ತೆಗೆದುಕೊಳ್ಳಲಾಗುವುದು. ಕಾಡಿನ ರಕ್ಷಕರಾದ ಅವರು ಈ ನಾಡಿನ ರಕ್ಷಕರೂ ಹೌದು. ಅವರೊಡನೆ ರಾಜ್ಯಾಡಳಿತದ ಶತ್ರುತ್ವ ಬೇಡ. ಸೈನ್ಯವು ಹಿಂದಕ್ಕೆ ಬರಲಿ. ವಯನದ ಮುಖಂಡರೊಡನೆ ಮಾತುಕತೆಗೆ ಸಿದ್ಧತೆ ಮಾಡುವ ಆಲೋಚನೆ ಮತ್ತು ವ್ಯವಸ್ಥೆಯನ್ನು ಮಂತ್ರಿಗಳು ಮಾಡುತ್ತಾರೆ.' ಎಂಬ ಸಂದೇಶವನ್ನು ಹೊತ್ತು ತರುತ್ತಿದ್ದ ರಾಯಸದವನು ಹಿಂದಕ್ಕೆ ಓಡಿ ಬರುತ್ತಿರುವ ಸೈನಿಕರನ್ನು ಕಂಡ.

'ವಯನದವರು ನಮ್ಮ ಮೇಲೆ ಬಿದ್ದರು.' ಎಂಬ ಸುದ್ಧಿ ಅವಿಮುಕ್ತದ ರಾಜಾಸ್ಥಾನವನ್ನು ತಲುಪಿತು.

*

ಇಡೀ ರಾತ್ರಿ ಯಾರೂ ನಿದ್ರೆ ಮಾಡಿರದಿದ್ದರೂ, ಶಂಬರ ವದೀರಜ್ಜನ ಪಕ್ಕದಲ್ಲಿಯೇ ಕುಳಿತುಕೊಂಡು ಸಣ್ಣಗೆ ತೂಕಡಿಸಿದ್ದ.

## ಅಧ್ಯಾಯ: 09 ಜಯ ಜಯ ಢುಂಢಿ ಗಣಪತಿ

ಕತ್ತಲಿನ ಕೋಣೆಯಲ್ಲಿದ್ದುದರಿಂದ ಬೆಳಗಾದರೂ ತಿಳಿಯುತ್ತಿರಲಿಲ್ಲ. ಹೊರಗಿನಿಂದ ಬೀಗ ತೆಗೆಯುವ ಮತ್ತು ಚಿಲಕಗಳನ್ನು ತೆಗೆಯುವ ಸದ್ದು ಕೇಳಿದರಿಂದ ಎಲ್ಲರೂ ಅತ್ತ ನೋಡಿದರು. ಸೂರ್ಯನ ಬೆಳಕು ಒಳಗೆ ನುಗ್ಗಿತು. ಅದರಲ್ಲಿ ಆರು ಭಟರ ಆಕೃತಿಗಳು ಕಂಡವು. ಯದು ಮೇಲೆದ್ದು ಮುಂದೆ ನಡೆದ. ಆ ಭಟರ ಹಿಂದೆಯೇ ಸಾಕಷ್ಟು ಸಂಖ್ಯೆಯಲ್ಲಿ ಭಟರು ಆಯುಧಗಳನ್ನು ಹಿಡಿದು ನಿಂತಿದ್ದರು.

ಕಟ್ಟುಗಳನ್ನು ಬಿಚ್ಚಿಕೊಂಡಿರುವುದನ್ನು ನೋಡಿ ಮುಖಂಡರಲ್ಲೊಬ್ಬರು, "ನೀವು ಬಿಡಿಸಿಕೊಳ್ಳುವಷ್ಟು ಸರಳವಾಗಿ ಬಂಧಿಸಿದ್ದರೆ?" ಎಂದು ತಮ್ಮ ಅಸಹನೆಯನ್ನು ವ್ಯಕ್ತಪಡಿಸಿದರು.

"ಇಲ್ಲ, ನಾವು ಎಂತಹ ಬಂಧನವಾದರೂ ಬಿಡಿಸಿಕೊಳ್ಳಬಲ್ಲ ಬಲವುಳ್ಳವರು." ಎಂದ ಯದು.

"ಈಗ ನಿಮಗೇ ಎಲ್ಲಾ ತಿಳಿಯುತ್ತದೆ." ಎಂದ ಅವರು ತಮ್ಮ ಭಟರತ್ತ ತಿರುಗಿ, "ಇವರನ್ನು ಸ್ಥಾನಕ್ಕೆ ಕರೆದುಕೊಂಡು ಬನ್ನಿ." ಎಂದರು.

ವದೀರಜ್ಜನ ಹೊತ್ತು ಬರುವವರನ್ನೂ ಒಳಗೊಂಡು ಈಟಿಗಳ, ಖಡ್ಗಗಳ ಮತ್ತು ಹುರಿಗಿಟ್ಟು ಎಳೆದಿದ್ದ ಬಾಣಗಳ ತುದಿಯ ಆಗ್ರಹದಲ್ಲಿ ಹೊರಗೆ ಕರೆದುಕೊಂಡು ಬಂದರು.

ಶಂಬರ ಸುತ್ತಲೂ ನೋಡಿದ. ಸುಮಾರು ಮುನ್ನೂರು ಜನರಿರಬಹುದಾದ ಗಣ. ಎಲ್ಲರೂ ಆಯುಧಧಾರಿಗಳಾಗಿದ್ದಾರೆ. ತಾವು ಏನೇ ಮಾಡಿದರೂ ತಪ್ಪಿಸಿಕೊಳ್ಳಲು ಅಸಾಧ್ಯವೆನಿಸುವಷ್ಟು ಜಟಿಲವಾಗಿ ಸನ್ನಿವೇಶವು ತೋರುತ್ತಿದೆ. ಎತ್ತರವಾದ ಪೌಳಿಯು ಸುತ್ತಲಿದ್ದು, ಅದರ ಮೇಲೆ ಧನುರ್ಧಾರಿಗಳಿದ್ದಾರೆ.

ಕೆಳಗೆ ಒಂದು ಮಟ್ಟದ ಎತ್ತರದ ಗೋಡೆಯ ಮೇಲೆ ಈಟಿಯನ್ನು ಹಿಡಿದ ಭಟರಿದ್ದಾರೆ. ಕೆಳಗೆ ನೆಲದ ಮಟ್ಟದಲ್ಲಿ ಖಡ್ಗವನ್ನು ಹಿಡಿದಿರುವ ಭಟರಿದ್ದಾರೆ. ಗುಡಿಸಲುಗಳಿಂದ ಹೊರಗೆ ಬಂದಿರುವ ಹೆಂಗಸರು ಮತ್ತು ಮಕ್ಕಳು ಹಾಗೂ ಕೆಲವು ಪುರೋಹಿತರು ನೋಡುತ್ತಿದ್ದಾರೆ.

ಮುಂದೆ ಎತ್ತರವಾದ ವೇದಿಕೆಯ ಮೇಲೆ ವಿತೃಪ ಮಂದಾಸನದಲ್ಲಿ ವಿರಾಜಿಸಿದ್ದನು. ಅವನ ಪಕ್ಕದಲ್ಲಿ ಕೆಲವು ಮುಖಂಡರು ಇತರ ಆಸನಗಳಲ್ಲಿ ಮಂಡಿಸಿದ್ದರು.

ಎಲ್ಲರನ್ನೂ ಎದುರಿಗೆ ನಿಲ್ಲಿಸಿದಾದ ಮೇಲೆ ವಿತೃಪ, "ನಿನ್ನೆ ಇವರನ್ನು ಬಂಧಿಸಿದ ನಮ್ಮ ಗಣದವರು ಅವಿಮುಕ್ತದಿಂದ ಇನ್ನೂ ಹಿಂದಿರುಗಿಲ್ಲ. ಅವರು ಬರಲೆಂದು ಕಾದಿದ್ದೆ. ಸಂಜೆ ಆಗಿರುವ ಸುರಪಾನದ ನಿಶೆಯೇರಿ, ಬೆಳಕಾಗಿರುವುದು ಅವರಿಗೆ ಇನ್ನೂ ತಿಳಿದಿಲ್ಲವೆನಿಸುತ್ತದೆ. ಅಥವಾ, ಈ ಸಮಯವನ್ನು ಉಪಯೋಗಿಸಿಕೊಂಡು ತಮ್ಮ ಸ್ನೇಹಿತರನ್ನೋ ಅಥವಾ ಬಂಧುಗಳನ್ನು ನೋಡಲು ಹೋಗಿರಬಹುದು." ಎಂದು ಗಂಟಲು ಸರಿಮಾಡಿಕೊಂಡು ಹೇಳಿದ. "ಹಾಗಾಗಿ, ಇನ್ನು ತಡ ಮಾಡುವುದು ಬೇಡ. ಈ ಅನಾರ್ಯ ವಿನಾಯಕರ ಗುಂಪು ಹೆಚ್ಚು ಸಮಯವಿದ್ದಷ್ಟೂ ತೊಂದರೆ. ಇವರನ್ನು ಕೊಲ್ಲುವುದು ಸಮಸ್ಯೆಯಲ್ಲ. ಆದರೆ, ಈ ಬ್ರಾಹ್ಮಣನನ್ನೇನು ಮಾಡುವುದು? ಬ್ರಾಹ್ಮಣನನ್ನು ಕೊಲ್ಲುವ ಹಾಗಿಲ್ಲ."

ಗಣ ಮುಖಂಡರು ತಮಗೆ ತೋಚಿದಂತೆ ಸಲಹೆಗಳನ್ನು ನೀಡಿದರು. ಅವುಗಳು ಯಾವುವೂ ವಿತೃಪನಿಗೆ ಸಮ್ಮತಿಯಾಗಲಿಲ್ಲ.

"ಇರಲಿ, ಈತನನ್ನು ಇಲ್ಲಿಯೇ ಇರಿಸಿಕೊಳ್ಳೋಣ. ನಂತರ ಮುಂದೆ ನೋಡೋಣ. ಆದರೆ, ವದೀರನಿಗೆ ಅತ್ಯಂತ ಕ್ರೂರವಾದ ಶಿಕ್ಷೆಯನ್ನು ನನ್ನ ಕೈಯಾರೆ ನಾನು ನೀಡಬೇಕು. ಇನ್ನು ಉಳಿದವರಿಗೂ ಘೋರವಾದ ಶಿಕ್ಷೆಯಾಗಲಿ." ಎಂದ ವಿತೃಪ ಶಿಕ್ಷೆಯ ಸಲಹೆಗಾಗಿ ಇತರರ ಕಡೆ ನೋಡಿದ.

ಇದ್ದಕ್ಕಿದ್ದಂತೆ ಜೋರಾಗಿ ಕಿರುಚುವ ಸದ್ದುಗಳು ಕೇಳುವುದರ ಜೊತೆಗೆ ಪೌಳಿಯ ಮೇಲ್ಭಾಗದಲ್ಲಿ ನಿಂತಿರುವ ಧನುರ್ಧಾರಿಗಳು ಶರಾಘಾತಕ್ಕೆ ಸಿಕ್ಕು ಕೆಳಕ್ಕೆ ಬಿದ್ದರು. ಮುಖ್ಯದ್ವಾರವು ಒತ್ತಾಯಪೂರ್ವಕವಾಗಿ ತೆರೆದುಕೊಂಡಿತು. ಮೊದಲು ಒಳಗೆ ಬಂದ ಕುದುರೆಗಳ ಮೇಲೆ ಹಿಂದಿನ ದಿನ ಅವಿಮುಕ್ತಕ್ಕೆ ಹೋಗಿದ್ದ ಮಯೂರಗಣದ ಸದಸ್ಯರ ರಕ್ತಸಿಕ್ತ ಹೆಣಗಳು ಬೋರಲಾಗಿ ಬಿದ್ದಿದ್ದವು.

"ಜಯ ಜಯ ಢುಂಢಿ, ಜಯ ಜಯ ಗಣಪತಿ......" ಎಂಬ ಘೋಷಣೆಗಳನ್ನು ಕೂಗುತ್ತಾ ಆಯುಧ ಮತ್ತು ಕವಚಧಾರಿಗಳಾಗಿರುವ ಅಶ್ವಾರೋಹಿಗಳು ಒಳಕ್ಕೆ ನುಗ್ಗಿದರು. ನೋಡುನೋಡುತ್ತಿದ್ದಂತೆ ಹಿಂದೆ ಹಿಂದೆಯೇ ನೂರಾರು ಆಯುಧಧಾರಿಗಳು ಒಳಕ್ಕೆ ನುಗ್ಗಿದರು. ಭೀಕರ ಹೋರಾಟ ಆರಂಭವಾಗಿತ್ತು.

ಹಾಗೆ ಬಂದವರ ಒಂದು ತಂಡ ನೇರವಾಗಿ ವದೀರಜ್ಜನ ತಂಡದ ಬಳಿಗೆ ಬಂದು ಕುಶಿಕ, ಯದು, ಶಂಬರ ಮತ್ತು ಇತರರಿಗೆಲ್ಲಾ ಆಯುಧಗಳನ್ನು ಒದಗಿಸಿತ್ತು. "ಶಕಟವನ್ನು ಇಲ್ಲಿ ತಾ." ಎಂದು ಕೂಗುತ್ತಾ ಓರ್ವ ಕುದುರೆಯ ಮೇಲೆ ಖಡ್ಗವನ್ನು ಹಿಡಿದುಕೊಂಡು ಅಡ್ಡ ಬಂದವರೊಡನೆ ಭೀಕರವಾಗಿ ಹೋರಾಡುತ್ತಾ ವದೀರಜ್ಜನ ಕಾವಲಿಗೆಂಬಂತೆ ಬಂದ. ಇಬ್ಬರು ಬಂಡಿಯನ್ನು ಹಿಡಿದುಕೊಂಡು ಒಳಗೆ ನುಗ್ಗಿದ್ದರು. ಅವರಿಬ್ಬರ ರಕ್ಷಣೆಗೆ ನಾಲ್ವರು ಖಡ್ಗಧಾರಿಗಳು ಬರುತ್ತಿದ್ದರು. ಬುಟ್ಟಿಯಲ್ಲಿದ್ದ ವದೀರಜ್ಜನನ್ನು ಬಂಡಿಯಲ್ಲಿ ಇರಿಸಿದರು. "ಶಕಟವನ್ನು ಹೊರಗೆ ಒಯ್ಯಿರಿ. ರಥದಲ್ಲಿ ಅಂತರ್ವೇದಿಯ ದಾರಿ ಹಿಡಿಯಿರಿ." ಎಂದು ಕೂಗಿದ ಅಶ್ವಾರೂಢ ತಂಡದ ಇತರರ ರಕ್ಷಣೆಗೆ ಮುಂದಾದರು. ಯಾಜ್ಞಿಕ, ಶಕಧೂಮ ಮತ್ತು

ಇತರ ಹೋರಾಡದವರನ್ನು ಎಚ್ಚರಿಕೆಯಿಂದ ತಂಡವೊಂದು ರಕ್ಷಿಸಿದರೆ, ಕುಶಿಕ ಮತ್ತು ಯದು ವೀರಾವೇಶದಿಂದ ಹೋರಾಡುತ್ತಿದ್ದರು. ಅವರ ಗುರಿ ವಿತೃಪನಾಗಿದ್ದ. ಮಯೂರ ಗಣದವರನ್ನು ಸದೆ ಬಡಿಯುತ್ತಾ ಯದು ಮತ್ತು ಕುಶಿಕ ವೇದಿಕೆಯನ್ನೇರಿದ್ದರು. ಯದುವು ವಿತೃಪನನ್ನು ಕೊಂದರೆ, ಕುಶಿಕ ಅಲ್ಲಿದ್ದ ಇತರ ಮುಖಂಡರನ್ನು ಕೊಲ್ಲುತ್ತಾ ಬಂದ.

ಯದುವಿಗೆ ಹಿಂದಿನ ದಿನ ಕೋಲಿನಿಂದ ಹೊಡೆದ ಬ್ರಾಹ್ಮಣ ಹುಡುಗ ಎದುರಾದ. ಯದುವು ಅವನನ್ನು ಕೊಲ್ಲಲು ಹೋದಾಗ, "ನನ್ನ ಕೊಲ್ಲಬೇಡ. ಬ್ರಾಹ್ಮಣ ಹತ್ಯೆಯಿಂದ ಬ್ರಹ್ಮಹತ್ಯಾದೋಷ ಸಂಭವಿಸುತ್ತದೆ." ಎಂದು ಹೆದರುತ್ತಿದ್ದರೂ ಹೆದರಿಸುವಂತೆ ಹೇಳಿದ.

"ನಾನು ಅನಾರ್ಯ. ಇಂಥಾ ದೋಷಗಳು ಯಾವುವೂ ನನ್ನ ತಗುಲುವುದಿಲ್ಲ." ಎಂದು ಯದು ಅವನ ಎದೆಗೆ ಖಡ್ಗದಿಂದ ತಿವಿದ.

ವಿತೃಪ ನೆಲಕ್ಕೆ ಬಿದ್ದ ಕೂಡಲೇ ಮಯೂರ ಗಣ ಅಲ್ಲಿಂದ ಪಲಾಯನ ಮಾಡಿತು. ಹೆಂಗಸರು, ಮಕ್ಕಳು, ವೃದ್ಧರು ಮತ್ತು ಋಷಿಗಳು ಗೋಳಾಡುತ್ತಾ ಅಲ್ಲಿಯೇ ಉಳಿದಿದ್ದರು.

ಶಂಬರ ತನ್ನ ಉಳಿಸಿಕೊಂಡು ಹೋಗುವ ಭರದಲ್ಲಿ ಒಂದಷ್ಟು ರಕ್ತಪಾತಕ್ಕೆ ಕಾರಣನಾಗಿದ್ದ. ಆದರೆ, ಕುಶಿಕ ಮತ್ತು ಯದುವಿನಂತೆ ಯಾರನ್ನೂ ಕೊಲ್ಲುವ ಗುರಿಯನ್ನು ಅವನು ಹೊಂದಿರಲಿಲ್ಲ.

ಯದು ಪೌಳಿಯನ್ನೇರಿ, ದ್ವಾರದ ಮೇಲೆ ಹಾರಾಡುತ್ತಿದ್ದ ಮಯೂರ ಧ್ವಜವನ್ನು ಕಿತ್ತು ಕೆಳಕ್ಕೆಸೆದ.

"ಜಯ ಜಯ ಢುಂಢಿ, ಜಯ ಜಯ ಗಣಪತಿ...." ಎಂದು ಕೂಗುತ್ತಾ ಎಲ್ಲರೂ ಕುಣಿದಾಡಿದರು. ಶಂಬರ ಮತ್ತು ಯಾಜ್ಞಿಕರಿಬ್ಬರೂ ಅದನ್ನು ಕೇವಲ ಸಾಕ್ಷಿಗಳಾಗಿ ಕೇಳಿದರು.

ಮಯೂರ ಗಣದ ಪಾಳಯ ಧ್ವಂಸವಾದ ಮೇಲೆ ಸ್ವಲ್ಪದೂರದಲ್ಲಿ ರಥದಲ್ಲಿ ವದೀರಜ್ಜನ ಹೊತ್ತು ಕಾಯುತ್ತಿದ್ದ ತಂಡದ ಬಳಿಗೆ ಎಲ್ಲರೂ ಬಂದರು.

ಯದು ಮತ್ತು ಕುಶಿಕ ಅವರಲ್ಲಿದ್ದ ಕೆಲವರನ್ನು ಗುರುತಿಸಿ ಆನಂದದಿಂದ ಅಪ್ಪಿಕೊಂಡರು. ಅವರಲ್ಲಿ ಒಬ್ಬ ಕುದುರೆಯಿಂದಿಳಿದು ಯಾಜ್ಞಿಕನ ಬಳಿಗೆ ಬಂದ.

"ನಾನು ಸಮ್ಮಿತ. ನೀವು ವದೀರಜ್ಜನ ತಂಡದೊಂದಿಗೆ ಜಹ್ನೂವಸ ಕಾಡಿನ ಮಾರ್ಗವಾಗಿ ಬರುತ್ತಿದ್ದಾಗ ನಿಮಗೆ ಎದುರಾದ ಸಾರ್ಥದ ಪಣಿಗಳ ಗುಂಪಿನಲ್ಲಿದ್ದೆ ನಾನು. ನಮ್ಮ ಯಜಮಾನ ದೇಶೋರಾಮ ಸ್ವರ್ಣಾಭರಣಗಳ ವ್ಯಾಪಾರಿ. ನೀವು ನಮ್ಮ ಪಣಿಗಳ ತಂಡಕ್ಕೆ ಕಾಡಿನಲ್ಲಿ ವಿಶ್ರಾಂತಿಗೃಹದಲ್ಲಿ ತಂಗಲು ಹೇಳಿದ್ದು. ನಾವು ರಾತ್ರಿ ಅಲ್ಲಿಯೇ ಉಳಿದುಕೊಳ್ಳಲು ನಿರ್ಧರಿಸಿದೆವು."

*

ಸಂಜೆ ಸೂರ್ಯ ಮುಳುಗುವ ವೇಳೆಯಲ್ಲಿ ಸುವಾಸ್ತುವಿನಲ್ಲಿ ಅಮ್ಮಿತ ಅಡುಗೆ ಒಲೆಗೆ ಅಗತ್ಯವಿರುವ ಸೌದೆಯನ್ನು ಮನೆಯ ಮುಂದೆ ಸೀಳಿ ಹಾಕುತ್ತಿದ್ದಾಗ ಮನೆಯ ಮುಂದೆ ಕುದುರೆಗಳು ಮತ್ತು ಸಾಮಾನುಗಳು ತುಂಬಿರುವ ಎತ್ತಿನ ಬಂಡಿಗಳು ಬಂದು ನಿಂತವು.

ಅಮ್ಮಿತ ಮಾಡುತ್ತಿದ್ದ ಕೆಲಸವನ್ನು ನಿಲ್ಲಿಸಿ, ದ್ವಾರದ ಬಳಿಗೆ ಬಂದು ಬಂದವರನ್ನು ನೋಡಿದ. ಗಾಡಿಯಿಂದ ಇಳಿದವನೊಬ್ಬ ಮುಂದೆ ಬಂದು, "ನಾವು ಅವಿಮುಕ್ತದಿಂದ ಬರುತ್ತಿದ್ದೇವೆ. ದೇಶೋರಾಮನ ಸಾರ್ಥವಿದು. ದಶಾರ್ಣದ ರಾಜಧಾನಿ ವಿದಿಶಾಗೆ ಹೋಗುತ್ತಿದ್ದೇವೆ. ಇಂದು ರಾತ್ರಿ ಇಲ್ಲಿ ತಂಗಲು ಮತ್ತು ಊಟಕ್ಕೆ ವ್ಯವಸ್ಥೆ ಇದೆಯೋ?" ಎಂದು ಕೇಳಿದ.

ಅಮ್ಮಿತನೂ ಅವಿಮುಕ್ತದವನಾದ್ದರಿಂದ ದೇಶೋರಾಮನ ಬಗ್ಗೆ ಕೇಳಿದ್ದ. ಆದರೆ, ತಾನು ಅದೇ ಸ್ಥಳದವನೆಂದು ತಿಳಿಸದೇ, "ಖಂಡಿತವಾಗಿ. ಆಗಮಿಸಿ." ಎಂದು ಹೇಳಿ, ಕಂದಕಕ್ಕೆ ಎತ್ತಿ ಕಟ್ಟಿದ್ದ ಕಟ್ಟಿಗೆಯ ಸೇತುವೆಯನ್ನು ಇಳಿಬಿಟ್ಟ.

"ಶಕಟಗಳನ್ನು ನಿಲ್ಲಿಸಿ. ಇಂದು ರಾತ್ರಿ ಇಲ್ಲಿಯೇ ತಂಗುವುದು." ಎಂದ ಆ ಮುಖ್ಯಸ್ಥ ಸಾರ್ಥದ ನಾಯಕನಾದ ದೇಶೋರಾಮನ ಬಳಿಗೆ ಅಂದಿನ ವ್ಯವಸ್ಥೆಯ ಬಗ್ಗೆ ಮಾತಾಡಲು ಹೋದ.

ಆಳುಗಳು ಬಂಡಿಗಳನ್ನು ನಿಲ್ಲಿಸಿ, ಕಾವಲಿನ ಭಟರು ತಮ್ಮ ಕುದುರೆಗಳಿಂದ ಕೆಳಗೆ ಇಳಿದು, ಸುವಾಸ್ತುವಿನ ಪೌಳಿಯ ಒಳಗೆ ನಡೆಯತೊಡಗಿದರು.

ಅಮ್ಮಿತ ಹಾಗೆ ಬರುತ್ತಿದ್ದ ಭಟರಲ್ಲಿ ಒಬ್ಬನ ಗುರುತಿಸಿದ. "ಅರೆ! ಸಮ್ಮಿತ." ಉದ್ಗರಿಸಲು ಹೋದವನು, ಸಮ್ಮಿತ ಕಣ್ಣು ಮಿಟುಕಿಸಿ ಸುಮ್ಮನಿರಲು ಸೂಚಿಸಿದ.

ಎಲ್ಲರೂ ಕುದುರೆಗಳನ್ನು ಗೂಟಗಳಿಗೆ ಕಟ್ಟುತ್ತಿದ್ದಾಗ ಅಮ್ಮಿತ ಮನೆಯ ಹಿಂದೆ ಬರುವಂತೆ ಸಮ್ಮಿತನಿಗೆ ಸೂಚಿಸಿ, ತಾನತ್ತ ನಡೆದ.

ಸಮ್ಮಿತ ತನ್ನ ಕುದುರೆಯನ್ನು ಕಟ್ಟಿ ಮನೆಯ ಹಿಂದೆ ನಡೆದಾಗ ಅಮ್ಮಿತ ಅವನನ್ನು, "ಅರೆ, ಸಮ್ಮಿತ..." ಎಂದು ಆನಂದದಿಂದ ತಬ್ಬಿಕೊಂಡ. ಅಷ್ಟೇ ಅಕ್ಕರೆಯಿಂದ ಅವನನ್ನು ತಬ್ಬಿಕೊಂಡ ಸಮ್ಮಿತ, "ರತ್ನಿಯ ಬಿಡುಗಡೆಯಿಂದ ಬಂದ ನೀನು ಇಲ್ಲಿ ಆನಂದವಾಗಿದ್ದೀಯ ಎಂದು ತೋರುತ್ತದೆ." ಎಂದ.

"ಖಂಡಿತವಾಗಿ. ಈ ಮನೆಯ ಯಜಮಾನ ನನ್ನನ್ನು ಅನುಜನೆಂದು ಕರೆಯುತ್ತಾನೆ. ನಾನು ಅವನನ್ನು ಅಗ್ರಜನೆನ್ನುತ್ತೇನೆ. ನಿಜವಾದ ಸೋದರರು ಹಾಗೆ ಇರುತ್ತಾರೋ ಇಲ್ಲವೋ, ಆದರೆ ಇವರ ಜೊತೆಯಲ್ಲಿ ನನಗೆ ಅಂತಹ ಭ್ರಾತೃತ್ವವಿದೆ." ಎಂದ ಅಮ್ಮಿತ.

"ಯಾಜ್ಞಿಕರೆಂದರೆ ಅವರೇನು?" ಸಮ್ಮಿತ ಕೇಳಿದ.

"ಅವರಲ್ಲ. ಆದರೆ, ಯಾಜ್ಞಿಕ ನಿನಗೆ ಹೇಗೆ ಪರಿಚಯ?"

"ನಾವು ಅರಣ್ಯದೊಳಕ್ಕೆ ಪ್ರವೇಶಿಸುವಾಗ ಅವರು ಅರಣ್ಯದಿಂದ ಅವಿಮುಕ್ತಕ್ಕೆ ಹೊರಡುತ್ತಿದ್ದರು. ಅವರು ನಮ್ಮ ವಯನದ ಯದು ಮತ್ತು ಕುಶಿಕರೊಂದಿಗೆ ವದೀರಜ್ಜನನ್ನು ಬುಟ್ಟಿಯಲ್ಲಿಟ್ಟುಕೊಂಡು ಅವಿಮುಕ್ತ, ಚಿತ್ರಕೂಟದ ಮಾರ್ಗವಾಗಿ ಅಂತರ್ವೇದಿಗೆ ಹೋಗುತ್ತಿದ್ದಾರೆ."

"ಹೌದೇ? ಹಾಗಾದರೆ, ಯಾಜ್ಞಿಕ ನನ್ನ ಅಗ್ರಜನ ಬ್ರಾಹ್ಮಣ ಸ್ನೇಹಿತ. ಅರಣ್ಯದಲ್ಲಿ ಅವರ ಪರಿಚಯವಾಗಿದ್ದಿರಬೇಕು. ವದೀರಜ್ಜ ಹೇಗಿದ್ದಾರೆ?" ಅಮ್ಮಿತ ಅಭಿಮಾನದಿಂದ ಕೇಳಿದ.

"ತೀರಾ ಸೊರಗಿದ್ದಾರೆ, ಹಣ್ಣಾಗಿದ್ದಾರೆ ಎನ್ನಿಸಿತು. ಅವರನ್ನು ಅಷ್ಟು ದೂರ ಕಾಡಿನ ಮಾರ್ಗವಾಗಿ ಬುಟ್ಟಿಯಲ್ಲಿಟ್ಟುಕೊಂಡು ಹೋಗುವುದು ತೀರಾ ಆಯಾಸಕಾರಕ ಎನ್ನಿಸಿತು. ಜೊತೆಗೆ, ಅಲ್ಲಿ ಗಣನಾಯಕ ಢುಂಢಿಯ ಸ್ಥಿತಿ ಹೇಗಿದೆಯೋ ಏನೋ. ಇವರು ಬೇಗನೆ ರಥದಲ್ಲಿ ಅಥವಾ ಕುದುರೆಯ ಮೇಲೆ ಪ್ರಯಾಣ ಮಾಡಿದ್ದರೆ ಸೂಕ್ತವಾಗಿರುತ್ತಿತ್ತು." ಸಮ್ಮಿತ ಹೇಳಿದ.

"ಹಾಗಾದರೆ..." ಅಮ್ಮಿತ ಆಲೋಚಿಸುತ್ತಾ, "ನಮ್ಮ ವದೀರಜ್ಜನಿಗೆ ಏನಾದರೂ ಒಂದು ನಮ್ಮ ಕಡೆಯಿಂದ ವ್ಯವಸ್ಥೆ ಮಾಡಲು ಸಾಧ್ಯವೇನೋ ನೋಡಬೇಕಲ್ಲಾ? ಹೂಂ, ನಾನು ಈಗ ಈ ಸಾರ್ಥದ ಉಪಚಾರದ ಬಗ್ಗೆ ನೋಡುತ್ತೇನೆ. ಅಷ್ಟರಲ್ಲಿ ನಾನು ನಿನಗೆ ಸೂಚನೆ ಕೊಡುತ್ತೇನೆ. ನೀನು ಬಾ. ಏನಾದರೂ ಒಂದು ವ್ಯವಸ್ಥೆ ಮಾಡೋಣ." ಎಂದ ಅಮ್ಮಿತ ದೇಶೋರಾಮನ ಸಾರ್ಥದ ತಂಗುವಿಕೆಗೆ ಸೂಕ್ತವಾದ ವ್ಯವಸ್ಥೆಯನ್ನು ಮಾಡಲು ಅತ್ತ ಹೋದ.

ದೇಶೋರಾಮನ ಸಾರ್ಥದಲ್ಲಿಯೇ ಅಡುಗೆ ಮಾಡುವವರು ಇದ್ದರು ಹಾಗೂ ಅಡುಗೆಗೆ ಅಗತ್ಯವಿರುವ ಎಲ್ಲಾ ಸಾಮಗ್ರಿಗಳೂ ಇದ್ದವು. ಹಾಗಾಗಿ, ಇವರಿಂದ ದನದ ಮತ್ತು ಎಳೆಗರುವಿನ ಮಾಂಸವನ್ನಷ್ಟೇ ಬಯಸಿದರು. ಹಾಗೂ ದೇಶೋರಾಮನಿಗೆ ಮತ್ತು ಅವನ ಆಪ್ತ ಸಹಾಯಕರಿಗೆ ಮನೆಯೊಳಗೆ ಮಲಗಿಕೊಳ್ಳಲು ಮತ್ತು ಸ್ವರ್ಣಾಭರಣಗಳನ್ನು ಇಟ್ಟುಕೊಳ್ಳಲು ಅವಕಾಶ ಕೇಳಿದರು. ಅವರ ಕೋರಿಕೆಗೆ ಸ್ಪಂದಿಸಿದ ಅಮ್ಮಿತ, ಅವರಿಗೆ ಅಗತ್ಯವಿರುವುದನ್ನೆಲ್ಲಾ ಒದಗಿಸಿ, ಸಮ್ಮಿತನನ್ನು ಹಿಂದೆ ದನದ ಕೊಟ್ಟಿಗೆಯಲ್ಲಿ ಸಂಧಿಸಿದ.

"ಈ ದೇಶೋರಾಮ ಅನಾರ್ಯರ ವಿರೋಧಿ. ಜೊತೆಗೆ ವಯನದ ಅರಣ್ಯಕರ ಬಗ್ಗೆ ಒಳ್ಳೆಯ ಅಭಿಪ್ರಾಯವಿಲ್ಲ. ಹಾಗಾಗಿ ನಾವು ಗೆಳೆಯರೆಂದೂ, ವಯನದ ಅರಣ್ಯಕರ ಬೆಂಬಲಿಗರೆಂದೂ ಅವರಿಗೆ ತಿಳಿಯುವುದು ಬೇಡವೆಂದು ನಾನು ಅವರ ಎದುರು ಮಾತಾಡಲು ಇಚ್ಛಿಸಲಿಲ್ಲ." ಎಂದು ಸಮ್ಮಿತ ಹೇಳಿದ.

ಇಬ್ಬರೂ ವದೀರಜ್ಜನು ಬೇಗನೆ ಅಂತರ್ವೇದಿಯನ್ನು ತಲುಪಲು ಹೇಗೆ ಸಹಾಯ ಮಾಡಬಹುದೆಂದು ನಾನಾ ಬಗೆಯಲ್ಲಿ ಯೋಚಿಸಿದರು. ಕೊನೆಗೆ ಅವಿಮುಕ್ತದಲ್ಲಿರುವ ತಮ್ಮ ಗೆಳೆಯ ರಥಕಾರ ಬೇಲ, ಅವನೂ ಶೂದ್ರನಾಗಿರುವುದರಿಂದ, ಅವನ ಸಹಾಯ ಪಡೆಯುವ ಸಾಧ್ಯತೆಗಳ ಬಗ್ಗೆ ಯೋಚಿಸಿದರು. ಆದರೆ ಇಲ್ಲಿಂದ ಹೋಗುವುದು ಹೇಗೆ? ಕಾವಲು ಭಟನಾಗಿ ಬಂದಿರುವ ಸಮ್ಮಿತ ಹಾಗೆಲ್ಲಾ ಬೇರೆ ಕೆಲಸದ ಮೇಲೆ ಹೋಗುವಂತಿಲ್ಲ. ದೇಶೋರಾಮನು ಮನಸ್ಸು ಮಾಡಿದರೆ ಮಾತ್ರ ಕಳುಹಿಸಬಹುದು.

ಅದಕ್ಕೂ ಒಂದು ಉಪಾಯ ಯೋಚಿಸಿದರು. ಒಂದು ಸಣ್ಣ ಸುಳ್ಳು, ಒಂದು ಸಣ್ಣ ನಾಟಕ. ಅದರಿಂದ ಒಂದು ದೊಡ್ಡ ಕೆಲಸ.

ಎಲ್ಲರೂ ವಿಶ್ರಮಿಸಿಕೊಳ್ಳುತ್ತಿದ್ದಾಗ ಇದ್ದಕ್ಕಿದ್ದಂತೆ ಅಮ್ಮಿತ ಮನೆಯೊಳಗಿಂದ ಹೊರಗೆ ಓಡಿಬಂದ.

"ದಯಮಾಡಿ ನನಗೆ ಸಹಾಯ ಮಾಡಿ. ಅವಿಮುಕ್ತದಲ್ಲಿ ನನ್ನ ತಾಯಿಗೆ ವೈದ್ಯ ಮಾಡಲು ಕೆಲವು ಗಿಡಮೂಲಿಕೆಗಳ ಅಗತ್ಯವಿತ್ತು. ಈ ಮಾರ್ಗವಾಗಿ ಹೋಗುವವರ ಮೂಲಕ ಕಳುಹಿಸಲು ಆಲೋಚಿಸಿದ್ದೆ. ಆದರೆ, ಈಗ ನನಗೆ ಸ್ವಪ್ನ ದರ್ಶನವಾಯಿತು. ಕೆಟ್ಟ ಶಕುನವೊಂದು ಹೆದರಿಸಿತು. ನೀವು ಇಲ್ಲಿರುವುದರಿಂದ ನನಗೆ ಏನೂ ಕೊಡುವುದು ಬೇಡ. ಬದಲಾಗಿ ನಾನೇ ನಿಮ್ಮ ಅಡುಗೆಗೆ ಎರಡು ಗೋವುಗಳನ್ನು ಮತ್ತು

ಮೇಕೆಗಳನ್ನು ನಿಮಗೆ ಕೊಡುತ್ತೇನೆ. ರಾತ್ರಿ ಈ ಕಾಡಿನಲ್ಲಿ ಕುದುರೆ ಸವಾರಿ ಮಾಡಿಕೊಂಡು ವೇಗವಾಗಿ ಹೋಗುವವರು ಯಾರಾದರೂ ಇದ್ದರೆ, ಈಗಲೇ ಹೋಗಿ, ಬೆಳಗಾಗುವುದರೊಳಗಾಗಿ ಬಂದು ಬಿಡಬಹುದು. ನಿಮ್ಮ ಪ್ರಯಾಣ ಮುಂದುವರಿಸಲು ಯಾವ ಅಡ್ಡಿಯೂ ಇರುವುದಿಲ್ಲ. ದಯಮಾಡಿ, ನನ್ನ ತಾಯಿಗೆ ಸಹಾಯ ಮಾಡಿ. ಅಲ್ಲಿ ನನ್ನ ಆ ಆರ್ಯಮಾತೆ ಎಷ್ಟು ಸಂಕಟ ಪಡುತ್ತಿರುವಳೋ." ಅಮ್ಮಿತ ರೋಧಿಸತೊಡಗಿದ.

"ಒಡೆಯರು ಒಪ್ಪಿದರೆ, ನಾನು ಹೋಗಿ ಬರುತ್ತೇನೆ. ನನಗೆ ಪರಿಚಯವಿರುವ ಈ ಕಾಡಿನಲ್ಲಿ ಮತ್ತು ಕತ್ತಲಿನಲ್ಲಿ ಕುದುರೆಯನ್ನು ನಡೆಸಲು ಬರುತ್ತದೆ." ಎಂದು ಎದ್ದು ನಿಂತ ಸಮ್ಮಿತ ಒಡೆಯನ ಆಜ್ಞೆಗಾಗಿ ದೇಶೋರಾಮನ ಕಡೆ ನೋಡುತ್ತಾ ನಿಂತ.

ದೇಶೋರಾಮ ತನ್ನ ಆಪ್ತ ಸಹಾಯಕರೊಂದಿಗೆ ಲಘುವಾಗಿ ಚರ್ಚಿಸಿ, ರಾತ್ರಿಯೇ ಹೋಗಿ ಬರುವುದರಿಂದ ತೊಂದರೆಯಾಗುವುದಿಲ್ಲವೆಂದು ತರ್ಕಿಸಿ ಸಮ್ಮತಿಸಿದ.

ಗಾಯಕ್ಕೆ ಉಪಚಾರ ಮಾಡುವಂತಹ ಕೆಲವು ಗಿಡಮೂಲಿಕೆಗಳನ್ನು ಒಂದು ಬಟ್ಟೆಯಲ್ಲಿ ಗಂಟುಕಟ್ಟಿ, ಸಮ್ಮಿತನ ಕೈಗಿತ್ತು, ಚೆನ್ನಾಗಿ ಉರಿಯುವ ದೊಂದಿಯನ್ನು, ಅದಕ್ಕೆ ಬೇಕಾಗುವ ಎಣ್ಣೆಯನ್ನೂ, ನೀರಿನ ಚೀಲವನ್ನೂ ಸಮ್ಮಿತನ ಕೈಗಿತ್ತು ಅಮ್ಮಿತ ಕಳುಹಿಸಿದನು.

ಕಾಡಿನಲ್ಲಿ ಉರಿಯುವ ದೊಂದಿಯನ್ನು ಕೈಯಲ್ಲಿ ಹಿಡಿದು ಖಡ್ಗಧಾರಿಯಾಗಿ ಸಮ್ಮಿತ ಕುದುರೆಯನ್ನೇರಿ ಹೋದ.

ಇಡೀ ರಾತ್ರಿ ಸಂಚರಿಸಿದ ಸಮ್ಮಿತ ಬೆಳಕಾಗುವ ಮುನ್ನವೇ ಅವಿಮುಕ್ತವನ್ನು ತಲುಪಿದ. ಇನ್ನೂ ಬೆಳಕು ಹರಿದಿಲ್ಲವಾದ್ದರಿಂದ, ಊರ ಹೆಬ್ಬಾಗಿಲಿನಲ್ಲಿಯೇ ಮರದ ಕೆಳಗೆ ಕುದುರೆಯನ್ನು ಕಟ್ಟಿ, ಸ್ವಲ್ಪ ಹೊತ್ತು ವಿಶ್ರಮಿಸಿಕೊಂಡು ವದೀರಜ್ಜನ ತಂಡವನ್ನು ನೋಡಲು ಆಲೋಚಿಸಿದ. ಅದರಂತೆ ಸ್ವಲ್ಪ ವಿರಮಿಸಿಕೊಳ್ಳಲು ಆಲೋಚಿಸಿದವನು ಆಯಾಸದಿಂದ ಗಾಢ ನಿದ್ರೆಗೆ ಜಾರಿಬಿಟ್ಟ. ಅವನಿಗೆ ಎಚ್ಚರವಾದಾಗ ಬಿಸಿಲೇರಿತ್ತು. ವದೀರಜ್ಜನ ತಂಡದ ಬಗ್ಗೆ ಕಾವಲು ಅಧಿಕಾರಿಗಳಲ್ಲಿ ವಿಚಾರಿಸಲು ಅವರು ಈಗಾಗಲೇ ಹೊರಟುಬಿಟ್ಟಿದ್ದಾರೆಂದು ತಿಳಿದು ಬಂತು.

ಸಮ್ಮಿತ ಕುದುರೆಗೆ ನೀರು ಕುಡಿಸಿ, ತಾನೂ ನದಿಯಲ್ಲಿ ಸ್ನಾನ ಮಾಡಿ, ನಿಧಾನವಾಗಿ ಆಲೋಚಿಸಿದ. ಸಾರ್ಥದ ಜೊತೆಗೆ ಹೋಗುವುದಕ್ಕಿಂತ ಈಗ ಕೊನೆಯ ಗಳಿಗೆಗಳನ್ನು ಎಣಿಸುತ್ತಿರುವ ಗಣಪತಿ ಢುಂಢಿಯನ್ನು ನೋಡಲು ಹೋಗುವುದೇ ಹೆಚ್ಚು ಸರಿ ಎನ್ನಿಸಿತು. ದೇಶೋರಾಮನ ಸಾರ್ಥವನ್ನು ತೊರೆಯುವ ಆಲೋಚನೆ ಮಾಡಿದೊಡನೆ ವದೀರಜ್ಜನ ತಂಡದೊಂದಿಗೆ ಸೇರುವ ಅವನ ನಿರ್ಧಾರ ಇನ್ನೂ ಗಟ್ಟಿಯಾಯಿತು.

ಅವಿಮುಕ್ತದಲ್ಲಿರುವ ರಥಕಾರ ಬೇಲನನ್ನು ನೋಡಲು ಹೋದ. ಊರ ಹೊರ ಅಂಚಿನ ಬೀದಿಯಲ್ಲಿರುವ ಮನೆಯಲ್ಲಿ ವಾಸವಿದ್ದ ಬೇಲ ಹಿಂದಿನ ದಿನವೇ ಹೊರಗೆಲ್ಲೋ ಹೋಗಿದ್ದ. ಎಲ್ಲಿ ಹೋಗಿದ್ದಾನೆಂದು ಅವನ ಸಹಾಯಕರಿಗೆ ಸರಿಯಾಗಿ ತಿಳಿದಿರಲಿಲ್ಲ. ಆದರೆ, ಇಂದು ಬಂದೇ ಬರುವರೆಂದು ಹೇಳಿದ್ದಾರೆಂದು ಮಾತ್ರ ತಿಳಿಸಿದ ಅವರು ತಮ್ಮ ರಥ ನಿರ್ಮಾಣ ಕಾರ್ಯವನ್ನು ಮುಂದುವರಿಸಿದರು. ತಾನು ರಥಕಾರ ಬೇಲನ ಪರಮಾಪ್ತ ಗೆಳೆಯ ಸಮ್ಮಿತನೆಂದೂ, ಬೇಲನು ಮರಳಿ ಬಂದಮೇಲೆ ತಾನೊಂದು ಅಶ್ವರಥವನ್ನು

ತೆಗೆದುಕೊಂಡು ಹೋಗುವ ಅಗತ್ಯವಿದೆಯೆಂದೂ, ಅದನ್ನು ಸಿದ್ಧಪಡಿಸಲು ಹೇಳಿ ಅವನಿಗಾಗಿ ಕಾಯುತ್ತಾ ಕುಳಿತ.

ಇಡೀ ದಿನ ಬಾರದ ಬೇಲ ಸಂಜೆಯ ಹೊತ್ತಿಗೆ ಮನೆಗೆ ಮರಳಿದ. ಗೆಳೆಯ ಸಮ್ಮಿತನ ಕೋರಿಕೆಯನ್ನು ಮನ್ನಿಸಿ, ಅವನೊಂದಿಗೆ ತಾನೂ ರಥದ ಸಮೇತವಾಗಿ ಢುಂಢಿಯನ್ನು ನೋಡಲು ಬರುವುದಾಗಿ ತಿಳಿಸಿದ. ಕಾಲುನಡಿಗೆಯಲ್ಲಿ ವದೀರಜ್ಜನ ತಂಡ ಹೋಗುತ್ತಿರುವುದರಿಂದ ಇನ್ನೂ ಎರಡು ದಿನಗಳು ಬೇಕಾಗುವುದೆಂದೂ, ಅಷ್ಟರಲ್ಲಿ ಚಿತ್ರಕೂಟದ ಮಾರ್ಗವನ್ನು ಹಿಡಿದಿರುವ ಅವರನ್ನು ಸಂಧಿಸಿ ರಥದಲ್ಲಿ ಕರೆದೊಯ್ಯಬಹುದೆಂದು ಬೇಲ ತರ್ಕಿಸಿದ. ತಮ್ಮ ಸಹಾಯಕರಿಗೆ ತಾವು ಹೋಗಬೇಕಾಗಿರುವ ರಥವನ್ನು ಮತ್ತು ಅಶ್ವಗಳನ್ನು, ಹಾಗೂ ಪ್ರಯಾಣಕ್ಕೆ ಅಗತ್ಯವಿರುವ ವಸ್ತುಗಳನ್ನು ಸಿದ್ಧಪಡಿಸಲು ತಿಳಿಸಿ ಮಾರುಕಟ್ಟೆಯ ಬೀದಿಗೆ ನಡೆದರು.

ಸಮ್ಮಿತನು ದೇಶೋರಾಮನ ಸಾರ್ಥವನ್ನು ಬಿಟ್ಟಿರುವುದರಿಂದ ಬಿಡುವಾಗಿ ಸಿಕ್ಕಿರುವ ಗೆಳೆಯನೊಂದಿಗೆ ಸುರೆಯನ್ನು ಸೇವಿಸುವ ಆಸೆ ಬೇಲನಿಗೆ. ಅದಕ್ಕೆಂದೇ ಇಬ್ಬರೂ ಪಾನಶಾಲೆಗೆ ನಡೆದರು. ಅಲ್ಲೋ ಗಣಿಕೆಯರ ನರ್ತನ. ಅದನ್ನು ನೋಡುವ ಪಾನಮತ್ತ ಪುರುಷರ ತಂಡ. ಇಬ್ಬರೂ ಸುರೆಯನ್ನು ಸೇವಿಸುತ್ತಾ ಗಣಿಕೆಯರನ್ನು ನೋಡಿ ಆನಂದಪಡುತ್ತಾ ಕುಳಿತಿದ್ದರು. ಆಗಲೇ ಅವರು ಕಂಡಿದ್ದು ಮಯೂರ ಗಣದ ಮುಖಂಡರನ್ನು ಮತ್ತು ಕೆಲವು ಭಟರನ್ನು. ಅವರು ತೀರಾ ಪಾನಮತ್ತರಾಗಿ ಗಣಿಕೆಯರನ್ನು ಎಳೆದಾಡುತ್ತಾ ಗಲಭೆಯೆಬ್ಬಿಸಿದರು. ಅವರನ್ನು ಬಿಡಿಸಲು ಹೋದ ಪಾನಶಾಲೆಯ ಪಾಲಕಭಟರೊಂದಿಗೆ ಜಗಳಕ್ಕಿಳಿದರು.

"ಇವತ್ತು ನಾವು ಸಂಪೂರ್ಣ ಆನಂದ ಪಡಬೇಕು. ನಾವು ಇಲ್ಲಿ ಸುರೆಯನ್ನು ಕುಡಿಯುತ್ತಿರುವುದು ನಮಗೆ ಬಹುಮಾನಿಸಿದ್ದರಿಂದ. ಯಾರೂ ನಮ್ಮನ್ನು ತಡೆಯಬಾರದು. ನಾವು ಯಾರು? ಮಯೂರ ಗಣದವರು. ಆರ್ಯ ವಿತೃಪನ ಗಣ ಮುಖಂಡರು. ವಯನದವರಲ್ಲ. ವಯನದ ಶೂದ್ರ ಅರಣ್ಯಕರಲ್ಲ." ಎಂದೊಬ್ಬ ಬಡಬಡಿಸಿದ.

"ಯಾರಾದರಾಗಲಿ, ಇಲ್ಲಿನ ವಾತಾವರಣಕ್ಕೆ ಭಂಗ ತರಕೂಡದು." ಎಂದು ಪಾನಶಾಲೆಯ ಪಾಲಕ ಭಟರು ಎಚ್ಚರಿಸಿದರು.

"ಹೇಯ್." ಮಯೂರ ಗಣದ ಮುಖಂಡನೊಬ್ಬ ಕೂಗಾಡಿದ.

"ನಾವು ಎಂಥವರು ಎಂದು ತಿಳಿಯದೆಯೇ ಮಾತಾಡುತ್ತಿದ್ದೀಯ. ಇವತ್ತೇ ವಯನದ ಶೂದ್ರರಿಗೆ ಸರಿಯಾಗಿ ಗತಿ ಕಾಣಿಸಿ ಬಂದಿದ್ದೇವೆ. ವದೀರನನ್ನು ಕತ್ತಲ ಕೋಣೆಗೆ ತಳ್ಳಿ ಬಂದಿದ್ದೇವೆ."

ಇದನ್ನು ಕೇಳಿದ ಸಮ್ಮಿತ ಮತ್ತು ಬೇಲ ಬೆಚ್ಚಿಬಿದ್ದರು. ಇಬ್ಬರೂ ಮಯೂರ ಗಣದವರ ಹತ್ತಿರ ನಡೆದು, ಪಾನಶಾಲೆಯ ಪಾಲಕಭಟರಿಗೇ ಜರಿಯುವಂತೆ ಮಾತಾಡಿ, ಉಪಾಯವಾಗಿ ಮತ್ತರಾಗಿದ್ದ ಅವರನ್ನು ಹೊರಗೆ ಕರೆತಂದರು. ಹಾಗೆ ಹೊರಗೆ ಬಂದ ಕೂಡಲೇ ಅವರ ಆಯುಧಗಳನ್ನು ವಶಪಡಿಸಿಕೊಂಡು, ಅವರನ್ನು ಹಿಂಸಿಸಿ ನಡೆದುದ್ದೇನೆಂದು ತಿಳಿದುಕೊಂಡರು. ನಂತರ ನಿರಾಯುಧರಾದ ಅವರನ್ನು ನಾರಿನ ಹಗ್ಗದಿಂದ ಹೆಡೆಮುರಿ ಕಟ್ಟಿ ಬೇಲನ ಮನೆಯಲ್ಲಿ ಒಗೆದರು. ನಂತರ ವಯನ ಹಾಗೂ ಸುತ್ತಮುತ್ತಲಿನ ಅರಣ್ಯಕರ ಗುಂಪುಗಳನ್ನು ಸಂಧಿಸಿ, ನಡೆದಿರುವುದನ್ನು ತಿಳಿಸಿ, ಎಲ್ಲರೂ ಒಟ್ಟಾಗಿ ಮಯೂರಗಣಕ್ಕೆ

ದಾಳಿಯಿಟ್ಟರು. ವದೀರಜ್ಜನ ಬಂಧಿಸಿದ ಪ್ರತಿಕಾರವಾಗಿ, ಮಯೂರ ಗಣದ ಆ ಮುಖಂಡರನ್ನು ಕೊಂದು ಅವರು ಏರಿ ಬಂದಿದ್ದ ಕುದುರೆಗಳ ಮೇಲೆಯೇ ಹಾಕಿ ಅವನ್ನು ಮುಂದೆ ನಡೆಸಿದ್ದರು.

ಮುಂದಿನದು ಮಿಂಚಿನ ವೇಗದಲ್ಲಿ ನಡೆದ ಕಾರ್ಯಾಚರಣೆ.

ಶಂಬರ ಮತ್ತು ಯಾಜ್ಞಿಕ ನಡೆದ ವಿಷಯವನ್ನು ಕೇಳಿ ರೋಮಾಂಚಿತರಾದರು. ಕುಶಿಕ, ಯದು ಮತ್ತು ವಯನದ ಇತರರು ತಮ್ಮ ಒಗ್ಗಟ್ಟಿನ ಬಲದ ಬಗ್ಗೆ ಸಂತೋಷ ಮತ್ತು ಅಭಿಮಾನದಿಂದ ಸಮ್ಮಿತ, ಬೇಲ ಮತ್ತು ಇತರ ಅರಣ್ಯಕರನ್ನು ಆಲಂಗಿಸಿ ಸಂಭ್ರಮಿಸಿದರು.

ವದೀರಜ್ಜನ ಹೊತ್ತ ರಥ ಮತ್ತು ಕುದುರೆಗಳನ್ನೇರಿದ ಶಂಬರ, ಯಾಜ್ಞಿಕ, ಶಕಧೂಮ ಹಾಗೂ ಇತರರು, ಕುಶಿಕಾದಿ ಭಟರೊಂದಿಗೆ ಅಶ್ವಾರೂಢರಾಗಿ ಅಂತರ್ವೇದಿಯತ್ತ ಇನ್ನೂ ಕ್ಷಿಪ್ರವಾಗಿ ಪ್ರಯಾಣ ಮುಂದುವರಿಸಿದರು.

## ಅಧ್ಯಾಯ : 10 ಪ್ರಣಯ ಪ್ರಳಯ ಪ್ರಣವ

ವದೀರಜ್ಜನ ತಂಡ ಅಂತರ್ವೇದಿಯನ್ನು ತಲುಪುವುದಕ್ಕೆ ಇನ್ನೂ ಸುಮಾರು ದೂರವಿದೆ ಎನ್ನುವಷ್ಟರಲ್ಲಿಯೇ ಸಂಜೆಯಾಗಿಬಿಟ್ಟಿತು. ಸಾಗಬೇಕಾದ ದಾರಿ ಬೆಟ್ಟಗಳ ನಡುವೆಯಾದ್ದರಿಂದ ಬೇಗ ಕತ್ತಲೂ ಕವಿದಂತಾಗಿ ಒಂದು ಪ್ರಶಸ್ತವಾದ ಕಣಿವೆಯಲ್ಲಿಯೇ ಬೀಡುಬಿಟ್ಟರು. ಅದು ಕಣಿವೆಯೇ ಆಗಿದ್ದರೂ ವಿಶಾಲವಾಗಿತ್ತು ಹಾಗೂ ಕುರುಚಲು ಗಿಡಗಳಿಂದ ಕೂಡಿತ್ತು. ಭೂ ಕುಸಿತಗಳಿಂದಾಗಿ ಪ್ರಪಾತಗಳೂ ಇದ್ದುದರಿಂದ ರಾತ್ರಿ ಪ್ರಯಾಣ ಬೇಡವೆಂದು ನಿರ್ಧರಿಸಲಾಗಿತ್ತು. ಅಲ್ಲಿ ಚಿರತೆಗಳು ಹಾಗೂ ತೋಳಗಳ ಸಂಚಾರವು ಅತಿಯಾಗಿದೆ ಎಂದು ತಂಡದಲ್ಲಿ ತಿಳಿದವರು ಹೇಳಿದ್ದರು. ಹಾಗಾಗಿ ಸಮ್ಮಿತ, ಕುಶಿಕ, ಬೇಲ ಮತ್ತು ಯದುವು ರಾತ್ರಿ ಕಾವಲಿಗೆ ಸಿದ್ಧರಾದರು. ಆದರೆ, ಈಗ ತಂಡದಲ್ಲಿ ಯೋಧರಿಗೆ ಕೊರತೆಯಿರಲಿಲ್ಲ. ಅವರಲ್ಲಿ ಬಹಳಷ್ಟು ಮಂದಿ, ಹಿಂದಿನರಾತ್ರಿ ಕುಶಿಕ, ಯದು, ಸಮ್ಮಿತ ಮತ್ತು ಬೇಲ ಸಾಕಷ್ಟು ಶ್ರಮ ಪಟ್ಟಿದ್ದರಿಂದ ಈಗ ಮಲಗಿ ನಿದ್ರಿಸಲಿ ಎಂದು ಕಿರಿಯ ಹುಡುಗರು ಹೇಳಿದರು. ದಾರಿಯಲ್ಲಿ ಬರುವಾಗಲೇ ಕೊಳವೊಂದರಲ್ಲಿ ಸಿಕ್ಕ ನೀರುಹಕ್ಕಿಗಳನ್ನು, ನವಿಲುಗಳನ್ನು ಮತ್ತು ಮೊಲಗಳನ್ನು ಅಡುಗೆಗೆ ತಂದಿದ್ದರು. ಊಟವಾದ ಮೇಲೆ ಎಲ್ಲರೂ ವಿಶ್ರಮಿಸಿದರು.

ಊಟವಾದ ಮೇಲೆ ಬೇಲ ಕುದುರೆಗಳನ್ನೂ ಮತ್ತು ರಥಗಳನ್ನು ಮುಂದಿನ ಪ್ರಯಾಣಕ್ಕೆ ಸರಿಯಾಗಿದೆಯೇ ಎಂದು ಪರೀಕ್ಷಿಸಿದ.

ಪ್ರಯಾಣದ ಪೂರ್ತಿ ಯಾಜ್ಞಿಕ ಯಾರೊಂದಿಗೂ ಮಾತಾಡಲಿಲ್ಲ.

ಅವರು ಗಂಭೀರವಾಗಿರುವುದನ್ನು ಗಮನಿಸಿದ್ದ ಯದು, "ಸ್ವಾಮೀ, ತಾವು ಹೀಗೆ ಮೌನವಾಗಿಬಿಟ್ಟರೆ ತಂಡವು ನಗುನಗುತ್ತಿರುವುದಿಲ್ಲ. ದಯವಿಟ್ಟು ತಾವು ಮೊದಲಿನಂತೆ ಇರಿ." ಎಂದ.

ಅದಕ್ಕೆ ಯಾಜ್ಞಿಕ ಒಂದು ನೀರಸ ನಗೆ ನಕ್ಕು ಸುಮ್ಮನಾದ. ಯದು ಶಕಧೂಮರ ಕಡೆ ತಿರುಗಿದ. "ನೀವಾದರೂ ನಿಮ್ಮ ಗೆಳೆಯರಿಗೆ ಹೇಳಿ."

"ಯಾಜ್ಞಿಕ..." ಶಕಧೂಮ ಹೇಳಿದ. "ಇಡೀ ಪ್ರಕರಣದ ಸೂತ್ರಧಾರರಂತೆ ತಾವು ಇದ್ದೀರಿ. ತಾವು ಹೀಗಿರಕೂಡದು."

"ನಾನು ಮೌನವಾಗಿದ್ದೇನೆ ಅಷ್ಟೇ." ಎಂದ ಯಾಜ್ಞಿಕ.

"ನಿಮ್ಮ ಮೌನ ಉದ್ಯಾನವನದ ಮೌನವಾಗಿದ್ದರೆ ನಾವು ಆನಂದಿಸುತ್ತಿದ್ದೆವು. ಸ್ಮಶಾನದ ಛಾಯೆಯಂತಿರುವ ತಮ್ಮ ಮೌನವನ್ನು ಮುರಿಯಿರಿ." ಎಂದ ಶಕಧೂಮ.

"ಯಾಜ್ಞಿಕ, ಹೀಗೆ ದಯಮಾಡಿಸಿ." ಶಂಬರ ಯಾಜ್ಞಿಕನನ್ನು ಕರೆದುಕೊಂಡು ಉರಿಯುತ್ತಿದ್ದ ಬೆಂಕಿಯ ಬಳಿಗೆ ಬಂದು, "ಇವರು ಆಶುಕವಿಗಳು. ಈಗ ಇವರು ಹಾಡುತ್ತಾರೆ. ನಾವು ಕುಣಿಯುತ್ತೇವೆ." ಎಂದ.

ಅಲ್ಲಿ ನೆರೆದಿದ್ದವರೆಲ್ಲಾ ಚಪ್ಪಾಳೆ ತಟ್ಟಿ ಉತ್ತೇಜಿಸಿದರು. "ಅಹೋ, ಆಗಲಿ, ಆಗಲಿ...." ಎಂದು ಕೂಗಿದರು. ನರಿಗಳಂತೆ ಊಳಿಟ್ಟರು.

ಹಾಗೆ ಶೀತಲ ಮೌನದಲ್ಲಿ ಕುಳಿತುಕೊಳ್ಳುವ ಸ್ವಭಾವ ಆ ಯಾಜ್ಞಿಕನದಲ್ಲ. ಆದರೆ, ತನ್ನಿಂದಾಗಿ ಏನೇನೆಲ್ಲಾ ಘಟಿಸಿಬಿಟ್ಟಿತು ಎಂಬ ಅಪರಾಧಿ ಮನೋಭಾವ ಅವನಲ್ಲಿತ್ತು. ಆದರೆ, ಈಗ ಇವರೆಲ್ಲರೂ ಇಷ್ಟೊಂದು ಉತ್ತೇಜಿಸಿದ್ದು, ಪ್ರೀತ್ಯಾದರಗಳನ್ನು ತೋರಿದ್ದು ಅವನ ಮನಸ್ಸು ತುಂಬಿ ಬಂತು. ಮಾರ್ಗ ಮಧ್ಯೆಯೂ ಎಲ್ಲರೂ ತಾವು ಪಟ್ಟ ಪಾಡು, ಸಾಹಸಗಳ ಬಗ್ಗೆ, ಕುತಂತ್ರದ ಮಯೂರ ಗಣದವರ ಬಗ್ಗೆ ಮಾತಾಡುತ್ತಿದ್ದರೇ ಹೊರತು ಯಾರೂ ಯಾಜ್ಞಿಕನ ಕಡೆಗೆ ನಕಾರಾತ್ಮಕವಾಗಿ ಬೊಟ್ಟು ಮಾಡಿರಲಿಲ್ಲ.

ಯಾಜ್ಞಿಕನ ಕಣ್ಣುಗಳು ತುಂಬಿಬಂದಿದ್ದವು. ಕೈಗಳನ್ನೆತ್ತಿ ಭಾವಪರವಶನಾಗಿ ಹಾಡಿದ.

***"ಸುರರು ಹರಸಲೆಂದು ನಾನು ಕರಗಳೆತ್ತಿ ಬೇಡಿದೆ,***

***ಅಸುರರು ಕೈ ಹಿಡಿದು ನನ್ನ ಜತನದಿ ಕಾಪಾಡಿದರು***

***ಕಾಣದೆಲ್ಲೋ ಅವಿತಿರುವ ದೇವರುಗಳ ವಂದಿಸಿದೆ***

***ಎದುರಿರುವ ನನ್ನಂತಹ ನರರುಗಳನೇ ನಿಂದಿಸಿದೆ***

***ದೇವರುಗಳನು ಮಾಡಲು ಹೋದೆ ಅತಿಸನ್ಮಾನ***

***ನನ್ನ ನಾನು ಮಾಡಿಕೊಂಡಿದ್ದು ಅತಿ ಅವಮಾನ***

***ಸಾಕಿನ್ನು ಬೇಡುವ ಕಾಡುವ ವ್ಯರ್ಥ ಕೆಲಸಗಳು***

***ಜೋಡಣೆಯಾಗಲಿ ಹರಿದಿರುವ ಬದುಕುಗಳು."***

ಯಾಜ್ಞಿಕನಿಗೆ ಮುಂದೆ ಹಾಡಲಾಗಲಿಲ್ಲ. ಗಂಟಲು ಕಟ್ಟಿ ಬಂದಿತ್ತು. ಶಂಬರನ ಅವನ ಭುಜವನ್ನು ತಟ್ಟಿ ಸಮಾಧಾನಿಸಿದ. ಯದು, ಕುಶಿಕ ಮತ್ತು ಬೇಲರೊಂದಿಗೆ ಅಲ್ಲಿರುವವರೆಲ್ಲರೂ ಕೂಗುತ್ತಾ ಒಬ್ಬೊಬ್ಬರೇ

ಹಾಡುತ್ತಾ ಹೋದರು, ಅದನ್ನು ಉಳಿದವರು ಅನುಕರಿಸುತ್ತಾ ತಮ್ಮದೇ ಆದ ರೀತಿಯಲ್ಲಿ ನರ್ತಿಸಿದರು. ಅದು ಸಂತೋಷದ ಹಾಡಾಗಿರಲಿಲ್ಲ, ಪಾಡಿನ ಗೋಳಾಗಿರಲಿಲ್ಲ.

ಶಂಬರನೂ ಅವರೊಂದಿಗೆ ನಿಧಾನಗತಿಯಲ್ಲಿ ನರ್ತಿಸುತ್ತಿದ್ದ.

ವದೀರಜ್ಜನ ಬೆರಳುಗಳು ಸಣ್ಣಗೆ ಮಿಡಿಯುತ್ತಿದ್ದವು.

ಯಾಜ್ಞಿಕನ ಹುರಿದುಂಬಿಸಲು ಅಷ್ಟೊಂದು ಹುಮ್ಮಸ್ಸಿನಿಂದ ಕೂಗಾಡಿದ್ದವರು, ಚೈತನ್ಯ ತುಂಬುವಂತೆ ಆಡಿದ್ದವರು, ಬೆಂಕಿಯ ಸುತ್ತ ಅವರ ನರ್ತನ ಮುಗಿಯುವ ವೇಳೆಗೆ ಚೈತನ್ಯ ಕಳೆದುಕೊಂಡಂತೆ ಕಂಡರು. ಯಾರೂ ಯಾರೊಂದಿಗೂ ಮಾತಾಡದೇ ತಮ್ಮದೇ ಆದ ಸ್ಥಾನಗಳನ್ನು ಕಂಡುಕೊಂಡು ಮೌನವಾದರು. ಗಣನಾಯಕ ಘುಂಢಿಯು ಅಗಲಿ ಹೋಗುತ್ತಿರುವ ಶೋಕದ ಛಾಯೆ ಅವರನ್ನು ಅಲ್ಲಿ ಆವರಿಸಿದಂತೆ ಕಂಡಿತು.

ಎಲ್ಲರೂ ವಿಶ್ರಾಂತಿ ತೆಗೆದುಕೊಳ್ಳುವವಂತೆ ಕಂಡರೂ ಯಾರೂ ಸಂಪೂರ್ಣ ನಿದ್ರಿಸಿರಲಿಲ್ಲ. ಮೂಕವಾಗಿರುವ ಅಲ್ಲಿನ ಭಾವಕ್ಕೆ ಯಾವುದೇ ವ್ಯಾಖ್ಯಾನ ಕೊಡಬಹುದಾಗಿತ್ತು. ಅಥವಾ ಎಲ್ಲರಿಗೂ ಅವರವರದೇ ಕಾರಣ ಮತ್ತು ವಿವರಣೆಗಳಿದ್ದವು. ಆದರೆ, ಅವರೆಲ್ಲರ ಭಾವಗಳಲ್ಲಿ ಮತ್ತು ಕಾರಣಗಳಲ್ಲಿ ಕೆಲವೊಂದವುಗಳು ಸಂಧಿಸಿದ್ದ ಕಾರಣ ಎಲ್ಲರೂ ಅಲ್ಲಿದ್ದರು. ಶಂಬರನಿಗೆ ಕುಳಿತಲ್ಲಿಯೇ ಇರಲು ಬೇಸರವಾಗಿ ಮೇಲೆದ್ದು ಸುತ್ತ ಮುತ್ತ ಓಡಾಡುತ್ತಾ ಒಂದು ದೊಡ್ಡ ಬಂಡೆಯ ಮೇಲೆ ಏರಿ ನಿಂತ. ಅದು ಎತ್ತರದ ಸ್ಥಳದಲ್ಲಿದ್ದು, ಹೆಚ್ಚೂಕಡಿಮೆ ಅಲ್ಲಿರುವವರೆಲ್ಲಾ ಸ್ಥೂಲವಾಗಿ ಕಾಣುತ್ತಿದ್ದರು. ರಥಗಳು ಮತ್ತು ಕುದುರೆಗಳು, ವದೀರಜ್ಜನ ನೋಡಿಕೊಳ್ಳುವವರು, ಯಾಜ್ಞಿಕ, ಶಕಧೂಮ ಕಂಡರು. ಶಂಬರ ಅಲ್ಲಿಯೇ ಕುಳಿತ. ಅವನಲ್ಲಿ ಆಲೋಚನೆಯು ಲಹರಿಯಾಗಿತ್ತು. ‘ಇವರೊಂದಿಗೆ ಹೀಗೆ ಇಲ್ಲಿರುವ ನನ್ನಲ್ಲಿ, ಇವರದಕ್ಕೆ ಹೊಂದುವಂತಹ ಯಾವ ಭಾವವಿದೆ? ಯಾವ ಕಾರಣವಿದೆ? ಯಾವುದಾದರೂ ಅವರದರೊಂದಿಗೆ ತಾಳೆಯಾಗುತ್ತದೆಯೋ ಎಂದು ಗಮನಿಸಿದ. ಯಾವುದೇ ತೀವ್ರವಾದ ಭಾವುಕತೆಯಿರದಿದ್ದರೂ, ಯಾವುದೇ ಸೈದ್ಧಾಂತಿಕ ಕಾರಣ ಇರದಿದ್ದರೂ, ನಾನು ಇವರನ್ನು ಇವರು ಇರುವ ಹಾಗೆಯೇ ಗೌರವಿಸುವ ಕಾರಣ ಇಲ್ಲಿದ್ದೇನೆ. ನಾನು ಈ ವದೀರಜ್ಜನಿಗೆ ಏಕೆ ಸೋತಿದ್ದೇನೆ? ಯಾರದೇ, ಯಾವುದೇ ವ್ಯವಸ್ಥೆಯ ಹಂಗಿಲ್ಲದೇ, ಯಾರದೇ ಸಿದ್ಧಾಂತಗಳಲ್ಲಿ ನನ್ನ ಗುರುತಿಸಿಕೊಳ್ಳದೇ, ಯಾವುದೇ ಭಾವಪರವಶತೆ ಇಲ್ಲದಿರುವ ನಾನು ನಾನಾಗಿರುವಂತವನು ಇಲ್ಲಿ, ಹೀಗೆ, ಇವರ ಜೊತೆ ಇರುತ್ತಾ, ಈ ವದೀರಜ್ಜನನ್ನು ಏಕೆ ಆರಾಧಿಸುತ್ತಿದ್ದೇನೆ?’ ಸ್ಪಷ್ಟವಾಗಿ ಉತ್ತರದೊರೆಯದೇ ಕುಳಿತಲ್ಲಿಯೇ ಬಂಡೆಯ ಮೇಲೆ ಒರಗಲಿದ್ದವನು ತನ್ನ ಹಿಂದೆ ದನಿ ಕೇಳಿ ಎದ್ದು ಕುಳಿತ.

“ನಿದ್ರೆ ಬರಲಿಲ್ಲವೋ ಅಥವಾ ಅಲ್ಲಿರಲು ಬೇಸರವಾಯಿತೋ.” ಯದುವೂ ಬಂಡೆಯನ್ನೇರಿ ಬಂದಿದ್ದ.

“ಮಯೂರ ಗಣದ ಕತ್ತಲ ಕೋಣೆಯಲ್ಲಿ ಇಡೀ ರಾತ್ರಿ ಯಶಸ್ವಿಯಾಗಿ ಕಳೆದವರಿಗೆ ಬಹುಶಃ ಬೇರಾವ ಜಾಗವೂ ಬೇಸರ ತಾರದು.” ಎಂದ ಶಂಬರ ನಗುತ್ತಾ.

“ಹೌದು.” ಯದು ಶಂಬರನ ಪಕ್ಕದಲ್ಲಿ ಕುಳಿತುಕೊಂಡು ಹೇಳಿದ. “ಅದೊಂದು ವಿಚಿತ್ರ ರಾತ್ರಿ. ನಾವು ಸಾವಿನ ಕತ್ತಲಿನ ಮುಂದಿದ್ದೆವೋ ಅಥವಾ ಬದುಕಿನ ಬೆಳಕಿನ ಹಿಂದಿದ್ದೆವೋ ತಿಳಿಯದಂತಹ ಸ್ಥಿತಿ. ಅಂತೂ ಇದ್ದೆವು.”

"ಅಂತೂ ಇದ್ದೆವು." ಶಂಬರನೂ ನಗುತ್ತಾ ಒಟ್ಟಿಗೇ ಹೇಳಿದ. ಯದುವೂ ನಕ್ಕ.

ಇಬ್ಬರ ನಡುವೆ ಮೌನ ನುಸುಳಿತು. ಇಬ್ಬರೂ ತಮ್ಮ ಕಣ್ಣಿಗೆ ಕಾಣುವುದನ್ನೆಲ್ಲಾ, ಕಿವಿಗೆ ಕೇಳುವುದನ್ನೆಲ್ಲಾ ಯಾವ ತಡೆಯೊಡ್ಡದೇ ನೋಡುತ್ತಿದ್ದರು, ಕೇಳುತ್ತಿದ್ದರು. ದೂರದಲ್ಲೆಲ್ಲೋ ನರಿಯು ಊಳಿಡುವುದು ಕೇಳುತ್ತಿತ್ತು. ಹತ್ತಿರದ ನೀರಿನ ಹೊಂಡದ ಬಳಿ ಆಗ್ಗಾಗ್ಗೆ ಆನೆಗಳು ಘೀಳಿಡುವುದು ಕೇಳುತ್ತಿತ್ತು. ಯಾವುದೋ ವನ್ಯಮೃಗ ಇನ್ನಾವುದೋ ತನ್ನ ಬೇಟೆಯನ್ನು ಹಿಡಿದು ಒಯ್ಯುತ್ತಿರುವ ಹೋರಾಟದ ಸದ್ದು ಕೇಳುತ್ತಿತ್ತು. ಅರಣ್ಯಕ ಯುವಕರು ಮತ್ತು ಕೆಲವು ವಯಸ್ಕರು ಶಸ್ತ್ರಧಾರಿಗಳಾಗಿ ಸುತ್ತಲೂ ಓಡಾಡುತ್ತಿದ್ದರು. ಬೆಂಕಿ ಇನ್ನೇನು ಆರಿ ಹೋಗುವ ಸಮಯಕ್ಕೆ ಅವರಲ್ಲೇ ಇಬ್ಬರು ಬೆಂಕಿಯನ್ನು ಮತ್ತೆ ಜ್ವಲಿಸುವಂತೆ ಮಾಡಿ ಹೋಗುತ್ತಿದ್ದರು.

"ಅವತ್ತು ಯಾರೋ ಎಂದೋ ಹೇಗೋ ಬೆಂಕಿಯೊಂದನ್ನು ಹೊತ್ತಿಸಿದರು. ನಾವು ಇವತ್ತಿನವರೆಗೂ ಅದು ಆರದ ಹಾಗೇ ನೋಡಿಕೊಂಡು ಬಂದಿದ್ದೇವೆ." ಎಂದ ಶಂಬರ. ಅದಕ್ಕೆ ನಕ್ಕು, "ಅಂದು ಯಾವುದೋ ಕಾರಣದಿಂದಲೇ ಬೆಂಕಿಯನ್ನು ಹೊತ್ತಿಸಿದರು. ಕಾರಣಕ್ಕೆ ಅಗತ್ಯವೂ ತಗುಲಿಹಾಕಿಕೊಂಡಿತು. ಅದನ್ನು ಆರಿಸದಿರುವ ಅನಿವಾರ್ಯತೆಯಿಂದ ಅದನ್ನು ನೋಡಿಕೊಳ್ಳುತ್ತಿದ್ದೇವೆ."

ತನ್ನ ಕಾಲನ್ನು ಸರಿಯಾಗಿ ಎತ್ತಿ ತನ್ನ ಕೈಗಳಿಂದ ಮಡಿಸಿಕೊಳ್ಳಲು ಹೋದ ಯದು, ಕಾಲಿನ ಮೇಲೆ ಸೊಂಪಾಗಿ ಬೆಳೆದಿರುವ ಕೂದಲಿನ ಮೇಲೆ ಹೋರಾಟದಲ್ಲಿ ಹರಿದಿದ್ದ ರಕ್ತವು ಹರಿದು ಒಣಗಿ ಹೋಗಿರುವುದನ್ನು ಕೈ ಸವರಿತು. ಅದನ್ನು ಕಿತ್ತು ತನ್ನ ಕಣ್ಣ ಮುಂದೆ ತಂದು ನೋಡಿ, ಹರಳುಗಟ್ಟಿರುವುದನ್ನು ಪುಡಿ ಮಾಡಿ ಉದುರಿಸಿದನು.

"ಏನದು?" ಶಂಬರ ಕೇಳಿದ.

"ರಕ್ತ. ಒಣಗಿದೆ."

'ಏನಾಯ್ತು?' ಎಂದು ಕೇಳಲು ಹೋದ ಶಂಬರ ಎರಡನೆಯ ಪದ ಕೇಳಿ ಸುಮ್ಮನಾದ.

"ಬೆಂಕಿ ಆರದು. ರಕ್ತ ಸುರಿಯದೇ ಇರದು." ಎಂದ ಯದು.

"ನನಗನ್ನಿಸುತ್ತದೆ. ನಾವಿಬ್ಬರೂ ಒಂದೇರೀತಿ ಮಾತಾಡುತ್ತೇವೆ." ಎಂದ ಶಂಬರ.

"ಒಂದೇ ರೀತಿ ಚಿಂತಿಸುವುದರಿಂದ, ಒಂದೇ ರೀತಿ ಮಾತಾಡುವುದರಿಂದಲೇ ಒಟ್ಟಿಗಿದ್ದೇವೆ." ಎಂದು ನಕ್ಕ ಯದು ನೆನಪಿಸಿಕೊಂಡವನಂತೆ ಕೇಳಿದ. "ನಿಮ್ಮ ಹೆಸರು ಏನು?"

"ಶಂಬರ."

"ಓ!" ಯದು ತಟ್ಟನೆ ಶಂಬರನ ಮುಖ ನೋಡಿದ. "ನೀವೂ ದಸ್ಯುವೇ!"

"ನಾನು ದಸ್ಯುವಲ್ಲ, ಆರ್ಯನಲ್ಲ, ಅರಣ್ಯಕನಲ್ಲ. ಏನೋ ಗೊತ್ತಿಲ್ಲ. ನನಗೆ ತಿಳಿದಿರುವುದು ನನ್ನ ತಾಯಿ ವಸುಮಾ ಮತ್ತು ನನ್ನ ಮನೆ ಸುವಾಸ್ತು." ಶಂಬರನೆಂದ.

"ನಿಮ್ಮ ತಂದೆ ಯಾರು ಎಂದು ನಿಮಗೆ ತಿಳಿಯದೇ?"

“ಇಲ್ಲ. ನನಗೆ ಬುದ್ಧಿ ಬಂದಾಗಿನಿಂದ ನಾವು ಆ ಜಹ್ನೂವಸು ಅರಣ್ಯದಲ್ಲಿದ್ದೆವು. ಅದಕ್ಕೆ ಸಮೀಪವಾಗಿ ಅವಿಮುಕ್ತವಿದೆ, ವಿರಾಟಪುರವಿದೆ ಎಂದೂ ನಾನೇ ದೊಡ್ಡವನಾದ ಮೇಲೆ ತಿಳಿದುಕೊಂಡಿದ್ದು. ನನಗೂ ನನ್ನ ತಂದೆ ಯಾರು ಎಂದು ಗೊತ್ತಿಲ್ಲ.” ಶಂಬರ ನಕ್ಕು ಹೇಳಿದ.

“ನಮ್ಮ ಗಣನಾಯಕ ಢುಂಢಿಗೂ ಅವರ ತಂದೆ ಯಾರೆಂದು ತಿಳಿಯದು. ಈಗ ಗಣಪತಿಯಾದ ಮೇಲೆ ಶಿವನಿಗೆ ಮಗನೆನ್ನುತ್ತಾರೆ. ಅಂದುಕೊಳ್ಳಲಿ, ತಾಯಿ ಎಂಬುದು ಸತ್ಯ. ತಂದೆಯೆಂಬುದು ಅಭಿಪ್ರಾಯ. ನಮ್ಮಲ್ಲಿ ಬಹಳಷ್ಟು ಮಂದಿಗೆ ತಂದೆ ಯಾರೆಂದು ತಿಳಿದಿಲ್ಲ. ಆದರೆ, ತಾಯಂದಿರು ಮಾತ್ರ ಚೆನ್ನಾಗಿ ತಿಳಿದಿರುವೆವು. ನನ್ನ ತಾಯಿಗೂ ತಂದೆ ಯಾರೆಂದು ತಿಳಿದಿರಲಿಲ್ಲ. ಆದರೆ, ಆಕೆಯ ತಾಯಿ ದನು ಅದು ಚೆನ್ನಾಗಿ ಗೊತ್ತಿದೆ. ನನ್ನ ಅಜ್ಜಿ ದನು ರುದ್ರ ಮತ್ತು ಪಾರ್ವತಿಯ ಜೊತೆಯಲ್ಲಿದ್ದವಳು. ಅವಳೇ ಢುಂಢಿಯನ್ನು ಸೋಮನಾಥಕ್ಕೆ ಒಯ್ದವಳು.”

*

ದನು ಪಾರ್ವತಿಯ ತಲೆಗೆ ಎಣ್ಣೆಯನ್ನು ಹಚ್ಚುತ್ತಾ ನಿಧಾನವಾಗಿ ತಿಕ್ಕುತ್ತಿದ್ದಳು.

“ಮೈಯೆಲ್ಲಾ ನೋಯುತ್ತಿದೆ ದನು.” ಪಾರ್ವತಿ ನಿಧಾನವಾಗಿ ಹೇಳಿದಳು.

“ನೋವಿನ ಎಣ್ಣೆಯನ್ನು ಮೈಗೆ ಹಚ್ಚುವೆ.” ಧನು ಹೇಳಿದಳು.

ಪಲ್ಲಂಗದ ಮೇಲಿದ್ದ ಪಾರ್ವತಿ ಕೆಳಗಿಳಿದು, ದರ್ಭಾಸನವನ್ನು ಹರಡಿದಳು.

“ನಾನು ಎಣ್ಣೆಯನ್ನು ತರುವೆ. ಅಷ್ಟರಲ್ಲಿ ನೀವೇ ಬಟ್ಟೆಗಳನ್ನು ಕಳಚಿ. ನನ್ನ ಕೈಗಳು ಎಣ್ಣೆಯಾಗಿವೆ.” ಎಂದ ದನು ಎಣ್ಣೆ ತರಲು ತಾನು ತಂಗಿರುವ ತಾವಿನ ಬಳಿಗೆ ಹೋದಳು. ಬಟ್ಟೆಗಳನ್ನು ಕಳಚಲು ಹೋದ ಪಾರ್ವತಿ, ಯಾರಾದರೂ ನೇರ ಬಾಗಿಲಿಲ್ಲದ ದ್ವಾರದೊಳಗೆ ಪ್ರವೇಶಿಸಿ ತನ್ನ ಕೊಠಡಿಗೆ ಬಂದುಬಿಟ್ಟಾರು ಎಂದು ಎನಿಸಿ, ಬಿಚ್ಚುತ್ತಿದ್ದ ರವಿಕೆಯನ್ನು ಹಾಗೆಯೇ ಕಟ್ಟಿಕೊಂಡು ಹೊರಗೆ ಬಂದಳು. ರುದ್ರಗಣದ ಹಸುಗಳ ಪಾಲನೆ ಮಾಡುತ್ತಿದ್ದ ನಂದಿ ಹೊರಗೆ ಕುಳಿತಿದ್ದ.

“ಹೇ ನಂದಿ, ಈಗ ಶಿವನೆಲ್ಲಿದ್ದಾನೆ?” ಕೇಳಿದಳು ಪಾರ್ವತಿ.

“ಸೋಮನಾಥದಲ್ಲಿ ಧ್ಯಾನ ಮಾಡುತ್ತಿದ್ದಾರೆ.” ಎಂದ ನಂದಿ.

“ಸರಿ, ಹೇ ನಂದಿ, ಯಾರೇ ಬಂದರೂ ಒಳಕ್ಕೆ ಪ್ರವೇಶಿಸಲು ಅನುಮತಿ ನೀಡದೇ ಕಾವಲು ಕಾಯುವ ಜವಾಬ್ದಾರಿ ನಿನ್ನದು. ನಾನೋ ಅಥವಾ ದನು ಬಂದು ಹೇಳಿದ ಮೇಲೆ ನೀನು ಹೋಗಬಹುದು.” ಪಾರ್ವತಿಯ ಆಜ್ಞೆಗೆ ಒಪ್ಪಿದಂತೆ ತಲೆದೂಗಿದ ನಂದಿ ದ್ವಾರಕ್ಕೆ ಕಾವಲಾಗಿ ಕುಳಿತ.

ಒಳಗೆ ಬಂದ ಪಾರ್ವತಿ ಬಟ್ಟೆಗಳನ್ನು ಕಳಚಿ ದರ್ಭಾಸನದ ಮೇಲೆ ಬೋರಲಾಗಿ ಮಲಗಿಕೊಂಡು, “ದನು, ಎಲ್ಲಿದ್ದೀಯಾ?” ಎಂದು ಕೇಳಿದಳು.

“ಬಂದೆ ಒಡತಿ, ಎಣ್ಣೆಯನ್ನು ಸ್ವಲ್ಪ ಬಿಸಿ ಮಾಡಿಕೊಂಡು ಅದಕ್ಕೆ ಜ್ಯೋತಿಶ್ಮತಿ ಚೂರ್ಣವನ್ನು ಬೆರೆಸುತ್ತಿದ್ದೇನೆ.” ಎಂದಳು ದನು. ದನಿ ಅಲ್ಲೆಂಲ್ಲಿಂದಲೋ ಬರುತ್ತಿದ್ದರೂ ತನ್ನ ಹಿಂದೆಯೇ ಹಾದುಬಿದ್ದ ನೆರಳು ಯಾವುದೆಂದು ಪಾರ್ವತಿ ಹಿಂದಕ್ಕೆ ಹೊರಳಿ ನೋಡಲು ರುದ್ರ ನಿಂತಿದ್ದ.

“ನೀನು!”

ಬೆತ್ತಲಾಗಿರುವ ಪಾರ್ವತಿಯ ಬೆನ್ನ ಮೇಲೆಯೇ ಒರಗುವಂತೆ ಬಾಗಿದ ರುದ್ರ.

“ನೀವು ನಡೆಯಿರಿ ಹೊರಗೆ. ದನು ನನಗೆ ದೇಹವನ್ನು ಮರ್ದಿಸಲಿದ್ದಾಳೆ.” ಪಾರ್ವತಿ ಪಕ್ಕದಲ್ಲಿ ಹಾಕಿದ್ದ ಬಟ್ಟೆಯನ್ನು ಎಳೆದು ಮೈ ಮೇಲೆ ಹಾಕಿಕೊಂಡಳು.

“ನಾನೇ ಆ ಕೆಲಸ ಮಾಡುತ್ತೇನೆ.” ರುದ್ರ ಅವಳ ಮೇಲೆಯೇ ಮಲಗುತ್ತಾ ಅವಳನ್ನು ಅನಾಮತ್ತಾಗಿ ಹಿಡಿದ.

“ಸೋಮನಾಥದಲ್ಲಿದ್ದವರು ಇಷ್ಟು ಬೇಗ ಹೇಗೆ ಬಂದಿರಿ?”

“ಭೈರವದೂತನ ಭುಜವೇರಿ.” ಎಂದ ಶಿವ.

ಭೈರವದೂತನೊಬ್ಬ ಸಿದ್ಧ. ಆತನಿಗೆ ಅಸಮಾನ್ಯ ವೇಗದಲ್ಲಿ ಸಂಚರಿಸುವ ಶಕ್ತಿಯನ್ನು ಸಿದ್ಧಿಸಿಕೊಂಡಿದ್ದ. ಎಷ್ಟೇ ಭಾರವನ್ನು ಹೊತ್ತರೂ, ಎಷ್ಟೇ ದೂರವಾದರೂ ಅತ್ಯಂತ ವೇಗದಲ್ಲಿ ಚಲಿಸಬಲ್ಲವನಾಗಿದ್ದ. ಬಂಡೆಗಳ ಮೇಲಿಂದ ಎಗರೆಗರಿ, ಕುಪ್ಪಳಿಸುತ್ತಾ, ಏನನ್ನೋ ಜಪಿಸುತ್ತಾ, ಕೂಗುತ್ತಾ, ಹಾಡುತ್ತಾ ಓಡುತ್ತಿರುತ್ತಾನೆ. ನಾಗಲೋಕದಲ್ಲೆಲ್ಲಾ ಅವನು ಪ್ರಸಿದ್ಧನಾದ ಸಿದ್ಧ. ಈ ಮೊದಲು ಅವನು ನಾಗರಗಣದಲ್ಲಿದ್ದು, ನಂತರ ರುದ್ರಗಣದಲ್ಲಿ ಸೇರಿಹೋಗಿದ್ದ.

“ಈ ಕೆಲಸಕ್ಕೆ ಭೈರವದೂತನ ಮೇಲೇರಿ ಬಂದಿರಾ? ದಯಮಾಡಿ ಹೊರಗೆ ಹೊರಡಿ.” ಪಾರ್ವತಿ ರುದ್ರನಿಂದ ಕೊಸರಿಕೊಂಡು ಅವನನ್ನು ತಳ್ಳಲು ಯತ್ನಿಸಿದಳು.

ಎಣ್ಣೆಗೆ ಚೂರ್ಣವನ್ನು ಬೆರೆಸಿಕೊಂಡು ಬಂದ ದನು ಪಾರ್ವತಿಯನ್ನು ಎಳೆದಾಡುತ್ತಿರುವ ರುದ್ರನ ಕಂಡು ನಿಟ್ಟುಸುರೊಂದನ್ನು ಬಿಟ್ಟು ಅವರನ್ನು ಕಂಡಲ್ಲಿಯೇ ನಿಂತಳು.

“ಹೊರಡಲಾಗದು ಗೌರಿ, ಬೆತ್ತಲಾಗಿ ನೀನಿತ್ತ ಆಹ್ವಾನವನ್ನು ನಿರಾಕರಿಸಿ ಹೋಗುವುದು ಸರಿಯೇ.” ರುದ್ರನು ಅವಳನ್ನು ಬಿಡದೇ ತನ್ನ ಸೊಂಟಕ್ಕೆ ಸುತ್ತಿದ್ದ ಚರ್ಮಾಂಬರವನ್ನು ಕಿತ್ತೊಗೆಯುತ್ತಾ ಹೇಳಿದ.

“ಸಂಭೋಗಕ್ಕೂ ಸಮಯಾವಧಾನಗಳಿಲ್ಲವೇ?” ಪಾರ್ವತಿ ಅವನಿಂದ ಬಿಡಿಸಿಕೊಳ್ಳಲು ಪಾಡುಪಟ್ಟಳು.

“ಸಂಭೋಗಕ್ಕೆ ಸಮಯಾವಧಾನಗಳು ಇರುವುದು ಪಶುಗಳಿಗೆ. ಪಶುಪತಿಗಳಿಗಲ್ಲ. ನಮಗೆ ಎಲ್ಲಾ ಋತುಗಳಲ್ಲೂ, ಎಲ್ಲಾ ಕಾಲಗಳಲ್ಲೂ, ಎಲ್ಲಾ ವೇಳೆಗಳಲ್ಲೂ, ಎಲ್ಲಾ ಸ್ಥಳಗಳಲ್ಲೂ ನಮಗೆ ಮಿಥುನ ಸುಖ.” ರುದ್ರ ಅವಳೊಲ್ಲದಿದ್ದರೂ ತನ್ನ ರತಿಕ್ರೀಡೆಗೆ ಪ್ರಾರಂಭಿಸಿದ.

ದನು ದೂರದಲ್ಲಿಯೇ ಕುಳಿತಳು.

“ಮರದ ಕೊರಡಿನಂತಾಗ ಬೇಡ ದೇವಿ. ಬಳಸುವ ಲತೆಯಂತಾಗು.” ರುದ್ರನು ಪಾರ್ವತಿಯನ್ನು ಚುಂಬಿಸುತ್ತಾ ರತಿಭಾವ ಪರವಶನಾಗಿ ಬಳಸುತ್ತಾ ಹೇಳಿದ.

“ದ್ವಾರದಲ್ಲಿ ನಂದಿ ಇರಲಿಲ್ಲವೇ?” ಪಾರ್ವತಿ ಕೇಳಿದಳು.

“ಇದ್ದ.”

“ಯಾರನ್ನೂ ಒಳಗೆ ಬಿಡಕೂಡದೆಂದು ಅವನಿಗೆ ಹೇಳಿದ್ದೆ.” ಪಾರ್ವತಿಯ ಮಾತಿನಲ್ಲಿ ತನ್ನ ಅಪ್ಪಣೆ ವ್ಯರ್ಥವಾದ ಖೇದವಿತ್ತು.

“ಬೇರೆ ಯಾರನ್ನೂ ಅವನು ಬಿಡಲಾರ. ಆದರೆ ನಿನ್ನ ಗಂಡನ ಹೇಗೆ ತಡೆದಾನು?” ರುದ್ರ ತನ್ನ ಕೂಟಕಾರ್ಯದಲ್ಲಿ ತೊಡಗಿಕೊಂಡೇ ಮಾತಾಡುತ್ತಿದ್ದ.

“ಈಗ ಹೇಳುತ್ತಿದ್ದೀಯ ನೀನು ನನ್ನ ಗಂಡನೆಂದು. ನೀನು ನಮ್ಮ ಮದುವೆಯನ್ನೇ ಧಿಕ್ಕರಿಸುವವನಲ್ಲವೇ. ಹೇಗೆ ಗಂಡನಾದೆ ಈಗ. ನಿನ್ನ ಅಧಿಕಾರ ಮೆರೆಯಲು ನಿನಗೆ ಗಂಡನ ಪಟ್ಟ ಬೇಕು.” ಪಾರ್ವತಿ ಗದರಿಸಿ ಹೇಳಿದಳು.

“ನಿನಗೆ ನಾನು ಗಂಡನೆಂದು ಹೇಳಿದೆನೇ ಹೊರತು. ನೀನು ನನ್ನ ಹೆಂಡತಿ ಎಂದು ನಾನು ಹೇಳಲಿಲ್ಲ. ನೀನು ಮದುವೆ ಮಾಡಿಕೊಂಡವಳು. ನಿನಗೆ ನಾನು ಗಂಡ.” ರುದ್ರ ನಕ್ಕ.

“ನಂದಿ!” ಎಂದು ಜೋರಾಗಿ ಕೂಗಿದಳು ಪಾರ್ವತಿ.

“ಅವನ ಒಳಗೆ ಕರೆಯುವೆಯಾ?” ನಕ್ಕ ರುದ್ರ.

“ನಂದಿ!!” ಪಾರ್ವತಿ ಮತ್ತಷ್ಟು ಜೋರಾಗಿ ಕೂಗಿದಳು.

“ಒಡತಿ.” ಹೊರಗಿನಿಂದಲೇ ನಂದಿ ಸ್ಪಂದಿಸಿದ.

“ನಿನಗೆ ಹೇಳಿರಲಿಲ್ಲವೇ ಯಾರೊಬ್ಬರನ್ನೂ ಒಳಕ್ಕೆ ಬಿಡಕೂಡದೆಂದು?” ಪಾರ್ವತಿ ಜೋರಾಗಿ ಗದರಿಸಿ ಕೇಳಿದಳು.

ನಂದಿಯೇನು ಮಾಡಿಯಾನು? ರುದ್ರನು ಬಂದಾಗ ಅವನು ಪಾರ್ವತಿ ಒಳಗೆ ಯಾರನ್ನೂ ಬಿಡಕೂಡದೆಂದು ಹೇಳಿದ್ದಾಳೆಂದು ನಿವೇದಿಸಲಿದ್ದ. ಆದರೆ, ಅದನ್ನು ಹೇಳಲಾಗದೇ, ‘ನನ್ನ ಇಲ್ಲಿ ಯಾರನ್ನೂ ಬಿಡದಿರಲು ಕಾವಲಿಗಿಟ್ಟಿದ್ದಾರೆ.’ ಎಂದ.

‘ಸರಿ.’ ಎಂದಿದ್ದ ರುದ್ರ ಅವನ ಪಾಡಿಗೆ ಅವನು ಒಳಗೆ ಬಂದಿದ್ದ.

ಪಾರ್ವತಿಯ ಗದರುವಿಕೆಗೆ ಹೊರಗಿದ್ದ ನಂದಿ ಮೌನವಾಗಿ ಬೈಗುಳಗಳನ್ನು ಸ್ವೀಕರಿಸಿದ.

ಪಾರ್ವತಿಯ ಕೊಸರುವಿಕೆ, ನರಳುವಿಕೆಗಳಿಗೆ ದನುವಿನ ಕಿವಿಗಳು ಸಾಕ್ಷಿಯಾದವು.

ವೀರ್ಯವನ್ನು ಸ್ಖಲಿಸದ ರುದ್ರನ ಕಾಮದಾಟ ಯಾವಾಗ ಹೇಗೆ ನಿಲ್ಲುತ್ತದೆ ಎಂದು ಯಾರೂ ಹೇಳಲಾಗುವುದಿಲ್ಲ. ಅವನಿಗಿದ್ದಕ್ಕಿದ್ದಂತೆ ಏನೋ ನೆನಪಾಗಿ ಅಥವಾ ಸಂಭೋಗವನ್ನೇ ಧ್ಯಾನವನ್ನಾಗಿ ಮಾಡುವ ಗಮನ ಬೇರೆಲ್ಲೋ ಹರಿದಾಗ ಎದ್ದು ಹೋಗಬಹುದು.

ಕೆಲವೊಮ್ಮೆ ಮಿಥುನದ ಸಮಯದಲ್ಲೇ ರುದ್ರನು ಧ್ಯಾನ ಸಮಾಧಿಗೆ ಹೋಗುತ್ತಾನೆ. ಆಗ ಪ್ರಣವೋಪಾಸನೆ ಮಾಡುವ ಮಹಾಯೋಗಿಯಾಗಿ ಪಾರ್ವತಿಗೆ ಕಾಣುತ್ತಾನೆ. ಮಿಲನಾವಸ್ಥೆಯಲ್ಲಿದ್ದಂತೆಯೇ ಭದ್ರಾಸನದಲ್ಲಿ

ಕುಳಿತು, ಎರಡೂ ಕೈಗಳನ್ನು ಆಕಾಶಕ್ಕೆತ್ತಿ, ನಾಲಗೆಯ ತುದಿಯನ್ನು ಅಂಗುಳಕ್ಕೆ ಒತ್ತಿ, ಕಣ್ಣುಗುಡ್ಡೆಗಳ ಏಕಾಗ್ರತೆಯನ್ನು ಭ್ರೂಮಧ್ಯಕ್ಕೆ ನಿಲ್ಲಿಸಿ, ಗುದದ್ವಾರವನ್ನು ಒಳಕ್ಕೆಳೆದುಕೊಂಡು ಅಶ್ವಿನಿಮುದ್ರೆಯನ್ನು ಹೊಂದಿ, ನಾಭಿಯವರೆಗೂ ಉಸಿರನ್ನೆಳೆದುಕೊಂಡು ಕುಂಭಕ ಮಾಡಿ ನಿಲ್ಲಿಸಿ, ತನ್ನೆಲ್ಲಾ ಶಕ್ತಿಯನ್ನು ಕೇಂದ್ರೀಕರಿಸಿ ಧ್ಯಾನ ಮಗ್ನನಾಗುತ್ತಾನೆ.

ರುದ್ರನ ಪ್ರಣಯದ ಸಮಯದಲ್ಲಿ ಅವನನ್ನು ಕಾಣಲು ಯಾವುದೇ ದೇವತೆಗಳು ಅಥವಾ ಋಷಿ, ಮುನಿಗಳು ಬಂದರೂ ಹೊರಗೆ ಕಾಯಲೇಬೇಕು. ಅದೆಷ್ಟು ಹೊತ್ತು ಹಾಗೆ ಕಾಯಬೇಕೋ ಯಾರಿಗೂ ತಿಳಿಯದು. ಯಾರಿದ್ದರೂ ಅವನು ಲೆಕ್ಕಿಸುವುದಿಲ್ಲ. ಹಾಗೊಂದು ವೇಳೆ ಅವನ ಪ್ರಣಯಕ್ಕೆ ಅಥವಾ ಸಂಭೋಗದಿಂದುಂಟಾದ ಸಮಾಧಿಗೆ ಭಂಗ ಬಂತಾದರೆ ಅತ್ಯಂತ ಕೋಪಗೊಳ್ಳುತ್ತಾನೆ. ಅವನ ಕೋಪವು ಯಾವ ದುರಂತಕ್ಕೂ ಕಾರಣವಾಗಬಹುದು. ಕೆಲವೊಮ್ಮೆ ಒಲ್ಲದ ಪಾರ್ವತಿಯನ್ನು ಹಿಡಿದುಕೊಂಡು, ಪಾರ್ವತಿಯ ಕೋರಿಕೆಯ ಮೇರೆಗೆ ಅವಳನ್ನು ಅವನಿಂದ ಬಿಡಿಸಲು ಅವಳ ಸಖಿಯರು ಬಂದು ಅವನನ್ನು ಎಳೆದಾಡುವಾಗ ಅವನು ಹೇಗೆ ಅದಕ್ಕೆ ಪ್ರತಿಕ್ರಿಯಿಸುತ್ತಾನೆಂಬುದು ಅವನ ಆಗಿನ ಮನೋಭಾವದ ಮೇಲೆ ಅವಲಂಭಿತವಾಗಿರುತ್ತದೆ. ಹೊರಗಿನಿಂದ ಒಳಗಿನ ಗಲಾಟೆ ಕೇಳುವವರಿಗೆ ಇದೇನು ಪ್ರಣಯವೋ ಅಥವಾ ಪ್ರಳಯವೋ ಎಂದೆನಿಸದೇ ಇರಲಾರದು.

ಯಾವಾಗಲೋ ರುದ್ರನು ಹೋದ ಮೇಲೆ ಕೋಪ, ದುಃಖ ಮತ್ತು ಅವಮಾನಗಳಿಂದ ಪಾರ್ವತಿಯ ಕಣ್ಣುಗಳಿಂದ ನೀರು ಸುರಿಯುತ್ತಿತ್ತು. ದನೂ ಏನೂ ಹೇಳದೇ ನಿಧಾನವಾಗಿ ಅವಳನ್ನು ಸಮೀಪಿಸಿ, ಅವಳನ್ನು ಮುಟ್ಟಲು ಹೋದಳು.

"ನನ್ನ ಪಾಡಿಗೆ ನನ್ನ ಬಿಟ್ಟುಬಿಡು ದನು." ಎಂದ ಪಾರ್ವತಿ ಅಳುತ್ತಾ ಪಕ್ಕಕ್ಕೆ ಹೊರಳಿಕೊಂಡಳು.

ದನು ಸ್ವಲ್ಪ ಹೊತ್ತು ಅಲ್ಲಿಯೇ ಕುಳಿತಿದ್ದು ನಂತರ ಎದ್ದು ನಿಧಾನವಾಗಿ ಹೊರಗೆ ಹೋಗಿ ಸೂರ್ಯನು ನೆತ್ತಿ ಸುಡುತ್ತಿದ್ದರೂ ನೆರಳಿಗೆ ಹೋಗದೇ ಅಲ್ಲಿಯೇ ಬಂಡೆಯ ಮೇಲೆ ಕುಳಿತಳು. ಪಾರ್ವತಿಯ ಈ ಸ್ಥಿತಿಯ ಬಗ್ಗೆ ಅವಳಿಗೆ ಹೇಗೂ ಆಲೋಚಿಸಲಾಗದು. ಅವಳದೊಂದು ರೀತಿಯ ವಿಚಿತ್ರವಾದ ಪರಿಸ್ಥಿತಿ.

ಒಳಗಿನಿಂದ ಪಾರ್ವತಿಯ ದನಿ ಯಾವಾಗಲೇ ಕೇಳಿದರೂ ಒಳಹೋಗಲು ಕಾದೇ ಕುಳಿತಿದ್ದ ದನುವಿಗೆ ದೂರದಲ್ಲಿ ಕೆಲವು ಜನರ ಗುಂಪು ಕಾಣಿಸಿತು. ಅವರು ಯಾರೆಂದು ಗಮನಿಸಲು ಸರಿಯಾಗಿ ಕಾಣಲಿಲ್ಲ. ಆ ಗುಂಪು ಹತ್ತಿರಕ್ಕೆ ಬರುವುದನ್ನೇ ಕಾದಳು. ಆದರೆ ಅವರು ಚಲಿಸುವುದನ್ನು ನಿಲ್ಲಿಸಿದ್ದರು. ಅವರು ಇವಳಿರುವ ದಿಕ್ಕಿಗೇ ಬರುವ ಹಾಗೆ ಕಂಡಿದ್ದರೂ ಇಲ್ಲಿಗೆ ಏಕೆ ಬಾರದೇ ಅಲ್ಲಿಯೇ ನಿಂತರು ಎಂದು ನೋಡಲು ಬಂಡೆಯ ಮೇಲೆ ನಿಂತು ನಿರುಕಿ ನೋಡಿದಳು. ಗಿಡ ಮರಗಳು ಅಡ್ಡವಿದ್ದ ಕಾರಣದಿಂದ ಸರಿಯಾಗಿ ಕಾಣುತ್ತಿರಲಿಲ್ಲ. ಬಂಡೆಯನ್ನಿಳಿದು ಅಲ್ಲಿಗೆ ಹೋಗಲು ಸಿದ್ಧವಾಗುವಲ್ಲಿ, ಒಳಗಿನಿಂದ ದನು ಎಂದು ಪಾರ್ವತಿ ಕರೆದಿದ್ದು ಕೇಳಿ ತನ್ನ ನಡಿಗೆಯ ದಿಕ್ಕು ಬದಲಿಸಿದಳು.

ಆ ತಂಡ ವಯನ ಮತ್ತು ಅವಿಮುಕ್ತದ ಸುತ್ತಮುತ್ತಲಿನ ಪ್ರದೇಶಗಳಿಂದ ಬಂದಿದ್ದ ಅರಣ್ಯಕರದ್ದು. ಅವಿಮುಕ್ತದ ಆರ್ಯರಿಗೆ ವಯನ ಮತ್ತು ಇತರ ಅರಣ್ಯ ಪ್ರದೇಶಗಳನ್ನು ಸುಟ್ಟು ಕೃಷಿಗೆ ಮತ್ತು ವಾಸಕ್ಕೆ

ಅನುಕೂಲ ಮಾಡಿಕೊಡಲು ಅರಸ ಮಹಿಪಾಲ ಯತ್ನಿಸಿದ್ದು ಅರಣ್ಯಕರ ಪ್ರತಿಭಟನೆ ಇನ್ನೂ ಹೆಚ್ಚಲು ಕಾರಣವಾಗಿತ್ತು.

ಮಹಿಪಾಲನು ಸೈನಿಕರು ಆರ್ಯರ ಹಿತರಕ್ಷಣೆಗಾಗಿ ತನ್ನ ಸೈನ್ಯವನ್ನು ವಯನದೊಳಕ್ಕೆ ನುಗ್ಗಿಸಿದ್ದನು. ಅವನಿಗೆ ತನ್ನ ಸೈನಿಕರ ಮೇಲೆ ವಯನದ ಅರಣ್ಯಕರು ದಾಳಿ ಮಾಡಿದ್ದು ಅವಮಾನವೂ, ಅವನ ಪ್ರತಿಷ್ಠೆಗೆ ಘಾತವೂ ಆಗಿತ್ತು. ಹಾಗಾಗಿ, ತಮ್ಮ ಉದ್ದೇಶವನ್ನು ಈಡೇರಿಕೊಳ್ಳಲೇ ತೀರಬೇಕೆಂದು ಅಡ್ಡ ಬಂದ ಅರಣ್ಯಕರನ್ನು ಸದೆ ಬಡೆದು, ವಯನದ ಬಹುಪಾಲು ಭಾಗವನ್ನು ಸುಟ್ಟರು. ಆದರೆ, ಆರ್ಯರ ಕುಟುಂಬಗಳು ಅಲ್ಲಿಗೆ ಹೋಗಲು ಹೆದರಿದವು. ಸುದರ್ಶನದೇವನ ನೇತೃತ್ವದ ವೈದಿಕ ಬ್ರಾಹ್ಮಣರು ಮತ್ತು ಋಷಿಗಳು ಒಂದು ವೇಳೆ ಮಹಿಪಾಲನಿಗೆ ಈ ದಂಗೆಯನ್ನು ಹತ್ತಿಕ್ಕಲು ಕಷ್ಟವಾದರೆ ವಿಷ್ಣುವನ್ನು ಮೊರೆ ಹೋಗಲು ನಿಶ್ಚಯಿಸಿದ್ದರು.

ಅಂದು ಆಚಾರ್ಯ ಸುದರ್ಶನದೇವನ ನೇತೃತ್ವದಲ್ಲಿ ಆರ್ಯ ಋಷಿಗಳು ಮತ್ತು ನರರು ಮಹಿಪಾಲನ ಆಸ್ಥಾನಕ್ಕೆ ನಡೆದರು.

ಮಹಿಪಾಲನಿಗೆ ಶುಭ ಆಶಯಗಳನ್ನು ಕೋರಿದ ಮೇಲೆ ಸುದರ್ಶನದೇವ ನೇರವಾಗಿ ವಿಷಯಕ್ಕೆ ಇಳಿದ. "ಹೇ ರಾಜನ್, ವಯನದಲ್ಲಿ ನಮಗಾಗಿ ಸ್ಥಳವನ್ನು ತೆರವು ಮಾಡಿಸಿದ್ದರೂ, ಅಲ್ಲಿ ಯಾವುದೇ ಕಾರ್ಯವು ಸಾಧ್ಯವಾಗುವುದಿಲ್ಲವೆಂದು ತೋರುತ್ತದೆ. ಕಾರಣವೆಂದರೆ, ತೆರವಾಗಿರುವ ಸ್ಥಳಕ್ಕೇ ಹೊಂದಿಕೊಂಡಂತೆ ರಾಕ್ಷಸರ ನಿವಾಸಗಳೂ ಹಾಗೂ ಅವರ ಚಟುವಟಿಕೆಗಳೂ ಇವೆ. ಈ ಮೊದಲು ನದಿಯ ಮೇಲ್ದಂಡೆಯಲ್ಲಿ ನಾವು ನೆಲೆಸಿದ್ದಾಗಲೂ ಅಪಾರವಾದ ತೊಂದರೆ ಮತ್ತು ಕಿರುಕುಳಗಳನ್ನು ಅನುಭವಿಸಬೇಕಾಗಿತ್ತು. ಆಗ ಇವರ ವಸತಿಗಳಿಗೆ ಮತ್ತು ಚಟುವಟಿಕೆಗಳಿಗೆ ಯಾವ ರೀತಿಯಲ್ಲಿಯೂ ಸಂಪರ್ಕವಿರಲಿಲ್ಲ. ಆದರೂ ಸಾಕಷ್ಟು ತೊಂದರೆ ಕೊಟ್ಟರು. ಆದರೆ, ಈಗ ಅವರ ವಸತಿಗಳಿಗೆ ಹೊಂದಿಕೊಂಡಂತೆ ತೆರವು ಮಾಡಿಸಿರುವ ಸ್ಥಳವಿದೆ. ಹಾಗಾಗಿ ನಾವು ಅಲ್ಲಿಗೆ ಹೋಗಿ ನಿರ್ಭೀತಿಯಿಂದ ವಸತಿಗಳನ್ನು ನಿರ್ಮಿಸಿಕೊಳ್ಳುವುದಾಗಲಿ, ಸಂಚರಿಸುವುದಾಗಲಿ ಸಾಧ್ಯವಾಗುವುದಿಲ್ಲ."

"ಮುನಿವರ್ಯರೇ, ಗಂಗಾ ನದಿಯ ಫಲವತ್ತಾದ ನದೀ ಬಯಲು ಆ ವಯನ ಪ್ರದೇಶ. ಹಾಗಾಗಿ ತಾವು ಅಲ್ಲಿ ನೆಲೆಸಲಿ ಎಂದು ನಾವು ನಿರ್ಧರಿಸಿದ್ದು. ಅವಿಮುಕ್ತವು ಸಮೀಪವಾಗಿದ್ದು, ನಿಮ್ಮ ನೆರವಿಗೆ ನಾವು ಯಾವಾಗಲೂ ಇರುತ್ತೇವೆ. ವಯನದಲ್ಲಿ ಮೊದಲಿಂದಲೂ ವಾಸವಿರುವ ಅರಣ್ಯಕರಲ್ಲಿ ದಂಗೆಕೋರರನ್ನು ಬಂಧಿಸಿ ಶಿಕ್ಷಿಸುತ್ತೇವೆ. ಉಳಿದವರನ್ನು ಮನವೊಲಿಸಿ ನಿಮ್ಮ ಸೇವೆಗೆ ಅನುಕೂಲವಾಗುವಂತೆ ಅಥವಾ ಅಲ್ಲಿಂದ ದೂರವಾಗಿ ಬೇರೆ ಕಡೆ ಹೋಗುವ ವ್ಯವಸ್ಥೆ ಮಾಡುತ್ತೇವೆ. ಅದಕ್ಕೆ ನಮಗೆ ಸ್ವಲ್ಪ ಕಾಲಾವಕಾಶ ಬೇಕು." ಎಂದು ಮಹಿಪಾಲ ಕೇಳಿಕೊಂಡ.

"ಹೇ ರಾಜನ್, ನೀವು ಹೇಳುತ್ತಿರುವ ವಿಷಯವು ಸ್ಥೂಲವಾಗಿ ಮತ್ತು ಔಪಚಾರಿಕವಾಗಿ ನಡೆಯುತ್ತಿರುವ ವಿದ್ಯಮಾನವೇ ಆಗಿದ್ದರೂ, ನಾವು ಮಹಾವಿಷ್ಣುವಿನ ಮೊರೆ ಹೋದಲ್ಲಿ, ಅಸುರಾರಿಯಾದ ಆ ದೇವ ಖಂಡಿತವಾಗಿ ನಿಮ್ಮ ಪ್ರಯತ್ನಕ್ಕೂ, ನಮ್ಮ ಅಸ್ತಿತ್ವಕ್ಕೂ ನೆರವಾಗುವ ರೀತಿಯಲ್ಲಿ ಈ ಅವರನ್ನು ಶಿಕ್ಷಿಸಿ, ಆರ್ಯ ಸಭೆಯನ್ನು ರಕ್ಷಿಸುತ್ತಾನೆ." ಎಂದ ಸುದರ್ಶನದೇವ.

“ಆದರೆ ಹೇ ಮುನಿವರ್ಯ, ಈ ಕ್ಷೇತ್ರವು ರುದ್ರಗಣಗಳು ಮತ್ತು ಆತನ ಅನುಯಾಯಿಗಳು ತಾಂತ್ರಿಕ ಸಾಧನೆ ಮಾಡುತ್ತಿರುವ ಕ್ಷೇತ್ರವಾಗಿದೆ. ಇದು ರುದ್ರನ ತಪೋಭೂಮಿಯೂ ಹೌದು. ಅಂತಹುದರಲ್ಲಿ ನಾವು ವಿಷ್ಣುವಿಗೆ ಮೊರೆ ಹೋಗುವುದು ಹೇಗೆ ಸಾಧ್ಯವಾದೀತು?” ಎಂದು ಕೇಳಿದ ಮಹಿಪಾಲ.

“ಇಲ್ಲೇ ವಿಷಯದ ಸೂಕ್ಷ್ಮತೆ ಇರುವುದು ರಾಜನ್.” ಸುದರ್ಶನದೇವ ಹೇಳಿದ. “ರುದ್ರನು ಮೂಲತಃ ಅನಾರ್ಯನಾಗಿದ್ದು, ಅವನ ಒಲವು ಯಾವಾಗಲೂ ಅನಾರ್ಯರ ಕಡೆಗೇ ಇರುತ್ತದೆ. ಈ ಶಿಶ್ನಾರಾಧಕ ದಸ್ಯುಗಳಾಗಲಿ, ಅರಣ್ಯಕರಾಗಲಿ ತ್ರಿಭಿಸೃಪದ ಶಬರನಿಗೆ ಪ್ರೀತಿಪಾತ್ರರು. ಆರ್ಯರ ಗೋಷ್ಠಿಗಳಿಗೆ ಅಥವಾ ಸಭೆಗಳಿಗೆ ಅನುಕೂಲಕರವಾಗುವಂತೆ ನಡೆದುಕೊಳ್ಳಲು ರುದ್ರನಿಗೆ ಯಾವ ಒಲವೂ ಇಲ್ಲ. ಆದರೆ ಮಹಾವಿಷ್ಣುವು ಆರ್ಯಪ್ರೇಮಿ. ಆರ್ಯ ಸಮಾಜಕ್ಕೆ ಯಾವಾಗಲೂ ಶ್ರೇಯಸ್ಸನ್ನು ಕೋರುವವನು. ಹಾಗಾಗಿ, ಹರಿಯೇ ನಮ್ಮನ್ನು ಕಾಯುವವನು. ಹರಿಯು ಈ ಆರ್ಯ ವ್ಯವಸ್ಥೆಯು ಸ್ಥಿತ್ಯಂತರವಾಗದಂತೆ ಕಾಪಾಡುವನು. ಆದರೆ, ರುದ್ರನು ಈ ವ್ಯವಸ್ಥೆಯನ್ನೇ ನಾಶ ಮಾಡಲು ಉನ್ಮತ್ತನಾಗಿರುವ ಪ್ರಳಯಾಂತಕನು. ಈಗ ಅವಿಮುಕ್ತದ ವ್ಯಾಪ್ತಿಯಲ್ಲಿರುವ ರುದ್ರಗಣದ ತಾಂತ್ರಿಕ ಯೋಗಿಗಳಿಗೆ ಈ ವ್ಯವಸ್ಥೆಯ ಬಗ್ಗೆ ಆಸ್ತೆಯಿಲ್ಲ. ಅವರ ವಾಸ ಸ್ಮಶಾನ ಅಥವಾ ನಿರ್ಮಾನುಷ್ಯವಾದ ಪ್ರದೇಶಗಳಲ್ಲಿ. ಅವರು ಈ ನಮ್ಮ ಸಮೂಹದಲ್ಲಿ ಇರುವ ಆಸಕ್ತಿಯನ್ನೂ ತೋರುವುದಿಲ್ಲ. ಅವರು ಅಲೆಮಾರಿಗಳು. ಅವರಿಂದ ನಮಗೆ ಯಾವ ರೀತಿಯಲ್ಲಿಯೂ ತೊಂದರೆಯಾಗುವುದಿಲ್ಲ. ಈ ರೀತಿಯ ರುದ್ರಗಣದ ಯೋಗಿಗಳು ಇಲ್ಲಿರುವುದರಿಂದ ಇದು ರುದ್ರನ ಕ್ಷೇತ್ರವೇ ಹೊರತು, ಅವರಿಗಾಗಲಿ, ರುದ್ರನಿಗಾಗಲಿ ಈ ಕ್ಷೇತ್ರದ ಮೇಲೆ ಯಾವ ವ್ಯಾಮೋಹವೂ ಇಲ್ಲ ಅಥವಾ ಸ್ವಾಯತ್ತೆಯ ಅಪೇಕ್ಷೆಯಿಲ್ಲ. ಎಷ್ಟೋ ಬಾರಿ ಅವಿಮುಕ್ತದ ಸ್ಮಶಾನದಲ್ಲಿ ಇತರ ಕಾಪಾಲಿಕರ ಜೊತೆಯಲ್ಲಿ ಇದ್ದು ಹೋಗಿರುವ ರುದ್ರನು ಇಲ್ಲಿಗೆ ಬಂದದ್ದೇ ತಿಳಿಯುವುದಿಲ್ಲ. ಕಪಾಲವನ್ನು ಹಿಡಿದುಕೊಂಡು ಅವಿಮುಕ್ತದ ಜನರಲ್ಲಿ ಭಿಕ್ಷೆ ಬೇಡಿ ತಿಂದು ಹೋಗಿದ್ದಾನೆ. ಅವನು ರುದ್ರನೆಂದೂ ತಿಳಿಯದೇ ಜನರು ಭಿಕ್ಷೆ ಹಾಕಿದ್ದಾರೆ. ಹೀಗಾಗಿ, ನಾವು ರಾಕ್ಷಸರ ನಿರ್ಮೂಲನಕ್ಕೆ ಹರಿಯನ್ನು ಕೋರುವುದರಿಂದ ರುದ್ರನ ಆಗ್ರಹಕ್ಕೆ ಕಾರಣವಾಗುವುದಿಲ್ಲ.” ಎಂದ ಸುದರ್ಶನದೇವ.

ಒಂದೆರಡು ದಿನಗಳಲ್ಲಿ ತಿಳಿಸುವುದಾಗಿ ಹೇಳಿ ಅವರನ್ನು ಕಳುಹಿಸಿದ ಮಹಿಪಾಲ ಚಿಂತೆಗೀಡಾದ. ಮೂಲತಃ ಮಹಿಪಾಲನ ರಾಜವಂಶಕ್ಕೆ ವಿಷ್ಣುವಾಗಲಿ, ಅಥವಾ ಇನ್ನಾರೇ ಆರ್ಯದೇವತೆಗಳಾಗಲಿ ಮಾನ್ಯರಾಗಿರಲಿಲ್ಲ. ನದಿದೇವತೆಯೇ ಅವರ ಕುಲದೇವತೆ. ವನದೇವತೆಯೇ ವಯನದವರ ಕುಲದೇವತೆ. ಈ ದೇವತೆಯರಿಬ್ಬರೂ ಸೋದರಿಯರು. ಈ ಎರಡು ಹೆಣ್ಣು ದೇವತೆಗಳು ಇರುವಾಗ, ಆರ್ಯರ ಪುರುಷ ದೇವತೆಯೊಬ್ಬನನ್ನು ಮಧ್ಯೆ ತರುವುದು ಈ ದೇವತೆಯರ ಆಗ್ರಹಕ್ಕೆ ಕಾರಣವಾಗದೇ ಎಂಬ ಆಲೋಚನೆ.

ಹಾಗೆಯೇ ವಯನದವರೂ ಕೂಡ ಅವಿಮುಕ್ತದವರೇ, ಅವರು ಈ ಆರ್ಯರ ಆಗಮನಕ್ಕೂ ಮೊದಲೇ ಅರಣ್ಯಗಳಲ್ಲಿ ನೆಲೆಸಿರುವಂತಹ ಮೂಲನಿವಾಸಿಗಳಾಗಿದ್ದಾರೆ. ಅವಿಮುಕ್ತವನ್ನು ಸುತ್ತವರೆದಿರುವ ಕಾಡಿನ ಮೂಲಕ ಯಾವುದೇ ಶತ್ರುವು ನಾಡಿಗೆ ನುಸುಳದಂತೆ ಕಾಪಾಡುತ್ತಿರುವವರು. ಅವಿಮುಕ್ತದ ಭಾಗವೇ ಆಗಿರುವ ಅರಣ್ಯಕರನ್ನು ಸದೆ ಬಡಿಯಲೆಂದು, ಹೊರಗಿನಿಂದ ದೇವರೊಬ್ಬನನ್ನು ಕೋರಿ ತರುವುದು ಎಷ್ಟರಮಟ್ಟಿಗೆ ಸಮಂಜಸವೆಂದು ಮಹಿಪಾಲನ ಯೋಚನೆ. ನಾವು ನಮ್ಮವರೊಡನೆ ಸಮಸ್ಯೆಯನ್ನು ಬಗೆ ಹರಿಸಿಕೊಳ್ಳಬೇಕೆಂದು ಚತುರ ಮಂತ್ರಿಯಾದ ಸಂಬೋಧಿಯ ಸಲಹೆಯಾಗಿತ್ತು ಕೂಡ.

ಸಧ್ಯದ ಪರಿಸ್ಥಿತಿಯೆಂದರೆ, ಅಂದು ಅವಿಮುಕ್ತದ ಸೈನಿಕರು ಉರಿಯಿಟ್ಟ ಮರಗಳನ್ನು ವಯನದ ಅರಣ್ಯಕರು ಆದಷ್ಟು ಆರಿಸಿದ್ದರು. ಆ ಸುಟ್ಟ ಕಾಡುಗಳಲ್ಲಿ ವಯನದವರಿದ್ದು, ಘುಂಢಿ, ಮಿತ, ಆಸುರ ಮತ್ತು ಪಿಚುಡಲರೆಂಬ ಬಂಡಾಯಕೋರರು ರಾಜ್ಯಾಡಳಿತದವರಿಂದ ಕರೆಯಿಸಿಕೊಳ್ಳಲ್ಪಟ್ಟು, ವದೀರಜ್ಜನ ನಿರ್ದೇಶನದಂತೆ ತಮ್ಮ ಅರಣ್ಯ ಪ್ರದೇಶಗಳನ್ನು ಮತ್ತು ಮತ್ತೆ ಕಟ್ಟಿಕೊಂಡಿರುವ ವಸತಿಗಳನ್ನು ಕಾಯುತ್ತಿದ್ದಾರೆ. ಈಗ ಯಾವ ಪ್ರಯಾಣಿಕರೂ ವಯನದ ಮಾರ್ಗವಾಗಿ ಬರುತ್ತಿಲ್ಲ. ವಯನದವರೂ ಅವಿಮುಕ್ತದ ಕಡೆಗೆ ಬರುತ್ತಿಲ್ಲ. ಆದರೆ, ವಯನದ ಸನಿಹದಲ್ಲಿರುವ ಇತರ ಅರಣ್ಯಕರು ವದೀರಜ್ಜನ ಬಂಡಾಯದ ನೆರವಿಗೆ ಬರುತ್ತಿದ್ದಾರೆ.

ಮಹಿಪಾಲನು ಅಷ್ಟು ಹೇಳಿದ್ದರೂ ಸುದರ್ಶನದೇವನ ಕಡೆಯಿಂದ ಕೆಲವು ಋಷಿಗಳು ಮತ್ತು ಆರ್ಯ ಮುಖಂಡರು ಇಂದ್ರನ ಪಟ್ಟಣವಾದ ಅಮರಾವತಿಯತ್ತ ನಡೆದಿದ್ದರು. ಇಂದ್ರನಿಗೆ ವಿಷಯವನ್ನು ನಿವೇದಿಸಿ, ಭಗವನ್ ವಿಷ್ಣುವನ್ನು ನೆರವಿಗೆ ಕೋರಲು ನಿರ್ಧರಿಸಿದ್ದರು. ಈ ವಿಷಯ ಮಹಿಪಾಲನಿಗೆ ತಿಳಿಯಿತು. ಇದರಿಂದ ವಿಚಲಿತನಾಗಿ ತುರ್ತಾಗಿ ತನ್ನ ಆಸ್ಥಾನದಲ್ಲಿ ಮುಖಂಡರ ಸಭೆಯನ್ನು ಕರೆದ.

“ತಾವು ಇದರಿಂದ ವಿಚಲಿತರಾಗುವ ಅಗತ್ಯವಿಲ್ಲ. ವಿಷ್ಣುವಿನ ಆಗಮನವು ರಾಜನಿಗಾಗಲಿ, ಅವಿಮುಕ್ತದ ಇತರ ನಿವಾಸಿಗಳಿಗಾಗಲಿ ಏನೂ ಸಮಸ್ಯೆಯಾಗುವುದಿಲ್ಲ. ಜೊತೆಗೆ, ವನದೇವತೆ ಮತ್ತು ಕುಲದೇವತೆಯರು ಬರಿಯ ದೇವತೆಯರೇ ಹೊರತು ದೇವರುಗಳಲ್ಲ. ಅವರುಗಳಿಗಿಂತ ಮಹಾವಿಷ್ಣುವು ಶ್ರೇಷ್ಠನೂ, ಶಕ್ತಿಶಾಲಿಯೂ, ಯಜ್ಞಗಳಿಂದ ಹವಿಸ್ಸುಗಳನ್ನು ಸ್ವೀಕರಿಸುತ್ತಾ ಪ್ರಭಾವಶಾಲಿಯೂ ಆಗಿದ್ದಾನೆ. ಆರ್ಯ ಬಳಗಕ್ಕೆ ಪ್ರಾಮಾಣಿಕವಾಗಿ ನೆರವು ನೀಡುವುದರಿಂದ ಮಹಿಪಾಲನಿಗೆ ಮತ್ತು ಅವಿಮುಕ್ತದ ಜನತೆ ತೊಂದರೆಯೇನೂ ಆಗದೇ, ಬದಲಾಗಿ ಮಹಾವಿಷ್ಣುವಿನ ಪ್ರಸನ್ನತೆಯು ಲಭಿಸಿ ದುಷ್ಟರ ನಿರ್ಮೂಲನ ಶಾಶ್ವತವಾಗಿ ಆಗುತ್ತದೆ.” ಎಂದು ಸುದರ್ಶನ ದೇವನ ಋಷಿಗಣದ ಸಮೂಹದವರಲ್ಲೊಬ್ಬನು ಮಹಿಪಾಲನನ್ನು ಸಮಾಧಾನಪಡಿಸಿದ.

ಅದೊಂದು ಸಂಜೆ ಸೂರ್ಯಾಸ್ತವಾಗುತ್ತಿದ್ದ ಸಮಯದಲ್ಲಿ ವಯನಕ್ಕೆ ಅವಿಮುಕ್ತದಿಂದ ಒಂದು ಅಶ್ವರಥವು ನಾಲ್ವರು ಅಶ್ವಭಟರ ಬೆಂಗಾವಲಿನಲ್ಲಿ ಬಂದಿತ್ತು. ಘುಂಢಿ ಮತ್ತು ಇತರೆಲ್ಲರೂ ಯುದ್ಧ ಸನ್ನದ್ಧರಾದಂತೆ ನಿಲ್ಲುತ್ತಿದ್ದಂತೆ ರಥದಿಂದ ಇಳಿದ ಅವಿಮುಕ್ತದ ಮಂತ್ರಿ ಸಂಬೋಧಿಯು ಏಕಾಂಗಿಯಾಗಿ ಇವರೆಡೆಗೆ ನಡೆದು ಬಂದ.

ಸಂಬೋಧಿಯನ್ನು ನೋಡುತ್ತಲೇ ಎಲ್ಲರೂ ತಮ್ಮ ಶಸ್ತ್ರಗಳನ್ನು ಕೆಳಗಿಳಿಸಿದರು. ಸಂಬೋಧಿಯು ನೇರವಾಗಿ ವದೀರಜ್ಜನ ಬಳಿಗೆ ಬಂದ.

“ಹೇ ವದೀರ, ಅರಣ್ಯಕರ ಮುಖಂಡನೇ, ನಾನು ಈಗ ಬಹುಮುಖ್ಯವಾದ ವಿಷಯವನ್ನು ನಿಮ್ಮೊಡನೆ ಪ್ರಸ್ತಾಪಿಸಲು ಬಂದಿದ್ದೇನೆ.” ಅರಮನೆಯ ಆಸ್ಥಾನದಲ್ಲಿ ಇದುವರೆಗೂ ನಡೆದಿರುವ ವಿಷಯವನ್ನು ತಿಳಿಸಿ, “ಮಹಾವಿಷ್ಣುವು ರಾಕ್ಷಸರ ಶತ್ರುವು. ಇದುವರೆಗೂ ಅವನು ಹಿರಣ್ಯಾಕ್ಷ, ಹಿರಣ್ಯಕಶಿಪು, ಮಧು; ಅನೇಕಾನೇಕ ರಾಕ್ಷಸರನ್ನು ಸಂಹರಿಸಿದ್ದಾನೆ. ಅವನು ಮಾಯಾವಿಯೂ ಹೌದಂತೆ. ಅವನೀಗ ಇಲ್ಲಿಗೆ ಬರುವುದೇ ಆದಲ್ಲಿ ಬಹು ಭಯಂಕರ ಹೋರಾಟವಾಗುವುದಂತೂ ದಿಟ. ಮುಂದೆ ನಡೆಯುವ ಯುದ್ಧದಲ್ಲಿ ಏನಾಗುವುದು ಎಂದು ಹೇಳಲು ಸಾಧ್ಯವಿಲ್ಲ. ಯುದ್ಧದಲ್ಲಿ ಯಾರೇ ಗೆದ್ದರೂ ಸೋತರೂ

ರಕ್ತಪಾತವಾಗುತ್ತದೆ. ಅರಣ್ಯನಾಶದ ಜೊತೆಗೆ ಜೀವನಾಶವೂ ಆಗುತ್ತದೆ. ಆದ್ದರಿಂದ ತಾವು ತಕ್ಷಣಕ್ಕೆ, ಸಧ್ಯದ ಪರಿಸ್ಥಿತಿಯು ತಿಳಿಯಾಗುವವರೆಗೆ ತಮ್ಮಲ್ಲಿ ಕೆಲವರು ಅಡಗುತಾಣಕ್ಕೆ ಹೋಗುವುದು ಒಳಿತು. ಇಲ್ಲಿಯ ಮೂಲನಿವಾಸಿಗಳಾದ ನಿಮ್ಮ ಮೇಲೆ ನಮಗೆ ಗೌರವವಿದೆ. ಹಾಗೂ, ನಿಮಗೆ ಯಾವುದೇ ರೀತಿಯಲ್ಲಿ ಕೇಡುಂಟಾಗುವುದು ನಮಗೆ ಭರಿಸಲು ಸಾಧ್ಯವಿಲ್ಲ. ಹಾಗೆಯೇ ಆರ್ಯರ ಸಂಸರ್ಗವೂ ನಾಡಿನ ದೃಷ್ಟಿಯಿಂದ ಅಗತ್ಯವಾಗಿದೆ. ಅವರಿಗೆ ನಮಗೆ ತಿಳಿಯದ ಅನೇಕಾನೇಕ ವಿದ್ಯೆಗಳು, ಶಾಸ್ತ್ರಗಳು ಮತ್ತು ತಂತ್ರಗಳು ತಿಳಿದಿವೆ. ಅವರಿಂದ ನಿಮಗೆ ಕೆಡುಕಾಗಬಾರದು, ನಿಮ್ಮಿಂದ ಅವರಿಗೆ ಕೆಡುಕಾಗಬಾರದು. ಆದ್ದರಿಂದ, ತಾವು ದಯಮಾಡಿ ದುಡುಕಿಗೆ ಬಲಿಯಾಗದೇ, ಸಾವಧಾನವಾಗಿ ವಿಷಯವನ್ನು ಪರಿಗ್ರಹಿಸಿ, ಸಂಧಾನ ಮಾಡಿಕೊಳ್ಳುವುದು ಒಳ್ಳೆಯದೆಂದು ತೋರುತ್ತದೆ."

"ಸಂಧಾನವೆಂದರೆ ಏನು?" ವದೀರಜ್ಜನ ಮೊದಲ ಪ್ರಶ್ನೆ. ಸಂಧಾನದ ಹೆಸರಿನಲ್ಲಿ ನಮ್ಮ ಉದ್ದೇಶದ ತ್ಯಾಗವಾಗಬಾರದೆಂದು ಅವನ ಅಂಬೋಣ.

ಅಂದು ವಯನದಲ್ಲಿ ಉಂಟಾದ ರಕ್ತಪಾತಕ್ಕೆ ಸೇನಾಧಿಪತಿಯ ಅವಿವೇಕ ಕಾರಣವೆಂದು ವದೀರಜ್ಜ ತಿಳಿಸಿದ. ಆದರೆ, ಈ ಪ್ರಕರಣದಲ್ಲಿ ರಕ್ತಪಾತಕ್ಕೆ ಕಾರಣ ಢುಂಢಿಯ ಅನಿಯಂತ್ರಿತ ಆವೇಶ ಎಂದು ಸಂಬೋಧಿಗೆ ಅನ್ನಿಸಿದರೂ, ಹಾಗೆ ಹೇಳದೇ, "ಆದರೆ, ಢುಂಢಿ ಇನ್ನೂ ಹೆಚ್ಚಿನ ಸಮಾಧಾನ ತಾಳಬೇಕಿತ್ತು." ಎಂದ.

ಹೊರಡುವ ಮುನ್ನ, ವಯನದಲ್ಲಿ ಎಲ್ಲರೂ ಚರ್ಚಿಸಿ, ನಾಳೆ ಬೆಳಗಾಗುವುದರೊಳಗೆ ಏನಾದರೂ ಒಂದು ಇತ್ಯರ್ಥಕ್ಕೆ ಬಂದು ತನ್ನ ಮನೆಗೇ ನೇರವಾಗಿ ಯಾರಾದರೊಬ್ಬರು ರಾಯಭಾರಿಯಾಗಿ ಬಂದರೆ ಅವರನ್ನು ಮಹಿಪಾಲ ಅರಸನ ಬಳಿಗೆ ಕರೆದೊಯ್ಯುವುದಾಗಿ ತಿಳಿಸಿ ಸಂಬೋಧಿ ಅಲ್ಲಿಂದ ನಿರ್ಗಮಿಸಿದ.

"ನಾನು ಈ ಸ್ಥಳವನ್ನು ಬಿಟ್ಟು ಎಲ್ಲಿಗೂ ಹೋಗುವುದಿಲ್ಲ." ಎಂದು ವದೀರಜ್ಜ ಘೋಷಿಸಿದರೆ, "ನಾನು ವದೀರಜ್ಜನ ಬಿಟ್ಟು ಎಲ್ಲಿಗೂ ಹೋಗುವುದಿಲ್ಲ." ಎಂದು ಢುಂಢಿ ಘೋಷಿಸಿದ.

ಆದರೆ, ವದೀರಜ್ಜ ತನ್ನ ಕಣ್ಣೆದುರೇ ಕುಳಿತಿರುವ ಬಸುರಿ ಹೆಂಗಸರನ್ನು ಮತ್ತು ಹೋರಾಡಲಾಗದಂತಹ ಇತರರನ್ನು ನೋಡುತ್ತಾ, "ನಾವು ಜೀವಿಸಲೆಂದು ನಮ್ಮ ಒಡೆಯ ನಮಗೆ ಎಲ್ಲವನ್ನೂ ಕೊಟ್ಟಿರುವುದು. ನಾವು ಕರೆಯಬೇಕೆಂದರೆ ಜೀವನವನ್ನು ಕರೆಯಬೇಕೇ ಹೊರತು, ನಾಶವನ್ನಲ್ಲ. ಆದರೆ ಜೀವನವನ್ನು ಉಳಿಸಲು ಸಾವು ಬಂದರೆ ಅದು ಸ್ವೀಕರಿಸಬಹುದಾಗಿರುವಂತಹದ್ದು. ಆಗ ಅದು ಸಾವಲ್ಲ ಉಜ್ಜೀವನ. ನಾನು ಈ ವಯನದ ಜೀವವನ್ನು ಉಳಿಸಲು ಉಜ್ಜೀವನ ನಡೆಸಲು ಸಿದ್ಧಸಿದ್ದೇನೆ. ಆದರೆ, ನಮ್ಮ ಸಂತತಿ ಉಳಿಯಬೇಕು. ಬೆಳೆಯಬೇಕು. ನಮ್ಮ ರಕ್ತದಿಂದ ಹುಟ್ಟುವ ಮಕ್ಕಳಲ್ಲಿ ನಾವು ಬಯಸುವ ಈ ಜೀವನ ನಡೆಸಲು ಆಶಯವಿರುತ್ತದೆ. ಅವರನ್ನು ಉಳಿಸಬೇಕು. ಅವರು ಮುಂದೆ ಈ ಜೀವನವನ್ನು ಬೆಳೆಸುತ್ತಾರೆ. ಆದ್ದರಿಂದ ಅವರನ್ನು ಉಳಿಸಲು ಎಲ್ಲಾ ಬಸುರಿ ಹೆಂಗಸರನ್ನು ಮತ್ತು ಅವರ ರಕ್ಷಕರನ್ನು ಬೇರೆ ಕಡೆಗೆ ಕಳುಹಿಸೋಣ. ಇಲ್ಲಿ ಪರಿಸ್ಥಿತಿ ಸರಿಹೋದ ಬಳಿದ ಹಿಂದಕ್ಕೆ ಕರೆಯಿಸಿಕೊಳ್ಳೋಣ." ಎಂದು ಹೇಳಿ ಸುಮ್ಮನಾದ.

ಆದರೆ, ಹೋಗುವುದೆಲ್ಲಿಗೆ? ಇಡೀ ಜಂಬೂದ್ವೀಪದಲ್ಲಿ ಈಗ ಆರ್ಯರ ಪ್ರಾಬಲ್ಯ ಹರಡುತ್ತಿದೆ. ಆದರೆ, ರುದ್ರನ ಪ್ರಾಬಲ್ಯವಿರುವ ಕೈಲಾಸ, ಸೋಮನಾಥ, ಪ್ರಯಾಗ ಮತ್ತು ಶುಕ್ತಿಮತ್‌ದಂತಹ ಪ್ರದೇಶಗಳಲ್ಲಿ

ಅಥವಾ ನಾಗಲೋಕದಲ್ಲಿ ಎಲ್ಲಿಯಾದರೂ ಆಶ್ರಯಪಡೆಯಬಹುದು ಎಂದು ಕೆಲವರು ಅಭಿಪ್ರಾಯಪಟ್ಟರು. ಎಲ್ಲಿಯಾದರೂ ಏಕೆ? ಸ್ವಯಂ ರುದ್ರನಲ್ಲಿಯೇ ಆಶ್ರಯ ಪಡೆಯಬಹುದು ಎಂದೂ ಕೆಲವರಿಗೆ ಅನ್ನಿಸಿತು. ಅದು ಸರಿ ಕೂಡ. ವಯನದಿಂದ ಹೋದ ಎಷ್ಟೋ ಜನ ಅರಣ್ಯಕರು ಹಿಮದೇಶದ ಕಾಡುಗಳಲ್ಲಿ ಇದ್ದಾರೆ. ಅಲ್ಲಿನ ರಾಜನಾದ ಹಿಮವಂತನಿಗೆ ಮತ್ತು ಆತನ ಮಗಳು ಪಾರ್ವತಿಗೆ ಸೇವೆ ಸಲ್ಲಿಸಿದ್ದಾರೆ.

ಹೋರಾಟ ಮಾಡಲು ಶಕ್ತರಾದವರಲ್ಲಿ ಇಬ್ಭಾಗ ಮಾಡಬೇಕಾಯಿತು. ಏಕೆಂದರೆ, ವಯನದಲ್ಲಿಯೇ ಇದ್ದು, ಅದರ ರಕ್ಷಣೆಗಾಗಿ ಹೋರಾಡುವವರು ಹಾಗೂ ಗರ್ಭಿಣಿಯರನ್ನು ಕರೆದೊಯ್ಯುವ ತಂಡದ ರಕ್ಷಣೆ ಮಾಡುವವರು. ಹಾಗೆಯೇ ಇಬ್ಭಾಗವಾದ ಮೇಲೆ ಮರುದಿನ ಬೆಳಗಿನ ಜಾವವೇ ಅಲ್ಲಿಂದ ಹೊರಡುವ ವ್ಯವಸ್ಥೆಯಾಯಿತು. ಅವಿಮುಕ್ತದ ಮಾರ್ಗವಲ್ಲದೇ ಬೇರೊಂದು ಮಾರ್ಗದಲ್ಲಿ ಚಿತ್ರಕೂಟದ ಮುಖೇನ ಅಂತರ್ವೇದಿಯನ್ನು ತಲುಪಿ ಅಲ್ಲಿಂದ ಕೈಲಾಸವನ್ನು ತಲುಪುವುದು ತೀರ ಪ್ರಯಾಸದ ಕೆಲಸವಾದರೂ ಸಧ್ಯಕ್ಕೆ ತೀರಾ ಅಗತ್ಯವಾಗಿತ್ತು.

ಹಾಗೆ ಬಂದಿದ್ದ ತಂಡವೇ ದನುವಿನ ಕಣ್ಣಿಗೆ ಬಿದ್ದದ್ದು.

ಅಂದು ರುದ್ರನು ಇದ್ದಕ್ಕಿದ್ದಂತೆ ಕೈಲಾಸದಿಂದ ಸೋಮನಾಥಕ್ಕೆ ಹೊರಡುವವನಿದ್ದ. ಆ ತಂಡದ ಮುಂದಾಳತ್ವ ವಹಿಸಿ ಬಂದಿದ್ದ ಮಿತ ಎಲ್ಲಾ ವಿಷಯಗಳನ್ನೂ ರುದ್ರನಿಗೆ ಅರುಹಿದ. ರುದ್ರನಿಗೆ ಮೊದಲನೆಯದಾಗಿ ನಗು ಬಂದಿದ್ದು ವಿಷ್ಣುವಿನ ಹೆಸರು ಕೇಳಿ. ಅವನು ಹೇಳಿದ. “ಯಾರಿಗೂ ಹೆದರುವ ಅಗತ್ಯವಿಲ್ಲ. ನೀವು ಅಲ್ಲಿಂದ ಇಲ್ಲಿಗೆ ಬಂದಿದ್ದೀರಿ. ನಾನೀಗ ಸೋಮನಾಥಕ್ಕೆ ಹೋಗುತ್ತಿದ್ದೇನೆ. ಅಲ್ಲಿಗೆ ಬನ್ನಿ. ದೇವತೆಗಳಾಗಲಿ, ಅಥವಾ ರಾಕ್ಷಸರಾಗಲಿ ಈ ರುದ್ರನಿಗೆ ಏನೂ ಬೇಧವಿಲ್ಲ. ಅರಣ್ಯಕರಾಗಲಿ ಅಥವಾ ಆರ್ಯರಾಗಲಿ ಸೋಮನಾಥದಲ್ಲಿ ಯಾರೂ ನನ್ನ ಅಪ್ಪಣೆಯಿಲ್ಲದೇ ಏನೂ ಮಾಡಲಾಗದು. ನೀವು ನಿರ್ಭೀತಿಯಿಂದ ನಿಮ್ಮ ಸಂತಾನಗಳನ್ನು ಅಲ್ಲಿ ಪೋಷಿಸಬಹುದು. ಬನ್ನಿ.”

ಮಿತನ ಮೇಲ್ವಿಚಾರಣೆಯಲ್ಲಿ ಬಂದಿದ್ದ ಆ ಅರಣ್ಯಕರ ಗುಂಪು ಸೋಮನಾಥಕ್ಕೆ ನಡೆಯಿತು. ದಾರಿಯುದ್ದಕ್ಕೂ ಹಾಡುತ್ತಾ, ಕುಣಿಯುತ್ತಾ, ಕುಡಿಯುತ್ತಾ ಆನಂದದಿಂದ ರುದ್ರನ ಹಿಂಬಾಲಿಸಿದರು.

ಈ ವಿಷಯ ನಂದಿಯಿಂದ ದನುವಿಗೆ ತಿಳಿದು, “ಅಯ್ಯೋ, ನನ್ನ ಜನ ಬಂದಿದ್ದೂ ನಾನು ಅವರನ್ನು ಸಂಧಿಸಲಾರದೇ ಹೋದೆನೇ!” ಎಂದು ಪೇಚಾಡಿಕೊಂಡಳು. ಆದರೆ, ಪಾರ್ವತಿಯ ಅಪ್ಪಣೆಯನ್ನು ಪಡೆದು ಎಂದಾದರೊಂದು ದಿನ ಸೋಮನಾಥಕ್ಕೆ ಹೋಗಬೇಕೆಂದುಕೊಂಡಳು ದನು. ಆದರೆ, ಸಧ್ಯಕ್ಕೆ ಪಾರ್ವತಿಯ ಮನಸ್ಥಿತಿ ಸರಿಯಿಲ್ಲದ ಕಾರಣ ತತ್ಕಾಲಕ್ಕೆ ವಿಷಯ ಪ್ರಸ್ತಾಪಿಸದೇ ಸರಿಯಾದ ಸಮಯಕ್ಕಾಗಿ ಕಾದಳು.

ಅವಿಮುಕ್ತದ ಅರಸು ಮಹಿಪಾಲ ವದೀರಜ್ಜನ ಕರೆಯಿಸಿದ್ದ.

“ಕಾಡಿನಲ್ಲಿರುವ ಜನರಿಗೆ ಈ ಕಾಡಾದರೇನು ಆ ಕಾಡಾದರೇನು? ವಯನದಿಂದ ಇನ್ನಷ್ಟು ಮುಂದಿರುವ ಅರಣ್ಯ ಪ್ರದೇಶಕ್ಕೆ ತೆರಳಿಬಿಡಿ. ಈಗ ಕೆಲಸಕ್ಕೆ ತೊಡಗಿರುವ ಸ್ಥಳದಲ್ಲಿ ಆರ್ಯರು ತಮ್ಮ ನೆಲೆ ಸ್ಥಾಪಿಸಿಕೊಳ್ಳಲು ಬಿಟ್ಟುಬಿಡಿ. ಎಲ್ಲರೂ ಶಾಂತಿ ಮತ್ತು ಸಮಾಧಾನದಿಂದ ಇರೋಣ.” ಎಂಬುದು ಅರಸನ ಮಾತಿನ ಒಕ್ಕಣೆ.

“ನಾವು ಕಾಡಿನವರೇ ಆದ್ದರಿಂದ ಈ ಕಾಡಾದರೂ ಆ ಕಾಡಾದರೂ ನಾಶಕ್ಕೆ ಎಡೆಯಾಗುತ್ತಿದೆ ಎಂದರೆ ಸಹಿಸಿ ಸುಮ್ಮನಾಗುವುದು ಹೊಣೆಗಾರಿಕೆಯಿಂದ ಹೊರಬಿದ್ದಂತೆ. ರಾಜಿ ಮಾಡಿಕೊಳ್ಳುವುದು ಎಂದರೆ ವಿರೋಧ ದಿಕ್ಕುಗಳಿಂದ ಇಬ್ಬರೂ ಪರಸ್ಪರ ಸನಿಹಕ್ಕೆ ಕ್ರಮಿಸತೊಡಗುವುದು. ಎಲ್ಲಿ ಸಂಧಿಸುತ್ತೇವೆಯೋ ಅದು ಸಂಧಾನ. ಒಬ್ಬರು ನಡೆಯುವುದಿಲ್ಲ. ಇನ್ನೊಬ್ಬರು ಮಾತ್ರವೇ ನಡೆದು ಸಂಧಿಸಬೇಕೆಂದರೆ, ಅದು ಸಂಧಾನವಲ್ಲ, ಸೋಲಿನ ಶರಣಾಗತಿ. ನೀವು ನಮಗೆ ಸೋಲಲು ಹೇಳುತ್ತಿದ್ದೀರಿ, ಸಂಧಾನ ಮಾಡುತ್ತಿಲ್ಲ.” ವದೀರಜ್ಜನ ಮಾತು ಅತಿ ಸ್ಪಷ್ಟವಾಗಿತ್ತು. ಅಲ್ಲಿದ್ದ ಆರ್ಯ ಮುಖಂಡರಿಗೆ ವದೀರಜ್ಜನ ಮಾತಿನ ವರಸೆ ಅತ್ಯಂತ ಆಶ್ಚರ್ಯವಾಗಿತ್ತು. ಆರ್ಯರ ಹೊರತು ಇನ್ನಾರಿಗೂ ಹಾಗೆ ಮಾತಾಡಲು ಅಥವಾ ಸಮರ್ಥಿಸಲು ಶಬ್ಧ ಸಂಪತ್ತುಗಳಿಲ್ಲ ಹಾಗೂ ಸಮರ್ಥನೀಯವಾಗಿ ವಿಷಯವನ್ನು ಪ್ರಸ್ತುತಪಡಿಸಲು ಸಾಧ್ಯವಾಗುವುದಿಲ್ಲವೆಂಬುದು, ಅದರಲ್ಲೂ ಈ ಉಪಕೃಷ್ಟರೂ, ಉಚ್ಚಿಷ್ಟರೂ ಆದವರಿಂದ ತರ್ಕಬದ್ಧ ಮಾತುಗಳು ಬಾರವು ಎಂಬುದು ಅವರ ಸಾಧಾರಣ ಗ್ರಹಿಕೆಯಾಗಿತ್ತು.

ವದೀರಜ್ಜನು ಹೇಳಿದಂತೆ ಅವರು ಸಂಧಾನದ ದಾರಿಯನ್ನು ಉಪಕ್ರಮಿಸಬೇಕೆಂದರೆ ತಮ್ಮ ಪ್ರತಿಷ್ಠೆಯ ಅಂತಸ್ತುಗಳಿಂದ ಕೆಳಗೆ ಇಳಿಯಬೇಕಾಗಿತ್ತು. ಹಾಗೆ ಇಳಿದರೆ, ಸಂಧಾನದ ಮಾರ್ಗದಲ್ಲಿ ಈ ಅರಣ್ಯಕರು ಏರಲೇಬೇಕಾಗಿರುವುದು ಅನಿವಾರ್ಯ. ಮೊಂಡು ಮೂಗಿನ, ಕಪ್ಪು ಜನರ, ಆರ್ಯ ಭಾಷೆಯನ್ನು ಆಡದ, ಯಜ್ಞ ಯಾಗಗಳನ್ನು ಒಪ್ಪದ, ಶಿಶ್ನಾರಾಧಕನ, ಬೆಳ್ಳುಳ್ಳಿಯೊಂದಿಗೆ ಹಸಿ ಮಾಂಸವನ್ನೇ ತಿನ್ನುವ ಅನಾರ್ಯರಿಗೆ ಮನ್ನಣೆ ನೀಡಿದರೆ, ಅದು ಆರ್ಯರ ಘನತೆಗೇ ಕುಂದು. ವಿಶ್ವದಲ್ಲೆಲ್ಲಾ ಆರ್ಯ ಸಾಮ್ರಾಜ್ಯವನ್ನು ಸ್ಥಾಪಿಸಲು ಹೊರಟಿರುವ ಆರ್ಯರಿಗೆ ತಮ್ಮ ಶ್ರೇಷ್ಠತೆಯನ್ನು ಎಡೆಯಿಟ್ಟು ಅನಾರ್ಯರ ಸಿದ್ಧಾಂತವನ್ನು ಮಾನ್ಯ ಮಾಡಲಾದೀತೇ?

ವದೀರಜ್ಜ ಪ್ರಕೃತಿಯ ಮೂಸೆಯಲ್ಲಿ ಮಾಗಿರುವ ಅನುಭವಿ. ಅವನ ನೇರ, ಪಾರದರ್ಶಕ ಮತ್ತು ಮುಗುದತೆಯಿಂದ ಕೂಡಿರುವವನು. ಅವನು ಈ ಮೂರೂ ಗುಣಗಳಿರುವುದರಿಂದಲೇ ದಿಟ್ಟನೂ ಹೌದು. ಆಸೆ ಮತ್ತು ಭಯಗಳಿಂದ ಹೊರತಾದವನಿಗೆ ಧೈರ್ಯವೆಂಬುದು ಸಹಜ ಗುಣ.

ಸುದರ್ಶನ ದೇವ, “ಸಧ್ಯಕ್ಕೆ ಪಂಚಶರಧಿಯಸಾವ ಯಜ್ಞಕ್ಕೆ ಸಿದ್ಧವಾಗಬೇಕಿದೆ. ಅದು ಪೂರ್ಣವಾದ ಮೇಲೆ ಈ ಮಾತುಕತೆಯನ್ನು ಮುಂದುವರೆಸುವ.” ಎಂದು ಮೇಲೆದ್ದು ಬಿಟ್ಟ.

ಹೀಗಾಗಿ ಮೊದಲ ಸುತ್ತಿನ ಸಂಧಾನವು ವಿಫಲವಾಯಿತು. ಸುದರ್ಶನ ದೇವ ಮತ್ತು ಹಾಗೂ ಅವನ ಕಡೆಯವರು ಸ್ವಸ್ಥಾನಗಳಿಗೆ ತೆರಳಿದ ಮೇಲೆ ಸಂಬೋಧಿಯು ವದೀರಜ್ಜನ ಮುಂದೆಯೇ ಮಹಿಪಾಲನಲ್ಲಿ ಮಾತಾಡಿದ.

“ಆರ್ಯರ ನಿಯೋಗವೊಂದು ಇಲ್ಲಿಂದ ಮಹಾವಿಷ್ಣುವಿನ ಕಡೆಗೆ ತೆರಳಿರುವ ಕಾರಣದಿಂದ ಸುದರ್ಶನದೇವ ಯಜ್ಞದ ನೆಪದಲ್ಲಿ ಮಾತುಕತೆಯನ್ನು ನಿಲ್ಲಿಸಿದ್ದಾನೆ.”

"ಮಹಾವಿಷ್ಣುವು ದೇಹದಲ್ಲಿ ಇರುವನು ಎಂತಾದರೆ, ಅವನು ದೇವರೆಂತಾಗುತ್ತಾನೆ? ದೇವರೆಂದರೆ ಬಾಧೆಗಳಿಗೆ ಒಳಗಾಗುವ ದೇಹ ಮತ್ತು ಕಾಮನೆಗಳಿಗೆ ಸಿಗುವಂತಹ ಮಾನವ ಸಹಜ ಮನಸ್ಸುಗಳು ಇಲ್ಲದವರು ತಾನೇ? ತಮ್ಮ ಗುಂಪಿಗೆ ಒಲವು ತೋರುವವನು ಎಂದರೆ, ಆ ಗುಂಪಿನ ಪಕ್ಷಪಾತದ ನಾಯಕ ಅವನಾಗುತ್ತಾನೆಯೇ ಹೊರತು, ಎಲ್ಲಾ ವಿಷಯಗಳನ್ನೂ ಗ್ರಹಿಸಬಲ್ಲ, ಎಲ್ಲಾ ನರರುಗಳನ್ನು ಪರಿಗಣಿಸಲಾಗುವ ಶಕ್ತಿಯಾಗಿರಬೇಕಲ್ಲವೇ?" ಮಹಿಪಾಲ ಕೇಳಿದ. ಆತನಿಗೆ ಆರ್ಯರ ನಯ-ನಾಜೂಕು ನಡವಳಿಕೆ ಮತ್ತು ಮಾತುಗಳಿಗೆ, ವಿದ್ವತ್ತಿಗೆ, ವಿದ್ಯೆಗೆ, ತಾವು ಖಂಡಿಸುವುದಕ್ಕೆ ಸಮರ್ಥನೆ ನೀಡುವ, ಸಮರ್ಥಿಸುವಂತಹ ವಿಷಯಗಳಿಗೆ ಕಾರಣ ನೀಡಲು ಸಾಮರ್ಥ್ಯವಿರುವ ವಾಗ್ವೈಖರಿಗೆ, ಲಲಿತಕಲಾ ಸಂಪತ್ತಿಗೆ ಬೆರಗಾಗಿ ತಮ್ಮತನವನ್ನು ಕಳೆದುಕೊಂಡುಬಿಟ್ಟಿದ್ದೇವೆಂಬ ಭಾವ ಅವನಿಗೆ ಕಾಡಲಾರಂಭಿಸಿತ್ತು.

"ಪ್ರಭೂ," ಸಂಬೋಧಿ ಹೇಳಿದ. "ಶಕ್ತಿಯಿಂದ ವ್ಯಕ್ತಿ ಹಾಗೂ ವ್ಯಕ್ತಿಯಲ್ಲಿ ಶಕ್ತಿಯಿದೆ. ಯಾವ ವ್ಯಕ್ತಿಯ ಅಂತರ್ಶಕ್ತಿಯಲ್ಲಿ ಪ್ರಕೃತಿಯ ಸಹಜವಾದ ಒಂದು ಬಗೆಯ ಶಕ್ತಿಯು ಸ್ವಾಭಾವಿಕವಾಗಿರುತ್ತದೆಯೋ, ಅವನು ತನ್ನ ಮನೋಶಕ್ತಿ, ಭಾವಶಕ್ತಿ ಇವುಗಳನ್ನು ನಿಗ್ರಹಿಸಬಲ್ಲಂತೆ, ಅವನ ಅಂತರ್ಶಕ್ತಿಗೆ ಹೋಲುವ ಪ್ರಕೃತಿಯಲ್ಲಿರುವ ಶಕ್ತಿಗಳನ್ನೂ ನಿಗ್ರಹಿಸಬಲ್ಲ. ಇದನ್ನು ಸಾಧಿಸಲು ತಪಸ್ಸಿನಿಂದ ಸಾಧ್ಯ. ಕೆಲವರಿಗೆ ಜನ್ಮತಃ ಈ ಶಕ್ತಿಯು ಲಭ್ಯವಾಗಿರುತ್ತದೆ. ಇಂತಹ ಸಾಧಕರು ಕುಶಲ ಋಷಿಗಳಿಂದ ಗುರುತಿಸಲ್ಪಟ್ಟು ಆಯಾ ದೈವತ್ವದ ಪಟ್ಟವನ್ನು ನೀಡುತ್ತಾರೆ. ಅಷ್ಟೇ ಅಲ್ಲದೇ, ಮಂತ್ರಗಳಿಂದ, ಶಕ್ತಿಯ ನೇರ ಸಂಕೇತ ಸಾಧನವಾದ ಅಗ್ನಿ ಮತ್ತು ಶಕ್ತಿಯ ಪ್ರಭಾವಮಾಧ್ಯಮವಾದ ಧೂಮದ ಮುಖೇನ ಅವರಿಗೆ ಪದೇ ಪದೇ ಶಕ್ತಿಯನ್ನು ನೀಡುತ್ತಾ ಅವರನ್ನು, ಅವರ ತೇಜಸ್ಸನ್ನು ಬಲಪಡಿಸುತ್ತಾರೆ. ಮಂತ್ರದೃಷ್ಟಾರ ಮುನಿಗಳು ಶಬ್ದಗಳಲ್ಲಿನ ಶಕ್ತಿಗಳನ್ನು ಗುರುತಿಸಿ, ಮಂತ್ರಗಳನ್ನು ರಚಿಸುತ್ತಾರೆ. ಹಾಗೂ ಹವಿಸ್ಸುಗಳನ್ನು ನೀಡುವಂತಹ ಯಜ್ಞಗಳಂತಹ, ಬಲಿ ನೀಡುವಂತಹ ಯಾಗಗಳಂತಹ ಶಕ್ತಿ ಸಂವರ್ಧನೆಯ ತಂತ್ರಗಳನ್ನು ಕಂಡುಕೊಂಡು ಪ್ರಯೋಗಿಸಿದ್ದಾರೆ. ಹಾಗೆ ಅವರು ದೇವರನ್ನಾಗಿಸಿರುವಂತಹ ಅಥವಾ ಶಕ್ತಿಗಳನ್ನು ನೀಡಿ ತೇಜಸ್ಸನ್ನು ಬಲಪಡಿಸಿರುವಂತಹ ದೇವತೆಗಳಿಗೆ ತಮಗೆ ಸಮಸ್ಯೆ ಬಂದಾಗ ನಿವೇದಿಸಿಕೊಳ್ಳುತ್ತಾರೆ. ತಮ್ಮ ಶಕ್ತಿ ಸಂವರ್ಧನೆ ಮಾಡುತ್ತಿರುವಂತಹ ಆರ್ಯ ವೈದಿಕರಿಗೆ ನೆರವಾಗುತ್ತಾರೆ. ಅವರನ್ನು ಸನಿಹದಿಂದ ಕಂಡು ವಿಚಾರ ಮಾಡಿರುವ ಇದು ನನ್ನ ಗ್ರಹಿಕೆ."

"ಆಯಿತು ವದೀರ. ನಾವು ಮುಂದೆ ನೋಡುವ. ತಾವು ಹೋಗಿ ಬನ್ನಿ." ಎಂದ ಮಹಿಪಾಲ ವದೀರನನ್ನು ಕಳುಹಿಸಿಕೊಟ್ಟಾದ ಮೇಲೆ, "ಸಂಬೋಧಿ, ಈ ಆರ್ಯ ವೈದಿಕರು ಇಚ್ಛಿಸಿದರೆ, ನನ್ನನ್ನೂ ತಮ್ಮ ಮಂತ್ರಗಳಿಂದ ಮತ್ತು ಯಾಗ ತಂತ್ರಗಳಿಂದ ದೇವರನ್ನಾಗಿಸಬಲ್ಲರೇ?" ಎಂದು ಪಿಸುಗುಟ್ಟಿದ ಆಸೆಯ ತರಂಗಗಳು ವದೀರಜ್ಜನ ಅನುಭವದ ಕಿವಿಗಳಿಗೆ ತಟ್ಟದೇ ಇರಲಿಲ್ಲ.

"ವದೀರಜ್ಜಾ, ನಿನ್ನ ಶಕ್ತಿ ಏನೂಂತ ಈ ಆರ್ಯರಿಗೆ ಅರ್ಥವಾದ ಮೇಲೆ ನಿನ್ನನ್ನು ಈ ವಯನದ ದೇವರನ್ನಾಗಿ ಮಾಡುತ್ತಾರೆ." ಎಂದು ನಕ್ಕ ಪಿಚುಡಲ.

"ಸಧ್ಯಕ್ಕೆ ನನಗೆ ಈಗಿರುವ ದೇವರುಗಳಿಗೇ ನಡೆದುಕೊಳ್ಳಲು ಶಕ್ತಿ ಸಾಕಾಗುತ್ತಿಲ್ಲ. ಕಣ್ಣಿಗೆ ಕಾಣುವ ನರರೊಂದಿಗೇ ಹೊಡೆದಾಡಲು ಸಾಕಾಗುವಷ್ಟು ಸಂಯಮವಿಲ್ಲ. ಇನ್ನು ನಾನು ದೇವರಾಗಿ ಹುಚ್ಚನಾಗಿರಬೇಕಷ್ಟೇ!" ಎಂದು ನಕ್ಕ ವದೀರಜ್ಜ.

“ಇರುವ ದೇವರುಗಳಿಗೆ ನಡೆದುಕೊಳ್ಳಲಾಗದೇ ಹೋದಾಗಲೇ ನಾವೂ ಒಂದು ದೇವರಾಗಿಬಿಡುವುದು.” ಎಂದು ಮಾರ ನಕ್ಕರೆ, “ಇಲ್ಲ, ಹುಚ್ಚನಾದ ಮೇಲೆ ದೇವರಾಗುವುದು.” ಎಂದ ಆಸುರ ನಕ್ಕ. ಆದರೆ ವದೀರಜ್ಜ ನಗದೇ ಗಂಭೀರವಾಗಿ ಹೇಳಿದ. “ನಮ್ಮ ಕಾಡಿನ ದೇವರಿಗೆ ಎಡೆಯಾಗುತ್ತೇನೆ. ಆಗ ಅರಣ್ಯದಲ್ಲಿರುವ ಮರಗಳಿಗೆ ನಾನು ಗೊಬ್ಬರವಾಗಿ, ಪ್ರಾಣಿಗಳಿಗೆ ಆಹಾರವಾಗಿ, ಗಾಳಿಯಲ್ಲಿ ವಾಸನೆಯಾಗುತ್ತೇನೆ. ನಾನು ಸೇವಿಸಿರುವುದಕ್ಕೆ ನಾನು ಸೇವನೆಯಾಗುತ್ತೇನೆ. ಅಷ್ಟೇ ಸಾಕು.”

ಇವೆಲ್ಲಾ ಅಷ್ಟು ಅರ್ಥವಾಗದಿದ್ದರೂ ವದೀರಜ್ಜನ ಮಾತುಗಳನ್ನು ಕೇಳುವ ಅಭ್ಯಾಸವಿರುವ ಢುಂಢಿ ಮೌನವಾಗಿ ಎಲ್ಲವನ್ನೂ ಆಲಿಸುತ್ತಾ ಮುಂದೆ ನಡೆಯುತ್ತಿದ್ದ.

ಪಾರ್ವತಿ ಶರವಣ ಪರ್ವತಕ್ಕೆ ಹೋಗಲು ಸಿದ್ಧವಾಗುತ್ತಿದ್ದಳು. ಹಿಮಾಲಯದಲ್ಲಿರುವ ಶರವಣ ಪಾರ್ವತಿಗೆ ಬಹು ಪ್ರಿಯವಾದ ಸ್ಥಳ. ಶಿವನಿಗೂ ಅದು ಪ್ರಿಯವೇ ಆಗಿದ್ದು, ಅವನೂ ಅವಳೊಡನೆ ಆಗಾಗ್ಗೆ ವಿಹರಿಸಲು ಅದನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದ. ಈಗ ರುದ್ರನು ಸೋಮನಾಥದಲ್ಲಿದ್ದುದರಿಂದ, ಪಾರ್ವತಿಯೊಬ್ಬಳೇ ಶರವಣದಲ್ಲಿ ಒಂದಷ್ಟು ಕಾಲ ಇದ್ದು ಬರುವ ಯೋಚನೆ ಮಾಡಿದ್ದಳು.

ಪಾರ್ವತಿಗೆ ಅಗತ್ಯವಿರುವ ವಸ್ತುಗಳನ್ನೆಲ್ಲಾ ದನು ಎತ್ತಿಡುತ್ತಿರುವಾಗ, “ನಿನಗೆ ಏನೇನು ಬೇಕೋ ಅದೆಲ್ಲವನ್ನೂ ತೆಗೆದಿಕೊ ದನು. ನಾನು ಒಂದಷ್ಟು ಕಾಲ ಅಲ್ಲಿಯೇ ಇರಬೇಕು. ಕೈಲಾಸವೂ ಬೇಡ, ಸೋಮನಾಥವೂ ಬೇಡ.” ಎಂದಳು ಪಾರ್ವತಿ.

“ನಾನು ಬರಲೇ ಬೇಕೆ?” ಕೇಳಲು ಅಳುಕುತ್ತಲೇ ಕೇಳಿದಳು ದನು.

“ನಾನಿಲ್ಲದಿರುವಾಗ ನೀನಿಲ್ಲಿದ್ದು ಏನು ಮಾಡುತ್ತೀಯೇ?” ಪಾರ್ವತಿ ಕೇಳಿದಳು.

“ನನ್ನ ವಯನದ ಬಂಧುಗಳು ಮತ್ತು ಗೆಳತಿಯರು ರುದ್ರನ ಹಿಂದೆ ನಡೆದು ಸೋಮನಾಥ ಸೇರಿದ್ದಾರೆ. ಅವರಲ್ಲಿ ಎಷ್ಟೋ ಜನ ಬಸುರಿಯರು. ನೀವು ಶರವಣಕ್ಕೆ ಹೋಗಿ ಬರುವುದರೊಳಗಾಗಿ, ನಾನು ಅವರೊಡನೆ ಒಂದಷ್ಟು ದಿನವಿದ್ದು, ನಾನು ಈ ಪ್ರದೇಶಗಳನ್ನು ತಿಳಿದವಳಾದ್ದರಿಂದ ಆ ಬಸುರಿ ಹೆಂಗಸರಿಗೆ ಒಂದಷ್ಟು ಸಹಾಯ ಮಾಡೋಣವೆಂದು ಬಯಸಿದ್ದೇನೆ, ನೀವು ಒಪ್ಪಿದರೆ.” ಇಷ್ಟು ವಿನಯದ ಬೇಡಿಕೆಯನ್ನು ಒಪ್ಪದಿರಲು ಹೇಗೆ ಸಾಧ್ಯ, ಅದೂ ಪಾರ್ವತಿಗೆ ಬಸುರಿಯರ ವಿಷಯವನ್ನು ಹೇಳಿದಾಗ.

“ಮಕ್ಕಳನ್ನು ಹೆರಲಿರುವ ಹೆಂಗಸರ ಬಗ್ಗೆ ಹೇಳುವುದರಿಂದ ನಾನು ನಿನ್ನ ತಡೆಯಲಾಗುವುದಿಲ್ಲ.” ಪಾರ್ವತಿ ಬೇಸರಿಸಿಕೊಂಡಳು. “ಆದರೂ, ದನು, ನೀನಿಲ್ಲದೇ ನನಗೆ ಬೇಸರವಾಗುತ್ತದೆ. ಸೋಮನಾಥಕ್ಕೆ ಹೋಗಿ ಆದಷ್ಟು ಬೇಗ ಶರವಣಕ್ಕೆ ಬಂದುಬಿಡು.” ಎಂದಳು.

ಪಾರ್ವತಿಗೆ ಸಹಾಯಕ್ಕೆಂದು ದನುವು ಧೂಮಾವತಿ, ಪಂಚಮಿ ಇತ್ಯಾದಿ ಏಳುಜನ ಸಖಿಯರನ್ನು ಸಿದ್ಧ ಪಡಿಸಿ ಅವರನ್ನು ಕಳುಹಿಸಿಕೊಟ್ಟಳು. ತಾನು ಅತ್ಯಂತ ಆನಂದದಿಂದ ಸೋಮನಾಥಕ್ಕೆ ಬಂದಳು.

ಸೋಮನಾಥವೂ ಶಿವನ ಪ್ರಿಯವಾದ ಸ್ಥಳ. ರುದ್ರನು ಶಿವನಾಗುವುದು ಸೋಮನಾಥಕ್ಕೆ ಅಥವಾ ಶರವಣಕ್ಕೆ ಹೋದಾಗ. ಕೈಲಾಸದ ಶಿಖರಗಳಲ್ಲಿ ರುದ್ರನು ತಾಪಸಿ ಶಂಕರನಾದರೆ, ಹಿಮಾಲಯದ ಕಾಡುಗಳಲ್ಲಿ ನಿಷಾಧರೊಂದಿಗೆ ಸೇರಿದರೆ ಅತಿರುದ್ರನಾಗುತ್ತಾನೆ, ಶಬರನಾಗುತ್ತಾನೆ. ಯಜ್ಞಕ್ಕೆ

ಪೂರ್ಣಾಹುತಿಯ ಸ್ಥಳದಂತಿರುವ ಪ್ರಯಾಗಕ್ಕೆ ಹೋದರೆ ಯಜ್ಞೇಶನಾಗುತ್ತಾನೆ. ಅವಿಮುಕ್ತದ ರುದ್ರಭೂಮಿಗೆ ಹೋದರೆ ಕಪಾಲಿಯಾಗುತ್ತಾನೆ.

ದನುವು ಸೋಮನಾಥದಲ್ಲಿ ರುದ್ರನ ಕಂಡು, ಪಾರ್ವತಿಯು ಶರವಣಕ್ಕೆ ಹೋದ ವಿಷಯವನ್ನು ತಿಳಿಸಿ, ತಾನು ತನ್ನ ಬಾಂಧವರನ್ನು ನೋಡಲು ಬಂದಿರುವುದಾಗಿ ತಿಳಿಸಿದಳು.

ರುದ್ರನಲ್ಲಿಗೆ ಬಂದ ಮಿತ ದನುವನ್ನು ನೋಡಿ ಸಂತೋಷಪಟ್ಟು ತಾವೆಲ್ಲರೂ ಇರುವ ಕಡೆಗೆ ಹೋದಳು.

ವಯನದವರನ್ನೆಲ್ಲಾ ನೋಡಿದ ದನುವಿಗೆ ತುಂಬಾ ಸಂತೋಷವಾಯಿತು. ಹಾಗೆಯೇ ಅವರಿಗೂ ಕೂಡ. ಸಂತೋಷಕ್ಕೆ ಅವರ ಕಣ್ಣುಗಳಿಂದ ನೀರು ಸುರಿದವು.

"ಇಲ್ಲಿ ಯಾವುದಕ್ಕೂ ಭಯವಿಲ್ಲ. ನೀವು ಸಂತೋಷದಿಂದ ಇರಬಹುದು." ಎಂದಳು ದನು.

"ನಮಗೆ ಇರುವುದು ಭಯವಲ್ಲ. ಅಶಾಂತಿ." ಎಂದ ಮಿತ.

ದನು ಅದಕ್ಕೆ ಏನೂ ಹೇಳಲಿಲ್ಲ. ಮುಖ್ಯವಾಗಿ ಅವಳಿಗೆ ಅವನ ಮಾತು ಅರ್ಥವಾಗಲಿಲ್ಲ.

ಸೋಮನಾಥದಲ್ಲಿಯೇ ಇದ್ದ ರುದ್ರನು ಕೆಲಕಾಲದ ನಂತರ ಕೈಲಾಸಕ್ಕೆ ಹಿಂದಿರುಗಿದನು. ಅವನು ಸೋಮನಾಥದಿಂದ ನೇರವಾಗಿ ಶರವಣ ಪರ್ವತದ ಕಡೆಗೆ ಹೋಗುವನೆಂದು ದನು ತಿಳಿದಿದ್ದಳು. ಆದರೆ, ಅವನು ಹಾಗೆ ಹೋಗಲಿಲ್ಲ. ಅವನ ನಡುವಳಿಕೆಗಳಿಗೆ ಕಾರಣವನ್ನು ಯಾರೂ ತಿಳಿಯಲಾಗುವುದಿಲ್ಲ. ಎಲ್ಲರೊಡನೆ ನಗುನಗುತ್ತಾ ಇರುವ ರುದ್ರ ಇದ್ದಕ್ಕಿದ್ದಂತೆ ಮೌನ ತಾಳುತ್ತಾನೆ. ಯಾರ ಕಣ್ಣಿಗೂ ಬೀಳದೇ ಎಲ್ಲಿಯೋ ತಪಸ್ಸಾಧನೆಯಲ್ಲಿ ನಿರತನಾಗುತ್ತಾನೆ. ಆಗ ಅವನನ್ನು ಯಾರೂ ಮಾತನಾಡಿಸುವ ಧೈರ್ಯ ಮಾಡುವುದಿಲ್ಲ. ಸೋಮರಸವನ್ನು ಕುಡಿಯುತ್ತಾ, ಮಾಂಸವನ್ನು ಜಗಿಯುತ್ತಾ ಸ್ಮಶಾನದಲ್ಲೆಲ್ಲಿಯೋ ಇರುತ್ತಾನೆ. ಇದ್ದಕ್ಕಿದ್ದಂತೆ ನಗುತ್ತಾನೆ. ಅಬ್ಬರಿಸುತ್ತಾನೆ. ಕೈಯಲ್ಲಿ ಕಪಾಲವನ್ನು ಹಿಡಿದು ಚಿತೆಗಳ ಬೆಳಕಿನಲ್ಲಿ ನಗ್ನವಾಗಿ ತಾಂಡವವಾಡುತ್ತಾನೆ.

ಕೆಲವು ಬಾರಿ ಯೋಗಿಗಳ, ಋಷಿಗಳ, ಸಿದ್ಧರ ಸಮ್ಮುಖದಲ್ಲಿ ಕುಳಿತು ಅಧ್ಯಾತ್ಮ ರಹಸ್ಯವನ್ನು, ಜಗತ್ತಿನ ರಹಸ್ಯವನ್ನು ಕುರಿತು ಮಾತಾಡುತ್ತಾನೆ. ವಿಶ್ವದಂತರಾಳದ ಬಿಂದು ದರ್ಶನದ ತಂತ್ರವನ್ನು ಸಾಮೂಲಾಗ್ರವಾಗಿ ವಿವರಿಸುತ್ತಾನೆ. ಪ್ರಕೃತಿ ಮತ್ತು ಪುರುಷರ ಮಿಲನದ ಐಕ್ಯಫಲವನ್ನು ವಿವರಿಸುತ್ತಾನೆ. ಎರಡು ಒಂದಾಗುವುದು ಮತ್ತು ಒಂದು ಇಲ್ಲವಾಗುವುದು ಹೇಗೆಂದು ಹೇಳುತ್ತಾನೆ. ವ್ಯಕ್ತಿಗಳಾಗಿ ಉಳಿದಾಗ ಪ್ರತ್ಯೇಕತೆ, ಶಕ್ತಿಗಳಾದಾಗ ಐಕ್ಯತೆ ಹೇಗೆಂದು ತಿಳಿಸುತ್ತಾನೆ.

ವಿಶ್ವದ ವಿವಿಧತೆಗಳನ್ನು ಇರುವ ಹಾಗೆಯೇ ನೋಡುತ್ತಾ ತನ್ನಲ್ಲಿ ಒಂದಾಗುವ ಕಲೆಯನ್ನು ಕರಗತ ಮಾಡಿಕೊಳ್ಳುವುದು ಹೇಗೆಂದು ತಿಳಿಸುತ್ತಾನೆ. ಇದ್ದಕ್ಕಿದ್ದಂತೆ ಯಾರು ಎದುರಾಗುತ್ತಾರೋ ಅವರಿಗೆ ಒಂದರಲ್ಲೊಂದು ಸೇರುವ ಯೋಗ ದೃಷ್ಟಿಯನ್ನು, ಯೋಗ ಕಲೆಯನ್ನು, ಯೋಗ ತಂತ್ರವನ್ನು ಹೇಳತೊಡಗುತ್ತಾನೆ. ಪಾರ್ವತಿಯಾಗಲಿ, ನಂದಿಯಾಗಲಿ, ದನುವಾಗಲಿ ಯಾರೇ ಇದಕ್ಕೆ ಹೊರತಲ್ಲ.

ಭಂಗಿಯನ್ನು ಸೇದುತ್ತಾ ಕುಳಿತುಕೊಂಡಿದ್ದವನು ಧೂಮವನ್ನು ನೋಡು ನೋಡುತ್ತಲೇ ವಿಶ್ವದ ಪ್ರಕ್ರಿಯೆಯೇ ಲೀಲೆಯಾಗಿ ಅದನ್ನು ನೋಡುವ ದೃಷ್ಟಿಯಲ್ಲಿ ಅದಾಡುವ ಆಟವನ್ನು ತಾನೇ ಆಡುತ್ತಿರುವಂತೆ ಸಮಾಧಿಗೆ ಜಾರುತ್ತಾನೆ. ಇಡೀ ವಿಶ್ವವೇ ಎರಡರಿಂದ ಒಂದಾಗಿರುವುದು, ಎರಡರಲ್ಲೇ

ಇರುವುದು ಸಾಧಾರಣ ಬದುಕು. ಎರಡನ್ನು ಸೇರಿದರೆ ಅದು ಯೋಗ ಸಾಧನೆಯಾಗುತ್ತದೆ. ಅದನ್ನು ಸಾಧಿಸುವವನು ಯೋಗಿಯಾಗುತ್ತಾನೆ. ಎರಡನ್ನು ಒಂದಾಗಿಸುವುದನ್ನು ಸಾಧಿಸಿದರೆ, ಆ ಒಂದು ಬಿಂದುವಿನಲ್ಲಿ ಸೂಕ್ಷ್ಮವಾಗುತ್ತಾ ಹೋಗಿ, ನಂತರ ಅದೇ ಬಿಂದುವಿನಿಂದ ವಿಕಾಸವಾಗುತ್ತಾ, ವಿಕಾಸವಾಗಿ ಅರಳುತ್ತಾ, ತನ್ನ ರೂಪ ರೇಖೆ ರಚನೆಗಳನ್ನು ಕಳೆದುಕೊಳ್ಳುವಷ್ಟು ವಿಸ್ತಾರವಾಗುತ್ತದೆ. ಆ ವಿಸ್ತಾರವು ಮತ್ತೆ ಸಂಕುಚಿತವಾಗುವ ಭಯವಿಲ್ಲ. ಮತ್ತಷ್ಟು ವಿಸ್ತಾರವಾಗಲು ಅಲ್ಲಿ ಬಾಹ್ಯತೆಗಳೇನೂ ಇರುವುದಿಲ್ಲ. ಅದೇ ಅಮರತ್ವ. ಅದೇ ಮೋಕ್ಷ ಎಂದು ರುದ್ರನು ಹೇಳುತ್ತಾ ಹೋಗಲು ಸಿದ್ಧರು, ಸಾಧಕರು, ಋಷಿಗಳು ಮತ್ತು ನರರೂ ಭಾವ ಪರವಶರಾಗಿ, ಭಕ್ತಿ ಭಾವದಿಂದ ಶರಣಾಗಿ ಅವನ ಉಪದೇಶವನ್ನು ಸ್ವೀಕರಿಸುತ್ತಾ ಹೋಗುವರು.

ಮಹಾಜ್ಞಾನಿಯಂತೆ, ಮಹಾಯೋಗಿಯಂತೆ, ಉತ್ಕೃಷ್ಟವಾದ ಶಿಷ್ಟವಾದ ಭಾಷೆಯಲ್ಲಿ ಮಾತಾಡುತ್ತಾ ಹೋಗುವ ಅವನೇ ಇನ್ನೊಮ್ಮೆ, ಕೆಟ್ಟ ಕೆಟ್ಟ ಮಾತಾಡುತ್ತಾ, ಶಿಷ್ಟತನಕ್ಕೆ ಸಂಪೂರ್ಣ ವಿರುದ್ಧವಾಗಿ ಪುಂಡನಂತೆ ಕಾಣಿಸುತ್ತಾ, ಛೇಡಿಸುತ್ತಾ ಸ್ತ್ರೀಲೋಲನಂತೆ ತೋರುವವನು.

ಮಹಾನ್ ಬಲವಂತನಾಗಿ ಒಮ್ಮೆ ಕಂಡರೆ ಇನ್ನೊಮ್ಮೆ ಏನೂ ಮಾಡಲಾಗದವನಂತೆ ಸುಮ್ಮನೆ ನೋಡುತ್ತಾ ಕುಳಿತುಕೊಳ್ಳುವನು. ಇನ್ನೂ ಒಮ್ಮೊಮ್ಮೆ ಅವನಲ್ಲಿರುವ ಶಕ್ತಿಯು ಒಮ್ಮಿಂದೊಮ್ಮೆಲೇ ಕ್ರೋಢೀಕರಿಸಿಕೊಂಡಂತೆ ಪ್ರಳಯವೇ ಉಂಟಾಯಿತೇನೋ ಎಂಬಂತೆ ಅವನ ಶಕ್ತಿಯ ಪ್ರಕಟವಾಗುತ್ತದೆ. ಅವನಿಗೆ ಅವನದ್ದೇ ಯೋಗ, ಅವನದೇ ಓಘ, ಅವನದೇ ತಪ, ಅವನದೇ ವಿಶ್ವ. ಅವನ ಅಭಿಮಾನಿಗಳಿಗೆ ವಿಶ್ವವೇ ಅವನದು.

ರುದ್ರನು ಇದ್ದಕ್ಕಿದ್ದಂತೆ ಕೈಲಾಸ ಸೇರಿಬಿಟ್ಟ. ಅವನು ಕೈಲಾಸಕ್ಕೆ ಹಿಂದಿರುಗುವ ರಾತ್ರಿ ಮಿತ ಅವನನ್ನು ಕಂಡಿದ್ದ. ಅಲ್ಲಿ ಸುತ್ತಲಿನ ಅರಣ್ಯಗಳಲ್ಲಿ ಗಂಧರ್ವರು ಮತ್ತು ಕಿನ್ನರರು ಇರುವವರೆಂದು ಕೇಳಿದ್ದು, ಅಲ್ಲಿ ಸಂಚರಿಸುವ ಅವಕಾಶವಿದೆಯೇ ಎಂದು ಕೇಳಬೇಕಾಗಿತ್ತು.

“ಆ ಅರಣ್ಯವು ಗಂಧರ್ವರದ್ದೂ ಹೌದು. ಕಿನ್ನರರದ್ದೂ ಹೌದು. ಯೋಗಿಗಳದ್ದೂ ಹೌದು. ಯಾರ್ಯಾರು ಆನಂದಿಸುವರೋ ಅವರೆಲ್ಲರದ್ದೂ. ಆದರೆ ಅವರೊಬ್ಬರದ್ದೇ ಅಲ್ಲ. ಹಾಗೆಯೇ ನಿನ್ನದೂ ಹೌದು. ಆದರೆ ಹಾಗೆಯೇ ನಿನ್ನೊಬ್ಬನದೇ ಅಲ್ಲ. ಇಡೀ ವಿಶ್ವವೇ ನಿನ್ನದು. ನೀನು ಈ ವಿಶ್ವದವನು.” ಎಂದು ರುದ್ರನು ನಕ್ಕಿದ್ದ.

ಸೋಮನಾಥದ ಉಪಾಧಿಕಾರಿ ವಿತೃಪನೂ ಅಲ್ಲಿಯೇ ಇದ್ದ. ಆರ್ಯನಾಗಿದ್ದು, ವರ್ಣದಲ್ಲಿ ಕ್ಷತ್ರಿಯನಾಗಿದ್ದ ವಿನೃಪ ತನ್ನ ಕ್ಷಾತ್ರಗುಣಕ್ಕೆ ತಕ್ಕಂತೆ ಅಲ್ಲಿ ಕ್ರೀಡೆಗಳನ್ನು ಏರ್ಪಡಿಸುತ್ತಿದ್ದ. ರಥ ಸ್ಪರ್ಧೆ, ಧನುರ್ವಿದ್ಯಾ ಪ್ರದರ್ಶನ, ಅಶ್ವಾರೂಢರ ವೇಗ ಸ್ಪರ್ಧೆ, ಖಡ್ಗ ಮತ್ತು ಇತರ ಆಯುಧಗಳ ಕಾಳಗ ಇತ್ಯಾದಿಗಳು ಅವನು ಆಯೋಜಿಸುವ ಕ್ರೀಡೆಗಳು. ಈ ವಿಜೃಂಭಣೆಯ ಕಾರ್ಯಕ್ರಮ ಆರಂಭವಾಗಲು ಇನ್ನೂ ಐದು ದಿನಗಳು ಮಾತ್ರವಿತ್ತು.

ವಿತೃಪನಿಗೆ ರುದ್ರನು ತಾನು ನಡೆಸುವ ಈ ಸ್ಪರ್ಧೆಯಲ್ಲಿ ಇರಲೆಂದು ಆಸೆ. ಆದರೆ, ರುದ್ರ ಅದನ್ನು ಏನೂ ಗಮನಿಸದೇ, “ಸರಿ.” ಎಂದಷ್ಟೇ ಹೇಳಿ ತನ್ನ ಪಾಡಿಗೆ ತಾನು ಹೊರಡಲಿದ್ದ. “ಈಗ ತಾವು ಹೋದರೂ, ಸ್ಪರ್ಧೆಯ ದಿನಗಳಲ್ಲಿ ತಾವು ದಯಮಾಡಿ ಬನ್ನಿ. ನೀವಿರದಿದ್ದರೆ ಅದು ಖಂಡಿತ ಶೋಭಿಸುವುದಿಲ್ಲ. ನೀವು ಈ ಕಾರ್ಯಕ್ರಮಗಳಲ್ಲಿ ಇರಲೇಬೇಕು.” ಎಂದು ವಿತೃಪ ಆಗ್ರಹ ಪೂರ್ವಕವಾಗಿ ವಿನಂತಿಸಿಕೊಂಡ.

ಆದರೆ ರುದ್ರನು ಅವನ ಮುಖವನ್ನು ನೋಡಿ, "ಸ್ಪರ್ಧೆಗಳೆನ್ನುವುದು ಯೋಗಿಗಳಿಗಲ್ಲ. ಅವೆಲ್ಲಾ ನಿಮ್ಮಂತಹ ಆರ್ಯ ರಾಜಕಾರಣಿಗಳಿಗೆ ಪ್ರತಿಷ್ಠೆಗಳನ್ನು ಹೆಚ್ಚಿಸಿಕೊಳ್ಳಲು ಬೇಕು. ನೀನು ಏನು ಬೇಕೋ ಅದನ್ನು ನಿನ್ನ ಮನಸ್ಸಿನ ಆನಂದಕ್ಕೆ ಮಾಡಿಕೋ. ನನಗೆ ಒಲ್ಲದ್ದಕ್ಕೆ ಒತ್ತಾಯ ಮಾಡಿ ನಿನ್ನ ಕೆಲಸಕ್ಕೆ ನೀನೇ ಭಂಗ ತಂದುಕೊಳ್ಳಬೇಡ. ಈಗ ಹೊರಡು ಇಲ್ಲಿಂದ." ಈ ರೀತಿಯಲ್ಲಿ ವಿತ್ರಪ ಮುಖಭಂಗವನ್ನು ಅನುಭವಿಸುತ್ತಿದ್ದಾಗಲೇ ಮಿತನು ಬಂದಿದ್ದು. ಅರಣ್ಯದಲ್ಲಿ ತಮ್ಮವರ ಸಂಚಾರ ಪರಿಮಿತಿಯನ್ನು ಕೇಳಿದ್ದು.

ವಿತ್ರಪ ಅಪಮಾನಿತನಾದಂತಾಗಿ ನಿಧಾನವಾಗಿ ಹೊರಗೆ ನಡೆಯುತ್ತಿದ್ದಾಗ ಹಿಂದೆಯೇ ಓಡೋಡಿ ಬಂದ ಮಿತ, "ನಡೆಯುವ ಸ್ಪರ್ಧೆಗೆ ನಾವೂ ಬರುತ್ತೇವೆ." ಎಂದ.

"ಅದು ನಿಮಗಲ್ಲ." ಎಂದ ವಿತ್ರಪ ಹೊರಡಲು ತನ್ನ ರಥವನ್ನೇರಿದ.

ಮಿತನಿಗೆ ಕೋಪ ಬಂತು. ತಟ್ಟನೆ ನುಡಿದ. "ಸೋಮನಾಥದಲ್ಲಿ ನಡೆಯುವುದು ಎಂದರೆ ಅದು ಎಲ್ಲರಿಗೂ."

"ಇದು ಆರ್ಯಶ್ರೇಷ್ಠರನ್ನು ಗುರುತಿಸುವ ಸ್ಪರ್ಧೆ! ನಿನ್ನ ಪಾಡಿಗೆ ನೀನು ನಿನ್ನ ಪರಿಮಿತಿಯಲ್ಲಿರು." ಎಂದ ವಿತ್ರಪ ರಥವನ್ನು ನಡೆಸಲು ಸಾರಥಿಗೆ ಹೇಳಿದ.

"ನನ್ನ ಸ್ಪರ್ಧೆಯಲ್ಲಿ ಪಾಲ್ಗೊಳ್ಳದಂತೆ ಹೇಗೆ ತಡೆಯುವೆಯೋ ನಾನು ನೋಡೇ ಬಿಡುತ್ತೇನೆ." ಎಂದು ಕೂಗಿ ಹೇಳಿದ ಮಿತ.

ವಯನದಲ್ಲಿ ನಡೆದ ಎಲ್ಲಾ ವಿಷಯಗಳನ್ನು ಕೇಳಿದ ದನು ನೊಂದುಕೊಂಡಳು. ವದೀರಜ್ಜನ ದಿಟ್ಟ ನಡೆಯನ್ನೂ, ಢುಂಢಿಯನ್ನು ಅವಳು ಮೆಚ್ಚಿದಳು. ಢುಂಢಿಯನ್ನು ತೀರಾ ಸಣ್ಣವನಿದ್ದಾಗ ಅವಳು ನೋಡಿದ್ದಳು. ಮಾಲಿನಿ ಇದ್ದಕ್ಕಿದ್ದಂತೆ ಯಾವುದೋ ವ್ಯಾಧಿಗೆ ತುತ್ತಾದಾಗ, ತಾನು ಅಲ್ಲಿಗೆ ಹೋಗಲಾಗುವುದಿಲ್ಲವೆಂದೂ, ಇದರಿಂದ ಪಾರ್ವತಿಗೆ ಬೇಸರವಾಗುವುದೆಂದೂ ದನುವನ್ನು ಸೇರಿ ಒಟ್ಟು ಐವರನ್ನು ಪಾರ್ವತಿಯ ಸೇವೆಗಾಗಿ ಕಳುಹಿಸಿದಳು. ಪಾರ್ವತಿಯು ದನುವನ್ನು ತನ್ನ ಸೇವೆಯಲ್ಲಿರಲು ಒಪ್ಪಿಕೊಂಡರೂ ಅವಳಿಗೆ ಮಾಲಿನಿಯು ಇಲ್ಲದಿರುವುದು ಬೇಸರವಾಗಿತ್ತು. ತಮ್ಮ ಗಣದವರನ್ನು ಕಳುಹಿಸಿ ಮಾಲಿನಿಯನ್ನು ತಮ್ಮಲ್ಲಿಗೇ ಕರೆಯಿಸಿಕೊಂಡು ಔಷಧೋಪಚಾರ ಮಾಡಲು ಹೇಳಿಕಳುಹಿಸಿದ್ದಳು. ಆದರೆ, ಅಷ್ಟರಲ್ಲಿ ಮಾಲಿನಿ ಮರಣಿಸಿದ್ದಳು.

ಹಾಗಾಗಿ, ದನುವಿಗೆ ಢುಂಢಿಯ ಮೇಲೆ ವಿಶೇಷ ಅಭಿಮಾನ.

ಸೋಮನಾಥದಲ್ಲಿ ಬಂದಿಳಿಯುತ್ತಿದ್ದಂತೆ, ಭಾರವನ್ನು ಹೊತ್ತು ವೇಗವಾಗಿ ಚಲಿಸುವ ಭೈರವದೂತ ಸಿದ್ಧನನ್ನು ಮಾತಾಡಿಸಬೇಕೆಂದು ದನು ಆಲೋಚಿಸಿದ್ದಳು. ಅವನಲ್ಲಿ ನಿವೇದಿಸಿಕೊಳ್ಳಲು ಅವಳಿಗೊಂದು ಕೋರಿಕೆಯಿತ್ತು. ಅವನು ಸೋಮನಾಥದ ಹೊರಗೆ ಆಲದ ಮರದ ಕೆಳಗಿನ ಮಂಟಪವೊಂದರಲ್ಲಿ ತಮ್ಮ ಸಾಧನೆಯನ್ನು ಮಾಡಿಕೊಂಡು ಇರುತ್ತಿದ್ದರು. ಅಲ್ಲಿಗೇ ವಯನದ ಕೆಲವು ಹೆಂಗಸರೊಂದಿಗೆ ಅಲ್ಲಿಗೆ ಹೋದ ದನು, ಅವರಿಗೆ ನಮಸ್ಕಾರವನ್ನು ಮಾಡಿ ಹೇಳಿದಳು.

“ನಾನು ರುದ್ರನ ಪತ್ನಿಯಾದ ಪಾರ್ವತಿಯ ಅಂತರಂಗದ ಸಖಿ. ತಾವು ಕೃಪೆ ಮಾಡಿ ನನ್ನದೊಂದು ಕೋರಿಕೆಯನ್ನು ನಡೆಸಿಕೊಡಬೇಕೆಂದು ಪ್ರಾರ್ಥಿಸುತ್ತೇನೆ.”

ಅವಳ ಮಾತನ್ನು ಕೇಳಿ ಭೈರವದೂತ ಜೋರಾಗಿ ನಕ್ಕುಬಿಟ್ಟ.

“ಎಲೈ ಅರಣ್ಯಕ ಸ್ತ್ರೀಯೇ. ನೀನೂ ಆರ್ಯಳಂತೆ ಪ್ರಾರ್ಥನೆ ಮಾಡುವೆ ಎಂದರೆ ನನಗೆ ನಗು ಬರುತ್ತದೆ. ನೀವು ಅರಣ್ಯಕರು ಪ್ರಾರ್ಥನೆ ಮಾಡುವವರಲ್ಲ. ಪ್ರಕೃತಿಯ ಶಕ್ತಿಗಳಿಗೆ ಆಜ್ಞೆ ಮಾಡುವವರು. ನೀವು ಹೀಗಾಗಲಿ ಎಂದು ಗದ್ದರಿಸಿ ಹೇಳಿ ಹಾಗೇ ನಡೆಸುವವರು. ಹೇಳು ನನ್ನಿಂದ ನಿನಗೆ ಏನಾಗಬೇಕು?”

“ನಾನು ಗಂಗಾ ನದಿಯ ತೀರದಲ್ಲಿರುವ ಶಿವನ ರುದ್ರ ಮಂಟಪವಿರುವ ಅವಿಮುಕ್ತದ ಸಮೀಪದಲ್ಲಿರುವ ವಯನದವಳು. ಅಲ್ಲಿ ನನ್ನ ಮನೆಯವರು ಮತ್ತು ಬಂಧುಗಳು ಇದ್ದಾರೆ. ನಾನು ಸೇವಿಸುವ ಪಾರ್ವತಿಯು ಈಗ ಸ್ವಲ್ಪ ದಿನಗಳ ಮಟ್ಟಿಗೆ ಶರವಣ ಪರ್ವತದಲ್ಲಿದ್ದಾಳೆ. ಹಾಗಾಗಿ, ಈ ಸಮಯದಲ್ಲಿ ನಾನು ಅತ್ಯಂತ ವೇಗವಾಗಿ ನನ್ನ ವಯನಕ್ಕೆ ಹೋಗಿ, ಅಲ್ಲಿ ಒಂದು ಅಥವಾ ಎರಡು ದಿನಗಳಿದ್ದು ಹಿಂದಿರುಗಬೇಕೆಂದು ಆಸೆ. ತಾವು ಕೃಪೆ ಮಾಡಿದರೆ, ನನ್ನ ಆಸೆಯನ್ನು ನೆರವೇರಿಸಬಹುದೆಂದು ನಾನು ಅಂದುಕೊಳ್ಳುತ್ತೇನೆ.”

ದನುವಿನ ಮಾತನ್ನು ಕೇಳಿ ಭೈರವದೂತ ಮತ್ತೆ ಜೋರಾಗಿ ನಕ್ಕ.

“ಹೇ ಅರಣ್ಯಕಳೇ, ಇದೇ ಮಾತನ್ನು ಗಟ್ಟಿಯಾಗಿ ಗದ್ದರಿಸಿ ಹೇಳು. ನಾನು ನಿನ್ನ ಖಂಡಿತ ಕರೆದುಕೊಂಡು ಹೋಗುತ್ತೇನೆ. ಹೇಳು, ನಿನ್ನ ರಾಕ್ಷಸದನಿಯಲ್ಲಿ ಒಮ್ಮೆ ನನಗೆ ಕರೆದುಕೊಂಡು ಹೋಗಲು ಹೇಳು.” ಎಂದು ಭೈರವದೂತ ಆಸೆ ಪಟ್ಟ.

ಅದರಂತೆ ದನುವು ಮೇಲೆದ್ದು ಬೆಂಕಿಯ ಎದುರು ನಿಂತು ಜೋರಾಗಿ ಕೂಗುತ್ತಾ, ದುತ್ತನೆ ದುತ್ತನೆ ನೆಲದ ಮೇಲೆ ಕಾಲನ್ನು ಬಡಿಯುತ್ತಾ, “ಹೇ ಭೈರವದೂತ ಬೇಗ ಬಾ, ಬಾ ಬಾ ಬಾ ಭೈರವದೂತ ಈ ಕೂಡಲೇ ಬಾ. ನೀನೀಗ ಬರುತ್ತೀಯ. ಬಂದು ನನ್ನ ಹೊತ್ತು ವಯನಕ್ಕೆ ಒಯ್ಯುತ್ತೀಯ. ಬಾ ಭೈರವದೂತ ಬಾ.” ಎಂದು ಕುಣಿದಾಡಿದಳು.

ಭೈರವದೂತನೂ ನಗುತ್ತಾ ಅದಕ್ಕೆ ತಕ್ಕಂತೆ, “ಬಂದೆ, ಈಗಲೇ ಬಂದೆ. ನಿನ್ನನ್ನು ಕರೆದೊಯ್ಯಲು ಈಗಲೇ ಬಂದೆ.” ಎಂದು ಕುಣಿಕುಣಿದಾಡಿದ.

ಅದನ್ನು ನೋಡುತ್ತಿದ್ದ ವಯನದವರು ಕೂಡ ನಗುತ್ತಾ ಕುಣಿಕುಣಿದಾಡಿದರು.

ಮರುದಿನ ಮುಂಜಾನೆಯೇ ಭೈರವದೂತನ ಭುಜವೇರಿದ ದನು ಮರುದಿನ ಮಧ್ಯಾಹ್ನದ ಹೊತ್ತಿಗೆಲ್ಲಾ ವಯನದಲ್ಲಿದ್ದಳು.

ವಯನದಲ್ಲಿ ವದೀರಜ್ಜನೂ ಮೊದಲ್ಗೊಂಡು ಎಲ್ಲರೂ ದನುವನ್ನು ನೋಡಿ ಆಶ್ಚರ್ಯಗೊಂಡರು. ಅಪರೂಪ ಶಕ್ತಿಯ ಸಿದ್ಧನನ್ನು ಬಹು ಆದರದಿಂದ ಬರಮಾಡಿಕೊಂಡರು. ಅಂದು ರಾತ್ರಿ ಭೈರವದೂತ

ಸಿದ್ಧನಿಗೆ ವಿಶೇಷ ಔತಣ ಮಾಡಿ ಬಡಿಸಿ, ಉರಿಯುವ ಬೆಂಕಿಯ ಸುತ್ತಲೂ ಅರಣ್ಯಕರು ಕುಣಿದಾಡಿ ಮನರಂಜನೆ ನೀಡಿದರು.

ರಾತ್ರಿಯಿಡೀ ದನುವು ವದೀರಜ್ಜನೊಂದಿಗೆ ಕುಳಿತು ಕೈಲಾಸದಲ್ಲಿ ತನ್ನ ಅನುಭವಗಳನ್ನು ಹೇಳಿಕೊಂಡಳು. ತಾನು ಪ್ರತಿನಿತ್ಯ ನೋಡುವ ಪಾರ್ವತಿಯ ಪಾಡನ್ನೂ, ವಿಚಿತ್ರ ವರ್ತನೆಗಳ ರುದ್ರನ ಜಂಗಮಶೀಲತೆಯನ್ನೂ ವರ್ಣಿಸಿದಳು.

ಅವಳು ಮರುದಿನ ಬೆಳಗ್ಗೆ ಹೊರಡುವ ಆಲೋಚನೆ ಮಾಡಿದ್ದಳು.

ಘುಂಥಿ ಮತ್ತು ಪಿಚುಡಲನು ಬಹಳ ಉತ್ಸಾಹಿ ಹಾಗೂ ಬಲಯುತವಾದ ತರುಣರಾದ್ದರಿಂದ ದನು ವದೀರಜ್ಜನಿಗೆ ಹೇಳಿದಳು. “ಸೋಮನಾಥದಲ್ಲಿ ಕ್ಷಾತ್ರಸ್ಪರ್ಧೆಯು ನಡೆಯುತ್ತದೆ. ಅದರಲ್ಲಿ ರಥಸ್ಪರ್ಧೆ, ಧನುರ್ವಿದ್ಯೆ, ಇತ್ಯಾದಿ ಹೋರಾಟದ ವಿದ್ಯೆಗಳೆಲ್ಲಾ ಪ್ರದರ್ಶನವಾಗುತ್ತವೆ. ಈ ಹುಡುಗರು ಭಾಗವಹಿಸಲಾಗುವಂತಹ ಸ್ಪರ್ಧೆಗಳೂ ಇರುತ್ತವೆ.”

“ಸ್ಪರ್ಧೆ ಎಂದರೆ ಏನು? ಯಾರೊಂದಿಗೆ ನಾವೇಕೆ ಸ್ಪರ್ಧಿಸಬೇಕು? ನಾವು ಹೋರಾಡುವುದು ನಮ್ಮನ್ನು ಉಳಿಸಿಕೊಳ್ಳಲು. ಯಾರೊಂದಿಗಾದರೂ ನಾವು ಸ್ಪರ್ಧಿಸಲು ಹೋದರೆ, ಅದು ಹೋರಾಡುವ ಕಲೆಗೇ ಅವಮಾನ.” ಎಂದ ವದೀರಜ್ಜ.

“ಹಾಗಲ್ಲ. ನಮ್ಮ ಹುಡುಗರು ಅಂತವನ್ನು ನೋಡಬೇಕು. ಅದರಿಂದ ಕಲಿಯಬೇಕು. ಹೊಸ ಬಗೆಯ ಪಟ್ಟು ವರಸೆಗಳು ಅಂಥಾ ಸ್ಪರ್ಧೆಗಳಲ್ಲಿ ತಿಳಿಯುತ್ತವೆ. ನೀನೂ ಬಾ. ಅದೊಂದು ಸುಂದರ ಹಬ್ಬ.” ಎಂದು ದನು ಬಲತ್ಕರಿಸಿದಳು.

ಅವಳ ಪ್ರೀತಿಯ ಬಲವಂತಕ್ಕೆ ಕಟ್ಟುಬಿದ್ದ ವದೀರಜ್ಜ ಒಪ್ಪಿಕೊಂಡ.

ಮರುದಿನ ಬೆಳಗ್ಗೆಯೇ ದನು ಭೈರವದೂತನ ಭುಜವೇರಿ ಹೊರಟಳು. ಅವಳು ಹೊರಡುವ ಮುನ್ನ ಘುಂಥಿ ದನುವಿಗೆ ಹೇಳಿದ. “ವದೀರಜ್ಜ ಎಂದೂ ಹೀಗೆ ವಯನವನ್ನು ಬಿಟ್ಟು ಹೊರಟವರಲ್ಲ. ಹೀಗೆ ಹೊರಟಿದ್ದಾರೆ ಜೊತೆಗೆ ನನ್ನೂ ಕರೆದುಕೊಂಡು ಹೋಗಲು ಒಪ್ಪಿದ್ದಾರೆ. ಇದು ದೊಡ್ಡ ಆಶ್ಚರ್ಯ.”

“ಸೋಮನಾಥದಲ್ಲಿ ಏನೋ ನಡೆಯಲಿದೆ. ನನಗೆ ಏನೋ ಶಕುನ ತೋರುತ್ತಿದೆ. ಒಳ್ಳೆಯದೋ ಕೆಟ್ಟದೋ ತಿಳಿಯದು. ನೀನು ಖಂಡಿತ ಬರಲೇ ಬೇಕು. ಅಲ್ಲಿ ಏನೋ ನಡೆಯಲಿದೆ.” ಎನ್ನುತ್ತಲೇ ದನು ಹೊರಟಳು.

ಪ್ರಯಾಣಕ್ಕೆ ಅಗತ್ಯವಿರುವ ಸಾಮಾಗ್ರಿಗಳು ಮತ್ತು ಆಹಾರ ಪದಾರ್ಥಗಳೊಂದಿಗೆ ವದೀರಜ್ಜ ಮತ್ತು ಘುಂಥಿ ನಡೆದು ಹೊರಟರು.

ಪಿಚುಡಲ ಅವರೊಂದಿಗೆ ಹೊರಡಲಿಲ್ಲ. ಏಕೆಂದರೆ, ಅವಿಮುಕ್ತದ ಜೊತೆ ಘರ್ಷಣೆ ಇರುವಂತಹ ಸಮಯದಲ್ಲಿ ವದೀರಜ್ಜನಿಗೆ ತಾನು ಹೋಗುವುದೇ ಸಮ್ಮತವಿರಲಿಲ್ಲ. ಅಂತಹುದರಲ್ಲಿ ಘುಂಥಿ ಮತ್ತು ಪಿಚುಡಲರಿಬ್ಬರೂ ಹೊರಟುಬರುವುದು ಖಂಡಿತವಾಗಿ ಒಪ್ಪಿಗೆಯಿರಲಿಲ್ಲ.

ಒಂದೂವರೆ ದಿನದಲ್ಲಿ ದನು ಸೋಮನಾಥವನ್ನು ತಲುಪಿದ್ದಳು. ಭೈರವದೂತನಿಗೆ ವಂದನೆ ಸಲ್ಲಿಸಿ, ಅವಳು ಮೊದಲು ಹೋಗಿದ್ದು ರುದ್ರ ಮಂಟಪಕ್ಕೆ. ಶರವಣದಿಂದ ತನ್ನ ಕೇಳಿ ಪಾರ್ವತಿಯ ಕಡೆಯಿಂದ ಯಾರಾದರೂ ಬಂದಿದ್ದರೇ ಎಂದು ಗಣದವರನ್ನು ವಿಚಾರಿಸಿದಳು. ಆದರೆ, ಯಾರೂ ಬಂದಿರಲಿಲ್ಲ ಎಂದು ಕೇಳಿ ಸಮಾಧಾನಗೊಂಡಳು.

*

ಯದು ಮತ್ತು ಶಂಬರ ತಮಗೆ ತೀರಾ ನಿದ್ರೆ ಆವರಿಸಿದಾಗ ಬಂಡೆಯಿಂದ ಕೆಳಗಿಳಿದುಬಂದು ಮಲಗಿದ್ದರು.

ಮರುದಿನ ಅಲ್ಲಿಂದ ಅವರು ಹೊರಡಲು ಸಿದ್ಧವಾಗುತ್ತಿದ್ದಾಗ ಗಣಪತಿಯನ್ನು ನೋಡಲು ಹೋಗುತ್ತಿರುವ ಅನೇಕ ಪ್ರಯಾಣಿಕರನ್ನು ತಂಡೋಪತಂಡವಾಗಿ ಅವರು ಕಂಡರು.

ಢುಂಢಿಗೆ ಕುಶಿಕ ಮತ್ತು ಯದು ತೀರಾ ಸನಿಹದವರೇ ಆಗಿದ್ದರೂ, ಗಣಪತಿಯನ್ನು ನೋಡಲು ಹೋಗುತ್ತಿದ್ದವರು ಅಪರಿಚಿತರಾಗಿದ್ದರು. ತಮ್ಮ ನೆಚ್ಚಿನ ನಾಯಕನನ್ನು ನೋಡಲು ಅಗಾಧ ಸಂಖ್ಯೆಯಲ್ಲಿ ಹೋಗುತ್ತಿರುವ ಜನರನ್ನು ಕಂಡು ಈ ಹುಡುಗರ ಹೆಮ್ಮೆ ಇಮ್ಮಡಿಸಿತು.

## ಅಧ್ಯಾಯ: 11 ಢುಂಢಿಯ ಕೊಡಲಿ

ಅಂತರ್ವೇದಿಯಲ್ಲಿ ಅಪಾರ ಜನಸಾಗರವೇ ಇದ್ದರೂ ಒಂದು ಬಗೆಯ ಗಂಭೀರ ಮೌನ. ಹಕ್ಕಿಗಳ ಚಿಲಿಪಿಲಿಯ ಮತ್ತು ನದಿಯ ಹರಿಯುವಿಕೆಯ ಸದ್ದೇ ಅಲ್ಲಿ ಸೇರಿದವರ ಸದ್ದಿಗಿಂತ ಗಾಢವಾಗಿತ್ತು.

ಅಲ್ಲಲ್ಲಿ ಮಾತಂಗ ಗಣದ ಆನೆಯ ಮುಖ ಹೊತ್ತ ಪತಾಕೆಗಳು ಹಾರಾಡುತ್ತಿದ್ದವು. ರುದ್ರಗಣದ ವೃಷಭ ಲಾಂಛನದ ಪತಾಕೆಗಳೂ ಅಲ್ಲಿದ್ದವು.

ಅರಣ್ಯಕರ ವಿವಿಧ ಗಣಗಳು ಅವರವರ ಲಾಂಛನದ ಬಾವುಟಗಳೊಂದಿಗೆ, ದೇವತೆಗಳ ಸಮೂಹಗಳು, ಆರ್ಯರ ಗಣಗಳು, ಋಷಿ ಮುನಿಗಳು, ವಿವಿಧ ವರ್ಣಗಳ ಜನರು, ವಿವಿಧ ವರ್ಗಗಳ ಜನರು ಅಲ್ಲಿ ನೆರೆದಿದ್ದರು.

ಮಾತಂಗ ಮತ್ತು ಮೂಷಿಕಗಣದ ಭಟರು ಖಡ್ಗ ಮತ್ತು ಧನುರ್ಬಾಣಗಳಿಂದ ಇಡೀ ಪರಿಸರವನ್ನು ಸುತ್ತುವರಿದಿದ್ದು ಎಚ್ಚರಿಕೆಯಿಂದ ಕಾಯುತ್ತಿದ್ದರು. ಈಗಷ್ಟೇ ಮಯೂರ ಗಣದ ಪ್ರಕರಣವನ್ನು ನೆನೆಸಿಕೊಂಡರೆ, ಯಾವುದೇ ವಿರೋಧಿಗಣವು ಇವರ ಮೇಲೆ ಎರಗಲು ಈ ಸಮಯಕ್ಕೆ ಕಾದಿದ್ದರೂ ಆಶ್ಚರ್ಯವಿಲ್ಲ ಎಂದು ತೋರುತ್ತದೆ.

ಶಂಬರ ತನ್ನ ಇಡೀ ಜೀವನದಲ್ಲೇ ಇಷ್ಟು ಬಗೆಯ ಜನರನ್ನು ಕಾಣುತ್ತಿರುವುದು. ಅವರ ವಿವಿಧ ವೇಷಭೂಷಣಗಳು, ವಸ್ತ್ರವಿನ್ಯಾಸಗಳು, ಅರಣ್ಯಕರಲ್ಲಿ ಇರುವ ಬೇಧಗಳು, ವಿವಿಧ ವರ್ಗಗಳ ಉಡುಗೆ ತೊಡುಗೆಗಳು, ಕಂಡರಿಯದ ಆಭರಣಗಳ ವಿನ್ಯಾಸಗಳು, ಎಲ್ಲವೂ ವೈವಿಧ್ಯಮಯ!

ಒಂದೆಡೆ ಆರ್ಯರ ವೈದಿಕ ಬ್ರಾಹ್ಮಣರು ಯಜ್ಞಕುಂಡವನ್ನು ರಚಿಸಿ ಹೋಮ ಮಾಡುತ್ತಿದ್ದರು. ಮತ್ತೊಂದೆಡೆ ಋತ್ವಿಕ್ಕುಗಳು ವೇದವನ್ನು ಪಠಿಸುತ್ತಿದ್ದರು. ಮತ್ತೊಂದೆಡೆ ತಾಂತ್ರಿಕಮಾರ್ಗಿಗಳು ಕಪಾಲವನ್ನು ಹಿಡಿದು ತಾಂಡವವಾಡುತ್ತಿದ್ದರು. ಮತ್ತೊಂದು ಕಡೆ ಪ್ರಕೃತಿಯಲ್ಲಿರುವ ಶಕ್ತಿಗೆ ಆದೇಶವನ್ನು ನೀಡುವಂತೆ ಮಾಂತ್ರಿಕರು ವಿಸ್ಮಯಕಾರಿ ಶಬ್ಧಗಳನ್ನು ಅಬ್ಬರಿಸುತ್ತಿದ್ದರು. ಕಾಪಾಲಿಕರು, ಸಿದ್ಧರು, ಯೋಗಿಗಳು ತಮ್ಮ ತಮ್ಮ ಸಾಧನೆಯಲ್ಲಿ ನಿರತರಾಗಿದ್ದರು. ಎಲ್ಲರ ಉದ್ದೇಶವೂ ಒಂದೇ ಮರಣಶಯ್ಯೆಯಲ್ಲಿರುವ ಢುಂಢಿ ಗಣಪತಿ ಮೃತ್ಯುಮುಖದಿಂದ ಪಾರಾಗಲಿ ಎಂದು. ಅಲ್ಲಲ್ಲಿ ನವಿಲುಗಳು ಓಡಾಡುತ್ತಿದ್ದವು. ಅಲ್ಲಲ್ಲಿ ಇದ್ದ ಮಂಟಪದ ಮೇಲುಗಡೆ ಕುಳಿತಿದ್ದ ಮತ್ತು ಪಟಪಟನೆ ರೆಕ್ಕೆಗಳನ್ನು ಬೀಸುತ್ತಾ ಹಾರಿಹೋಗುತ್ತಿದ್ದ ಪಾರಿವಾಳಗಳಿದ್ದವು.

ಎಲ್ಲವನ್ನೂ, ಎಲ್ಲರನ್ನೂ ನೋಡುತ್ತಾ ಶಂಬರ ವದೀರಜ್ಜನ ಒಯ್ಯುತ್ತಿದ್ದವರ ಪಕ್ಕದಲ್ಲಿಯೇ ಸಾಗುತ್ತಿದ್ದ.

ವಿಶಾಲವಾದ ಗಜೇಂದ್ರವನದ ನಡುವಲ್ಲಿ ಒಂದು ಮಹಾಮಂಟಪ. ಅದರಲ್ಲಿ ವಿಶಾಲವಾದ ಮಂಚದ ಮೇಲೆ ಮಲಗಿರುವ ಗಣಪತಿ. ಒಂದು ಪಕ್ಕದಲ್ಲಿ ಅರಣ್ಯದ ವೈದ್ಯರುಗಳಾದ ಬೇಷಜರು, ಆರ್ಯ ವೈದ್ಯರು, ದೇವತೆಗಳ ವೈದ್ಯರು ನಿರತವಾಗಿ ಗಣಪತಿಯನ್ನು ಗಮನಿಸುತ್ತಿದ್ದಾರೆ. ಕೆಲವರು ಪಕ್ಕದಲ್ಲಿಯೇ ನಿಂತು ಗಾಳಿ ಬೀಸುತ್ತಿದ್ದಾರೆ.

ಮಂಟಪದ ಹತ್ತಿರ ಹತ್ತಿರ ಹೋದಂತೆ ಶಂಬರ ಎದೆ ಜೋರಾಗಿ ಹೊಡೆದುಕೊಳ್ಳತೊಡಗಿತು. ಏನೋ ಆತಂಕ, ಏನೋ ದುಗುಡ ಜೊತೆಗೆ ಉದ್ವಿಗ್ನತೆ.

ಮಂಟಪದ ಹೊರಗೆ ಗಣಪತಿಯ ತೀರಾ ಆತ್ಮೀಯ ಭಟರು ಆಯುಧಧಾರಿಗಳಾಗಿ ಕಾವಲಿದ್ದರು. ವದೀರಜ್ಜನ ಆಗಮನವಾಗುತ್ತಿದ್ದಂತೆ ಅಲ್ಲಿ ಸಂಚಲನ ಉಂಟಾಯಿತು. “ಜಯ ಜಯ ಢುಂಢಿ, ಜಯ ಜಯ ಗಣಪತಿ, ಜಯ ಜಯ ವಿಘ್ನೇಶ್ವರ, ಜಯ ಜಯ ಧೀರ ವಿನಾಯಕ, ಜಯ ಜಯ ಮಹಾಗಣಪತಿ, ಜಯ ಜಯ ವದೀರ!” ಎಂದು ಕೂಗು ಅಲ್ಲಿ ಮಾರ್ದನಿಸಿತು. ಅಲಿದ್ದವರೆಲ್ಲಾ ವದೀರಜ್ಜನ ನೋಡಲು ಕಾತರದಿಂದ ನುಗ್ಗಿದರು. ಭಟರು ಅವರನ್ನೆಲ್ಲಾ ತಡೆದು, ವದೀರಜ್ಜನ ಹೊತ್ತಿರುವ ಮಂದಿ ಸರಾಗವಾಗಿ ಮಂಟಪದ ಒಳಗೆ ಹೋಗಲು ಅನುವು ಮಾಡಿಕೊಟ್ಟರು. ವದೀರಜ್ಜ ತಾನು ಕುಳಿತ್ತಿದ್ದಂತೆಯೇ ಕುಳಿತಿದ್ದ. ಗಣಪತಿಗೆ ತೀರಾ ಸಮೀಪವಾಗಿ ವದೀರಜ್ಜನ ಬುಟ್ಟಿಯನ್ನು ಇಡಲಾಯಿತು. ಶಂಬರ, ಯದು, ಕುಶಿಕ, ಯಾಜ್ಞಿಕ, ಬೇಲ, ಸಮ್ಮಿತ ಮತ್ತು ಇತರರು ವದೀರಜ್ಜನ ಸುತ್ತಲೂ ನೆರೆದು ಗಣಪತಿಯನ್ನೇ ನೋಡುತ್ತಿದ್ದರು.

ಶಂಬರನಿಗೆ ಅಲ್ಲಿನ ವಾಸನೆ ಮತ್ತು ಬೆಳಕು ಏನೋ ಒಂದು ರೀತಿಯ ಹೊಸತನ್ನೂ, ಉದ್ವಿಗ್ನತೆಯನ್ನೂ ಉಂಟು ಮಾಡಿತ್ತು.

ಆರ್ಯರಲ್ಲಿ, ಅನಾರ್ಯರಲ್ಲಿ, ದೇವತೆಗಳಲ್ಲಿ, ಬ್ರಾಹ್ಮಣರಲ್ಲಿ, ಅರಣ್ಯಕರಲ್ಲಿ ಬಹುದೊಡ್ಡ ಸಂಚಲನವನ್ನು ಮೂಡಿಸಿದ್ದ ಮಹಾಗಣಪತಿಯಾದ ಢುಂಢಿಯನ್ನು ತೀರಾ ಸನಿಹದಿಂದ ಶಂಬರ ನೋಡಿದ.

ಮಂಚದ ಮೇಲಿನ ಹಾಸುಗೆಯ ಮೇಲೆ ಮೈ ಚೆಲ್ಲಿದ್ದ ಗಣಪತಿ ಕಪ್ಪು ಮೈಯವನು. ತೆಳುವಾದ ಅರಿಶಿನದ ಬಟ್ಟೆ, ಮತ್ತು ಮೂಲಿಕೆಯ ರಸದಿಂದ ತೋಯ್ದ ಬಿಳಿಯ ತೆಳು ಬಟ್ಟೆಯನ್ನು ಹೊದಿಸಲಾಗಿತ್ತು. ನಿಶ್ಚೇತವಾಗಿರುವ ದಪ್ಪ ದಪ್ಪ ಕೈಗಳು ದೇಹದ ಪಕ್ಕದಲ್ಲಿ ಕೊರಡಿನಂತೆ ಬಿದ್ದಿದ್ದವು.

ದೊಡ್ಡ ಹೊಟ್ಟೆಯು ನಿಧಾನವಾಗಿ ಏರಿಳಿಯುತ್ತಿತ್ತು. ಎದೆಯ ಮೇಲೆ ಯಥೇಚ್ಛವಾಗಿ ಬೆಳೆದಿದ್ದ ಕೂದಲಲ್ಲಿ ಬಹುಪಾಲು ಬೆಳ್ಳಿಯ ಬಣ್ಣಕ್ಕೆ ತಿರುಗಿತ್ತು. ಮುಖವು ವಿಶಾಲವಾಗಿದ್ದು, ವಯಸ್ಸಾಗಿರುವುದರ ಸೂಚಕವಾಗಿ ಕೆನ್ನೆ ಮತ್ತು ಕಿವಿ ಜೋತುಬಿದ್ದಂತೆ ಕಾಣುತ್ತಿದ್ದವು. ಮೈ ಮೇಲೆ ಯಾವುದೇ ಆಭರಣವಿರಲಿಲ್ಲ. ಬಾಯಿ ತೆರೆದುಕೊಂಡಿದ್ದು, ಅದರಿಂದ ಗರಗರ ಸದ್ದು ಬರುತ್ತಲಿದ್ದು, ಗಂಟಲಿನಿಂದ ಉಸಿರಾಡುತ್ತಿರುವುದು ಸ್ಪಷ್ಟವಾಗಿ ಕಾಣುತ್ತಿತ್ತು. ಮೂಗಿನ ಹೊಳ್ಳೆಗಳೂ ವಿಶಾಲವಾಗಿದ್ದು, ಅದರಲ್ಲಿ ಬೆಳೆದಿರುವ ಕಪ್ಪು ಬಿಳಿಪಿನ ಕೂದಲು ಹೊರಗಿಣುಕುತ್ತಿದ್ದು ಮೂಗಿನ ಒಳಭಾಗ ಮತ್ತು ಮುಂಭಾಗ ತೀರಾ ಒಣಗಿರುವ ಹಾಗೆ ಕಾಣುತ್ತಿತ್ತು. ಕಣ್ಣುಗಳು ಅರ್ಧ ಮುಚ್ಚಿಕೊಂಡಿದ್ದರೂ, ವಿಶಾಲವಾಗಿರುವ ಆ ಕಣ್ಣುಗಳ ಕರಿಯ ಗುಡ್ಡೆಗಳು ಮೇಲಕ್ಕೆ ಹೋದಂತೆ ಕಾಣುತ್ತಿದ್ದು, ಕಣ್ಣಿನ ಬಿಳಿಯ ಭಾಗ ಬೆಳ್ಳಗಲ್ಲದೇ ಹಳದಿಯಾಗಿದ್ದು, ಅದರ ಮೇಲೆ ಬೇರುಗಳು ಹರಡಿದಂತೆ ಕೆಂಪು ಕವಲುಗಳು ಕಾಣುತ್ತಿದ್ದು ಇಡೀ ಮುಖಕ್ಕೆ ಕಣ್ಣುಗಳು ಭಯಂಕರವಾಗಿ ಕಾಣುತ್ತಿದ್ದವು. ಇಡೀ ಮೈ ಶುಷ್ಕವಾಗಿದ್ದು, ನೀರಿನಂಶವಿಲ್ಲದಂತೆ ಚರ್ಮವು ತೀರಾ ಸುಕ್ಕು ಸುಕ್ಕಾಗಿ ಅಲ್ಲಲ್ಲಿ ಉಬ್ಬಿಕೊಂಡಿದ್ದವು. ಹಿಂಗಾಲುಗಳು ಒಡೆದುಕೊಂಡು ಸೀಳು ಬಿಟ್ಟಂತೆ, ಕಾಲುಗಳ ಹೆಬ್ಬೆಟ್ಟುಗಳ ಚರ್ಮವೂ ಒಡೆದಿದ್ದು, ಸೀಳು ಬಿಟ್ಟಿದ್ದವು. ಅಂಗೈ ಕೂಡ ಅಂಗಾಲಿನಷ್ಟೇ ಶುಷ್ಕವಾಗಿದ್ದು, ಜೀವರಹಿತವಾಗಿ ಕಾಣುತ್ತಿದ್ದವು.

ಇನ್ನೂರು ವಸಂತಗಳನ್ನು ದಾಟಿದ್ದ ವದೀರಜ್ಜನ ಚರ್ಮ ಮಾಗಿದ್ದರೂ, ಸುಕ್ಕಾಗಿದ್ದರೂ ಹೊಳಪಿತ್ತು. ಆದರೆ, ಎಪ್ಪತ್ತೈದು ಅಥವಾ ಎಪ್ಪತ್ತಾರು ಸಂವತ್ಸರಗಳನ್ನು ಕಳೆದಿದ್ದ ಗಣಪತಿಯ ದೇಹ ನಿರ್ಜೀವವಾಗಿ ಒಣಗಿತ್ತು. ಆಗಾಗ್ಗೆ ಗಣಪತಿಯ ದೇಹ ಸೆಟೆದುಕೊಂಡಂತೆ ಎಳೆದುಕೊಳ್ಳುತ್ತಿತ್ತು. ಒಮ್ಮೊಮ್ಮೆ ಎಳೆದುಕೊಂಡ ಉಸಿರು ಹೊರಕ್ಕೆ ಬರದೇ ಒಳಗೆಯೇ ಕಟ್ಟಿಕೊಂಡಂತಾಗಿ ಗರಗರ ಸದ್ದು ಮಾಡಿ ನಿಧಾನವಾಗಿ ಬಾಯಿಂದ ಹೊರಕ್ಕೆ ಬರುತ್ತಿತ್ತು.

ಪಕ್ಕದಲ್ಲಿ ಕುಳಿತಿರುವ ಬೇಷಜರು ಎಲೆಯನ್ನೇ ಒಂದು ಮೊನಚು ಕೊನೆಯುಳ್ಳ ಬಟ್ಟಲಿನಂತೆ ಮಾಡಿಕೊಂಡು ಅದರಿಂದ ಹಾಲನ್ನೂ, ಸಂಜೀವಿನಿ ಬಳ್ಳಿಯ ರಸವನ್ನೂ ನಿಧಾನವಾಗಿ ಕುಡಿಸುವ ಪ್ರಯತ್ನ ಮಾಡುತ್ತಿದ್ದರು. ಕೆಲವೊಮ್ಮೆ ಅದು ಒಳಕ್ಕೆ ಹೋಗುತ್ತಿತ್ತು. ಆದರೆ, ಬಾಯಿಗೆ ಹಾಕಿದ್ದು, ಬುರಬುರನೆ ಉಸಿರನ ಜೊತೆಗೆ ಹೊರಗೆ ಉಕ್ಕುತ್ತಿದ್ದುದ್ದೇ ಹೆಚ್ಚು. ಕೆಲವೊಮ್ಮೆ, ಆ ರಸಕ್ಕೆ ನಾಲಿಗೆಯೇ ಅಡ್ಡವಾಗುತ್ತಿತ್ತು. ಹಾಕಿದ್ದು ಹಾಗೆಯೇ ಹೊರಗೆ ಸುರಿದುಬಿಡುತ್ತಿತ್ತು. ಆಗ ಅದನ್ನು ಒಣ ಬಟ್ಟೆಯಿಂದ ವರೆಸುತ್ತಿದ್ದರು. ಕೆಲವೊಮ್ಮೆ ಮೂಗಿಗೂ ರಸವನ್ನು ಹಿಂಡುತ್ತಿದ್ದರು. ಕಣ್ಣಿಗೂ ಹಾಕುತ್ತಿದ್ದರು.

'ಸಾವು ಸನ್ನಿಹಿತವಾಗಿದೆ.' ಎಂದುಕೊಂಡ ಶಂಬರ. ಹಲವಾರು ಪ್ರಾಣಿಗಳು ಸತ್ತಿರುವುದನ್ನು ಅವನು ಕಂಡಿದ್ದರೂ ನೈಸರ್ಗಿಕವಾಗಿ ಸಾಯುತ್ತಿರುವ ಮನುಷ್ಯನನ್ನು ಅವನು ಇದೇ ಮೊದಲು ಕಾಣುತ್ತಿರುವುದು. ಹತ್ಯೆ ಎಂಬುದು ಅವನ ತಾಯಿ ವಸುಮಾ ಕ್ಷತ್ರಿಯ ಭಟನನ್ನು ಮನೆಯಲ್ಲಿ ಕೊಂದಾದ ಮೇಲೆ ಮತ್ತೆ ಅವನು ನೋಡಿದ್ದು ಮಯೂರ ಗಣದ ಹತ್ಯಾಕಾಂಡದಲ್ಲಿ.

ನೇರವಾಗಿ ನೆಟ್ಟನೋಟದಿಂದ ಗಣಪತಿಯನ್ನೇ ನೋಡುತ್ತಿದ್ದ ಶಂಬರನಿಗೆ ಕಣ್ಣುಗಳಿಂದ ನೀರು ಹನಿಯತೊಡಗಿತ್ತು. ಅವನು ಮೆಲ್ಲನೆ ತನ್ನ ಜೊತೆ ಇರುವ ಇತರರನ್ನು ನೋಡಿದ. ಯಾಜ್ಞಿಕನೂ ಸೇರಿದಂತೆ ಎಲ್ಲರೂ ಅಳುತ್ತಿದ್ದರು. ವದೀರಜ್ಜನ ಕಣ್ಣುಗಳು ತುಂಬಿದಂತೆ ಕಂಡವು. ಆದರೆ, ನೀರು ಹೊರಗೆ ಹರಿಯುತ್ತಿರಲಿಲ್ಲ.

ವದೀರಜ್ಜನಿಗೆ ತಾವು ಎಲ್ಲಿದ್ದೇವೆ? ಏನನ್ನು ನೋಡುತ್ತಿದ್ದೇವೆ ಎಂಬ ಅರಿವು ಇದೆಯೇ ಎಂಬುದೇ ಶಂಬರನ ಒಳಪ್ರಶ್ನೆ.

ಅದುವರೆಗೂ ಹೊರಗೆಲ್ಲೋ ಇದ್ದು ಈಗ ಒಳಗೆ ಬಂದ ಹಿರಿಯ ಗಣಾಧ್ಯಕ್ಷರು ಗಣಪತಿಯ ಮುಖದ ಬಳಿ ಬಾಗಿ, "ಒಡೆಯಾ, ಹೇ ಗಣಪತಿ, ಮಹಾ ಗಣಪತಿ, ನಿನ್ನ ಪ್ರೀತಿಯ ವದೀರಜ್ಜ ಬಂದಿದ್ದಾನೆ. ವದೀರ, ವದೀರ ಬಂದಿದ್ದಾನೆ." ಎಂದು ಹೇಳುಹೇಳುತ್ತಲೇ ಬಿಕ್ಕತೊಡಗಿದ. ಅಲ್ಲಿದ್ದವರೆಲ್ಲರಿಗೂ ದುಃಖ ಉಮ್ಮಳಿಸಿತು. ಯಾಜ್ಞಿಕ ಜೋರಾಗಿ ಅಳತೊಡಗಿದ. ತನ್ನ ಮೊಣಕಾಲ ಮೇಲೆ ಕುಳಿತು. "ಹೇ ಗಣಪತಿ, ಹೇ ಗಣನಾಯಕ, ನಿನ್ನ ಅತ್ಯಂತ ತೀವ್ರ ಅಭಿಮಾನಿಯಾದ ಅಮ್ಮಿತ ಜಹ್ನೂವಸ ಅರಣ್ಯದಲ್ಲಿದ್ದಾನೆ. ಅವನಿಂದ ಈ ಪ್ರಣಾಮಗಳನ್ನು ನಾನು ತಂದಿದ್ದೇನೆ. ದಯಮಾಡಿ ಸ್ವೀಕರಿಸು." ಎಂದು ಕಾಲುಗಳ ಬಳಿ ನಮಸ್ಕರಿಸಿದ. ಶಂಬರನಿಗೆ ಅವನ ಚರ್ಯೆ ಅರ್ಥವಾಗಲಿಲ್ಲ. ಪ್ರೇತ, ಭೂತಗಳಂತಿರುವ ವಿನಾಯಕನಿವನು, ಅಜಶೃಂಗಿ ಬಳ್ಳಿಯನ್ನು ಕಟ್ಟಿಕೊಳ್ಳಲು ಹೇಳಿದ್ದವನು ಮೊಣಕಾಲೂರಿ ಈಗ ನಮಸ್ಕರಿಸುತ್ತಿದ್ದಾನೆ!

ಶಂಬರನಿಗೆ ಅಲ್ಲಿ ಬಹಳ ಹೊತ್ತು ನಿಲ್ಲಲಾಗಲಿಲ್ಲ. ನಿಧಾನವಾಗಿ ಮಂಟಪದಿಂದ ಹೊರಗೆ ಬಂದ. ಸಾಲಿನಲ್ಲಿ ಬರುತ್ತಿರುವ ಸಾಮಾನ್ಯರು ಶಂಬರನನ್ನು ಒಬ್ಬ ವಿಶೇಷ ವ್ಯಕ್ತಿಯನ್ನು ನೋಡಿದಂತೆ ಗಮನಿಸುತ್ತಿರುವುದನ್ನು ಅವನು ಗುರುತಿಸಿದ.

ಎತ್ತ ಕಡೆ ನಡೆಯುವುದೆಂದೇ ತಿಳಿಯದೇ ನಿಧಾನವಾಗಿ ಹೆಜ್ಜೆ ಹಾಕುತ್ತಿದ್ದ ಶಂಬರನ ಭುಜವನ್ನು ಯಾರೋ ಮುಟ್ಟಿದಂತಾಗಿ ಹಿಂದಿರುಗಿ ನೋಡಲು ಯಾಜ್ಞಿಕನಿದ್ದ.

"ಹೇ ಗೋಮತ್, ಹೊರಡುತ್ತಿದ್ದೀರಾ?"

"ಇಲ್ಲ. ಎಲ್ಲಿಗೆ ಹೋಗಲಿ? ಅಲ್ಲಿಂದ ಹೊರಗೆ ಬಂದೆ ಅಷ್ಟೇ." ಎಂದ ಶಂಬರ ಯದುವೂ ಮಂಟಪದಿಂದ ಹೊರಗೆ ಬರುತ್ತಿರುವುದನ್ನು ಕಂಡು ಅಲ್ಲಿಯೇ ನಿಂತ. ಇವರಿಬ್ಬರನ್ನು ಸಂಧಿಸಿದ ಯದು, "ಈಗೆಲ್ಲಿ?" ಎಂದು ಕೇಳಿದ.

"ನನಗೆ ಗೊತ್ತಿಲ್ಲ." ಎಂದು ಭುಜ ಕೊಡವಿದ ಶಂಬರ, "ಯದು, ನೀನೇ ಹೇಳಬೇಕು." ಎಂದ.

"ನನ್ನನ್ನು ಹಿಂಬಾಲಿಸಿ." ಎಂದ ಯದು ಗಣಪತಿಯನ್ನು ಮಲಗಿಸಿದ್ದ ಮಂಟಪಕ್ಕಿಂತ ಕೊಂಚವೇ ದೂರದಲ್ಲಿದ್ದ ಮನೆಯೊಂದನ್ನು ಪ್ರವೇಶಿಸಿದ. ಅದರಲ್ಲಿ, ಒಂದು ಕಿರುವೇದಿಕೆಯ ಮೇಲೆ ಇಟ್ಟಿದ್ದ ದೊಡ್ಡ ಕಬ್ಬಿಣದ ಕೊಡಲಿಯನ್ನು ತೋರಿದ. ಅದು, ಬಹಳ ಹಳತಾಗಿದ್ದು, ನೋಡಿದ ತಕ್ಷಣ ಅದು ಬಹಳ ವರುಷಗಳಿಂದಲೇ ಉಪಯೋಗಿಸಿಲ್ಲ ಎಂದು ತೋರಿತು.

"ಇದು ಮಹಾಕೊಡಲಿ, ಮಹಾಗಣಪತಿಯಾದ ಢುಂಢಿಯ ಕೊಡಲಿ." ಎಂದ ಯದು.

ಶಂಬರ ಮೊಣಕಾಲೂರಿ ಅದನ್ನು ಸಮೀಪದಿಂದ ನೋಡಿದ. ಆ ಕೊಡಲಿ ಗಣಪತಿಯ ಮೈಯಿದ್ದಂತೆಯೇ ಹೊಳಪಿರಲಿಲ್ಲ. ನೋಡಲು ಬಹು ಗಾತ್ರವಾಗಿದ್ದು, ಇದನ್ನೆತ್ತಿ ಬೀಸುತ್ತಿದ್ದನೆಂದರೆ ಗಣಪತಿಯ ಶಕ್ತಿಯ ಕಲ್ಪನೆ ಸಿಗುತ್ತಿತ್ತು.

ಶಂಬರ ಮೆಲ್ಲನೆ ಅದನ್ನು ಮುಟ್ಟಿದ. ಬಹು ತಣ್ಣಗಿನ ಲೋಹ ತೇವವನ್ನೇ ಮುಟ್ಟಿದ ಅನುಭವ ನೀಡಿತು.

"ನೂರಾರು ಜನರ ರಕ್ತದ ರುಚಿ ನೋಡಿದೆ ಈ ಕೊಡಲಿ. ಆರ್ಯರ, ಬ್ರಾಹ್ಮಣರ, ವೀರ ಕ್ಷತ್ರಿಯರ, ಅನೇಕಾನೇಕ ಗಾಣಪತ್ಯರ ರಕ್ತದ ರುಚಿ ನೋಡಿದೆ ಈ ಕೊಡಲಿ. ದುರಹಂಕಾರಿ ಬ್ರಾಹ್ಮಣನಾದ ಪರಶುರಾಮನ ಸೊಕ್ಕಡಗಿಸಿರುವ ಕೊಡಲಿ. ದೇವತೆಗಳ ಮದವನ್ನು ಅಡಗಿಸಿರುವ ಕೊಡಲಿಯಿದು." ಎಂದ ಯದು.

ಕೊಡಲಿಯಿಂದ ತನ್ನ ಕೈಯನ್ನು ಹಿಂದಕ್ಕೆ ತೆಗೆದುಕೊಂಡ ಶಂಬರ. ಕೊಡಲಿಯನ್ನು ಸ್ಪರ್ಶಿಸಿದ ಬೆರಳುಗಳಿಗೆ ಮತ್ತು ಅಂಗೈಭಾಗಕ್ಕೆ ತೇವವಾದ ರಕ್ತ ಅಂಟಿಕೊಂಡಂತೆ ಭಾಸವಾಯ್ತು. ಅದೇ ಹಸಿರಕ್ತದ ವಾಸನೆ ಈ ಕೋಣೆಯ ತುಂಬಾ ತುಂಬಿದಂತಾಯ್ತು.

*

ಸೋಮನಾಥದಲ್ಲಿ ರಸ್ತೆಗಳುದ್ದಕ್ಕೂ ಪತಾಕೆಗಳು, ತೋರಣಗಳು ಸಿಂಗಾರವಾಗಿದ್ದವು. ಬಣ್ಣಬಣ್ಣದ ರಂಗೋಲಿಗಳು ನೆಲವನ್ನು ಅಲಂಕರಿಸಿದ್ದರೆ, ಎಲೆಗಳು ಮತ್ತು ಬಣ್ಣಬಣ್ಣದ ಹೂವಿನ ಮಾಲೆಗಳು ಮನೆಗಳನ್ನು ಮತ್ತು ರಸ್ತೆಗಳನ್ನು ಅಲಂಕರಿಸಿದ್ದವು. ಏಳು ದಿನಗಳ ಕಾಲ ನಡೆಯುವ ಆ ಸ್ಪರ್ಧಾ ಸಪ್ತಾಹದಲ್ಲಿ ಭಾಗವಹಿಸಲು ಬೇರೆ ಬೇರೆ ಸ್ಥಳಗಳಿಂದ ಆರ್ಯವೀರರೆಲ್ಲಾ ಆಗಮಿಸಿದ್ದರು.

ವಿಶಾಲವಾದ ಮೈದಾನದಲ್ಲಿ ಆಯೋಜಿಸಲಾಗಿದ್ದ ಕ್ಷಾತ್ರಕ್ರೀಡೆಗಳ ಸ್ಪರ್ಧೆಗಳನ್ನು ನೋಡಲು ಜನರು ಕಿಕ್ಕಿರಿದು ನೆರೆದಿದ್ದರು.

ರಾಜರಿಗೆ ಮತ್ತು ರಾಜ ಮನೆತನದವರಿಗೆ, ಆರ್ಯರ ಮುಖಂಡರಿಗೆ, ವಿವಿಧ ಗಣಗಳಿಗೆ, ಋಷಿಗಳಿಗೆ, ಸಿದ್ಧರಿಗೆ, ದೇವತಾಪುರುಷರಿಗೆ, ವೈಶ್ಯರಿಗೆ, ಕ್ಷತ್ರಿಯರಿಗೆ, ಬ್ರಾಹ್ಮಣರಿಗೆ, ಶೂದ್ರರಿಗೆ; ಹೀಗೇ ಪ್ರತಿಯೊಂದು ವರ್ಗಕ್ಕೂ ವಿಶೇಷವಾಗಿ ಸ್ಥಳಾವಕಾಶ ಮಾಡಿದ್ದರು.

ಮೊದಲನೆಯ ದಿನವೇ ರಥಸ್ಪರ್ಧೆಯಿತ್ತು.

ವಿತೃಪನ ಮಕ್ಕಳಾದ ಸಮಪ ಮತ್ತು ಮನಪರೂ ಸೇರಿದಂತೆ ಅನೇಕ ಕ್ಷತ್ರಿಯರು ರಥಸ್ಪರ್ಧೆಯಲ್ಲಿ ಭಾಗವಹಿಸಿದರು. ಸಮಪ ಮತ್ತು ಮನಪರು ಗೆಲ್ಲಲಿಲ್ಲ. ದಾಶೇರಕದಿಂದ ಬಂದಿದ್ದ ಕ್ಷತ್ರಿಯ ಕುಮಾರನೊಬ್ಬನು ರಥಸ್ಪರ್ಧೆಯಲ್ಲಿ ಗೆದ್ದನು.

ವಯನದವರಿಗೆ ಈ ಬಗೆಯ ಸ್ಪರ್ಧೆಯನ್ನು ನೋಡುತ್ತಿರುವುದು ಇದೇ ಮೊದಲಾದ್ದರಿಂದ ಬಹು ಸಂತೋಷದಿಂದ ವೀಕ್ಷಿಸುತ್ತಾ ಸಂಭ್ರಮಿಸಿದರು. ಇಡೀ ದಿನವೆಲ್ಲಾ ರಥಸ್ಪರ್ಧೆಯಲ್ಲಿಯೇ ಕಳೆದುಹೋಯಿತು.

ಮರುದಿನ ಬೆಳಗ್ಗೆ ವದೀರಜ್ಜ ಮತ್ತು ಢುಂಢಿ ಸೋಮನಾಥದ ರುದ್ರ ಮಂಟಪಕ್ಕೆ ಬಂದಿಳಿದರು. ಅವರಿಗೆ ಅತ್ಯಂತ ಕುತೂಹಲಕರವಾದ ಮತ್ತು ರಂಗಾದ ರಥಸ್ಪರ್ಧೆಯನ್ನು ನೋಡಲಾಗಲಿಲ್ಲ. ಆದರೆ, ಅಂದು ಬೆಳಗ್ಗೆ ಅಶ್ವಾರೂಢರ ವೇಗ ಸ್ಪರ್ಧೆ.

ಸ್ಪರ್ಧಿಗಳು ಅತ್ಯಂತ ವೇಗವಾಗಿ ಒಬ್ಬರಿಗಿಂತ ಒಬ್ಬರು ಕುದುರೆಯನ್ನು ಓಡಿಸುತ್ತಿದ್ದರು. ಅರಟ್ಟದಿಂದ ಬಂದಿರುವ ಆರ್ಯ ಅಶ್ವಶಾಸ್ತ್ರ ಪಂಡಿತನ ಮಗ ವಿಜಯಿಯಾದ. ಬ್ರಾಹ್ಮಣನೊಬ್ಬ ಕ್ಷತ್ರಿಯ ಕುಮಾರರನ್ನೆಲ್ಲಾ ಹಿಂದಿಕ್ಕಿ ಗೆದ್ದದ್ದು ಅಲ್ಲಿದ್ದ ಬ್ರಾಹ್ಮಣರ ತಂಡಕ್ಕೆ ಬಹಳ ಸಂತೋಷವಾಯಿತು. ಇಡೀ

ಕ್ರೀಡಾಂಗಣ 'ಭಲೆ, ಭಲೇ, ಬಾಪುರೇ.....' ಇತ್ಯಾದಿ ಜಯಜಯಕಾರಗಳಿಂದ ತುಂಬಿ ಹೋಗಿತ್ತು. ತಮ್ಮ ಸೋಲಿಗೆ ಕಾರಣವಾದ ಕುದುರೆಗಳನ್ನು ಕೆಲವರು ಅಲ್ಲಿಯೇ ಕೊಲ್ಲುತ್ತಿದ್ದದ್ದು ಭೀಭತ್ಸವಾಗಿತ್ತು. ಈ ಸ್ಪರ್ಧೆಯಲ್ಲಿಯೂ ವಿತೃಪನ ಮಕ್ಕಳಾದ ಸಮಪ ಮತ್ತು ಮನಪರು ಭಾಗವಹಿಸಿದ್ದು ಅವರು ತಮ್ಮ ಹಿಂಬಾಲಕರಿಂದ ಎಷ್ಟೇ ಹುರಿದುಂಬಿಸುವ ಭಳಿರೇಗಳನ್ನು ಕೇಳಿದರೂ ಅವರು ಕೊನೆಗೆ ಸೋತರು. ಘುಂಢಿಗೆ ಈ ಸ್ಪರ್ಧೆಗಳನ್ನು ನೋಡುತ್ತಾ ನೋಡುತ್ತಾ ರೋಮಾಂಚನವಾಗುತ್ತಿತ್ತು.

"ನಾನೂ ಅದರಲ್ಲಿ ಭಾಗವಹಿಸಲೇ?" ಘುಂಢಿ ವದೀರಜ್ಜನ ಕೇಳಿದ.

"ನಿನಗೆ ತಕ್ಕುದಾದುದು ಸ್ಪರ್ಧೆಯಲ್ಲಿ ನೀನು ಭಾಗವಹಿಸು. ಆದರೆ ಇದು ಬರಿಯ ಕ್ರೀಡೆ. ಇದರಲ್ಲಿನ ಸೋಲು ಮತ್ತು ಗೆಲವುಗಳನ್ನು ಗಂಭೀರವಾಗಿ ತೆಗೆದುಕೊಳ್ಳಬಾರದು." ಎಂದ ವದೀರಜ್ಜ.

ಅಂದು ರಾತ್ರಿ ಮಿತ ಮತ್ತು ಘುಂಢಿ ವದೀರಜ್ಜನಿಗೆ ದುಂಬಾಲುಬಿದ್ದರು. "ನಾವೂ ಅದರಲ್ಲಿ ಭಾಗವಹಿಸುತ್ತೇವೆ."

"ನಾನು ಹೇಳಿದೆನಲ್ಲ ಭಾಗವಹಿಸಿ ಎಂದು. ಆದರೆ, ಅದು ನಿಮಗೆ ತಕ್ಕುನಾಗಿರಲಿ. ಆದರೆ, ನಾನು ಸ್ಪರ್ಧೆಯನ್ನು ಹುಚ್ಚುತನ ಎನ್ನುವವನು. ಅದರಿಂದ ದೂರವಾಗಿರುವವನು." ಎಂದ ವದೀರಜ್ಜ.

"ನಾವೂ ಒಂದು ಹುಚ್ಚಾಟವನ್ನು ಆಡಿ ಬರುತ್ತೇವೆ." ಎಂದ ಘುಂಢಿ.

"ನೀವು ಆಡ ಬೇಕೆಂದಿರುವ ಆಟ ಯಾವುದಕ್ಕೆ ಕಾರಣವಾಗುತ್ತದೋ ಯಾರಿಗೆ ಗೊತ್ತು. ಆಡಿ, ಆಡಿ, ಎದುರಿಸಲೂ ಸಿದ್ಧವಾಗಿ." ಎಂದು ಮೆಲ್ಲನೆ ನಕ್ಕಿದ್ದ ವದೀರಜ್ಜ.

ಮರುದಿನ ಧನುರ್ವಿದ್ಯೆಯ ಪ್ರದರ್ಶನ.

ಇಂದೂ ತಮಗೆ ಕೆಲಸವಿಲ್ಲ ಎಂದುಕೊಂಡರು ಘುಂಢಿ ಮತ್ತು ಮಿತ. ವಯನದವರು ಬಾಣ ಮತ್ತು ಬಿಲ್ಲುಗಳನ್ನು ಉಪಯೋಗಿಸಿದರೂ, ಶಾಸ್ತ್ರೀಯವಾಗಿ ಕಲಿತವರಲ್ಲ. ಆದರೆ, ಅಲ್ಲಿನ ಕ್ಷತ್ರಿಯ ಕುಮಾರರು ಮತ್ತು ಆರ್ಯ ವೀರರು ಅದ್ಭುತವಾಗಿ ತಮ್ಮ ಶರಸಂಧಾನದ ಕೌಶಲ್ಯ ತೋರಿದರು. ಕುರುಕುಲದ ಅನೇಕ ರಾಜಕುಮಾರು, ಯಾದವ ವಂಶದ ಅನೇಕ ರಾಜಕುಮಾರರೂ ಈ ಧನುರ್ವಿದ್ಯೆಯಲ್ಲಿ ಪಾಲ್ಗೊಂಡಿದ್ದರು. ಕೊನೆಗೆ ಕುರುವಂಶಕ ಸುಕೇಶಿ ಎಂಬ ರಾಜಕುಮಾರ ಧನುರ್ವಿದ್ಯೆಯಲ್ಲಿ ವಿಜೇತನಾದ. ಅಂದು ಸಂಜೆ ಎಲ್ಲರೂ ವಿಶ್ರಮಿಸುತ್ತಿದ್ದಾಗ ದನು ಓಡೋಡಿ ಬಂದಳು. "ಘುಂಢಿ, ಮಿತ, ನಾಳೆ ನೀವು ಭಾಗವಹಿಸಬಹುದಾದ ಸ್ಪರ್ಧೆ. ಪರಶುಪ್ರಯೋಗ." ದನು ಹೇಳಿದಳು. "ಕೊಡಲಿಯನ್ನು ನಾನಾ ರೀತಿಯಲ್ಲಿ ಬಳಸುವಂಥ ಸ್ಪರ್ಧೆಯಿರಬೇಕು. ನಾನು ನಿಮಗೆ ಉತ್ತಮವಾದ ಕೊಡಲಿಗಳನ್ನು ಕೊಡಿಸುತ್ತೇನೆ. ಬನ್ನಿ."

ದನು ಸೋಮನಾಥದಲ್ಲಿ ತನಗೆ ತಿಳಿದಿದ್ದ ಕಮ್ಮಾರನ ಬಳಿಗೆ ಘುಂಢಿಯನ್ನೂ ಮತ್ತು ಮಿತನನ್ನು ಕರೆದೊಯ್ದಳು.

ಕ್ಷಾತ್ರಕ್ರೀಡೆಗಳು ನಡೆಯುತ್ತಿರುವ ಸಂಧರ್ಭವಾದ್ದರಿಂದ ಕಮ್ಮಾರನಿಗೆ ಪುರುಸೊತ್ತಿರಲಿಲ್ಲ.

"ನನಗೆ ಅಗತ್ಯವಾಗಿ ಎರಡು ಅತ್ಯಂತ ಒಳ್ಳೆಯ ಕೊಡಲಿಗಳು ಬೇಕು." ಎಂದು ದನು ಒತ್ತಾಯ ಪೂರ್ವಕವಾಗಿ ಹೇಳಿದಳು.

ಶಿವ-ಪಾರ್ವತಿಯರ ಪರಿಚಾರಿಕೆಯಾದ ಅವಳ ಮಾತನ್ನು ಅಷ್ಟು ಸುಲಭವಾಗಿ ತಳ್ಳಿ ಹಾಕಲು ಆ ಕಮ್ಮಾರನಿಗೆ ಸುಲಭವಾಗಿರಲಿಲ್ಲ. ಆದರೆ, ಅವಳಿಗೆ ಹೊಸ ಕೊಡಲಿ ಮಾಡಿಕೊಡುವಷ್ಟು ಪುರುಸೊತ್ತಿರಲಿಲ್ಲ.

"ಯಾವುದಾದರೂ ಉತ್ತಮವಾಗಿರುವ ಹಳೆಯದಾದರೂ ಕೊಡು." ಎಂದಳು ದನು.

ಕಮ್ಮಾರನು ಕೆಲವು ಸಮಯ ತೆಗೆದುಕೊಂಡು ಉತ್ತಮವಾದ ಎರಡು ಒಳ್ಳೆಯ ಹೊಸ ಕೊಡಲಿಗಳನ್ನು ತೆಗೆದು ಅವುಗಳನ್ನು ಮೊನಚಾಗಿಸಿ ಢುಂಢಿ ಮತ್ತು ಮಿತರಿಗೆ ನೀಡಿದ.

ಅವರಿಬ್ಬರೂ ಅದನ್ನು ಹತ್ತಿರದಿಂದ ವೀಕ್ಷಿಸಿ ಅದರ ಮೊನಚು, ಅದರ ಭಾರ, ಅದನ್ನು ಹಿಡಿದುಕೊಳ್ಳಲು ಇರಬೇಕಾದ ಬಿಗಿತ ಎಲ್ಲವೂ ಸರಿಯಾಗಿದೆಯೆಂದು ಸಂತೋಷಿಸಿದರು.

ಅವರಿಂದ ಆ ಕೊಡಲಿಗಳನ್ನು ಹಿಂದಕ್ಕೆ ಪಡೆದುಕೊಂಡು ಕಮ್ಮಾರನು ಢುಂಢಿಯ ಕೊಡಲಿಯನ್ನು ದಪ್ಪನಾದ ಮರದ ದಿಮ್ಮಿಗೆ ಹೊಡೆಯಲು ಹೋದನು.

"ತಡೆ." ಎಂದ ಢುಂಢಿ. "ನನಗೆ ಕೊಡುತ್ತಿರುವ ಆ ಕೊಡಲಿಯನ್ನು ನಾನಲ್ಲದೇ ಯಾರೂ ಉಪಯೋಗಿಸಬಾರದು. ಅದರಲ್ಲೂ ನಾನೇ ಮೊದಲು ಉಪಯೋಗಿಸಬೇಕು."

ಕಮ್ಮಾರ ನಗುತ್ತಾ ಅವರಿಬ್ಬರಿಗೆ ಕೊಡಲಿಗಳನ್ನು ಹಿಂದಿರುಗಿಸುತ್ತಾ, "ಆಯಿತು ಅರಣ್ಯ ಪುತ್ರರೇ. ಆದರೆ, ನನ್ನ ಕಣ್ಣೆದುರಿಗೆ ಈ ಮರದ ದಿಮ್ಮಿಯನ್ನು ಸೀಳಿ ಇದರ ಮೊನಚನ್ನು ಪರೀಕ್ಷಿಸಿ." ಎಂದ.

"ಆಯಿತು." ಎಂದ ಮಿತ ಮೊದಲು ತನ್ನ ಕೊಡಲಿಯೊಡನೆ ಮುಂದೆ ಬಂದ. ಅವನು ಮರದ ದಿಮ್ಮಿಯನ್ನು ಸೀಳಲು ಸಿದ್ಧನಾಗುತ್ತಿದ್ದಾಗ, "ಹೊಚ್ಚ ಹೊಸ ಕೊಡಲಿಯನ್ನು ಮೊದಲು ಯಾವುದರ ಮೇಲೆ ಉಪಯೋಗಿಸುತ್ತೇವೆಯೋ, ಆ ಕೊಡಲಿಯ ಜೀವಮಾನವೆಲ್ಲಾ ಅದೇ ಕೆಲಸ ಮಾಡುತ್ತಿರುತ್ತದೆ." ಎಂದ ಕಮ್ಮಾರ.

"ತಡೆ." ಎಂದ ಢುಂಢಿ ಮಿತನ ತಡೆದ. "ನಮ್ಮ ಕೊಡಲಿಯ ಜೀವಮಾನವೆಲ್ಲಾ ಕಟ್ಟಿಗೆಯನ್ನು ಹೊಡೆದುಕೊಂಡಿರುವುದಲ್ಲ. ನೋಡೋಣ ಇಂದು ಪ್ರಯೋಗಿಸುವುದೇ ಬೇಡ. ನಾಳೆ ಸ್ಪರ್ಧಾನುಸಾರ ಕೊಡಲಿಯನ್ನು ಉಪಯೋಗಿಸೋಣ." ಎಂದ ಢುಂಢಿಯ ಮಾತು ಕೇಳಿ ಮಿತ ತಾನು ಸೌದೆ ದಿಮ್ಮಿಯನ್ನು ಸೀಳುವುದ ತಡೆದ.

"ಹೇ ಅರಣ್ಯಕಳೇ, ನನಗೆ ಯಾಕೋ ಶಕುನ ಸರಿಯಾಗಿಲ್ಲ ಎಂದು ಅನ್ನಿಸುತ್ತಿದೆ." ಎಂದ ಕಮ್ಮಾರ ದನುವಿನೊಂದಿಗೆ.

"ನಾವು ರುದ್ರನ ನೆರಳಿನಲ್ಲಿರುವವರು. ಶುಭ-ಅಶುಭ ಶಕುನಗಳೆಲ್ಲಾ ನಮಗೆ ಒಂದೇ." ಎಂದಳು ದನು.

"ಶಕುನಗಳು ಶುಭ ಅಶುಭ ತಿಳಿಸುತ್ತವೆ ಹೇ ಅರಣ್ಯಕಳೇ." ಎಂದ ಕಮ್ಮಾರ.

ದನು ನಕ್ಕು ಹೇಳಿದಳು. "ಹೋಗಲಿ ಬಿಡು. ಈಗ ನೀನು ಕಂಡ ಶಕುನ ಶುಭವಾದರೆ ಅದು ನಮ್ಮ ಕಡೆಗೆ, ಅಶುಭವಾದರೆ ನಮ್ಮ ಎದುರಾಳಿಗೆ."

ಮರುದಿನ ಕ್ರೀಡಾಕ್ಷೇತ್ರದಲ್ಲಿ ಜನರು ಕಿಕ್ಕಿರಿದು ತುಂಬಿದ್ದರು.

ಅಂದು ಎರಡು ಸ್ಪರ್ಧೆಗಳು ಪ್ರಮುಖವಾಗಿದ್ದವು. ಬೆಳಗ್ಗೆ 'ಪರಶು ಪ್ರಯೋಗ' ಮತ್ತು ಮಧ್ಯಾಹ್ನದ ನಂತರ 'ಗಜ ಕಾಳಗ'.

ಕೊಡಲಿಗಳನ್ನು ಹಿಡಿದ ಢುಂಢಿ ಮತ್ತು ಮಿತನಿಗೆ ವಯನದ ಬಂಧುಗಳು ಹುರಿದುಂಬಿಸಿದರು. "ಢುಂಢಿಗೆ ಜಯವಾಗಲಿ, ಮಿತನಿಗೆ ಜಯವಾಗಲಿ." ಎಂದು ಘೋಷಿಸುತ್ತಾ ತಾವು ತಂಗಿದ್ದ ತಾಣದಿಂದ ಹೊರಗೆ ನಡೆದರು. ದನುವೂ ಹಾಗೆಯೇ ಬರಲು, ಪಾರ್ವತಿಯ ಶಕ್ತಿಗಣದ ಕನ್ನಿಕೆಯೋರ್ವಳು ದನುವನ್ನು ತಡೆದಳು.

"ಹೇ ದನು, ನೀನು ಈ ಕೂಡಲೇ ಕೈಲಾಸಕ್ಕೆ ಬರಬೇಕೆಂದು ಪಾರ್ವತಿ ಕರೆ ಹೇಳಿದ್ದಾಳೆ."

ದನುವಿಗೆ ನಿರಾಸೆಯಾದರೂ, ಪಾರ್ವತಿಯ ಆಗ್ರಹಕ್ಕೆ ತುತ್ತಾಗಲು ಅವಳಿಗೆ ಇಷ್ಟವಿರಲಿಲ್ಲ. ಢುಂಢಿ ಮತ್ತು ಮಿತನಿಗೆ ವಿಜಯವನ್ನು ಹಾರೈಸಿ, ಶಕ್ತಿಗಣದವಳು ತಂದಿದ್ದ ರಥವನ್ನೇರಿದಳು.

ದನುವೇನಾದರೂ ಇದ್ದಿದ್ದರೆ, ಅಲ್ಲಿನ ರೀತಿ ನೀತಿಗಳನ್ನು ತಿಳಿಯಲು ಅನುಕೂಲವಾಗುತ್ತಿತ್ತು ಎಂದು ಮಿತ ಪದೇಪದೇ ಅಂದ. 'ಆದರೇನು ನಾವೇ ಹೋಗೋಣ, ನೋಡೋಣ.' ಎನ್ನುವುದು ಢುಂಢಿಯ ಮಾತು.

ಸ್ಪರ್ಧಿಗಳೆಲ್ಲಾ ನೆರೆದಿರುವ ಕಡೆಗೆ ನೇರವಾಗಿ ಢುಂಢಿ ಮತ್ತು ಮಿತ ಹೋಗಿ ನಿಂತರು. ಸ್ಪರ್ಧಾಧಿಕಾರಿಯೊಬ್ಬ ಅವರ ಬಳಿಗೆ ಬಂದು, "ನೀವು ಯಾವ ಗಣದವರು?" ಎಂದು ಕೇಳಿದ.

"ನಾವು ಯಾವುದೇ ಗಣದವರಲ್ಲ. ನಾವು ವಯನದವರು, ಅರಣ್ಯಕರು."

"ಅರಣ್ಯದಲ್ಲಿರುವವರೆಲ್ಲಾ ಅರಣ್ಯಕರೇ. ವಯನ ಎಂಬುದು ಅರಣ್ಯಪ್ರದೇಶದ ಹೆಸರು. ನಿಮ್ಮ ನಾಯಕನ ಹೆಸರೇನು?"

"ವದೀರ." ಇಬ್ಬರೂ ಒಟ್ಟಿಗೆ ಹೇಳಿದರು.

"ನಾಯಕನಿದ್ದೂ ನಿಮಗೆ ಯಾವ ಗಾಣಪತ್ಯವೂ ಇಲ್ಲವೇ?"

"ಸ್ಪರ್ಧೆಯಲ್ಲಿ ಭಾಗವಹಿಸಬೇಕು." ಎಂದ ಢುಂಢಿ.

"ನಿನ್ನ ಹೆಸರೇನು?"

“ಢುಂಢಿ.”

“ಢುಂಢಿಯೇ?” ಅಧಿಕಾರಿ ನಕ್ಕ. “ನಿನ್ನದು ಯಾವ ಲಿಂಗ?”

ಪಕ್ಕದಲ್ಲಿರುವ ಅಧಿಕಾರಿಯ ಸಹಾಯಕ ನಗುತ್ತಾ, “ನೀನು ರಾಕ್ಷಸನೋ, ರಾಕ್ಷಸಿಯೋ?” ಎಂದ.

ಅವರಿಬ್ಬರೂ ಏನನ್ನು ಹೇಳುತ್ತಿದ್ದಾರೆಂದು ಅವರಿಬ್ಬರಿಗೆ ಅರ್ಥವಾಗಲಿಲ್ಲ. ಮಿತ ಮತ್ತು ಢುಂಢಿ ಮುಖ ಮುಖ ನೋಡಿಕೊಂಡರು.

ತಮ್ಮನ್ನು ಅವಿಮುಕ್ತ ಅರಣ್ಯ ಪ್ರದೇಶದ ರಕ್ಷಸರೆಂದು ಹೇಳುತ್ತಿದ್ದದ್ದು ನೆನಪಿಗೆ ಬಂದು ಢುಂಢಿ ಹೇಳಿದ. “ನಾವು ರಾಕ್ಷಸರು.”

“ರಾಕ್ಷಸರಿಗೆ ಮತ್ತು ಅಸುರರಿಗೆ ಇಲ್ಲಿ ಅವಕಾಶವಿಲ್ಲ. ಆರ್ಯರೂ, ಅನಾರ್ಯರಾದ ಇತರ ಗಾಣಪತ್ಯದವರಿಗೂ ಅವಕಾಶವಿದೆ. ಯಾವುದಕ್ಕೂ ನಿಲ್ಲಿ. ನಾನು ಇದಕ್ಕೆ ಸಂಬಂಧಪಟ್ಟ ವಿದ್ವಾಂಸರೊಡನೆ ಮಾತಾಡಿ ನಿಮ್ಮನ್ನು ಕರೆಯುತ್ತೇನೆ.” ಎಂದು ಹೇಳಿ ಅವನು ಮುಂದೆ ಹೋದ.

ಢುಂಢಿ ಮತ್ತು ಮಿತ ಇಬ್ಬರೂ ಕೊಡಲಿಯನ್ನು ಭುಜಕ್ಕೇರಿಸಿಕೊಂಡು ಕಾದು ನಿಂತರು.

ದೊಡ್ಡದಾಗಿರುವ ಮರದ ದಿಮ್ಮಿಯನ್ನು ಮೈದಾನದಲ್ಲಿ ಇಟ್ಟಿರಲಾಗುತ್ತದೆ. ಪ್ರವೇಶಿಸಿದ ಇಬ್ಬರು ಸ್ಪರ್ಧಿಗಳು ಅದರ ಮೇಲೆ ತಮ್ಮ ಪರಶುವನ್ನು ಪ್ರಯೋಗಿಸಬೇಕು. ಮರದ ದಿಮ್ಮಿಯನ್ನು ಸೀಳಬೇಕು. ಕೊಡಲಿಯಿಂದಲೇ ಆ ಮರದ ದಿಮ್ಮಿಯನ್ನು ತಮ್ಮ ವಶ ಮಾಡಿಕೊಂಡು ಸೀಳಬೇಕು. ಒಮ್ಮೆ ಅದು ಇಬ್ಭಾಗವಾದ ಮೇಲೆ ಇಬ್ಬರೂ ಒಂದೊಂದು ಭಾಗವನ್ನು ಸೀಳಿಕೊಂಡು ಹೋಗುವುದರಲ್ಲಿ ಯಾವ ಸ್ವಾರಸ್ಯವಿದೆ? ಯಾರ ಕೊಡಲಿಯ ಘಾತಕ್ಕೆ ಅದು ಸಿಕ್ಕಿರುತ್ತದೆಯೋ ಅವರು ಮುಂದೆ ಪ್ರಯೋಗಿಸುವ ಭಾಗವನ್ನೇ ಮತ್ತೊಬ್ಬನು ಅನುಸರಿಸಬೇಕು. ಈ ಸ್ಪರ್ಧೆಯಲ್ಲಿ ಒಬ್ಬರಿಗೊಬ್ಬರು ಘಾಸಿಗೊಳಿಸಿಕೊಳ್ಳುವ ಎಲ್ಲಾ ಸಾಧ್ಯತೆಗಳಿವೆ. ಕಾಲುಗಳಿಗೆ, ಕೈಗಳಿಗೆ ತೀವ್ರ ಘಾತಗಳೂ ಆಗುತ್ತಿದ್ದವು. ಬಹಳ ರೌದ್ರವಾಗಿ ಕಾಣುತ್ತಿದ್ದ ಸ್ಪರ್ಧೆಯಲ್ಲಿ ಭಾಗವಹಿಸಲು ಢುಂಢಿ ಮತ್ತು ಮಿತ ತುದಿಗಾಲಿನಲ್ಲಿ ನಿಂತಿದ್ದರು. ಅಧಿಕಾರಿ ಇವರನ್ನು ಕಂಡರೂ ಅವಗಣಿಸಿದ್ದ. ಮಿತ ನಾಲ್ಕಾರು ಬಾರಿ ಅಧಿಕಾರಿಯನ್ನು ಕಂಡು ತಮ್ಮ ಸರತಿ ಯಾವಾಗೆಂದು ಕೇಳಿದ.

ಸ್ಪರ್ಧೆಯಲ್ಲಿ ಕೊನೆಯಲ್ಲಿ ಉಳಿದವನಿಗೆ ಎದುರಾಗಲು ಅಧಿಕಾರಿ ಇವರಲ್ಲೊಬ್ಬರನ್ನು ಕರೆದ. ಢುಂಢಿ ಮತ್ತು ಮಿತನು ಒಟ್ಟಿಗೆ ಕಾಲಿಟ್ಟರೂ, ಢುಂಢಿ ಮಿತನನ್ನು ಹೋಗೊಟ್ಟ.

ಕೊನೆಯಲ್ಲಿ ಉಳಿದಿದ್ದ ಸ್ಪರ್ಧಿ ಭಾಗಲ ಸೋಮನಾಥದವನೇ ಆಗಿದ್ದು, ವಿತೃಪನಿಗೆ ನಿಕಟವರ್ತಿಯಾಗಿದ್ದ.

ಸ್ಪರ್ಧೆ ಆರಂಭವಾಯಿತು. ಕೊಡಲಿಯಿಂದ ಕೊಚ್ಚಿ ಹಿಡಿದ ಭಾಗಲ ಬಹಳ ಶಕ್ತಿಶಾಲಿಯಾಗಿದ್ದು, ಮಿತನ ಕೊಡಲಿಯ ಪೆಟ್ಟಿಗೆ ಸಿಗದಂತೆ ಮರದ ದಿಮ್ಮಿಯನ್ನು ಅವನಿಂದ ಬಹುದೂರಕ್ಕೆ ಎಳೆದೊಯ್ದನು. ಮಿತನು ಎಷ್ಟು ಹೆಣಗಾಡಿದರೂ, ಈಗಾಗಲೇ ಗೆದ್ದಿರುವ ಮದದಿಂದ ಮಿತನನ್ನು ಛೇಡಿಸುವಂತೆ ಆ ಮರದ ದಿಮ್ಮಿಯನ್ನು ಎತ್ತೆತ್ತಲೋ ಒಯ್ಯುತ್ತಾ ಗಹಗಹಿಸಿ ನಗುತ್ತಿದ್ದನು. ಅಲ್ಲಿ ನೆರೆದಿರುವವರೆಲ್ಲರೂ ಜೋರಾಗಿ ನಗುತ್ತಾ ಮಿತನಿಗೆ ಅಪಹಾಸ್ಯ ಮಾಡುತ್ತಿದ್ದರು. ಭಲೇ ಭಲೇ ಎಂದು ಕೂಗುತ್ತಾ ಭಾಗಲನನ್ನು ಹುರಿದುಂಬಿಸುತ್ತಿದ್ದರು. 'ಭಾಗಲ, ಭಾಗಲ.' ಎಂದು ಮುಗಿಲು ಮುಟ್ಟುವಂತೆ ಘೋಷಿಸುತ್ತಿದ್ದರು. ಹೆಗಲ

ಮೇಲೆ ಕೊಡಲಿಯನ್ನಿಟ್ಟುಕೊಂಡಿದ್ದ ಢುಂಢಿ ಮಿತನಿಗೆ ತಂತ್ರಗಳನ್ನು ಹೇಳಿಕೊಡಲು ಹೆಣಗಾಡುತ್ತಿದ್ದ. ಕೆಲವೊಮ್ಮೆ ನುಗ್ಗಿ ಹೋಗುವಷ್ಟು ಅವನಿಗೆ ಪ್ರಚೋದನೆಯಾಗುತ್ತಿತ್ತು. ಆದರೆ, ಕಾವಲು ಭಟರು ಅವನನ್ನು ಹಾಗೆ ಹೋಗದಿರುವಂತೆ ತಡೆಯುತ್ತಿದ್ದರು.

ಒಂದು ಸಲ ಮಿತ ತನ್ನ ಕೊಡಲಿಯಿಂದ ಮರದ ದಿಮ್ಮಿಗೆ ಹೊಡೆದು, ಅದೇ ಬಿಗಿತದಲ್ಲಿ ಕೊರಡನ್ನು ಭಾಗಲನ ಸಮೇತ ಎಳೆಯತೊಡಗಿದ. ಮಿತನ ಶಕ್ತಿ ಪ್ರದರ್ಶನವಾಗತೊಡಗಿದಾಗ ಜನ ಮತ್ತೆ ಜೋರಾಗಿ ಕೂಗತೊಡಗಿದರು. ಅವನೊಮ್ಮೆ ರಭಸವಾಗಿ ಎಳೆದು ಭಾಗಲನನ್ನು ತನ್ನ ಎಡ ಭುಜದಿಂದ ಪಕ್ಕಕ್ಕೆ ಬೀಳುವಂತೆ ತಳ್ಳಿ ದಿಮ್ಮಿಗೆ ಜೋರಾಗಿ ಕೊಡಲಿಯೇಟು ಹಾಕಿದ. ಅದು ಇಬ್ಭಾಗವಾಗದಿದ್ದರೂ ಆಳವಾಗಿ ಸೀಳಿತು. ಪುಟಿದೆದ್ದು ಬಂದ ಭಾಗಲನೂ ಸೀಳಿರುವ ಇನ್ನೊಂದು ಭಾಗಕ್ಕೆ ತನ್ನ ಕೊಡಲಿಯಿಂದ ಹೊಡೆದ. ಸೀಳುವಿಕೆ ಇನ್ನಷ್ಟು ಆಳವಾಯಿತು. ಇಬ್ಬರೂ ಮರದ ದಿಮ್ಮಿಯನ್ನು ವಿರುದ್ಧ ದಿಕ್ಕುಗಳಿಗೆ ಎಳೆಯತೊಡಗಿದರು. ಹಾಗೆಯೇ ಎಳೆದಾಡುತ್ತಿದ್ದ ಸಂಘರ್ಷದಲ್ಲಿ ಭಾಗಲನ ಕೊಡಲಿ ದಿಮ್ಮಿಯಿಂದ ಬಿಡಿಸಿಕೊಂಡು ಅವನು ಹಿಂದಕ್ಕೆ ಬಿದ್ದ. ಆದರೆ ಕೊಡಲಿಯ ಹಿಡಿತವನ್ನು ಬಿಟ್ಟಿರಲಿಲ್ಲ. ಅವನು ಮತ್ತೆ ಎದ್ದು ಬರುವಷ್ಟರಲ್ಲಿ ಮಿತ ದಿಮ್ಮಿಯನ್ನು ಇಬ್ಭಾಗವಾಗಿ ಸೀಳಿದ್ದ. ಸ್ಪರ್ಧೆಯ ನಿಯಮದಂತೆ ಈಗ ಮಿತ ಯಾವ ದಿಮ್ಮಿಗೆ ಕೊಡಲಿ ಪೆಟ್ಟು ಹಾಕುತ್ತಾನೆಯೋ ಅದೇ ದಿಮ್ಮಿಗೆ ಭಾಗಲನೂ ಪೆಟ್ಟನ್ನು ಹಾಕಬೇಕು. ಅದರಂತೆ ಮಿತ ದಿಮ್ಮಿಗೆ ಪೆಟ್ಟನ್ನು ಹಾಕಿದ ಕೂಡಲೇ ಭಾಗಲ ಪೆಟ್ಟನ್ನು ಹಾಕಲು ಹೋದ. ಆದರೆ ಮಿತ ಅವನ ಪೆಟ್ಟಿಗೆ ಸಿಗದಂತೆ ಕೊರಡನ್ನು ದೂರಕ್ಕೆ ಎಳೆದುಕೊಂಡು ಅವನಿಗೆ ಆಟವಾಡಿಸತೊಡಗಿದ. ಈಗಾಗಲೇ ಆಯಾಸದಿಂದ ಬಳಲಿದ್ದ ಭಾಗಲ ಇನ್ನೂ ಹೋರಾಡಲು ಸಿದ್ಧವಿರಲಿಲ್ಲ. ಆದರೆ, ಸೋಲಲು ಖಂಡಿತ ಸಿದ್ಧವಿರಲಿಲ್ಲ. ಭಾಗಲ ದಿಮ್ಮಿಗೆ ಹೊಡೆಯಲು ಹೋದಂತೆಯೇ ಹೋಗಿ ಮಿತನ ಬೆನ್ನಿನ ಬಲಭಾಗಕ್ಕೆ ಕೊಡಲಿಯೇಟು ಹಾಕಿದ. ಜೋರಾಗಿ ಕೂಗುತ್ತಾ ಮಿತ ಕೊಡಲಿಯನ್ನು ಬಿಟ್ಟು ಕೆಳಕ್ಕೆ ಬಿದ್ದ. ಢುಂಢಿ ಕ್ರೋಧದಿಂದ ಕ್ರೀಡಾಂಗಣಕ್ಕೆ ನುಗ್ಗಿದ. ಆದರೆ, ಅವನ ಹಿಂದೆಯೇ ನುಗ್ಗಿದ ಭಟರು ಅವನನ್ನು ಭಾಗಲನ ಮೇಲೆ ಧಾಳಿ ಮಾಡದಂತೆ ಹಿಡಿದು ತಡೆದರು. ವಿತೃಪನ ಮಕ್ಕಳು ಸಮಪ ಮತ್ತು ಮನಪರಿಬ್ಬರೂ, “ಅವಘಡ, ಆಕಸ್ಮಿಕ....” ಎಂದು ಕೂಗುತ್ತಾ ಮಧ್ಯೆ ಪ್ರವೇಶಿಸಿದರು. ಭಾಗಲನು ಕೊಡಲಿಯನ್ನು ಬೀಸುವಾಗ ಮಿತನು ತನ್ನ ಅವಿವೇಕದಿಂದ ಅಡ್ಡ ಬಂದು ಈ ಅವಘಡಕ್ಕೆ ಕಾರಣನಾದನೆಂದು ಅವರು ಜೋರಾಗಿ ವಾದಿಸಿದರು.

ವಿಪರೀತ ರಕ್ತಸ್ರಾವದಿಂದ ಮಿತನು ಕುಸಿದಿದ್ದ.

ಕೈಂಕರ್ಯದ ಭಟರು ಅವನನ್ನು ಕೈ ಮಂಚವೊಂದರ ಮೇಲೆ ಮಲಗಿಸಿಕೊಂಡು ಕ್ರೀಡಾಂಗಣದಿಂದ ಹೊರಗೆ ತಂದರು.

ಢುಂಢಿ ಮಿತನ ಬಳಿಗೆ ಓಡಿದ. ಅಲ್ಲಿಗೆ ವದೀರಜ್ಜನೂ ಮತ್ತು ವಯನದ ಇತರರೂ ಧಾವಿಸಿ ಬಂದರು.

“ಶುಶ್ರೂಶೆಗಾಗಿ ಈ ಕೂಡಲೇ ಇವನನ್ನು ಇಲ್ಲಿಂದ ಕರೆದುಕೊಂಡು ಹೋಗಿ.” ಎಂದು ಹೇಳಿದ ಸಮಪ ಮತ್ತು ಮನಪರಿಬ್ಬರಿಬ್ಬರೂ ಆದಷ್ಟು ಬೇಗ ಅವನನ್ನು ಅಲ್ಲಿಂದ ಸಾಗಿಸುವ ಪ್ರಯತ್ನ ಮಾಡಿದರು.

ಢುಂಢಿಯು ಕ್ರೋಧದಿಂದ ಕೆಂಗಣ್ಣುಗಳಿಂದ ಸಮಪ ಮತ್ತು ಮನಪರತ್ತ ನುಗ್ಗಿದ.

“ತಡೆ ಘುಂಢಿ. ನಮ್ಮವರು ಜೀವಕ್ಕಾಗಿ ಹೋರಾಡುತ್ತಿರುವಾಗ, ಇನ್ನೊಬ್ಬರ ಜೀವವನ್ನು ತೆಗೆಯುವ ಆವೇಶ ನಮಗೆ ನೆರವಾಗದು. ನಡೆ ಮೊದಲು ಮಿತನನ್ನು ಉಳಿಸಿಕೊಳ್ಳುವ ಪ್ರಯತ್ನ ಮಾಡೋಣ.” ಎಂದ ವದೀರಜ್ಜ ಮಿತನ ಸಾಗಿಸುವ ಪ್ರಯತ್ನ ಮಾಡಿದ. ವಯನದವರೆಲ್ಲರೂ ಭಟರ ಸಹಾಯದಿಂದ ರಕ್ತಸ್ರಾವದಿಂದ ಮೂರ್ಚಿತನಾಗಿದ್ದ ಮಿತನನ್ನು ಹೊತ್ತುಕೊಂಡು ತಮ್ಮ ತಂಗುದಾಣಕ್ಕೆ ನಡೆದರು.

ದನುವೂ ಅಲ್ಲಿ ಇಲ್ಲದ ಕಾರಣ ಅವರಿಗೆ ಇನ್ನೂ ಅವ್ಯವಸ್ಥೆಯಾಗಿತ್ತು. ವದೀರಜ್ಜ ಕೆಲವು ಗಿಡ ಮೂಲಿಕೆಗಳನ್ನು ತರಲು ಕಾಡಿಗೆ ಓಡಿದ. ಹೆಚ್ಚಿನ ರಕ್ತಸ್ರಾವ ಆಗದಂತೆ ತಡೆಯಿರಿ ಎಂದು ವದೀರಜ್ಜ ಆದೇಶಿಸಿದ್ದ. ಘುಂಢಿ ಮತ್ತು ಇತರರು ಮಿತನನ್ನು ಕೂಗಿ ಕರೆಯುತ್ತಾ ಎಚ್ಚರಿಸಲು ಯತ್ನಿಸುತ್ತಾ, ಸೀಳಿರುವ ಬೆನ್ನ ಭಾಗವನ್ನು ಒಟ್ಟಾಗಿಸಲು ಯತ್ನಿಸುತ್ತಾ, ರಕ್ತವು ಹೊರಗೆ ಹೆಚ್ಚು ಹರಿಯದಂತೆ ಪ್ರಯತ್ನಿಸುತ್ತಿದ್ದರು. ವದೀರಜ್ಜನು ಬರುವಷ್ಟರಲ್ಲಿ ಮಿತನು ಗತಪ್ರಾಣನಾಗಿದ್ದ.

“ವದೀರಜ್ಜ, ಈಗ ನಮ್ಮವನು ಜೀವಕ್ಕಾಗಿ ಹೋರಾಡುವುದನ್ನು ನಿಲ್ಲಿಸಿದ.” ಎಂದು ಮಿತನ ರಕ್ತದಿಂದ ತೇವವಾಗಿದ್ದ ಎರಡೂ ಕೈಗಳಿಂದ ತನ್ನ ಕೊಡಲಿಯನ್ನು ಹಿಡಿದ ಘುಂಢಿ.

“ನಿನ್ನ ಆಗ್ರಹ ನನ್ನ ಮಾತನ್ನು ಕೇಳಬೇಕು. ತಂತಾನೇ ಮುನ್ನಡೆಯಬಾರದು.” ಎಂದ ವದೀರಜ್ಜ ಘುಂಢಿಯನ್ನು ಹಿಂದಿಕ್ಕಿಕೊಂಡು ಕ್ರೀಡಾಂಗಣಕ್ಕೆ ನಡೆದ.

ಕ್ರೀಡಾಂಗಣದಲ್ಲಿ ಗಜ ಕಾಳಗವು ನಡೆಯುತ್ತಿತ್ತು. ರುದ್ರಗಣದ ಮಾತಂಗ ವಜ್ರನೆಂಬುವನು ಒಂದು ಆನೆಯನ್ನೇರಿದ್ದರೆ, ಗಜಗಣದವನೊಬ್ಬ ಮತ್ತೊಂದು ಆನೆಯನ್ನೇರಿದ್ದ. ವಿತೃಪ ಮತ್ತು ಅವನ ಮಕ್ಕಳು ರಾಜ ಪರಿವಾರದವರಿಗೆ ಕಟ್ಟಿದ್ದ ಅಟ್ಟದಲ್ಲಿ ಕುಳಿತುಕೊಂಡು ಗಜಕಾಳಗವನ್ನು ವೀಕ್ಷಿಸುತ್ತಾ ಆನಂದಿಸುತ್ತಿದ್ದರು.

ವದೀರ ವಿತೃಪನನ್ನು ನೋಡಿ ಮಾತಾಡಿಸಲು ಕಿರಿಯ ಅಧಿಕಾರಿಗಳಿಂದ ಹೇಳಿ ಕಳುಹಿಸಿದ. ಆದರೆ, ವಿತೃಪ ಇವರನ್ನು ನೋಡಲು ನಿರಾಕರಿಸಿದ.

“ಇಲ್ಲಿನ ನೀತಿ ನಿಯಮಗಳು ಎಷ್ಟು ಪಾಲನೆಯಾಗುತ್ತಿವೆ ನನಗೆ ತಿಳಿಯಬೇಕು.” ವದೀರಜ್ಜ ಕೂಗಿ ಹೇಳುತ್ತಿದ್ದ. “ನಾವು ರುದ್ರನ ನಂಬಿ ಈ ಕ್ಷೇತ್ರಕ್ಕೆ ಬಂದೆವು. ನನ್ನ ಜೊತೆ ನೀನು ಮಾತಾಡಲೇ ಬೇಕು. ಬಾ, ನಿನ್ನ ಅಟ್ಟಣಿಗೆ ಇಳಿದು ಬಾ. ನೀನು ಬಾರದೇ ಹೋದರೆ. ನಾನು ಮೇಲೆ ಬರುತ್ತೇನೆ. ಆಗ ನಿನ್ನ ಆರ್ಯ ಪ್ರತಿಷ್ಠೆ ಮಣ್ಣಾಗಿ ಹೋಗುತ್ತದೆ.”

ವದೀರಜ್ಜನು ಏನು ಹೇಳುತ್ತಿದ್ದಾನೆಂದು ವಿತೃಪನಿಗೆ ಕೇಳುತ್ತಿರಲಿಲ್ಲವಾದರೂ, ಅವನು ತಮ್ಮನ್ನು ಪ್ರತಿಭಟಿಸುತ್ತಿದ್ದಾನೆ ಎಂದು ಮಾತ್ರ ಚೆನ್ನಾಗಿ ತಿಳಿಯುತಿತ್ತು. ಒಮ್ಮೊಮ್ಮೆ ಕಾಡುವ ಪೀಡೆಯನ್ನು ನೋಡಿದಂತೆ ನೋಡಿ ಮತ್ತೆ ಗಜ ಕಾಳಗವನ್ನು ನೋಡುವುದರಲ್ಲಿ ತಲ್ಲೀನನಾದ. ಸಮಪ ಮತ್ತು ಮನಪರು ಆಗ್ರಹದಿಂದ ಅಟ್ಟಣಿಗೆಯ ತುದಿಯವರೆಗೂ ಬಂದು ಭಟರಿಗೆ ಇವರನ್ನು ಅತ್ತ ತಳ್ಳಿ ಎಂದು ಆದೇಶ ನೀಡಿ ಗಜಕಾಳಗವನ್ನು ವೀಕ್ಷಿಸಲು ಮುಂದಾದರು.

ಗಜಕಾಳಗವು ಬಹಳ ರೌದ್ರವಾಗಿದ್ದಲ್ಲದೇ ಕೌತುಕವೂ ಆಗಿತ್ತು. ಗಜಗಣದವರು ಮತ್ತು ರುದ್ರಗಣದ ಮಾತಂಗರು ಪಾರಂಪರಗತವಾದ ಶತ್ರುಗಳು. ಅವರಿಬ್ಬರಿಗೂ ನಡೆಯುವ ಹೋರಾಟದಲ್ಲಿ ಸೋಲು

ಮತ್ತು ಗೆಲುವು ಪ್ರತಿಷ್ಠೆಯ ಪ್ರಶ್ನೆಯಾಗಿತ್ತು. ಅದರಲ್ಲೂ ಗಜಗಣದವರ ಲಾಂಛನವೇ ಆನೆಯಾಗಿದ್ದು, “ಸೋತು ನಿಮ್ಮ ಸಂಕೇತವನ್ನು ಬದಲಿಸಿಕೊಳ್ಳಿ.” ಎಂದು ರುದ್ರನ ಗಣದವರು ಛೇಡಿಸುತ್ತಿದ್ದರು.

ಆನೆಗಳ ಮೇಲೆ ಕುಳಿತಿದ್ದ ಮಾವುತರು ತಮ್ಮ ತಮ್ಮ ಆನೆಗಳನ್ನು ಕೆರಳಿಸಿ ಹೋರಾಡಿಸುತ್ತಿದ್ದರು. ಆನೆಗಳೋ ಘೀಳಿಡುತ್ತಾ ಪರಸ್ಪರ ಮುಂಭಾಗದ ಹಣೆಗೆ ಗುದ್ದಿಕೊಳ್ಳುತ್ತಿದವು. ಆನೆಗಳ ದಂತಗಳು ಮುರಿದು ಬಿದ್ದವು. ಕೆಲವು ಸಲ ಸೊಂಡಿಲುಗಳಿಂದ ಬಳಸಿ ಬಲವಾಗಿ ಎಳೆಯುತ್ತಾ ರಣೋತ್ಸಾಹದಿಂದ ಘೀಳಿಡುತ್ತಿದ್ದವು. ಕೆಲವೊಮ್ಮೆ ಮುಂಗಾಲುಗಳನ್ನು ಮೇಲೆತ್ತಿ ಸೊಂಡಿಲಿನಿಂದ ಮತ್ತೊಂದು ಆನೆಯ ಮೇಲಿರುವ ಮಾವುತನ ಕೆಡವಲು ಯತ್ನಿಸುತ್ತಿದ್ದವು. ಆನೆಗಳ ಮುಖಭಾಗದಿಂದ ರಕ್ತ ಸೋರುತ್ತಿದ್ದವು. ಎರಡೂ ಆನೆಗಳಿಗೆ ಸುರಪಾನ ಮಾಡಿಸಿದ್ದು, ಚೆನ್ನಾಗಿ ಮದಿಸಿದ್ದವು. ಎರಡೂ ಆನೆಗಳ ಮಾವುತರು ತಮ್ಮ ಗೆಲುವನ್ನು ಮತ್ತೊಬ್ಬನ ಸಾವಿನಲ್ಲಿಯೇ ಕಾಣಬೇಕೆಂದು ನಿರ್ಧರಿಸಿದಂತೆ ಕಂಡಿತ್ತು.

ವದೀರಜ್ಜ ವಿತ್ರಪನ ಕೂಗಿ ಕರೆಯುತ್ತಿದ್ದ. “ಆರ್ಯರ ವ್ಯವಸ್ಥೆಯಲ್ಲಿ ನಾನು ಸಮಾನತೆ ಬಯಸುತ್ತಿಲ್ಲ. ಆದರೆ, ಇಗೋ, ನೀನು ನನ್ನಲ್ಲಿಗೆ ಬಂದು ನಿನ್ನದೇ ಆರ್ಯ ನೀತಿಯಿಂದ ನನಗೆ ಸಮಾಧಾನ ಹೇಳದಿದ್ದರೆ ನನ್ನ ಢುಂಢಿಯನ್ನು ನಿನ್ನಲ್ಲಿಗೆ ಕಳುಹಿಸುತ್ತೇನೆ.”

ಢುಂಢಿ ಯುದ್ಧೋನ್ಮತ್ತನಾಗಿದ್ದ.

ಸಮಪ ಮತ್ತು ಮನಪರು ಭಟರಿಗೆ ಕೂಗಿ ಹೇಳಿದರು. “ಈ ಕ್ರೀಡೆ ಮುಗಿಯುವವರೆಗೂ ಅವರಿಬ್ಬರನ್ನೂ ನೆಲಮಾಳಿಗೆಯ ಕತ್ತಲ ಕೋಣೆಗೆ ತಳ್ಳಿ.”

ವದೀರಜ್ಜ ಢುಂಢಿ ಕಡೆಗೆ ನೋಡಿದ. “ಇನ್ನೂ ನಿನ್ನ ಆಗ್ರಹ ಆವೇಶವನ್ನು ತಡೆದು ನಾನು ಹೇಡಿಯಾಗಲಾರೆ. ಹೋಗು. ನಿನ್ನ ಹೊಸ ಕೊಡಲಿಗೆ ಯಾರ ರಕ್ತದ ರುಚಿ ಬೇಕೋ ಅದೇ ಪಡೆದುಕೊಳ್ಳಲಿ.” ಎಂದು ಗರ್ಜಿಸಿದ.

ಇಷ್ಟು ಸಾಕಾಗಿತ್ತು ಢುಂಢಿಗೆ. ಆರ್ಭಟಿಸುತ್ತಾ ತನ್ನ ಕೊಡಲಿಯನ್ನು ಹಿಡಿದು ನುಗ್ಗಿದ ರಭಸಕ್ಕೇ ಭಟರು ಅಂಜಿದರು. ಆದರೂ ಅವನನ್ನು ತಡೆಯಲು ಯತ್ನಿಸಿದಾಗ ಅವರನ್ನು ಒದೆಯುತ್ತಾ, ತಳ್ಳುತ್ತಾ ಅರಣ್ಯದಲ್ಲಿ ಬಂಡೆಯಿಂದ ಬಂಡೆಗೆ ಹಾರಿ ಹೋಗುವಂತೆ ನೆಗೆಯುತ್ತಾ ಅಟ್ಟಣಿಗೆ ಏರಿದ. ಹೆದರಿದ ಸಮಪ ಮತ್ತು ಮನಪರು ತಮ್ಮ ಖಡ್ಗಗಳನ್ನು ಹಿರಿದರು. ಅವರಿಬ್ಬರ ಶಾಸ್ತ್ರೋಕ್ತವಾಗಿ, ಕ್ರಮವಾಗಿ ಕಲಿತಿದ್ದ ವರಸೆಗಳು ಢುಂಢಿಯ ರಾಕ್ಷಸಾಘಾತಕ್ಕೆ ಸಮವಾಗಲಿಲ್ಲ. ಸಮಪ ಮತ್ತು ಮನಪರೊಂದಿಗೆ ಇತರರೂ ಢುಂಢಿಯ ಮೇಲೆ ಬಿದ್ದರು. ಆದರೆ, ಢುಂಢಿಯ ಸಂಪೂರ್ಣ ಗಮನ ಅವರಿಬ್ಬರ ಕಡೆಗೇ ನೆಟ್ಟಿತ್ತು. ಇತರರನ್ನು ನಿವಾರಿಸಿಕೊಂಡು ಢುಂಢಿ ಅವರ ಬೆನ್ನು ಬಿಡಲಿಲ್ಲ. ವಿತ್ರಪನ ಕಾವಲು ಭಟರು ಬಾಣಗಳಿಂದ ಗುರಿಯಿಟ್ಟರು. ಆದರೆ, ಢುಂಢಿಯು ಸಮಪ ಮತ್ತು ಮನಪರ ದಿಕ್ಕಿನಲ್ಲಿಯೇ ಇರುವುದರಿಂದ ಗುರಿಕಾರರಿಗೆ ಕಷ್ಟವಾಯಿತು. ವಿತ್ರಪನ ಮಕ್ಕಳಿಬ್ಬರೂ ಅಟ್ಟಣಿಗೆಯಿಂದ ಕೆಳಕ್ಕೆ ಧುಮುಕಿ ಗಜ ಕಾಳಗ ನಡೆಯುತ್ತಿರುವ ಬಯಲಿನ ಕಡೆಗೆ ಓಡಿದರು. ಬಾಣಗಳನ್ನು ಗುರಿಯಿಡುತ್ತಿರುವವರಿಗೆ ಅನುಕೂಲವಾಗಲೆಂದು ಅವರ ಉದ್ದೇಶ. ಢುಂಢಿಯ ಎಡತೋಳಿಗೆ ಬಾಣವೊಂದು ಬಲವಾಗಿ ನಾಟಿತ್ತು. ಆದರೆ, ಅದರ ನೋವು ಆವೇಶದಿಂದ ಕೂಡಿದ್ದ ಅವನಿಗೆ ಯಾವುದೇ ರೀತಿಯಲ್ಲಿ ಗಮನಕ್ಕೆ ಬರುವಂತಿರಲಿಲ್ಲ. ಸಮಪ ಮತ್ತು ಮನಪರು ಕಾದಾಡುತ್ತಿದ್ದ ಗಜಗಳ ಮತ್ತೊಂದು ಬದಿಗೆ ಓಡಿ ಢುಂಢಿಯಿಂದ ತಮ್ಮನ್ನು ರಕ್ಷಿಸಿಕೊಳ್ಳಲು ಯತ್ನಿಸಿದರೆ, ಮದಿಸಿದ್ದ ಆ ಗಜಗಳ ನಡುವೆಯೇ ಢುಂಢಿ

ನುಗ್ಗಿದ್ದ. ಎಲ್ಲರೂ ನೋಡುನೋಡುತ್ತಿದ್ದಂತೆ, ಅವನು ಸಮಪ ಮತ್ತು ಮನಪರನ್ನು ಹೋರಾಡುತ್ತಿರುವಾಗಲೇ ಕೊಂದು ಹಾಕಿದ. ಬಂಧಿಸಲು ಅಥವಾ ಕೊಲ್ಲಲು ನುಗ್ಗಿದ ಭಟರೂ ಪ್ರಾಣ ಕಳೆದುಕೊಳ್ಳಬೇಕಾಯ್ತು. ವಯನದ ಮತ್ತು ವಿತೃಪ ಹಾಗೂ ಇತರ ಆರ್ಯರ ಬಗ್ಗೆ ದ್ವೇಷವಿದ್ದ ಇತರ ಅರಣ್ಯಕರು ತಮ್ಮ ತಮ್ಮ ಆಯುಧಗಳನ್ನು ಹಿಡಿದು ಆರ್ಯರ ಮೇಲೆ ಬಿದ್ದರು. ಕ್ರೀಡಾಂಗಣ ರಣಾಂಗಣವಾಯಿತು.

*

ಶಂಬರ ಥರ ಥರ ನಡುಗಿದ. ಯಾಜ್ಞಿಕ ನಿಡಿದಾದ ಉಸಿರನ್ನು ಬಿಟ್ಟು ಬೆವರೊರೆಸಿಕೊಂಡ. ನಿಧಾನವಾಗಿ ಅಲ್ಲಿಂದ ನಡೆದು ಪಕ್ಕದಲ್ಲಿಯೇ ಹರಿಯುತ್ತಿದ್ದ ಹೊಳೆಯಲ್ಲಿ ನೀರು ಕುಡಿದು ಸಾವರಿಸಿಕೊಳ್ಳಲು ನಡೆದ.

ಯದು ಶಂಬರನಿಗೆ, "ನಡೆ ಈ ಸ್ಥಳ ಬಿಟ್ಟು ಹೋಗೋಣ." ಎಂದು ಕೈಕೊಟ್ಟು ಎಬ್ಬಿಸಿದ.

## ಅಧ್ಯಾಯ: 12 ನಮ್ಮವರು

"ಒಳ್ಳೆಯವನು ಎಂದರೆ ತಾನಾಗೇ ಆದವನು. ಕೆಟ್ಟವನು ಎಂದರೆ ರೂಪುಗೊಂಡವನು." ಎಂದ ಯಾಜ್ಞಿಕ.

ಈ ಘುಂಥಿ ಒಳ್ಳೆಯವನೊ ಅಥವಾ ಕೆಟ್ಟವನೋ ಎಂಬುದು ಶಂಬರನ ಪ್ರಶ್ನೆಯಾಗಿತ್ತು.

ಇಬ್ಬರೂ ಕೆಲಕಾಲ ಹಾಗೆಯೇ ಕುಳಿತಿದ್ದರು. ಅವರನ್ನು ಅವರಿದ್ದಲ್ಲಿಯೇ ಬಿಟ್ಟು ಯದುವು ಗಣಪತಿಯಿರುವ ಮಂಟಪಕ್ಕೆ ಹೋಗಿದ್ದ.

ಸನಿಹದ ಎತ್ತರವಾದ ಬಂಡೆಯ ಮೇಲೆ ಕೆಲವರು ಕುಕ್ಕರಗಾಲಿನಲ್ಲಿ ಬಹಳ ಹೊತ್ತಿನಿಂದ ಅಲುಗಾಡದೆಯೇ ಕುಳಿತಿದ್ದರು. ಅವರನ್ನು ಗಮನಿಸಿದ ಶಂಬರ, "ಅವರು ಆ ರೀತಿ ಅಲುಗಾಡದೇ ಬಹಳ ಹೊತ್ತಿನಿಂದ ಕುಳಿತಿರುವುದನ್ನು ನೋಡಿದರೆ ಆಶ್ಚರ್ಯವಾಗುತ್ತದೆ." ಎಂದ.

"ಅಭ್ಯಾಸ. ಅವರು ಶಬರರು. ಪ್ರಾಣಿಗಳು ಬಂದು ನೀರು ಕುಡಿಯುವ ಹೊಂಡಗಳ ಬಳಿ ಹಾಗೆ ಬಂದು ಕುಳಿತುಕೊಳ್ಳುತ್ತಾರೆ. ಯಾವುದೇ ಚಲನವಲನಗಳಿರುವುದಿಲ್ಲ. ಇವರ ನಿಶ್ಚೇತನದಿಂದಾಗಿ ಪ್ರಾಣಿಗಳು ಏನೂ ಸಂದೇಹಪಡದೇ ನೀರು ಕುಡಿಯಲು ಬರುತ್ತವೆ. ಆಗ ಇವರು ಬಾಣಗಳನ್ನು ಪ್ರಯೋಗಿಸಿ ತಮಗೆ ಬೇಕಾದ ಬೇಟೆಯನ್ನು ಹಿಡಿಯುತ್ತಾರೆ." ಎಂದ ಯಾಜ್ಞಿಕ.

ಶಂಬರ ಮತ್ತು ಯಾಜ್ಞಿಕರು ಮೆಲ್ಲನೆ ಆ ಗುಂಪಿನ ಕಡೆಗೆ ನಡೆದರು. "ನೀವು ಯಾರು? ಎಲ್ಲಿಂದ ಬಂದಿರುವಿರಿ?" ಯಾಜ್ಞಿಕ ಕೇಳಿದ.

"ನಾವು ಶತದ್ರುವಿನಿಂದ ಬಂದಿದ್ದೇವೆ." ಅವರಲ್ಲೊಬ್ಬ ಹೇಳಿದ. "ನಾವು ಪಶುಪತಿ ಮತ್ತು ಗಣಪತಿಯ ಆರಾಧಕರು. ವಿನಾಯಕರು ನಮಗೆ ತೊಂದರೆ ಕೊಡುವವರಿಗೆ ತೊಂದರೆ ಕೊಡುತ್ತಾರೆ. ಘುಂಥಿ ಗಣಪತಿಯು ಪಕ್ಷಿ ಆಕಾಶದಲ್ಲಿ ಹಾರಿಕೊಂಡು ಹೋಗುವುದನ್ನು ನೋಡಲು ಕಾದು ಕುಳಿತಿದ್ದೇವೆ. ಹಾಗೆ

ನಾವು ನೋಡಿದರೆ, ನಮ್ಮ ಈಗಿನ ಮತ್ತು ಮುಂದಿನ ಮಕ್ಕಳಿಗೆಲ್ಲಾ ಯಾರಿಂದಲೂ ಏನೂ ಕೇಡು ಬರದು." ಅಲ್ಲಿ ಕುಳಿತಿರುವ ಶಬರರೆಲ್ಲರ ವಿವಿಧ ಕಡೆಗಳಲ್ಲಿ ನೆಟ್ಟಿತ್ತು.

ಅವರಿಗಿಂತ ಸ್ವಲ್ಪ ದೂರದಲ್ಲಿ ಕುಳಿತಿದ್ದ ಒಬ್ಬ ಬ್ರಾಹ್ಮಣ ಯಾಜ್ಞಿಕ ಮತ್ತು ಶಬರರ ನಡುವೆ ನಡೆಯುತ್ತಿದ್ದ ಸಂಭಾಷಣೆಯನ್ನು ಕೇಳಿ ಅಲ್ಲಿಗೆ ಬಂದ.

"ನಿನಗೆ ಶುಭವಾಗಲಿ ಹೇ ಬ್ರಾಹ್ಮಣ. ನಾನು ಆರುಣೇಯ ಗೋತ್ರದ ರಸದೇವ."

"ಶುಭಮಸ್ತು, ಶುಭಮಸ್ತು ಹೇ ರಸದೇವ. ನಾನು ಯಾಜ್ಞಿಕ." ಅಷ್ಟೇ ಹೇಳಿದ ಯಾಜ್ಞಿಕ ತನ್ನ ಗೋತ್ರವನ್ನು ಹೇಳಲಿಲ್ಲ.

"ಈ ಕ್ಷತ್ರಿಯರಾರೋ ತಿಳಿಯಲಿಲ್ಲ." ಎಂದ ರಸದೇವ ಶಂಬರನನ್ನು ನೋಡುತ್ತ.

ಶಂಬರ ಬರಿದೇ ವಂದಿಸಿದ.

"ಇವರು ಕ್ಷತ್ರಿಯರಲ್ಲ ಗೋಮತ್."

ಇವರಿಗೆ ಪರಿಚಯವನ್ನು ಹೇಳಿಕೊಳ್ಳುವುದರಲ್ಲಿ ಹೆಚ್ಚು ಆಸಕ್ತಿಯಿಲ್ಲ ಎಂದೆನ್ನಿಸಿ ರಸದೇವ ಮಾತು ಬದಲಿಸಲು, "ಬನ್ನಿ, ಹೊಳೆಯ ಕಡೆಗೆ ಹೋಗಿ ಬರೋಣ." ಎಂದ.

"ನಡೆಯಿರಿ." ಎಂದು ಯಾಜ್ಞಿಕ ಮತ್ತು ಶಂಬರರು ರಸದೇವನ ಜೊತೆಗೆ ಹೆಜ್ಜೆ ಹಾಕಿದರು. ಇವರು ನಡೆದ ದಿಕ್ಕಿನಲ್ಲಿರುವ ಹೊಳೆಯ ದಂಡೆಯ ಹತ್ತಿರ ಹೆಚ್ಚು ಜನರಿರಲಿಲ್ಲ.

"ಅಲ್ಲಿ ನೋಡಿ." ರಸದೇವ ಹಾರಿ ಬಂದು ನೆಲದ ಮೇಲೆ ಕುಳಿತುಕೊಳ್ಳುತ್ತಿದ್ದ ಪಾರಿವಾಳಗಳನ್ನು ತೋರಿಸಿದ.

"ಆ ಶಬರರು ಹೇಳಿದ ಪಕ್ಷಿಯು ಇದೇ ಆಗಿರಬಹುದೇ?" ಅವನ ಮಾತಿನಲ್ಲಿ ವಿಡಂಬನೆಯ ಎಳೆಯಿತ್ತು.

ಯಾಜ್ಞಿಕನಿಗೆ ಮೊದಲು ಅರ್ಥವಾಗಲಿಲ್ಲ. ನಂತರ ಅರ್ಥವಾದಂತೆ ಜೋರಾಗಿ ನಕ್ಕನು. ಶಂಬರನಿಗೆ ಏನೂ ಅರ್ಥವಾಗದೇ ಯಾಜ್ಞಿಕನ ಮುಖ ನೋಡಿದ.

"ಪಾರಿವಾಳಗಳು ಕೆಡುಕಿನ ಶಕುನಗಳು. ಅವು ನಿರ್ಋತಿಯ ಪ್ರತಿನಿಧಿಗಳು."

"ನಿರ್ಋತಿ ಯಾರು?"

"ನಿರ್ಋತಿ ಒಂದು ಭಯಂಕರವಾದ ಭೂತದೇವತೆ. ಅದು ತನ್ನ ವಾಹಕರಾದ ಪಾರಿವಾಳಗಳನ್ನು ಕೇಡು ಮಾಡಲು ಕಳುಹಿಸುತ್ತದೆ." ಯಾಜ್ಞಿಕ ಹೇಳಿದ.

ರಸದೇವ ಹೇಳಿದ್ದು ಶಂಬರನಿಗೆ ಈಗ ಅರ್ಥವಾಯಿತು. ಆದರೆ, ಸಾವನ್ನು ಎದುರು ನೋಡುತ್ತಿರುವ ಢುಂಢಿಯಂತಹ ಗಣನಾಯಕನ ಕುರಿತು ಲಘುವಾಗಿ ರಸದೇವನು ಮಾತಾಡಿದ್ದು ಅವನಿಗೆ ಇಷ್ಟವಾಗಲಿಲ್ಲ. ಅದನ್ನು ಸೂಚಿಸಲು ತನ್ನ ಹುಬ್ಬುಗಳನ್ನು ಗಂಟಿಕ್ಕಿ ಮತ್ತೇನೂ ಹೇಳದೇ ಅಲ್ಲಿಯೇ ನಿಂತ.

"ಬನ್ನಿ, ಹೊಳೆಗೆ ಹೋಗೋಣ." ಎಂದ ರಸದೇವ.

“ತಾವು ದಯಮಾಡಿಸಿ. ನಾನು ಇಲ್ಲಿಯೇ ಇರುತ್ತೇನೆ.” ಎಂದ ಶಂಬರ.

ಅವನ ಮಾತಿನಲ್ಲಿನ ಲಘುವಾದ ಬಿರುಸನ್ನು ಕಂಡು ಯಾಜ್ಞಿಕ ಮತ್ತೆ ಅವನನ್ನು ಕರೆಯದೇ, “ನೀವು ಬನ್ನಿ ರಸದೇವ, ಅವರು ಏಕಾಂತ ಪ್ರಿಯರು. ನಾವು ಹೋಗಿ ಬರೋಣ.” ಎಂದು ರಸದೇವನ ಭುಜದ ಮೇಲೆ ಕೈ ಹಾಕಿ ಒತ್ತಾಯಪೂರ್ವಕವಾಗಿ ಕರೆದುಕೊಂಡು ಹೋದ.

ಶಂಬರ ಅಲ್ಲಿಯೇ ನಿಂತುಕೊಂಡು ಅಲ್ಲಿಯೇ ಹಾರಾಡುತ್ತಿದ್ದ ಪಾರಿವಾಳಗಳನ್ನು ನೋಡಿದ. ಪಾರಿವಾಳಗಳು ಗಣಪತಿಯನ್ನು ಮಲಗಿಸಿರುವ ಮಂಟಪದ ಮೇಲೆ ಹಾಗೂ ಸುತ್ತ ಮುತ್ತ ಹಾರಾಡುತ್ತಿದ್ದದ್ದು ನೆನಪಿಗೆ ಬಂತು. ಶಂಬರ ಮೆಲ್ಲನೆ ಅಲ್ಲಿಯೇ ಕುಳಿತ ಅಲ್ಲಿ ಬಂಡೆಯ ಮೇಲೆ ಕುಳಿತಿದ್ದ ಶಬರರಂತೆ. ಹಾರಾಡುತ್ತಿದ್ದ ಪಾರಿವಾಳಗಳು ಮೆಲ್ಲಮೆಲ್ಲನೆ ಹಾರುತ್ತಾ, ತಮ್ಮ ಆಹಾರವನ್ನು ಹುಡುಕುತ್ತಾ ಶಂಬರನ ತೀರಾ ಸನಿಹಕ್ಕೆ ಬಂದವು. ಅವುಗಳ ಕೊಕ್ಕುಗಳನ್ನು, ಕೆಂಪು ಕಣ್ಣುಗಳನ್ನು, ಉರುಟಾದ ಪಾದಗಳನ್ನು, ಅವುಗಳ ಉಗುರುಗಳನ್ನು ಗಮನಿಸುತ್ತಾ ಅವುಗಳು ಮಾಡುತ್ತಿದ್ದ ಸದ್ದನ್ನು ಕೇಳುತ್ತಾ ಶಂಬರ ಹಿಂದಕ್ಕೆ ಉರುಳಿಕೊಂಡ. ಅವನು ಹಾಗೆ ಬಿದ್ದುಕೊಂಡ ಕೂಡಲೇ ಅವನಿಗೆ ಸಮೀಪವಾಗಿದ್ದ ಪಾರಿವಾಳಗಳು ಅವನ ಮುಖದ ಮೇಲೆಯೇ ಹಾರಿ ಹೋದವು.

*

ಕೋಟೆಯ ಮೇಲುಭಾಗದಲ್ಲಿ ತಂಡ ತಂಡವಾಗಿ ಹಾರಾಡುತ್ತಿದ್ದ ಪಾರಿವಾಳಗಳನ್ನು ತೋರಿಸಿದ ವಿತೃಪ ರೋಧಿಸುತ್ತಾ ಚೀರುತ್ತಾ ಹೇಳಿದ.

“ನೋಡಿ, ನೋಡಿ, ಕೆಡುಕಿನ ಸಂಕೇತಗಳು ಬರಿಯ ಪಕ್ಷಿಗಳಾಗಿ ಬರಲಿಲ್ಲ. ಮನುಷ್ಯ ರೂಪದಲ್ಲಿಯೇ ಕೇಡುಗಳಾಗಿ ಬಂದವು. ನನ್ನ ವಂಶೋದ್ಧಾರಕರನ್ನು, ನನ್ನ ಪ್ರತಿಷ್ಠೆಯನ್ನು, ನನ್ನ ಘನತೆಯನ್ನು ಸರ್ವನಾಶ ಮಾಡಲು ಅರಣ್ಯಕರ ರೂಪದಲ್ಲಿ ಬಂದವು. ಅವರು ಸರ್ವನಾಶವಾಗದೇನೇ ಈ ಕ್ಷತ್ರಿಯರಿಗೆ ಮರಳಿ ಘನತೆ ಲಭಿಸದು. ಆರ್ಯರ ಪ್ರತಿಷ್ಠೆಯು ಮರುಪ್ರತಿಷ್ಠಾಪನೆಯಾಗದು. ಹೋಗಿ, ಅವರನ್ನು ಆಮೂಲಾಗ್ರವಾಗಿ ಸುಟ್ಟು ಬೂದಿ ಮಾಡಿ.”

ಅವನ ಅಪ್ಪಣೆಯನ್ನು ಶಿರದ ಮೇಲೆ ಹೊತ್ತ ಕ್ಷತ್ರಿಯ ಭಟರು ತಮ್ಮ ತಮ್ಮ ಆಯುಧಗಳನ್ನು ಹೊತ್ತು ವಯನರು ನೆಲೆಸಿದ್ದ ತಾವಿಗೆ ಬಂದರು.

ವಯನರು ಮತ್ತು ಇತರ ಅರಣ್ಯಕರು ಇದನ್ನು ನಿರೀಕ್ಷಿಸಿಯೇ ಇದ್ದು ಅವರು ಬಂದ ಕೂಡಲೇ ಎರಗಿದರು. ಬಂದ ಭಟರನ್ನು ಢುಂಢಿಯ ನಾಯಕತ್ವದಲ್ಲಿ ಸದೆ ಬಡೆದರು. ಉರುಟಾದ ಅರಣ್ಯಕರ ಆಯುಧಗಳ ಮುಂದೆ, ಒರಟಾದ ಅವರ ವರಸೆಗಳ ಘಾತಕ್ಕೆ ವೀರ ಕ್ಷತ್ರಿಯರು ಬಳಲಿದರು.

ತನ್ನ ಮಕ್ಕಳ ಅಂತಿಮ ಸಂಸ್ಕಾರಕ್ಕೆ ಎಲ್ಲಾ ಸಿದ್ಧತೆಗಳನ್ನು ಮಾಡುತ್ತಿದ್ದ ವಿತೃಪನ ಕಂಡು ಸೇನಾಧಿಪತಿ ಹೇಳಿದ.

“ಅವರನ್ನು ಎದುರಿಸಲು ನಮ್ಮ ಸೇನೆ ಸಾಲುತ್ತಿಲ್ಲ.”

“ಅಯ್ಯೋ, ಈ ಸಂಸ್ಕಾರವನ್ನು ನಿಲ್ಲಿಸಿ.” ಎಂದು ಕೂಗಿಟ್ಟ ವಿತೃಪ ಹೇಳಿದ. “ಅವರ ನಾಶವಾಗದ ಹೊರತು ನನ್ನ ಮಕ್ಕಳ ಆತ್ಮಕ್ಕೆ ಶಾಂತಿಯುಂಟಾಗುವುದೇ? ಯಾವ ವೈದಿಕ ವಿಧಿಗಳೂ ಏನೂ

ಮಾಡಲಾರವು. ನಡೆ." ಸಂಸ್ಕಾರ ಕಾರ್ಯವನ್ನು ಅರ್ಧಕ್ಕೇ ನಿಲ್ಲಿಸಿದ ವಿತೃಪ ಕುದುರೆಯನ್ನೇರಿ ಗಜಗಣದವರು ತಂಗಿದ್ದ ಎಡೆಗೆ ಬಂದ.

ಗಾಯಗೊಂಡಿದ್ದ ಗಜಗಣದ ಮಾವುತನನ್ನು ಗಿಡಮೂಲಿಕೆಗಳ ರಸದಿಂದ ಉಪಚರಿಸುತ್ತಿರುವುದನ್ನು ತನ್ನ ತೀಕ್ಷ್ಣ ಗಮನದಲ್ಲಿ ವೀಕ್ಷಿಸುತ್ತಿದ್ದ ಮುಖಂಡ ಸೋಮದಂತನ ಮುಂದೆ ಬಿರುಗಾಳಿಯಂತೆ ಬಂದ ವಿತೃಪ.

"ಹೇ ಸೋಮದಂತ, ಗಜಗಣ ತಿಲಕ. ನಿನ್ನ ಎದುರೇ ಒಂದು ಮಹಾ ಅನ್ಯಾಯ ನಡೆದು ಹೋದರೂ ನಿನ್ನ ಪಾಡಿಗೆ ನೀನು ನಿನ್ನ ಬಿಡಾರದಲ್ಲಿದ್ದೀಯ! ಇದು ನಿನಗೆ ಶೋಭಿಸುವುದೇ? ಯಾರಾದರೂ ಮರಣದ ಕದವನ್ನು ತಟ್ಟುತ್ತಿದ್ದರೂ ನಿನ್ನ ತಂಡದ ಬೇಷಜರು ತಮ್ಮ ಅಮೂಲ್ಯ ಗಿಡಮೂಲಿಕೆಗಳ ವಿದ್ಯೆಯಿಂದ ಅವರನ್ನು ಮರಳಿ ನವಯೋನಿಜರನ್ನಾಗಿ ಮಾಡಿ ಹೊಸ ಜನ್ಮ ಕೊಡುವರು. ಸತ್ತೇಹೋಗಲಿರುವ ಮಹಾಗಜಗಳನ್ನೂ ತಮ್ಮ ಸಂಜೀವಿನಿ ಮೂಲಿಕೆಗಳಿಂದ ಮೇಲೆಬ್ಬಿಸುವವರು. ಆದರೆ, ನನ್ನ ಮಕ್ಕಳು, ನನ್ನ ವಂಶೋದ್ಧಾರದ ಕುಡಿಗಳು ಮರಣಕ್ಕೆ ಕದವೊಂದಿದೆ ಎಂದು ತಿಳಿಯುವ ಮುನ್ನವೇ, ಪಾಪಿಗಳು ಅವರನ್ನು ಸಾವಿನಗ್ನಿಯಲ್ಲಿ ಎಸೆದು ಧಗ್ಧರನ್ನಾಗಿಸಿದರು. ಅವರನ್ನು ಈಗ ಮತ್ತೆ ಜೀವಂತವಾಗಿಸೆಂದು ನಾನು ನಿನ್ನ ಕೇಳಬರಲಿಲ್ಲ. ನೋಡು, ನೀನು ಗಜಕಾಳಗದಲ್ಲಿ ಗೆಲ್ಲಲೇ ಬೇಕಾದ ಪ್ರತಿಷ್ಠೆಯು ಪ್ರೇತಾತ್ಮವಾಗಿ ನನ್ನ ಮಕ್ಕಳ ಆತ್ಮದೊಂದಿಗೇ ಕರಗಿ ಹೋಗುತ್ತಿದೆ. ಬೇಡ, ಬಾ ಸೋಮದಂತ, ನನ್ನ ಮಕ್ಕಳ ಆತ್ಮಕ್ಕಂತೂ ನಿನಗೆ ಜೀವವೊದಗಿಸಿ ಸಂಜಾತರನ್ನಾಗಿ ಮಾಡಲು ಸಾಧ್ಯವಿಲ್ಲ. ಆದರೆ, ನಿನ್ನ ಗಜಕಾಳಗದ ಪ್ರತಿಷ್ಠೆಯು ಮರುಪ್ರತಿಷ್ಠಾಪನೆಯಾಗಲು ನೀನು ಈಗ ನಿನ್ನ ಅಂಕುಶವನ್ನು ಎತ್ತಬೇಕು. ಢುಂಢಿ, ವದೀರ ಮತ್ತು ಆ ವಯನದವರ ಕೊಂದು, ನೀನು ಮಾಡುವ ರಕ್ತತರ್ಪಣದಲ್ಲಿ ನಿನ್ನ ಗೆಲುವಿನ ಕೊರತೆ ನೀಗಬೇಕು. ಬಾ ಸೋಮದಂತ."

ಸೋಮದಂತ ಎರಡನೆಯ ಆಲೋಚನೆ ಮಾಡಲು ಸಾಧ್ಯವೇ ಇಲ್ಲದಂತೆ ವಿತೃಪ ಗಜಗಣವನ್ನು ಸಮರಕ್ಕೆ ಸಿದ್ಧ ಮಾಡಿಬಿಟ್ಟ.

ವಯನದ ಅರಣ್ಯಕರು ಹೆಂಗಸರು ಸತ್ತರೆ ಅವರನ್ನು ಮಣ್ಣಲ್ಲಿಟ್ಟು ಹೂಳುತ್ತಾರೆ. ಪುರುಷರು ಸತ್ತರೆ ಅವರನ್ನು ಬಾಳೆದಿಂಡಿನ ಮಂಚದ ಮೇಲಿಟ್ಟು ಹರಿಯುವ ನದಿಯಲ್ಲಿ ಹರಿಯಬಿಡುತ್ತಾರೆ. ಅದರಂತೆ ಢುಂಢಿ, ವದೀರಜ್ಜ ಮತ್ತು ಇತರರು ಮಿತನ ಶವವನ್ನು ಬಾಳೇದಿಂಡಿನ ಮಂಚದ ಮೇಲಿಟ್ಟು ನದಿಯೊಳಗೆ ಬಿಡುತ್ತಿದ್ದರು.

ಗಜಗಣದವರು ರಣ ಕೋಲಾಹಲ ಮಾಡುತ್ತಾ ಮಿತನ ಅಂತ್ಯಕ್ರಿಯೆ ನಡೆಸುತ್ತಿದ್ದ ವಯನದವರ ಕಡೆಗೆ ನುಗ್ಗುತ್ತಿರುವಾಗ, ರುದ್ರಗಣದವರು ಇದನ್ನು ಕಂಡರು.

ಸೋಮನಾಥದಲ್ಲಿ, ರುದ್ರನ ಅಧಿಪತ್ಯವಿರುವ ಕ್ಷೇತ್ರದಲ್ಲಿ, ಪರಂಪರೆಯಿಂದ ವಿರೋಧಿಗಳಾಗಿರುವ ಗಜಗಣದವರು ತಮ್ಮಿಷ್ಟಕ್ಕೆ ತಾವೇ ಶಸ್ತ್ರವೆತ್ತುವುದೇ?

ಭದ್ರ ರುದ್ರಗಣದ ಪ್ರಮಥರಿಗೆ ಕರೆಕೊಟ್ಟ. ಭದ್ರ ಮತ್ತು ಮಾತಂಗದವನಾದ ವಜ್ರನ ನೇತೃತ್ವದಲ್ಲಿ ರುದ್ರಗಣ ವಯನದವರ ಜೊತೆಯಲ್ಲಿ ನಿಂತಿತು.

ಈ ಅನಿರೀಕ್ಷಿತ ಎದುರಾಳಿಗಳನ್ನು ಕಂಡು ವಿತೃಪ ಕಂಗೆಟ್ಟ. ಅವನಿಗೆ ತಾನು ಏನು ತಪ್ಪು ಮಾಡಿದ್ದೇನೆಂದು ಅರಿವಾಗಲಿಲ್ಲ. ಬದಲಿಗೆ ರುದ್ರಗಣದವರೂ ತಮ್ಮ ವಿರುದ್ಧ ತಿರುಗಿ ಬಿದ್ದರು ಎಂದು ಮತ್ತಷ್ಟು ರೋಷದಿಂದ ಗಜಗಣದವರನ್ನೂ ಮತ್ತು ತನ್ನ ಸೈನ್ಯವನ್ನೂ ಹುರಿದುಂಬಿಸಿದನು.

ಸೋಮನಾಥದ ಬೀದಿ ಬೀದಿಗಳಲ್ಲಿ ಗಜಗಣದವರು ಮತ್ತು ರುದ್ರಗಣದವರು ಕಾಳಗಕ್ಕಿಳಿದರು. ವಯನದ ಹುಡುಗರು ಮತ್ತು ಸ್ತ್ರೀಯರು ವಿತೃಪನ ಭಟರನ್ನು ಸದೆಬಡಿದರು.

ಭದ್ರ ಮತ್ತು ವಜ್ರನಿಂದ ಸೋಲುಂಡ ಸೋಮದಂತ ತನ್ನ ಗಣದವರೊಂದಿಗೆ ಅವಮಾನಿತನಾಗಿ ಹಿಂದಿರುಗಿದರೆ, ವಿತೃಪನನ್ನು ಬೆನ್ನಟ್ಟಿದ್ದ ಢುಂಢಿ.

ಬರಿಗಾಲಿನಲ್ಲಿದ್ದ ಢುಂಢಿಗೆ ಕುದುರೆಯನ್ನೇರಿದ್ದ ತನ್ನ ಬೇಟೆಯನ್ನು ಹಿಡಿಯಲಾಗಲಿಲ್ಲ.

ಈ ವಿಜಯ ರುದ್ರಗಣದವರಿಗೆ ಮತ್ತು ವಯನದವರಿಗೆ ಉನ್ಮಾದವನ್ನು ನೀಡಿತು. ಕುಡಿದು ಕುಣಿದು ಕುಪ್ಪಳಿಸಿದರು.

ವಿತೃಪ ನೇರವಾಗಿ ಹಿಮಾಲಯದ ದಾರಿ ಹಿಡಿದಿದ್ದ. ಅಲ್ಲಿ ಇದ್ದ ಆರ್ಯ ಬುಡಕಟ್ಟುಗಳ ಮುಖಂಡರೊಂದಿಗೆ ಚರ್ಚಿಸಿದ.

ಸೋಮನಾಥದಲ್ಲಿ ತಾನು ಮತ್ತೆ ನೆಲೆಯೂರಬೇಕಾದರೆ, ಆಶ್ರಯಿಸಬೇಕಾದುದು ಯಾರನ್ನು? ಈಗಿರುವ ಇಂದ್ರನೋ ಸೋಮಪ್ರಿಯ. ಸದಾ ಉನ್ಮತ್ತನಾಗಿ, ಗಣಿಕೆಯರೊಡನೆ ಹೊರಳಾಡುತ್ತಿರುವ ಅವನಿಗೆ ವಿಷಯವನ್ನು ಮುಟ್ಟಿಸುವುದೇ ಬಹುದೊಡ್ಡ ಸಮಸ್ಯೆ. ಸೋಮನಾಥ ಶಿವನ ಸಾನಿಧ್ಯವಾದ್ದರಿಂದ ವಿಷ್ಣುವನ್ನು ಕರೆಯಿಸುವುದೆಂದರೆ ಸೂಕ್ಷ್ಮವಾದ ಸಂಗತಿ. ಈಗ ಉಳಿದಿರುವ ಒಂದೇ ದಾರಿಯೆಂದರೆ, ರುದ್ರನಿಗೇ ಮೊರೆಹೋಗುವುದು.

ವಿತೃಪನಿಲ್ಲದ ಸೋಮನಾಥದಲ್ಲಿ ಢುಂಢಿ, ವಜ್ರ ಮತ್ತು ಭದ್ರರು ಹಿಗ್ಗಿದರು. ವಿಜಯೋತ್ಸವ ಆಚರಿಸಿದರು.

ಮೇನಾವತಿಯ ಸೋದರನ ಮನೆಯಲ್ಲಿ ಅಡಗಿದ್ದ ವಿತೃಪನಿಗೆ ಸುದ್ದಿ ಬಂದಿತ್ತು. ಸೋಮನಾಥ ಇನ್ನು ಆರ್ಯ ವ್ಯವಸ್ಥೆಯಲ್ಲಿ ಇಲ್ಲವೆಂದೂ ಬೇಡರ, ವ್ಯಾಧರ, ಶಬರರ, ಅರಣ್ಯಕರ ಕೊಂಪೆಯಾಗಿದೆಯೆಂದೂ, ಅವರು ಇಷ್ಟಬಂದ ರೀತಿಯಲ್ಲಿ ವರ್ತಿಸುತ್ತಿದ್ದಾರೆಂದೂ, ಆರ್ಯರು ಈ ಅನಾರ್ಯರ ವೈಪರೀತ್ಯಗಳಿಗೆ ಹೆದರಿ ಮನೆಗಳಲ್ಲೇ ಅಡಗಿದ್ದಾರೆಂದೂ ವಿತೃಪನ ಆಪ್ತ ಸಹಾಯಕ ತಿಳಿಸಿದ್ದ.

ವಿತೃಪ, ಜೊತೆಗೆ ಇತರ ಆರ್ಯ ಮುಖಂಡರು ಕೆಲವು ದೇವತೆಗಳೊಂದಿಗೆ ಕೈಲಾಸ ತಲುಪಿದರು.

ಬಿಲ್ವ ಮರದ ಕೆಳಗೆ ಭಂಗಿ ಸೇದುತ್ತಾ, ಸೋಮವನ್ನು ಕುಡಿಯುತ್ತಾ, ಜಿಂಕೆಯ ಮಾಂಸವನ್ನು ಜಗಿಯುತ್ತಾ ರುದ್ರ ಕುಳಿತಿದ್ದ.

ತಾವು ಬಂದಿರುವ ಸಮಯವು ನಿವೇದನೆಗೆ ಸರಿಯಾಗದೆಂದು ತಿಳಿದರೂ, ಬಂದದ್ದನ್ನು ರುದ್ರನು ಕಂಡಿರುವನಾದ್ದರಿಂದ, ನಿಧಾನವಾಗಿ ಹೇಳಬೇಕೆಂದುಕೊಂಡಿದ್ದನ್ನು ಹೇಳಿದರು. ವಿಷಯದ ವಿವರಣೆಯನ್ನು ಕೇಳಿದ ರುದ್ರ, "ನೀವು ಆರ್ಯ ದೇವತೆಗಳೋ ಕುತಂತ್ರಿಗಳು. ನಿಮ್ಮ ಸೌಕರ್ಯಕ್ಕೆ ಒದಗದೇ ಇರುವ ಎಲ್ಲವನ್ನೂ ಅನಿಷ್ಟವೆನ್ನುವವರು. ನೀವು ಏನೋ ಮಾಡಿರುವ ಕುಯುಕ್ತಿಯ ತಂತ್ರ

ನಿಮಗೆ ತಿರುಮಂತ್ರವಾಗಿರುತ್ತದೆ. ಈಗ ಕೈ ಜೋಡಿಸಿಕೊಂಡು ನಿಲ್ಲುವ ನಿಮ್ಮಲ್ಲಿ ಇದೇ ವಿನಯ ಆಗ ಇದ್ದಿರುವುದಿಲ್ಲ ಎಂಬುದನ್ನು ನಾನು ಬಲ್ಲೆ. ಆಗ ಅಹಂಕಾರದಲ್ಲಿ ಮೆರೆದಾಡಿದ್ದರಿಂದ ನಿಮಗೆ ಉಂಟಾದ ಗಾಯವನ್ನು ದೈನ್ಯದಿಂದ ತೋರಿಸುವ ನಿಮ್ಮನ್ನು ನಾನು ನಂಬಲಾರೆ. ಆರ್ಯರಾಗಿರುವ ಮಾತ್ರದಿಂದಲೇ ನಿಮ್ಮ ಉಚ್ಚ ಹೇಲುಗಳನ್ನೂ ಗಂಧವೆನ್ನುವವರು ಇನ್ನಾರಾದರೂ ಇದ್ದರೆ ಅವರ ಬಳಿ ನಿಮ್ಮ ದೂರನ್ನು ಒಯ್ಯಿರಿ. ನನ್ನ ಕ್ಷೇತ್ರದಲ್ಲಿ ತನ್ನ ದರ್ಪ ತೋರಿಸುವವನು ಯಾರಾದರೂ ಇದ್ದರೆ ಅವನ ಶೌರ್ಯವನ್ನು ಮೆಚ್ಚುತ್ತೇನೆ.” ಎಂದ ರುದ್ರ.

“ಹೇ ಪ್ರಭೂ,” ವಿತೃಪ ವಿನೀತನಾಗಿ ಪ್ರಾರ್ಥಿಸಿದ. “ಹೇ ಶಿವನೇ, ನೀನು ರುದ್ರನು ಹೇಗೋ ಹಾಗೇ ಶಂಕರನೂ ಹೌದು. ಪ್ರಳಯಾಂತಕನಾದ ನೀನು ಮಂಗಳಕರನೂ, ಶುಭವನ್ನು ಉಂಟುಮಾಡುವವನೂ ಹೌದು. ನಿನ್ನನ್ನೇ ನಾವು ನಂಬಿ ಬಂದಿರುವಾಗ, ನಿನ್ನನ್ನೇ ಆರಾಧಿಸುವ ನಮಗೆ ನೀನು ಹೀಗೆ ದೂರ ತಳ್ಳಬೇಡ.”

“ನೀವು ನನ್ನವರಲ್ಲ!” ರುದ್ರ ಸ್ಪಷ್ಟವಾಗಿ ನುಡಿದ. “ನೀವು ವೈದಿಕರು ಲೌಕಿಕ ಫಲಾಪೇಕ್ಷಿಗಳು. ನೀವು ನಿಮ್ಮ ಮಂತ್ರಗಳಲ್ಲಿ ಸದಾ ಕೇಳುವುದಾದರೂ ಏನನ್ನು? ನಿಮ್ಮನ್ನು ಸದಾ ಸುಖವಾಗಿಡಲು ಬೇಕಾದ ಸವಲತ್ತುಗಳನ್ನು. ಆದರೆ, ನಾವು ಮೋಕ್ಷಾಪೇಕ್ಷಿಗಳು. ಅಮರತ್ವದ ನಿರೀಕ್ಷಕರು. ರುದ್ರನ ಆರಾಧಕರೆಂದರೆ ನೀವು ಮೋಕ್ಷಾಪೇಕ್ಷಿಗಳಾಗಿರಬೇಕಿತ್ತು. ಲೌಕಿಕ ವಾಂಛೆಗಳಿಂದ ದೂರವಿರಬೇಕಿತ್ತು. ಗುಂಪುಗಾರಿಕೆ, ಪಕ್ಷಪಾತಗಳ ಲವಲೇಶವೂ ನಿಮ್ಮಲ್ಲಿ ಸುಳಿಯಬಾರದಿತ್ತು. ಶ್ರೇಷ್ಠ – ಅನಿಷ್ಟವೆಂಬ ನಿಮ್ಮ ಕಲ್ಪನೆಯೇ ಅನಿಷ್ಟ! ವರ್ಗ ಬೇಧ, ವರ್ಣ ಬೇಧಗಳನ್ನು ಮಾಡುವ ನಿಮಗೆ ಎಲ್ಲದರಲ್ಲಿಯೂ ಒಂದೇ ಬಿಂದುವನ್ನು ನೋಡಲು ಹೇಗೆ ಸಾಧ್ಯ? ನನ್ನ ಕೆರಳಿಸಬೇಡಿ. ಇಲ್ಲಿಂದ ಹೊರಟು ಹೋಗಿ.” ಎಂದು ಗಂಭೀರವಾಗಿ ಗದರಿದ.

ಮುಖಭಂಗವಾದರೂ ನಿಧಾನವಾಗಿ ದೇವತೆಗಳಲ್ಲೊಬ್ಬ ಹೇಳಿದ.

“ಪ್ರಭೂ, ನಿನ್ನ ನೆಲದಲ್ಲಿ, ನಿನ್ನದೇ ಕ್ಷೇತ್ರದಲ್ಲಿ ಧರ್ಮವು ಪರಿಪಾಲನೆಯಾಗದೇ ಕ್ರಮ ತಪ್ಪುವುದು ನಿನಗೆ ಸಹ್ಯವೇ?”

“ಹತ್ತು ಜನರಿಗೆ ಒಂದು ಧರ್ಮ ಎನ್ನುವುದೇ ಅಸಹ್ಯ. ಒಬ್ಬೊಬ್ಬರಿಗೂ ಒಂದೊಂದು ಧರ್ಮ. ಅವರವರ ಸ್ವಧರ್ಮವನ್ನು ಅವರವರು ಕಂಡುಕೊಂಡು ಅದರಂತೆ ನಡೆದುಕೊಳ್ಳಲಿ. ಸರಿ, ನಿಮ್ಮದೇ ಭಾಷೆಯಲ್ಲಿ ಹೇಳುವುದಾದರೆ, ನಾನೇ ಅವರನ್ನು ಕರೆಯಿಸಿಕೊಂಡಿದ್ದು. ನಾನೇ ಅವರಿಗೆ ಆಶ್ರಯವನ್ನು ಕೊಟ್ಟದ್ದು. ನಾನೇ ಅವರನ್ನು ಹೊರಗೆ ಹೋಗಿ ಎನ್ನಲಾರೆ. ನಿಮಗೆ ಅವರನ್ನು ಎದುರಿಸುವ ಶಕ್ತಿಯಿದ್ದರೆ, ಎದುರಿಸಿ. ಇಲ್ಲವೇ ಸುಮ್ಮನಿರಿ. ಇನ್ನಾರಾದರೂ ನಿಮ್ಮ ನೆರವಿಗೆ ಬಂದರೆ, ನೋಡಿ. ಅದು ಅವರ ಸ್ವಾತಂತ್ರ್ಯ ಮತ್ತು ಇಚ್ಛೆ. ನಾನು ಅದಕ್ಕೆ ಅಡ್ಡಿ ಬರಲಾರೆ. ಮುಂದೆ ನನಗೆ ಹೇಗೆ ಪ್ರೇರಣೆ ಸಿಗುತ್ತದೋ ಹಾಗೆ ನಾನು ವರ್ತಿಸುತ್ತೇನೆ. ನೋಡೋಣ.” ಎಂದ ರುದ್ರ ಮೆಲ್ಲನೆ ನುಡಿದ. “ಪುರಾತನ ರುದ್ರರ ಕಾಲದಿಂದಲೂ, ಈ ಭೂಮಿಯ ಮಕ್ಕಳು ನಡೆದು ಬಂದ ದಾರಿಯಲ್ಲಿ ಕೊಳಕನ್ನು ಎರಚಿದವರು ನೀವು. ನೀವು ಎರಚುವ ಯಾವ ಕೊಳಕೂ ಈ ರುದ್ರನಿಗೆ ಅಚ್ಚರಿಯನ್ನಾಗಲಿ, ಅಸಹ್ಯವನ್ನಾಗಲಿ ಉಂಟು ಮಾಡುವುದಿಲ್ಲ. ನೀವು ಕೊಳಕನ್ನೇ ಮಾಡದಿರುವುದು ನನ್ನ ಅಚ್ಚರಿ. ಅಂತಹ ಅಚ್ಚರಿಗಳಿಗಾಗಿ ನಾನು ಕಾದಿದ್ದೇನೆ.”

ರುದ್ರನು ಗೊಣಗಿದ್ದನ್ನು ಮುಂಭಾಗದಲ್ಲಿದ್ದ ಎಲ್ಲರೂ ಕೇಳಿದರು. ಆದರೆ ಮರು ಮಾತಾಡುವ ಧೈರ್ಯ ಯಾರಿಗಿದೆ!

ರುದ್ರನು ಎಷ್ಟು ಒರಟನೋ, ಉನ್ಮತ್ತನೋ ಅಷ್ಟೇ ಭಾವುಕನೂ, ಮುಗುದನೂ ಎಂಬುದು ಆರ್ಯರಿಗೆಲ್ಲಾ ತಿಳಿದ ವಿಷಯವೇ. ಹಾಗಾಗಿ ಅವನು ಮನಸ್ಸನ್ನು ಬದಲಿಸುವ ಎಲ್ಲಾ ಸಾಧ್ಯತೆಗಳಿರುತ್ತವೆ. ಇಲ್ಲಿಗೆ ಬರುವ ಮುನ್ನವೇ ಪಾರ್ವತಿಯ ತಾಯಿ ಮೇನಾವತಿಯ ಸೋದರ ಈ ಅಂಶವನ್ನು ಗಮನಿಸಿ ನುಡಿದಿದ್ದ. "ಏನನ್ನೂ ಬೇಡವೆಂದು ತಪಸ್ಸಿಗೆ ಕುಳಿತವನು, ಎಂದಿಗೂ ಮದುವೆಯನ್ನು ಆಗಲಾರೆ ಎಂದವನು, ಬೇಡಿದ್ದಕ್ಕೆ ಪಾರ್ವತಿಯ ಕೈ ಹಿಡಿದನು. ಈಗಲೂ ಅವನೆಷ್ಟೇ ಒರಟಾಗಿ ಮಾತಾಡಿದರೂ ಅಲ್ಲಿಂದ ತೆರಳುವುದು ಬೇಡ."

ಎಲ್ಲಾ ಆರ್ಯ ಮುಖಂಡರೂ, ಋಷಿಗಳೂ, ದೇವತೆಗಳೂ ರುದ್ರನ ಎದುರಿನಲ್ಲಿಯೇ ಮೌನವಾಗಿ ಕುಳಿತರು.

ಕಣ್ಮುಚ್ಚಿ ನೆಲಕ್ಕೊರಗಿದ್ದ ರುದ್ರ ಯಾವಾಗಲೋ ಒಮ್ಮೆ ಕಣ್ಬಿಟ್ಟು ನೋಡಲು ಅಲ್ಲಿ ಇನ್ನೂ ಇದ್ದ ಆರ್ಯರನ್ನು ನೋಡಿ ಥುತ್ತನೆ ಮೇಲೆದ್ದ. ಎದುರಿಗೇ ವಿನೀತನಾಗಿ ಕುಳಿತಿದ್ದ ನಂದಿಗೆ ಹೇಳಿದ.

"ಮಾನಸ ಸರೋವರಕ್ಕೆ ಹೋಗೋಣ. ನಡೆ." ಎಂದ ಮುಂದೆ ನಡೆದ. ನಂದಿ ಮತ್ತು ಇತರ ಪ್ರಮಥಗಣಗಳು ರುದ್ರನನ್ನು ಹಿಂಬಾಲಿಸಿದರು.

ಪಾರ್ವತಿ ಮತ್ತು ದನು ಇತರ ಸಖಿಯರೊಡನೆ ಹೊರಗೆ ಬಂದಳು. ತನ್ನ ತಾಯಿಯ ಸೋದರನು ಕೈಲಾಸದವರೆಗೂ ಬಂದು ತನ್ನ ನೋಡಲು ಒಳಗೆ ಬಾರದಿರುವುದನ್ನು ಕೇಳಿ ಪಾರ್ವತಿಗೆ ಆಶ್ಚರ್ಯವಾಯಿತು. ತಾನೇ ಅವರನ್ನು ನೋಡಲು ಹೊರಗೆ ಬಂದಳು. ದನುವು ತನ್ನಿಬ್ಬರು ಸಹಾಯಕಿಯರೊಡನೆ ಆಯುಶ್ಮತಿ ಮೂಲಿಕೆಗಳನ್ನು ಬಿಡಿಸಿಕೊಂಡು ಬರಲು ಕಾಡಿನೊಳಗೆ ಹೋದಳು.

ರುದ್ರ ಮಲಗಿದ್ದ ಸ್ಥಳದಲ್ಲಿ ಪಾರ್ವತಿ ನಿಂತಳು.

ಅಲ್ಲಿ ನೆರೆದಿದ್ದವರೆಲ್ಲಾ ಮೇಲೆದ್ದು ವಂದಿಸಿದರು. ಅವರಿಗೆ ಪ್ರತಿ ವಂದಿಸಿದ ಪಾರ್ವತಿ, ತನ್ನ ತಾಯಿಯ ತಮ್ಮನ ಕಡೆ ತಿರುಗಿ ಕೇಳಿದಳು.

"ನೀವು ಇಲ್ಲಿಗೆ ಹೇಗೆ ಬಂದಿರಿ? ಸಂಬಂಧದ ಬಂಧುವಾಗಿಯೋ ಅಥವಾ ಸಂಧಾನದ ರಾಯಭಾರಿಯಾಗಿಯೋ?"

"ಸಂಧಾನದ ರಾಯಭಾರಿಯಾಗಿ ವಿಫಲನಾದೆ. ಸಂಬಂಧದ ಬಂಧುವಾಗಿ ಯಶಸ್ಸನ್ನು ಕಾಣುತ್ತೇನೆಯೋ ನೋಡಬೇಕಾಗಿದೆ." ಎಂದ ಆತ ಮೆಲ್ಲನೆ ಮಾತನ್ನು ಮುಂದುವರಿಸಿದ. "ಈ ರುದ್ರನನ್ನು ಎದುರಿಸುವವರು ಯಾರೂ ಇಲ್ಲ. ಎಲ್ಲರೂ ಆತನಿಗೆ ಹೆದರುತ್ತಾರೆ. ರುದ್ರನು ತನ್ನ ಧರ್ಮವನ್ನು ಕಾಪಾಡುವ ಜವಾಬ್ದಾರಿಯಿಂದ ದೂರಾಗಿದ್ದಾನೆ. ಒಂದು ಕ್ಷೇತ್ರದ ಅಧಿಪತಿಯಾಗಿದ್ದು, ಆ ಕ್ಷೇತ್ರವನ್ನು ಪಾಲಿಸದಿದ್ದರೆ ಹೇಗೆ? ಅವನ ಅರ್ಧಾಂಗಿಯಾದ ನೀನೇ ಕೊಂಚ ವಿಚಾರಿಸು." ಎಂದ.

“ವಿಷಯವೇನು ಹೇಳಿ.” ಎಂದು ಕೇಳಿದಳು ಪಾರ್ವತಿ.

ವಿಷಯದ ನಿವೇದನೆಯಾಯ್ತು ಆರ್ಯರ ಮೂಗಿನ ನೇರಕ್ಕೆ.

“ಇಷ್ಟಕ್ಕೆಲ್ಲಾ ಮೂಲ ಕಾರಣರು ಯಾರು?” ಪಾರ್ವತಿ ಕ್ರೋಧಗೊಂಡಳು.

“ಢುಂಢಿ.”

ಆ ಕೂಡಲೇ ಪಾರ್ವತಿ ತನ್ನ ಶಕ್ತಿಗಣವನ್ನು ಕರೆದಳು.

“ಈ ಕ್ಷಣವೇ ನೀವು ಸೋಮನಾಥಕ್ಕೆ ಹೋಗಿ ಆ ಉಪದ್ರವಕಾರಿ ಢುಂಢಿಯನ್ನು ಬಂಧಿಸಿ.”

ಸ್ತ್ರೀಯೋಧರ ಆ ಶಕ್ತಿಗಣ ಬಹುಬೇಗ ಸೋಮನಾಥವನ್ನು ತಲುಪಿತ್ತು. ಪಾರ್ವತಿಯೂ ಶಕ್ತಿಗಣವನ್ನು ಕಳುಹಿಸಿಕೊಟ್ಟು ತಾನು ರಥವನ್ನೇರಿದಳು.

ಸೋಮನಾಥದಲ್ಲಿ ಪ್ರಚಂಡವಾಗಿ ಬರುತ್ತಿರುವ ಶಕ್ತಿಗಣವನ್ನು ನೋಡಿ ರುದ್ರಗಣ ಬೆರಗಾಯಿತು. ಅವರಿಗೆ ಇವರು ಇಲ್ಲಿ ಏಕೆ ಎಂದೂ ತಿಳಿಯಲಿಲ್ಲ. ನೋಡು ನೋಡುತ್ತಿದ್ದಂತೆ ಢುಂಢಿಯನ್ನು ವಿಚಾರಿಸುತ್ತಾ ಅವನನ್ನು ಕಂಡ ಕೂಡಲೇ ಅವನ ಮೇಲೆರಗಿದರು.

ಇಂತಹ ಸ್ತ್ರೀ ಪಡೆಯನ್ನು ಕಂಡರಿಯದಿದ್ದ ಢುಂಢಿ ತಬ್ಬಿಬ್ಬಾದ. ಆದರೂ ಸಾವರಿಸಿಕೊಂಡು ತನ್ನ ಆಯುಧವನ್ನು ಎತ್ತಲು ಹೋದ. ಆದರೆ, ಅದಕ್ಕೆ ಅವಕಾಶವನ್ನೇ ಕೊಡದಂತೆ ಶಕ್ತಿಗಣದ ಸ್ತ್ರೀಯರು ಅವನ ಮೇಲೆರಗಿದರು. ಢುಂಢಿ ಅವರೊಂದಿಗೆ ಹೋರಾಡಿದರೂ, ಆ ಸ್ತ್ರೀಯರು ಅವನ ಬಂಧಿಸಿ ಹೆಡೆಮುರಿ ಕಟ್ಟಿ ನೆಲದ ಮೇಲೆ ಒಗೆದರು.

“ನೀನೇ ಏನು ಸೋಮನಾಥದ ಕ್ರಮಧ್ವಂಸಕ?” ಪಾರ್ವತಿಯ ದನಿಯಲ್ಲಿ ಕಾಠಿಣ್ಯವಿತ್ತು.

“ಅವನನ್ನು ಉಳಿಸಬಾರದು ದೇವಿ. ಅವನ ಕೊನೆಯೇ ಇಲ್ಲಿ ಶಿಸ್ತು ಮರಳಲು ಪ್ರಾರಂಭ.” ಎಂದ ವಿತೃಪ.

“ಎಲ್ಲವನ್ನೂ ನೀವೇ ನಿರ್ಧರಿಸುವುದಾದರೆ ನಾನಿಲ್ಲಿಗೆ ಬರುವ ಅಗತ್ಯವಿರಲಿಲ್ಲ.” ಎಂದ ಪಾರ್ವತಿಯ ಮಾತಿಗೆ ಬೆದರಿದ ವಿತೃಪ ಸುಮ್ಮನಾದ.

ಪಾರ್ವತಿ ಅಲ್ಲಿ ನೆರೆದಿದ್ದ ಎಲ್ಲಾ ಗಣಗಳನ್ನೂ ಉದ್ದೇಶಿಸಿ ಹೇಳಿದಳು.

“ಇಲ್ಲಿ ಆರ್ಯ ಅನಾರ್ಯದ ಬೇಧವಿಲ್ಲ. ಆದರೆ ಕ್ರಮದ ಅಗತ್ಯವಿದೆ. ಸೋಮನಾಥಕ್ಕೆ ಒಂದು ಕ್ರಮವಿದೆ. ಅದು ಎಲ್ಲರಿಗೂ ಅನ್ವಯಿಸುತ್ತದೆ.” ಎಂದ ಪಾರ್ವತಿ ಭದ್ರನ ಕಡೆಗೆ ನೋಡಿದಳು. “ಇದೇನು ಭದ್ರ. ನೀನೂ ನಿನ್ನ ಪ್ರಜ್ಞೆಯಲ್ಲಿ ಇರಲಿಲ್ಲವೇ?” ಆ ಹೊತ್ತಿಗಾಗಲೇ ಮಾತಂಗರ ವಜ್ರ ಕೈಲಾಸದ ತನ್ನ ಗಜಪಾಳಯಕ್ಕೆ ಹೊರಟುಹೋಗಿದ್ದು, ಪಾರ್ವತಿಯ ಕೆಂಗಣ್ಣಿನಿಂದ ತಪ್ಪಿಸಿಕೊಂಡ.

ಕೋಪದಿಂದ ಭುಸುಗುಡುತ್ತಿದ್ದ ಢುಂಢಿಯನ್ನು ನೋಡಿ ಅವನ ಹತ್ತಿರಕ್ಕೆ ಬಂದಳು ಪಾರ್ವತಿ.

“ಹೇ ಹುಡುಗಾ, ನಿನಗೆ ನಾನು ಯಾರೆಂದು ಗೊತ್ತೇ?”

ಢುಂಢಿ ಉತ್ತರಿಸಲಿಲ್ಲ.

"ಇವನನ್ನು ಕತ್ತಲ ಕೋಣೆಗೆ ತಳ್ಳಿ. ಬೆಳಗ್ಗೆ ವಿಚಾರಿಸೋಣ. ನಾನು ಇಂದು ಇಲ್ಲಿಯೇ ರುದ್ರಮಂಟಪದಲ್ಲಿ ತಂಗುತ್ತೇನೆ." ಪಾರ್ವತಿ ಅಲ್ಲಿಂದ ನಡೆಯುವ ಮುನ್ನ ವಿಶ್ವಪನತ್ತ ತಿರುಗಿ ಹೇಳಿದಳು. "ನಾಳೆ ಬೆಳಗ್ಗೆ ನೀನೂ ಇಲ್ಲಿರಬೇಕು."

ಅಂದು ರಾತ್ರಿ ರುದ್ರ ಮಂಟಪಕ್ಕೆ ದನು ಓಡೋಡಿ ಬಂದಳು. ತನ್ನ ಸಖಿಯೊಡನೆ ಪಗಡೆಯಾಟವಾಡುತ್ತಿದ್ದ ಪಾರ್ವತಿ, "ಅರೆ, ದನು. ನೀನೇಕೆ ಕೈಲಾಸವನ್ನು ಬಿಟ್ಟೋಡಿ ಬಂದೆ?" ಅವಳಿಗೆ ದನು ಆತಂಕದಲ್ಲಿರುವುದು ಅಚ್ಚರಿಯಾಯಿತು.

"ಒಡತಿ, ನಿಮ್ಮಲ್ಲಿ ನಾನು ನಿವೇದಿಸಿಕೊಳ್ಳಬೇಕಾಗಿರುವ ವಿಷಯವೊಂದಿದೆ."

"ಹೇಳು ದನು."

"ನೀವು ಇಂದು ಸಂಜೆ ಬಂಧಿಸಿದ ಢುಂಢಿ ಯಾರೆಂದು ನಿಮಗೆ ಗೊತ್ತೇ?"

"ಗೊತ್ತು. ಅವಿಮುಕ್ತದ ಅರಣ್ಯಕನು."

"ಅಷ್ಟೇ ಅಲ್ಲ ದೇವಿ. ನಮ್ಮ ವಯನದವನು. ನಿಮ್ಮ ಮಾಲಿನಿಯ ಮಗ."

ಪಾರ್ವತಿ ಅವಕ್ಕಾದಳು. "ನಮ್ಮ ಮಾಲಿನಿಯ ಮಗನೇ?"

"ಹೌದು ದೇವಿ." ದನು ತಾನು ಭೈರವದೂತನ ಮೇಲೇರಿ ವಯನಕ್ಕೆ ಹೋಗಿ, ಅವನನ್ನು ಇಲ್ಲಿಗೆ ಕರೆತಂದುದರಿಂದ ಹಿಡಿದು, ಪರಶು ಪ್ರಯೋಗದಲ್ಲಿ ಮಿತನಿಗಾದ ಗತಿ, ವದೀರಜ್ಜನ ಅಹವಾಲು, ಮುಂದೆ ನಡೆದದ್ದೆಲ್ಲವನ್ನೂ ಹೇಳಿದಳು. ಅವಳ ಜೊತೆಯೇ ಬಂದು ಹೊರಗೆ ಕಾಯುತ್ತಿದ್ದ ವದೀರಜ್ಜನ ಒಳಗೆ ಕರೆಯಿಸಿದಳು. ವದೀರಜ್ಜ ನಡೆದುದೆಲ್ಲವನ್ನೂ ಹೇಳಿದ.

"ನೀವು ಇಲ್ಲಿಯೇ ವಿಶ್ರಮಿಸಿ." ಎಂದ ಪಾರ್ವತಿ ದನುವಿನ ಕಡೆಗೆ ತಿರುಗಿದಳು. "ಢುಂಢಿ, ಅವನು ನನ್ನ ಮಗ." ಎಂದ ಅವಳ ಕಣ್ಣುಗಳು ವಿಶಾಲವಾಗಿ ತೆರೆದುಕೊಂಡವು.

"ಹೇ ದನು, ನಾನು ಅವನನ್ನು ಅವನು ಗರ್ಭದೊಳಗಿದ್ದಾಗಿನಿಂದಲೂ ಬಲ್ಲೆ. ಅವನನ್ನು ನನ್ನ ಬಳಿಗೆ ಕರೆತರಲು ಹೇಳಿದ್ದೆ. ಆದರೆ... ಅವನು ಈ ರೀತಿ ನನ್ನ ಬಳಿಗೆ ಬಂದಿದ್ದಾನೆ."

ಪಾರ್ವತಿ ದನುವನ್ನು ರಥದಲ್ಲಿ ಕರೆದುಕೊಂಡು ತಾನೇ ನೆಲಮಾಳಿಗೆಯ ಸೆರೆಮನೆಗೆ ಹೋದಳು. ರಥದಲ್ಲಿ ಹೋಗುವಾಗ, "ದನು, ನಿನಗೆ ಗೊತ್ತೇ? ನಾನು ಮಾಲಿನಿಗೆ ಹೇಳಿದ್ದೆ. ಅವನು ನನ್ನ ಮಗ. ನನ್ನ ಬಳಿಗೆ ಕರೆದುಕೊಂಡು ಬರಬೇಕು ಎಂದು. ಆದರೆ, ಅವಳು ಸತ್ತು ಹೋದಳು ಎಂದು ತಿಳಿದ ಮೇಲೆ, ಅವನನ್ನು ಕಳುಹಿಸಿಕೊಡುವ ಹಕ್ಕುದಾರಳೇ ಇಲ್ಲದಿದ್ದ ಮೇಲೆ ನಾನು ಯಾರಿಗೆ ಏನನ್ನು ನಿರೂಪಿಸುವುದು ಎಂದು ಸುಮ್ಮನಾಗಿಬಿಟ್ಟೆ." ಎಂದು ಹೇಳಿದಳು.

ಸ್ವಯಂ ಪಾರ್ವತಿಯೇ ನೆಲಮಾಳಿಗೆಗೆ ಬಂದುದ್ದನ್ನು ನೋಡಿ ಅಲ್ಲಿನ ಅಧಿಕಾರಿಗಳಿಗೆ ಮತ್ತು ಕಾವಲುಭಟರಿಗೆ ಆಶ್ಚರ್ಯವಾಯಿತು.

"ಢುಂಢಿ...."

ಆಗ ನೋಡಿದ್ದ ಪಾರ್ವತಿಗೂ ಮತ್ತು ಈಗ ನೋಡುತ್ತಿರುವ ಪಾರ್ವತಿಗೂ ಬಹಳ ವ್ಯತ್ಯಾಸ ಕಂಡಿತು ಢುಂಢಿಗೆ.

"ಇವನನ್ನು ಬಿಡುಗಡೆ ಮಾಡಿ." ಅಧಿಕಾರಿಗಳಿಗೆ ಆಜ್ಞೆ ಮಾಡಿದಳು ಪಾರ್ವತಿ.

ಹಗ್ಗಗಳ ಬಂಧನದಿಂದ ಮುಕ್ತನಾಗಿ ನಿಂತ ಢುಂಢಿಯ ಸಮೀಪಕ್ಕೆ ಹೋಗಿ ಉರಿಯುವ ದೊಂದಿಯಿಂದ ಅವನ ಮುಖವನ್ನು ನಿಚ್ಚಳವಾಗಿ ಕಂಡಳು.

"ಢುಂಢಿ, ನಿನಗೆ ನಾನು ಯಾರು ಗೊತ್ತೇ?"

ಢುಂಢಿ ಈ ಪ್ರಶ್ನೆಯನ್ನು ಸಂಜೆಯೇ ಅವಳಿಂದ ಕೇಳಿದ್ದ. ಆದರೆ ಕೇಳುವ ರೀತಿಗಳಲ್ಲಿ ವ್ಯತ್ಯಾಸವಿತ್ತು.

"ನಿನಗೆ ತಿಳಿಯದು, ಆದರೆ, ನಾನು ನಿನ್ನ ಬಲ್ಲೆ. ನಾನು ನಿನ್ನೊಡನೆ ಮಾತಾಡಿದ್ದೇನೆ. ನೀನು ಮಾಲಿನಿಯ ಗರ್ಭದಲ್ಲಿರುವಾಗಲೇ ನಾನು ನಿನ್ನ ಬಲ್ಲೆ ಢುಂಢಿ. ನೀನು ಹೊರಗೆ ಬರುವುದನ್ನು ನಾನು ಕಾದಿದ್ದೆ. ನಿನ್ನೊಡನೆ ಆಟವಾಡಲು ನಾನು ಕಾದಿದ್ದೆ. ನೀನು ಹೊರಗೆ ಬಂದು ಹೇಗಿರುತ್ತೀಯೋ, ಹೇಗೆ ಆಟವಾಡುತ್ತೀಯೋ ಎಂದು ನೋಡಲು ನಾನು ಕಾತರಳಾಗಿದ್ದೆ."

ಢುಂಢಿ ಅವಳನ್ನು ಬರಿದೇ ನೋಡುತ್ತಿದ್ದ. ತನ್ನ ತಾಯಿ ಈ ಪಾರ್ವತಿಯ ಬಳಿ ಇದ್ದದ್ದು ಅವನಿಗೆ ಗೊತ್ತಿತ್ತು. ವದೀರಜ್ಜ ಹೇಳಿದ್ದ.

"ಬಾ ಈಗ." ಪಾರ್ವತಿಯು ಅಧಿಕಾರಿಗಳತ್ತ ತಿರುಗಿ ಹೇಳಿದಳು. "ಇವನನ್ನು ರುದ್ರಮಂಟಪಕ್ಕೆ ಕರೆತನ್ನಿ."

ಮರುದಿನ ಬೆಳಗ್ಗೆ ವಿತೃಪ ಪಾರ್ವತಿಯ ಎದುರು ನಿಂತಿದ್ದ.

"ಪರಶು ಪ್ರಯೋಗದಲ್ಲಿ ಮಿತನ ಸಾವಾದದ್ದು ನನಗೆ ಏಕೆ ಹೇಳಲಿಲ್ಲ?"

ವಿತೃಪ ಉತ್ತರಿಸಲಿಲ್ಲ.

"ನಡೆದ ಅಚಾತುರ್ಯವನ್ನು ಪ್ರಶ್ನಿಸಬಂದ ವದೀರನನ್ನು ನೀನು ಏಕೆ ಪರಿಗಣಿಸಲಿಲ್ಲ."

ಉತ್ತರವಿಲ್ಲ.

"ನ್ಯಾಯವೆಂಬುದು ನಿಮಗೆ ಮಾತ್ರ ದೊರಕಬೇಕೆಂದಾಗ, ನಿಮ್ಮ ತಪ್ಪುಗಳು ಅದೆಷ್ಟು ಹಗುರವಾಗುತ್ತವೆ ಎಂದರೆ, ಅವು ನಿಮ್ಮ ಕಣ್ಣಿಗೇ ಬೀಳದಷ್ಟು ದೂರ ಹಾರಿಹೋಗಿರುತ್ತವೆ."

ವಿತೃಪ ತಲೆ ತಗ್ಗಿಸಿನಿಂತಿದ್ದ.

"ನನ್ನನ್ನು ನೀನು ಈ ಪ್ರಕರಣದಲ್ಲಿ ಭಾಗಿಯಾಗುವಂತೆ ಮಾಡಿದೆ. ಹಾಗಾಗಿ ನಾನು ಇನ್ನೆಂದೂ ನೀನು ಈ ಸೋಮನಾಥದಲ್ಲಿ ಇರಕೂಡದೆಂದು ಬಹಿಷ್ಕರಿಸಿದ್ದೇನೆ. ನನ್ನ ಮಾತಿಗೆ ನೀನು ಮನ್ನಣೆ ಕೊಡಕೂಡದೆಂಬ ಅಧಿಕಾರದ ಅಮಲಿದ್ದರೆ, ರುದ್ರನನ್ನು ಕಾಣು. ಅವನು ಏನು ಹೇಳುತ್ತಾನೋ ಕೇಳು. ಅದಕ್ಕೆ ತಕ್ಕಂತೆ ಬೇಕಾದರೂ ನೀನು ನಡೆದುಕೊಳ್ಳಬಹುದು." ಎಂದಳು ಪಾರ್ವತಿ.

ವಿತ್ರೃಪ ರುದ್ರನ ಸಂಧಿಸಲಿಲ್ಲ. ಮತ್ತೆಂದೂ ಅವನೂ ಮತ್ತು ಅವನ ಸಂಗಡಿಗರು ಸೋಮನಾಥದಲ್ಲಿ ಕಾಣಲಿಲ್ಲ.

ವದೀರಜ್ಜ ಮತ್ತು ಢುಂಢಿ ತಮ್ಮ ಸಂಗಡಿಗರೊಡನೆ ವಯನಕ್ಕೆ ಹೊರಟು ನಿಂತರು.

"ಢುಂಢಿಯನ್ನು ನನ್ನೊಡನೆ ಉಳಿಸಲಾರಿರೇನು?" ಪಾರ್ವತಿ ವದೀರಜ್ಜನ ಕೇಳಿದಳು.

ವದೀರಜ್ಜ ಢುಂಢಿಯ ಮುಖ ನೋಡಿದ. ಅವನು ನಿರ್ಲಿಪ್ತನಾಗಿದ್ದ.

"ಅವನ ತಾಯಿ ನನಗೆ ಮಾತು ಕೊಟ್ಟಿದ್ದಳು. ಇವನನ್ನು ನನ್ನಲ್ಲಿಗೆ ಕರೆದುಕೊಂಡು ಬರುತ್ತೇನೆಂದು." ಪಾರ್ವತಿ ಹೇಳಿದಳು.

ವದೀರಜ್ಜ ಢುಂಢಿಯ ಕಡೆಗೆ ನೋಡಿದ.

"ಇಲ್ಲಿರುತ್ತೀಯಾ?"

"ನೀವು ಹೇಳಿದ ಹಾಗೆ." ಎಂದ ಢುಂಢಿ.

"ಮಾಲಿನಿಯ ಮಾತನ್ನು ಉಳಿಸು." ಎಂದ ವದೀರಜ್ಜ.

ತೆರೆದ ರಥದಲ್ಲಿ ಪಾರ್ವತಿಯೊಂದಿಗೆ ಢುಂಢಿ ಕೈಲಾಸಕ್ಕೆ ಬಂದಿಳಿದ.

ಬಾಗಿಲಿಲ್ಲದ ಆ ದ್ವಾರದಲ್ಲಿ ಪ್ರವೇಶಿಸುವ ಮುನ್ನವೇ ಪಾರ್ವತಿ ಹೇಳಿದಳು.

"ಢುಂಢಿ, ನೀನು ಈ ನನ್ನ ಮನೆಗೆ ಮಗನಾಗಿ ಬಾ. ನನ್ನ ತಾಯ್ತನದ ಕೊಡುಗೆಗಳನ್ನು ಆನಂದದಿಂದ ಸ್ವೀಕರಿಸು ಬಾ. ನಿನ್ನ ಇಷ್ಟದಂತೆ, ನಿನ್ನ ಆನಂದದಂತೆ ನೀನು ಈ ಕೈಲಾಸದಲ್ಲಿ ಇರು."

ಢುಂಢಿ ಆಯಿತೆಂದು ತಲೆಯಾಡಿಸಿದ. ಪಾರ್ವತಿ ಅವನನ್ನು ಸಂತೋಷದಿಂದ ಅಪ್ಪಿಕೊಂಡಳು.

"ನಿನಗೊಂದು ಹೆಸರಿಡುತ್ತೇನೆ. ಇಡಲೇ?"

ಢುಂಢಿ ಆಯಿತೆಂದು ತಲೆಯಾಡಿಸಿದ.

"ಗುಣೇಶ! ಗುಣೇಶ ಎಂದು ನಿನ್ನ ಹೆಸರು."

ದನು ಚಪ್ಪಾಳೆ ತಟ್ಟಿ ತನ್ನ ಸಂತೋಷವನ್ನು ವ್ಯಕ್ತಪಡಿಸಿದಳು.

ಢುಂಢಿಯ ವಯನದ ಜೊತೆಗಾರರೂ, “ಹೇ ಗುಣೇಶ. ಜಯ ಜಯ ಗುಣೇಶ. ಜಯ ಜಯ ಪಾರ್ವತಿ.” ಎಂದು ಚಪ್ಪಾಳೆ ತಟ್ಟಿ ಸಂತೋಷದಿಂದ ಕುಣಿದಾಡಿದರು.

ಢುಂಢಿಯನ್ನು ಕೈ ಹಿಡಿದುಕೊಂಡು ಪಾರ್ವತಿಯು ಅವರ ಮನೆಯ ಪಾವಟಿಗೆಗಳನ್ನು ಏರಲು ವೇದಿಕೆಯ ಮೇಲೆ ಅಡಿಯಿಡುವಷ್ಟರಲ್ಲಿ ಪಾರಿವಾಳಗಳ ಗುಂಪು ಅಲ್ಲಿ ಇಳಿಯುತ್ತಿರುವುದನ್ನು ಅವಳು ಕಂಡಳು.

ದನುವೂ ಅವುಗಳನ್ನು ಕಂಡಳು. ಅವುಗಳನ್ನು ಕಂಡ ಪಾರ್ವತಿಗೇನಾದರೂ ಶಕುನದ ಆಲೋಚನೆ ಬಂದೀತೆಂದು ಆತುರಾತುರವಾಗಿ ಅವುಗಳನ್ನು ಓಡಿಸಿದಳು. ಅವಳು ಕೂಗುತ್ತಾ ತಮ್ಮ ಗುಂಪಿನೊಳಗೆ ಪ್ರವೇಶಿಸಿದ್ದರಿಂದ ಪಾರಿವಾಳಗಳು ಬೆದರಿ ಒಟ್ಟಾಗಿ ಮೇಲೆ ಹಾರಿ ಹೋದವು.

*

ಶಂಬರ ನಿಧಾನವಾಗಿ ಎದ್ದು ಕುಳಿತ. ಅವನ ಸುತ್ತಲೂ ಅಲ್ಲಲ್ಲಿ ಆಹಾರಕ್ಕಾಗಿ ನೋಡುತ್ತಿದ್ದ ಪಾರಿವಾಳಗಳು ಇನ್ನೂ ಅಲ್ಲೇ ಇದ್ದವು. ಯಾಜ್ಞಿಕ ಮತ್ತು ರಸದೇವರಿಬ್ಬರೂ ಮರವೊಂದರ ಕೆಳಗೆ ಕುಳಿತುಕೊಂಡು ಮಾತನಾಡುತ್ತಿರುವುದು ಕಾಣಿಸಿತು. ದೂರದಲ್ಲಿ ಯದು ತಮಗಾಗಿ ಆಹಾರವನ್ನು ಹಿಡಿದುಕೊಂಡು ಬರುತ್ತಿರುವುದು ಕಾಣಿಸಿತು.

## ಅಧ್ಯಾಯ: 13 ಮಾತಂಗ ಕನ್ಯೆ

ಗಣಪತಿಯನ್ನು ಮಲಗಿಸಿದ್ದ ಮಂಟಪದಿಂದ ವದೀರಜ್ಜನನ್ನು ಮನೆಯೊಳಗೆ ಕರೆದೊಯ್ದರು. ಆ ರಾತ್ರಿ ಕುಶಿಕ ಮತ್ತು ಯದು ಇತರರಾದಿಯಾಗಿ, ಆ ದಿನ ಬಂದಿದ್ದ ಗಣದವರು ರಾತ್ರಿಯ ಪಾಳಿಯಲ್ಲಿ ಮಂಟಪಕ್ಕೆ ಕಾವಲು ನಿಂತರು. ಸಂಜೆ ಗಣಪತಿಯನ್ನು ನೋಡಿಕೊಳ್ಳುವ ವೈದ್ಯರ ಪಾಳಿಯೂ ಬದಲಾಯಿತು. ಯಾಜ್ಞಿಕ ಮತ್ತು ರಸದೇವನು ಸನಿಹದಲ್ಲಿಯೇ ಇರುವ ಬ್ರಾಹ್ಮಣರ ಕುಟೀರಕ್ಕೆ ಹೋಗಿ ಅಲ್ಲಿಯೇ ತಂಗಿದ್ದರು.

ಶಂಬರ ರಾತ್ರಿ ಇನ್ನೂ ಅತ್ಯಂತ ಸನಿಹದಿಂದ ಗಣಪತಿಯನ್ನು ವೀಕ್ಷಿಸಿದ. ಉರಿಯುವ ದೊಂದಿಗಳ ಬೆಳಕಿನಲ್ಲಿ ರುದ್ರಮೌನದ ಅವನ ಮುಖವೇನೂ ನೋಡಲು ಪ್ರಸನ್ನವಾಗಿರಲಿಲ್ಲ.

ಉಸಿರಾಟದ ಗತಿ ಬೆಳಗ್ಗಿದ್ದಷ್ಟೇ ಇರದೇ ಇನ್ನೂ ಕ್ಷೀಣಿಸಿದೆ ಎಂದೆನಿಸಿತು ಶಂಬರನಿಗೆ. ಗಣಪತಿಯನ್ನೇ ನೋಡುತ್ತಿದ್ದ ಶಂಬರನಿಗೆ ಅಲ್ಲಿಯೇ ಹೆಚ್ಚು ಹೊತ್ತು ಇರಲಾಗದೇ ಮೆಲ್ಲನೆ ಯದುವಿನ ಬಳಿಗೆ ಬಂದ.

“ನಾನು ಏನಾದರೂ ಮಾಡುವಂತಹ ಕೆಲಸವಿದ್ದರೆ ಮುಂದಾಗಿ ಮಾಡುತ್ತೇನೆ.”

“ನೀವು ನಮ್ಮೊಡನೆ ಎಚ್ಚರವಾಗಿ ಇರುವುದೇ ದೊಡ್ಡ ಕೆಲಸ. ಖಡ್ಗಧಾರಿಯಾಗಿದ್ದೀರಿ. ಇದಕ್ಕಿಂತ ಇನ್ನೇನು ಬೇಕು.” ಎಂದ ಯದು ಬಹು ಆತ್ಮೀಯತೆಯಿಂದ.

ಶಂಬರ ನಕ್ಕು ಸುಮ್ಮನಾದ.

“ಹಾಗೊಂದು ವೇಳೆ ನಿಮಗೆ ಒಂದೇ ಕಡೆಯಿರಲು ಬೇಸರವೆನಿಸಿದರೆ, ಇಡೀ ಗಜೇಂದ್ರವನವನ್ನು ಒಂದು ಸುತ್ತು ಹಾಕಿಕೊಂಡು ಬನ್ನಿ.” ಎಂದ ಕುಶಿಕ.

ಶಂಬರ ಗಜೇಂದ್ರವನವನ್ನು ಸುತ್ತುತ್ತಾ ಒಂದು ಕಡೆ ನಿಂತ. ಅಲ್ಲಿ ಕೆಲವು ಬೇಷಜರು ಗಿಡ ಮೂಲಿಕೆಗಳಿಂದ ರಸ ತೆಗೆದು ಒಂದು ಬಟ್ಟಲಿನಲ್ಲಿ ಶೇಖರಿಸುತ್ತಿದ್ದರು. ನಂತರ ಆ ರಸದ ಬಟ್ಟಲಿನಲ್ಲಿ ಮರದ ತುಂಡೊಂದನ್ನು ನೆನೆ ಹಾಕಿಟ್ಟು ಅದರ ಮೇಲೆ ತಮ್ಮ ಅಂಗೈಗಳಿಂದ ಮುಚ್ಚಿ ಕೆಲಕಾಲ ಕಣ್ಮುಚ್ಚಿಕೊಂಡು ಮಂತ್ರದಂತೆ ಏನನ್ನೋ ಮಣಮಣಿಸುತ್ತಿದ್ದರು. ನಂತರ ಆ ಮರದ ತುಂಡನ್ನು ಹಸಿರು ರಸದಿಂದ ಹೊರತೆಗೆದು ಅದಕ್ಕೆ ದಾರವನ್ನು ಕಟ್ಟಿ ಅಷ್ಟೇ ಭಯಭಕ್ತಿಯಿಂದ ಅದನ್ನು ಗಣಪತಿಯಿದ್ದ ಮಂಟಪಕ್ಕೆ ತೆಗೆದುಕೊಂಡು ಹೋದರು. ಶಂಬರ ಅವರನ್ನೇ ಅನುಸರಿಸಿದ.

ಆ ತಾಯಿತವನ್ನು ಅವರು ಗಣಪತಿಯ ಕೊರಳಿಗೆ ಕಟ್ಟಿದರು.

*

“ಇದು ನಿನ್ನ ಕೊರಳಲ್ಲಿರಲಿ.” ಪಾರ್ವತಿಯು ಢುಂಢಿಯ ಕೊರಳಿಗೆ ಒಂದು ಚಿನ್ನದ ಹಾರವನ್ನು ಹಾಕಿದಳು. ತನ್ನ ಎದೆಯ ಮೇಲೆ ಹೊಳೆಯುತ್ತಿದ್ದ ಆ ಹಾರವನ್ನು ನೋಡಿಕೊಂಡ ಢುಂಢಿ.

“ಗುಣೇಶ, ಬಾ.” ಎಂದು ಪಾರ್ವತಿ ಢುಂಢಿಯನ್ನು ಕರೆದುಕೊಂಡು ಕಾಡಿನೊಳಕ್ಕೆ ಕರೆದೊಯ್ದಳು. ಅಲ್ಲಿ ಮಾತಂಗರು ಆನೆಗಳನ್ನು ಪಳಗಿಸುತ್ತಿದ್ದರು. ವಿಶಾಲವಾದ ಆದರೆ, ವಿರಳವಾಗಿ ಅಲ್ಲಲ್ಲಿ ಮರಗಳಿರುವ ಆ ಅರಣ್ಯಪ್ರದೇಶದ ಭಾಗದಲ್ಲಿ ಕೆಲವು ಆನೆಗಳನ್ನು ಕಟ್ಟಿ ಹಾಕಿದ್ದರು. ಮತ್ತೂ ಕೆಲವು ಆನೆಗಳನ್ನು ಏರಿ ಅವುಗಳನ್ನು ನಡೆಸುತ್ತಿದ್ದರು. ಕೆಲವು ಆನೆಗಳು ಜಲಕ್ರೀಡೆಯಾಡುತ್ತಿದ್ದವು. ಮತ್ತೂ ಕೆಲವು ಆನೆಗಳು ಸೊಂಡಿಲಿನಿಂದ ಮಣ್ಣನ್ನು ಎತ್ತಿಕೊಂಡು ತಮ್ಮ ಮೇಲೆ ತೂರಿಕೊಳ್ಳುತ್ತಿದ್ದವು.

“ವಜ್ರಾ...” ಪಾರ್ವತಿ ಕೂಗಿ ಕರೆದಳು.

“ಒಡತೀ, ಬಂದೆ.” ಆನೆಯ ಮೇಲಿದ್ದ ವಜ್ರಾ ಜಾಗರೂಕತೆಯಿಂದ ಕೆಳಗಿಳಿದು ಪಾರ್ವತಿಯ ಬಳಿಗೆ ಬಂದ.

“ಇದೋ ನನ್ನ ಮಗ ಗುಣೇಶ.” ಪಾರ್ವತಿ ಢುಂಢಿಯ ಬಾಹುವನ್ನು ತಟ್ಟಿದಳು. “ನನ್ನ ಮಗ ನೆನಪಿರಲಿ. ಇವನಿಗೆ ಈ ಕಾಡಿನ ಪರಿಚಯವನ್ನು ಮಾಡಿಸುವುದು ನಿನ್ನ ಹೊಣೆ.” ಢುಂಢಿಯ ಕಡೆಗೆ ತಿರುಗಿ ಪಾರ್ವತಿ ಹೇಳಿದಳು. “ಇವನು ವಜ್ರಾ. ಮಾತಂಗರ ವಜ್ರಾ. ಈ ಆನೆಗಳನ್ನು ಪಳಗಿಸುವುದು, ಅವುಗಳಿಗೆ ಹೋರಾಟವನ್ನು ಹೇಳಿಕೊಡುವುದು. ಇವನ ಕೆಲಸ. ಬಹಳ ಶಕ್ತಿಶಾಲಿ. ಇನ್ನುಮೇಲೆ ಇವನು ನಿನ್ನ ಗೆಳೆಯ.”

ಢುಂಢಿ ಮತ್ತು ವಜ್ರರ ನಡುವೆ ಸ್ನೇಹದ ನಗುವಿನ ವಿನಿಮಯವಾಯಿತು. ಸೋಮನಾಥದಲ್ಲಿ ಅವರಿಬ್ಬರೂ ಸಂಧಿಸಿದ್ದರೂ ಸ್ನೇಹಭಾವದ ಪರಿಚಯವು ಅಲ್ಲಾಗಿರಲಿಲ್ಲ.

ವಜ್ರನಂತೆಯೇ ಇತರರೂ ಆನೆಗಳನ್ನು ಅಲ್ಲಿ ನೋಡಿಕೊಳ್ಳುತ್ತಿದ್ದರು. ಅವರ ಅಲ್ಲಿನ ಚಟುವಟಿಕೆಗಳನ್ನು ನೋಡುತ್ತಾ ಮೂವರೂ ನಡೆದು ಬರುತ್ತಿರುವಾಗ, "ವಜ್ರಾ, ನನಗೆ ಆನೆಯ ಸೊಂಡಿಲೋ, ತೊಗಲೋ, ದಂತವನ್ನೋ ನಾನು ಹೋಗುವ ಮುನ್ನ ಕೊಡು ಅಥವಾ ಮನೆಗೆ ತಲುಪಿಸು." ಎಂದಳು ಪಾರ್ವತಿ.

"ಆಯಿತು ದೇವಿ." ಎಂದು ಹೇಳಿದ ವಜ್ರ.

ಢುಂಢಿ ಅದು ಏಕೆಂದು ಕೇಳಲು ಹೋದ ಆದರೆ ಕೇಳದೇ ಸುಮ್ಮನಾದ.

ಅವನು ಕೇಳಲಿರುವುದನ್ನು ಗಮನಿಸಿದ ಪಾರ್ವತಿ, "ಮ್, ಆನೆಯ ಸೊಂಡಿಲನ್ನಾಗಲಿ, ತೊಗಲನ್ನಾಗಲಿ, ದಂತವನ್ನಾಗಲಿ ಅರೆದು, ಬಟ್ಟಗಡಲೆಯ ಹಿಟ್ಟನ್ನು ಬೆರೆಸಿ ತಾವರೆಯಗಡ್ಡೆಗೆ ಲೇಪನ ಮಾಡಿ ಅದನ್ನು ಬಿತ್ತಿದರೆ, ಸುವಾಸನೆಯ ಹೂವುಗಳು ಅರಳುವವು. ನಮ್ಮ ಲತೋದ್ಯಾನದ ಕೊಳದಲ್ಲಿ ನಾಳೆ ಪಂಚಮಿ ಮತ್ತು ಧೂಮಾವತಿಯರು ತಾವರೆಯ ಗಡ್ಡೆಗಳನ್ನು ಬಿತ್ತುವಳು." ಎಂದಳು.

ಪಾರ್ವತಿ ಒಂದು ಆನೆಯ ಬಳಿ ನಿಂತಳು.

"ಇಲ್ಲಿ ನೋಡು." ಪಾರ್ವತಿ ಚಪ್ಪಾಳೆ ತಟ್ಟಿ ಆ ಆನೆಯನ್ನು ತನ್ನ ಮುಂದೆ ತಗ್ಗಿಸಿದಳು. ನಂತರ ಆ ಆನೆಯು ಮಡಿಸಿದ ಕಾಲಿನ ಮೇಲೆ ನಿಂತು, ಅದರ ಕಿವಿಯನ್ನು ಹಿಡಿದುಕೊಂಡು, ಆನೆಯ ಕೊರಳಿಗೆ ಕಟ್ಟಿದ್ದ ಹಗ್ಗವನ್ನು ಹಿಡಿದುಕೊಂಡು ಸರಸರನೆ ಏರಿ ಕುಳಿತಳು.

"ನಾನು ಮಾತಂಗಿ, ಮಾತಂಗ ಕನ್ಯೆ. ನಿನಗೆ ಗೊತ್ತಿರಲಿಲ್ಲವಲ್ಲವೇ? ಬಾ ಮೇಲೆ."

ಢುಂಢಿಯು ವಜ್ರನ ನೆರವಿನಿಂದ ಆನೆಯನ್ನು ಹತ್ತಿ ಪಾರ್ವತಿಯ ಹಿಂದೆ ಕುಳಿತ. ಅಂಕುಶವನ್ನು ಹಿಡಿದುಕೊಂಡು ಆನೆಯ ಕುಂಭಸ್ಥಳವನ್ನು ತಟ್ಟುತ್ತಾ ಮುನ್ನಡೆಸತೊಡಗಿದಳು.

ಅವಳು ಬಹಳ ಉತ್ಸಾಹದಿಂದ ತನ್ನ ಮಗನನ್ನು ಅಲ್ಲಿರುವ ಮಾತಂಗರಿಗೆ ಪರಿಚಯ ಮಾಡಿಸುತ್ತಾ ಗಜಸವಾರಿ ಮಾಡಿದಳು.

ಒಂದು ಕಡೆ ಪಾರ್ವತಿ ಮತ್ತು ಢುಂಢಿ ಆನೆಯಿಂದ ಕೆಳಗಿಳಿದರು. ಅಲ್ಲಿದ್ದ ಹದಿನೆಂಟು ಆನೆಗಳನ್ನು ತೋರಿಸಿದ ವಜ್ರ ಹೇಳಿದ. "ಅವುಗಳನ್ನು ಹೊಸದಾಗಿ ತಂಡಕ್ಕೆ ಸೇರಿಸಿಕೊಂಡಿದ್ದೇವೆ. ಇನ್ನೂ ಪಳಗಿಲ್ಲ."

"ಪ್ರಾರಂಭದಿಂದಲೇ ಜೊತೆಗಿದ್ದರೆ ಆನೆಗಳು ಸ್ನೇಹಿತರಾಗುತ್ತವೆ. ಗುಣೇಶ ಇಷ್ಟಪಟ್ಟರೆ ಯಾವುದಾದರೂ ಒಂದು ಆನೆಯನ್ನು ಪರಿಚಯಿಸು. ಅವನಿಗೆ ಅದರ ಮೇಲೆಯೇ ಪಳಗಲು ಹೇಳಿಕೊಡು." ಎಂದಳು ಪಾರ್ವತಿ.

"ನನಗೆ ಇಷ್ಟವಿದೆ. ಇವತ್ತೇ ಪರಿಚಯಿಸಿ." ಎಂದ ಢುಂಢಿ.

"ಪ್ರಾರಂಭಕ್ಕೆ ಒಂದು ಒಳ್ಳೆಯ ಆನೆಯನ್ನು ನೋಡು ವಜ್ರಾ." ಎಂದಳು ಪಾರ್ವತಿ.

"ಅವನೇ ಆಯ್ದುಕೊಳ್ಳಲಿ. ಒಂದು ವೇಳೆ ಅದು ಯೋಗ್ಯವಿಲ್ಲ ಎನ್ನುವುದಾದರೆ ನಾವು ಆಯ್ಕೆ ಮಾಡಿ ಕೊಡೋಣ." ಎಂದ ವಜ್ರ.

ಢುಂಢಿ ಆನೆಗಳ ಮುಂದೆ ನಡೆದ. ಎಲ್ಲಾ ಆನೆಗಳೂ ಅವನಿಗೆ ಪ್ರಿಯವೆನಿಸಿದವು. ಆದರೆ, ಪ್ರಾರಂಭಕ್ಕೆಂದು ತನ್ನನ್ನು ವಿಶೇಷವಾಗಿ ಆಕರ್ಷಿಸಿದ ಆನೆಯೊಂದನ್ನು ತೋರಿದ.

ಪಾರ್ವತಿ ಮತ್ತು ವಜ್ರರಿಬ್ಬರೂ ಚಪ್ಪಾಳೆ ತಟ್ಟಿ ಕೂಗಿದರು.

“ಭಲೇ ಭಲೇ!”

“ನೀನು ಒಳ್ಳೆಯ ಆನೆಯನ್ನೇ ಆರಿಸಿದ್ದಿ.” ಎಂದಳು ಪಾರ್ವತಿ.

ಢುಂಢಿ ತಾನು ಆರಿಸಿದ ಆನೆಯ ಕಡೆ ಅಭಿಮಾನದಿಂದ ನೋಡಿದ.

“ಈ ಆನೆಗೆ ರಾಜಯೋಗ್ಯವಾದ ಲಕ್ಷಣಗಳಿವೆ. ನೋಡು ಗುಹೇಶ, ಈ ಆನೆಗೆ ದೃಢವಾಗಿ ಉದ್ದವಾಗಿರುವ ಹೆಗಲಿದೆ. ಎತ್ತರವಾಗಿರುವ ಶಿರಸ್ಥಾನವಿದೆ. ವಿಸ್ತೀರ್ಣವಾಗಿರುವ ಎದೆಯ ಭಾಗವಿದೆ. ವರಾಹದಂತೆ ಮುಂದೆ ಉಬ್ಬಿರುವ ವಕ್ಷಸ್ಥಲ, ಅರ್ಧ ಅರಳಿರುವ ಹೂವಿನ ರೀತಿಯ ಕಣ್ಣುಗಳು, ದೃಢವಾಗಿರುವ ತೊಡೆಗಳು, ರೋಮವಿಲ್ಲದೇ ದೊಡ್ಡದಾಗಿರುವ ವೃಷಣಗಳು, ಉತ್ತಮವಾಗಿ ನೀಳವಾಗಿರುವ ಬಾಲ, ನೀಳವಾದ ದಂತಗಳು, ಉದ್ದುದ್ದಕ್ಕೆ ಇಡುವಂತಹ ಹೆಜ್ಜೆಗಳು, ದೃಢವಾಗಿರುವ ಪಾದತಳ, ಏಳುಹಸ್ತ ಪ್ರಮಾಣವುಳ್ಳ ಹೆಜ್ಜೆಯ ಉದ್ದ. ಇದು ರಾಜಲಕ್ಷಣದ ಆನೆ. ಬಹುಯೋಗ್ಯವಾದ ಆನೆ.” ಎಂದು ಆಯಾ ಭಾಗಗಳನ್ನು ತೋರಿಸಿದ ವಜ್ರ ವಿವರಿಸಿ ಹೇಳಿದ.

ಢುಂಢಿ ತನ್ನ ಆಯ್ಕೆಯ ಆನೆಯನ್ನು ಬಹು ಅಭಿಮಾನದಿಂದ ಮುಟ್ಟಿದ.

ಪಾರ್ವತಿಯು ಢುಂಢಿ ಮತ್ತು ವಯನದ ಇತರರಿಗೆ ಕೈಲಾಸದಲ್ಲಿರುವ ತಮ್ಮ ಮನೆಯಿಂದ ಅನತಿ ದೂರದಲ್ಲಿ ಮನೆಗಳನ್ನು ಕಟ್ಟಿಕೊಳ್ಳಲು ಅವಕಾಶ ನೀಡಿದಳು.

ಢುಂಢಿಯ ಸ್ನೇಹಿತರು ಮಾರ, ಧವನ, ಆಸುರ, ಕುಂಭಿ ಮತ್ತು ಇತರ ವಯನದ ಯುವಕರೂ ಹಿಮಾಲಯದ ಮಾತಂಗರ ಜೊತೆ ಸೇರಿಕೊಂಡು ಆನೆಗಳನ್ನು ಹಿಡಿಯುವ, ಅವುಗಳನ್ನು ಏರುವ, ಪಳಗಿಸುವ, ಹಾಗೂ ಅವುಗಳನ್ನು ಕಾಳಗಕ್ಕೆ ಉಪಯೋಗಿಸುವ ವಿದ್ಯೆಗಳನ್ನು ಕಲಿಯತೊಡಗಿದರು. ಪಾರ್ವತಿ ತಾನೇ ಕೆಲವು ಸಲ ತರಬೇತಿ ನಡೆಯುವ ಸ್ಥಳಕ್ಕೆ ಬಂದು ಅವಳೂ ಪಾಲ್ಗೊಳ್ಳುತ್ತಿದ್ದಳು. ಢುಂಢಿಗೆ ಮತ್ತು ಅವನ ಇತರ ಸ್ನೇಹಿತರಿಗೆ ಮಾತಂಗರು ಸಮರ ಕಲೆಗಳನ್ನೂ ಹೇಳಿಕೊಡುತ್ತಿದ್ದರು. ಈ ಮಧ್ಯೆ ರುದ್ರನು ಸರೋವರದಿಂದ ಕೈಲಾಸಕ್ಕೆ ಹಿಂದಿರುಗಿದ್ದು, ಪಾರ್ವತಿ ವಯನದ ಹುಡುಗರೊಂದಿಗೆ ಮಾತಂಗರೊಂದಿಗೆ ಉತ್ಸಾಹದಿಂದ ತನ್ನ ವೇಳೆಯನ್ನು ವ್ಯಯಿಸುವುದನ್ನು ಗಮನಿಸಿದ.

ಕೈಲಾಸ ಮಂಟಪದ ಹೊರಗಡೆ ಬಿಲ್ವ ಮರದ ಕೆಳಗೆ ಶಿವ ಮತ್ತು ಪಾರ್ವತಿಯರಿಬ್ಬರೂ ಪಗಡೆಯಾಡುತ್ತಾ ಕುಳಿತ್ತಿದ್ದಾಗ ವಜ್ರ, ಢುಂಢಿ ಹಾಗೂ ವಯನದ ಇತರ ಹುಡುಗರೂ ಅಲ್ಲಿಗೆ ಬಂದರು. ಎಲ್ಲರೂ ಅವರಿಬ್ಬರಿಗೆ ವಂದಿಸಿದರು.

ಪಾರ್ವತಿ ಅವರನ್ನು ತೋರಿಸಿ, “ಇವರನ್ನು ನೋಡಿ ಇಲ್ಲಿ.” ಎಂದಳು.

“ಇವರು ನಿನ್ನ ಶಕ್ತಿಗಣಕ್ಕೋ, ನಮ್ಮ ರುದ್ರಗಣಕ್ಕೋ...” ಎಂದು ಶಿವ ನಕ್ಕ.

"ನಮ್ಮ ಶಕ್ತಿಗಣಕ್ಕೆ ಪುರುಷರ ಅಗತ್ಯವಿಲ್ಲ. ಇವರು ಮಾತಂಗರು."

"ಭಲಾ ಭಲಾ....." ಎಂದ ಶಿವ ಆಡುವ ಆಟದಲ್ಲಿಯೇ ಆಸಕ್ತಿ ಹೊಂದಿದ್ದ. ದಾಳಗಳನ್ನು ಉರುಳಿಸುವಲ್ಲಿ ಮತ್ತು ಕಾಯಿಗಳನ್ನು ನಡೆಸುವಲ್ಲಿ ಅವನಿಗೆ ಇದ್ದಂತಹ ಆಸಕ್ತಿ ಆ ಹುಡುಗರನ್ನು ನೋಡುವುದರಲ್ಲಿ ಅವನಿಗೆ ಇರಲಿಲ್ಲ.

"ಇವನು ಗುಣೇಶ. ನನ್ನ ಮಗ." ಪಾರ್ವತಿ ಘುಂಢಿಯನ್ನು ತೋರಿ ಹೇಳಿದಳು.

"ಹೌದೇ?" ಎಂದು ರುದ್ರ ಘುಂಢಿಯ ಮುಖವನ್ನು ನೋಡಿ, "ಸರಿ, ದೇವಿ... ಹಾಗಾದರೆ, ನಿನ್ನ ತಾಯ್ತನದ ಹಸಿವೆ ನೀಗಿತೇ?" ಎಂದು ಕೇಳಿ ಆಟವನ್ನು ಮುಂದುವರಿಸಿದ.

"ಹೌದು." ಎಂದು ನಕ್ಕಳು ಪಾರ್ವತಿ.

"ಇನ್ನು ಮುಂದೆ ಮಿಥುನದ ಸಮಯದಲ್ಲಿ ಬೀಜವನ್ನು ಬಿಡುಗಡೆ ಮಾಡೆಂದು ಆಗ್ರಹ ಮಾಡುವುದಿಲ್ಲ ಎಂದಾಯ್ತು." ಎಂದು ನಕ್ಕ ರುದ್ರ.

ಪಾರ್ವತಿ ಏನೂ ಮಾತಾಡದೇ ದಾಳವನ್ನು ಹಾಕಿದಳು. ರುದ್ರ ಸಂಪೂರ್ಣವಾಗಿ ಆಡುವುದರಲ್ಲಿಯೇ ಆನಂದಿಸುತ್ತಿದ್ದ.

"ಗುಣೇಶ, ದನು ಹಸುಗಳ ಕೊಟ್ಟಿಗೆಯಲ್ಲಿ ಕೆಲಸ ಮಾಡುತ್ತಿದ್ದಾಳೆ. ನನಗೆ ಮೊಸರ ನಾಳಿಗಳು ಬೇಕೆಂದು ಅವಳಿಗೆ ಹೇಳು. ನೀನೂ ತೆಗೆದಿಕೊ." ಎಂದು ಹೇಳಿ ತನ್ನ ಆಟವನ್ನು ಮುಂದುವರಿಸಿದಳು.

ವಜ್ರ ಮತ್ತು ಇತರ ಹುಡುಗರು ವಯನದವರ ಕುಟೀರಗಳ ಕಡೆಗೆ ನಡೆದರು. ಘುಂಢಿ ಹಸುಗಳ ಕೊಟ್ಟಿಗೆಯ ಕಡೆಗೆ ನಡೆದ. ದನು ಕೊಟ್ಟಿಗೆಯ ಮುನ್ನವೇ ನೆಲದ ಮೇಲೆ ಒಂದಷ್ಟು ಆಯ್ದು ನೆಲದಲ್ಲಿ ಕೊಗ್ಗೆಸರನ್ನು ಮಾಡಲಾಗಿತ್ತು. ದನು ಮತ್ತು ಧೂಮಾವತಿ ಬಿದಿರಿನ ನಾಳಿಗಳಲ್ಲಿ ಕಾದಾರಿದ ಹಾಲನ್ನು ತುಂಬಿ, ಅದರ ಬಾಯನ್ನು ಬಿದಿರಿನ ಗಂಟಿನಿಂದಲೇ ಮಾಡಿರುವ ಮುಚ್ಚಳದಿಂದ ಮುಚ್ಚಿ, ಅದನ್ನು ಕೆಸರಿನೊಳಗೆ ಹೂತಿಡುತ್ತಿದ್ದರು. ಇದಕ್ಕೆ ಮುಂಚೆ ಹೂತಿಟ್ಟಿರುವುದನ್ನು ತೆಗೆದು ಪಕ್ಕಕ್ಕಿಟ್ಟಿದ್ದರು.

ಘುಂಢಿ ಅವರಲ್ಲಿಗೆ ಬಂದು, "ಅವರಿಗೆ ಮೊಸರಿನ ನಾಳಿಗಳು ಬೇಕಂತೆ." ಎಂದು ದನುವನ್ನು ಕೇಳಿದ.

"ಯಾರಿಗೆ?" ದನು ಕೆಲಸ ಮಾಡುತ್ತಲೇ ಕೇಳಿದಳು.

"ಅವರಿಗೆ.... ನಿಮ್ಮ ಒಡತಿಗೆ..."

ಘುಂಢಿಯ ಮಾತಿಗೆ ದನು ಮಾಡುತ್ತಿದ್ದ ಕೆಲಸವನ್ನು ನಿಲ್ಲಿಸಿ ಮೆಲ್ಲನೆ ಅವನ ಮುಖವನ್ನು ನೋಡಿದಳು.

"ನನ್ನ ಒಡತಿ ನಿನಗೆ ಏನು? ತಾಯಿ ಎಂದು ಹೇಳು. ಅವಳು ನಿನ್ನ ತಾಯಿ."

"ಹಾ, ಅವರಿಗೆ ಮೊಸರಿನ ನಾಳಿಗಳು ಬೇಕು." ಎಂದ ಘುಂಢಿ.

"ಇನ್ನೂ ಅಭ್ಯಾಸವಾಗಬೇಕು. ಹೊಸತಲ್ಲವೇ?" ಎಂದು ನಸುನಕ್ಕ ಧೂಮಾವತಿ ಅವನ ಕೈಗೆ ಆರು ಮೊಸರಿನ ನಾಳಿಗಳನ್ನು ಕೊಟ್ಟು, "ಗುಣೇಶ, ಇದು ನಿನಗೆ." ಎಂದು ಒಂದು ನಾಳಿಯ ಮುಚ್ಚುಳವನ್ನು

ತೆಗೆದು, ಅದರಿಂದ ಬಿದಿರಿನ ನಾಳಿಯಂತೆಯೇ ಘನವಾಗಿರುವ ಗಟ್ಟಿ ಮೊಸರನ್ನು ತೆಗೆದು ಅವನ ಕೈಗಿತ್ತಳು. ಅದನ್ನು ತಿನ್ನುತ್ತಾ ಢುಂಢಿ ರುದ್ರ ಮತ್ತು ಪಾರ್ವತಿಯರು ಪಗಡೆಯಾಟವಾಡುತ್ತಿದ್ದ ಸ್ಥಳಕ್ಕೆ ನಡೆದ. ಅತ್ತಿಯ ಮರದ ಕೆಳಗೆ ಪಾರ್ವತಿಯೊಬ್ಬಳೇ ಕುಳಿತಿದ್ದಳು. ಕೆಂದುಬಣ್ಣದ ಎತ್ತರವಾದ ಗೂಳಿಯ ಮೇಲೆ ಕುಳಿತಿದ್ದ ರುದ್ರ ತನ್ನ ಹಿಂಬಾಲಕರೊಂದಿಗೆ ಹೋಗುತ್ತಿದ್ದದ್ದು ಕಾಣಿಸಿತು.

ಅವಳ ತೀರಾ ಸನಿಹಕ್ಕೆ ಬಂದು ಮೊಸರಿನ ನಾಳಿಗಳನ್ನು ಅವಳ ಕೈಗೆ ಕೊಡುವಾಗ ಅವಳ ಕಣ್ಣಲ್ಲಿ ನೀರಿದ್ದದ್ದು ಕಾಣಿಸಿತು. ಆದರೆ ಅದನ್ನು ಗಮನಿಸದವನಂತೆ ನಾಳಿಗಳನ್ನು ಮುಂದೆ ಚಾಚಿ, “ತೆಗೆದುಕೊಳ್ಳಿ.” ಎಂದ.

“ಬೇಡ ಗುಣೇಶ.” ಎಂದು ಮುಖವನ್ನು ಪಕ್ಕಕ್ಕೆ ತಿರುಗಿಸಿಕೊಂಡ ಪಾರ್ವತಿ “ನೀನು ತಿನ್ನು.” ಎಂದಳು.

“ಬೇಲದ ಹಣ್ಣಿನ ಸ್ವಾದದಲ್ಲಿ ಶಿಖರಿಣಿ ಮಾಡಿದ್ದೇನೆ. ಅದಕ್ಕೆ...” ಏನನ್ನೋ ಹೇಳುತ್ತಾ ಬಂದ ಪಂಚಮಿ ಪಾರ್ವತಿಯು ಕಳಾಹೀನವಾಗಿರುವುದನ್ನು ನೋಡಿ, “ಏಕೆ ಒಡತಿ? ಏನಾಯ್ತು ದೇವಿ?” ಎಂದು ಗಾಬರಿಯಿಂದ ಕೇಳಿದವಳು ದೂರದಲ್ಲಿ ತನ್ನ ಗಣಗಳೊಡನೆ ಕೇಕೆ ಹಾಕಿಕೊಂಡು ಗೂಳಿಯ ಮೇಲೆ ಹೋಗುತ್ತಿದ್ದ ರುದ್ರನ ಕಂಡು, “ಮತ್ತೆ ಜಗಳವೇ?” ಎಂದು ಕೇಳಿದಳು.

ನಿಟ್ಟುಸುರುಬಿಟ್ಟ ಪಾರ್ವತಿಯು ಒಂದು ಶುಷ್ಕನಗೆಯನ್ನಿತ್ತು, “ಅದೇನು ಹೊಸತೇ ಧೂಮಾ.” ಎಂದು ಹೇಳಿದ ಅವಳ ಕಣ್ಣಿಂದ ಹೆಪ್ಪುಗಟ್ಟಿದ್ದ ನೀರು ಧುಮುಕಿತು. ಅದನ್ನು ನೋಡಿದ ಢುಂಡಿಗೆ ತಟ್ಟನೆ ಅದನ್ನು ವರಸಬೇಕೆನ್ನಿಸಿತು. ಅಳಬೇಡ ನಾನಿದ್ದೇನೆ ಎಂದು ತಬ್ಬಿಕೊಂಡು ಹೇಳುವ ಮನಸ್ಸಾಯಿತು. ಆದರೆ ಏನನ್ನೂ ಮಾಡಲಿಲ್ಲ. ಬರಿದೇ ನೋಡುತ್ತಿದ್ದ. ಹಾಗೆ ಕಣ್ಣಿಂದ ಬಂದ ನೀರನ್ನು ವರೆಸಿಕೊಂಡು ಢುಂಢಿಯ ಕಡೆ ನೋಡಿ ನಕ್ಕ ಪಾರ್ವತಿ, “ಗುಣೇಶ, ನಿನಗೆ ಪಗಡೆಯಾಡಲು ಬರುವುದೇ?” ಎಂದು ಕೇಳಿದಳು.

ಇಲ್ಲವೆಂಬಂತೆ ತಲೆಯಾಡಿಸಿದ.

“ಬಾ, ಕುಳಿತಿಕೋ.... ನಾನು ನಿನಗೆ ಹೇಳಿಕೊಡುತ್ತೇನೆ.” ಎಂದು ಪಾರ್ವತಿ ಆಡುವುದಕ್ಕೆ ಸಿದ್ಧವಾದಳು. ಢುಂಢಿ ಪಗಡೆಯ ಹಾಸುಪಟವನ್ನೂ, ಪಗಡೆಯ ಕಾಯಿಗಳನ್ನೂ, ಅವಳ ಕೈಗಳಲ್ಲಿರುವ ದಾಳಗಳನ್ನೂ ನೋಡುತ್ತಾ ಎದುರಿಗೆ ಕುಳಿತ.

ಪಾರ್ವತಿಯು ದಿನದಿನವೂ ಢುಂಢಿಯ ಜೊತೆಯಲ್ಲಿ ತನ್ನ ಬೇಸರಿಕೆಯನ್ನು ಮರೆಯುತ್ತಾ ಬಂದಳು. ಅದರಲ್ಲೂ ಢುಂಢಿ, ವಜ್ರ, ಮಾರ, ಆಸುರ, ಕುಂಭಿ ಮತ್ತು ಧವನರ ಜೊತೆ ಸೇರಿದರಂತೂ, ಅವಳ ಚೈತನ್ಯಕ್ಕೆ ಎಣೆಯೇ ಇಲ್ಲ. ಅವರ ಜೊತೆ ಕಾಡುಗಳಲ್ಲಿ ಸುತ್ತುವುದೇನು, ಆನೆಗಳೊಂದಿಗೆ ಆಡುವುದೇನು, ಸಮರ ಕ್ರೀಡೆ ಆಡುವುದೇನು; ಅವಳ ಪ್ರತಿದಿನದ ಬದುಕಿಗೇ ಒಂದು ಹೊಸ ತಿರುವು ಸಿಕ್ಕಿತ್ತು. ಶಕ್ತಿಗಣದ ಸ್ತ್ರೀಯೋಧರಿಗೂ ಈ ಹುಡುಗರು ಅಚ್ಚುಮೆಚ್ಚು. ಅವರೊಂದಿಗೆ ಸಮರಾಭ್ಯಾಸ ಮಾಡಲು ಕಾಯುತ್ತಿದ್ದರು. ಗಟ್ಟಿಮುಟ್ಟಾದ, ಒರಟಾದ ಆ ಹುಡುಗರೊಂದಿಗೆ ಹೋರಾಡಲು ಅವರಿಗೆ ಆನಂದವಾಗುತ್ತಿತ್ತು. ಅವರಿಗೂ ಒಳ್ಳೆಯ ಅಭ್ಯಾಸವಾಗುತ್ತಿತ್ತು.

ಅದೊಂದು ದಿನ ಪಾರ್ವತಿ ಢುಂಢಿಯನ್ನು ತನ್ನ ಎದುರಿಗೆ ಕೂಡಿಸಿಕೊಂಡು ದನುವನ್ನು ಕರೆದಳು.

ಎಂದಿನಂತೆ ಏನೋ ತಿನ್ನಲೋ ಅಥವಾ ಕುಡಿಯಲೋ ಎಂದುಕೊಂಡಿದ್ದ ಢುಂಢಿಗೆ ಬೇರಿನ್ನೇನೋ ಕಂಡಿತು.

ದನುವಿನ ಕೈಯಲ್ಲಿದ್ದ ಎಣ್ಣೆಯ ಬಟ್ಟಲಿನಲ್ಲಿ ನೆನೆಸಿದ್ದ ತಾಯಿತವೊಂದನ್ನು ಅವನ ಕುತ್ತಿಗೆಗೆ ಕಟ್ಟಿದಳು.

"ಏನಿದು?" ಢುಂಢಿ ಕೇಳಿದ.

"ತಾಯಿತ." ಪಾರ್ವತಿ ಅವನ ಕುತ್ತಿಗೆಗೆ ಕಟ್ಟಿದ ತಾಯಿತವನ್ನು ಎರಡೂ ಕೈಗಳಲ್ಲಿ ಹಿಡಿದುಕೊಂಡು ಏನನ್ನೋ ಜಪಿಸಿದಳು. ಅವಳ ವಿಧಿ ವಿಧಾನಗಳು ಮುಗಿದ ಮೇಲೆ ಹೇಳಿದಳು.

"ಇದು ಖದಿರ ಮತ್ತು ಅಶ್ವಥಮರದ ತಾಯಿತ. ಇಂಗುಡಿ ಎಣ್ಣೆಯಲ್ಲಿ ಅದ್ದಿ ಇದನ್ನು ಬಳಸಿದರೆ ಶತ್ರುಗಳಿಗೆ ನಡುಕವುಂಟಾಗುತ್ತದೆ."

ಢುಂಢಿ ಮೆಲ್ಲನೆ ನಕ್ಕ. ಅವಳ ಅಭಿಮಾನಕ್ಕೆ ಅವನ ಎದೆ ಉಬ್ಬಿತು. ಆ ತಾಯಿತವನ್ನು ಅಭಿಮಾನದಿಂದ ತನ್ನ ಕೈಯಲ್ಲಿ ಹಿಡಿದ.

ಧೂಮಾವತಿ  ಒಳಗೆ ಪ್ರವೇಶಿಸಿದಳು.

"ಒಡತಿ, ತಮ್ಮನ್ನು ನೋಡಲು ಆರ್ಯ ಮುಖಂಡರು, ಇಂದ್ರಾದಿ ದೇವತೆಗಳು ಮತ್ತು ಋಷಿಗಳು ಬಂದಿದ್ದಾರೆ."

"ಬಿಲ್ವ ಮರದ ನೆರಳಿನಲ್ಲಿ ಅವರು ವಿಶ್ರಮಿಸಲು ವ್ಯವಸ್ಥೆ ಮಾಡು. ಬರುತ್ತೇನೆ." ಎಂದ ಪಾರ್ವತಿ ಢುಂಢಿಯ ಕೆನ್ನೆಯನ್ನು ತಟ್ಟಿ, "ದನುವಿನೊಂದಿಗೆ ಮಾತನಾಡುತ್ತಿರು. ಬಂದುಬಿಡುತ್ತೇನೆ." ಎಂದು ಹೊರಗೆ ಹೋದಳು.

"ನನಗೆ ಕೊಟ್ಟಿಗೆಯಲ್ಲಿ ಕೆಲಸವಿದೆ. ಬಾ, ಅಲ್ಲಿಗೇ ಹೋಗೋಣ. ಕೆಲವು ತುಡುಗು ಬಸವಗಳಿವೆ ಅವುಗಳನ್ನು ಎಳೆದು ಕಟ್ಟಲು ಒಬ್ಬ ನಿನ್ನಂತಹ ಶಕ್ತಿವಂತ ಬೇಕು."

ದನುವಿನೊಡನೆ ಕೊಟ್ಟಿಗೆಗೆ ಹೋದ ಢುಂಢಿ ಅವಳ ನಿರ್ದೇಶನದಂತೆ ದೊಡ್ಡ ಡುಬ್ಬದ, ಗಡುಸಾಗಿ ಬೆಳೆದಿರುವ ಅರ್ಧ ಚಂದ್ರಾಕೃತಿಯ ಕೊಂಬುಗಳುಳ್ಳ ಬಸವಗಳನ್ನು ಎಳೆದೆಳೆದು ಕಟ್ಟುತ್ತಿದ್ದ. ಹಿಡಿತಕ್ಕೆ ಸಿಕ್ಕದೇ ಎತ್ತಲೆತ್ತಲೋ ನುಗ್ಗಲು ಯತ್ನಿಸುತ್ತಿದ್ದ ಆ ವೃಷಭಗಳನ್ನು ತಹಬಂದಿಗೆ ತರಲು ಪ್ರಯತ್ನ ಮಾಡುತ್ತಾ ಢುಂಢಿ ಕೇಳಿದ.

"ಇವು ಹೆಚ್ಚಾಗಿ ಪಳಗಿರುವಂತೆ ಕಾಣುವುದಿಲ್ಲ. ಇವುಗಳನ್ನೂ ಕೂಡ ಆನೆಗಳ ಹಾಗೆ ಪಳಗಿಸಿದರೆ ಒಳ್ಳೆಯ ಆಟಕ್ಕೆ ಒದಗುತ್ತವೆ." ಎಂದ ಢುಂಢಿ.

"ನಿನಗೆ ಇಷ್ಟವಾದರೆ, ಹಾಗೇ ಮಾಡು." ಎಂದಳು ದನು.

“ಅವಳಿಗೆ ಈ ವೃಷಭಗಳಲ್ಲಿ ಆಸಕ್ತಿ ಇಲ್ಲವೇ?”

“ಯಾರಿಗೆ?”

“ನಿನ್ನ ಒಡತಿಗೆ.”

“ಏಕೆ?” ದನು ತಾನು ಮಾಡುತ್ತಿದ್ದ ಕೆಲಸವನ್ನು ನಿಲ್ಲಿಸಿ ಅವನತ್ತ ಗಂಭೀರವಾಗಿ ನೋಡಿದಳು. “ನನ್ನ ಒಡತಿ? ನಿನ್ನ ತಾಯಿ! ಅವಳನ್ನು ನಿನ್ನ ತಾಯಿ ಎಂದು ಕರೆ.” ದನು ಢುಂಢಿಯನ್ನು ತನ್ನತ್ತ ತಿರುಗಿಸಿಕೊಂಡು ಗಂಭೀರವಾಗಿ ಹೇಳಿದಳು. “ಢುಂಢಿ, ಅವಳು ನಿನ್ನ ಮಗನೆಂದು ಸ್ವೀಕರಿಸಿದ್ದಾಳೆ.”

ಢುಂಢಿ ತಲೆ ತಗ್ಗಿಸಿ ತನ್ನ ಕೆಲಸದ ಕಡೆ ಗಮನ ಹರಿಸಿದ.

“ಅದನ್ನು ಅಲ್ಲಿ ಬಿಡು.” ದನು ವೃಷಭವೊಂದನ್ನು ಕಟ್ಟುತ್ತಿದ್ದ ಹಗ್ಗವನ್ನು ಅವನ ಕೈಯಿಂದ ಬಿಡಿಸಿಕೊಂಡು ತಾನೇ ಕಟ್ಟುತ್ತಾ ಹೇಳಿದಳು. “ಢುಂಢಿ, ನೀನು ಬಂದ ಮೇಲೆ ನಮ್ಮ ಒಡತಿಯ ಮುಖದಲ್ಲಿ ಕೊಂಚ ನಗು ಕಾಣುತ್ತಿದೆ. ಈಗ ಅವಳು ಸಂತೋಷದಿಂದ ನಿಮ್ಮ ಜೊತೆಯಲ್ಲೆಲ್ಲಾ ಓಡಾಡುತ್ತಿದ್ದಾಳೆ. ತಾಯ್ತನವೇ ಅವಳ ಬಹು ದೊಡ್ಡ ಆಸೆಯಾಗಿತ್ತು. ತಾನು ಮಗುವೊಂದರ ತಾಯಿಯಾಗಬೇಕು ಎಂದು ಅದೆಷ್ಟು ಪರಿತಪಿಸಿದ್ದಾಳೆ ಗೊತ್ತೇ? ಈ ನಮ್ಮ ಶಿವ, ರುದ್ರ, ಶಂಕರ.... ಅವನಿಗೆ ಅವನದೇ ಆದ ಅವನ ತಾಂತ್ರಿಕ ಸಾಧನೆ. ಅವನಿಗೂ ಏನೂ ಹೇಳಲಾಗುವುದಿಲ್ಲ. ಅವನ ರೀತಿಯೇ ವಿಶಿಷ್ಟ. ಅವನು ಯೋಗಿ. ಕಾಪಾಲಿಕ. ಭೈರವತಾಂತ್ರಿಕ. ಹಟಯೋಗಿ. ಅವನು ಕುಟುಂಬ, ಮದುವೆ, ಹೆಂಡತಿ ಮಕ್ಕಳು ಈ ವಿಷಯಗಳಿಗೆಲ್ಲಾ ಸಿಗುವವನಲ್ಲ. ಅವರಿಗೆ ಅವೆಲ್ಲಾ ಇಲ್ಲ. ಆದರೆ, ಆರ್ಯರು, ಈ ದೇವತೆಗಳು ತಮ್ಮ ಒಳಿತಿಗಾಗಿ, ತಮ್ಮ ಸ್ವಾರ್ಥಕ್ಕೆ ಅವನನ್ನು ತಪಸ್ಸಿನಿಂದೆಳೆದು ಚಿಕ್ಕ ವಯಸ್ಸಿನ ಪಾರ್ವತಿಯೊಂದಿಗೆ ಮದುವೆಯಾಗುವಂತೆ ವ್ಯವಸ್ಥಿತ ತಂತ್ರ ಮಾಡಿದರು. ಪಾಪದ ಈಕೆ, ರಾಜಕುಮಾರಿ, ಹಿಮವಂತನ ಮಗಳು, ಬುಡಕಟ್ಟಿನವರೇ ಆದರೂ ಮದುವೆ, ಕುಟುಂಬ, ಹೆಂಡತಿ ಮಕ್ಕಳು ಎಂದು ಬಾಳುವ ಶಿಷ್ಟರಾದ ಜನ. ಈ ಸ್ಮಶಾನವಾಸಿಗೆ, ಹೆಂಡಕುಡುಕನಿಗೆ, ದಿಗಂಬರನಿಗೆ ಹೆಣ್ಣೇ ಕೊಡುವುದಿಲ್ಲ ಎಂದು ರಾಣಿ ಮೇನಾವತಿ ಹಟ ಮಾಡಿಕೊಂಡು ಕುಳಿತಿದ್ದಳು. ಆದರೆ, ದೇವತೆಗಳು ಹೇಗೋ ಅವಳನ್ನು ಒಪ್ಪಿಸಿದ್ದರು. ಜೊತೆಗೆ ಈ ಪಾರ್ವತಿಯೂ ರುದ್ರನ ಸೆಳೆತಕ್ಕೆ ಸಿಕ್ಕಿದ್ದಳು. ಹಟ ಮಾಡಿಕೊಂಡು ಮದುವೆ ಮಾಡಿಕೊಂಡಳು. ಆದರೆ, ಈಗ ಈ ರುದ್ರ, ವೀರ್ಯದಾನವೇ ಮಾಡುವುದಿಲ್ಲ. ಬೀಜದಾನ ಮಾಡದೇ ಅವನ ತಾಂತ್ರಿಕ ಸಾಧನೆಯಂತೆ ಬರೀ ಸಂಭೋಗ ಮಾಡಿ ಹೊರಟುಹೋಗುತ್ತಾನೆ. ಅವನಿಂದ ವೀರ್ಯದಾನ ಪಡೆದು ತಾಯಿಯಾಗಬೇಕೆಂದು ಬಹು ಪ್ರಯತ್ನ ಮಾಡಿದಳು. ಆದರೆ, ಅದು ಆಗಲೇ ಇಲ್ಲ. ಈಗ ನಿನ್ನ ತನ್ನ ಮಗನೆಂದು ಸ್ವೀಕರಿಸಿ, ಹೆತ್ತು ತಾಯಿಯಾಗದಿದ್ದರೂ, ಸಾಕಿ ತಾಯಿಯಾಗುತ್ತಾ ತನ್ನ ತಾಯ್ತನ ಪೂರ್ತಿ ಮಾಡಿಕೊಳ್ಳುತ್ತಿದ್ದಾಳೆ. ಅವಳಿಗೆ ನಿರಾಸೆ ಮಾಡಬೇಡ ಢುಂಢಿ. ಅವಳು ಈಗಾಗಲೇ ಸಾಕಷ್ಟು ಅತ್ತಿದ್ದಾಳೆ.” ದನುವಿನ ಕಣ್ಣಲ್ಲಿ ನೀರೂರಿತ್ತು.

“ಬೇರೆ ಯಾರಿಂದಲಾದರೂ ಬೀಜಗಳನ್ನು ಪಡೆಯಬೇಕಿತ್ತು!” ಢುಂಢಿ ಹೇಳಿದ.

“ಪ್ರಳಯಾಂತಕ ರುದ್ರನ ಹೆಂಡತಿಯ ಯೋನಿಯೊಳಗೆ ಬೀಜ ಸುರಿಸಲು ಮುಂದೆ ಬರುವ ಎದೆಗಾರಿಕೆ ಯಾರಿಗಿದೆ? ಹೂಂ....” ದನು ತನ್ನ ಕೆಲಸವನ್ನು ಮುಂದುವರಿಸುತ್ತಾ ಹೇಳಿದಳು. “ಹಾಗೆ ಯಾರಾದರೂ ಬಂದರೂ ಪಾರ್ವತಿಗೆ ಅಂತಹ ಆಸಕ್ತಿಯಿಲ್ಲ. ಅವಳಿಗೆ ವೀರ್ಯದಾನ ಬೇಕೆಂದಿದ್ದರೆ ಅವನಿಂದಲೇ

ಆಗಬೇಕು. ಅದಿರಲಿ, ಢುಂಢಿ, ನೀನೂ ಅವಳ ಕಣ್ಣಿಂದ ನೀರು ತರಬೇಡ. ಅವಳಿಗೆ ನಿನ್ನಿಂದ ಒಂದು ಬಗೆಯ ನೆಮ್ಮದಿ ಸಿಗುತ್ತಿದೆ. ಅದನ್ನು ಎಂದೂ ಹಾಳುಮಾಡಬೇಡ."

ಪಾಪದ ಪಾರ್ವತಿಗೆ ಮರುಗಿದ ಢುಂಢಿ.

ಆ ಸಂಜೆ ಒಬ್ಬನೇ ಬಂಡೆಗಳ ಮೇಲೆ ಕುಳಿತುಕೊಂಡು ದೂರದಲ್ಲಿ ಹಿಮದ ಮುಸುಕಲ್ಲಿರುವ ಶಿಖರಗಳು ನೇಸರದ ರಂಗನ್ನು ಹಚ್ಚಿಕೊಂಡು ಕ್ರಮೇಣ ಮಬ್ಬಾಗುತ್ತಿರುವುದನ್ನೇ ನೋಡುತ್ತಾ ಅದೆಷ್ಟೋ ಹೊತ್ತು ಕುಳಿತಿದ್ದ. ಅವನನ್ನು ಹುಡುಕುತ್ತಾ ಆಸುರ ಬಂದ.

"ಬಾ ಢುಂಢಿ, ಇಲ್ಲೇನು ಮಾಡುತ್ತಿದ್ದೀಯ?" ಎಂದು ಕರೆದ.

"ನೀನು ಹೋಗು. ನಾನು ಬರುತ್ತೇನೆ." ಎಂದು ಆಸುರನನ್ನು ಕಳುಹಿಸಿ, ಢುಂಢಿ ಅಲ್ಲಿಯೇ ಉಳಿದ. ಅವನ ಕಣ್ಣ ಮುಂದೆ ನಗುನಗುತ್ತಾ ಆನೆಯನ್ನೇರುವ ಪಾರ್ವತಿಯ ಮುಖವೇ ಕಾಣುತಲಿದ್ದದ್ದು. ಕೈಲಾಸದ ಒಳಗೆ ಅದೆಷ್ಟು ಅವಳು ಕಣ್ಣೀರು ಸುರಿಸಿರಬಹುದೆಂದು ಅವನಿಗೆ ಕಲ್ಪಿಸಿಕೊಳ್ಳಲೂ ಸಾಧ್ಯವಾಗಲಿಲ್ಲ. ಅವಳ ಕಣ್ಣೀರೆಲ್ಲಾ ಕೈಲಾಸದಲ್ಲಿ ಹಿಮವಾಗಿ ಗಡ್ಡೆಗಟ್ಟಿದೆ ಎನ್ನಿಸಿತು.

"ಹೇ ಗುಣೇಶ..." ಪಾರ್ವತಿ ಕೂಗಿದ್ದು ಅಲೆ ಅಲೆಯಾಗಿ ತೇಲಿಬಂತು. ದನಿ ಬಂದ ಕಡೆ ನೋಡಿದ ಢುಂಢಿ. "ಹೇ ಗುಣೇಶ...." ಪಾರ್ವತಿ ಎರಡನೇ ಬಾರಿ ಕೂಗಿದಾಗ, "ಹಾ ಬಂದೇ..." ಎಂದು ಕೂಗಿದ. ಪಾರ್ವತಿ ಬಂಡೆಯೊಂದರ ಮೇಲೆ ನಿಂತು ಕೂಗುತ್ತಿದ್ದ ಆಕೃತಿ ಕಾಣಿಸಿತು. ಢುಂಢಿ ಮೇಲೆದ್ದು ಅವಳು ನಿಂತಲ್ಲಿಗೆ ಓಡಿದ.

"ಗುಣೇಶ, ಇಲ್ಲೇನು ಮಾಡುತ್ತಿದ್ದೆ ಮಗನೇ..... ಬಾ.... ಪಂಚಮಿ ಮೋದಕಗಳನ್ನು ಮಾಡಿದ್ದಾಳೆ." ಪಾರ್ವತಿ ಗುಣೇಶನನ್ನು ಕರೆದುಕೊಂಡು ಮನೆಯ ಕಡೆಗೆ ನಡೆದಳು.

ವಯನದ ಹೆಂಗಸರೂ ಮತ್ತು ಹುಡುಗರೂ ಅಲ್ಲಿ ಸೇರಿದ್ದರು.

ಹೆಂಗಸರೊಂದಿಗೆ ನಗುನಗುತ್ತಾ ಮಣ್ಣಿನ ತಟ್ಟೆಗಳಲ್ಲಿ ಮೋದಕಗಳನ್ನು ಬಡಿಸುತ್ತಿದ್ದ ಪಾರ್ವತಿಯನ್ನು ಪ್ರೀತಿ ತುಂಬಿದ ಕಣ್ಣುಗಳಿಂದ ಢುಂಢಿ ನೋಡುತ್ತಿದ್ದ. ಆಕೆಯ ನಗುವು ಹೀಗೇ ಇರಲಿ ಎಂದು ಹಾರೈಸಿದ. ಒಂದು ತಟ್ಟೆಯಲ್ಲಿ ಮೋದಕಗಳನ್ನು ತುಂಬಿ, "ಗುಣೇಶ, ಇಗೋ." ಎಂದು ಢುಂಢಿಯ ಕೈಗೆ ಕೊಟ್ಟಳು ಪಾರ್ವತಿ. ಅವಳು ಕೊಟ್ಟ ಮೋದಕಗಳಲ್ಲಿ ಒಂದನ್ನು ಕೈಗೆತ್ತಿಕೊಂಡ ಢುಂಢಿಗೆ ಅವಳಿಂದ ತನ್ನ ಕಣ್ಣುಗಳನ್ನು ಕೀಳಲಾಗಲಿಲ್ಲ.

'ಹೇ ಪಾರ್ವತಿ, ನಿನ್ನ ತಾಯ್ತನದ ಬಯಕೆ ನಾನು ಈಡೇರಿಸಲಾಗದೇ? ನಾನು ಸಿದ್ಧನಿದ್ದೇನೆ ನಿನಗೆ ಬೀಜಗಳನ್ನು ಕೊಡಲು. ತಗೋ ಪಾರ್ವತಿ, ತಗೋ.... ನಗುನಗುತ್ತಿರು... ನನ್ನಿಂದ ಬೀಜಗಳನ್ನು ಪಡೆದಿಕೋ. ನನಗೆ ಯಾರ ಭಯವೂ ಇಲ್ಲ. ನೀನೂ ಹೆದರಬೇಡ. ನನ್ನ ವೀರ್ಯದಾನವನ್ನು ತೆಗೆದಿಕೋ ಹೇ ದೇವಿ.' ಎಂದು ಢುಂಢಿಯ ಮನಸ್ಸು ಕೂಗಿ ಹೇಳುತ್ತಿತ್ತು.

"ದೇವಿ, ಅಲ್ಲಿ ನೋಡಿ." ಪಂಚಮಿ ಪಾರ್ವತಿಯ ಗಮನವನ್ನು ಢುಂಢಿಯ ಕಡೆ ಹರಿಸಿದಳು.

ಮೌನವಾಗಿ ಢುಂಢಿಯು ಪಾರ್ವತಿಯ ಕಡೆಗೆ ಮೋದಕವನ್ನು ಕೊಡುವಂತೆ ಹಿಡಿದಿದ್ದ.

“ತನ್ನ ತಾಯಿಯ ಬಗ್ಗೆ ಅವನಿಗೆಷ್ಟು ಅಕ್ಕರೆ, ನೋಡಿ ದೇವಿ.” ಧೂಮಾವತಿ ಹೇಳಿದಳು.

ಪಾರ್ವತಿಯು ನಗುತ್ತಾ ಅವನ ಕೈಯಿಂದ ಮೋದಕವನ್ನು ಪಡೆದು ಸೇವಿಸಿದಳು.

‘ದೇವಿ, ನಾನು ನಿನಗೆ ವೀರ್ಯ ನೀಡುವೆ. ನನ್ನಿಂದ ಬೀಜಗಳನ್ನು ತೆಗೆದಿಕೋ. ನಾನು ಯಾರಿಗೂ ಹೆದರುವುದಿಲ್ಲ. ನಿನ್ನ ಸಮ್ಮತಿಗೆ ಮಾತ್ರ ಕಾಯುವೆ.’ ಮನದೊಳಗೆ ಒಂದೇ ಸಮನೆ ಉಸುರಿಕೊಳ್ಳುತ್ತಿದ್ದ ಢುಂಢಿ ಮತ್ತೊಂದು ಮೋದಕವನ್ನು ಪಾರ್ವತಿಯ ಮುಂದೆ ಹಿಡಿದಿದ್ದ.

“ಗುಣೇಶ, ನೀನು ಸೇವಿಸು. ನನಗಿವೆ ಇಲ್ಲಿ.” ಎಂದು ನಕ್ಕ ಪಾರ್ವತಿ ಅವನಿಂದ ಆ ಮೋದಕವನ್ನೂ ಪಡೆದು ಸೇವಿಸಿದಳು.

“ಗುಣೇಶ ಹೆಚ್ಚು ಮಾತಾಡುವುದಿಲ್ಲ.” ಪಂಚಮಿ ಹೇಳಿದಳು.

“ಮೌನಿ, ಆದರೆ, ಅವನು ತನ್ನ  ಕಣ್ಣುಗಳಿಂದ ಏನೋ ಹೇಳುತ್ತಿರುತ್ತಾನೆ.” ಎಂದಳು ಧೂಮಾವತಿ.

“ಅವರು ಮೌನಿಗಳಲ್ಲ ಧೂಮಾವತಿ, ಅವರ ಮನಸ್ಸಿನಲ್ಲಿ ನಾನಾ ವಿಚಾರಗಳು ಹುಟ್ಟುತ್ತಿರುತ್ತವೆ. ಹೊರಗೆ ಹೆಚ್ಚು ಮಾತಾಡುತ್ತಾ ಗಲಾಟೆ ಮಾಡುವವನು ಒಳಗೆ ಅಷ್ಟೇನೂ ಇಟ್ಟುಕೊಳ್ಳದೇ ಬರಿದಾಗಿರುತ್ತಾನೆ. ಆದರೆ, ಹೊರಗೆ ಯಾವಾಗಲೂ ಮೌನವಾಗಿರುವವರು ಒಳಗೆ ದೊಡ್ಡ ದೊಡ್ಡ ಗಲಾಟೆಗಳನ್ನೇ ತುಂಬಿಕೊಂಡಿರುತ್ತಾರೆ ಎಂಬುದು ನನ್ನ ವಿಚಾರ. ನೀನೇನು ಹೇಳುವೆ ಗುಣೇಶ.” ಎಂದು ಪಾರ್ವತಿ ಢುಂಢಿಯ ಕಡೆ ತಿರುಗಿ ಕೇಳಿದಳು. ಢುಂಢಿ ಅದಕ್ಕೇನೂ ಹೇಳದೇ ಬರಿದೇ ನಸು ನಕ್ಕ.

*

ಢುಂಢಿ ಗಣಪತಿಯ ಮುಖವನ್ನೇ ನೋಡುತ್ತಿದ್ದ ಶಂಬರನಿಗೆ ಪಕ್ಕದಲ್ಲಿಯೇ ಮಹಾಶಂಖನಾದ ಕೇಳಿ ನಿದ್ರೆಯಿಂದ ಎಚ್ಚರವಾದವನಂತೆ ಬೆಚ್ಚಿ ಮೇಲೆದ್ದ. ವೈದಿಕಬ್ರಾಹ್ಮಣರ ಗುಂಪೊಂದು ಶಂಖನಾದ ಮಾಡಿ, ಗಂಟೆಗಳನ್ನು ಬಾರಿಸುತ್ತಾ ಗಣಪತಿಗೆ ಆಯುಷ್ಮಂತ್ರವನ್ನು ಹೇಳುತ್ತಿದ್ದರು. ಶಂಬರ ಅಲ್ಲಿಂದ ಮೇಲೆದ್ದು ಮಂಟಪದಿಂದ ಹೊರಗೆ ಹೋದ.

ವದೀರಜ್ಜನು ಇರುವ ಕುಟೀರದ ಕಡೆಗೆ ಹೋದ ಶಂಬರ. ವದೀರಜ್ಜನನ್ನು ನೆಲದ ಮೇಲೆ ಚಾಪೆಯೊಂದನ್ನು ಹರವಿ ಅದರ ಮೇಲೆ ಮಲಗಿಸಿದ್ದರು. ಅವರ ಪಕ್ಕದಲ್ಲಿ ಕುಳಿತ ಶಂಬರನಿಗೆ ನಿದ್ರೆ ಸಾಕಾಗದೇ ಇನ್ನೂ ಮಲಗುವ ಎನಿಸಿ ವದೀರಜ್ಜನಿಗೆ ಸ್ವಲ್ಪ ದೂರದಲ್ಲಿ ನೆಲದ ಮೇಲೆಯೇ ಮಲಗಿದ.

## ಅಧ್ಯಾಯ 14 ಶಂಭೋ ಶಂಕರ

"ಶಂಬರ, ಶಂಬರ..." ಯದುವು ಶಂಬರನನ್ನು ನಿದ್ರೆಯಿಂದ ಎಚ್ಚರಿಸಿದನು.

ವದೀರಜ್ಜ ಅಲ್ಲಿರಲಿಲ್ಲ.

"ವದೀರಜ್ಜ ಎಲ್ಲಿ?" ಶಂಬರ ತನ್ನ ಪಕ್ಕದಲ್ಲಿ ವದೀರಜ್ಜ ಇಲ್ಲದಿರುವುದನ್ನು ಗಮನಿಸಿದ.

"ಗಣಪತಿ ಮಂಟಪಕ್ಕೆ ಒಯ್ದಿದ್ದಾರೆ." ಯದು ಮೆಲ್ಲನೆ ಹೇಳಿದ. "ಢುಂಢಿಯ ಉಸಿರಾಟ ಕ್ಷೀಣಿಸುತ್ತಿದೆ. ಯಾವುದೇ ಗಳಿಗೆಯಲ್ಲಿ ನಾವು ನಮ್ಮ ನಾಯಕನನ್ನು ಕಳೆದುಕೊಳ್ಳಲು ಸಿದ್ಧವಿರಬೇಕು."

ಶಂಬರ ಮೇಲೆದ್ದ. "ನದಿಯ ಕಡೆಗೆ ಹೋಗಿಬರುತ್ತೇನೆ."

"ಹಾ, ಹೋಗಿಬನ್ನಿ. ಸ್ನಾನ ಮುಗಿಸಿಕೊಂಡು ಇಲ್ಲಿಗೇ ಫಲಾಹಾರಕ್ಕೆ ಬನ್ನಿ." ಎಂದ ಯದು.

ಶಂಬರನು ಮೇಲೆ ಏಳುವಷ್ಟರಲ್ಲಿ ಹೊರಗಿನಿಂದ ಶಂಖ, ಡಮರುಗ, ಚಂಡೆ, ಮದ್ದಲೆ ಇತ್ಯಾದಿಗಳೊಂದಿಗೆ ಇತರ ಚರ್ಮವಾದ್ಯಗಳ ಮತ್ತು ತಾಳವಾದ್ಯಗಳ ಸದ್ದು ಕೇಳಿಸಿತು.

"ಏನದು?" ಶಂಬರ ಕೇಳಿದ.

"ರುದ್ರ ಬರುತ್ತಿರಬಹುದು." ಎನ್ನುತ್ತಾ ಯದುವು ಕುಟೀರದಿಂದ ಹೊರಗೆ ಬಂದ. ಶಂಬರನೂ ಹಿಂಬಾಲಿಸಿದ.

ಶಂಬರನಿಗೆ ರೋಮಾಂಚನವಾಯಿತು ತಾನು ಸಾಕ್ಷಾತ್ ರುದ್ರನನ್ನು ನೋಡುತ್ತಿರುವೆನೆಂದು.

ಧೂಪದ ಪಾತ್ರೆಗಳನ್ನು ಹಿಡಿದಿರುವ ದಿಗಂಬರರು, ರುದ್ರಾಕ್ಷಿಗಳನ್ನು ತೊಟ್ಟಿದ್ದರು. ಅವರ ಮೈಯೆಲ್ಲಾ ಬೂದಿಯಿಂದ ಲೇಪಿತವಾಗಿತ್ತು. ಮಂಡಿಯವರೆಗೂ ಬೆಳೆದಿದ್ದ ಕೂದಲು ಜಟೆಗಟ್ಟಿತ್ತು. ಅಲ್ಲಿದ್ದ ಬಹುಪಾಲು ಮಂದಿ ದಿಗಂಬರರೇ ಆಗಿದ್ದರು. ಅತ್ಯಂತ ದೊಡ್ಡ ಡುಬ್ಬದ ವೃಷಭದ ಮೇಲೆ ಹುಲಿಯ ಚರ್ಮವನ್ನು ಹಾಸಿದ್ದು, ಅದರ ಮೇಲೆ ರುದ್ರ ಕುಳಿತಿದ್ದ. ಅವನೂ ದಿಗಂಬರನೇ ಆಗಿದ್ದರೂ, ಅವನ ಮೈಪೂರ್ತಿ ರುದ್ರಾಕ್ಷಿ ಮಾಲೆಗಳಿಂದ ತುಂಬಿಹೋಗಿತ್ತು. ಒಂದು ಕೈಯಲ್ಲಿ ತ್ರಿಶೂಲವನ್ನು ಹಿಡಿದುಕೊಂಡು ಮತ್ತೊಂದು ಕೈಯಲ್ಲಿ ಕಪಾಲವನ್ನು ಹಿಡಿದುಕೊಂಡಿದ್ದ ಅವನ ಮುಖವೇ ಸರಿಯಾಗಿ ಕಾಣದಂತೆ ಗಡ್ಡ ಮತ್ತು ಮೀಸೆಗಳು ಬೆಳೆದಿದ್ದವು. ಗಡ್ಡ ಮೀಸೆಗಳಿರದಿದ್ದ ಜಾಗದಲ್ಲಿ ಭಸ್ಮಲೇಪನವಾಗಿತ್ತು.

ಕಂದು ಬಣ್ಣದ ಬೃಹತ್ತಾದ ವೃಷಭದ ಮೇಲೆ ಕುಳಿತಿದ್ದ ರುದ್ರ, "ಅಹೋ, ಅಹೋ..... ಜೈ ಶಂಕರ.... ಜೈ ಶಂಕರ." ಎಂದು ತಾನೇ ಕೂಗುತ್ತಿದ್ದ. ಅವನ ಜೊತೆಗೆ ಬರುತ್ತಿದ್ದವರೂ ಜೋರಾಗಿ ಕೂಗುತ್ತಾ ಚಿತ್ರ ವಿಚಿತ್ರ ಶಬ್ಧಗಳನ್ನು ಮಾಡುತ್ತಿದ್ದರು. ಕೈಗಳನ್ನು ಎತ್ತಿಕೊಂಡು, ದೊಡ್ಡ ದೊಡ್ಡ ಹೆಜ್ಜೆಗಳನ್ನು ಹಾಕಿಕೊಂಡು ಜೋರಾಗಿ ಕುಣಿಯುತ್ತಿದ್ದರು. ಅವರು ಬರುತ್ತಿರುವುದನ್ನು ನೋಡಿದ ಶಂಬರ ರೋಮಾಂಚಿತನಾಗಿ ಕೈ ಜೋಡಿಸಿದ. ಯದುವೂ ಕೈ ಜೋಡಿಸಿ ಮೊಣಕಾಲೂರಿದ್ದ. ಗಜೇಂದ್ರವನದಲ್ಲಿರುವವರೆಲ್ಲಾ ಕೈಗಳನ್ನು ಮುಗಿದುಕೊಂಡು ಮೊಣಕಾಲೂರಿದ್ದರು. ಈ ಮೊದಲು ಶಾಂತವಾಗಿದ್ದ ಗಣದವರೆಲ್ಲಾ, "ಶಂಭೋ

ಶಂಕರ, ಹರಹರ ಮಹಾದೇವ. ಓಂ ನಮಃ ಶಿವಾಯ.” ಇತ್ಯಾದಿಗಳನ್ನು ಕೂಗುತ್ತಾ ಕುಣಿಕುಣಿದಾಡುತ್ತಿದ್ದರು. ಇಡೀ ವಾತಾವರಣವೇ ಶಿವಮಯವಾಗಿತ್ತು. ಭಸ್ಮ, ಸಾಂಬ್ರಾಣಿ, ಧೂಪ; ಇವುಗಳ ಸುವಾಸನೆಯಿಂದ ಇಡೀ ಗಜೇಂದ್ರವನವೇ ಶಿವಗಂಧಮಯವಾಗಿತ್ತು.

ಯಾಜ್ಞಿಕನೂ, ಅವನ ಹೊಸ ಗೆಳೆಯ ರಸದೇವನೂ ಹಾಗೂ ಇತರ ವೈದಿಕ ಬ್ರಾಹ್ಮಣರೂ ಕೈಗಳನ್ನು ಮೇಲಕ್ಕೆತ್ತಿ ಮುಗಿಯುತ್ತಾ ಸಾಷ್ಟಾಂಗ ನಮಸ್ಕಾರ ಮಾಡುತ್ತಿದ್ದರು. ಶಂಬರನ ಮೈ ಥರಗುಟ್ಟುತ್ತಿತ್ತು.

“ದೇವಿ ಪಾರ್ವತಿಯೂ ಬಂದಿದ್ದಾರೆಯೇ?” ಶಂಬರ ಕೇಳಿದ.

“ಇವರಿಗೆ ದೇವಿ ಇಲ್ಲ. ಇವರು ವಿವಾಹವಾಗಿಲ್ಲ.” ಎಂದ ಯದು.

“ಇವರು ಯಾರು?” ಶಂಬರ ಕೇಳಿದ.

“ಈಗಿನ ರುದ್ರ. ರುದ್ರಗಣದ ಅಧಿಪತಿ.”

“ಶಿವ–ಪಾರ್ವತಿ...”

“ಅವರಲ್ಲ ಇವರು. ಅವರ ನಂತರದ ರುದ್ರಗಣದ ಅಧಿಪತಿ. ನಾನೂ ಅವರನ್ನು ನೋಡಿಲ್ಲ. ಆದರೆ, ನೆನೆಸಿಕೊಳ್ಳುತ್ತೇನೆ, ಈ ರುದ್ರರದ್ದೇ ಹೀಗೆ ವಿಜೃಂಭಣೆಯಿಂದ ಇರಬೇಕಾದರೆ, ಇನ್ನು ಆ ರುದ್ರ, ಅವನ ಶಿವಗಣ ಹೇಗಿದ್ದಿರಬಹುದು ಎಂದು!” ನೆನೆದೇ ರೋಮಾಂಚಿತನಾದ ಯದು.

*

ಬಹು ವಿಜೃಂಭಣೆಯಿಂದ ರುದ್ರನ ಮೆರವಣಿಗೆ ಶರವಣದಿಂದ ಕೈಲಾಸದ ಕಡೆಗೆ ಬರುತ್ತಿತ್ತು. ಬಹುದೊಡ್ಡ ಬಿಳಿಯ ಗೂಳಿಯ ಮೇಲೆ ಮಂಡಿಸಿದ್ದ ರುದ್ರ ತಾನೇ ಸ್ವಯಂ ಶಂಖವನ್ನು ಊದುತ್ತಿದ್ದ. ತಾಳ ಮತ್ತು ಮದ್ದಲೆಗಳು ಮೊಳಗುತ್ತಿದ್ದವು. ಡಮರುಗವನ್ನು ನುಡಿಸುತ್ತಿದ್ದ ಪ್ರಮಥಾದಿ ಗಣಗಳು ತಮ್ಮದೇ ಆದ ಗತಿಯಲ್ಲಿ ಕುಣಿಯುತ್ತಾ ಆನಂದಿಸುತ್ತಾ ಬರುತ್ತಿದ್ದರು. ಅವರ ಜೊತೆಯಲ್ಲಿ ಸಿಂಹವೊಂದು ಬರುತ್ತಿತ್ತು. ಅದರ ಸುತ್ತಲೂ ದಿಗಂಬರರಾಗಿದ್ದ ಕಾಪಾಲಿಕರು ಕುಣಿಯುತ್ತಿದ್ದರು. ಭೈರವದೂತ, ನಂದಿ, ಭದ್ರ, ವೀರಭದ್ರ, ಸುಮುಖ, ಸುಮುಖೇಶ್ವರ ಮತ್ತು ಇತರ ಗಣಗಳು ಕಾಲಿಗೆ ಹೊಳೆಹೊಳೆಯುವ, ಘಲ್ ಘಲ್ ಎನ್ನುತ ಭಾರಿ ಗೆಜ್ಜೆಗಳ ಸದ್ದು ಮಾಡುವ ಮಿಶ್ರಲೋಹದ ಜಂಗುಗಳನ್ನು ಕಟ್ಟಿಕೊಂಡು ಕುಣಿಕುಣಿಯುತ್ತಾ ಬರುತ್ತಿದ್ದರೆ, ಇನ್ನೂ ಕೆಲವರು ಕೈಲಾಸವಾದ್ಯಗಳನ್ನು ನುಡಿಸುತ್ತಾ, ಢಕ್ಕೆಗಳನ್ನು, ಚಂಡೆಗಳನ್ನು ನುಡಿಸುತ್ತಾ ಬರುತ್ತಿದ್ದರು. ಉದ್ದುದ್ದಕ್ಕಿರುವ ಅವರ ಜಟೆಗಳನ್ನು ಬೀಸುತ್ತಾ, ನೇತಾಡುತ್ತಿದ್ದ ರುದ್ರಾಕ್ಷಿಗಳು ಹಾರಾಡುತ್ತಾ, ಕುಣಿಯುತ್ತಾ ಬಲು ಮೋದದಿಂದ ಬರುತ್ತಿದ್ದರು.

ತಾರಕಾದಿ ರಾಕ್ಷಸರು ರುದ್ರನ ಆರಾಧಕರಾಗಿದ್ದು, ಅವರ ದಾಳಿ ನಿರಾತಂಕವಾಗಿ ದೇವತೆಗಳ ಮೇಲೆ, ಆರ್ಯ ಋಷಿಗಳ ಮೇಲೆ ಆಗುತ್ತಲಿದ್ದು, ಅದನ್ನು ನಿವಾರಿಸುವ ಬಗ್ಗೆ ಮಾತಾಡಲು ಇಂದ್ರನ ಮುಂದಿಟ್ಟುಕೊಂಡು ದೇವತೆಗಳ ತಂಡವೇ ಶರವಣಕ್ಕೆ ಬಂದಿತ್ತು. ಆದರೆ, ರುದ್ರನೋ ತನ್ನ ಭೈರವ ಮತ್ತು ಕಾಪಾಲಿಕ ತಾಂತ್ರಿಕರೊಂದಿಗೆ ಮದ್ಯ, ಮಾಂಸ ಸೇವಿಸುತ್ತಾ, ಉನ್ಮತ್ತನಾಗಿ ಕುಣಿಯುತ್ತಾ, ಅವರ ಮಾತಿಗೆ ಸರಿಯಾಗಿ ಸ್ಪಂದಿಸದೇ, ಬನ್ನಿ, ಮಾತಾಡೋಣ. ಬನ್ನಿ ಎಂದು ಅವರನ್ನು ಇಲ್ಲಿಯವರೆಗೂ ಇವರ ಮೆರವಣಿಗೆಯ ಜೊತೆಯಲ್ಲಿಯೇ ಕರೆದುಕೊಂಡು ಬಂದಿದ್ದ.

ಅವರಿಗೆ ಎಷ್ಟೂ ಇಷ್ಟವಿಲ್ಲದಿದ್ದರೂ, ಈಗ ಈ ವಿಷಯದ ಬಗ್ಗೆ ಮಾತಾಡಲು ಬಂದಿದ್ದು, ಮಾತಾಡದೇ ಹೋಗಿಬಿಟ್ಟರೆ, ನೀವು ವಿಷಯದ ಚರ್ಚೆ ಮಾಡದೇ ಹೋಗಿಬಿಟ್ಟಿರಿ. ನನ್ನನ್ನೂ ಬಿಟ್ಟುಬಿಡಿ. ನಿಮಗೇನು ಬೇಕೋ ಅದನ್ನು ಮಾಡಿಕೊಳ್ಳಿ ಎಂದು ರುದ್ರನು ಹೇಳಿ ಕೈತೊಳೆದುಕೊಳ್ಳುವ ಸಾಕಷ್ಟು ಉದಾಹರಣೆಗಳು ಈ ಹಿಂದೆ ಇದ್ದುದರಿಂದ, ಇಂದ್ರನೂ ಮತ್ತು ಇತರ ದೇವತೆಗಳೂ ಮೌನವಾಗಿ ಈ ದಿಗಂಬರರ, ಕಾಪಾಲಿಕರ ಪಾಶವೀ ನರ್ತನಕ್ಕೆ ತಲೆದೂಗಿಕೊಂಡು ಕೈಲಾಸದ ದಾರಿಯಲ್ಲಿಯೇ ಅವರೂ ನಡೆಯುತ್ತಿದ್ದರು.

ದನು ಪಾರ್ವತಿಯ ಮೈಗೆ ಗಂಧಚೂರ್ಣಯುಕ್ತ ತೈಲದಿಂದ ಲೇಪಿಸಿ, ಅಂಗಾಂಗಗಳ ನೋವು ಹೋಗುವಂತೆ ತೀಡುತ್ತಿದ್ದಳು. ಧೂಮಾವತಿ ಮತ್ತು ಪಂಚಮಿಯರು ಬಹುದೊಡ್ಡ ತಾಮ್ರದ ಹಂಡೆಯಲ್ಲಿ ನಾನಾವಿಧವಾದ ಔಷಧಿಯ ಗುಣವಿರುವ ಸೊಪ್ಪುಗಳನ್ನು ಹಾಕಿ ಕಾಯಿಸಿದ್ದರು. ಸ್ನಾನಕ್ಕೆ ಸಿದ್ಧಪಡಿಸಿದ್ದರು. ಮೈಗೆಲ್ಲಾ ತೈಲಾಭ್ಯಂಜನವಾದ ಮೇಲೆ ಪಾರ್ವತಿ ಸ್ನಾನಕ್ಕೆ ಒಳಕ್ಕೆ ಹೋಗುವ ಮುನ್ನ, ಗುಣೇಶನನ್ನು ನೆನೆದು ಹೊರಗೆ ಬಂದಳು.

ಮರದ ತುಂಡೊಂದಕ್ಕೆ ತನ್ನ ಕೊಡಲಿಯನ್ನು ತಿಕ್ಕಿ ಸಾಣೆ ಹಿಡಿಯುತ್ತಿದ್ದ ಗುಣೇಶ ದ್ವಾರದಲ್ಲಿ ಬಂದು ನಿಂತ ಪಾರ್ವತಿಯನ್ನು ನೋಡಿದ. ನಸುಗಪ್ಪಿನ ಮೈಗೆ ತೈಲ ಲೇಪನವಾಗಿ ಸುಂದರವಾದ ಕಪ್ಪು ವಿಗ್ರಹವೊಂದು ಜೀವತಳೆದು ಬಂದಂತಿದ್ದಳು. ಆ ಸುಂದರ ಮೂರ್ತಿಯನ್ನು ನೋಡುತ್ತಲೇ ಢುಂಢಿಯ ಕಣ್ಣುಗಳಲ್ಲಿ ಮಿಂಚು ಕಂಡಿತು. ಚೌಲಿಯನ್ನು ಕಟ್ಟಿಲ್ಲದ ಮೊಲೆಗಳು ಇಣುಕುತ್ತಿದ್ದು, ಅದರ ಮೇಲೆ ತೆಳುವಾಗಿದ್ದ ಉಪವಸನವು ಮೊಲೆಗಳ ಗಾತ್ರಗಳನ್ನು ಬಿಂಬಿಸುತ್ತಾ, ಶಿಖರಗಳ ಮೇಲೆ ತೆಳುವಾದ ಮೋಡದ ಪದರವು ಹಾದು ಹೋದಂತಿತ್ತು. ತೆಳುವಾದ ಕೆಳಹೊಟ್ಟೆಯ ಮೇಲಿದ್ದ ಹೊಕ್ಕಳು ಅರ್ಧ ಅರಳಿರುವ ಮಲ್ಲಿಗೆಯ ಮೊಗ್ಗಿನಂತಿತ್ತು. ಸೊಂಟದ ಮೇಲೆ ಲಘುವಾಗಿರುವ ವಾಪ್ರಿಯು ದೊಡ್ಡ ಹೆಜ್ಜೆಯನ್ನಿಟ್ಟರೆ ಬಿದ್ದು ಹೋಗುವಂತಿದ್ದು, ಮೈಗೆ ಲೇಪಿತವಾಗಿರುವ ತೈಲಕ್ಕಂಟಿಕೊಂಡು ತತ್ಕಾಲಕ್ಕೆ ಬೀಳದಿರುವಂತಿತ್ತು.

"ಗುಣೇಶಾ...." ತನ್ನ ಆಪಾದಮಸ್ತಕ ನೋಡುತ್ತಿದ್ದ ಢುಂಢಿಯ ಕಣ್ಣುಗಳ ಗಮನವು ಕಿವಿಗಳ ಕಡೆ ತಿರುಗುವಂತೆ ಮಾಡಿದ ಪಾರ್ವತಿ, "ಗುಣೇಶಾ, ನಾನು ಸ್ನಾನಕ್ಕೆ ಹೋಗುತ್ತಿದ್ದೇನೆ. ದ್ವಾರವನ್ನು ಕಾಯುವುದು ನಿನ್ನ ಹೊಣೆ. ಯಾರೊಬ್ಬರನ್ನೂ ನನ್ನ ಸ್ನಾನಾನಂದಕ್ಕೆ ಭಂಗ ತರುವಂತೆ ಒಳಗೆ ಬಿಡಕೂಡದು. ಯಾರನ್ನೂ..." ಆ ಮಾತನ್ನು ಒತ್ತಿ ಹೇಳಿದ ಪಾರ್ವತಿ, "ನಂದಿ ಮತ್ತು ಇತರ ಪ್ರಮಥಾದಿಗಳು ರುದ್ರನ ಪ್ರವೇಶದ ಪಾದಗಳ ಕೆಳಗೆ ನನ್ನ ಆಜ್ಞೆಯನ್ನು ಧೂಳಾಗಿ ಮಾಡಿಬಿಡುತ್ತಿದ್ದರು. ನನ್ನ ಆಜ್ಞೆಯ ಹಕ್ಕಿನಿಂದ ದ್ವಾರವನ್ನು ಬಿಗುವಾಗಿ ಪಾಲಿಸು. ಇದು ನನ್ನ ಮನೆ, ನೀನು ನನ್ನ ಮಗ. ಮರೆಯಬೇಡ." ಎಂದು ನಕ್ಕು ಒಳಗೆ ಹೋದಳು.

ಢುಂಢಿಯು ನಕ್ಕು, ಆಯಿತೆಂದು ತಲೆಯಾಡಿಸಿ ತನ್ನ ಕೊಡಲಿಯನ್ನು ಸಾಣೆ ಹಿಡಿಯುವ ಕೆಲಸವನ್ನು ಮುಂದುವರಿಸಿದ.

ಪಾರ್ವತಿ ಒಳಗೆ ಹೋದ ಕೆಲಸಮಯದಲ್ಲಿಯೇ ದೂರದಿಂದ ರುದ್ರನ ಮೆರವಣಿಗೆ ಬರುವ ಸದ್ದು ಕೇಳಿ ಢುಂಢಿ ಮೇಲೆದ್ದು ನಿಂತು ಕಣ್ಣುಗಳನ್ನು ಕಿರಿದು ಮಾಡಿ ವೀಕ್ಷಿಸಿದ. ಮೆರವಣಿಗೆ ಹತ್ತಿರಹತ್ತಿರ

ಬರುತ್ತಿದ್ದಂತೆ, ಪ್ರಮಥಾದಿ ಗಣಗಳ ನರ್ತನ, ಗಾಯನ, ತಾಳ ವಾದ್ಯಗಳನ್ನು ನೋಡುತ್ತಾ, ಕೇಳುತ್ತಾ ಸಂತೋಷಗೊಂಡ. ಭೈರವದೂತರು ಢುಂಢಿಯನ್ನು ನೋಡಿ ಚಿತ್ರ–ವಿಚಿತ್ರವಾಗಿ ನರ್ತಿಸುತ್ತಾ ಅವನ ಬಳಿಯೇ ಬಂದು ಅವನನ್ನು ಒಮ್ಮೆ ಒಂದು ಸುತ್ತು ಹಾಕಿ ಗುಂಪಿಗೆ ಮರಳಿದರು. ಬಿಳಿಯದಾದ ಭಾರಿ ವೃಷಭದ ಮೇಲೆ, ಅದರ ಮೇಲೆ ಹೊದೆಸಿದ್ದ ವ್ಯಾಘ್ರಚರ್ಮದ ಮೇಲೆ ಮಂಡಿಸಿದ್ದ ರುದ್ರ ಆನಂದದಿಂದ ಕೆಳಗಿಳಿದು ತನ್ನ ತ್ರಿಶೂಲವನ್ನು ಹಿಡಿದುಕೊಂಡೇ ಮನೆಯ ಪಾವಟಿಗೆಗಳನ್ನು ಹತ್ತಿ ವೇದಿಕೆಯನ್ನು ಏರಿದ.

"ರುದ್ರದೇವರು ಬಂದಂತಿದೆ." ಎಂದಳು ಪಾರ್ವತಿಯ ಮೈ ತೊಳೆಯುತ್ತಿದ್ದ ಧೂಮಾವತಿ.

"ಬರಲಿ. ರುದ್ರಗಣದವನಲ್ಲದ ನಮ್ಮ ಗುಣೇಶ ಅವನನ್ನು ಹೇಗೆ ಎದುರಿಸುವನೋ ನೋಡೋಣ. ನನ್ನ ಮಗನಿಂದಾದರೂ ನನ್ನ ಆಜ್ಞೆಯು ಪಾಲನೆಯಾಗುತ್ತದೆಯೋ ನೋಡೋಣ." ಎಂದಳು ಪಾರ್ವತಿ.

"ಗುಣೇಶ..." ರುದ್ರ ಢುಂಢಿಯನ್ನು ನೋಡಿ ಆನಂದದಿಂದ ಅವನ ಹೆಸರು ಕೂಗಿದ.

ಢುಂಢಿಯು ಕೊಡಲಿಯನ್ನು ಹಿಡಿದುಕೊಂಡೇ ತಲೆಯನ್ನು ಬಾಗಿಸಿ ವಂದಿಸಿದ. ರುದ್ರನು ದ್ವಾರದ ಕಡೆ ಬರುತ್ತಿದ್ದಂತೆ, ಢುಂಢಿಯು ರುದ್ರನಿಗೆ ಎದುರಾಗಿ ನಿಂತು, "ಯಾರನ್ನೂ ಒಳಗೆ ಬಿಡಕೂಡದೆಂದು, ಅವರ ಸ್ನಾನಾನಂದಕ್ಕೆ ಭಂಗ ತರಕೂಡದೆಂದು ಅಪ್ಪಣೆಯೇ ನನಗೆ ಹೊಣೆಯಾಗಿದೆ." ಎಂದು ಹೇಳಿದ.

"ನನಗೂ?" ಎಂದು ರುದ್ರ ಹೆದರಿದವನಂತೆ ನಟಿಸುತ್ತಾ ಅಲ್ಲಿಯೆ ನಿಂತ.

"ಹೌದು." ಢುಂಢಿಯ ಮಾತಿನಲ್ಲಿ ಯಾವುದೇ ವ್ಯತ್ಯಾಸವಿರಲಿಲ್ಲ.

"ಸರಿ." ಅಲ್ಲಿಯೇ ನಿಂತ ರುದ್ರ, "ಇಂದು ನನಗೆ ನನ್ನ ಮನೆಯೊಳಗೆ ಪ್ರವೇಶವಿಲ್ಲ." ಎಂದು ನಗುತ್ತಾ ಲಘುವಾಗಿ ಕುಣಿದ.

ಢುಂಢಿ ಹಾಗೆಯೇ ದ್ವಾರಕ್ಕೆ ಅಡ್ಡ ನಿಂತಿದ್ದ.

ಕೆಳಗೆ ನಿಂತಿದ್ದ ಪ್ರಮಥಾದಿ ಗಣಗಳು ಈ ಚೋದ್ಯವನ್ನು ನೋಡುತ್ತಾ ನಗುತ್ತಿದ್ದರು.

"ಹೇ ಬಾಲಕ. ನಿನ್ನ ಅಡಚಣೆಯೇ ನನಗೆ ಉತ್ತೇಜನವಾಗುತ್ತಿದೆ. ನಾನು ಒಳಗೆ ಹೋಗಲೇಬೇಕಲ್ಲಾ!" ಎಂದು ಮತ್ತೂ ಹಾಸ್ಯವಾಗಿ ಹೇಳಿದ ರುದ್ರ ಮೆಲ್ಲನೆ ಒಳಕ್ಕೆ ನುಗ್ಗಿಬಿಡುವಂತೆ ಆಟವಾಡಿದ. ಢುಂಢಿ ಅವನನ್ನು ಬಿಡದಂತೆ ಬಲವಾಗಿ ಪ್ರತಿರೋಧವನ್ನು ಒಡ್ಡಿದ.

ರುದ್ರ, "ಅಯ್ಯೋ, ಆಗುತ್ತಿಲ್ಲವಲ್ಲಾ..." ಎಂದು ಹಿಂದೆ ಬಂದಂತೆ ಮಾಡಿ ಮತ್ತೆ ದ್ವಾರದ ಕಡೆಗೆ ನುಗ್ಗುವಂತೆ ಮಾಡಿದ. ಅಮಲಿನಲ್ಲಿದ್ದ ರುದ್ರನಿಗೆ ಢುಂಢಿ ಮಾಡುತ್ತಿರುವುದು ಹಾಸ್ಯವಾಗಿ ಕಾಣಿಸುತ್ತಿತ್ತು ಅವನು ಪಾರ್ವತಿಯ ಮಾತನ್ನು ಅಷ್ಟು ಗಂಭೀರವಾಗಿ ತೆಗೆದುಕೊಳ್ಳಲು ಅವಳ ಆಜ್ಞೆಯಲ್ಲಿ ಅಂತಹ ಆಗ್ರಹವಿರುತ್ತದೆ ಎಂದು ಅವನು ಬಲ್ಲ. ಅವನಿಗೆ ಒಳಗೆ ಹೋಗಬೇಕೆಂಬ ಹಟವಿಲ್ಲದಿದ್ದರೂ, ಪಾರ್ವತಿಯ ಆಗ್ರಹವನ್ನು ನಿರ್ಬಲಗೊಳಿಸಿ ಅವಳನ್ನು ಛೇಡಿಸಬೇಕೆಂಬ ಚೇಷ್ಟೆಯ ಮನವಿತ್ತು.

“ಹೇ ಬಾಲಕಾ...” ನಾಟಕೀಯವಾಗಿ ರುದ್ರ ತನ್ನ ತ್ರಿಶೂಲವನ್ನೆತ್ತಿ ವಿಕೃತ ತಾಂಡವ ಮಾಡುತ್ತಾ, “ನೀನು ನನ್ನ ಮನೆಗೇ ನನ್ನ ಪ್ರವೇಶಿಸಲು ಬಿಡದಿದ್ದರೆ, ನೀನು ನನ್ನ ಆಗ್ರಹಕ್ಕೆ ತುತ್ತಾಗುವೆ. ಹುಂ...” ಎಂದು ಕಣ್ಣುಗಳನ್ನು ರೌದ್ರವಾಗಿ ಅರಳಿಸುವಂತೆ ನಟಿಸಿ ತ್ರಿಶೂಲವನ್ನು ಅವನ ಕಡೆಗೆ ಗುರಿಯಿಟ್ಟ. ಆದರೆ, ಢುಂಢಿ ಅಂಜದೇ ತನ್ನ ಕೊಡಲಿಯನ್ನು ನಿಜವಾದ ಕೋಪದಿಂದಲೇ ರುದ್ರನ ತ್ರಿಶೂಲಕ್ಕೆ ಅಡ್ಡವಿಟ್ಟ.

ರುದ್ರ ಬೆಚ್ಚಿದಂತೆ ನಟಿಸಿ, ತನ್ನ ತ್ರಿಶೂಲವನ್ನು ಹಿಂದಕ್ಕೆ ತೆಗೆದುಕೊಂಡು ಬಂದು ಬಿಲ್ವ ಮರದ ನೆರಳಿನಲ್ಲಿ ಬಳಲಿದಂತೆ ಕುಳಿತ. ಹಾಗೆಯೇ ಹತ್ತಿರವೇ ಇದ್ದ ಜೋಗಿಯೋರ್ವನಿಂದ ಚರ್ಮದ ಚೀಲವನ್ನು ಪಡೆದು ಅದರಲ್ಲಿರುವ ಸೋಮವನ್ನು ಸಾವಧಾನವಾಗಿ ಗುಟುಕರಿಸುತ್ತಾ, ನಿಧಾನವಾಗಿ ನೆಲದ ಮೇಲುರುಳಿ, ಬಿಲ್ವ ಮರದ ಕೊಂಬೆಗಳ ನಡುವೆ, ಎಲೆಗಳ ನಡುವೆ ಸೂರ್ಯನ ಕಿರಣಗಳು ಲೀಲೆಯಾಡುತ್ತಿರುವುದನ್ನು ನೋಡು ನೋಡುತ್ತಾ ಯೋಗನಿದ್ರೆಗೆ ಜಾರಿದ.

ಶಿವಗಣಗಳಲ್ಲಿ ಒಬ್ಬನಾದ ಸುಮುಖ ಢುಂಢಿಯ ಬಳಿಗೆ ಬಂದು, “ಹೇ ಬಾಲಕ, ಹೇ ಅರಣ್ಯಕ, ರುದ್ರನ ಮನೆಯ ಊಳಿಗದವನಾಗಿ, ದ್ವಾರ ಕಾಯಲು ನಿಂತವನು ಮನೆಯ ಒಡೆಯನನ್ನೇ ಒಳಗೆ ಬಿಡದೇ ಹೋದದ್ದು ಉದ್ದಟತನವಲ್ಲವೇ? ಅವನ ಕ್ರೋಧವು ಎಚ್ಚರವಾಗುವ ಮುನ್ನವೇ ಎಚ್ಚೆತ್ತು ಕ್ಷಮಾಪಣೆ ಕೇಳಿ, ದಾರಿ ಬಿಡು.” ಎಂದು ಸಲಹೆ ನೀಡಿದ.

ರುದ್ರ ಬಿಲ್ವ ವೃಕ್ಷದ ನೆರಳಿನಲ್ಲಿ ಮೇಲೆದ್ದು ಕುಳಿತು, “ಹೇ ಬಾಲಕ, ನನಗೆ ಬಹು ಗಾಢವಾದ ನಿದ್ರೆ ಬರುತ್ತಿದೆ. ಒಳಕ್ಕೆ ಬಿಡಲಾರೆಯಾ ಕಂದಾ.” ಎಂದು ಕೇಳಿದ.

“ಹೂಂ, ಹೋಗು. ಕ್ಷಮಾಪಣೆ ಕೇಳಿ. ಒಳಗೆ ಬನ್ನಿ ಎನ್ನು.” ಎಂದು ಸುಮುಖ ಮೆಲುದನಿಯಲ್ಲಿ ಒತ್ತಾಯಿಸಿದರೆ, “ಇಲ್ಲ.” ಎಂದು ಗಡುಸಾಗಿ ಹೇಳಿದ ಢುಂಢಿ ತನ್ನ ನಿಲುವನ್ನು ಬದಲಿಸಲಿಲ್ಲ.

“ಸರಿಯೇ.” ರುದ್ರ ಮತ್ತೆ ನೆಲಕ್ಕುರುಳಿ, “ಎಚ್ಚರದಲ್ಲಿ ಮನೆಯನ್ನು ಹೊಕ್ಕಲಾರೆ. ಹಾ ನಿದುರೆಯೇ ನನ್ನನು ಸಮಾಧಿಗೆ ಒಯ್ಯಿ.” ಎಂದು ನಿಧಾನವಾಗಿ ನಿದ್ರೆಗೆ ಜಾರಿದ.

“ಇದು ಅತಿಯಾಯ್ತು.” ಸುಮುಖ ಢುಂಢಿಯ ತೋಳನ್ನು ಹಿಡಿದು ಜಗ್ಗಿ ಹೇಳಿದ. “ಹೋಗು, ಕ್ಷಮೆ ಯಾಚಿಸಿ, ಅವರನ್ನು ಬರಮಾಡು.”

ಪೀಡಿಸುವ ಸುಮುಖನ ಸಾವಧಾನವಾಗಿ ನಿರ್ಲಕ್ಷಿಸಲಾಗದೇ ಢುಂಢಿ ತನ್ನ ಕೈಯಲ್ಲಿರುವ ಕೊಡಲಿಯನ್ನು ಅವನತ್ತ ಬೀಸಿದ. ಸುಮುಖನ ತೋಳು ತುಂಡಾಗಿ ನೆಲಕ್ಕೆ ಬಿತ್ತು. ನಂದಿ, ಭದ್ರ, ವೀರಭದ್ರ ಮತ್ತು ಇತರರು ಕ್ಷುದ್ರರಾದರು. ಕೂಡಲೇ ವೇದಿಕೆಯನ್ನೇರಿದರು.

“ಏನು ಮಾಡಿದೆ? ಉದ್ಧಟ...” ಎಂದು ಕೂಗುತ್ತಾ ತಮ್ಮ ಕೈಗಳಲ್ಲಿರುವ ಆಯುಧಗಳಿಂದ ಢುಂಢಿಯ ಮೇಲೆ ಏರಿ ಹೋದರು. ಢುಂಢಿ ವಿಲಕ್ಷಣವಾಗಿ ಅವರನ್ನು ಒಮ್ಮೆ ನೋಡಿ ತನ್ನ ಕೈಯಲ್ಲಿರುವ ಕೊಡಲಿಯನ್ನು ಅವರಿಗೆ ಪ್ರಾಣಾತಂಕವಾಗುವಂತೆ ಬೀಸಿದ.

ಅವರುಗಳಿಗೆ ಅವನ ಕೊಡಲಿಯ ಪ್ರಹಾರದಿಂದ ತಪ್ಪಿಸಿಕೊಳ್ಳುವುದೇ ಒಂದು ಕಷ್ಟದ ಕೆಲಸವಾಯಿತು. ಅವರು ತಮ್ಮ ಆಯುಧಗಳನ್ನು ಝಳಪಿಸುತ್ತಾ ಅವನ ಮೇಲೆ ಆವೇಶದಿಂದ ಎರಗಿದರು. ಆದರೆ, ಢುಂಢಿ ಕಂಗೆಡಲಿಲ್ಲ. ತನ್ನ ಕೊಡಲಿಯನ್ನು ತಿರುವುತ್ತಾ ಅವರ ಘಾತಗಳನ್ನು ತಪ್ಪಿಸಿಕೊಂಡ.

“ಹೊರಗೆ ಏನೋ ಗಲಭೆಯಾಗುತ್ತಿರುವಂತಿದೆ.” ದನು ಮತ್ತು ಧೂಮಾವತಿ ಆತಂಕದಿಂದ ಹೇಳಿದರು.

ಸ್ನಾನದ ಕೊನೆಯ ಹಂತದಲ್ಲಿದ್ದ ಪಾರ್ವತಿ, “ನಾನು ಕಲಿಸಿರುವ ಸಮರ ವಿದ್ಯೆಯನ್ನು ನನ್ನ ಕಾರಣದಿಂದಲೇ ಅಭ್ಯಾಸ ಮಾಡಲಿ.” ಎಂದು ನಕ್ಕಳು.

ಢುಂಢಿಯ ಸುತ್ತಲೂ ರುದ್ರಗಣದವರು ಆಯುಧಧಾರಿಗಳಾಗಿ ಎರಗುತ್ತಿರುವುದನ್ನು ದೂರದಿಂದ ಕಂಡ ಮಾರ, ಆಸುರ, ಧವನ, ಕುಂಭಿ ಮತ್ತು ಇತರ ಅರಣ್ಯಕರು ತಮ್ಮ ಕೈಗೆ ಸಿಕ್ಕ ಆಯುಧಗಳನ್ನು ಹಿಡಿದುಕೊಂಡು  ಬಂದರು. ಎರಡೂ ತಂಡಗಳ ನಡುವೆ ಘರ್ಷಣೆ ನಡೆಯತೊಡಗಿತು.

ದೇವತೆಗಳೂ ಸುಮ್ಮನಿರದಾದರು. ಅವರಿಗೆ ಇದೊಂದು ಅವಕಾಶ. ರುದ್ರನ ಪರವಾಗಿ ಹೋರಾಡಿ ಅವನ ಮನಸ್ಸನ್ನು ಗೆಲ್ಲಲು. ರುದ್ರಗಣಕ್ಕೆ ಪರವಾಗಿ ನಿಂತು ಅರಣ್ಯಕರ ಮೇಲೆ ಎರಗಿದರು. ಢುಂಢಿಯ ಕಡುಕೋಪಕ್ಕೆ, ಅವನ ಕೊಡಲಿಯ ಘಾತಕ್ಕೆ ರುದ್ರಗಣದ ಅನೇಕರು ಅಸುನೀಗಿದರು. ನಂದಿ, ಭದ್ರ ಮತ್ತು ವೀರಭದ್ರರಿಗೆ ವಿಪರೀತವಾದ ಗಾಯಗಳುಂಟಾದವು. ಇಂದ್ರಾದಿ ದೇವತೆಗಳು ಮೊದಲು ಯುದ್ಧಕ್ಕೆ ಸಿದ್ಧವಿರಲಿಲ್ಲದರ ಜೊತೆಗೆ ಅರಣ್ಯಕರ ಉರುಟಾದ ಮತ್ತು ಒರಟಾದ ಯುದ್ಧದಿಂದ ಬಸವಳಿದರು. ಅಪಾರ ಪ್ರಮಾಣದ ರಕ್ತಪಾತವಾಯಿತು. ಇಷ್ಟಾದರೂ ರುದ್ರ ಮೇಲೇಳಲಿಲ್ಲ. ಧ್ಯಾನದಲ್ಲಿ ಸಮಾಧಿಸ್ಥನಾಗಿದ್ದನೋ, ದಾರಿಯುದ್ದಕ್ಕೂ ಮದ್ಯ ಸೇವಿಸಿದ್ದು, ಗಾಂಜಾ ಸೇದಿದ್ದು ಹೆಚ್ಚಾಗಿ ಪ್ರಜ್ಞಾಹೀನನಾಗಿದ್ದನೋ ಅಂತೂ ಹೊರಗೆ ನಡೆಯುತ್ತಿರುವುದು ಏನೂ ತಿಳಿಯದೇ ತಟಸ್ಥನಾಗಿ ಬಿದ್ದಿದ್ದನು.

“ಈಗ ಹೊರಗೆ ಪರಿಸ್ಥಿತಿ ಹೇಗಿದೆ ನೋಡು ಧೂಮಾವತಿ.” ಸ್ನಾನಾದಿಗಳನ್ನು ಮುಗಿಸಿಕೊಂಡು ತನ್ನ ತಾನು ಸಿಂಗರಿಸಿಕೊಳ್ಳುತ್ತಿದ್ದ ಪಾರ್ವತಿ ಹೇಳಿದಳು.

ಧೂಮಾವತಿ ಹೊರಗೆ ಬಂದು ನೋಡಲು ಢುಂಢಿಯು ದೇವತೆಗಳನ್ನು ಸದೆ ಬಡಿಯುತ್ತಿದ್ದ.

ಒಳಗೆ ನಡೆದ ಧೂಮಾವತಿ ವಿಷಯವನ್ನು ತಿಳಿಸಿದಳು.

“ಮಾತಂಗ ಗಣವನ್ನು ಕರೆಯಿಸು. ಶಕ್ತಿಗಣವನ್ನು ಸಮರಕ್ಕೆ ಸನ್ನದ್ಧರಾಗುವಂತೆ ತಿಳಿಸು.” ಎಂದಳು ಪಾರ್ವತಿ.

“ಒಡತಿ… ತಮಗೇಕೆ ಇಷ್ಟು ಆಗ್ರಹ?” ಧೂಮಾವತಿ ಹೆದರಿದಳು.

ಪಂಚಮಿ ಮತ್ತು ದನು, “ಬೇಡ ದೇವಿ. ಖಂಡಿತ ಬೇಡ. ಏಕೋ ಇದು ವಿಪರೀತಕ್ಕೆ ಹೋಗುವಂತಿದೆ.” ಎಂದರು.

"ಯಾವುದು ವಿಪರೀತ?" ಪಾರ್ವತಿ ಕೆರಳಿದಳು. "ಪಾರ್ವತಿಯನ್ನು, ಅವಳ ಆಜ್ಞೆಯನ್ನು ಧಿಕ್ಕರಿಸುವುದರಿಂದ ಉಂಟಾಗುವ ಅಪಾಯಗಳನ್ನು ಎದುರಿಸಲೇ ಬೇಕು. ಅದು ಯಾರಾದರೂ ಸರಿಯೇ."

"ದೇವಿ, ಒಡತೀ, ನಿಮ್ಮ ಹಟದಿಂದ ನಮ್ಮ ಢುಂಢಿ ಅಪಾಯಕ್ಕೆ ಸಿಕ್ಕಿಕೊಳ್ಳುತ್ತಿದ್ದಾನೆ." ದನು ಅಳುತ್ತಿದ್ದಳು.

"ಬಾಯಿ ಮುಚ್ಚು, ವೃಥಾ ಪ್ರಲಾಪಿಸಬೇಡ. ನನ್ನ ಮಗ ಗುಣೇಶ. ಅವನಿಗೆ ಅವನ ತಾಯಿಯ ಗೌರವವನ್ನು ಕಾಪಾಡುವಷ್ಟು ಶಕ್ತಿ ಇದೆ. ನೋಡುತ್ತಿರು." ಎಂದು ಪಾರ್ವತಿ ಗದರಿದಳು.

ನೋಡು ನೋಡುತ್ತಿದ್ದಂತೆ ವಜ್ರನ ನೇತೃತ್ವದಲ್ಲಿ ಮಾತಂಗ ಗಣವೂ ಅಲ್ಲಿ ಸೇರಿತು. ದೇವತೆಗಳು ಹೆದರಿದರು. ರುದ್ರಗಣ ಥರಗುಟ್ಟಿತು. ಕೈಲಾಸ ರಣಾಂಗಣವಾಯಿತು.

ರುದ್ರ ಎಚ್ಚರವಾದ. ಸೂರ್ಯಾಸ್ತಮವಾಗುತ್ತಿದೆ. ಕೂಗಾಟ ಮತ್ತು ಹೋರಾಟಗಳಿಂದ ವಿಚಲಿತನಾದಂತೆ ರುದ್ರ ಮೇಲೆದ್ದ. ಸ್ವಯಂ ರುದ್ರನೇ ಆಘಾತಕ್ಕೊಳಗಾದ. ಅಲ್ಲಿ ಏನಾಗುತ್ತಿದೆ ಎಂದೂ ಅವನಿಗೆ ಗ್ರಹಿಸಲಾಗಲಿಲ್ಲ. ರುದ್ರಗಣದ ಅನೇಕರು ಅಸು ನೀಗಿದ್ದಾರೆ. ದೇವಸೇನೆಯ ಯೋಧರೂ ನೆಲ ಕಚ್ಚಿದ್ದಾರೆ. ಇಂದ್ರಾದಿ ದೇವತೆಗಳು ಮತ್ತು ಅಷ್ಟದಿಕ್ಪಾಲಕರು ಪಲಾಯನ ಮಾಡುತ್ತಿದ್ದಾರೆ. ಮಾತಂಗ ಗಣದವರು, ಅರಣ್ಯಕರು, ರುದ್ರಗಣದವರು ಹೊಡೆದಾಡಿಕೊಳ್ಳುತ್ತಿದ್ದಾರೆ. ನಂದಿ, ಭದ್ರ, ವೀರಭದ್ರಾದಿ ಪ್ರಮಥಗಣಗಳು ರಕ್ತಸಿಕ್ತರಾಗಿ ನರಳುತ್ತಿದ್ದಾರೆ. ಹುಚ್ಚು ಆವೇಶದಿಂದ ಗುಣೇಶ ಹೊಡೆದಾಡುತ್ತಿದ್ದಾನೆ. ಅವನೊಂದಿಗೆ ವಜ್ರನೂ ಜೊತೆಗೂಡಿದ್ದಾನೆ.

"ನಿಲ್ಲಿಸಿ, ನಿಲ್ಲಿಸಿ..." ರುದ್ರ ಗರ್ಜಿಸಿದ. ಅವನ ಕೂಗು ಕೇಳದಷ್ಟು ರಣಘೋಷಗಳು ಬಿರುಸಾಗಿದ್ದವು. ವೀರಭದ್ರನ ಹಲಗೆಯನ್ನು ತೆಗೆದುಕೊಂಡು ರುದ್ರ ವಜ್ರನಿಗೆ ಬಾರಿಸಿದ. ವಜ್ರ ಘಾತಗೊಂಡು ದೂರಕ್ಕೆ ಬಿದ್ದ. ಭದ್ರನಿಗೂ ಬಾರಿಸಿದ ರುದ್ರ, ಅವನನ್ನು ಸರಿಸಿಕೊಂಡು ಇನ್ನು ತಿರುಗಿದ್ದು ಢುಂಢಿಯ ಕಡೆಗೆ. ಢುಂಢಿ ತನ್ನ ಕೊಡಲಿಯಿಂದ ರುದ್ರನ ಮೇಲೆ ಪ್ರಹಾರ ಮಾಡಿದ. ಹಲಗೆಯನ್ನು ಅಡ್ಡ ಹಿಡಿದು ಅವನ ಪೆಟ್ಟನ್ನು ನಿವಾರಿಸಿಕೊಳ್ಳುತ್ತಾ ರುದ್ರನು ಢುಂಢಿಯ ಮೇಲೆ ಹಲಗೆಯನ್ನು ಬೀಸಿದ. ಢುಂಢಿಯ ಕೈಯೊಳಗಿನ ಕೊಡಲಿ ಕೆಳಕ್ಕೆ ಬಿತ್ತು. ಆದರೂ ರುದ್ರನು ಹಿಡಿದಿದ್ದ ಹಲಗೆಯನ್ನು ಹಿಡಿದು ಎಳೆದು ಹಾಕುವಂತೆ ಬರಿಗೈಯಿಂದಲೇ ಆಕ್ರಮಣ ಮಾಡಿದ. ಆದರೆ, ಹಲಗೆಯನ್ನು ಭದ್ರವಾಗಿ ಹಿಡಿದಿದ್ದ ರುದ್ರ ಅವನನ್ನು ತಳ್ಳಿ, ಹಲಗೆಯಿಂದ ಅವನ ಮುಖಕ್ಕೆ ಬಾರಿಸಿದ. ಹಲಗೆ ಎಡಗಿವಿಯ ಭಾಗದ ಶಿರಕ್ಕೆ ಹೊಡೆತ ಬಿದ್ದು ಢುಂಢಿ ನೆಲಕ್ಕೆ ಬಿದ್ದ.

ಅಲ್ಲಿಗೆ ಯುದ್ಧ ನಿಂತಿತು. ವಜ್ರ ನೆಲದ ಮೇಲೆ ಬಿದ್ದು ಹೊರಳಾಡುತ್ತಿದ್ದ.

ರುದ್ರ ಗರ್ಜಿಸಿದ, "ಏನಾಯ್ತು? ಹೇಗಾಯ್ತು?"

ಯಾರೂ ಉತ್ತರಿಸುವ ಸ್ಥಿತಿಯಲ್ಲಿ ಇರಲಿಲ್ಲ.

ಢುಂಢಿ ಕಣ್ಣುಗಳನ್ನು ಬಿಟ್ಟಂತೆಯೇ ನೆಲ ಕಚ್ಚಿದ್ದ. ಕಿವಿಯಿಂದಲೂ ರಕ್ತ ಸೋರುತ್ತಿತ್ತು. ಹೊರಗೆ ಬಂದ ದನು ನೆಲದ ಮೇಲೆ ಬಿದ್ದಿದ್ದ ಢುಂಢಿಯನ್ನು ನೋಡಿ ಚಿಟ್ಟನೆ ಚೀರಿದಳು.

“ಢುಂಢಿ...” ಅವನ ಬಳಿಗೆ ಓಡಿ ಬಂದಳು. ಅವನನ್ನು ಸನಿಹದಿಂದ ನೋಡಿ, ಅವನ ಕಿವಿಯಿಂದ ರಕ್ತ ಬರುತ್ತಿರುವುದನ್ನು ಪರೀಕ್ಷಿಸಿ, ಅವನ ಕ್ಷೀಣಿಸುತ್ತಿರುವ  ಉಸಿರಾಟವನ್ನು ಗಮನಿಸಿ, ಅವನ ನಾಡಿಯನ್ನು ಹಿಡಿದು ಪರೀಕ್ಷಿಸಿ ಜೋರಾಗಿ ಕೂಗಿದಳು. “ಅಯ್ಯೋ..... ಢುಂಢಿ, ಢುಂಢಿ ಸತ್ತ. ಅಯ್ಯೋ ನಮ್ಮ ಢುಂಢಿ ಸತ್ತ.” ಎಂದು ಎದೆ ಬಡಿದುಕೊಂಡು ಅಳತೊಡಗಿದಳು.

ಹಿಂದೆಯೇ ಪಾರ್ವತಿಯೂ ಓಡಿ ಬಂದಳು.

“ಗುಣೇಶ...”

*

ಕ್ಷಣಕ್ಷಣಕ್ಕೂ ನಿಶ್ಚಲನಾಗುತ್ತಿದ್ದ ಢುಂಢಿಯ ದೇಹದ ಮುಂದೆ ರುದ್ರನೇ ಮೊದಲಾಗಿ ಎಲ್ಲಾ ರುದ್ರಗಣದವರೂ ಹಾಗೂ ದೇವತಾಗಣದವರೂ ನಿಂತಿದ್ದರು. ಶಕ್ತಿಗಣದ ಕೆಲವು ವಯಸ್ಸಾದ ಮಹಿಳೆಯರು ಪ್ರಲಾಪಿಸುತ್ತಿದ್ದರು.

“ಢುಂಢಿಗೆ ಇದು ಅನಿವಾರ್ಯವೇ?”

ಶಂಬರನಿಗೆ ಭಾವೋದ್ರೇಕ ತಡೆಯಲಾರದೇ ಹೊರಗೆ ಬಂದ. ಕಂಬನಿಯು ಹಿಂಗಿಹೋಗಿ ಕೆಂಪಾಗಿರುವ ಕಣ್ಣುಗಳಿಂದ ಗಣಪತಿಯ ಮಂಟಪದ ಕಡೆಗೆ ಬರುತ್ತಿದ್ದವರನ್ನು ನೋಡುತ್ತಾ ನಿಂತ ಯದುವಿನ ಭುಜವನ್ನು ಹಿಡಿದು ಕೇಳಿದ ಶಂಬರ.

“ಢುಂಢಿಗೆ ಇದು ಅನಿವಾರ್ಯವೇ? ಈ ಸಾವು ನ್ಯಾಯವೇ?”

“ಸಂಪೂರ್ಣವಾದ ನ್ಯಾಯ. ಅವನ ಸಾಕುತಾಯಿ ಪಾರ್ವತಿಯೇ ಪ್ರಕೃತಿ. ಅವನ ತಾಯಿಯಲ್ಲಿ ತಾನು ಲೀನನಾಗುತ್ತಿದ್ದಾನೆ. ರಾಮ, ಕೃಷ್ಣರ ಸಾವಿಗಿಂತ ನ್ಯಾಯವಾದ ಸಾವು ಇವನದ್ದು.” ಎಂದ ಯದು.

ಶಂಬರ ಅವನ ಮುಖ ನೋಡಿದ. ಅವನ ಕಣ್ಣುಗಳಲ್ಲಿರುವ ಪ್ರಶ್ನೆಗೆ ಯದು ಉತ್ತರಿಸಿದ.

“ಆರ್ಯರ ಪರವಾಗಿ ನಿಂತು ತನ್ನ ಮೂಲ ನಿವಾಸಿಗಳನ್ನು ಕಡೆಗಣಿಸಿದ ರಾಮ ವಿಷಣ್ಣನಾಗಿ ಸರಯೂ ನದಿಯಲ್ಲಿ ಆತ್ಮಹತ್ಯೆ ಮಾಡಿಕೊಂಡು ಸತ್ತ. ಕೃಷ್ಣನೋ ದೇವತೆಗಳೊಂದಿಗೆ, ಆರ್ಯರೊಂದಿಗೆ ಸಂಧಾನ ಮಾಡಿಕೊಂಡಿದ್ದಕ್ಕೆ ಅರಣ್ಯಕರಾದ ವ್ಯಾಧರಿಂದ ಕೊಲೆಯಾಗಿ ಸತ್ತ. ದೈವತ್ವದ ಪಟ್ಟಕ್ಕೆ ತಮ್ಮತನವನ್ನು ಮಾಡಿಕೊಂಡಿದ್ದರಿಂದ ತಮ್ಮ ಸಾವನ್ನು ಪ್ರಕೃತಿಯಿತ್ತಂತೆ ಪಡೆಯಲಾಗಲಿಲ್ಲ. ಇವನು, ಢುಂಢಿ, ವೇದಗಳಿಂದ ತಿರಸ್ಕೃತನಾದರೂ, ದೈವತ್ವಪಟ್ಟದಿಂದ ವಂಚಿತನಾದರೂ, ನಮ್ಮ ಗಣನಾಯಕನೇ ಆಗಿ ಉಳಿದು, ಕೊನೆಗೂ ಅರಣ್ಯಕನಾಗಿಯೇ ಪ್ರಕೃತಿ ಕೊಡುತ್ತಿರುವಂತಹ ಸಾವನ್ನು ಪಡೆಯುತ್ತಿದ್ದಾನೆ. ಅದಕ್ಕಿಂತ ಇನ್ನೇನು ಬೇಕು ಶಂಬರ.”

ಯದುವಿನ ಕಣ್ಣುಗಳಲ್ಲಿ ನೀರು ಸುರಿಯುತ್ತಿತ್ತು.

## ಅಧ್ಯಾಯ 15 ಶಕ್ತಿ ಮತ್ತು ಪ್ರೀತಿ

ಶಾಂತವಾಗಿ ಹರಿಯುತ್ತಿದ್ದ ನದಿಯಲ್ಲಿ ಮೆಲ್ಲನೆ ಈಜಾಡುತ್ತಾ ಶಂಬರ ನೀರಿನಲ್ಲಿರುವ ಬಂಡೆಯ ಮೇಲೆ ಕುಳಿತ. ದೂರದಲ್ಲಿ ಗಣಪತಿ ಮಂಟಪದಲ್ಲಿ ನಡೆಯುತ್ತಿರುವ ವಿದ್ಯಮಾನಗಳು ಅಸ್ಪಷ್ಟವಾಗಿ ಕಾಣುತ್ತಿದ್ದವು. ರುದ್ರಗಣದ ಅನೇಕರು ದೊಡ್ಡ ದೊಡ್ಡ ಕುಂಭಗಳನ್ನು ಹಿಡಿದು ನದಿಯ ಕಡೆಗೆ ನಡೆದುಬರುತ್ತಿದ್ದರು.

'ಗಣಪತಿಯು ಅಂತ್ಯವಾದನೇ?' ಶಂಬರನಿಗೆ ಅನ್ನಿಸಿತು.

ಬಂಡೆಯ ಮೇಲಕ್ಕೆ ಎದ್ದು ನಿಂತು ನೋಡಿದ. ಏನೂ ತಿಳಿಯಲಿಲ್ಲ. ಈ ಮೊದಲು ರುದ್ರಗಣ ಬಂದ ದಾರಿಯಲ್ಲಿ ಸ್ತ್ರೀಯರ ಬಹುದೊಡ್ಡ ತಂಡವೊಂದು ಬರುತ್ತಿತ್ತು. ಅವರದ್ದೂ ಮೆರವಣಿಗೆಯಂತಿತ್ತು. ನಿಂತಿದ್ದಲ್ಲಿಂದಲೇ ಪರಿಕಿಸಿದ. ಆ ಹೆಂಗಸರು ರುದ್ರಗಣಗಳಿಗಿಂತ ಆರ್ಭಟಿಸುತ್ತಿದ್ದರು. ಅವರ ಕೈಗಳಲ್ಲಿ ತ್ರಿಶೂಲ, ಖಡ್ಗ ಇತ್ಯಾದಿ ಆಯುಧಗಳಿದ್ದವು. ಕೆಂಪುವರ್ಣದ ಧ್ವಜಗಳೂ ಅವರ ಗುಂಪಿನಲ್ಲಿ ಕಾಣುತ್ತಿದ್ದವು.

'ಬಹುಶಃ ಇದು ಶಕ್ತಿಗಣವಿರಬೇಕು.' ಎಂದುಕೊಂಡ ಶಂಬರ.

*

"ನನ್ನ ಶಕ್ತಿಗಳೇ ಬನ್ನಿ, ಬನ್ನಿ... ನನ್ನ ಮಗ ಗುಣೇಶನ ಕೊಂದವನ್ನು ಕೊಂದು ತಿನ್ನಿ." ಪಾರ್ವತಿ ಆರ್ಭಟಿಸಿದಳು.

"ಪಾರ್ವತೀ." ರುದ್ರನೂ ಬೆದರಿದ.

"ನನ್ನ ಮಗ ಗುಣೇಶನ ಕೊಲ್ಲುವ ಮೂಲಕ ಏನು ಸಾಧಿಸಿದೆ ನೀನು?" ಪಾರ್ವತಿ ಕೂಗಿದಳು.

ರುದ್ರನು ಬಿಟ್ಟಗಣ್ಣುಗಳಿಂದ ಅವಳನ್ನೇ ನೋಡುತ್ತಿದ್ದ.

"ನನ್ನ ತಾಯ್ತನದ ಹಕ್ಕನ್ನು ಕಸಿದುಕೊಂಡೆ ನೀನು. ನನ್ನ ತಾಯ್ತನದ ಆಸೆ ಈಡೇರಿಸಿಕೊಳ್ಳಲು ಈ ಗುಣೇಶನ ಪಡೆದೆ. ಅವನನ್ನೂ ನೀನು ನಾಶಮಾಡಿದೆ." ಪಾರ್ವತಿ ಗೋಳಿಡುತ್ತಿದ್ದಳು.

ಶಕ್ತಿಗಣದ ಸ್ತ್ರೀಯೋಧರೆಲ್ಲಾ ಅಲ್ಲಿ ಸೇರಿದ್ದರು. ಪಾರ್ವತಿಯ ಆಜ್ಞೆಗಾಗಿ ಕಾಯುತ್ತಿತ್ತು.

"ಪಾರ್ವತಿ, ಈಗ ನಡೆದುಹೋಗಿರುವ ಅಚಾತುರ್ಯವೇ ಸಾಕು. ನನಗೆ ಇಲ್ಲಿ ಕಾಣುತ್ತಿರುವುದು ನಿನ್ನ ಹಟಮಾರಿತನವೇ ಹೊರತು ಇನ್ನಾವ ಹಿತಚಿಂತನೆಯಲ್ಲ. ನನ್ನ ಮೇಲಿನ ಆಗ್ರಹಕ್ಕೆ ನೀನು ಆವೇಶ ತಳೆದಿರುವಂತಿದೆಯೇ ಹೊರತು, ನಿನ್ನ ವರ್ತನೆಯಲ್ಲಿ ಯಾವುದೇ ಸಕಾರಣ ಕಾಣುತ್ತಿಲ್ಲ." ಎಂದ ರುದ್ರ.

ಪಾರ್ವತಿ, "ನನ್ನ ಮಗ ಗುಣೇಶನೆಂದು ತಿಳಿದಿದ್ದೂ ಅವನ ನೀನು ಕೊಂದೆ. ಇದು ನನ್ನ ಮೇಲಿನ ನಿನ್ನ ಪ್ರತಿಕಾರವೇ ತಾನೇ?" ಢುಂಢಿಯ ತಲೆಯನ್ನು ತನ್ನ ತೊಡೆಯ ಮೇಲಿರಿಸಿಕೊಂಡು ಜೋರಾಗಿ ಅಳುತ್ತಿದ್ದಳು.

"ನಿನಗೆ ಆ ಹುಡುಗನ ಮೇಲಿರುವ ಪ್ರೇಮಕ್ಕಿಂತ, ನನ್ನ ಮೇಲಿರುವ ಆಗ್ರಹವೇ ಹೆಚ್ಚಾಗಿದೆಯೆಂದು ಇಲ್ಲಿ ತೋರುವುದು. ಹೇ ಪಾರ್ವತಿ, ಸಾಮಾನ್ಯವಾದ ಹಟಮಾರಿ ಹೆಣ್ಣುಗಳಂತೆ ಮಾತಾಡುವುದನ್ನು ಬಿಟ್ಟು ಪ್ರಬುದ್ಧಳಂತೆ ವರ್ತಿಸು." ರುದ್ರನ ಮಾತಿಗೆ ಪಾರ್ವತಿ ಇನ್ನೂ ಕೆರಳಿದಳು, "ಪ್ರಬುದ್ಧತೆಯನ್ನು ನಾನು ನಿಷಾದನಿಂದ ಅಥವಾ ಕಾಪಾಲಿಕನಿಂದ ಕಲಿಯಬೇಕಿಲ್ಲ. ನಾನು ರಾಜಮನೆತನದಿಂದ ಬಂದಿರುವವಳು."

"ತಾಯೀ." ರುದ್ರಗಣದ ಹಿರಿಯ ಪ್ರಮಥನಾದ ಸಿದ್ಧೇಶ್ವರ ಮುಂದೆ ಬಂದು, "ನಿನ್ನ ಮಗ ಗುಣೇಶನು ಗತಪ್ರಾಣನಾಗಿಲ್ಲವೆಂದು ನನಗೆ ತೋರುತ್ತದೆ." ಆತ ಬೇಷಜನಾಗಿದ್ದು, ಆಯುರ್ವೇದವನ್ನೂ ಮತ್ತು ಸಿದ್ಧ ಚಿಕಿತ್ಸೆಯನ್ನು ಬಲ್ಲವನಾಗಿದ್ದ. ಆತನ ಮುಖದಲ್ಲಿ ನಾನು ಗಮನಿಸಿದಂತೆ ನೋವು ಹೆಚ್ಚಾಗುತ್ತಿರುವ ವ್ಯಥೆ ಕಾಣುತ್ತಿದೆ. ದಯಮಾಡಿ, ನನಗೆ ಪರೀಕ್ಷಿಸಲು ಅವಕಾಶ ಮಾಡಿ." ಎಂದ.

"ನನ್ನ ಮಗನು ಉಳಿದನೆಂದಾದರೆ ಸಾಕು." ಎಂದ ಪಾರ್ವತಿ ಕೂಡಲೇ ಅವನನ್ನು ಬಿಟ್ಟು ಮೇಲೆದ್ದಳು.

ಸಿದ್ಧೇಶ್ವರನು ಢುಂಢಿಯ ಬಲಕೈಯನ್ನು ಅಂಕುಶಾಕಾರವಾಗಿ ಕೂಡಿಸಿ ತನ್ನ ಬಲಗೈಯಿಂದ ಹಿಡಿದುಕೊಂಡು, ಎಡಕೈ ಬೆರಳುಗಳಿಂದ ಮುಟ್ಟಿ, ಪಿತ್ತಸ್ಥಾನ, ಶ್ಲೇಷ್ಮಸ್ಥಾನ ಮತ್ತು ವಾತಸ್ಥಾನಗಳ ತತ್ತ್ವವನ್ನು ಗ್ರಹಿಸಲು ಯತ್ನಿಸಿದ. "ತಾಯೀ, ನಾಡಿಯು ಸ್ಥಾನತಪ್ಪಿ ದೂರವಾಗಿ ಘಾತುಕನಾಡಿಯಾಗಿ ತೋರುತ್ತಿದೆ." ಹಾಗೆಯೇ ಪರೀಕ್ಷಿಸಿ, "ಕೆಲವು ಸಲ ಯಥಾಸ್ಥಾನದಲ್ಲಿಯೂ ಮತ್ತೆ ಕೆಲವು ಸಲ ಸ್ಥಳಾಂತರದಲ್ಲಿಯೂ ಚಲಿಸಿದರೆ ಇದು ಪ್ರಾಣನಾಶನ ನಾಡಿ ಎನ್ನಬಹುದು. ಈತನ ನಾಡಿಯು ಹಾಗೆಯೇ ತೋರುತ್ತದೆ." ಸಿದ್ಧೇಶ್ವರ ನಾಡಿಯು ತಟಗುಟ್ಟುವ ಗುಂಡಿಗೆಯ ಬಳಿಯೂ ಪರೀಕ್ಷಿಸಿದ. "ಆದರೆ, ಇದು ಹಾಗಿಲ್ಲ. ಬಹಳ ಗಾಢವಾಗಿಯೂ, ಸ್ತಬ್ಧವಾಗಿಯೂ ಇದೆ. ಆದರೆ ಈ ನಾಡಿಯುಳ್ಳವನಿಗೆ ಪ್ರಾಣಭಯವಿಲ್ಲ. ಬರಿದೇ ಮೂರ್ಚಿತನಾಗಿದ್ದಾನೆ. ಆದರೆ, ಶರೀರದಲ್ಲಿ ಶೋಭೆ ಕ್ಷೀಣಿಸುತ್ತಿರುವುದರಿಂದಲೂ, ನಾಡಿಯು ತನ್ನ ಗತಿತಪ್ಪಿ, ಸ್ವಲ್ಪ ಹೊತ್ತು ತೀವ್ರವಾಗಿಯೂ, ಸ್ವಲ್ಪ ಹೊತ್ತು ಶಾಂತವಾಗಿಯೂ ನಡೆಯುತ್ತಿರುವುದರಿಂದ... ಏಳುದಿನಗಳವರೆಗೆ ಸಮಯಾವಕಾಶವಿದ್ದು, ನಾವು ಅಷ್ಟರಲ್ಲಿ ಈತನನ್ನು ಮೂರ್ಚೆಯಿಂದ ಎಬ್ಬಿಸಿದರೆ, ಜೀವಂತವಾಗುವನು."

ಸಿದ್ಧೇಶ್ವರನ ಮಾತನ್ನು ಕೇಳಿ ರುದ್ರನೂ ಮತ್ತು ಪಾರ್ವತಿಯೂ ಒಟ್ಟಿಗೆ, "ಈಗ ಯಾವ ಚಿಕಿತ್ಸೆಯನ್ನು ಮಾಡಬೇಕು? ಯಾವ ಮೂಲಿಕೆಗಳು ನಿನಗೆ ಬೇಕು ಹೇಳು." ಎಂದು ಕೇಳಿದರು.

"ಇದು ಘಾತಮೂರ್ಛಾವಸ್ಥೆ. ಇದಕ್ಕೆ ನನ್ನಲ್ಲಿ ಮೂಲಿಕೆಗಳಿಲ್ಲ. ಹಾಗೂ ನಾನು ಇದನ್ನು ಸಾಧನೆ ಮಾಡಿಲ್ಲ." ಸಿದ್ಧೇಶ್ವರ ಹೇಳಿದ. "ಗಜಗಣದ ಬೇಷಜರಲ್ಲಿ ಈ ಚಿಕಿತ್ಸೆಯ ತಂತ್ರಗಳುಂಟು. ಅವರು ಬಹಳ ಗುಪ್ತವಾಗಿ ಸಾಧನೆ ಮಾಡುತ್ತಾರೆ. ಕೆಲವು ಸಂಜೀವಿನಿ ಮೂಲಿಕೆಗಳನ್ನು ಕೆಂಡದ ಆವಿಯಲ್ಲಿ ಬೇಯಿಸಿ, ಅದರ ರಸವನ್ನು ತೆಗೆದು ಮೂಗಿನ ಮೂಲಕವೂ, ಕಿವಿಯ ಮೂಲಕವೂ ಹಾಗೂ ಗಂಟಲಿನ ಮೂಲಕವೂ ಹಾಕುತ್ತಾರೆ. ಅದಾದ ಕೆಲವೇ ಗಳಿಗೆಗಳಲ್ಲಿ ರೋಗಿಯು ಎಚ್ಚರಾವಸ್ಥೆಯನ್ನು ತಲುಪುತ್ತಾನೆ. ಗಜಗಣದ ಬೇಷಜರೇ ಇದಕ್ಕೆ ಸರಿಯಾದವರು."

"ಆದರೆ, ಅವರು ನಮ್ಮ ರುದ್ರಗಣದ ಮತ್ತು ಮಾತಂಗ ಗಣದ ಶತ್ರುಗಳು. ಅವರು ನಮ್ಮ ಕೋರಿಕೆಯನ್ನು ಮನ್ನಿಸುವುದು ಕಷ್ಟಸಾಧ್ಯ." ಎಂದನು ಭದ್ರ.

“ಈ ಕೂಡಲೇ ಅವರು ಎಲ್ಲಿದ್ದಾರೆಂದು ತಿಳಿದು ಸಂಧಾನಾರ್ಥವಾಗಿ ನಂದಿಯನ್ನು ಕಳುಹಿಸಿ.” ಎಂದನು ರುದ್ರ.

“ಈ ಹಿಂದೆ ಹುಟ್ಟಿದ ಮಾತಂಗ ಗಣದವರೊಡನೆ ಘರ್ಷಣೆಯಿಂದಾಗಿ ನೆಲೆ ಕಳೆದುಕೊಂಡಿದ್ದು ಅವರಿಗೆ ಈಗ ಪಾಳಯವೆಂಬುದು ಇಲ್ಲವಾಗಿ ಎಲ್ಲಿಯೂ ಒಂದು ಕಡೆ ಬಹುದಿನ ಇರುವುದಿಲ್ಲ. ಅಲೆಮಾರಿಗಳಂತೆ ಅಲೆದಾಡುತ್ತಾ, ಗಜಾರಣ್ಯಗಳು ಇರುವ ಕಡೆ ತಂಗುತ್ತಾರೆ. ನಂತರ ಇನ್ನೆಲ್ಲಿಯಾದರೂ ಗಜಾರಣ್ಯವಿರುವ ಸಮಾಚಾರ ಲಭಿಸಿದರೆ ಅಲ್ಲಿಗೆ ಹೊರಡುತ್ತಾರೆ.” ಎಂದು ಹೇಳಿದ ಹಿರಿಯ ಪ್ರಮಥನೊಬ್ಬ.

“ಸೋಮನಾಥದಲ್ಲಿ ನಡೆದ ಸ್ಪರ್ಧೆಯ ನಂತರ ಅವರು ಉತ್ತರ ದಿಕ್ಕಿಗೆ ನಡೆಯುತ್ತಿದ್ದರು.” ಎಂದ ಮತ್ತೊಬ್ಬ ಪ್ರಮಥ.

“ಈ ಕೂಡಲೇ ಭದ್ರ, ವಜ್ರ ಹಾಗೂ ನಂದಿಯೊಡನೆ ಸೂಕ್ತ ಗಣಸೇನೆಯೂ ಜೊತೆಗೂಡಿ ಉತ್ತರ ದಿಕ್ಕಿಗೆ ವೇಗವಾಗಿ ನಡೆಯಿರಿ. ಅವರ ನಾಯಕ ಸೋಮದಂತನೊಡನೆ ಎಚ್ಚರದಿಂದಲೂ ಹಾಗೂ ಗೌರವದಿಂದಲೂ ಮಾತನಾಡಿ, ಅವರಿಗೆ ಇಲ್ಲಿಯ ಪರಿಸ್ಥಿತಿಯನ್ನು ವಿವರಿಸಿ. ಅವರ ಬೇಷಜರನ್ನು ಎಚ್ಚರಿಕೆಯಿಂದಲೂ, ಅತಿ ಅವಸರದಿಂದಲೂ ಕರೆದುಕೊಂಡು ಬನ್ನಿ.” ಎಂದ ರುದ್ರ.

“ಆದರೆ, ಸೋಮದಂತನು ತನ್ನ ಗಣದ ಬೇಷಜರನ್ನು ಕಳುಹಿಸಿಕೊಡಲು ಒಪ್ಪುವುದೇ ಸಂದೇಹ.” ಎಂದನು ಭದ್ರ.

“ಸಾವಧಾನವಾಗಿ ಕಾರ್ಯ ಸಾಧಿಸಲಾಗದಿದ್ದರೆ, ಆಗ್ರಹಪೂರ್ವಕವಾಗಿ ಸಾಧಿಸಿ. ಹಾಗೊಂದು ವೇಳೆ ಅವರ ಗಣನಾಯಕನು ಹತನಾಗಲೇಬೇಕಾದ ಅನಿವಾರ್ಯತೆಯಿದ್ದಲ್ಲಿ ಗತ್ಯಂತರವಿಲ್ಲ.” ಎಂದ ರುದ್ರ.

ಭದ್ರ ಮತ್ತು ವಜ್ರನ ನೇತೃತ್ವದಲ್ಲಿ ನಂದಿಯೇ ಮೊದಲಾದ ಗಣಗಳು ಸಿದ್ಧರಾದರು. ಕೂಡಲೇ ಸೂಕ್ತ ಪ್ರಯಾಣ ಸಾಮಗ್ರಿಗಳನ್ನು ಒದಗಿಸಿಕೊಂಡು ಕುದುರೆಗಳ ಮೇಲೆ ಹೊರಟುಬಿಟ್ಟರು.

ಸಿದ್ಧೇಶ್ವರ ಮತ್ತು ಇನ್ನಿತರ ಬೇಷಜರು ಕೈಯನ್ನು ಕಳೆದುಕೊಂಡಿದ್ದ ಸುಮುಖನಿಗೆ ಮತ್ತು ಇನ್ನಿತರ ಗಾಯಾಳುಗಳಿಗೆ ಚಿಕಿತ್ಸೆ ನೀಡತೊಡಗಿದರು. ಸತ್ತವರನ್ನು ಅಂತ್ಯಕ್ರಿಯೆಗೆ ಒಯ್ಯುವ ಪ್ರಕ್ರಿಯೆಯೂ ಪ್ರಾರಂಭವಾಯಿತು.

ಕೈಲಾಸದಲ್ಲಿ ಆ ರಾತ್ರಿ ಭಯಂಕರ ಸ್ಮಶಾನ ಮೌನ.

ನಿಶ್ಚೇತನಾಗಿ ಮಲಗಿರುವ ಢುಂಢಿಯನ್ನು ನೋಡುತ್ತಾ ಪಾರ್ವತಿ ಮೌನವಾಗಿಯೇ ಅಳುತ್ತಿದ್ದಳು.

‘ರುದ್ರನು ಹೇಳಿದ ಮಾತು ಸತ್ಯ. ನನಗೆ ಅವನ ಮೇಲಿನ ವಾತ್ಸಲ್ಯಕ್ಕಿಂತ ರುದ್ರನ ಮೇಲಿನ ಆಗ್ರಹವೇ ಹೆಚ್ಚಾಗಿಹೋಯ್ತು. ದನುವೂ ಮತ್ತು ಧೂಮಾವತಿಯರು ನನ್ನ ಎಚ್ಚರಿಸಿದಾಗ ನಾನು ಎಚ್ಚೆತ್ತುಕೊಳ್ಳಲಿಲ್ಲ. ಢುಂಢಿಯನ್ನು ಅಪಾಯಕ್ಕೆ ದೂಡಿದೆ. ಇದಕ್ಕೆಲ್ಲಾ ನಾನೇ ಕಾರಣವಾಗಿ ಹೋದೆ. ಒಂದು ವೇಳೆ ಭದ್ರ ಮತ್ತು ವಜ್ರರು ಗಜಗಣದ ಭೇಷಜರನ್ನು ಕರೆತರದೇ ಹೋದರೆ, ಅಥವಾ ಅವರನ್ನು ಕರೆತಂದರೂ, ಚಿಕಿತ್ಸೆ

ಫಲಕಾರಿಯಾಗದಿದ್ದರೆ ನನ್ನ ನಾನು ಕ್ಷಮಿಸಿಕೊಳ್ಳಲು ಸಾಧ್ಯವೇ? ನಾನು ತಾಯಿ ಎಂಬ ಮಾತು ಸುಳ್ಳಾಗಿ ಹೋಗುತ್ತದೆ. ರುದ್ರನು ಹೇಳಿದಂತೆ ಸಾಧಾರಣ ಹತಮಾರಿ ಹೆಣ್ಣಾಗಿ ಸಾಯುತ್ತೇನೆ.'

ರುದ್ರನು ಬಿಲ್ವ ವೃಕ್ಷದ ಬುಡದಲ್ಲಿ ಧ್ಯಾನಕ್ಕೆ ಕುಳಿತ.

ದನು, ಧೂಮಾವತಿ, ಪಂಚಮಿ ಮತ್ತು ಇತರ ವಯನದ ಹೆಂಗಸರು ಗಾಯಗೊಂಡ ಎಲ್ಲರನ್ನೂ ಉಪಚರಿಸುತ್ತಿದ್ದರು. ಪಾರ್ವತಿಯು ಎಲ್ಲವನ್ನೂ ನೋಡುತ್ತಿದ್ದಳು ಪಾಪಪ್ರಜ್ಞೆಯಲ್ಲಿ.

ಭದ್ರ ಮತ್ತು ವಜ್ರರ ನೇತೃತ್ವದ ತಂಡ ಎರಡು ರಾತ್ರಿ ಮತ್ತು ಒಂದು ಹಗಲು ಅರಣ್ಯಮಾರ್ಗಗಳನ್ನೇ ಉತ್ತರ ದಿಕ್ಕಿನಲ್ಲಿಯೇ ಕ್ರಮಿಸಿ ಹೋದ ಬಳಿಕ ಒಂದು ಮುಂಜಾನೆ ಗಜಾರಣ್ಯವೊಂದರಲ್ಲಿ ವಿಶ್ರಮಿಸುತ್ತಿದ್ದರು.

ವಜ್ರ ಕುದುರೆಗೆ ನೀರು ಕುಡಿಸುತ್ತಾ ಭದ್ರನಿಗೆ ಹೇಳಿದ. "ಆಗಲೇ ಎರಡು ದಿನಗಳಾಗಿ ಹೋದವು. ಇಂದು ಸಂಜೆಯವರೆಗೂ ಮಾರ್ಗವನ್ನು ಕ್ರಮಿಸಿ, ನಂತರ ನಾವು ನಾಲ್ಕೂ ದಿಕ್ಕುಗಳಿಗೆ ಭಾಗಗಳಾಗಿ ಹೋಗುವ. ಇಲ್ಲವಾದರೆ ನಾವು ಸೋಮದಂತನ ಗಣವನ್ನು ಹುಡುಕಲು ಸಾಧ್ಯವೇ ಇಲ್ಲ ಎಂದೆನಿಸುತ್ತದೆ."

ಭದ್ರ, "ನನ್ನ ಒಳಗಿನ ಪ್ರಜ್ಞೆ ಬಲಯುತವಾಗಿ ಸೂಚನೆಗಳನ್ನು ಕೊಡುತ್ತಿದೆ. ನಾವು ಆತನನ್ನು ಈ ಸಂಜೆಯೊಳಗೆ ಕಾಣುತ್ತೇವೆ." ಎಂದ.

"ನಿನ್ನ ಒಳಮನಸ್ಸು ಹೇಳಿದಂತೆಯೇ ಆಗಲಿ." ಎಂದ ವಜ್ರ ಹರಿಯುತ್ತಿರುವ ನದಿಗೆ ನೀರುಕುಡಿಯಲು ಬರುತ್ತಿರುವ ಆನೆಗಳನ್ನು ನೋಡಿ ಮತ್ತೆ ಹೇಳಿದ. "ನೋಡಲ್ಲಿ, ರಾಜಲಕ್ಷಣದ ಆನೆಗಳು."

ಎಲ್ಲರೂ ಅತ್ತ ನೋಡಿದರು. ಸುಮಾರು ಇಪ್ಪತ್ತೈದರಿಂದ ಮೂವತ್ತು ಆನೆಗಳ ಗುಂಪು ನಿಧಾನವಾಗಿ ಗುಂಪಿನಲ್ಲಿ ನದಿಯ ಕಡೆಗೆ ನಡೆದು ಬರುತ್ತಿದ್ದವು. ಅವುಗಳ ಗುಂಪಿನ ಹಿಂದೆ ಮತ್ತೊಂದು ಆನೆಯ ಗುಂಪು ಬರುತ್ತಲಿದ್ದು, ಅವುಗಳ ಮೇಲೆ ಕೆಲವರು ಕುಳಿತಿರುವ ಹಾಗೆ ಕಂಡರು.

"ಮಾವುತರಿದ್ದಾರೆ. ಆದರೆ, ಅಂಕುಶಗಳಿಂದ ನಡೆಸುತ್ತಿರುವಂತೆ ಕಾಣುತ್ತಿಲ್ಲ." ಎಂದ ವಜ್ರ ಮತ್ತಷ್ಟು ತೀಕ್ಷ್ಣವಾಗಿ ಗಮನಿಸಿ ನೋಡಿ ಹೇಳಿದ. "ಮೃದುಸ್ವಭಾವದ ಕಾಡಾನೆಗಳನ್ನು ಸ್ನೇಹಪೂರ್ವಕವಾಗಿ ಸಲುಗೆ ಬೆಳಸಿಕೊಂಡು ಅವುಗಳನ್ನು ಏರಿರುವ ಹಾಗೆ ಕಾಣುವುದೇ ಹೊರತು, ಕ್ರಮಬದ್ಧವಾಗಿ ಪಳಗಿಸಿರುವಂತೆ ಕಾಣುತ್ತಿಲ್ಲ."

ಮೊದಲು ಬಂದ ಆನೆಗಳು ನೀರಿಗಿಳಿದವು. ಮಾವುತರಿದ್ದ ಆನೆಗಳು ಇವರಿಗೆ ಸಮೀಪವಾದವು.

ಆನೆಯ ಮೇಲೆ ಕುಳಿತಿದ್ದ ವ್ಯಕ್ತಿಯೊಬ್ಬ ಇವರನ್ನು ನೋಡಿ, "ಹೋಯ್." ಎಂದು ಕೂಗಿ ತನ್ನ ತಲೆಯ ಮೇಲಿದ್ದ ಉಷ್ಣೀಷವನ್ನು ಬಿಡಿಸಿ ಇವರತ್ತ ಹಾರಿಸಿದ. ಭದ್ರನೂ ತನ್ನ ಹೆಗಲಮೇಲಿದ್ದ ಉಪವಸನವನ್ನು ಅವರತ್ತ ಸಾಂಕೇತಿಕವಾಗಿ ಹಾರಿಸಿ, "ಹೋಯ್." ಎಂದು ಕೂಗಿದ.

ಆನೆಗಳು ತೀರ ಹತ್ತಿರಕ್ಕೆ ಬಂದವು.

ಭದ್ರ ಒಮ್ಮೆಲೇ ಉದ್ಗಾರ ತೆಗೆದ. "ಸೋಮದಂತ!"

ಆನೆಯ ಮೇಲೆ ಕುಳಿತಿದ್ದ ಸೋಮದಂತನೂ ಕೂಗಿದ. "ಹೇ ಭದ್ರ! ಸುಸ್ವಾಗತ ಈ ನಮ್ಮ ಅರಮನೆಗೆ, ನಿನ್ನ ಸೆರೆಮನೆಗೆ."

"ಹೇ ಸೋಮದಂತ. ನಾನು ನಿನ್ನ ಜೊತೆ ಸೌಜನ್ಯದ ಮಾತುಗಳನ್ನಾಡಲು ಬಂದಿದ್ದೇನೆ." ಎಂದ ಭದ್ರ.

"ಶತ್ರುವಿನೊಂದಿಗೆ ಸೌಜನ್ಯದ ಮಾತನ್ನಾಡಲು ದೂತನು ಬಂದಿದ್ದಾನೆಂದರೆ, ನಿನ್ನ ನಾಯಕನ ಶಿಶ್ನಭಂಗವಾಗಿರಬೇಕು." ಎಂದು ನಕ್ಕ ಸೋಮದಂತ, "ನನಗೆ ಪುರುಷರೂಪದಲ್ಲಿ ಇಬ್ಬರು ಗಣಿಕೆಯರು ಕಾಣುತ್ತಿದ್ದಾರೆ ವಜ್ರನೆಂಬ ಮಾತಂಗಿಯೊಬ್ಬಳು ಹಾಗೂ ಭದ್ರನೆಂಬ ರುದ್ರಿಯೊಬ್ಬಳು." ಎಂದು ಗಹಗಹಿಸಿ ನಗುತ್ತಾ ಆನೆಯಿಂದ ಕೆಳಗಿಳಿದ.

"ಆಯಿತು. ನನ್ನ ಒಡೆಯನಿಗಾಗಿ ನಿನ್ನ ಗಣಿಕೆಯಾಗುತ್ತೇನೆ. ಅಧಿಕಾರಿಯೇ ಇಲ್ಲದಿರುವಾಗ ದೂತನು ಅಧಿಕಾರದ ಮಾತನಾಡಬಾರದು." ಭದ್ರ ಸೋಮದಂತನಿಗೆ ವಂದಿಸಿದ. "ಕೇಳು ಸೋಮದಂತ. ಈಗ ನಮಗೆ ಅತ್ಯಗತ್ಯವಾಗಿ ನಿನ್ನ ಗಜಗಣದ ಬೇಷಜರ ಭಿಕ್ಷೆ ಬೇಡುವ ಅಗತ್ಯವಿದೆ."

"ಶತ್ರುಗಳಿಗೆ ಭಿಕ್ಷೆ ನೀಡುವ ಸಂಪ್ರದಾಯ ನಿಮ್ಮಲ್ಲಿದೆಯೇ?" ಸೋಮದಂತ ಕೇಳಿದ.

"ಕೈಯೊಡ್ಡಿ ಭಿಕ್ಷೆ ಬೇಡುವ ಯಾವನಾದರೂ ಅವನು ದೀನನು. ದೀನನಿಗೆ ಶತ್ರುತ್ವ, ಮಿತ್ರತ್ವಗಳಿಲ್ಲ. ಯಾರೊಬ್ಬನ ಪರಮ ನೀಚ ಅವಸ್ಥೆಯೇ ದೀನತ್ವ. ನೀನು ನಿನ್ನ ಶತ್ರುವನ್ನು ನಿನ್ನ ಸಂಪೂರ್ಣ ಬಲ ಉಪಯೋಗಿಸಿ ಮಾಡುವುದಾದರೂ ಏನನ್ನು ಅವನನ್ನು ದೀನನನ್ನಾಗಿಸುವುದನ್ನು ಬಿಟ್ಟರೆ? ಆದರೆ ನಿನ್ನ ಶತ್ರುವೇ ದೀನನಾಗಿಬಿಟ್ಟರೆ, ನಿನ್ನ ಶಕ್ತಿಯು, ಸಮಯವು ವೃಥಾ ಹರಣವಾಗುವುದು ತಪ್ಪಿತು." ಎಂದ ಭದ್ರ.

"ಸರಿ, ಹೇಳು ನಿಮ್ಮ ನಾಯಕ ರುದ್ರನಿಗೆ ಇದ್ದಕ್ಕಿದ್ದಂತೆ ಶಿಶ್ನವು ನಿಮಿರುವುದು ನಿಂತು, ಅವನ ಕಾಪಾಲಿಕ ಸಾಧನೆಗೆ ಅಡ್ಡಿಯಾಯಿತೇ?" ಎಂದ ಸೋಮದಂತ.

"ನಮ್ಮ ರುದ್ರಪ್ರಭುವಿನ ಶಿಶ್ನವು ಸುರ, ನರ, ಕಿನ್ನರ, ಕಿಂಪುರುಷ, ಸಿದ್ಧ, ಮುನಿಗಳಾದಿಯಾಗಿ ಪೂಜೆಗೊಳ್ಳುತ್ತಾ ಊರ್ಧ್ವಲಿಂಗವಾಗಿ ಶೋಭೆಯಿಂದ ಕಂಗೊಳಿಸುತ್ತಿದೆ. ಢುಂಢಿ ಎಂಬ ಬಾಲಕನು ಪಾರ್ವತೀದೇವಿಯ ಸಾಕುಮಗನಾಗಿ ಸ್ವೀಕರಿಸಲ್ಪಟ್ಟಿದ್ದು, ಈಗ್ಗೆ ಮೂರುದಿನಗಳ ಹಿಂದೆ ನಡೆದ ಅಚಾತುರ್ಯದಲ್ಲಿ ಘಾತನಾಗಿ ಮೂರ್ಚಿತನಾಗಿದ್ದಾನೆ. ಅವನನ್ನು ಜೀವಕ್ಕೆ ಮರಳಿ ತರಲು, ಸಂಜೀವನುದಾನ ಮಾಡಲು, ನಮ್ಮ ರುದ್ರನು ತಮ್ಮ ಕಡೆಗೆ ಸಾವಧಾನದ, ಸಂಧಾನದ ಕೈಗಳನ್ನು ಚಾಚಿ ಭೇಷಜರನ್ನು ಬೇಡಿದ್ದಾನೆ. ಹೆಚ್ಚು ಕಾಲಹರಣ ಮಾಡದೇ ತ್ವರಿತವಾಗಿ ನಿನ್ನ ಅಭಿಪ್ರಾಯವನ್ನು ತಿಳಿಯಲು ನಾನು ಕಾತುರನಾಗಿದ್ದೇನೆ." ಎಂದ ಭದ್ರ.

"ಭಲೇ. ಪಾಣಿಗ್ರಹಣ ಮಾಡಿದ ಪತ್ನಿಯ ಮನದಿಂಗಿತವನ್ನು ತಿಳಿಯುವುದು ಕಷ್ಟಸಾಧ್ಯ. ಆತ್ಮೀಯ ಸ್ನೇಹಿತನ ಮನದ ಮೇಲಿನ ಪ್ರಭಾವಗಳನ್ನು ಊಹಿಸುವುದೂ ಕಠಿಣ. ಆದರೆ, ಪರಮ ಶತ್ರುವಿನ ನಿಲುವು, ಅವನ ಅಭಿಪ್ರಾಯ ತನ್ನ ಶತ್ರುವಿನ ಕುರಿತದ್ದಾಗಿ ಏನಾಗಿರುತ್ತದೆ ಎಂಬುದು ಊಹಿಸಿಕೊಳ್ಳುವುದು ಅಥವಾ

ಕಲ್ಪಿಸಿಕೊಳ್ಳುವುದು ಏನೂ ಕಷ್ಟವಲ್ಲ ಅಲ್ಲವೇ ಹೇ ಅರಿಮಿತ್ರಾ? ಸೋಮದಂತನ ಎಡೆಯಲ್ಲಿ ಭದ್ರನಿದ್ದಿದ್ದರೆ ಏನು ಮಾಡುತ್ತಿದ್ದನೋ ಅದನ್ನೇ ಈ ಸೋಮದಂತನು ಮಾಡುತ್ತಾನೆ." ಎಂದ ಸೋಮದಂತ.

"ಹೇ ಸೋಮದಂತ, ಶತ್ರುತ್ವ ನಿನ್ನ ಕರ್ತೃತ್ವ. ನಾವು ಶಸ್ತ್ರಧಾರಿಗಳಾದರೂ ಯೋಗಿಗಳು. ನಮ್ಮ ಬಳಿ ಕೈ ಚಾಚಿದವರಿಗೆ ನಾವು ಬೇಡಿ ಬಂದ ಭಿಕ್ಷೆಯ ಪಾಲನ್ನು ನೀಡುತ್ತೇವೆ. ಭಿಕ್ಷೆಯನ್ನೇ ಭಿಕ್ಷೆಯನ್ನಾಗಿ ನೀಡುವುದರಲ್ಲಿ ಕಳೆದುಕೊಳ್ಳುವುದೇನಿದೆ?" ಎಂದ ಭದ್ರ ಇಷ್ಟು ಹೊತ್ತಿಗಾಗಲೇ ಅರಿವಾಗಿ ಹೋಗಿತ್ತು, ತಾವು ಕಾಲಹರಣ ಮಾಡದೇ ರುದ್ರನ ಕೊನೆಯ ಅಪ್ಪಣೆಯನ್ನು ನೆರವೇರಿಸುವ ಅಗತ್ಯವೇ ಇಲ್ಲಿ ಇರುವುದು ಎಂದು.

"ಹಾಗಾದರೆ, ಕೇಳು, ಷಂಡರಿಗೆ ಶಿಶ್ನಹರಣ ಮಾಡುವ ಅಗತ್ಯವಿಲ್ಲ. ಭಿಕ್ಷೆಗಾಗಿ ಚಾಚಿದ ಕೈಯನ್ನು ತಲೆಯ ಮೇಲಿಟ್ಟುಕೊಂಡು ಇಲ್ಲಿಂದ ಹೊರಟು ಹೋಗು. ನಿನ್ನ ರುದ್ರನಿಗೆ ಈ ನಾಯಕನ ಔದಾರ್ಯದ ಬರ ತಟ್ಟಲಿ." ಎಂದು ಸೋಮದಂತ ನದಿಯ ಕಡೆಗೆ ನಡೆದ.

"ಸೋಮದಂತ," ಒರೆಯಿಂದ ಖಡ್ಗವನ್ನು ಎಳೆದು ಭದ್ರ ನಿಂತ. "ನಿನ್ನ ಭೇಷಜರನ್ನು ನೀನೇ ಸಮಾಧಾನದಿಂದ ಕಳುಹಿಸಿಕೊಟ್ಟರೆ ಸಂಧಾನ."

"ಇಲ್ಲವಾದರೆ?" ಸೋಮದಂತ ತನ್ನ ಒರೆಯಿಂದಲೂ ಖಡ್ಗವನ್ನು ಹೊರತೆಗೆದ.

"ಈಗ ಕಾಲಹರಣಕ್ಕೆ ಸಮಯವಿಲ್ಲ." ಭದ್ರ ಅವನ ಮೇಲೆ ಎರಗಿದ.

ವಜ್ರ, ನಂದಿ ಮತ್ತು ಇತರ ಪ್ರಮಥರು ಗಜಗಣದ ಮೇಲೆ ಎರಗಿದರು. ಪರಸ್ಪರ ನಡೆದ ಭೀಕರ ಹೋರಾಟದಲ್ಲಿ ಸೋಮದಂತನು ಭದ್ರನಿಗೆ ಕೈಸೆರೆಯಾದ.

"ಹೇಳು ಸೋಮದಂತ, ನಿನ್ನ ಬೇಷಜರಿಗೆ ಹೇಳು ನಮ್ಮ ಕೂಡ ನಡೆಯುವಂತೆ." ಭದ್ರನ ಎಡಗೈ ಸೋಮದಂತನ ನೀಳವಾದ ಮುಡಿಯನ್ನು ಹಿಡಿದಿತ್ತು. ಬಲಗೈಯಲ್ಲಿರುವ ಖಡ್ಗವು ಅವನ ಕುತ್ತಿಗೆ ಒತ್ತರಿಸಿತ್ತು.

"ನಾನು ಜೀವದಲ್ಲಿರುವವರೆಗೂ ಎಂದಿಗೂ ನಿಮಗೆ ಹೇಳುವುದಿಲ್ಲ ನಮ್ಮ ಶತ್ರುವಿಗೆ ಸಂಜೀವಿನಿಯನ್ನು ಧಾರೆಯೆರೆಯಲು." ಎಂದ ಸೋಮದಂತ.

"ಹಾಗಾದರೆ, ನೀನು ಜೀವದಲ್ಲಿರಬೇಡ." ಎಂದ ಭದ್ರ ಸೋಮದಂತನ ಕುತ್ತಿಗೆಯನ್ನು ಕತ್ತರಿಸಿಬಿಟ್ಟ. ಛಿಳ್ಳನೆ ಕಾರಂಜಿಯಂತೆ ರಕ್ತವು ಕುತ್ತಿಗೆ ತುಂಡಾದ ಮುಂಡದಿಂದ ಚಿಮ್ಮತೊಡಗಿತು. ಹಾರಿ ಬಿದ್ದ ಸೋಮದಂತನ ಮುಂಡವು ನೆಲದ ಮೇಲೆ ಗಳಿಗೆಗಳ ಕಾಲ ಒದ್ದಾಡಿ ನಿಶ್ಚೇತವಾಯಿತು. ಭದ್ರನ ಕೈಯಲ್ಲಿರುವ ಅವನ ರುಂಡದಲ್ಲಿ ಕಣ್ಣುಗಳು ವಿಶಾಲವಾಗಿ ತೆರೆದಿದ್ದವು.

ಅದನ್ನು ಕೈಯಲ್ಲಿ ಹಿಡಿದುಕೊಂಡೇ ಭದ್ರನು ಗಜಗಣದ ಬೇಷಜರ ಮುಂದೆ ಮೊಣಕಾಲೂರಿ ಹೇಳಿದ. "ಇದು ಈತನೇ ತಂದುಕೊಂಡಂತಹ ಸ್ಥಿತಿ. ನಾವು ಈ ಉದ್ದೇಶಕ್ಕೆ ಬರಲಿಲ್ಲ. ದಯಮಾಡಿ, ಪ್ರಕೃತಿಯ ದಯೆಯಿಂದ ನಿಮಗೆ ದೊರಕಿರುವ ಸಂಜೀವಿನಿ ವಿದ್ಯೆಯನ್ನು ಪ್ರಯೋಗ ಮಾಡಲು ನಮ್ಮ ಜೊತೆಗೆ ಬನ್ನಿ. ನಿಮಗೆ ಯಾವುದೇ ಭಯವಿರದು."

ವಜ್ರ ಖಡ್ಗವನ್ನು ಹಿಡಿದೆತ್ತಿ ಹೇಳಿದ. “ಗಜಗಣವಾಗಲಿ, ಮಾತಂಗ ಗಣವಾಗಲಿ ಎರಡೂ ಒಂದೇ. ನೀವು ನಿಮ್ಮ ಸಮಸ್ತಗಳೊಡನೆ ನಮ್ಮ ಜೊತೆಗೆ ಬನ್ನಿ. ನೀವು ಬರುತ್ತಿರುವುದು ಶತ್ರುವಿನ ಸೆರೆಮನೆಗಲ್ಲ. ನೀವು ಈ ಮೊದಲು ಮುನಿಸಿಕೊಂಡು ಬಿಟ್ಟು ಹೋಗಿದ್ದ ತಂದೆಯ ಮನೆಗೆ. ನೀವು ನಿಮ್ಮ ಯಜಮಾನನ ಕಟ್ಟುಪಾಡುಗಳಿಗಿಂತಲೂ ತಂದೆಯ ಮನೆಯ ಸ್ವಾತಂತ್ರ್ಯವನ್ನು ಅನುಭವಿಸಲು ಮನಸ್ಸು ಮಾಡಿ.”

ಆಗ ಲೋಮಹಿತನೆಂಬುವನು ಮುಂದೆ ಬಂದು ಹೇಳಿದ.

“ನಿಮ್ಮ ಮಾತಿನಲ್ಲಿರುವ ಸತ್ಯಾಸತ್ಯತೆಯನ್ನು ವಿವೇಚಿಸುವಷ್ಟು ಸಾಮರ್ಥ್ಯ ನಮ್ಮಲ್ಲಿ ಇದೆಯೆಂದು ತಿಳಿಸಲು ನಮಗೆ ಸಂತೋಷವಾಗುತ್ತಿದೆ. ನಾವುಗಳೆಲ್ಲರೂ ನಮ್ಮ ನಮ್ಮ ಗಜಗಳ ಮೇಲೆ ಕುಳಿತು ಕೈಲಾಸಕ್ಕೆ ಬರುತ್ತೇವೆ. ನೀವು ನಿಮಗೆ ಅಗತ್ಯವಿರುವ ಬೇಷಜರನ್ನು ಈ ಕೂಡಲೇ ನಿಮ್ಮ ಕುದುರೆಗಳ ಮೇಲೆ ಕರೆದುಕೊಂಡು ಹೋಗಿ. ನಾವು ಹತನಾಗಿರುವ ನಮ್ಮ ನಾಯಕನ ಅಂತ್ಯಕ್ರಿಯೆಯನ್ನು ಮಾಡುವ ಹೊಣೆಗಾರಿಕೆಯನ್ನು ಪೂರ್ತಿ ಮಾಡಿಕೊಳ್ಳುತ್ತೇವೆ.”

ಅದರಂತೆಯೇ ಆಯಿತು. ತಕ್ಷಣಕ್ಕೆ ಅವರ ಮುಂದಾಳಾಗಿ ವಜ್ರನೇ ನಿಂತ. ಅವನ ಜೊತೆಗೆ ಬೇಷಜರಿಗೆ ಕುದುರೆಗಳನ್ನು ಬಿಟ್ಟುಕೊಟ್ಟ ಮಾತಂಗ ಮತ್ತು ರುದ್ರಗಣದ ಏಳುಜನರ ಜೊತೆ ಇನ್ನಷ್ಟು ಪ್ರಮಥರು ಅಲ್ಲಿಯೇ ಉಳಿದರು. ಗಜಗಣದ ಬೇಷಜರನ್ನು ಕುದುರೆಗಳ ಮೇಲೆ ಕೂರಿಸಿಕೊಂಡು, ಅವರಿಗೆ ಅಗತ್ಯವಾಗಿರುವ ಸಂಜೀವಿನಿಯ ಮೂಲಿಕೆಗಳನ್ನು ಮಾರ್ಗದಲ್ಲಿಯೇ ಸಂಗ್ರಹಿಸುತ್ತಾ ಭದ್ರನ ನೇತೃತ್ವದ ತಂಡ ಕೈಲಾಸವನ್ನು ತಲುಪಿದಾಗ ಮರುದಿನ ಸಂಜೆಯಾಗಿತ್ತು.

ದೂರದಿಂದಲೇ ಕುದುರೆಯ ಖರಪುಟಗಳನ್ನು ಕೇಳಿದಾಗ ಢುಂಢಿಯ ದೇಹವನ್ನು ಕಾಯುತ್ತಿದ್ದ ಸಿದ್ಧೇಶ್ವರ ಮತ್ತು ಆತನ ಅನುಚರರು, ಪಾರ್ವತಿಯೊಡನೆ ಇದ್ದವರು, ರುದ್ರನೊಂದಿಗೆ ಬಿಲ್ವ ವೃಕ್ಷದ ಬುಡದಲ್ಲಿದ್ದವರು ಎಲ್ಲರೂ ಎಚ್ಚೆತ್ತರು.

“ದನೂ, ಅವರು ಖಂಡಿತ ಬೇಷಜರನ್ನು ಕರೆದುಕೊಂಡು ಬಂದಿರುತ್ತಾರೆ ಅಲ್ಲವೇ?” ಎಂದು ಪಾರ್ವತಿ ಆತಂಕದಿಂದ ಕೇಳಿದಳು.

ದನು ಏನೂ ಉತ್ತರಿಸಲಿಲ್ಲ. ಆದರೆ, ಸಿದ್ಧೇಶ್ವರ ಹೇಳಿದ. “ತಾಯಿ, ಖಂಡಿತವಾಗಿ ಅವರು ಬೇಷಜರೊಂದಿಗೆ ಬಂದಿರುತ್ತಾರೆ. ಈ ಹುಡುಗನಿಗೆ ಈಗ ಖಂಡಿತವಾಗಿಯೂ ಸಾವಿಲ್ಲ. ನಿನ್ನ ತಾಯ್ತನದ ಶಕ್ತಿಯು ಬಹು ಪ್ರಭಾವಶಾಲಿಯಾದುದ್ದು.”

ಭದ್ರ, ನಂದಿ ಮೊದಲು ಕುದುರೆಯಿಂದ ಕೆಳಗಿಳಿದರು. ಅವರ ಹಿಂದೆಯೇ ಗಜಗಣದ ಏಳುಜನ ಬೇಷಜರೂ ಕುದುರೆಗಳಿಂದ ಕೆಳಗಿಳಿದರು.

ಭದ್ರ ಪಾರ್ವತಿ ಮತ್ತು ರುದ್ರನಿಗೆ ವಂದಿಸಿ, “ಪ್ರಭೂ, ಇಗೋ ಗಜಗಣದ ಬೇಷಜರು ಇನ್ನು ನಮ್ಮವರು. ಸಂಧಾನಕ್ಕೆ, ಸಮಾಧಾನಕ್ಕೆ ಮಣಿಯದ ಸೋಮದಂತನ ನಿವಾರಿಸುವುದು ಇಷ್ಟವಿಲ್ಲದಿದ್ದರೂ ಅನಿವಾರ್ಯವಾಗಿತ್ತು. ವಜ್ರನು ಅಲ್ಲಿಯೇ ಉಳಿದಿದ್ದು, ಸೋಮದಂತನ ಅಂತ್ಯಕ್ರಿಯೆಯನ್ನು ನೆರವೇರಿಸಿ ಗಜಗಣದ ಗಜ ಮತ್ತು ಗಣಗಳೊಡನೆ ಬರುವನು.” ಎಂದು ನಿವೇದಿಸಿದನು.

ಬೇಷಜರು ಮುಂದೆ ಬಂದು ರುದ್ರನಿಗೂ ಮತ್ತು ಪಾರ್ವತಿಗೂ ವಂದಿಸಿದರು.

“ನೀವಿಲ್ಲಿ ನಿರ್ಭೀತಿಯಿಂದ ನಿಮ್ಮ ವೈದ್ಯ ಸಾಧನೆಯನ್ನು ಮಾಡಿಕೊಂಡು ಇರಬಹುದು. ನಾಗಲೋಕದಲ್ಲಿ, ಕೈಲಾಸದಲ್ಲಿ, ಅಥವಾ ಇನ್ನೆಲ್ಲಿಯಾದರೂ ಸ್ಥಿರವಾಗಿ ನೆಲೆ ನಿಲ್ಲುವ ನಿಮ್ಮಿಂದ ನರ, ಸುರ, ಅಸುರ, ಮುನಿಗಳಿಗೆ ವೈದ್ಯದ ಸೇವೆಯಾಗಲಿ.” ಎಂದು ರುದ್ರ ಅಪ್ಪಣೆ ಕೊಡಿಸಿ, “ತ್ವರಿತವಾಗಿ ಗುಣೇಶನನ್ನು ಅವಧಾನಿಸಿ.” ಎಂದ.

ಅದರಂತೆ ಬೇಷಜರು ಈ ರುದ್ರಗಣದ ವೈದ್ಯನಾದ ಸಿದ್ಧೇಶ್ವರನಿಗೆ ವಂದಿಸಿ, ಆತನಿಂದ ವಿಷಯದ ವಿವರಣೆಗಳನ್ನು ಪಡೆಯುತ್ತಾ ಢುಂಢಿಯ ನಾಡಿಯನ್ನು ಪರೀಕ್ಷಿಸಿ, “ಚಿಕಿತ್ಸೆಗೆ ಅವಕಾಶವಿದೆ.” ಎಂದರು. ಅಲ್ಲಿದ್ದ ಎಲ್ಲರಿಗೂ ಸಮಾಧಾನವಾಯಿತು. ಹೊರಗೆಯೇ ಬಿಲ್ವ ವೃಕ್ಷದ ಕೆಳಗೇ ಕೆಂಡವನ್ನು ಮಾಡಿಕೊಂಡು, ಅದರಲ್ಲಿ ತಾವು ತಂದಿದ್ದ ಸಂಜೀವಿನಿ ಮೂಲಿಕೆಗಳನ್ನು ಆವಿಕಟ್ಟಿ ಬೇಯಿಸಿ ರಸ ತೆಗೆದು ಅಗತ್ಯವಿರುವ ಚಿಕಿತ್ಸೆಯನ್ನು ಪ್ರಾರಂಭಿಸಿದರು.

ಮರುದಿನದ ಸೂರ್ಯನ ಪ್ರಥಮ ಕಿರಣಗಳು ಹಿಮಾಲಯ ಶಿಖರಗಳನ್ನು ಮುಟ್ಟುವಾಗ ಢುಂಢಿಯು ನಿಧಾನವಾಗಿ ಕಣ್ಣುಗಳನ್ನು ಬಿಡಿಸಿದ. ದನೂ ಒಳಗೆ ಓಡಿದಳು ಒಳಗಿದ್ದ ಪಾರ್ವತಿಗೆ ಸುದ್ಧಿ ಮುಟ್ಟಿಸಲು.

“ಒಡತಿ, ದೇವಿ, ಢುಂಢಿ ಮೇಲೆದ್ದ. ನಿಮ್ಮ ಗುಣೇಶ ಕಣ್ಣುಗಳನ್ನು ಬಿಟ್ಟ.”

ಪಾರ್ವತಿಯು ಆನಂದದಿಂದ ಹೊರಕ್ಕೆ ಓಡಿ ಬಂದಳು. ರುದ್ರನೂ ಚಪ್ಪಾಳೆಯನ್ನು ತಟ್ಟಿ ಆನಂದವನ್ನು ವ್ಯಕ್ತಪಡಿಸಿದ. ರುದ್ರಗಣ, ಮಾತಂಗ ಗಣ ಮತ್ತು ವಯನದವರೆಲ್ಲಾ ಆನಂದದಿಂದ ಚಪ್ಪಾಳೆಗಳನ್ನು ತಟ್ಟುತ್ತಾ ಕುಣಿಕುಣಿದಾಡಿದರು. ಕೈಗಳನ್ನು ಕಳೆದುಕೊಂಡಿದ್ದ ಸುಮುಖನೂ ಢುಂಢಿಯನ್ನು ನೋಡಿ ಆನಂದಿಸಿದ. ಶಂಖವು ಮೊಳಗಿತು, ನಗಾರಿಗಳು, ತಾಳ ಮದ್ದಲೆಗಳು ಸದ್ದು ಮಾಡಿದವು. ಆ ವಿಜೃಂಭಿಸಿದ ನಾದಕ್ಕೆ ಎಲ್ಲಾ ಗಣಗಳೂ ಬೇಧರಹಿತವಾಗಿ ಆನಂದದಿಂದ ಕುಣಿಕುಣಿದಾಡಿದರು.

“ಜಯ ಜಯ ರುದ್ರ, ಜಯ ಜಯ ಪಾರ್ವತೀ, ಜಯ ಜಯ ಗುಣೇಶ. ಜಯ ಜಯ ಢುಂಢಿ.” ಎಂಬ ಜಯಕಾರಗಳು ಕೈಲಾಸದಲ್ಲಿ ಮೊಳಗಿದವು. ಢುಂಢಿಯನ್ನು ತಮ್ಮ ವೈದ್ಯೋಪಚಾರಗಳಿಂದ ಈ ಜಯಘೋಷಕ್ಕೆ ಕಾರಣರಾದ ಬೇಷಜರನ್ನು ರುದ್ರನೂ ಮತ್ತು ಪಾರ್ವತಿಯೂ ವಂದಿಸಿ ಅಭಿನಂದಿಸಿದರು.

ಆಯಾಸದಿಂದ ಬಳಲಿದ್ದಂತೆ ಕಂಡ ಢುಂಢಿಯು ಮೌನವಾಗಿ ತನ್ನ ಸುತ್ತಲೂ ಆಗುತ್ತಿರುವುದನ್ನು ಕಂಡ. ಕಣ್ಣುಗಳನ್ನು ಮುಚ್ಚುವ ಮುನ್ನ ಶತ್ರುಗಳಂತೆ ವಿರೋಧಿಸಿದ್ದವರೆಲ್ಲಾ, ಈಗ ಕಣ್ಣುಗಳನ್ನು ಬಿಟ್ಟಾಗ ಮಿತ್ರರಂತೆ ತನ್ನ ಅಭಿನಂದಿಸುತ್ತಿರುವುದನ್ನು ಕಂಡು ಅವನಿಗೆ ಅಚ್ಚರಿಯೆನಿಸಿದರೂ ಅದಕ್ಕೆ ಕಾರಣ ರುದ್ರ ಮತ್ತು ಪಾರ್ವತಿಯರೇ ಎಂದು ಊಹಿಸಲು ಕಷ್ಟವಾಗಲಿಲ್ಲ.

ಪಾರ್ವತಿ ಅವನನ್ನು ಅಪ್ಪಿಕೊಂಡು ಕಣ್ಣೀರಿಟ್ಟಳು.

“ನಾನು ನಿನ್ನ ಎಂತಹ ಅಪಾಯದಲ್ಲಿ ದೂಡಿಬಿಟ್ಟಿದ್ದೆ. ಆದರೆ, ನಿಜವಾಗಿಯೂ ರುದ್ರನ ದಯೆಯಿಂದ ನಾನು ನಿನ್ನ ಮತ್ತೆ ಮರಳಿ ಪಡೆದೆ. ನೀನು ನನ್ನ ಮಗ, ಗುಣೇಶ, ನೀನು ನಿನ್ನ ತಾಯಿಗಾಗಿ ಸಾಯಲು ಸಿದ್ಧವಿದ್ದೆ. ನಾನು ಹೆತ್ತಿದ್ದರೂ ಇಂಥಾ ಮಗನನ್ನು ಪಡೆಯುತ್ತಿದ್ದೆನೋ ಇಲ್ಲವೋ. ಆದರೆ, ಇಂದು ನನ್ನ ತಾಯ್ತನದ ಹಂಬಲ ಪೂರ್ತಿಯಾಯಿತು.”

ಪಾರ್ವತಿ ರುದ್ರನ ಬಳಿಯೂ ಕ್ಷಮೆ ಕೇಳಿದಳು. "ಪ್ರಭೂ, ನನ್ನಲ್ಲಿರುವ ಹಟಮಾರಿತನವನ್ನು ನಾನು ಗುರುತಿಸಿಕೊಂಡೆ. ಈ ನಿಮ್ಮ ದಯೆಗೆ ನಾನು ಕೃತಜ್ಞಳು. ನನ್ನ ಮಗನ ನನಗೆ ಮರಳಿ ಒದಗಿಸಿದ್ದಕ್ಕೆ ನಾನು ಎಂದಿಗೂ ನಿಮ್ಮ ಬಗ್ಗೆ ಮತ್ತೆ ಆಗ್ರಹದ ಭಾವ ತಾಳದಿರಲು ನಿರ್ಧರಿಸಿದ್ದೇನೆ."

ರುದ್ರನು, "ಅಹೋ, ಭಲಾ, ಭಲಾ." ಎಂದು ಎಂದಿನಂತೆ ಕುಣಿದಾಡಿದನು. ಅವನೊಂದಿಗೆ ಪಾರ್ವತಿಯೂ, ಕೈಲಾಸದ ಇತರ ಸ್ತ್ರೀಯರೂ, ವಯನದ ಸ್ತ್ರೀಯರೂ ಆನಂದದಿಂದ ಕುಣಿಕುಣಿದಾಡಿದರು.

"ನಾಯಕ ರಹಿತವಾಗಿರುವ ಗಜಗಣ ಮತ್ತು ಮಾತಂಗ ಗಣವು ವಿಲೀನವಾಗಲಿ. ಅದರ ಗಾಣಪತ್ಯವನ್ನು ಗುಣೇಶನಿಗೇ ವಹಿಸೋಣ. ಅದಕ್ಕೆ ಅವನೇ ಗಣೇಶನಾಗಲಿ, ಗಣಪತಿಯಾಗಲಿ." ಎಂದು ರುದ್ರ ಘೋಷಿಸಿದ.

ಈ ಘೋಷಣೆಯನ್ನು ಕೇಳಿದ ಎಲ್ಲರೂ ಮತ್ತೆ ಶಂಖ, ಕೈಲಾಸವಾದ್ಯಗಳನ್ನು, ಕರತಾಲಗಳನ್ನು ನುಡಿಸುತ್ತಾ ಕುಣಿದಾಡಿದರು.

"ಜಯ ಜಯ ಢುಂಢಿ, ಜಯ ಜಯ ಗಣಪತಿ, ಜಯ ಜಯ ಗುಣೇಶ, ಜಯ ಜಯ ಗಣೇಶ." ಎಂಬ ಘೋಷಗಳು ಮಾರ್ದನಿಸಿದವು.

ಪಾರ್ವತಿಯು ಬಹು ಸಂತೋಷಗೊಂಡಳು. ರುದ್ರನೂ ನಗುತ್ತಿದ್ದ.

ಢುಂಢಿಯು ಎಲ್ಲವನ್ನೂ ನೋಡುತ್ತಿದ್ದ. ಅವನ ಮನಸ್ಸಿನಲ್ಲಿ ವದೀರಜ್ಜ ಮೂಡಿ ಬಂದ. ಅವನ ಮುಖದಲ್ಲಿಯೂ ನಗುವಿನ ಗೆರೆಗಳು ನಿಧಾನವಾಗಿ ಮೂಡಿ ಬರುತ್ತಿದ್ದವು.

ಆನಂತರ ಎರಡು ದಿನಗಳ ತರುವಾಯ ವಜ್ರನು ಗಜಗಣದ ಲೋಮಹಿತನನ್ನು ಹಿಂದಿಕ್ಕಿಕೊಂಡು, ತಂಡೋಪ ತಂಡಗಳಲ್ಲಿ ಆನೆಗಳನ್ನು ಮತ್ತು ಗಜಗಣದವರನ್ನು ನಡೆಸಿಕೊಂಡು ಕೈಲಾಸದ ಅರಣ್ಯಕ್ಕೆ ಬಂದಿಳಿದ.

ಗುಣೇಶನು ಗಣೇಶನಾದ ವಿಷಯವನ್ನು ತಿಳಿದು ಆನಂದಗೊಂಡ ವಜ್ರ ಅವನನ್ನು ಅಪ್ಪಿಕೊಂಡು ಅಭಿನಂದಿಸಿದ.

ಇವರ ಬರುವಿಕೆಗೇ ಕಾದಿದ್ದ ರುದ್ರ, ಎಲ್ಲರ ಸಮ್ಮುಖದಲ್ಲಿ ಮಾತಂಗರಿಗೆ ಗಣಪ್ರಮುಖನಾಗಿ ಢುಂಢಿಗೆ ಪದವಿ ನೀಡಿ ಅಭಿಷಕ್ತನಾಗಿಸಿದ.

ಇತರ ಗಣದವರೆಲ್ಲಾ ಅಲ್ಲಿ ನೆರೆದಿದ್ದು, ಗಣಪತಿಯಾದ ಢುಂಢಿಗೆ ಕಾಣಿಕೆಗಳನ್ನು ಸಲ್ಲಿಸಿದರು.

ಆ ಗಣಾಧ್ಯಕ್ಷನ ಪಟ್ಟಾಭಿಷೇಕದ ಸಮಯದಲ್ಲಿ ದೇವತೆಗಳೂ, ಆರ್ಯರ ಮುಖಂಡರು, ವೈದಿಕ ಬ್ರಾಹ್ಮಣರೂ, ಋಷಿಗಳು, ಮುನಿಗಳು ಎಲ್ಲರೂ ನೆರೆದಿದ್ದು ಮಂತ್ರ, ಹೂ ಹಾಗೂ ಅಕ್ಷತೆಗಳಿಂದ ಢುಂಢಿಯನ್ನು ಹಾರೈಸಿದರು.

ಢುಂಢಿಯ ಒರಟುತನದ ರುಚಿಯನ್ನು ನೋಡಿದ್ದ ದೇವತೆಗಳಿಗೆ ಮತ್ತು ಆರ್ಯ ಮುಖಂಡರಿಗೆ ಈ ಪಟ್ಟಾಭಿಷೇಕವೇನೂ ಹಿತವನ್ನು ತರಲಿಲ್ಲ. ಆದರೆ, ರುದ್ರನೊಡನೆ ಅವರಿಗಿರುವ ಅನಿವಾರ್ಯತೆಯ ಕಾರಣದಿಂದ ಶುಭವನ್ನು ಹಾರೈಸದೇ ವಿಧಿಯಿರಲಿಲ್ಲ.

“ಇನ್ನೂ ಮುಂದೆ ಯಾವ ಯಾವ ಘೋರಗಳನ್ನು ನೋಡಬೇಕೋ.” ಎಂದು ಅವರವರಲ್ಲಿಯೇ ಚರ್ಚೆಯಾಯಿತು.

ಆದರೆ ಎಲ್ಲರಿಗಿಂತ ಹೆಚ್ಚು ಸಂತೋಷ ಪಟ್ಟವಳು ಪಾರ್ವತಿ. ತನ್ನ ಮಗನು ಬಹುದೊಡ್ಡ ಗಣದ ಒಡೆಯನಾಗಿದ್ದಲ್ಲದೇ ಇಷ್ಟು ಬೇಗ ಎಲ್ಲರಿಂದ ಗಮನಿಸಲ್ಪಟ್ಟು ಹಾರೈಕೆಗಳಿಗೆ ಒಳಗಾದನು ಎಂದು.

ದನು ಈ ಸುದ್ಧಿಯನ್ನು ವಯನಕ್ಕೆ ತಲುಪಿಸಲು, ವದೀರಜ್ಜನಿಗೆ ಮುಟ್ಟಿಸಲು ಮಾರನಿಗೆ ಹೇಳಿದಳು. ಮಾರನು ಇಬ್ಬರು ವಯನದ ಅರಣ್ಯಕರೊಂದಿಗೆ ಢುಂಢಿಯು ಗಣಪತಿಯಾದ ಸುದ್ಧಿಯನ್ನು ಹೊತ್ತು ವಯನಕ್ಕೆ ನಡೆದ.

*

ಶಂಬರ ಗಣಪತಿಯ ಮಂಟಪಕ್ಕೆ ಮರಳಿ ಬಂದಾಗ ರುದ್ರ, ಢುಂಢಿ ಮತ್ತು ವದೀರಜ್ಜನ ಮುಂದೆ ಮಾತಂಗ ಗಣದ ಹೊಸ ಗಣಪತಿಯ ಪಟ್ಟಾಭಿಷೇಕ ನಡೆಯುತ್ತಿತ್ತು. ಐವತ್ತು ವಸಂತಗಳನ್ನು ಕಂಡಿದ್ದ ಆ ಬೆನಕನಿಗೆ ಗಾಣಪತ್ಯದ ಪದವಿ ನೀಡಿ ಗೌರವಿಸಲಾಗುತ್ತಿತ್ತು.

ಯದು, ಕುಶಿಕ, ಬೇಲ ಮತ್ತು ಇತರರು ಆ ಮಹೋತ್ಸವದಲ್ಲಿ ಭಾಗಿಯಾಗಿದ್ದರು. ಯಾಜ್ಞಿಕ ಮತ್ತು ರಸದೇವ ಹಾಗೂ ಇತರ ವೈದಿಕ ಬ್ರಾಹ್ಮಣರು ನೋಡುತ್ತಿದ್ದರು.

ಎಲ್ಲರೂ ಚಪ್ಪಾಳೆಯನ್ನು ತಟ್ಟಿ ಈ ಪದವಿಯನ್ನು ಬೆನಕನಿಗೆ ಕೊಡುತ್ತಿರುವುದನ್ನು ಅನುಮೋದಿಸಿದರು. ಈ ಬೆನಕ ಯಾರೆಂದು ತಿಳಿಯದೇ ಇದ್ದರೂ ಶಂಬರನು ಅವರೊಂದಿಗೆ ಸೇರಿ ಚಪ್ಪಾಳೆ ತಟ್ಟಿದ. ಆಮೇಲೆ ಯದು ಅಥವಾ ಕುಶಿಕರು ಸಿಕ್ಕಾಗ ವಿಷಯವನ್ನು ತಿಳಿದರಾಯ್ತು ಎಂಬ ಧೋರಣೆ ಶಂಬರನಿಗೆ.

ಢುಂಢಿಯ ಮುಖದಲ್ಲಿ ಶೋಭೆಯಿರದಿದ್ದರೂ, ಜೀವಂತಿಕೆಯ ಕಳೆಯಿತ್ತು. ವದೀರಜ್ಜನ ಮುಖ ನಗುನಗುತ್ತಿರುವಂತೆ ಶೋಭಿಸುತ್ತಿತ್ತು.

## ಅಧ್ಯಾಯ 16 ತಾಯಿ ಮತ್ತು ಸಂಗಾತಿ

ಅಂದು ಬೆಳಗ್ಗೆ ಮಾತಂಗ ಗಣದ ನೂತನ ನಾಯಕ ಬೆನಕ ಇತರ ಗಣಗಳ ಸಭೆ ಸೇರಿಸಿದ್ದ.

ಕುಳ್ಳನೆಯ ದೇಹದ, ಢುಂಢಿಗಿಂತಲೂ ಕಪ್ಪು ಮೈಯ, ಆದರೆ ತೀಕ್ಷ್ಣವಾದ ಕಣ್ಣುಗಳುಳ್ಳವನು ಬೆನಕ. ಅವನ ದನಿ ಕಂಚು ಹೊಡೆದಂತೆ ಗಡುಸಾಗಿಯೂ, ಆಳವಾಗಿಯೂ ಇತ್ತು. ನಿಧಾನವಾಗಿ ಮಾತಾಡಿದರೂ ನಿಷ್ಠುರವಾಗಿರುವಂತೆ ತೋರುವ ಅವನ ದನಿಯಲ್ಲಿ ಕಪಟವಿರಲಿಲ್ಲ. ತಾನು ಒಬ್ಬ ಅತಿ ದೊಡ್ಡ ಗಣದ

ಅಧಿಪತಿ ಎಂಬ ಗರ್ವವೂ ಇರಲಿಲ್ಲ. ಬದಲಾಗಿ, ಇಷ್ಟು ದೊಡ್ಡ ಪದವಿ ನನ್ನ ಪಾಲಿಗೆ ಒದಗಿದೆ ಎಂಬ ವಿನಯವೇ ಇತ್ತು.

"ಗಾಣಪತ್ಯದ ಸೀಮಿತ ಅರಣ್ಯಗಳಿಗೇ ಆಗಿದ್ದರೂ, ನಾವು ಆರ್ಯರ ವೈದಿಕ ಸಮುದಾಯದವರಲ್ಲಿ ಗಮನೀಯವಾಗಿದ್ದೇವೆ. ಇತರ ವರ್ಣಗಳವರೂ ನಮ್ಮ ಕಡೆ ನೋಡುತ್ತಿದ್ದಾರೆ. ಅವರು ನಮ್ಮನ್ನು ದ್ವೇಷಿಸಬಹುದು, ಅಥವಾ ಪ್ರೀತಿಸಬಹುದು. ಆದರೆ ನಮ್ಮನ್ನು ಕಡೆಗಣಿಸಲಾಗದು. ಹೀಗಿರುವಾಗ, ನಮ್ಮ ಹೊಣೆಗಾರಿಕೆಯನ್ನು ಅರಿತು ನಾವು ನಿಭಾಯಿಸಬೇಕು. ಭಗವಾನ್ ರುದ್ರನು ನಿಷಾದನಾಗಿದ್ದರೂ, ತಾಯಿ ಪಾರ್ವತಿಯು ಗಿರಿಗಳಲ್ಲಿರುವ ಬುಡಕಟ್ಟಿನ ಮಾತಂಗಿಯಾಗಿದ್ದರೂ ಆರ್ಯರಲ್ಲಿ, ವೇದಗಳಲ್ಲಿ ಸ್ಥಾನ ಪಡೆದಿದ್ದಾರೆ. ಹಾಗೆಯೇ, ಆರ್ಯ ಋಷಿಗಳು, ಇತರೇ ಋಷಿಗಳು ಸ್ತುತಿಗಳನ್ನು ರಚಿಸಿದ್ದಾರೆ. ಈ ಬಗೆಯ ಸ್ತುತಿಗಳು ನಮ್ಮ ಕೀರ್ತಿಗೆ ಮತ್ತು ಮುಂದಿನ ಜನಾಂಗಗಳಿಗೆ ನಮ್ಮ ಬಗ್ಗೆ ತಿಳಿಸುವುದಕ್ಕೆ ಅವಶ್ಯಕ. ನಮ್ಮ ನಾಯಕ ಢುಂಢಿ ಗಣಪತಿಯೇ ಮಹಾಗಣಪತಿ. ಈ ಆದಿ ಗಣಪತಿಯ, ಮಹಾಗಣಪತಿಯ ಮಹಾ ಚೈತನ್ಯವನ್ನು ವಿಶ್ವದ ದೈವೀಮಂಡಲದಲ್ಲಿ ಒಂದು ಮಾಡುವ ಅಗತ್ಯವಿದೆ. ಅದಕ್ಕೆ ನಮಗೆ ಆರ್ಯ ಪುರೋಹಿತರ, ವೈದಿಕರ ಸಹಾಯ ಸಿಗುವುದಿಲ್ಲ. ಬದಲಾಗಿ ನಮಗೆ ತಡೆಯೊಡ್ಡುತ್ತಾರೆ. ಸಾಮಾನ್ಯ ಜನರಿಗೆ, ಶ್ರೀಮಂತರಿಗೆ, ರಾಜರುಗಳಿಗೆ ಮಾಡುವಂತಹ ಸಾಮಾನ್ಯ ಆಶೀರ್ವಚನವನ್ನು ನಮಗೆ ಹೇಳುತ್ತಾರೆ. ನನಗೆ ಇಲ್ಲಿ ಗಣನಾಯಕನ ಪದವಿ ನೀಡುವಾಗಲೂ ಅವರು ಅಷ್ಟೇ ಹೇಳುತ್ತಿದ್ದದ್ದು. ಮಹಾಗಣಪತಿ ಢುಂಢಿಗೂ ಆಪತ್ಕಾಲ ನಿವಾರಣೆಯಾಗಲಿ ಎಂದು ಅವರ ದೇವ ಭಾಷೆಯಲ್ಲಿ ಹೇಳುತ್ತಾರೆ. ಆದರೆ, ನಮಗೆ ಸಹಕರಿಸಬಲ್ಲ ಮಹರ್ಷಿಗಳೆಂದರೆ ವಾಮದೇವರು. ಈ ಹಿಂದೆ ವಾಮದೇವರಿಗೆ ಮೂಷಕಗಣದ ಕ್ರೌಂಚನಿಂದ ತೊಂದರೆಯಾದಾಗ ನಮ್ಮ ಢುಂಢಿ ಗಣಪತಿಯು ಅದನ್ನು ಬಗೆ ಹರಿಸಿದ್ದಾನೆ. ವಾಮದೇವರಿಗೆ ನಮ್ಮ ಮಹಾಗಣಪತಿ ಢುಂಢಿಯ ಹೆಸರನ್ನು ಅಜರಾಮರ ಮಾಡಲು ಸಾಧ್ಯವಿದೆ. ಮರಣಶಯ್ಯೆಯಲ್ಲಿರುವ ಢುಂಢಿಗೆ ದೇಹಮುಕ್ತನಾಗಲೂ ಸಹಾಯ ಮಾಡಬಹುದು." ಇಷ್ಟು ಹೇಳಿ ಬೆನಕ ಸುಮ್ಮನಾದ.

ಮಾತಂಗ ಗಣದ ಒಬ್ಬ ಹಿರಿಯರೊಬ್ಬರು ಕೇಳಿದರು. "ಹೇ ಬೆನಕನೇ, ಗಣನಾಯಕನೇ, ಈಗ ನಾವು ಏನು ಮಾಡಬೇಕು?"

"ಮಹರ್ಷಿ ವಾಮದೇವರನ್ನು ಇಲ್ಲಿಗೆ ಕರೆತರಬೇಕು. ಆದಷ್ಟು ಬೇಗ ಅವರನ್ನು ಕರೆತರಲು ಯಾರನ್ನು ಕಳಿಸಬೇಕು ಎಂದು ವಿಚಾರಿಸುತ್ತಿದ್ದೇನೆ." ಎಂದ ಬೆನಕ.

ಅದೇ ಹಿರಿಯರು ಹೇಳಿದರು. "ವಯನದಿಂದ ವದೀರಜ್ಜನನ್ನು ಕರೆತಂದ ಕುಶಿಕ, ಯದು, ಬೇಲ, ಶಕಧೂಮ ಮತ್ತು ಅವರ ತಂಡವೇ ಈ ಮಹರ್ಷಿಯನ್ನೂ ಕರೆತರುವುದು ಸೂಕ್ತವೆನಿಸುತ್ತದೆ."

ಅದಕ್ಕೆ ಎಲ್ಲರ ಸಮ್ಮತಿಯು ದೊರಕಿ, ಪ್ರಯಾಣಕ್ಕೆ ಸಿದ್ಧವಾದರು. ಯದು ಯಾಜ್ಞಿಕ ಮತ್ತು ಶಂಬರನನ್ನೂ ತಮ್ಮ ಜೊತೆಯಲ್ಲಿ ಬರಲು ಕೇಳಿಕೊಂಡರು. ಅವರು ಕೇಳದಿದ್ದರೂ ಹೊರಡಲು ಸಿದ್ಧವಿದ್ದ ಶಂಬರ ಮತ್ತು ಯಾಜ್ಞಿಕರೂ ಪ್ರಯಾಣಕ್ಕೆ ಸಿದ್ಧವಾದರು.

ಮರುದಿನ ಬೆಳಗಿನ ಜಾವ ತಂಡವು ಢುಂಢಿಯ ದರ್ಶನ ಮಾಡಿ, ಅವನ ಅನುಮತಿಯನ್ನು ಕೋರಿತು. ಎಲ್ಲರೂ ಹೊರಡುವ ಮುನ್ನ ಢುಂಢಿಯ ಕೊಡಲಿಯಿದ್ದ ಕುಟೀರದಲ್ಲಿ ವದೀರಜ್ಜನನ್ನು ಶಂಬರ ಕಂಡ.

'ನಾವು ಮಹರ್ಷಿಯಾದ ವಾಮದೇವರನ್ನು ಕರೆತರಲು ಹೋಗುತ್ತಿದ್ದೇವೆ. ನೀವು ನಮಗೆ ಏನಾದರೂ ಹೇಳುವುದಿದೆಯೇ?' ಶಂಬರ ಮನದಲ್ಲಿಯೇ ಹೇಳಿಕೊಳ್ಳುತ್ತಾ ವದೀರಜ್ಜನ ಸಂಕೇತಕ್ಕಾಗಿ ಕಾದ. ಯಾವುದೇ ಸಂಕೇತವು ಸಿಕ್ಕಂತೆ ಅವನಿಗೆ ಅನ್ನಿಸಲಿಲ್ಲ. ವದೀರಜ್ಜನಿಗೆ ಬಾಗಿದ ಶಂಬರ ಅಲ್ಲಿಂದ ಹೊರಟ.

“ವಾಮದೇವ ಮಹರ್ಷಿ ಇರುವುದು ಎಲ್ಲಿ?” ದಾರಿಯಲ್ಲಿ ಶಂಬರ ಕೇಳಿದ.

“ತೀರಾ ಸನಿಹದಲ್ಲಿಯೇ. ಅಂತರ್ವೇದಿಗೆ ತೀರಾ ಸಮೀಪ. ನನಗೆ ಆ ಕ್ಷೇತ್ರಕ್ಕೆ ಏನನ್ನುತ್ತಾರೆ ಎಂದು ಸರಿಯಾಗಿ ಗೊತ್ತಿಲ್ಲ.” ಎಂದ ಯದು.

“ಇಲ್ಲಿಂದ ಕೆಲವು ಕಾಲದ ದಾರಿ. ಸೂರ್ಯ ಮುಳುಗುವ ಮುನ್ನವೇ ವಾಮದೇವರ ಕ್ಷೇತ್ರದಲ್ಲಿ ಇರುತ್ತೇವೆ. ಗಂಗಾನದಿಯ ದಂಡೆಯನ್ನು ಬಿಡಕೂಡದು ಅಷ್ಟೇ.” ಎಂದ ಕುಶಿಕ.

“ಢುಂಢಿಯ ಮಾರ್ಗಸೂಚಿಯಂತೆ.” ಎಂದ ನಕ್ಕ ಬೇಲ.

“ಹೌದು.” ಎಂದು ಯದು ಮತ್ತು ಕುಶಿಕರು ನಕ್ಕರು.

“ಏನದು?” ಶಂಬರ ಅರ್ಥವಾಗದೇ ಕೇಳಿದ.

“ಢುಂಢಿಗೆ ಯಾವುದೇ ಸ್ಥಳಕ್ಕೆ ಹೋಗುವುದಕ್ಕೆ ಮಾರ್ಗಸೂಚಿಯನ್ನು ಹೇಗೇ ಹೇಳಿದರೂ ತಿಳಿಯುವುದಿಲ್ಲ. ಗಂಗಾ ತೀರದ ಕಡೆಯಿಂದ ಹೇಳಿದರೆ ಮಾತ್ರ ತಿಳಿಯುವುದು. ಎಲ್ಲಿಗೇ ಹೋಗಬೇಕೆಂದರೂ ಗಂಗಾ ನದಿಗೆ ನಮ್ಮ ಮಾರ್ಗವನ್ನು ತಿರುಗಿಸಿಕೊಂಡೇ ಹೇಳಬೇಕು.” ಹೇಳಿದ ಯದು.

*

“ವಯನದ ಮಾರ್ಗವೇನು?” ವಜ್ರ ಢುಂಢಿಯನ್ನು ಕೇಳಿದ.

“ಗಂಗಾನದಿಯ ಮಾರ್ಗವಾಗಿ ಅವಿಮುಕ್ತಕ್ಕೆ ಹೋಗಬೇಕು. ಅದೇ ಗಂಗಾ ನದಿಯ ಮಾರ್ಗದಲ್ಲಿ ಮುಂದುವರೆದು ದಕ್ಷಿಣಕ್ಕೆ ತಿರುಗಿದರೆ ವಯನ.” ಢುಂಢಿ ಹೇಳಿದ.

ಗಾಣಪತ್ಯ ಲಭ್ಯವಾದ ಮೇಲೆ ಢುಂಡಿಗೆ ವಯನಕ್ಕೆ ಹೋಗುವ ಸಾಧ್ಯತೆಗಳು ಕ್ಷೀಣಿಸತೊಡಗಿದವು. ಈಗ ಮಾತಂಗ ಗಣ ಮತ್ತು ಗಜಗಣಗಳೆರಡೂ ಒಂದಾಗಿ ಮಾತಂಗಗಣವೇ ಆಗಿರುವುದರಿಂದ ಗಣದಲ್ಲಿರುವ ಸಂಖ್ಯೆಯೂ ಹೆಚ್ಚಿತ್ತು. ಅವರ ಧ್ವಜದ ಲಾಂಛನ ಸೊಂಡಿಲನ್ನೆತ್ತಿಕೊಂಡಿರುವ ಆನೆ.

ಕೈಲಾಸದಲ್ಲಿ ಸಕಲ ಗಣಗಳ ಸಭೆ ಸೇರಿದಾಗ ಢುಂಢಿಗೆ ವಿಶೇಷವಾದ ಮರ್ಯಾದೆ. ನಂದಿ, ಭೃಂಗಿ, ಭದ್ರ ಮತ್ತು ವೀರಭದ್ರರಂತಹ ಹಿರಿಯ ಗಣಗಳಿದ್ದರೂ, ಈ ಢುಂಢಿ ಆ ಎಲ್ಲರನ್ನೂ ಸೋಲಿಸಿರುವುದಕ್ಕೋ ಅಥವಾ ಅವರು ಬರಿಯ ಗಣಗಳಾಗಿ ಉಳಿದಿರುವುದರಿಂದಲೋ, ಇವನು ಗಣನಾಯಕನಾಗಿರುವುದರಿಂದಲೋ ಅಂತೂ ಢುಂಢಿಯ ಕಡೆಗೆ ಎಲ್ಲರ ವಿಶೇಷ ಗಮನ.

ಆದರೆ ಢುಂಢಿಯ ಗಮನ ಪಾರ್ವತಿಯ ಕಡೆಗೇ.

ಆ ಮಾತಂಗ ಕನ್ಯೆಯೂ ಅವನನ್ನೊಬ್ಬನೇ ಗಿರಿಗಳಲ್ಲಿ ಸುತ್ತಾಡಿಸಿಕೊಂಡು ಬರುತ್ತಾಳೆ. ಅವಳು ಹುಟ್ಟಿ ಬೆಳೆದ ಗಿರಿಗಳ ಪ್ರದೇಶ. ಪ್ರತಿಯೊಂದು ಗಿರಿಯೂ ಅವಳಿಗೆ ಪರಿಚಿತ ಹಾಗೂ ಆತ್ಮೀಯ. ಅಲ್ಲಿನ ಗಿರಿಜನರು ಮತ್ತು ಮಾತಂಗರು ಅವಳಿಗೆ ನಿಜವಾದ ಬಂಧುಗಳು. ಹಾಗೆಯೇ ಅವರಿಗೂ ಕೂಡ ಪಾರ್ವತಿಯನ್ನು ಕಂಡರೆ ಒಲವು ಮತ್ತು ಅಭಿಮಾನ. ಪ್ರೀತಿಯಿಂದ, ಒಡೆಯನ ಮಗಳೆಂಬ ಗೌರವದಿಂದ ಗಿರಿಜಾ ಎಂದು ಕೂಗುತ್ತಾರೆ. ಪಾರ್ವತಿ ಯಾವುದೇ ಕೋಡುಗಲ್ಲನ್ನು ಏರಿ, "ಹೋಯ್..." ಎಂದು ಕೂಗಿದರೆ, "ಹೋಯ್, ಗಿರಿಜಮ್ಮಾ..." ಎಂದು ಹಲವು ಜನರ ದನಿಗಳು ಗಿರಿಗಳಿಂದ ಮಾರ್ದನಿಗೊಳ್ಳುವವು. ಢುಂಢಿಯು ನದಿ ದಂಡೆಯ ಅರಣ್ಯಪ್ರದೇಶದಿಂದ ಬಂದವನು. ಅವನಿಗೆ ಈ ಗಿರಿಗಳ ಕಣಿವೆಗಳಲ್ಲಿರುವ ಜನರ ಸಂಸ್ಕೃತಿ ಮತ್ತು ಜೀವನ ಹೊಸತು ಮತ್ತು ವಿಸ್ಮಯ. ಆದರೆ ಇಬ್ಬರೂ ಕಾಡಿನ ಕುರಿತಾದ ಆಸಕ್ತಿಯಲ್ಲಿ, ಪ್ರೀತಿಯಲ್ಲಿ ಒಂದೇ. ತಮ್ಮ ನೆಲೆಯಾದ ಕಾಡನ್ನು ಉಳಿಸುವ ವಿಷಯದಲ್ಲಿ ಇಬ್ಬರೂ ಭಾವನಾತ್ಮಕವಾಗಿ ಸ್ಪಂದಿಸುತ್ತಾರೆ.

ಕಾಡು ನನ್ನ ಮನೆ ಎಂದರೆ ಢುಂಢಿ, ಕಾಡು, ಈ ಬೆಟ್ಟ ಎಲ್ಲವೂ ನನ್ನ ಮನೆ ಎನ್ನುತ್ತಾಳೆ ಪಾರ್ವತಿ.

ಕೆಲವೊಮ್ಮೆ ಕಾಡುಗಳಿಂದ ಗಿರಿಗಳಿಂದ ದೂರವಾಗಿ ಮಾನಸ ಸರೋವರಕ್ಕೆ ಹೋಗುವರು. ಸಿಂಧು, ಶತದ್ರು, ಗಂಗಾ, ಬ್ರಹ್ಮಪುತ್ರ ನದಿಗಳ ಆ ಮೂಲಸ್ಥಾನದಲ್ಲಿ ನಲಿದಾಡುವರು. ಮಾನಸ ಸರೋವರದಲ್ಲಿ ಸ್ನಾನ ಮಾಡಿ ಅಲ್ಲಿಂದ ದೂರದಲ್ಲಿ ಕಾಣುವ ಕೈಲಾಸ ಶಿಖರವನ್ನು ನೋಡುತ್ತಾ ಕುಳಿತುಕೊಳ್ಳುವರು. ಸೂರ್ಯೋದಯದ ಸಮಯದಲ್ಲಿ ಹೊನ್ನಿನ ಕಿರೀಟವಿಟ್ಟುಕೊಂಡು ಮೆರೆಯುವ ಕೈಲಾಸ ಶಿಖರ ಸಂಜೆಯ ನೇಸರದಲ್ಲಿ ರಕ್ತಪ್ರಕಾಶದಿಂದ ಉಗ್ರವಾಗಿ ಕಾಣುವುದು. ಕೈಲಾಸ ಶಿಖರವನ್ನು ನೋಡುವ ಸಲುವಾಗಿಯೇ ಢುಂಢಿ ಮತ್ತು ಪಾರ್ವತಿ ಮಾನಸ ಸರೋವರಕ್ಕೆ ಬಂದು ಕೂರುವರು. ಕೈಲಾಸ ಪರ್ವತದ ಉತ್ತರ, ದಕ್ಷಿಣ, ಪೂರ್ವ ಮತ್ತು ಪಶ್ಚಿಮಗಳೆಲ್ಲದರ ಮುಖಗಳನ್ನು ನೋಡಲು ಪಾರ್ವತಿಯು ಢುಂಢಿಯನ್ನು ಕರೆದುಕೊಂಡು ಹೋಗುತ್ತಿದ್ದಳು.

"ನೋಡು ಗುಣೇಶ, ನೋಡು, ಕೈಲಾಸವೆಂದರೆ ಏನು? ಹಿಮನಾಡಿನ ಅಮೂಲ್ಯವಾದ ಆಭರಣ. ನೋಡು ತನ್ನ ಹೆಸರನ್ನು ತಾನು ಸಾರ್ಥಕ ಮಾಡಿಕೊಳ್ಳುವ ಪರಿ ನೋಡು." ಎಂದು ಢುಂಢಿಗೆ ಕೈಲಾಸವು ಪದ್ಮರಾಗ ಮಾಣಿಕ್ಯದಂತೆ ತೋರುವ ಕಡೆಗೆ ಕರೆದೊಯ್ಯುವಳು.

"ಗುಣೇಶ, ಕೈಲಾಸದ ಈ ಭಾಗವು ಮಾಣಿಕ್ಯ ಮುಖ. ನೋಡು ಕೈಲಾಸವು ಮಾಣಿಕ್ಯದ ಕೆಂಪುವರ್ಣದಲ್ಲಿ ಹೇಗೆ ಕಂಗೊಳಿಸುತ್ತಿದೆ! ಶಿವ ಈ ಕ್ಷೇತ್ರದಲ್ಲಿ ಮೂಲಾಧಾರ ಶಕ್ತಿಯನ್ನು ಧ್ಯಾನಿಸುವನು."

"ನೀನೂ ಧ್ಯಾನ ಮಾಡುವೆಯಾ?"

"ಮಾಡುವೆ. ಶಿವನೇ ನನ್ನ ಧ್ಯಾನದ ಗುರು." ಎನ್ನುತ್ತಾ ಪಾರ್ವತಿ ಕೈಲಾಸದ ಮತ್ತೊಂದು ಬದಿಗೆ ಹೋದಾಗ, "ಕೈಲಾಸವು ಇಲ್ಲಿ ಸ್ವರ್ಣಾಯಸದ ಮುಖವನ್ನು ಹೊಂದಿದೆ." ಎಂದು ಬಂಗಾರದ ಹೊದಿಕೆಯನ್ನು ಹೊದ್ದಂತಹ ಕೈಲಾಸ ಶಿಖರವನ್ನು ನೋಡುತ್ತಾ ಕುಳಿತುಕೊಳ್ಳುವರು.

"ಗುಣೇಶ, ಕೈಲಾಸದ ಈ ಭಾಗವನ್ನು ನೋಡುತ್ತಿದ್ದರೆ, ನನ್ನಲ್ಲಿ ಚೈತನ್ಯ ತುಂಬುತ್ತದೆ. ನನ್ನಲ್ಲಿ ಏನೂ ಕೊರತೆಯಿಲ್ಲ ಎಂದು ಭಾಸವಾಗುತ್ತದೆ. ನಾನು ಎಷ್ಟು ಸಮೃದ್ಧಳು ಎಂದು ಎನಿಸುತ್ತದೆ. ನೋಡು ಗುಣೇಶ

ಅದು ವೈಭವದಿಂದ ಹೊಳೆಯುವುದನ್ನು." ಎಂದು ಮಹಾ ಸಾಮ್ರಾಜ್ಞಿಯ ಭಾವದಲ್ಲಿ ಪಾರ್ವತಿ ನಡೆಯುವಳು.

ಸ್ಫಟಿಕದಂತೆ ಕಾಣುವ ಕೈಲಾಸದ ಮತ್ತೊಂದು ಭಾಗದಲ್ಲಿ ಪಾರ್ವತಿ ಆನಂದದಿಂದ ನರ್ತಿಸುವಳು. ಅವಳಿಗೆ ಕೈಲಾಸದ ಸ್ಫಟಿಕಭಾಗವನ್ನು ನೋಡುತ್ತಿದ್ದರೆ ಆವರಿಸಿರುವ ಆಗ್ರಹವೆಲ್ಲಾ ತಂಪಾಗುತ್ತದೆ, ಶಾಂತತೆ ಮತ್ತು ಸಮಾಧಾನ ಲಭಿಸುತ್ತದೆ ಎಂದು ಹೇಳುತ್ತಾಳೆ. ಹಾಗಾಗಿಯೇ ಪಾರ್ವತಿಯು ಅಲ್ಲಿಗೆ ಬಂದಾಗೆಲ್ಲಾ ಆನಂದದಿಂದ ನರ್ತಿಸುತ್ತಾಳೆ. ಅವಳ ಆನಂದವನ್ನು ಕಾಣುತ್ತಾ ಢುಂಢಿಯೂ ಆನಂದಭರಿತನಾಗಿ, "ಹೌದು, ಇಲ್ಲಿ ಆನಂದವಿದೆ." ಎನ್ನುತ್ತಾನೆ.

ಕೈಲಾಸದ ಮತ್ತೊಂದು ಭಾಗ ನೀಲಮುಖ. "ಇಲ್ಲಿ ನಾನು ಅನಂತತೆಯನ್ನು ಅನುಭವಿಸುತ್ತೇನೆ. ನೀಲಾಕಾಶದಂತೆ, ನೀಲ ಸಾಗರದಂತೆ, ನಾನೂ ಕೈಲಾಸದ ಈ ನೀಲಿರತ್ನದ ಮುಖವನ್ನು ನೋಡುತ್ತಾ ಅನಂತಳಾಗುತ್ತೇನೆ." ಎಂದು ಪಾರ್ವತಿ ತನ್ನ ಎರಡೂ ಕೈಗಳನ್ನು ಚಾಚಿ ಅಲ್ಲಿ ನಿಲ್ಲುವಳು. ಢುಂಢಿಯೂ ಅದನ್ನು ಅನುಸರಿಸುವನು.

ಅವನಿಗೆ ಅವಳು ಹೇಳುವುದೆಲ್ಲಾ ಹೊಸತು. ಕೆಲವೊಂದು ಆಟದಂತೆ ಕಂಡರೆ, ಕೆಲವೊಂದು ಅದ್ಭುತವಾಗಿ ಕಾಣುವುದು. ಕೆಲವೊಂದು ಆನಂದದ ಅನುಭೂತಿಗೆ ಸೋಪಾನವಾಗುವುದು. ದೂರದೂರದಿಂದ ಕೈಲಾಸದ ಶಿಖರವನ್ನು ನೋಡುವ ಹಾಗೆಯೇ, ಮಾನಸ ಸರೋವರಕ್ಕೆ ಹೋಗಿ ಮಿಂದು ನಲಿದಾಡುವ ಹಾಗೆಯೇ, ಹಿಮಾಲಯದ ಕಾಡುಗಳಿಗೂ ಢುಂಢಿಯನ್ನು ಕರೆದೊಯ್ಯುವಳು.

"ಗುಣೇಶ, ಎಂದು ಈ ಪ್ರಕೃತಿಯು ಮುನಿಯುವಳೋ ಆಗ ಯಾವ ದೇವರೂ, ದೇವತೆಗಳೂ ನಿಲ್ಲಲಾರರು. ಪ್ರಕೃತಿ ಇಲ್ಲದ ಆಕಾಶ ಬರೀ ಪೊಳ್ಳು. ಸ್ತ್ರೀ ಇಲ್ಲದ ಪುರುಷ ಬರೀ ಸುಳ್ಳು. ಶಕ್ತಿಯಿಲ್ಲದ ಶಿವ ಬರೀ ಜೊಳ್ಳು." ಎಂದು ನಕ್ಕ ಪಾರ್ವತಿಯ ಮಾತಿನಲ್ಲಿ ಅಭಿಮಾನವೋ, ಅಹಂಕಾರವೋ ಒಟ್ಟಿನಲ್ಲಿ ಒಂದು ತೆರನಾದ ದರ್ಪವಂತೂ ಇತ್ತು. ಢುಂಢಿಗೆ ಈ ತರಹದ ಮಾತುಗಳು ಅಷ್ಟಾಗಿ ತಲೆಗೆ ಹತ್ತುವುದಿಲ್ಲ. ಬರಿದೇ ಕೇಳಿದ.

"ಅರ್ಥವಾಯಿತಾ ಗುಣೇಶ?" ಪಾರ್ವತಿ ಕೇಳಿದಳು. ಢುಂಢಿ ಬರಿದೇ ತಲೆಯಾಡಿಸಿದ. ಅದು ಅರ್ಥವಾಯಿತೆಂದೋ ಅಥವಾ ಇಲ್ಲವೆಂದೂ ಅದೂ ಸ್ಪಷ್ಟವಾಗಿರದೆ.

ವೈಶಾಖದಲ್ಲೊಂದು ದಿನ. ಬೂದು ಬಣ್ಣದ ಮತ್ತು ಕಪ್ಪು ಲೇಪನದ ಮೋಡಗಳು ಎಲ್ಲೂ ಮಳೆ ಸುರಿಯುವ ಉದ್ದೇಶವಿಲ್ಲದೇ ನಿಧಾನವಾಗಿ ಹಿಂಡುಹಿಂಡಾಗಿ ಚಲಿಸುತ್ತಿವೆ. ಆನೆಗಳಂತಿರುವ ಮೋಡಗಳು ಕೆಲವೊಮ್ಮೆ ಹರವುತ್ತಾ ಹರಡಿದ್ದ ಹತ್ತಿಯಂತಾಗುತ್ತಿದ್ದವು. ಕಾರಂಜಿಯು ತನ್ನ ತಟಕ್ಕೆ ಲಘುವಾಗಿ ಸಿಂಪಡಿಸುವ ತುಂತುರುಗಳಂತೆ ಸುರಿಯುತ್ತಿರುವ ಜಲಾಕ್ಷತೆಯಲ್ಲಿ ಮೀಯುತ್ತಾ ಢುಂಢಿ ಮತ್ತು ಪಾರ್ವತಿ ತೇವದ ಮಡಿ ಹೊದ್ದಿದ್ದ ಕಪ್ಪುಕಲ್ಲಿನ ಉರುಟಾದ ಚಾಚು ಬಂಡೆಗಳನ್ನೇರುತ್ತಾ ಗಿರಿಯನ್ನೇರುತ್ತಿದ್ದರು.

"ನಿನಗೂ ಒಂದು ಹೆಣ್ಣನ್ನು ನೋಡಬೇಕು." ಢುಂಢಿಯ ಕೈ ಹಿಡಿದುಕೊಂಡು ಗಿರಿಯಿಂದ ಕೆಳಗಿನ ಸರೋವರದ ನೀರಿನಲ್ಲಿ ಸಂಭೋಗಿಸುತ್ತಿದ್ದ ಗಜಗಳನ್ನು ನೋಡುತ್ತಿದ್ದ ಪಾರ್ವತಿ ತನಗೆ ಅನ್ನಿಸಿದ್ದನ್ನು ಹೇಳಿದಳು. ಆ ಮಾತಿಗೆ ತಾನೂ ಗಜಗಳ ಮಿಲನವನ್ನು ನೋಡುತ್ತಿದ್ದ ಢುಂಢಿಯೊಳಗಿನ ಭಾವ ಮತ್ತಷ್ಟು ಪ್ರಚೋದಿತವಾಗಿ, ಹಿಡಿದಿದ್ದ ಅವಳ ಕೈಯನ್ನು ಲಘುವಾಗಿ ಬಿಗಿಗೊಳಿಸಿತು. ತನ್ನ ನವುರಾದ ವಾತ್ಸಲ್ಯದ

ಸ್ಪರ್ಶಕ್ಕೆ ವಾಂಛೆಯ ಒತ್ತಡಕ್ಕೆ ತಂದ ಆ ಬಿಗಿತದಿಂದ ಪಾರ್ವತಿ ಕೊಂಚ ವಿಚಲಿತಳಾಗಿ, "ಏನು ಗುಣೇಶ?" ಎಂದಳು. ಆವರಿಸುತ್ತಿದ್ದ ಕಾಮದ ಕಾರ್ಮೋಡವು ಹಾಗೆಯೇ ಸರಿದು ಬೆಳಕು ಕಂಡ ಢುಂಢಿ ಏನಿಲ್ಲವೆಂಬಂತೆ ತಲೆಯಾಡಿಸಿ ಅವಳ ಕೈಯನ್ನು ಬಿಟ್ಟ.

"ಏನು ಹೇಳು?" ನಿರ್ಲಕ್ಷಿಸಲೂ ಆಗದ, ಪರಿಗಣಿಸಲೂ ಆಗದ ಆ ವಿಷಯವೇನೋ ಪಾರ್ವತಿಯ ಅರಿವಿಗೆ ಬಂದದ್ದೇ. ಆದರೂ, ಕಮಲದ ಮೇಲೆ ಹಾರುತ್ತಾ ಬಂದ ಭೃಂಗವು ತನ್ನ ಕುಸುಮತಲದ ಮೇಲೆ ಕೂರದೇ ತಾನೇ ಅತ್ತ ಹಾರಿಹೋಗುವುದೇನೋ ಎಂದು ಕಾಯುವ ನೋಟವನ್ನು ಅವನತ್ತ ಹರಿಸಿದಳು.

ಕಪ್ಪು ಗಿರಿಗಳ ಮೇಲಿನ ಬಿಳಿಯ ಮೋಡಗಳು ಗಾಳಿಗೆ ಸರಿಯುವಂತೆ ಪಾರ್ವತಿಯ ಅಷ್ಟು ಬಿಗಿಯಾಗಿ ಕಟ್ಟಿಲ್ಲದ ಮೊಲೆಗಳ ಮೇಲಿನ ಉಪವಸನ ಗಾಳಿಗೆ ಹಾರಾಡುತ್ತಿತ್ತು. ಢುಂಢಿ ಸುಮ್ಮನೆ ನಿಂತ. ಅವನು ತಲೆ ತಗ್ಗಿಸಿದ್ದರೂ ಅವನ ಕಣ್ಣುಗಳು ಅವಳ ಹೊಕ್ಕಳು ಮತ್ತು ಕುಚದ್ವಯಗಳ ಕಡೆಗೆ ಚಂಚಲತೆಯಿಂದ ಚಲಿಸುತ್ತಿತ್ತು. "ಗುಣೇಶ, ನಿನ್ನ ಮನಸ್ಸಿನಲ್ಲಿ ಏನೋ ಸುಳಿದಾಡುತ್ತಿದೆ. ಹೇಳಿಬಿಡು. ಸರಿಯಿದ್ದರೆ ಒಪ್ಪುತ್ತೇನೆ. ಸರಿಯಿಲ್ಲದಿದ್ದರೆ ಒಪ್ಪಿಸುತ್ತೇನೆ." ಪಾರ್ವತಿ ಅವನ ಗಲ್ಲವನ್ನು ಎತ್ತಿ ಅವನ ಮುಖವನ್ನು ತನ್ನ ಮುಖದ ನೇರಕ್ಕೆ ತಂದು ಕೇಳಿದಳು.

ಮೈಯಲ್ಲಿ ಏರುತ್ತಿರುವ ಕಾವು ಸಂಯಮವನ್ನು ಸುಟ್ಟೀತೆಂಬ ಹಿಂಜರಿಕೆಯಿಂದ ಏನಿಲ್ಲ ಎಂದು ತಲೆಯಾಡಿಸಿದ ಢುಂಢಿ ತಟ್ಟನೆ ಅವಳ ವಿರುದ್ಧವಾದ ದಿಕ್ಕಿಗೆ ತಿರುಗಿ ಬೆಟ್ಟದಿಂದ ಇಳಿಯಲಾರಂಭಿಸಿದ.

"ಸರಿ, ಬಾ ಗುಣೇಶ. ನಿನ್ನ ಜೊತೆ ಮಾತಾಡಬೇಕು." ಪಾರ್ವತಿ ಅವನ ಹಿಂದೆಯೇ ಬೇಗ ಬೇಗನೆ ಅವನ ಹೆಜ್ಜೆಗಳ ಸಮಕ್ಕೆ ತಾನೂ ಹೆಜ್ಜೆ ಹಾಕಿದಳು. ಅವನ ಮುಂದೆ ನಿಂತು ಅವನ ತೋಳನ್ನು ಹಿಡಿದು, "ಕೇಳಿಲ್ಲಿ, ಓ ಗುಣೇಶ. ನಾನು ನಿನಗೊಂದು ಹೆಣ್ಣು ನೋಡಿ ಮದುವೆ ಮಾಡುತ್ತೇನೆ." ಎಂದಳು.

"ಬೇಡ." ಎಂದ ಢುಂಢಿ.

"ಏಕೆ?"

ಢುಂಢಿ ಏನೂ ಉತ್ತರಿಸಲಿಲ್ಲ.

"ಹೇಳು? ನಿನಗೆ ಎಂತಹ ಹೆಣ್ಣು ಬೇಕು?" ಸ್ವಲ್ಪ ಗಟ್ಟಿಯಾಗಿಯೇ ಕೇಳಿದಳು ಪಾರ್ವತಿ.

ಮತ್ತೆ ಢುಂಢಿ ಉತ್ತರಿಸಲಿಲ್ಲ.

"ಢುಂಢಿ, ನನಗೆ ನೇರವಾಗಿ ಉತ್ತರ ಹೇಳಬೇಕು. ಇಲ್ಲವಾದರೆ, ನಾನು ನೋಡಿದ ಹೆಣ್ಣನ್ನು ನೀನು ಮದುವೆಯಾಗಬೇಕು." ಎಂದಳು ಪಾರ್ವತಿ.

ನೇರವಾಗಿ ಆಶಯದ ಪ್ರದರ್ಶನಕ್ಕೆ ಸಿದ್ಧವಾದರೂ, ಸಾಲದ ಧೈರ್ಯವನ್ನು ಢುಂಢಿ ನೆಲದ ಮೇಲೆ ಹುಡುಕುತ್ತಾ, ಮೆಲ್ಲನೆ ಹೇಳಿದ. "ನಿನ್ನಂತಹ ಹೆಣ್ಣು ನನಗೆ ಬೇಕು."

ಹಾಗೆ ಅವನು ಹೇಳಿದರೂ, ಪಾರ್ವತಿಗೆ ನನಗೆ ನೀನು ಬೇಕು ಎಂಬ ಮಾತು ಅದರಲ್ಲಿ ಧ್ವನಿಸುತ್ತಿದ್ದದ್ದು ಅರಿವಿಗೆ ಬಾರದೇ ಇರಲಿಲ್ಲ.

ಸ್ಪಷ್ಟತೆ ಮತ್ತು ನೇರತೆಗಳನ್ನು ಬಯಸಿದ್ದರೂ, ತನಗೆ ಒಲ್ಲದ್ದು ನೇರವಾಗಿ ಸ್ಪಷ್ಟವಾದ ಮೇಲೆ ಹೇಗೆ ಸ್ಪಂದಿಸುವುದೆಂದು ತಿಳಿಯಲಿಲ್ಲ. ಅರೆಗಳಿಗೆ ಏನೆಂದೂ ಉತ್ತರಿಸಲಾಗಲಿಲ್ಲ. ಆಸೆಗೆ ಒದಗುವ ಆಸೆಯಿದ್ದರೆ ದಾರಿ ಸುಲಭ. ಆದರೆ ಪ್ರೀತಿಪಾತ್ರನ ನಿರಾಶೆಗೊಳಿಸುವುದು ಸುಲಭವಲ್ಲ. ತೋಯುತ್ತಿದ್ದ ಮುಖವನ್ನು ಒರೆಸಿಕೊಂಡು ಪಾರ್ವತಿ ಗಡುಸಾದಳು.

"ಗುಣೇಶ, ನನ್ನಂತಹ ಹೆಣ್ಣುಗಳೆಲ್ಲಾ ನಿನಗೆ ತಾಯಿಗಳಾಗುತ್ತಾರೆ. ನೆನಪಿರಲಿ ಗುಣೇಶ. ಎಂದಿಗೂ ನೆನಪಿರಲಿ. ನಾನು ನಿನ್ನ ತಾಯಿ, ನೀನು ನನ್ನ ಮಗ. ನನ್ನಂತಹ ಹೆಣ್ಣನ್ನು ಮದುವೆಯಾಗುವುದು ಎಂದು ನೀನು ಮನಸಿಲ್ಲಾದರೂ ಆಲೋಚಿಸಿದರೆ, ಜೀವನ ಪೂರ್ತಿ ನೀನು ಬ್ರಹ್ಮಚಾರಿಯಾಗಿಯೇ ಉಳಿಯಬೇಕು." ಎಂದು ಹೇಳಿ ಬಿರಬಿರನೆ ಅಲ್ಲಿಂದ ಇಳಿಜಾರಿನಲ್ಲಿ ನಡೆಯತೊಡಗಿದಳು.

"ನಾನು ನಿನಗೆ ಬೀಜವನ್ನು ಕೊಡಬಾರದೇ?" ಢುಂಢಿ ನೇರವಾಗಿ ಕೇಳಲು ಯತ್ನಿಸಿದ. ಆದರೆ ಮಾತು ಹೊರಡಲಿಲ್ಲ. ಆದರೆ, ಅವನ ಒಳಗಿನ ಮಾತು, ಅವಳ ಒಳಗಿವಿಗೆ ಕೇಳಿತು. ತಟ್ಟನೆ ನಿಂತು ಹೇಳಿದಳು.

"ನಾನು ನಿನ್ನ ತಾಯಿ. ನೀನು ನನ್ನ ಮಗ. ಇದು ಯಾವಾಗಲೂ ಸತ್ಯ. ಇದು ಬದಲಾಗದ ಸತ್ಯ. ಸ್ವಯಂ ನಾನಾಗಲಿ, ನೀನಾಗಲಿ ಬದಲಾಯಿಸಲಾಗದ ಸತ್ಯ. ಗುಣೇಶ, ನೀನೆಷ್ಟೇ ಕಾದರೂ, ಇವತ್ತಿನ ಸತ್ಯವೇ ಯಾವತ್ತೂ." ಎಂದು ಹೇಳಿ ಮತ್ತೆ ಬಿರಬಿರನೆ ನಡೆದು ಹೋದಳು ಪಾರ್ವತಿ.

ಢುಂಢಿ ಅಲ್ಲಿಯೇ ನಿಂತ. ಅವಳು ಕಣ್ಮರೆಯಾಗಿ ಹೋಗುವವರೆಗೂ ನೋಡುತಲಿದ್ದು, ನಂತರ ಜೋರಾಗಿ ಘೀಳಿಟ್ಟು ಒಂಟಿ ಸಲಗವಾದ. ಅವಳಿತ್ತ ಪ್ರೇಮದ ಒಲ್ಲದ ಪರಿಯನ್ನು ತನ್ನಲ್ಲಿರಿಸಿಕೊಳ್ಳಲಾಗದೇ ಆಗ್ರಹದಿಂದ ತನ್ನೆತ್ತರ ಬೆಳೆದು ನಿಂತಿದ್ದ ಹುತ್ತವೊಂದನ್ನು ಒದ್ದ. ಹುತ್ತದ ಗೋಪುರಗಳು ಬೀಳುಬೀಳುತ್ತಿದ್ದಂತೆ ಅವನ್ನು ಹುಡಿಗುಟ್ಟಿದ. ಹುತ್ತದ ಮನೆಯೊಳಗೆ ಮಂಡಲವನ್ನು ಹಾಕಿಕೊಂಡು ಮಲಗಿದ್ದ ನಾಗ ಬೆದರಿ ಹೆದರಿ ಅಲ್ಲಿಂದ ಹೊರಟುತ್ತಿದ್ದರೂ, ಬಿಡದೇ ಅದನ್ನು ಬೆನ್ನತ್ತಿ ಹಿಂಭಾಗದಿಂದ ಅದರ ಹೆಡೆಯ ಭಾಗವನ್ನು ಹಿಡಿದು ದೂರಕ್ಕೆ ಎಸೆದ. ಧುಮುಗುಟ್ಟುತ್ತಾ ಹುತ್ತದ ಅವಶೇಷವೇ ಉಳಿಯದಂತೆ ತುಳಿದಾಡಿದ. ಹಲ್ಲುಗಳನ್ನು ಕಡಿಯುತ್ತಾ, ಮುಷ್ಟಿಗಟ್ಟಿ ಅಲ್ಲಿಯೇ ಬಂಡೆಯೊಂದರ ಮೇಲೆಕ್ಕೆ ತನ್ನನ್ನು ಎಸೆದುಕೊಂಡ. ಕಪ್ಪಿಟ್ಟಿದ್ದ ಮುಖವನ್ನು ಕರಿ ಮುಗಿಲುಗಳತ್ತ ನೆಟ್ಟು, ಮುಖದ ಮೇಲೆ, ಮೂಗೊಳಗೆ, ತೆರೆದ ಬಾಯಿಗೆ, ಕಣ್ಣೊಳಗೆ ಬೀಳುತ್ತಿದ್ದ ನೀರಿನ ಹನಿಗಳನ್ನು ಬರಿದೇ ಬೀಳಗೊಟ್ಟು ಹಾಗೆಯೇ ಸಂಜೆಯಾಗುವವರೆಗೂ ಅಲ್ಲಿಯೇ ಬಿದ್ದಿದ್ದ. ತಣ್ಣನೆ ತೇವವಾದ ಅವನ ಮುಖದಲ್ಲಿ ಕಣ್ಣುಗಳ ಬಿಸಿನೀರ ಹನಿಗಳು ತಮಗೆ ದಾರಿ ಮಾಡಿಕೊಂಡಿದ್ದವು. ಸೂರ್ಯ ಮುಳುಗತೊಡಗಿದಾಗ ನಿಧಾನವಾಗಿ ಎದ್ದು ಅಲ್ಲಿಂದ ಕೆಳಗಿಳಿಯತೊಡಗಿದ.

ಕೈಲಾಸದ ಅಂಗಳದಲ್ಲಿ ಆಸುರ, ಮಾರ, ವಜ್ರ, ಭದ್ರ, ಮತ್ತು ಇತರರೆಲ್ಲಾ ಅಂದು ವಯನದ ಹೆಂಗಸರು ಮಾಡುತ್ತಿದ್ದ ಮೋದಕವನ್ನು ಪಡೆದು ಸೇವಿಸುತ್ತಿದ್ದರು. ಧೂಮಾವತಿ ವಯನದ ಹೆಂಗಸರಿಗೆ ಸಹಕರಿಸುತ್ತಿದ್ದಳು. ಪಂಚಮಿ ಮತ್ತು ದನು ಪಾರ್ವತಿಗೆ ಗಾಳಿ ಹಾಕುತ್ತಿದ್ದರು.

ಆಗ ತಾನೇ ಬಂದ ಢುಂಢಿಗೆ, "ಗುಣೇಶ, ಎಲ್ಲಿಗೆ ಹೋಗಿದ್ದೆ? ನಾವು ನಿನ್ನ ಹುಡುಕಿದೆವು." ಎಂದ ವಜ್ರ. ತಾನು ಎಲ್ಲಿದ್ದೇನೆಂದು ಹೇಳದಿದ್ದ ಪಾರ್ವತಿಯ ಕಡೆ ನೋಡಿದ ಢುಂಢಿ. ಇವನತ್ತ ಗಮನಿಸಲಿಚ್ಚಿಸದಿದ್ದ ಪಾರ್ವತಿ ಅವನ ನೋಡಲಿಲ್ಲ. ಪಂಚಮಿ ತನ್ನ ಮುಂದೆ ಇತ್ತ ಮೋದಕಗಳನ್ನು ಎಲೆಯ ಸಮೇತ ಪಡೆದ ಢುಂಢಿ ಪಾರ್ವತಿಯ ಬಳಿಗೆ ಹೋದ. ಒಳಗಿದ್ದ ಹುತ್ತವನ್ನು ಬಡಿದಿದ್ದ ಅವನ ಆಗ್ರಹವು ಅವಳ ಮುಂದೆ ಮೋದಕವನ್ನು ಹಿಡಿದ ಕೈಗಳಲ್ಲಿತ್ತು. 'ನಾನೇಕೆ ನಿನಗೆ ಬೀಜ ಕೊಡಬಾರದು? ಅದರಲ್ಲೇನು ತಪ್ಪು!'

ಪಾರ್ವತಿ ಅವನಿಂದ ಮೋದಕವನ್ನು ಸ್ವೀಕರಿಸಲಿಲ್ಲ. ಬದಲಾಗಿ ತನ್ನ ಕೈಯ ಮೇಲೆ ಬಿದ್ದಿದ್ದ ಹಕ್ಕಿಯೊಂದರ ಪುಕ್ಕವನ್ನು ಉಫ್ಫೆಂದು ಊದಿದಳು.

"ತೆಗೆದುಕೊಳ್ಳಿ." ಎಂದ ಢುಂಢಿ.

"ಬೇಡವೆಂಬ ನಿರ್ಧಾರದ ತೃಪ್ತಿಯಲ್ಲಿದ್ದೇನೆ ಗುಣೇಶ." ಎಂದಳು ಪಾರ್ವತಿ.

"ನನಗಾಗಿ." ಎಂದ ಢುಂಢಿ.

"ನನಗಾಗಿಯೇ ಒಲ್ಲದ್ದು, ಯಾರಿಗಾಗಿಯೂ ಒಲ್ಲದ್ದೇ." ಪಾರ್ವತಿ ಅವನನ್ನು ಬಳಿಗೆ ಎಳೆದುಕೊಂಡು ಹೆಗಲ ಮೇಲೆ ಕೈಹಾಕಿಕೊಂಡು ಕಿವಿಯಲ್ಲಿ ಉಸುರಿದಳು. "ದೊರಕದ ಭಾಗ್ಯಕ್ಕೆ ಆಸೆ ಪಡುತ್ತಾ ನರಳುತ್ತಿದ್ದರೆ, ದೊರಕಿರುವ ಭಾಗ್ಯದಿಂದ ವಂಚಿತನಾಗುತ್ತೀಯ ಗುಣೇಶ." ಹೇಳಾದ ಮೇಲೆ ಅವನ ಕೆನ್ನೆಯ ಮೇಲೆ ನವುರಾಗಿ ತಟ್ಟಿ ಪಕ್ಕಕ್ಕೆ ತಳ್ಳಿದಳು.

ಮೋದಕಗಳನ್ನು ಕೈಗಳಲ್ಲಿ ಹಿಡಿದುಕೊಂಡೇ ಎಲ್ಲರಿಂದ ದೂರ ಬಂದು ಕುಳಿತ ಢುಂಢಿಯನ್ನು ದನು ಗಮನಿಸುತ್ತಿದ್ದಳು. ಅವಳಿಗೆ ವಿಷಯ ಏನೆಂದು ಸರಿಯಾಗಿ ಅರಿವಾಗದಿದ್ದರೂ, ಢುಂಢಿ ತನ್ನ ಆದಿವಾಸಿ ಬುದ್ಧಿಯನ್ನೇನೋ ಈ ಆರ್ಯ ಅರಸಿಗೆ ತೋರಿದ್ದಾನೆ, ಅದರಿಂದ ಅವನ ಬಗ್ಗೆ ಕೊಂಚ ಬೇಸರಗೊಂಡಿರುವ ಪಾರ್ವತಿ ಅವನಿಗೆ ನವುರಾಗಿ ಬುದ್ಧಿ ಹೇಳುತ್ತಿದ್ದಾಳೆ ಎಂದುಕೊಂಡಳು. ವಯನದಲ್ಲಿ ಬರಿಯ ಅರಣ್ಯಕನಾಗಿಯೇ ಬೆಳೆದಿರುವ ಇವನಿಗೆ ಗಾಣಪತ್ಯವೂ ಒದಗಿರುವುದರಿಂದ ಇವನು ಕಲಿಯಬೇಕಾದ ವಿಷಯಗಳು ಪಾರ್ವತಿ ಮತ್ತು ರುದ್ರನಿಂದ ಬೇಕಾದಷ್ಟಿವೆ ಎಂದೂ ಚಿಂತಿಸಿದಳು ದನು.

ಮರುದಿನ ಬೆಳಗ್ಗೆ ತನ್ನ ಕುಟೀರದಲ್ಲಿ ಮಲಗಿದ್ದ ಢುಂಢಿಯನ್ನು ಎಬ್ಬಿಸಿದ ವಜ್ರ. "ಹೇ ಗಣೇಶ, ಕ್ಷಮೆಯಿರಲಿ ನಿನ್ನನ್ನು ಎಬ್ಬಿಸುತ್ತಿರುವುದಕ್ಕೆ."

ಢುಂಢಿಯ ಮುಖದ ಮೇಲೆ ಕಿಟಕಿಯಿಂದ ಬೀಳುತ್ತಿದ್ದ ಸೂರ್ಯನ ಬೆಳಕು ಕಣ್ಣುಗಳನ್ನು ಚುಚ್ಚುತ್ತಿದ್ದುದರಿಂದ ಕಣ್ಣುಗಳನ್ನು ಕಿರಿದು ಮಾಡಿ ವಜ್ರನ ನೋಡಿದ. ಅದನ್ನು ಗಮನಿಸಿದ ವಜ್ರ ತಾನೇ ಬೆಳಕಿಗೆ ಅಡ್ಡವಾಗಿ ನಿಂತ.

"ಏನು?"

"ನಮ್ಮ ಮಾತಂಗಗಣದ ಬಗ್ಗೆ ನಾವು ಒಂದು ಸಭೆ ಕರೆಯಬೇಕು. ನೀನು ನಾಯಕನಾದಾಗಿನಿಂದ ಸಭೆ ಕರೆದಿಲ್ಲ. ನಮ್ಮ ಮಾತಂಗ ಗಣದಲ್ಲಿ ಸುಮುಖೇಶ್ವರ ಅಂತ ಒಬ್ಬ ಹಿರಿಯರಿದ್ದಾರೆ. ಅವರು ಯೋಗಿಗಳು,

ಸಿದ್ಧರು ಮತ್ತು ಹಿರಿಯ ಪ್ರಮಥರು. ಅವರ ನೇತೃತ್ವದಲ್ಲಿ ಸಭೆಯೊಂದನ್ನು ಕರೆಯಬೇಕೆಂದು ಪಾರ್ವತಿ ಮಾತೆ ಅನುಜ್ಞೆ ನೀಡಿದ್ದಾರೆ."

"ಸರಿ." ಸಂಪೂರ್ಣ ಮೇಲೆದ್ದ ಢುಂಢಿ. "ನಾನು ಏನು ಮಾಡಬೇಕು?"

"ಅದನ್ನೂ ಸುಮುಖೇಶ್ವರರೇ ತಿಳಿಸಿಕೊಡುತ್ತಾರೆ."

"ಸರಿ ಗೆಳೆಯ." ಎಂದ ಢುಂಢಿ ಇದ್ದಕ್ಕಿದ್ದಂತೆ ವಜ್ರನನ್ನು ಅಪ್ಪಿಕೊಂಡ.

ವಜ್ರನೂ ಅವನನ್ನು ಸಂತೋಷದಿಂದ ಆಲಂಗಿಸಿ, "ನಿನ್ನೆ ಸಂಜೆಯವರೆಗೂ ನೀನು ಎಲ್ಲಿಗೆ ಹೋಗಿದ್ದೆ? ನೀನು ಹಾಗೆಲ್ಲಾ ಹೋಗಬಾರದು ಗಣೇಶ. ನೀನೀಗ ಮೊದಲಿನಂತೆ ಬರಿಯ ಢುಂಢಿಯೋ ಅಥವಾ ಗುಣೇಶನೋ ಅಲ್ಲ. ಬಹುದೊಡ್ಡ ಗಾಣಪತ್ಯದ ಗಣನಾಯಕ. ಅಧಿಕಾರವಿದ್ದಂತೆ ಜವಾಬ್ದಾರಿಗಳೂ ಹೆಚ್ಚುತ್ತವೆ ಹಾಗೆಯೇ ಶತ್ರುಗಳೂ ಸಹ. ನನ್ನ ನಿನ್ನ ಸಹಾಯಕನಾಗಿ ಇರಿಸಿಕೋ. ನೀನು ಹೋದ ಕಡೆಯಲೆಲ್ಲಾ ನಾನು ನಿನ್ನ ಹಿಂಬಾಲಿಸುತ್ತೇನೆ. ಬೆಂಗಾವಲಾಗಿ ಇರುತ್ತೇನೆ." ಎಂದ.

"ನೀನು ನನಗೆ ಗೆಳೆಯನಾಗಿರು." ಎಂದು ಹೇಳುತ್ತಾ ಢುಂಢಿ ನಗುತ್ತಾ ಕುಟೀರದಿಂದ ಹೊರಗೆ ಬಂದು ನದಿಯ ಕಡೆಗೆ ಓಡಿದ.

ವಜ್ರ ಅವನನ್ನು ನಗುತ್ತಾ ಹಿಂಬಾಲಿಸಿದ. ನದಿಯಲ್ಲಿ ಧುಮುಕಿ ನೀರಿನಲ್ಲಿ ಈಜುತ್ತಿದ್ದ ಢುಂಢಿಯನ್ನು ಆನೆಯ ಮೇಲೆ ಬರುತ್ತಿದ್ದ ಪಾರ್ವತಿ ನೋಡಿದಳು.

"ಹೋಯ್ ಗುಣೇಶ." ಎಂದು ಕೈ ಬೀಸಿದಳು.

"ಹೋಯ್......" ಎಂದು ಢುಂಢಿಯೂ ಕೈ ಬೀಸಿದ.

"ಈಗ ಎದ್ದಿಯೇನೋ ಆಲಸಿ?" ಪಾರ್ವತಿ ಕೇಳಿದಳು.

ಢುಂಢಿ ನಕ್ಕ.

ಪಾರ್ವತಿ, "ಬೇಗ ಬೇಗನೆ ಸಿದ್ಧನಾಗು. ಸುಮುಖೇಶ್ವರ ನಿನಗಾಗಿ ಕಾಯುತ್ತಿದ್ದಾರೆ." ಎಂದು ಆನೆಯನ್ನು ಕುಂಭವನ್ನು ಅಂಕುಶದಿಂದ ತಿವಿಯುತ್ತಾ ಅವನನ್ನು ಹಾದು ಮುಂದೆ ಹೋದಳು.

"ನೀನೂ ಬರ್ತೀಯಾ?" ಢುಂಢಿ ನೀರಿನಲ್ಲಿಂದಲೇ ಕೇಳಿದ.

"ಅದು ನಿಮ್ಮ ಮಾತಂಗ ಗಣದ ಗೋಷ್ಠಿ. ನಾನು ಬಂದು ಮಾಡುವುದಾದರೂ ಏನು? ಅಲ್ಲಿ ಏನಾಯಿತೆಂದು ನಂತರ ನೀನೇ ಬಂದು ತಿಳಿಸು, ಹೇ ಗಣನಾಯಕ." ಎಂದು ನಗುತ್ತಿದ್ದ ಪಾರ್ವತಿಯ ಗಜಸವಾರಿ ದೂರಾಯಿತು.

ಎತ್ತರದ ಪೀಠದಲ್ಲಿ ಢುಂಢಿ ಆಸೀನನಾಗಿದ್ದನು. ಹಾಗೆ ಅದರಲ್ಲಿ ಕುಳಿತುಕೊಳ್ಳಲು ಹೇಳಿದವರೂ ಸುಮುಖೇಶ್ವರರೇ. ಢುಂಢಿಗೆ ವಂದಿಸಿದ ಅವರು ಒಂದು ಪೀಠದಲ್ಲಿ ಕುಳಿತು ಹೇಳಿದರು. "ಹೇ ಗಣಪತಿ,

ಗಜಗಣದ ಬೇರು ಮಾತಂಗವೇ, ಈ ಹಿಂದೆ ಸೋಮದಂತನ ಉದ್ಧಟತನದಿಂದಾಗಿ ಮಾತಂಗ ಗಣದಿಂದ ಬೇರಾಗಿ ಹೋಗಿತ್ತು. ಆದರೆ, ಈಗ ಅವರೆಡೂ ಮತ್ತೆ ಒಂದಾಗಿ ಶಕ್ತಿಶಾಲಿ ಗಣವಾಗಿ ನಿಲ್ಲಬೇಕಿದೆ. ನಮಗೆ ಬಂಧುಗಣಗಳೆಂದರೆ ಶಕ್ತಿಗಣ ಹಾಗೂ ರುದ್ರಗಣಗಳು ಮಾತ್ರವೇ. ಆದರೆ, ಬೇರೆ ಗಣಗಳ ವಿಷಯದಲ್ಲಿ ಕಾಳಗದಲ್ಲಿ ಗೆಲ್ಲದ ಹೊರತು ಯಾರೊಡನೆಯೂ ಬಂಧುತ್ವ ಸಾಧ್ಯವಿಲ್ಲ. ಸನ್ಮಿತ್ರರಾಗುವ ಮನಸ್ಸು ಯಾರಿಗೂ ಇಲ್ಲ. ಹೋರಾಡಿ ಗೆದ್ದು ಒಡೆಯರಾಗಬೇಕು ಅಥವಾ ಸೋತು ಊಳಿಗದವರಾಗಬೇಕು. ಅವರವರ ಪಾಡಿಗೆ ಯಾರೂ ಇರುವುದಿಲ್ಲ. ಇರಕೂಡದು. ಇದ್ದರೂ ಇರಗೊಡುವುದಿಲ್ಲ. ಹಾಗೆ ಇರುವುದಾದರೆ, ಅವರ ಶಸ್ತ್ರಗಳು ಮೊನಚನ್ನು ಕಳೆದುಕೊಳ್ಳುತ್ತವೆ. ಕುದುರೆಗಳು ವೇಗಗಳನ್ನು ಕಳೆದುಕೊಳ್ಳುತ್ತವೆ. ನಮ್ಮ ಹೋರಾಡುವ ಬಾಹುಗಳು ಬಿರುಸನ್ನು ಕಳೆದುಕೊಳ್ಳುತ್ತವೆ. ಯುದ್ಧ ತಂತ್ರಗಳನ್ನು ಮರೆಯುತ್ತೇವೆ. ಇಷ್ಟಾದ ಮೇಲೆ ಉಳಿದಿರುವುದು ಒಂದೇ. ಇವನ್ನೆಲ್ಲಾ ಅಭ್ಯಾಸದಲ್ಲಿ ಇಟ್ಟುಕೊಂಡಿರುವವನ ಬಳಿ ಸೋತು ಊಳಿಗದವರಾಗಿರುವುದು. ಈಗ ಮಾತಂಗ ಗಣವು ಯಾರಿಗೂ ಊಳಿಗದವರಾಗಿರಕೂಡದು. ಸ್ವತಂತ್ರವಾಗಿ ತಾನಿರುವಲ್ಲಿ ಯಾವಾಗಲೂ ಯಶಸ್ಸನ್ನು ಕಾಯ್ದುಕೊಂಡು ಬೆಳೆಯಬೇಕು. ಗೆಲುವೇ ಯಶಸ್ಸು. ಯಶಸ್ಸೇ ಬೆಳವಣಿಗೆ. ಬೆಳವಣಿಗೆಯೇ ನಾವು ಜೀವಂತವಾಗಿರುವ ಸಂಕೇತ. ಒಬ್ಬ ಗಣನಾಯಕನ ಯಶಸ್ಸು ಇಡೀ ಗಣದ ಯಶಸ್ಸು. ಆತನ ಗೆಲುವು ಮತ್ತು ಯಶಸ್ಸು ಗಣವನ್ನು ಬೆಳೆಸುತ್ತದೆ. ಗಣವು ಬೆಳೆದರೆ, ಗಣದ ಅಧಿಕಾರದ ವ್ಯಾಪ್ತಿ ಹಿರಿದಾಗುತ್ತಾ ಹೋಗಬೇಕು. ಇದಕ್ಕೆ ಸಿಗುವ ಯಾವ ಘಟನೆಗಳಲ್ಲಿಯೂ ಗಣವಾಗಲಿ, ಗಣನಾಯಕನಾಗಲಿ ಮಂಕಾಗಿರಕೂಡದು. ಗುಣೇಶನಂತಹ ಗಣೇಶನಿರುವಾಗ, ವಜ್ರನಂತಹ ಅಧಿಪತಿಯಿರುವಾಗ ಈ ನಮ್ಮ ಮಾತಂಗ ಗಣವು ಮಂಕಾಗಿರಬಾರದು.

ಶಸ್ತ್ರಧಾರಿ ಬ್ರಾಹ್ಮಣ ಪುರೋಹಿತರು ಇಡೀ ಜಂಭೂದ್ವೀಪವನ್ನೇ ಆರ್ಯವರ್ತವನ್ನಾಗಿ ಮಾಡಲು ನೋಡುತ್ತಿದ್ದಾರೆ. ಬರಿಯ ಶಾಸ್ತ್ರಗಳನ್ನು ಹಿಡಿದ ವೈದಿಕ ಬ್ರಾಹ್ಮಣರೇ ಕಾಡುಗಳಲ್ಲಿ ರಕ್ಷಸರಾಗಿದ್ದ ಅರಣ್ಯಕರನ್ನು ರಾಕ್ಷಸರನ್ನಾಗಿ ಮಾಡಿ ಹೊರದೂಡಿದರು, ಗಿರಿಗಳಲ್ಲಿರುವ ಜನರನ್ನು ನವಿರಾಗಿ ಮಾತಾಡಿಸಿಕೊಂಡು, ಮದುವೆಗಳನ್ನು ಮಾಡಿಕೊಂಡು ಗಿರಿಯರೆಲ್ಲಾ ಆರ್ಯರನ್ನಾಗಿಸುತ್ತಾ ಹೋಗುತ್ತಿದ್ದಾರೆ. ಕ್ಷತ್ರಿಯರನ್ನು ನೆಲದ ರಕ್ಷಣೆಗೆ ಬದಲಾಗಿ ತಮ್ಮ ರಕ್ಷಣೆಗೆ ಇಟ್ಟುಕೊಳ್ಳುತ್ತಿದ್ದಾರೆ. ವೈಶ್ಯರೆಲ್ಲಾ ಅವರಿಗೆ ಬೇಕಾದುದನ್ನು ಒದಗಿಸುವವರಾಗಿದ್ದಾರೆ. ಶೂದ್ರರು ಎಲ್ಲಾ ಸ್ಥಾನಗಳಿಂದ ವಂಚಿತರಾಗಿ ಅವರ ಸೇವೆಗಳನ್ನು ಮಾಡಿಕೊಂಡು ದೂರ ಉಳಿಯಬೇಕಿದೆ. ಈ ಸ್ಥಿತಿಗೆ ಕಾರಣ ವಂಚಿತರು ಗೆಲ್ಲದೇ ಇರುವುದು. ಯಶಸ್ಸು ಕಾಣದೇ ಇರುವುದು. ಅದರಿಂದಲೇ ಅವರಿಗೆ ಬೆಳವಣಿಗೆ ಇಲ್ಲ. ಎಷ್ಟೋ ಗಣಗಳು ಹೇಳ ಹೆಸರಿಲ್ಲದಂತೆ ನಾಶವಾಗಿ ಹೋಗಿರುವುದು ಗೆಲುವು ಮತ್ತು ಯಶಸ್ಸು ಇರದೇ ಇರುವುದರಿಂದ. ಸಣ್ಣ ಗೆಲುವುಗಳು ದೊಡ್ಡ ಗೆಲುವುಗಳಾಗುತ್ತವೆ. ನಮ್ಮ ಮಾತಂಗರು ಗೆಲುವನ್ನು ಸಾಧಿಸುತ್ತಾ ಯಶಸ್ಸನ್ನು ಕಾಣಬೇಕು. ಶಸ್ತ್ರಗಳನ್ನು ಹಿಡಿದ ಬ್ರಾಹ್ಮಣ ಪುರೋಹಿತರು ಎಷ್ಟು ಅಪಾಯಕಾರಿಯಾಗಿರಬೇಡ. ಅವರದು ಒಂದೇ ಉದ್ದೇಶ. ತಾವು ಸದಾ ಮೇಲ್ವರ್ಗದಲ್ಲಿರಬೇಕು. ಉಳಿದವರೆಲ್ಲಾ ಅವರ ಸಲಹೆ ಸೂಚನೆಗಳನ್ನು ತೆಗೆದುಕೊಳ್ಳುತ್ತಾ, ಅವರಿಗೆ ತಕ್ಕಂತೆ, ಅವರನ್ನು ಕಾಪಾಡಲು ಏನನ್ನು ಮಾಡಬೇಕೋ ಅದನ್ನು ಮಾಡುತ್ತಾ ಹೋಗಬೇಕು.

ಆರ್ಯರ್ಷಿ ಜಮದಗ್ನಿಗೂ, ಕಾರ್ತ್ಯವೀರ್ಯಾರ್ಜುನನಿಗೂ ಗೋವುಗಳಿಗಾಗಿ ಯುದ್ಧವಾಗಿ ಮಹರ್ಷಿಯು ಸತ್ತ. ಅವನ ಮಗನಾದ ಪರಶುರಾಮನು ಒಂದು ಕೈಯಲ್ಲಿ ಶಾಸ್ತ್ರವನ್ನು ಹಿಡಿದು, ತನ್ನ ಕ್ಷತ್ರಿಯ ತಾಯಿಯ ರಕ್ತಗುಣದಿಂದ ಮತ್ತೊಂದು ಕೈಯಲ್ಲಿ ಶಸ್ತ್ರವನ್ನು ಹಿಡಿದು ತನ್ನ ವೈದಿಕ ಬ್ರಾಹ್ಮಣತ್ವದ

ಅಧಿಪತ್ಯಕ್ಕೆ ಕ್ಷತ್ರಿಯ ಸ್ಥಾನಕ್ಕೂ ಲಗ್ಗೆ ಇಟ್ಟಿದ್ದಾನೆ. ಅವನಿಗೆ ಯಶಸ್ಸು ದೊರಕಕೂಡದು. ಶಿವನನ್ನು ಓಲೈಸಿಕೊಂಡು ರುದ್ರಗಣದ ಪಡೆಯನ್ನು ತನ್ನೊಂದಿಗೆ ಸೇರಿಕೊಳ್ಳುವ ಹುನ್ನಾರ ಮಾಡುತ್ತಿದ್ದಾನೆ. ಯಾವುದನ್ನೂ ಪಾಕ್ಷಿಕವಾಗಿ ಯೋಚಿಸದ ಯೋಗಿಯಾದ ಮಹದೇವನೇನಾದರೂ ಸಮ್ಮತಿಸಿದರೆ ಅನಾಹುತಗಳು ಕಾದಿವೆ." ಸುಮುಖೇಶ್ವರನು ತಮ್ಮ ಮಾತಂಗಗಣವು ಈಗಾಗಲೇ ರುದ್ರರೊಂದಿಗೆ, ಶಕ್ತಿಗಣದೊಂದಿಗೆ ಕೈ ಜೋಡಿಸಿದ್ದು, ಮುಂದೆ ಇತರ ಗಣಗಳನ್ನು ಗೆಲ್ಲುವ ಅಗತ್ಯವನ್ನೂ ಮತ್ತು ವೈದಿಕ ಬ್ರಾಹ್ಮಣರು ಶಸ್ತ್ರಗಳನ್ನು ಹಿಡಿಯುವಲ್ಲಿಯೂ ಯಶಸ್ವಿಯಾಗಿಬಿಟ್ಟರೆ ಆಗುವ ಅನಾಹುತಗಳನ್ನು ವಿವರಿಸಿದ. ಮಾತಂಗಗಣವು ಸಮೃದ್ಧಿಯಾಗಿ ಬೆಳೆಯಬೇಕೆಂದರೆ ಆರ್ಯರ ಸಂಪತ್ತು ತಮ್ಮ ವಶವಾಗಬೇಕಾಗಿರುವ ಅಗತ್ಯವನ್ನೂ ಒತ್ತಿ ಹೇಳಿದ.

ಸುಧೀರ್ಘವಾಗಿ ನಡೆದ ಸಭೆಯಲ್ಲಿ ಇನ್ನು ಮುಂದೆ ಗಣದವರೆಲ್ಲಾ ಹೇಗೆ ಹೋರಾಟಕ್ಕೆ ಸಿದ್ಧರಾಗಬೇಕೆಂದು ಚರ್ಚಿಸಲಾಯಿತು.

"ಗಣನಾಯಕರೇ, ಇವತ್ತು ಸುಮುಖೇಶ್ವರರು ಏನು ಹೇಳಿದರು?" ಪಾರ್ವತಿ ಆ ಸಂಜೆ ಢುಂಢಿಯೊಡನೆ ಗಜಾರೂಢಳಾಗಿ ಗಜಾರಣ್ಯದಲ್ಲಿ ಸಂಚರಿಸುತ್ತಾ ಕೇಳಿದಳು. ಢುಂಢಿಯ ಕೈಯಲ್ಲಿ ಅಂಕುಶವಿತ್ತು. ಆನೆಯ ಕುಂಭವನ್ನು ಸಚೇತನಗೊಳಿಸುತ್ತಾ ನಡೆಸುತ್ತಿದ್ದ. ಪಾರ್ವತಿ ಅವನ ಹಿಂದೆ ಕುಳಿತಿದ್ದಳು.

ಅವಳ ಪ್ರಶ್ನೆಗೆ ಉತ್ತರವಾಗಿ ದೊಡ್ಡ ನಿಟ್ಟುಸುರನ್ನು ಬಿಟ್ಟು, "ಪರಶುರಾಮ ಯಾರು?" ಎಂದು ಕೇಳಿದ.

"ಓ ಸುಮುಖೇಶ್ವರರು ವೈದಿಕ ಬ್ರಾಹ್ಮಣರೂ ಶಸ್ತ್ರಗಳನ್ನು ಹಿಡಿದರು ಎಂದು ಪ್ರಸ್ತಾಪಿಸಿದರೇ?" ಪಾರ್ವತಿ ಕೇಳಿದಳು.

"ಹೌದು. ಪರಶುರಾಮ ಯಾರು?"

"ಅವನು ರೇಣುಕೆಯ ಮಗ. ರುದ್ರನ ಮಾನಸ ಪುತ್ರ."

"ಹೌದೇ?" ಢುಂಢಿಗೆ ಪರಶುರಾಮ ರುದ್ರನ ಆಪ್ತ ಎಂದು ಯಾರೂ ಹೇಳಿರಲಿಲ್ಲ.

"ಈಗ ಏನು?" ಪಾರ್ವತಿ ಕೇಳಿದಳು. "ಪರಶುರಾಮನ ಮಾತೇಕೆ ಬಂತು?"

"ಮಾತಂಗಗಣದ ಉಳಿವಿಗಾಗಿ ಹೋರಾಡಬೇಕು. ಗೆಲ್ಲಬೇಕು. ಯಶಸ್ಸು ಬೇಕು. ಗಣವು ಬೆಳೆಯಬೇಕು ಎಂದರು."

"ಅದಕ್ಕೆ ನೀನು ಏನು ಮಾಡುತ್ತೀಯ?" ಪಾರ್ವತಿ ಕೇಳಿದಳು.

"ಹೋರಾಡುತ್ತೇನೆ." ಎಂದ ಢುಂಢಿ.

ಪಾರ್ವತಿ ನಕ್ಕು ಕೇಳಿದಳು. "ಯಾರೊಂದಿಗೆ?"

ಢುಂಢಿಗೆ ತಕ್ಷಣ ಉತ್ತರ ಹೇಳಲು ಸಾಧ್ಯವಾಗಲಿಲ್ಲ. ಹಿಂದಿರುಗಿ ಅವಳ ಮುಖ ನೋಡಲು ಪ್ರಯತ್ನಿಸಿದ. ಆದರೆ, ಕಾಣಲಿಲ್ಲ. ಅವನ ಭುಜವನ್ನು ಹಿಡಿದಿರುವ ಅವಳ ಎಡಗೈ ಮಾತ್ರ ಕಾಣಿಸಿತು.

“ನನಗೆ ನೀನೇ ಎಲ್ಲಾ ಹೇಳಿಕೊಡಬೇಕು.” ಎಂದ ಢುಂಢಿ ತನ್ನ ಬಲಗೈಯಲ್ಲಿದ್ದ ಅಂಕುಶವನ್ನು ಎಡಗೈಗೆ ರವಾನಿಸಿಕೊಂಡ. ತನ್ನ ಬಲಗೈಯನ್ನು ಅವಳ ಎಡಗೈ ಮೇಲಿಟ್ಟು ಮೆಲ್ಲನೆ ಅದುಮಿದ. ಅವನು ಮತ್ತೆ ತನಗೆ ಕೊಡುತ್ತಿರುವ ಮೋದಕವನ್ನು ನಿರಾಕರಿಸುತ್ತಾ ಪಾರ್ವತಿಯು ಅಸಮ್ಮತಿಯ ನಿಟ್ಟುಸುರನ್ನು ಬಿಡುತ್ತಾ ಕಣ್ಮುಚ್ಚಿದಳು. ನಂತರ ಕಾರ್ಮುಗಿಲುಗಳಲ್ಲಿ ದಿಢೀರನೆ ಮಿಂಚು ಹರಿಸಿ, “ಗುಣೇಶ!” ಎಂದು ಗುಡುಗಿ, ತನ್ನ ಎರಡೂ ಕೈಗಳಿಂದ ಮುಷ್ಟಿಕಟ್ಟಿ ಅವನ ಬೆನ್ನಿಗೆ ನಾಲ್ಕಾರು ಬಾರಿ ಗಟ್ಟಿಯಾಗಿಯೇ ಗುದ್ದಿದಳು.

“ಎಲ್ಲೋ ಮಣ್ಣಲ್ಲಿ ಬಿದ್ದಿದ್ದು ಸಂಸ್ಕಾರವಿಲ್ಲದೇ ಧೂಳಾಗಿ ಹೋಗುತ್ತಿದ್ದ ನೀನು ನನಗೆ ಗರ್ಭದಲ್ಲಿದ್ದಾಗಲೇ ತಿಳಿದಿದ್ದವನು. ಗರ್ಭಿಣಿಯಾದ ಪ್ರಾಣಿಯಂತಿದ್ದ ನಿನ್ನ ತಾಯಿಗೂ ಇಲ್ಲದ ಕಾತರ, ಕಾಯುತ್ತಿರುವ ತಾಯಂತಿದ್ದ ನನ್ನಲ್ಲಿ ನಿನ್ನ ನೋಡಬೇಕೆಂದು ಇತ್ತು. ನಿನ್ನ ನನ್ನೊಡನೇ ಇರಿಸಿಕೊಂಡು ಸಲಹಬೇಕೆಂದು ಆಗಲೇ ನಿರ್ಧರಿಸಿಕೊಂಡಿದ್ದೆ. ಆದರೆ, ಹೇಗೋ ಏನೋ ನೀನು ನನಗೆ ಕೆಳಗೆ ಬಿದ್ದವನಾಗಿಯೇ ಸಿಕ್ಕಿದೆ. ನಿನ್ನ ಆ ಮಣ್ಣಿಂದೆತ್ತಿ, ಸಂಸ್ಕಾರವಿತ್ತಿ ನಿನ್ನ ವ್ಯಕ್ತಿತ್ವಕ್ಕೊಂದು ರೂಪ ಕೊಡಬೇಕೆಂದೂ, ಯಥಾರ್ಥವಾದ ಗುಣಗಳು ನಿನ್ನಲ್ಲಿ ಮೈದೋರಬೇಕೆಂದೂ, ಆ ಗುಣಗಳಿಗೆ ನೀನು ಒಡೆಯನಾಗಬೇಕೆಂದೂ ನಿನಗೆ ಗುಣೇಶನೆಂದು ಹೆಸರಿಟ್ಟು ನನ್ನ ಮಗನಾಗಿ ನಿನ್ನ ಸ್ವೀಕರಿಸಿದೆ. ಅಗ್ನಿಯ ಮುಂದೆ ಪ್ರಮಾಣ ಮಾಡಲಿಲ್ಲ. ಯಾರೊಬ್ಬರೂ ನಿನ್ನ ನೀರಿನಿಂದ ಧಾರೆ ಎರೆದು ನನಗೆ ಕೊಡಲಿಲ್ಲ. ಹಸುವಿನ ಕೆಳಗಿನಿಂದ ನಿನ್ನ ನನ್ನ ಕೈಗೆ ಯಾರೂ ದಾಟಿಸಲಿಲ್ಲ. ನನ್ನ ಹೃದಯದಿಂದ, ಬರಿದೇ  ತಾಯ್ತನದ ಕೈಗಳಿಂದ ಸ್ವೀಕರಿಸಿಬಿಟ್ಟೆ. ಒಂದು ಹೆಂಗಸೊಬ್ಬಳು ನಿನ್ನ ಮಗನೇ ಎಂದು ಕರೆದಳೆಂದರೆ, ಅವಳು ತನ್ನ ತಾಯ್ತನದ ಕೊರತೆಯನ್ನು ನಿನ್ನ ಬಳಿ ತೋಡಿಕೊಳ್ಳುತ್ತಿದ್ದಾಳೆಂದು ಅರ್ಥ. ನಿನಗೆ ಆ ಕೊರತೆಯನ್ನು ನೀಗಿಸಲು ದುರ್ಭಿಕ್ಷವಿದ್ದರೆ, ಆಗದು ಎಂದು ಹೇಳಿ ಹೋಗಬೇಕೇ ಹೊರತು, ಅದನ್ನು ಬೇರೆಯಾಗಿ ಎಂದಿಗೂ ನೋಡುವ ಹಕ್ಕು, ಅಧಿಕಾರ ಇಲ್ಲ. ನೀನು ಗಣೇಶನಾದೆಯೇ ಹೊರತು ನೀನು ನನ್ನ ಗುಣೇಶನಾಗಲೇ ಇಲ್ಲ.

ಮದುವೆಯ ಪದ್ಧತಿಯೇ ಇಲ್ಲದ ಅನಾಗರಿಕರ ರಕ್ತದವನಲ್ಲವೇ ನೀನು? ಎಲ್ಲೆಂದರಲ್ಲಿ, ಯಾರೆಂದರೆ ಅವರೊಡನೆ ಕೂಡುವ ಕಾಮುಕ ಪಶುಗಳಲ್ಲವೇ ನೀವು? ತಾಯಿ ಮತ್ತು ಮಗ, ತಂದೆ ಮತ್ತು ಮಗಳು ಇಂತಹ ಸಂಬಂಧಗಳೆಲ್ಲದರ ಪಾವಿತ್ರ್ಯತೆ ನಿನಗೆ ಹೇಗೆ ತಿಳಿಯಬೇಕು?

ಕೇಳು ಗುಣೇಶ, ಪ್ರೇಮಮಯವಾದ ಸಂಬಂಧಗಳಿಂದ ಮನವು ಮುಕ್ತವಾಗಿ ಹಗುರವಾಗಿರುವುದು. ಕಾಮಪೂರಿತವಾದ ವಾಂಛೆಗಳಿಂದ ಸಂಬಂಧ ಬೆಳೆಸುವುದಾದರೆ ಜೀವನವೇ ಭಾರವಾಗಿರುವುದು. ಪ್ರೇಮವು ನಿತ್ಯನೂತನವಾಗಿದ್ದು ಸದಾ ಕಾಲ ಜೀವಂತವಾಗಿರುವುದು. ಕಾಮವು ತೃಷೆ ತೀರಿದ ಬಳಿಕ ಬಯಸಿದರೂ ಪಡೆಯಲು ಅಸಹ್ಯವೆನಿಸುವಂತದ್ದು. ನಾನು ನಿನಗೆ ನೀಡಲಾಗುವುದು ಪ್ರೇಮದ ವಾತ್ಸಲ್ಯವನ್ನು. ನಿನ್ನ ಕಾಮದ ಹಸಿವೆಗೆ ಆಹಾರವಾಗಲಾರೆ ಗುಣೇಶ!” ಪಾರ್ವತಿಯ ಕಣ್ಣುಗಳಿಂದ ನೀರು ಸುರಿಯುತ್ತಿತ್ತು. ಮಳೆ ಸುರಿಯುತ್ತಿತ್ತು.

“ಪ್ರೇಮದಿಂದಲೇ ಕಾಮಕ್ಕೆ ಉಣಿಸು.” ಎಂದ ಢುಂಢಿ.

ಮಿಂಚು ಸಿಡಿಲಾಯ್ತು. ಅವಳ ದುಃಖ ಕೋಪಕ್ಕೆ ತಿರುಗಿ ಅವನ ತಲೆಗೆ, ಬೆನ್ನಿಗೆ ಮನ ಬಂದಂತೆ ಥಳಿಸಿದಳು.

"ಕಣ್ಣಿಗೆ ಕೇಳಲಾಗದು, ಕಿವಿಗೆ ನೋಡಲಾಗದು! ಈ ತಾಯಿ ನಿನಗೆ ಹಾಸುಗೆಯಾಗಳು. ಆದರೆ, ನಿನಗೆ ನಿನ್ನ ಮಾತಿನಲ್ಲಿ ಮಾತ್ರವೂ ನನಗೆ ಮಾತೆಯೆನ್ನಲೂ ಮನಬಾರದು ಅಲ್ಲವೇ? ನಾನು ಅಪಾತ್ರನಿಗೆ ಪಾತ್ರವಿತ್ತು ಪೋಷಣೆ ಮಾಡಿದೆ. ನಿನ್ನ ಸಂಸ್ಕಾರವಿಲ್ಲದ ಅಸುರರ ಗುಣವನ್ನೇ ನೀನು ತೋರಿಸಿದೆ.

ನಿನಗೆ ತಿಳಿದಿರಬೇಕಿದು! ನಿನಗೆ ತಿಳಿದಿರಲೇ ಬೇಕಿದು. ನನ್ನ ಮುಟ್ಟ ಬಂದವರು, ನನ್ನ ಭೋಗಿಸಲೆಂದು ಬಂದವರು ಗತಪ್ರಾಣರಾಗಿದ್ದಾರೆ. ಸುಟ್ಟು ಬೂಧಿಯಾಗಿದ್ದಾರೆ. ನನ್ನ ಹೆಂಡತಿಯೆಂದೇ ಭಾವಿಸದ ರುದ್ರನಲ್ಲ ಅವರ ಸಂಹಾರ ಮಾಡಿದ್ದು. ನಾನೇ, ನಾನೇ ನನ್ನ ಕೈಯಾರೆ ನನ್ನ ಮೇಲೆ ವಕ್ರ ದೃಷ್ಟಿಯ ಹಾಕುವವರನ್ನೆಲ್ಲಾ ಮರ್ಧಿಸಿದ್ದೇನೆ. ನಿನ್ನ ಉಳಿಸಿದ್ದೇನೆ. ನಿನ್ನ ಕೊಲ್ಲಲಾರೆ ಮಗನೇ. ನೀನು ನನ್ನ ಮಗ. ನೀನು ಗರ್ಭದಲ್ಲಿದ್ದಾಗಲೇ ನಾನು ನಿನ್ನ ಸ್ವೀಕರಿಸಿದ್ದೆ. ನಿನ್ನ ಮಣ್ಣಲ್ಲಿ ಮಣ್ಣಾಗಿರು ಎಂದು ಬಿಸುಟು ನಿನ್ನ ತಾಯಿ ಹೊರಟು ಹೋದಳು. ಆದರೆ, ನಾನು ನಿನ್ನ ನನ್ನ ಮಗನಾಗಿ ಆ ಮಣ್ಣಿಂದಲೇ ರೂಪಿಸಿಕೊಳ್ಳಲು ಪ್ರಯತ್ನಿಸಿದೆ. ನೀನು ಅಪಾತ್ರ. ನೀನು ಅಪಾತ್ರ ಗುಣೇಶ, ನೀನು ಗುಣೇಶನಲ್ಲ. ಢುಂಢಿ, ಢುಂಢಿ ಗಣಪತಿ, ರುದ್ರನಿಗೆ ಗಣೇಶನಾದರೂ ಪಾರ್ವತಿಗೆ ಗುಣೇಶನಾಗಲಿಲ್ಲ. ಸಂಬಂಧಗಳ ಗೊಡವೆಯಿಲ್ಲದ, ಕುಟುಂಬವನ್ನೇ ನಿರಾಕರಿಸುವ ಆ ರುದ್ರ ನನಗೆ ಹೇಳುತ್ತಾನೆ, ನಿನಗೆ ನಾನು ಗಂಡನೇ ಹೊರತು, ನನಗೆ ನೀನು ಹೆಂಡತಿಯಲ್ಲ ಎಂದು. ನನ್ನ ಹೆಂಡತಿಯಾಗಿ ಸ್ವೀಕರಿಸದ ವ್ಯಕ್ತಿಯನ್ನು ನಾನು ಗಂಡನಾಗಿ ಸ್ವೀಕರಿಸಿ ಬದುಕುತ್ತಿದ್ದೇನೆ. ನನ್ನ ತಾಯಿಯಾಗಿ ಸ್ವೀಕರಿಸದ ವ್ಯಕ್ತಿಯನ್ನು ನಾನು ಮಗನಾಗಿ ಸ್ವೀಕರಿಸಿ ಬದುಕುತ್ತಿದ್ದೇನೆ. ಇದೇಕೆ ನನಗೆ ಹೀಗೆ. ನನಗೇಕೆ ಹೀಗೆ." ಪಾರ್ವತಿ ಗಟ್ಟಿಯಾಗಿ ಅಳುತ್ತಾ ತಲೆಯನ್ನು ಚಚ್ಚಿಕೊಂಡಳು.

ಢುಂಢಿಯ ಕಣ್ಣುಗಳಿಂದಲೂ ನೀರು ಸುರಿಯುತ್ತಿತ್ತು. ಆನೆಯನ್ನು ನಡೆಸುತ್ತಿದ್ದ. ಭಾವಾವೇಶದಿಂದ ಆನೆಯ ಕುಂಭಸ್ಥಲವನ್ನು ಹೇಗೆ ತಟ್ಟುತ್ತಿದ್ದನೋ, ಆನೆ ತನ್ನ ಮನ ಬಂದ ವೇಗದಲ್ಲಿ ನಡೆಯುತ್ತಿತ್ತು. ಕಾಣಿಸಿದ ದಿಕ್ಕಿನಲ್ಲಿ ನಡೆಯುತ್ತಿತ್ತು.

ಸುರಿಯುತ್ತಿದ್ದ ಮಳೆಗೆ ನೆಲ ತೋಯ್ದಿತ್ತು.

ಢುಂಢಿ ಆನೆಯ ಕುಂಭದ ಮೇಲೆಯೇ ಅಂಕುಶವನ್ನಿಟ್ಟು ಹಿಂದಕ್ಕೆ ತಿರುಗಿ ಅಳುತ್ತಾ ಅವಳ ಮಡಿಲಿಗೆ ಬಿದ್ದ.

"ಅಮ್ಮಾ, ಕ್ಷಮಿಸು. ನನ್ನ ಕ್ಷಮಿಸು. ಅಮ್ಮಾ. ನಾನು ರುದ್ರನಂತಲ್ಲ. ನನಗೆ ನೀನು ತಾಯಿಯೇ. ನೀನು ಅವನನ್ನು ಗಂಡನಾಗಿ ಸ್ವೀಕರಿಸಿರಲು ಅವನು ನನಗೆ ತಂದೆಯೇ. ನೀನೇ ಹೇಳಿದಂತೆ, ನಾನು ನಿನ್ನ ಮಗನೆಂಬುದು ಬದಲಾಗದ ಸತ್ಯ. ನನ್ನ ಸಂಸ್ಕಾರವಿಲ್ಲದ ರಕ್ತವನ್ನು ನಿನ್ನ ಕ್ಷಮೆಯಿಂದಲೇ ಸಂಸ್ಕರಿಸು." ಬಿಕ್ಕಿ ಬಿಕ್ಕಿ ಅತ್ತ ಢುಂಢಿಯ ಕಣ್ಣೀರು ಪಾರ್ವತಿಯ ತೊಡೆಯ ಮೇಲಿದ್ದ ವಸ್ತ್ರದ ತೇವಕ್ಕೆ ಸೇರಿತು.

ಮಳೆಯ ಹನಿಗಳು ಅರಳಿದ್ದ ಹೂಗಳ ಮೇಲೆ, ಎಲೆಗಳ ಮೇಲೆ ಬಿಂದುಗಳಾಗಿ ಉರುಳುತ್ತಿದ್ದವು.

ಅಳುತ್ತಿದ್ದ ಢುಂಢಿಯ ತಲೆಯನ್ನು ನೇವರಿಸಿದಳು ಪಾರ್ವತಿ. ಕಣ್ಣೊರೆಸಿ ಅವನ ಹಣೆಯ ಮೇಲೆ ಮುತ್ತಿಟ್ಟಳು. ಪ್ರೀತಿಯಿಂದ ಅವನ ಬಾಹುಗಳನ್ನು ಹಿಡಿದು ಮುದ್ದಿಸಿದಳು.

ನಂತರ ಆನೆ, ತನ್ನ ತಂಗುವ ಎಡೆಯ ಕಡೆಗೆ ತಾನೇ ನಡೆಯತೊಡಗಿತ್ತು. ಢುಂಢಿ ಪಾರ್ವತಿಯ ತೊಡೆಯ ಮೇಲೆಯೇ ತಲೆಯಿರಿಸಿಕೊಂಡಿದ್ದ. ಅವನ ಬಿಕ್ಕಳಿಕೆ ಇನ್ನೂ ನಿಂತಿರಲಿಲ್ಲ.

*

ವಾಮದೇವರ ಆಶ್ರಮಕ್ಕೆ ಇನ್ನೂ ಸ್ವಲ್ಪ ದೂರವಿದ್ದಂತೆಯೇ ಯದು ಕುದುರೆಗಳಿಂದ ಇಳಿದು, ಅಲ್ಲಿಯೇ ಅವುಗಳಿಗೆ ನೀರು ಕುಡಿಸಿ, ವಿಶ್ರಮಿಸಲು ಬಿಟ್ಟು ತಾವೂ ಕೊಂಚ ಸಮಯ ವಿಶ್ರಮಿಸಿದರು. ನಂತರ ನಿಧಾನವಾಗಿ ಆಶ್ರಮದ ಕಡೆ ನಡೆಯತೊಡಗಿದರು. ಆಶ್ರಮದ ಪರಿಸರವನ್ನು ಪ್ರವೇಶಿಸುತ್ತಿದ್ದಂತೆ ಬೇರೆಯೇ ಸುಗಂಧವು ಕಾಡಿನ ಗಂಧಗಾಳಿಯನ್ನು ಮರೆಮಾಡತೊಡಗಿತ್ತು. ವ್ಯವಸ್ಥಿತವಾಗಿ ಬೆಳೆದಿರುವಂತಹ ಮರಗಳು ಆಶ್ರಮದ ವ್ಯವಸ್ಥೆಯ ರೀತಿಯನ್ನು ಹೇಳುತ್ತಿತ್ತು.

ದ್ವಾರದ ಬಳಿಯೇ ಬ್ರಾಹ್ಮಣ ವಟುವೊಬ್ಬ ಅವರನ್ನು ಎದುರ್ಗೊಂಡನು.

“ದಯಮಾಡಿ ಪ್ರವೇಶಿಸಿ. ನಾನು ಬದರೀಕ. ಮಹರ್ಷಿ ವಾಮದೇವರ ಬಳಿ ವಿದ್ಯಾಕಾಂಕ್ಷಿಯಾಗಿ ಸೇವೆಸಲ್ಲಿಸುತ್ತಿರುವ ವಟು. ನಾನು ತಮ್ಮನ್ನು ಈ ಮೊದಲು ನೋಡಿಲ್ಲವಾದ್ದರಿಂದ ಕೇಳುತ್ತಿದ್ದೇನೆ. ತಾವು ಯಾರು? ವಾಮದೇವರನ್ನೇ ಕಾಣಲು ಬಂದಿರಾ ಅಥವಾ ಯಾತ್ರಾರ್ಥಿಗಳಾ? ತಿಳಿಸಿದರೆ ತಮಗೆ ಸಹಕರಿಸಲು ಪ್ರಯತ್ನಮಾಡುವೆ.” ಎಂದು ವಿನೀತನಾಗಿ ಕೇಳಿಕೊಂಡನು.

“ನಾವು ಗಣಪತಿಯಾದ ಢುಂಢಿಯ ವಿನಾಯಕ ಸೇನೆಯವರು. ಮಹರ್ಷಿ ವಾಮದೇವರನ್ನೇ ಕಾಣಲು ಬಂದಿದ್ದೇವೆ.” ಎಂದ ಯದು.

“ಅವಶ್ಯವಾಗಿ ಪ್ರವೇಶಿಸಿ. ಇಲ್ಲಿಯೇ ಕುಟೀರದಲ್ಲಿ ವಿಶ್ರಮಿಸಿ. ಮಹರ್ಷಿ ವಾಮದೇವರು ಬೀಜ ಸಂಗ್ರಹಣೆಗೆಂದು ತಮ್ಮ ಇತರ ಶಿಷ್ಯರೊಡನೆ ಅರಣ್ಯದೊಳಗೆ ಸಂಚರಿಸುತ್ತಿದ್ದಾರೆ. ಅವರು ಇನ್ನೇನು ಬರುವ ಹೊತ್ತು. ತಾವು ಬಯಸುವಂತಹ, ಆಶ್ರಮದ ಪರಿಮಿತಿಯಲ್ಲಿರುವ ಸೌಕರ್ಯವನ್ನು ನಿಸ್ಸಂದೇಹವಾಗಿ ಕೇಳಿ. ನಾನು ಒದಗಿಸುತ್ತೇನೆ.” ಎಂದ ಬದರೀಕ.

“ನಾವು ಇಲ್ಲಿಯೆ ಇರುತ್ತೇವೆ. ಅವರು ಬಂದಾಗ ನಮಗೆ ತಿಳಿಸಿದರೆ ಸಾಕು. ನಾವು ಸ್ವಲ್ಪ ದೂರದಲ್ಲಿ ತಂಗಿದ್ದು, ದಣಿವಾರಿಸಿಕೊಂಡು ಬಂದಿದ್ದೇವೆ.” ಎಂದ ಯದು.

ಬದರೀಕ ಯಾಜ್ಞಿಕನ ಕಡೆಗೆ ತಿರುಗಿ ಕೇಳಿದ.

“ತಮಗೆ ತಮ್ಮ ಸಂಧ್ಯಾವಂದನೆಗೇನಾದರೂ ಅನುವು ಮಾಡಿಕೊಡಬೇಕಿದ್ದರೆ ತಿಳಿಸಿ.”

“ಹಾ, ನಡೆಯಿರಿ. ಬಂದೆ.” ಎಂದು ಯಾಜ್ಞಿಕ ಬದರೀಕನ ಹಿಂದೆ ನಡೆದ.

ಹೊತ್ತು ಮುಳುಗಿದ ಮೇಲೆ ಬಂದ ವಾಮದೇವ ಮಹರ್ಷಿಗಳಿಗೆ ಗಣಪತಿಯ ತಂಡದವರನ್ನು ಕಂಡು ಮಾತನಾಡಲು ಸಾಧ್ಯವಾಗಲಿಲ್ಲ. ಮುಂಜಾನೆ ಅವರೊಂದಿಗೆ ಮಾತಾಡಲು ಸಮ್ಮತಿ ಪಡೆದ ಬದರೀಕ ಗಣಪತಿಯ ತಂಡದವರಿಗೆ ಆ ಹೊತ್ತಿನ ಆಶ್ರಮದ ಆಹಾರವಾದ ಹಣ್ಣುಗಳನ್ನು ವಿತರಿಸಿದ.

## ಅಧ್ಯಾಯ 17 ನಾನು ಪ್ರಕೃತಿ

ಓಂಕಾರದ ಝೇಂಕಾರವು ಹಕ್ಕಿಗಳ ಚಿಲಿಪಿಲಿ ಗಾನದಲ್ಲಿ, ನದಿಯ ಕಲಕಲರವದಲ್ಲಿ, ಬೀಸುಗಾಳಿಯ ತರಂಗಗಳಲ್ಲಿ ಒಂದಾಗಿ ಇಡೀ ಪ್ರಕೃತಿಯೇ ಪ್ರಣವೋಪಾಸನೆಯಲ್ಲಿದ್ದಂತಿತ್ತು.

ಮುಂಜಾನೆಯ ಬೆಳಕಲ್ಲಿ ತಮ್ಮ ದಿವ್ಯ ತೇಜಸ್ಸಿನಿಂದ ಕಂಗೊಳಿಸುತ್ತಾ ಮಹರ್ಷಿ ವಾಮದೇವರು ಅಶ್ವಥ ಮರದ ಕೆಳಗೆ ಕುಳಿತಿದ್ದರು. ಅವರ ಸುತ್ತಲೂ ಬದರೀಕನೊಳಗೊಂಡು ಎಲ್ಲಾ ಆಶ್ರಮವಾಸಿಗಳು ಮಹರ್ಷಿಗಳೊಂದಿಗೆ ದನಿ ಬೆರೆಸಿ ಪ್ರಣವೋಚ್ಚಾರ ಮಾಡುತ್ತಿದ್ದರು. ಅಲ್ಲಿಯೇ ಇನ್ನೊಂದು ಬದಿಯಲ್ಲಿ ಶಂಬರನೊಳಗೊಂಡ ಗಣಪತಿಯ ತಂಡದವರು ಪ್ರಣವ ತರಂಗಗಳಲ್ಲಿ ಮೀಯುತ್ತಾ ಕುಳಿತಿದ್ದರು.

ಸುಖಾಸನದಲ್ಲಿ ಕುಳಿತಿದ್ದ ಶಂಬರ ನಿಧಾನವಾಗಿ ತನ್ನ ಸೊಂಟ, ಬೆನ್ನು, ಕುತ್ತಿಗೆ ಮತ್ತು ಶಿರವನ್ನು ಸರಳರೇಖೆಗೆ ತಂದುಕೊಂಡು, ನಾಭಿಯಿಂದ ಹೊರಟ ಶ್ವಾಸವು ಹೃದಯದ ಮೂಲಕವಾಗಿ ಕಂಠದಾಸಿಯಾಗಿ ಮೂಗಿನ ಹೊಳ್ಳೆಗಳ ಮೂಲಕ ಹೊರ ಬಂದಾಗ ಹಿತ ಕಂಡ. ಅದೇ ರೀತಿ ಆಳವಾಗಿ ಉಸಿರನ್ನು ಎಳೆದುಕೊಂಡ ಅವನಲ್ಲಿ ಅಪರೂಪವಾದ ಸಂಚಲನ ಉಂಟಾಯಿತು.

ಆಶ್ರಮವಾಸಿಗಳಂತೆ ಪದ್ಮಾಸನದಲ್ಲಿ ಕುಳಿತಿದ್ದ ಯಾಜ್ಞಿಕನೂ ಬಹು ಪರಿಣಿತನಂತೆ ಪ್ರಣವೋಚ್ಚಾರ ಮಾಡುತ್ತಿದ್ದ.

ಓಂಕಾರದ ಉಚ್ಚಾರಣೆ ನಿಂತರೂ ಅದರ ಅಲೆಗಳು ತಮ್ಮ ತರಂಗಗಳನ್ನು ಸುತ್ತಲೂ ಇರಿಸಿತ್ತು.

ಅಲ್ಲಿದ್ದವರೊಂದಿಗೆ ಇಡೀ ಪ್ರಕೃತಿಯೇ ಪ್ರಶಾಂತತೆಯನ್ನು ಹೊಂದಿತ್ತು.

ಮಹರ್ಷಿ ವಾಮದೇವರ ಕಣ್ರೆವೆಗಳು ತೆರೆದುಕೊಂಡು, ಆ ಕಂಗಳ ಹೊಳಪು ಎಲ್ಲರನ್ನೂ ಬೆಳಗಿ, ಅವರ ಕೈಗಳು ಜೋಡಿಸಿಕೊಂಡು, ಶಿರವು ಬಾಗಿ ನಮಿಸಿತು. ಎಲ್ಲರೂ ಪ್ರತಿವಂದಿಸಿದರು.

"ಬೆಳಗಿನ ಫಲಾಹಾರವನ್ನು ಸ್ವೀಕರಿಸಿ ನಾವು ಮಾತನಾಡಬಹುದೇ?" ಎಂದು ವಾಮದೇವರು ಗಣಪತಿಯ ತಂಡವನ್ನು ಕೇಳಿದರು.

ಎಲ್ಲರ ತಲೆಗಳೂ ಒಪ್ಪಿಗೆಯಿಂದ ತೂಗಿದವು.

ಬದರೀಕ ಎಲ್ಲರಿಗೂ ಹಣ್ಣುಗಳನ್ನು ಹಂಚಿದ.

"ತಮಗೆ ಮಾಂಸಾಹಾರದ ಅಭ್ಯಾಸವಿರಬಹುದು. ಆದರೆ, ನಮ್ಮ ಆಶ್ರಮದಲ್ಲಿ ಸಾತ್ವಿಕಾಹಾರದ ಅಭ್ಯಾಸವಿದೆ. ದಯಮಾಡಿ ಅನುಸರಿಸಿಕೊಳ್ಳಿ." ಎಂದು ವಾಮದೇವರು ವಿನಂತಿಸಿಕೊಂಡರು.

"ಹೇ ಮಹರ್ಷಿ, ಮಾಂಸಾಹಾರವು ಸಾತ್ವಿಕವಲ್ಲವೇ?" ಯದು ಕೇಳಿದ.

"ಇಲ್ಲ. ಮಾಂಸಾಹಾರವು ತಾಮಸಿಕವಾದದ್ದು. ದೇಹಕ್ಕೂ, ಮನಸ್ಸಿಗೂ, ಬುದ್ಧಿಗೂ, ಅವುಗಳ ಚೈತನ್ಯಕ್ಕೂ ಸಂಬಂಧಗಳಿರುವ ನರದೇಹದ ನಮ್ಮಲ್ಲಿ, ಆಹಾರವು ತನ್ನ ಮೂಲದ ಪ್ರಭಾವವನ್ನು ಬೀರುತ್ತದೆ. ಯಾತನೆಯಿಂದ ಕತ್ತಿಗೆ ಗತಪ್ರಾಣವಾಗುವ ಪ್ರಾಣಿಯು ತನ್ನ ಸಾಯುವ ಸಮಯದಲ್ಲಿ ಕ್ರೌರ್ಯವನ್ನೂ,

ಭೀತಿಯನ್ನೂ ಅನುಭವಿಸಿರುತ್ತದೆ. ಭಾವದಿಂದ ರಸ ಉತ್ಪತ್ತಿ. ವಿಚಾರದಿಂದ ತರಂಗ ಉತ್ಪತ್ತಿ. ಭೀತಿ ಮತ್ತು ನೋವಿನ ನಕಾರಾತ್ಮಕ ಭಾವವೇ ರಸವಾಗಿ, ಅದೇ ಅದರ ಮಾಂಸದಲ್ಲಿ ಅಂತರ್ಗತವಾಗುತ್ತದೆ. ಅದನ್ನು ನಾವು ಸೇವಿಸಿದಾಗ ಸೂಕ್ಷ್ಮರೂಪದಲ್ಲಿರುವ ಅದು ನಮ್ಮ ರಕ್ತಗತವಾಗುತ್ತದೆ.

ನಮ್ಮ ಹಾಗೆಯೇ ಸ್ವತಂತ್ರವಾಗಿ ಪ್ರಕೃತಿಯಲ್ಲಿ ಹಸಿವು, ಮೈಥುನ ಮತ್ತು ಭಾವನೆಗಳಿಂದಿರುವ ಜೀವಿಗಳನ್ನು ನಾವು ನಮ್ಮ ಬಲದ ಮೂಲಕ ಅಧೀನಕ್ಕೊಳಪಡಿಸಿ ಕೊಲ್ಲುವುದು ಮನುಷ್ಯನ ಪ್ರಕೃತಿಗೆ ವಿರೋಧವಾದುದು. ಹಾಗೆ ಸೇವಿಸುವ ಆಹಾರವು ನಮ್ಮಲ್ಲಿ ಅಂಧಕಾರವನ್ನು ಉಂಟು ಮಾಡುತ್ತದೆ. ಹಾಗಾಗಿ, ನಾವು ಪ್ರಕೃತಿಯಲ್ಲಿ ಸಸ್ಯಗಳು ತಾವು ಉತ್ಪಾದಿಸಿದ ವಸ್ತುಗಳನ್ನು ತಾವೇ ಇಟ್ಟುಕೊಳ್ಳಲಾಗದೇ ಮುಕ್ತವಾಗಿ ಬಿಟ್ಟುಬಿಡುವವುಗಳನ್ನು ಕೊಡುಗೆಗಳಂತೆ ಸ್ವೀಕರಿಸಿ ಉಪಯೋಗಿಸಬೇಕು. ಇದು ನಮ್ಮ ಈವರೆಗಿನ ಅಭಿಪ್ರಾಯ." ಮಹರ್ಷಿಗಳು ಹೇಳಿದರು.

"ಹೇ ವಾಮದೇವ ಮಹರ್ಷಿಯೇ, ಸ್ವಯಂ ರುದ್ರನೂ, ದೇವಿ ಪಾರ್ವತಿಯೂ ಮಾಂಸವನ್ನು ತಿನ್ನುವರಲ್ಲಾ. ಆದರೂ ಯೋಗಿಗಳೂ, ಸಾಧಕರೂ ಆಗಿರುವವರಲ್ಲಾ, ಇದು ಹೇಗೆ?" ಎಂದು ಯಾಜ್ಞಿಕ ಕೇಳಿದ.

"ರುದ್ರನೋ ಸಾಕ್ಷಾತ್ ಮಹಾದೇವ. ಶಿವತ್ವದಲ್ಲಿ ಆತ್ಮವಾಗಿರುವವನು. ಅವನಿಗೆ ನರದೇಹವೆಂಬುದು ಒಂದು ಕರಣ. ಗುಣ–ಅವಗುಣ ಇಲ್ಲದವನು. ಬೇಕು–ಬೇಡಗಳು ಇಲ್ಲದವನು. ಸುರತ್ವ–ಅಸುರತ್ವ ಮೀರಿರುವವನು. ಆಕಾಶದಲ್ಲಿ ತಾನೇ ಹರವಿಕೊಂಡಿರುವನು. ಭೂಮಿಯಲ್ಲಿ ತಾನೇ ಫಲವತ್ತಾಗಿರುವನು. ನೀರಿನಲ್ಲಿ ಹೊನಲಾಗಿ, ಗಾಳಿಯಲ್ಲಿ ಚಲನವಾಗಿ ಇರುವನು. ಆ ಅಮರತ್ವದ ಸ್ಥಿತಿಯಲ್ಲಿ ಯಾರು ಅಂತರ್ಧನವಾಗಿರುವವನೋ ಅವನೇ ಮಹಾ ಅಸ್ತಿತ್ವವಾಗಿರುವನು. ಅಸ್ತಿತ್ವವೇ ತಾನಾದ ಮೇಲೆ ಒಳಿತು–ಕೆಡಕುಗಳ ಬೇಧವೆಲ್ಲಿಯದು? ಪಾವಿತ್ರ್ಯ–ಅಪಾವಿತ್ರ್ಯಗಳ ಸೋಂಕೆಲ್ಲಿಯದು? ತನ್ನವರು–ಪರಕೀಯರು ಎಂಬ ಪಕ್ಷಪಾತವೆಲ್ಲಿಯದು? ತಾನು ಮತ್ತು ತಾನಲ್ಲದ್ದು ಎಂಬುದೇ ಇಲ್ಲದೇ ಇರುವ ಮಹಾದೇವನಿಗೆ ಯಾವ ರೀತಿ–ನೇಮಗಳೂ ಅಣತ್ಯವಿಲ್ಲ. ಅದೇ ಅವನ ಅಧ್ಯಾತ್ಮ ಭಾವ. ಅದೇ ಭಾವದಿಂದಲೇ ಉಂಟಾಗಿರುವ ರಸ ಅವನಲ್ಲಿ ಸತ್ವವೂ, ಶಕ್ತಿಯೂ ಆಗಿರುವುದು.

ದೇವಿ ಪಾರ್ವತಿಯೇ ಸ್ವಯಂ ಪ್ರಕೃತಿ ತತ್ವವಾಗಿರುವಳು. ಹಾಗಾಗಿ ಅವಳೇ ಪ್ರಕೃತಿಯಲ್ಲಿ ಜೀವದಾತೆಯೂ, ಜೀವಹರವೂ ಆಗಿ ಎಲ್ಲವನ್ನೂ ಭೋಗಿಸಿಕೊಂಡಿರುವಳು. ಆದರೆ, ನಾವು ಹಾಗಲ್ಲ. ನಮಗೆ ಈ ಅಸ್ತಿತ್ವದಲ್ಲಿ ಐಕ್ಯತೆ ಲಭಿಸಿಲ್ಲ. ಆ ಸಂಯೋಗಾಕಾಂಕ್ಷಿಗಳಾಗಿ ಅಂಬೆಗಾಲಿಡುತ್ತಿರುವವರು. ಹಾಗಾಗಿ ಸಸಿಯ ರಕ್ಷಣೆಗೆ ಶಿಸ್ತುಗಳ ಬೇಲಿ ಬೇಕು. ನೇಮಗಳ ಆಧಾರ ಬೇಕು. ಸ್ವಯಂ ಶಕ್ತಿಗಳಾಗುವವರೆಗೂ ವ್ಯಕ್ತಿಗಳಿಗೆ ನೇಮಗಳು ಬೇಕು. ವ್ಯಕ್ತಿಯು ಶಕ್ತಿಯಾದ ಬಳಿಕ, ಸರಳ ಹಾಗೂ ಸಹಜವಾದ ರೀತಿಯಲ್ಲಿ ತಾನೇ ಇರುತ್ತಾನೆ. ಅವನಿಂದ ಅವಿವೇಕದ, ಅಸ್ತಿತ್ವದ ಮೂಲಗುಣಕ್ಕೆ ಅಸಮ್ಮತವಾದ ಕಾರ್ಯಗಳನ್ನು ಮಾಡಲಾಗುವುದಿಲ್ಲ." ಎಂದ ವಾಮದೇವರು ಮೌನವಾದರು.

"ಶಕ್ತಿ ಎಂದರೆ ಏನು? ಯಾವವು ಆ ಶಕ್ತಿಗಳು?" ಯದು ಕೇಳಿದ.

"ವಸ್ತುಗಳ ಮೂಲಭಾವದ ದೃಢತೆಯೇ ಶಕ್ತಿ. ಎಲ್ಲವೂ ಶಕ್ತಿಗಳೇ. ಅಸ್ತಿತ್ವದಲ್ಲಿ ಶಕ್ತಿಯೇ ಮೂಲವಾಗಿದ್ದು, ಎಲ್ಲಾ ಕರಣಗಳಲ್ಲಿ ಆ ಶಕ್ತಿಯು ಪ್ರವಹಿಸುತ್ತಾ, ಆಯಾ ಕರಣಗಳ ಗುಣಗಳಿಗೆ ಅನುಗುಣವಾಗಿ ಅಭಿವ್ಯಕ್ತವಾಗುತ್ತಿರುತ್ತದೆ." ವಾಮದೇವರು ಹೇಳಿದರು.

"ಹಾಗಾದರೆ ಒಳ್ಳೆಯ ಶಕ್ತಿ ಮತ್ತು ಕೆಟ್ಟ ಶಕ್ತಿ ಎಂಬುದಿಲ್ಲವೇ?" ಕುಶಿಕ ಕೇಳಿದ.

"ಶಕ್ತಿಯೆಂಬುದು ನಿರ್ಗುಣವಾದದ್ದು. ನಿರುದ್ದೇಶವಾದದ್ದು. ಅದು ಬರಿದೇ ಅಸ್ತಿತ್ವದಲ್ಲಿರುತ್ತದೆ. ಆಮಂತ್ರಣಾವಕಾಶವಿರುವಾಗ ಅದು ಪಕ್ಷಪಾತವಿಲ್ಲದೇ ತೆರೆದ ದ್ವಾರದೊಳಗೆ ಪ್ರವೇಶಿಸುತ್ತದೆ. ಹಾಗಾಗಿ ಆಗ್ರಹಕ್ಕೂ ಶಕ್ತಿಯುಂಟು, ನಿಗ್ರಹಕ್ಕೂ ಶಕ್ತಿಯುಂಟು. ಸೃಷ್ಟಿಯೂ ಶಕ್ತಿಯಿಂದಲೇ, ನಾಶವೂ ಶಕ್ತಿಯಿಂದಲೇ. ತಮ್ಮ ಪ್ರಕಟಭಾವದಲ್ಲಿ ಶಕ್ತಿಯನ್ನು ಕಂಡುಕೊಂಡವರು ಅದೇ ಭಾವವನ್ನು ಮತ್ತೆ ಮತ್ತೆ ಪ್ರಕಟಿಸುತ್ತಿರುತ್ತಾರೆ." ಎಂದರು ವಾಮದೇವರು.

"ಪರಶುರಾಮನು ತನ್ನ ಆಗ್ರಹಭಾವದ ಶಕ್ತಿಯಿಂದ ಉನ್ಮತ್ತನಾದಂತೆ." ಎಂದ ಯಾಜ್ಞಿಕ.

"ಪರಶುರಾಮನ ಕ್ರೋಧದಿಂದ ಉಂಟಾದ ಕ್ಷತ್ರಿಯರ ನಾಶದ ಉದ್ದೇಶವು ಕ್ರೋಧದ ಶಕ್ತಿಯಿಂದ ಕೂಡಿದ್ದು, ವ್ಯಕ್ತಿಯ ಕ್ರೋಧವು ಶಮನವಾದರೂ ಉದ್ದೇಶದಲ್ಲಿರುವ ಕ್ರೋಧವು ತಾನು ಈಡೇರುವವರೆಗೂ ಶಮನವಾಗುವುದಿಲ್ಲ. ಹಾಗಾಗಿ ಅವನು ಕೊಡಲಿಯನ್ನು ಬೀಸುತ್ತಾ ಸಂಚರಿಸುತ್ತಾ ವಿಫಲನಾದ. ಅದೇ ಈಶೋಪನಿಷತ್ತಿನ ದ್ರಷ್ಟಾರ ವಾಮದೇವರು ಮರಗಳನ್ನು ನೆಡುತ್ತಾ ಅವುಗಳನ್ನು ಜೀವಂತವಾಗಿರಿಸುತ್ತಾ ಅವುಗಳೊಂದಿಗೆ ಜೈವಿಕ ಶಕ್ತಿಯನ್ನು ವಿನಿಮಯ ಮಾಡಿಕೊಂಡರು. ವೃಕ್ಷಗಳೊಂದಿಗೆ ಶಕ್ತ್ಯಾಗಮನದ ಸಾಕ್ಷಾತ್ಕಾರವನ್ನು ಕಂಡುಕೊಂಡರು. ಮರಗಳು, ಮರಗಳು, ಎಲ್ಲೆಲ್ಲೂ ಮರಗಳು. ವೃಕ್ಷಪಾಲನೆಯಲ್ಲಿಯೇ ಅವರಿಗೆ ಮಂತ್ರ ಸಿದ್ಧಿ. ಜೀವ ವೃದ್ಧಿ." ಎಂದರು ವಾಮದೇವರು.

*

ಅಂದು ಮನೆಗೆ ಢುಂಢಿಯೊಡನೆ ಮರಳಿದ ಪಾರ್ವತಿಗೆ ಎದುರಾದ ರುದ್ರ.

ನಂದಿ, ಭದ್ರ ಮತ್ತು ಸುಮುಖರೊಡನೆ ಬಿಲ್ವ ವೃಕ್ಷದ ಕೆಳಗೆ ಕುಳಿತಿದ್ದ ರುದ್ರ ವಿಧವಿಧವಾದ ಕೊಂಬುಗಳನ್ನು ಊದುತ್ತಾ, ಡಮರುಗವನ್ನು ನುಡಿಸುತ್ತಾ, ಢಕ್ಕೆಯನ್ನು ಬಾರಿಸುತ್ತಾ, ಕಾಲಿಗೆ ಕಟ್ಟುವ ಜಂಗುಗಳನ್ನು ಕೈಯಲ್ಲಿ ಹಿಡಿದು ಸದ್ದು ಮಾಡುತ್ತಾ ತಾಳವಾದ್ಯದ ಸಂಗೀತದಲ್ಲಿ ಮಗ್ನರಾಗಿದ್ದರು. ಅವರ ಎದುರಿಗೆ ಬಂದ ಢುಂಢಿ ಅವರಿಗೆ ನಮಿಸಿ ಅಲ್ಲಿಯೇ ನಿಂತ. ರುದ್ರನಿಗೆ ವಂದಿಸಿದ ಪಾರ್ವತಿ ಅಲ್ಲಿ ನಿಲ್ಲದೇ ಮನೆಯೊಳಗೆ ಹೊಕ್ಕಳು. ಸಾಮಾನ್ಯವಾಗಿ ಇಂತಹ ಲಯಗೀತೆಗೆ ನರ್ತಿಸುವ ಪಾರ್ವತಿಯ ಇಂದಿನ ನಿರ್ಗಮನ, ಅವಳ ಖೇದ ಮನಸ್ಥಿತಿಯನ್ನು ನೇರವಾಗಿಯೇ ಪ್ರದರ್ಶಿಸಿತು.

"ನಿನ್ನ ತಾಯಿಗೆ ಬಾಧಿಸುತ್ತಿರುವಂತಹ ನೋವಾದರೂ ಏನು?" ಎಂದು ರುದ್ರ ಢುಂಢಿಯ ಕಡೆಗೆ ನೋಡಿ ಕೇಳಿದನಾದರೂ ಅವನ ಮುಖದಲ್ಲಿರುವ ದುಃಖದ ಛಾಯೆಯನ್ನು ಗಮನಿಸಿದ.

"ಏನಾಯ್ತು?"

ಢುಂಢಿ ಏನೂ ಹೇಳಲಿಲ್ಲ. ಸುಮ್ಮನೆ ತಲೆ ತಗ್ಗಿಸಿಕೊಂಡು ನಿಂತ. ರುದ್ರ ಡಮರುಗವನ್ನು ನುಡಿಸುತ್ತಲೇ ಮೇಲೆದ್ದು ಮನೆಯನ್ನು ಪ್ರವೇಶಿಸಿದ.

ಉರಿಯುತ್ತಿರುವ ದೀಪವನ್ನೇ ನೋಡುತ್ತಾ ಕುಳಿತಿದ್ದ ಪಾರ್ವತಿಯನ್ನು ಹಿಂಬದಿಯಿಂದ ತನ್ನ ತೋಳುಗಳಿಂದ ಬಳಸಿ ಹಿಡಿದ ರುದ್ರ ಡಮರುಗ ಆಡಿಸುವುದನ್ನು ನಿಲ್ಲಿಸಿದ.

"ಏನಾಯ್ತು ಗೌರಿ?"

ಏನಿಲ್ಲವೆಂದು ಪಾರ್ವತಿ ತಲೆಯಾಡಿಸಿದರೂ ಅವಳ ಕಣ್ಣಂಚಲ್ಲಿ ನಿಧಾನವಾಗಿ ಮೂಡುತ್ತಿದ್ದ ಕಂಬನಿಯ ಹನಿಯನ್ನು ತನ್ನ ತೋರು ಬೆರಳಿನ ಮೇಲಿಳಿಸಿಕೊಂಡು ಶಿವ ಕೇಳಿದ.

"ಉಮಾ, ಶಂಕರೀ, ಗೌರೀ, ಹೇಳು ಏನಾಯಿತೆಂದು."

ಪಾರ್ವತಿಯ ಮೌನಕ್ಕೆ ಮತ್ತೆ ಉತ್ತರಿಸಿದ ರುದ್ರ.

"ಏನಾಯಿತೆಂದು ಹೇಳುವ ಮನವಿಲ್ಲದಿದ್ದರೆ, ನಾನು ಏನು ಮಾಡಬೇಕೆಂದು ಹೇಳುವ ಔದಾರ್ಯ ತೋರಿದರೆ, ನನಗೆ ಉಚಿತವೆಂದು ತೋರಿದ ಕಾರ್ಯ ಮಾಡುವೆ."

"ಬೀಜವನ್ನು ಸಂಸ್ಕರಿಸಿ, ಅದು ಮೊಳಕೆಯೊಡೆಯುವುದನ್ನು ಕಂಡು, ಸಸಿಯನ್ನಾಗಿ ಜೋಪಾನ ಮಾಡಿ, ಮರವಾದಾಗ ಹಿಗ್ಗುವುದರಲ್ಲಿ ಪೂರ್ಣ ವಿಶ್ವಾಸವಿರುವುದು. ಯಾವ ಹಿಂಜರಿಕೆಯಿಲ್ಲದೇ ಹೃದಯಪೂರ್ವಕವಾಗಿ ನಿಜವಾದ ಸಂತಸವನ್ನು ಹೊಂದುವೆವು. ಎಲ್ಲೋ ಬೆಳೆದಿರುವ ಮರವನ್ನೇ ತಂದು ನಮ್ಮ ಮನೆಯ ಅಂಗಳದಲ್ಲಿ ನೆಟ್ಟಾಗ ಅದು ಬೇರು ಬಿಡುವುದರಲ್ಲಿ ಸಂಶಯ, ನಿಂತಂತೆ ಕಾಣುವ ಅದು ಯಾವಾಗ ಬೀಳುವುದೋ ಎಂಬ ಆತಂಕ, ಅದರ ಮೊಳಕೆಯೊಡೆಯುವ ಅದ್ಭುತವನ್ನು ನೋಡದ, ಸಸಿಯಾಗಿದ್ದು ಕೊನರುವುದನ್ನು ಕಾಣದ ಕೊರತೆಗಳೆಲ್ಲಾ ಇದ್ದು, ಸಮಾಧಾನ ಇಲ್ಲದ ಸಂದೇಹಪೂರ್ಣವಾದ ಸಂತೋಷವನ್ನು ಸಂತೋಷವೆಂದು ಹೇಗೆ ತೃಪ್ತಿಯಿಂದ ಹೇಳುವುದು? ನಗುವಂತೆ ನಟಿಸುವುದು ಅಳುವುದಕ್ಕಿಂತ ಘೋರ. ಹೇ ಪರಮೇಶ, ದಯಮಾಡಿ ನನಗೆ ನಿಜವಾದ ನಗುವನ್ನು ದಯಪಾಲಿಸು." ಕೆಳಕ್ಕೆ ಕುಸಿದ ಪಾರ್ವತಿಯ ಕಣ್ಣೀರು ಶಿವನ ಪಾದಗಳ ಮೇಲೆ ಹನಿದಿತ್ತು.

"ಹೇ ಪ್ರಭೂ, ನಿನ್ನ ಪತಿಯಾಗಿ ಸ್ವೀಕರಿಸಿರುವ ನನಗೆ ನನ್ನದೇ ಮಗುವನ್ನು ಚುಂಬಿಸುವ ವರವನ್ನು ನೀಡು. ಎಲ್ಲೋ ಬೆಳೆದಿರುವ ಮರವನ್ನು ತಂದು ಅಂಗಳದಲ್ಲಿ ನೆಟ್ಟು ಪ್ರೀತ್ಯಾದರಗಳಿಂದ ಅಪ್ಪಿಕೊಂಡರೆ ತಾನು ಈ ಹಿಂದೆ ಬೆಳೆದಿರುವ ಕ್ಷೇತ್ರದ ವಾಸನೆಯನ್ನು ಬೀರುವುದು. ಅದರಲ್ಲಿ ಸ್ವಚ್ಛತೆಯಿರುವುದಿಲ್ಲ. ಯಾವುದೇ ವಾಸನೆಗಳಿಲ್ಲದ ಮಗುವನ್ನು ಮುಕ್ತವಾಗಿ ಅಪ್ಪಿಕೊಂಡು ಮುದ್ದಿನ ಮಳೆಗೆರೆಯುವ ಭಾಗ್ಯವನ್ನು ಕರುಣಿಸು. ಭಿಕ್ಷೆಯನ್ನು ನೀಡುವವರೆಗೂ ಭಿಕ್ಷುಕರು ಕಾಡುತ್ತಾರೆ ನನ್ನ ಪ್ರಭುವೇ. ಅದಾದ ಮೇಲೆ ನಾನೆಂದೂ ನಿನ್ನ ಕಾಡುವುದಿಲ್ಲ. ಬೇಡುವ ಭಿಕ್ಷುಕಿಯಾಗಿರುವುದಿಲ್ಲ." ಸರಸರನೆ ಕಣ್ಣೊಳನ್ನೊರೆಸಿಕೊಂಡ ಪಾರ್ವತಿ ಮೇಲೆದ್ದು ಅವನ ಕೈಗಳನ್ನು ಹಿಡಿದು ಹೇಳಿದಳು. "ನನಗೆ ಒಂದು ಮಗುವು ಹುಟ್ಟಿದರೆ ಅಲ್ಲಿಗೆ ನಿಮ್ಮ ಕರ್ತವ್ಯವು ಪೂರ್ಣವಾಯಿತೆಂದೇ ತಿಳಿಯಿರಿ. ನೀವು ಮಾಡುವ ಯೋಗ ಸಾಧನೆ ಮುಂದುವರಿಸಿರಿ. ಯೋಗಿಯಾಗಿಯೇ ಉಳಿಯಿರಿ. ಯಾವ ಕರ್ಮ ಬಂಧವೂ ಇಲ್ಲದ, ಯಾವ ಮಲಿನವನ್ನೂ, ಪಾವಿತ್ರ್ಯವನ್ನೂ ಗಣಿಸದ ನೀವು ನನಗೆ ಬೀಜದಾನ ಮಾಡುವ ಕರ್ತವ್ಯದಲ್ಲಿ ಊರ್ಧ್ವರೇತಸ್ಸಿನ ವಿಚಾರವನ್ನೇಕೆ ತರುವಿರಿ? ಅಲ್ಲೇಕೆ ಮಡಿವಂತಿಕೆ ಪಾಲಿಸುತ್ತಿದ್ದೀರಿ? ಪ್ರಭು, ನಿಮ್ಮ ಬೀಜವು ಗರ್ಭಸ್ಥವಾಗಿ ಮೊಳೆಯಲು ಆರಂಭಿಸುತ್ತಿದ್ದಂತೆ, ನಾನು ಅದರ ಪೋಷಣೆಯನ್ನು ಹೊತ್ತುಕೊಳ್ಳುತ್ತೇನೆ. ನೀವು ಏನೂ ಹೊಣೆಗಾರಿಕೆಯನ್ನು ಹೊರುವುದು ಬೇಡ.

ಪ್ರಕೃತಿಯಲ್ಲಿ ಕೂಡ ಯಾವ ಗಂಡು ಪಶುವೂ ತನ್ನ ಕಾರಣದಿಂದ ಹುಟ್ಟುವ ಮರಿಗಳನ್ನು ಪೋಷಿಸುವ ಹೊಣೆಗಾರಿಕೆ ಹೊರುವುದಿಲ್ಲ. ಅವುಗಳಿಗೆ ತಮ್ಮಿಂದ ಸಂತಾನವಾಯಿತು ಎಂದೂ ತಿಳಿಯುವುದಿಲ್ಲ.

ಸಂಭೋಗದ ಸಮಯದಲ್ಲಿ ಆನಂದದಿಂದ ಹೆಣ್ಣನ್ನು ಭೋಗಿಸುತ್ತಾ ಸಹಜವಾಗಿ ಬೀಜಗಳನ್ನು ಬಿಡುತ್ತವೆ. ಸಂತತಿ, ಸಂತಾನ ಎಂಬುದು ಹೆಣ್ಣಿಗಿರುವುದೇ ಹೊರತು ಪುರುಷ ಪಶು ಬರಿಯ ನಿಮಿತ್ತ ಮಾತ್ರ. ಹೆಣ್ಣುಪಶು ತನ್ನ ಸಹಜ ಪ್ರಕೃತಿಯಂತೆ ಸಂತಾನವನ್ನು ಪಾಲಿಸುತ್ತದೆ. ಮನುಷ್ಯರಲ್ಲಿ, ಮಗುವನ್ನು ಹುಟ್ಟಿಸಿದವರು ತಂದೆಯೆಂದು ಕರೆದುಕೊಂಡು ತಾಯಿಯ ಜೊತೆಗೂಡಿ ಮಗುವನ್ನು ಪೋಷಿಸಿದರೆಂದರೆ ಅದು ಆ ಮಗುವಿನ ಭಾಗ್ಯ. ನೀವು ಭಾಗ್ಯ ನೀಡುವವರಾಗ ಬೇಡಿ. ನಾನು ತಾಯಿಯಾಗುವಲ್ಲಿ ಬರಿಯ ಭಾಗವಾಗಿ. ನನಗೆ ಹುಟ್ಟುವ ಮಗುವು ನಿಮಗೆ ಬಂದು ಅಂಟಿಕೊಳ್ಳದಿರುವಂತೆ ನೋಡಿಕೊಳ್ಳುತ್ತೇನೆ. ನಿಮಗೆ ಸಂಸಾರ ಬಂಧನವಾಗದಂತೆ ನೋಡಿಕೊಳ್ಳುತ್ತೇನೆ."

"ಪಾರ್ವತಿ, ಹೇ ಮಹೇಶ್ವರಿ." ರುದ್ರ ಅವಳ ಕಣ್ಣೀರನ್ನು ತೊಡೆಯುತ್ತಾ ಅಪ್ಪಿಕೊಂಡು ಹಣೆಗೆ ಮುತ್ತಿಟ್ಟ. "ರುದ್ರಿ, ನೀನು ನನ್ನ ಅರ್ಧಾಂಗಿ. ನಾನು ನಿನಗೆ ಕೊಡುವುದು ಏನೂ ಇಲ್ಲ. ನೀನು ನನ್ನಿಂದ ಪಡೆಯುವುದು ಏನೂ ಇಲ್ಲ. ನೀನಿಲ್ಲದೇ ನನ್ನ ಅಸ್ತಿತ್ವವಿಲ್ಲ. ನೀನು ಇನ್ನೂ ದೀನಳಾಗಿ ನನ್ನ ಮುಂದೆ ಹೀಗೆ ಕೂರಬೇಡ. ನನ್ನೊಳಗೇ ಇದ್ದು ನನ್ನನ್ನೇ ನೋಡು. ಆದರೆ, ನೀನು ಲೋಕದ ಹೆಂಗಸರ ಮಧ್ಯೆ ನಿಂತು, ದುಃಖದಿಂದ ಭ್ರಾಮಿಕಳಾದವಳಂತೆ ಕನವರಿಸುತ್ತಿದ್ದೀಯ. ನಿನ್ನ ಯೋನಿ ನನ್ನ ಕ್ಷೇತ್ರ. ನನ್ನ ಶಿಶ್ನ ನಿನ್ನ ಧಾರಣ. ನಮ್ಮಿಬ್ಬರ ಮಿಲನವೇ ಸೃಷ್ಟಿಯ ಬಿಂದು. ನಾನು ಬರಿಯ ಪುರುಷನಲ್ಲ, ನೀನು ಬರಿಯ ಸ್ತ್ರೀಯೂ ಅಲ್ಲ. ನಾನು ಪುರುಷನು ಎನ್ನುವುದಾದರೆ ಸ್ತ್ರೀಯೂ ಹೌದು. ನೀನು ಸ್ತ್ರೀ ಎನ್ನುವುದಾದರೆ ಪುರುಷಳೂ ಹೌದು. ಯಾವುದೊಂದು ದೇಹವು ಇವೆರಡೂ ಇಲ್ಲದೇ ಯಾರೊಬ್ಬರೂ ಅಸ್ತಿತ್ವದಲ್ಲಿ ಇರಲು ಸಾಧ್ಯವಿಲ್ಲ. ನಾನು ತಂದೆ ಎನ್ನುವವರಿಗೆಲ್ಲಾ ತಂದೆ, ತಾಯಿ ಎಂದರೆ ನಾನೇ ತಾಯಿ. ತಂದೆ ತಾಯಿಗಳಾಗುವುದು ಸಂಭೋಗದಿಂದಲ್ಲ, ಸಂಯೋಗದಿಂದ. ನೀನು ಸುತನನ್ನು ಬಯಸುವುದೇ ನನಗೆ ಆಶ್ಚರ್ಯವಾಗುತ್ತಿದೆ. ನೀನು ಪ್ರಕೃತಿ. ನೀನು ಕೊಡುವವಳು. ನೀನು ನಿನ್ನ ತಾಯ್ತನವನ್ನು ಔದಾರ್ಯದಿಂದ ಸದಾ ನೀಡುತ್ತಿರುವವಳಾಗು. ಪಾತ್ರರೂ, ಅಪಾತ್ರರೂ ಅಲ್ಲಿರುವರು. ಆದರೆ ಅದನ್ನು ನೋಡುವುದು, ನಿರ್ಧರಿಸುವುದು ನಿನ್ನ ತಾಯ್ತನದ ಕೆಲಸವಲ್ಲ. ಸೂರ್ಯನ ಬೆಳಕಲ್ಲಿ ಯಾವನೋ ಒಬ್ಬಾತನು ನೋಡುವುದು ಅಥವಾ ಕಣ್ಮುಚ್ಚಿಕೊಂಡಿರುವುದು ಅವನ ನಿರ್ಧಾರ. ಆದರೆ ಅವನ ನಿರ್ಧಾರ ಸೂರ್ಯನಿಗೆ ಅಬಾಧಿತ. ನೀನು ಗುಣೇಶ ಮಾತ್ರನಿಗೆ ತಾಯಿಯೆಂದು ಕರೆದುಕೊಳ್ಳುವುದು ನನಗೆ ಆಶ್ಚರ್ಯ. ನೀನು ತಾಯ್ತನದ ಸ್ವಪ್ರಕಾಶಿ. ಎಲ್ಲರಿಗೂ ವೇದ್ಯವಾದವಳು. ನಿನ್ನದೇ ಮಗುವು ಬೇಕೆಂದು ಮತ್ತೆ ಭೌತಿಕ ಪರಿಮಿತಿಯಲ್ಲಿ ವೃಥಾ ಬಂಧಿತಳಾಗಬೇಡ. ನಿನ್ನ ನೋವಿಗೆ ಕಾರಣ ನಿನ್ನ ಅವಿವೇಕ. ಅರಿವಿಲ್ಲದೇ ಹಟಮಾಡುವ ನಿನಗೆ ಲೌಕಿಕವಾದುದನ್ನು ಮಹೋನ್ನತವೆಂದು ನೀಡುವ ಅವಿವೇಕವನ್ನು ನಾನು ಮಾಡಲಾರೆ. ಅರಿತಿಕೋ ಉಮಾ. ಹೇ ಗೌರಿ, ನಿನ್ನ ವಿವೇಕದ ಕಣ್ಣುಗಳನ್ನು ತೆರೆ."

ಪಾರ್ವತಿ ಅಳುವುದನ್ನು ನಿಲ್ಲಿಸಿದ್ದಳು.

"ಸೃಷ್ಟಿಯಲ್ಲಿ ಸೃಷ್ಟಿಯಾದುದ್ದೆಲ್ಲಾ ಸೃಷ್ಟಿಯೇ ಆಗುವಂತೆ, ಲಯದಲ್ಲಿ ಲಯವಾಗುವುದನ್ನು ನಾನು ಕಲಿತಿದ್ದೇನೆ. ಗತಿಯಲ್ಲಿ ಗತಿಯಾಗಬೇಕು. ಹೊನಲಿನಲ್ಲಿ ಹೊನಲಾಗಬೇಕು. ನೀನು ಪ್ರಕೃತಿಯಲ್ಲಿ ಪ್ರಕೃತಿಯಾಗಬೇಕು." ಎನ್ನುತ್ತಾ ತನ್ನ ಕನಸಿನಲ್ಲಿ ಕನವರಿಸುತ್ತಿದ್ದ ರುದ್ರನ ತೋಳುಗಳನ್ನು ಹಿಡಿದುಕೊಂಡು ಅವನ ವಿಶಾಲವಾದ ಎದೆಯ ಮೇಲೆ ತಲೆಯನ್ನಿಟ್ಟುಕೊಂಡು ವಿರಮಿಸಿದ್ದಳು. ಹೃದಯ ವೈಶಾಲ್ಯದಲ್ಲಿ ವಿಶ್ವದ ಹರವು ಕಂಡಳು.

ಬೆಂಕಿ ಆರಿದಂತೆಯೇ ಕಂಡರೂ ಬೂದಿಯ ಹೊದಿಕೆಯಲ್ಲಿ ವಿರಮಿಸಿರುವ ನಿಗಿನಿಗಿಸುವ ಕೆಂಡದ ಕಾವು ಪಾರ್ವತಿಗೆ ನಿದ್ರೆಯ ಮುಸುಕನ್ನೆಳೆಯಲಿಲ್ಲ. ಹಲವು ಬಾರಿ ಮಗ್ಗಲು ಬದಲಿಸಿದಳು. ನಡುರಾತ್ರಿಯಲ್ಲಿ ಯಾವಾಗಲೋ ಶಿವನು ಎದ್ದು ಹೊರಗೆ ಹೋದ. ಸ್ವಲ್ಪ ಹೊತ್ತಿನಲ್ಲಿ ದೂರದಲ್ಲೆಲ್ಲೋ ಡಮರುಗದ ನಾದ ಎಚ್ಚರವಾಗಿಯೇ ಇದ್ದ ಪಾರ್ವತಿಯ ಕಿವಿಗೆ ಅಯಾಚಿತವಾಗಿ ಬೀಳುತ್ತಿತ್ತು.

ಶಂಖ ಮತ್ತು ಗಂಟೆಗಳ ನಾದಲಯಗಳೊಂದಿಗೆ ಗಣ ಸಮೂಹದ ಓಂ ನಮಃ ಶಿವಾಯ ಪಾರ್ವತಿಗೆ ಬೆಳಗಾಗಿರುವ ಸೂಚನೆಯಾಯ್ತು. ಮೆಲ್ಲನೆ ಮೇಲೆದ್ದು ನದಿಯ ಕಡೆಗೆ ನಡೆದಳು. ಅವಳು ಏಳುವುದನ್ನೇ ಕಾಯುತ್ತಿದ್ದ ದನು ಮತ್ತು ಪಂಚಮಿ ಪಾರ್ವತಿಯನ್ನು ಹಿಂಬಾಲಿಸಿದರು.

ನದಿಯಲ್ಲಿ ಮೀಯುವುದಕ್ಕಿಂತ ಅದರ ಹೊನಲಿನಲ್ಲಿ ಹೊನಲಾಗಿ ಹರಿಯುತ್ತಾ ಪಾರ್ವತಿ ತಾನೇ ಗಂಗೆಯಾದಳು. ಸೂರ್ಯನ ಸ್ವರ್ಣ ಕಿರಣಗಳ ಹೊಂಬೆಳಗು ಹಿಮಾಲಯದ ಗಿರಿಶಿಖರಗಳ ಮೇಲೆಲ್ಲಾ ನಿಧಾನವಾಗಿ ಲೇಪವಾಗತೊಡಗಿತು. ಹಕ್ಕಿಗಳ ಇಂಚರ, ನದಿಯ ಕಲರವ, ಬೀಸುಗಾಳಿಯು ತರುತ್ತಿದ್ದ ಗಂಧ; ಎಲ್ಲವನ್ನೂ ನದಿಯಲ್ಲಿ ನಿಂತೇ ಅನುಭವಿಸಿದಳು ಪಾರ್ವತಿ. 'ಹೌದು, ಎಲ್ಲವೂ ನಾನೇ. ಈ ಎಲ್ಲವೂ ನಾನೇ. ಸ್ವಾತ್ಮಾನಂದದ ಪ್ರಕೃತಿ. ಸೀಮಿತ ಭೌತಿಕ ಶರೀರದಲ್ಲಿ ಗುರುತಿಸಿಕೊಂಡಿರುವವರೆಗೂ ನೋವು ಮತ್ತು ಬಾಧೆಗಳು. ಭೌತಿಕ ಪರಿಧಿಯನ್ನು ದಾಟಿದ ಮೇಲೆ ಹರವಿನಲ್ಲಿ ಒಂದಾದ ಮೇಲೆ ನೋವು, ಒಲವು ಏನೂ ಇಲ್ಲ.'

ನೀರಿನಲ್ಲಿ ಒಮ್ಮೆ ಮುಳುಗಿ ಎದ್ದ ಪಾರ್ವತಿ ತನ್ನ ಎರಡೂ ಕೈಗಳನ್ನು ಆಕಾಶದತ್ತ ಚಾಚಿದಳು.

'ನಾನೇ ಈ ನದಿ, ನಾನೇ ಈ ಗಾಳಿ. ನಾನೇ ನದಿಯ ಹೊನಲಿರುವವಳು. ನಾನೇ ತೋಯುವವಳು. ನಾನೇ ತೋಯ್ದವಳು.' ಪಾರ್ವತಿಯು ಮನಸಾರೆ ನಕ್ಕಳು. ಜೋರಾಗಿ ನಗುನಗುತ್ತಾ ಅವಳ ಕಣ್ಣುಗಳಿಂದ ಧುಮುಕತೊಡಗಿದ ನೀರು ನದಿಯ ಹೊನಲಿನಲ್ಲಿ ಶುಭ್ರವಾಗಿ, ಹೊಸತಾಗಿ ಅಲ್ಲಿ ನಿಲ್ಲದೇ ಅದೆಲ್ಲೋ ಹರಿದುಹೋಗತೊಡಗಿತು. ಬಹಳ ಹೊತ್ತಾದ ನಂತರ ಪಾರ್ವತಿ ನೀರಿನಿಂದ ಹೊರಗೆ ಬಂದಳು.

ದನು ಮತ್ತು ಪಂಚಮಿ ಅವಳಿಗೆ ಮೈಯೊರೆಸಿಕೊಳ್ಳಲು ಅಂಗವಸ್ತ್ರವನ್ನೂ, ಬದಲಿಸಿಕೊಳ್ಳಲು ವಸ್ತ್ರಗಳನ್ನೂ ತಂದಿದ್ದರು. ಆದರೆ ಅವುಗಳನ್ನು ನಿರಾಕರಿಸಿದ ಪಾರ್ವತಿ ನನ್ನ ಒದ್ದೆಯಾದ ದೇಹವನ್ನು ದಡದ ಮೇಲೆ ತಂದಳು. ಮೆಲ್ಲನೆ ತನ್ನ ಮನೆಯ ಕಡೆಗೆ ನಡೆಯತೊಡಗಿದಳು. ಪಾದದ ತಳಗಳನ್ನು ಮುತ್ತಿಕ್ಕುತ್ತಿದ್ದ ಮಣ್ಣಿನ ಧೂಳು ತಾನು ಬೇರುಗಳೊಂದಿಗೆ ಚಲಿಸುತ್ತಿರುವ ಪ್ರಕೃತಿಯೆಂದು ಪಾರ್ವತಿಗೆ ಮನವರಿಕೆ ಮಾಡಿಕೊಟ್ಟಿತು.

ಕಾಲುದಾರಿಗೆ ಹೊಂದಿಕೊಂಡಂತೇ, ಯಾರಾದರೂ ಸರಿಯಾಗಿ ನೋಡದೇ ಹೋದರೆ ತುಳಿಯಬಹುದಾದಂತಹ ಎಡೆಯಲ್ಲಿ ಮೊಳೆತಿದ್ದ ಪುಟ್ಟ ಅಶೋಕ ವೃಕ್ಷದ ಸಸಿ ಪ್ರಕೃತಿಯ ಕಣ್ಣಿಗೆ ಕಂಡಿತು. ಅದರ ಪಕ್ಕದಲ್ಲಿಯೇ ಮೆಲ್ಲನೆ ಕುಳಿತ ಪಾರ್ವತಿ ಅದರ ಪುಟ್ಟ ಪುಟ್ಟ ನಾಲ್ಕು ಎಲೆಗಳ ಮೇಲೆ ತನ್ನ ಮೊಲೆಗಳ ಮೇಲಿಂದ ತೊಟ್ಟಿಕ್ಕುತ್ತಿದ್ದ ನೀರಿನ ಬಿಂದುಗಳನ್ನು ತನ್ನ ತೋರುಬೆರಳಿಂದ ತೆಗೆದು ಹನಿಸಿದಳು. ತನ್ನ ಸಲುಹಲು ವಾತ್ಸಲ್ಯದಿಂದ ಬಳಿ ಕುಳಿತ ಪ್ರಕೃತಿ ಮಾತೆಗೆ ಕೃತಜ್ಞತೆಯಿಂದ ಅಶೋಕದ ಸಸಿಯು ತನ್ನ ಎಲೆಗಳ ಹೊಳಪಿಂದ ನಗು ಸೂಸಿತು.

"ಅಮ್ಮಾ ನನಗೆ ಆನಂದವನ್ನು ತಂದೆ."

"ನೀನು ನನಗೆ ಕೃತಜ್ಞತೆಯನ್ನು ಹೇಳುವಷ್ಟಿಲ್ಲ ಅಶೋಕಾ. ನೀನೇ ಶೋಕವಿಲ್ಲದವಳು. ನಿನ್ನ ಪಡೆದು ನಾನು ಶೋಕದಿಂದ ಮುಕ್ತಳಾದೆ."

ಪಾರ್ವತಿ ಮೆಲ್ಲನೆ ಅದರ ಎಲೆಗಳ ತುದಿಗಳನ್ನು ಮುಟ್ಟಿದಳು.

ತಮ್ಮ ಒಡತಿ ಮೌನವಾಗಿ ಸಸಿಯೊಂದನ್ನು ನೋಡುತ್ತಾ ಕುಳಿತಿದ್ದರೂ, ತಮ್ಮಿಂದೇನಾದರೂ ಸೇವೆ ಸಂದಾಯವಾಗ ಬಹುದೇನೋ ಎಂದು ದನು, "ದೇವಿ." ಎಂದು ಕರೆದಳು.

"ದನು, ಸಪ್ತರ್ಷಿಗಳನ್ನು ಕರೆದು ಬಾ. ಮಗುವೊಂದರ ಜನನವಾಗಿದೆ, ಅದಕ್ಕೆ ಸೂಕ್ತವಾದ ಕರ್ಮಗಳನ್ನು ಮಾಡಲು ಸಿದ್ಧವಾಗಿ ಬರಲು ಹೇಳು." ಎಂದಳು ಪಾರ್ವತಿ.

ದನು ಮತ್ತು ಪಂಚಮಿಯರಲ್ಲಿ ಪರಸ್ಪರ ದೃಷ್ಟಿಗಳ ವಿನಿಮಯವಾಯ್ತು. ಅವರಿಬ್ಬರೂ ಋಷಿಗಳನ್ನು ಕರೆತರಲು ಅತ್ತ ಹೋಗುತ್ತಿದ್ದಂತೆ ಅಶೋಕದ ಸಸಿಯ ಬುಡದ ಭಾಗವನ್ನು ಬೆರಳುಗಳಿಂದ ಸ್ವಚ್ಛಗೊಳಿಸಿ ಪಾತಿ ಮಾಡಿದಳು. ನಂತರ ಮೇಲೆದ್ದ ಪಾರ್ವತಿ ಮನೆಗೆ ಹೋಗಿ ಕೊಡವನ್ನು ಹಿಡಿದು ನದಿಗೆ ನಡೆದಳು. ಅಲ್ಲಿಂದ ನೀರನ್ನು ತಂದು ಸಸಿಗೆ ಚುಮುಕಿಸಿ ಅದರ ಸುತ್ತಲೂ ಕ್ಷೇತ್ರಶುದ್ಧಿ ಮಾಡಿದಳು.

ಸಪ್ತರ್ಷಿಗಳಾದ ಮರೀಚ, ಅತ್ರಿ, ಅಂಗೀರಸ, ಪುಲಸ್ತ್ಯ, ಪುಲಹ, ಕ್ರತು ಮತ್ತು ವಶಿಷ್ಟರು ಬರುವ ಹೊತ್ತಿಗೆ ತನ್ನ ವಸ್ತ್ರಗಳನ್ನು ಬದಲಿಸಿ ತನ್ನ ಅಶೋಕ ಸಸಿಯ ಬಳಿ ಕುಳಿತಿದ್ದಳು ಪಾರ್ವತಿ. ಬಂದ ಸಪ್ತರ್ಷಿಗಳಿಗೆ ತನ್ನ ಶಿಶುವನ್ನು ತೋರಿದಳು.

ಸಪ್ತರ್ಷಿಗಳ ಮಂತ್ರೋಚ್ಚಾರಣೆಯನ್ನು ಕೇಳುತ್ತಾ ಢುಂಢಿ ಅಲ್ಲಿಗೆ ಬಂದ. ಅಶೋಕ ಶಿಶುವಿಗೆ ನಡೆಸುತ್ತಿರುವ ಕರ್ಮವನ್ನು ನೋಡುತ್ತಾ ಅಲ್ಲಿಯೇ ನಿಂತ. ಎಲ್ಲವನ್ನೂ ಮುಗಿಸಿದ ನಂತರ ವಶಿಷ್ಟರು, "ದೇವೀ, ಈ ಸಸಿಶಿಶುವಿಗೆ ಜನ್ಮಸಂಸ್ಕಾರ ಮಾಡುತ್ತಿರುವುದಾದರೂ ಏತಕ್ಕೆ? ಆ ಸಸಿಯನ್ನು ಭೂಮಿಯಿಂದ ನೀನು ದತ್ತು ಪಡೆಯುತ್ತಿರುವೆಯಾ? ಇದರಿಂದ ಏನು ಫಲ?" ಎಂದು ಕೇಳಿದರು.

"ಮುನಿವರ್ಯಾ, ದತ್ತು ತೆಗೆದುಕೊಳ್ಳುವುದೇನು? ನಾನೇ ಪ್ರಕೃತಿಯಾಗಿರುವಾಗ ಎಲ್ಲವೂ ನನ್ನ ಕಂದಗಳೇ ಅಲ್ಲವೇ?" ಪಾರ್ವತಿ ನಕ್ಕು ಹೇಳಿದಳು. "ಮಹರ್ಷಿಗಳೇ, ನೀರಿಲ್ಲದ ಊರಿನಲ್ಲಿ ಚತುರನೊಬ್ಬ ಬಾವಿ ತೋಡಿ ಬಂದ ನೀರನ್ನು ನೋಡಿ ಸ್ವರ್ಗವೇ ದೊರಕಿದಷ್ಟು ಸಂತೋಷಪಡುವನು. ಆದರೆ, ಒಂದು ನೀರಿನ ಕೊಳ ಹತ್ತು ಬಾವಿಗಳಿಗೆ ಸಮ. ಒಂದು ಸರೋವರ ಹತ್ತು ಕೊಳಗಳಿಗಿಂತ ಮೇಲು. ಹಾಗೆಯೇ, ಒಬ್ಬ ಮಗ ಹತ್ತು ಯಜ್ಞಗಳಿಗಿಂತ ಶ್ರೇಷ್ಠ. ಆದರೆ ನಿಶ್ಚಯವಾಗಿಯೂ ಹತ್ತು ಗಂಡು ಮಕ್ಕಳಿಗಿಂತ ಈ ಒಂದು ಮರದ ಸಸಿ ಪರಮ ಶ್ರೇಷ್ಠ." ಪಾರ್ವತಿಯ ಮೃದು ಮಧುರವಾದ ಕೈಗಳು ಅಶೋಕ ಸಸಿಯ ಎಲೆಗಳನ್ನು ಮುಟ್ಟುವಾಗ ಢುಂಢಿ ನೇರವಾಗಿ ಅವಳ ಎದುರೇ ಬಂದ.

"ಅಮ್ಮಾ." ಎಂದ ಢುಂಢಿಯ ದನಿಯಲ್ಲಿ ನೋವನ್ನು ಕೇಳಿದ ಪಾರ್ವತಿ ತಲೆಯೆತ್ತಿ ಅವನ ಕಣ್ಣುಗಳಲ್ಲಿರುವ ಪಶ್ಚಾತ್ತಾಪವನ್ನು ಕಂಡಳು.

"ಗುಣೇಶ, ಒಂದು ತಾಯಿಗೆ ಹಲವು ಮಕ್ಕಳಾದರೂ, ಆ ಮಕ್ಕಳೆಲ್ಲರಿಗೂ ತಾಯಿಯೊಬ್ಬಳೇ. ಆ ಒಂದು ತಾಯಿಯನ್ನು ಆ ಮಕ್ಕಳು ಸತ್ಕರಿಸುವ ರೀತಿಯನ್ನು ನೋಡಿ ಅವರು ಶ್ರೇಷ್ಠರು ಅಥವಾ ಕನಿಷ್ಠರು ಎಂದು

ಲೋಕದಲ್ಲಿ ಗುರುತಿಸಲ್ಪಡುವರು." ಪಾರ್ವತಿಯ ಮಾತುಗಳು ಢುಂಢಿಗೆ ಅರ್ಥವಾಗುವುದಿರಲಿ, ತಾನು ಏನು ಕೇಳುತ್ತಿದ್ದೇನೆ ಎಂದವನಿಗೆ ಅನ್ನಿಸಿತು. ನಿಟ್ಟುಸುರು ಬಿಟ್ಟು ಅವಳ ಪಾದಗಳನ್ನು ಮುಟ್ಟಿ ಕಣ್ಣುಗಳಿಗೊತ್ತಿಕೊಂಡು ಮೇಲೆದ್ದ ಢುಂಢಿ. ನಂತರ ತನಗಾಗಿ ಕಾಯುತ್ತಿದ್ದ ವಜ್ರನ ಜೊತೆಗೆ ಹೆಜ್ಜೆ ಹಾಕಿದ.

ಅಶೋಕ ಶಿಶುವಿನ ಸಂಗೋತ್ಸವದಲ್ಲಿ ಪುಳಕಿತಳಾಗಿದ್ದ ಅಂದು ಪಾರ್ವತಿ ರುದ್ರನಿಗೆ ಸುಂದರವಾಗಿ ಕಂಡಳು.

"ನಿನ್ನ ನಗುವೇ ನಿನ್ನ ಮುಖದ ಮೇಲಿನ ಹೊಳೆಯುವ ಆಭರಣವಾಗಿದೆ." ಎಂದ ಶಿವ.

"ನಾನು ಪ್ರಕೃತಿಯಾಗಿದ್ದು, ನೀನೇ ಪುರುಷನಾಗಿರುವಾಗ, ಮಿಕ್ಕೆಲ್ಲವೂ ನಮ್ಮ ಕಂದಗಳಾಗಿರುವಾಗ, ತಾಯಿ ನಗುತ್ತಿರುವಳೆಂದರೆ ಮಕ್ಕಳಿಗೆಲ್ಲರಿಗೂ ಪ್ರಸನ್ನತೆಯ ಅನುಭವವಾಗುವುದು. ಇನ್ನೆಂದೂ ಈ ನಗು ಮಾಸದು. ಲಯದಲ್ಲಿ ಲಯವಾಗಲು, ಗತಿಯಲ್ಲಿ ಗತಿಯಾಗಲು ಕಲಿಯುತ್ತಾ ಈ ಪಾರ್ವತಿಯು ಪ್ರಕೃತಿಯಲ್ಲಿ ಪ್ರಕೃತಿಯಾಗುತ್ತಾ ಹೊನಲಿನಲ್ಲಿ ಹೊನಲಾಗುತ್ತಿದ್ದಾಳೆ." ಎಂದ ಪಾರ್ವತಿ ತಾನೇ ಶಿವನ ಮುದ್ದಿಸುತ್ತಾ ಪಲ್ಲಂಗದ ಮೇಲೆ ಒರಗಿದಳು.

ಅಲ್ಲಿಯೇ ಇದ್ದ ದನು ಮತ್ತು ಧೂಮಾವತಿಯರಿಬ್ಬರೂ ಮೆಲ್ಲನೆ ಹೊರಗೆ ನಡೆದರು. ಅವರ ನಿರ್ಗಮನವನ್ನು ಗಮನಿಸಿದ ಪಾರ್ವತಿ, "ದನು, ಧೂಮಾ, ಗುಣೇಶನಿಗೆ ಹೇಳು, ನಿನ್ನ ತಾಯಿ ನಿನ್ನ ತಂದೆಯೊಡನೆ ಸರಸವಾಗಿದ್ದಾಳೆ. ದ್ವಾರದಿಂದ ಯಾವುದೇ ವಿಘ್ನ ಬರದಂತೆ ನೋಡಿಕೊ ಎಂದು." ಶಿವನನ್ನು ಮತ್ತಷ್ಟು ಬಿಗಿಯಾಗಿ ಅಪ್ಪಿದಳು.

ವಯನದ ಗೆಳೆಯರೊಂದಿಗೆ ಮತ್ತು ಮಾತಂಗಗಣದವರೊಂದಿಗೆ ವಜ್ರ ನಾರಿನ ಮತ್ತು ಚರ್ಮದ ಪಾಶಗಳನ್ನು ಹೊಸೆಯುತ್ತಿದ್ದ. ಢುಂಢಿ ಅವನ್ನು ಆನೆಯೊಂದರ ಕಂಬದಂತಹ ಕಾಲುಗಳಿಗೆ ಅದನ್ನು ಕಟ್ಟಿ ಎಳೆದು ಪರಿಶೀಲಿಸುತ್ತಿದ್ದ.

ಅಲ್ಲಿಗೆ ಓಡಿ ಬಂದ ದನು ಪಾರ್ವತಿ ಹೇಳಿದ್ದನ್ನು ಅವನಲ್ಲಿ ಉಸುರಿದಳು. ನಸುನಕ್ಕ ಢುಂಢಿ, "ನಾನು ಮನೆಗೆ ಹೋಗಬೇಕು." ಎಂದು ತನ್ನ ಕೊಡಲಿಯನ್ನು ತೆಗೆದುಕೊಂಡು ಮನೆಯ ಕಡೆಗೆ ಓಡಿದ. ಬಾಗಿಲಲ್ಲಿ ನಂದಿ ಮತ್ತು ಭದ್ರರಿದ್ದರೂ, ಅವರನ್ನು ಬಿಲ್ವ ವೃಕ್ಷದ ಕಡೆಗೆ ಕಳುಹಿಸಿ ತಾನು ದ್ವಾರದಲ್ಲಿ ನಿಂತ.

ಅವನು ನಿಂತ ಪರಿಯಲ್ಲಿ ಇಂದೂ ಯಾವುದೋ ಕಾಳಗಕ್ಕೆ ಸಿದ್ಧವಾಗಿರುವನಂತೆ ಕಂಡಿತು ನಂದಿ ಮತ್ತು ಭದ್ರರಿಗೆ.

"ಆದರೆ, ಇಂದು ಶಿವ ಮತ್ತು ಪಾರ್ವತಿಯರಿಬ್ಬರೂ ಸನ್ನಿಧಾನದಲ್ಲಿ ಇರುವುದರಿಂದ ದ್ವಾರೋಲಂಘನ ಮಾಡಿ ಅತಿಕ್ರಮಿಸುವಷ್ಟು ಬಲವಂತರು ಯಾರೂ ಇಲ್ಲ." ಎಂದ ಭದ್ರ.

"ಶಕುನಗಳೂ ಇಲ್ಲ. ಏನೂ ಘಟಿಸಲಾರದು ಎನಿಸುತ್ತದೆ." ಎಂದ ನಂದಿ.

ಅವರಿಬ್ಬರ ಮಾತಿಗೆ ಢುಂಢಿ ಬರಿದೇ ನಸುನಕ್ಕ.

ಒಳಗಿನಿಂದ ಕೇಳಿ ಬರುತ್ತಿದ್ದ ನಗೆಯ ಅಲೆಗಳು ಢುಂಢಿಯ ಮುಖದಲ್ಲೂ ನಗೆಯ ಗೆರೆಗಳನ್ನು ಮೂಡಿಸಿತ್ತು.

"ಶಂಭೋ ಮಹಾದೇವ!" ದೂರದಿಂದಲೇ ಕ್ಷೀಣಸ್ವರದಲ್ಲಿ ಕೇಳುತಲಿದ್ದದ್ದು ಢುಂಢಿ, ನಂದಿ ಮತ್ತು ಭದ್ರನ ಗಮನವನ್ನು ಅತ್ತ ಸೆಳೆಯಿತು.

"ಭಾರ್ಗವರಾಮ ಬರುತ್ತಿದ್ದಾನೆಂದು ಕಾಣುತ್ತದೆ." ಭದ್ರ ಹೇಳಿದ.

ಹೌದು, ಒಂದು ಕೈಯಲ್ಲಿ ದಂಡ ಮತ್ತು ಕಮಂಡಲಗಳನ್ನು ಹಿಡಿದುಕೊಂಡು, ಮತ್ತೊಂದು ಕೈಯಲ್ಲಿ ಹೆಗಲಿಗೆ ಕೊಡಲಿಯನ್ನೇರಿಸಿಕೊಂಡು ಬಹು ಉತ್ಸಾಹದಿಂದ ಉನ್ಮತ್ತ ಹೆಜ್ಜೆಗಳನ್ನು ಬಿರುಸಾಗಿಟ್ಟುಕೊಂಡು ಬರುತ್ತಿದ್ದ ಭಾರ್ಗವರಾಮ.

ತನ್ನ ವಂದಿಸಿದ ನಂದಿ ಮತ್ತು ಭದ್ರರಿಗೆ ಪ್ರತಿ ವಂದಿಸಿದ ಭಾರ್ಗವರಾಮ ಕೈಲಾಸಗೃಹದ ಮೊದಲನೆಯ ಪಾವಟಿಗೆಯನ್ನೇರುತ್ತಿದ್ದಂತೆ ಢುಂಢಿಯಿಂದ ದನಿ ಕೇಳಬೇಕಾಯ್ತು.

"ನಿಲ್ಲು!"

"ಸಂಬೋಧನಾ ಸೌಜನ್ಯವೂ ಇಲ್ಲದ ಯಾರೀ ಶ್ವಪಚ?" ಭಾರ್ಗವರಾಮ ತನ್ನ ತಡೆದ ಶೂದ್ರ ದ್ವಾರಪಾಲಕನನ್ನು ಕೆಂಗಣ್ಣುಗಳಿಂದ ನೋಡಿದ.

"ಹೇ ಭಾರ್ಗವ, ಕೈಲಾಸದಲ್ಲಿ ನಡೆದಂತಹ ಆಗುಹೋಗುಗಳೇನೂ ನಿನ್ನ ಗಮನಕ್ಕೆ ಬಾರದೇ ಹೋಯಿತೇನು?" ನಂದಿ ಕೇಳಿದ.

"ಪರಮಪಿತೃವಾದ ಪರಶಿವನನ್ನು ದ್ವಾರದಲ್ಲಿ ತಡೆದ ಅದೇ ಭಂಡನೇನು ಇವನು?" ಭಾರ್ಗವರಾಮನ ದೃಷ್ಟಿ ಮತ್ತಷ್ಟು ತೀಕ್ಷ್ಣವಾಯಿತು.

"ಅದೇ ಗಂಗಾ ತೀರದ ಢುಂಢಿ ಇವನು. ಅದೇ ಪಾರ್ವತಿಯ ಗುಣೇಶ ಇವನು. ಅದೇ ರುದ್ರನಿಂದ ಪ್ರತಿಷ್ಠಾಪಿಸಲ್ಪಟ್ಟ ಗಣಪತಿ ಇವನು. ಮಾತಂಗ ಗಣದ ಗಣನಾಯಕನಿವನು." ಭದ್ರ ಹೆಮ್ಮೆಯಿಂದಲಿ ಢುಂಢಿಯನ್ನು ಪರಿಚಯಿಸಿದ.

"ನಿನ್ನ ಗಾಣಪತ್ಯದ ಸ್ಥಾನಕ್ಕೆ ನನ್ನ ತಡೆಯುವ ಮಾನವಿಲ್ಲ. ಅತ್ತ ಸರಿ." ಭಾರ್ಗವರಾಮ ಢುಂಢಿಯನ್ನು ತಳ್ಳುವಂತೆಯೇ ಮತ್ತೊಂದು ಪಾವಟಿಗೆಯನ್ನು ಏರಿದ.

ಢುಂಢಿ, ಭಾರ್ಗವರಾಮನ ಎದೆಯ ಮೇಲಿನ ಯಜ್ಞೋಪವೀತದ ಮೇಲೆ ಕೊಡಲಿಯನ್ನು ಹಿಡಿದ ಕೈಗಳನ್ನಿಟ್ಟು ಕೊಂಚ ಬಿರುಸಾಗಿ ತಳ್ಳಿದ.

ಕೆಂಡಾಮಂಡಲವಾದ ಭಾರ್ಗವರಾಮನ ಕ್ರೋಧದ ಕಣ್ಣುಗಳು ಮತ್ತಷ್ಟು ತೆರೆದುಕೊಂಡವು.

"ನನ್ನ ಯಾರೆಂದು ತಿಳಿದುಕೊಂಡಿದ್ದೀಯಾ!"

"ನೀನು ಪರಶಿವನಿಂದ ಕೊಡಲಿಯ ಪ್ರಸಾದವನ್ನು ಸ್ವೀಕರಿಸಿ, ಅವನಿಂದಲೇ ಯಜ್ಞೋಪವೀತವನ್ನು ಸ್ವೀಕರಿಸಿ, ಅವನಿಗೆ ಮಗನಾಗಿದ್ದರೂ, ನೀನು ಅವನ ಮಾನಸ ಪುತ್ರನಾಗಿದ್ದರೂ, ಗೋವಿಪ್ಷಿಯ

ಕಾಳಗದಲ್ಲಿ ನಿನ್ನ ತಂದೆಯನ್ನು ಕೊಂದ ಪ್ರತೀಕಾರಕ್ಕೆ ಇಪ್ಪತ್ತೊಂದು ಸರ್ತಿ ಭೂಪ್ರದಕ್ಷಿಣೆ ಬಂದು ನಿನ್ನ ಶಪಥವನ್ನು ಈಡೇರಿಸಿಕೊಳ್ಳಲಾಗದ ಭಾರ್ಗವ, ಪರಶುರಾಮ ನೀನೆಂದು ನಾನು ಬಲ್ಲೆ." ಢುಂಢಿ ಅವನನ್ನು ತಳ್ಳಿಕೊಂಡು ಬಹುದೂರಕ್ಕೆ ಹೋಗಿಬಿಟ್ಟಿದ್ದನು. "ಈಗ ನಿಮ್ಮಲ್ಲೊಂದು ಮನವಿ." ಢುಂಢಿ ತಳ್ಳುವುದನ್ನು ನಿಲ್ಲಿಸಿ ಹೇಳಿದ. "ಪರಶಿವ ಮತ್ತು ಪಾರ್ವತಿಯರು ಸರಸದಲ್ಲಿದ್ದಾರೆ. ಅವರಿಗೆ ತೊಂದರೆಯಾಗಕೂಡದೆಂದು ತಮ್ಮನ್ನು ಇಲ್ಲಿಯವರೆಗೂ ತಳ್ಳಬೇಕಾಯಿತು. ಸತಿ ಪತಿಯರ ಸರಸವನ್ನು ಹಾಳುಮಾಡಬಾರದೆಂಬ ಸೌಜನ್ಯವಿರಲಿ."

"ಶೂದ್ರನಿಂದ ಬ್ರಾಹ್ಮಣ ಶ್ರೇಷ್ಠನಿಗೆ ಶಾಸ್ತ್ರಪಾಠವಾಗುವ ದೀನಕಾಲವಿನ್ನೂ ಒದಗಿಲ್ಲ. ಕದವಿಲ್ಲದ ಕೈಲಾಸ ದ್ವಾರದೊಳಗೆ, ಪರಶಿವನ ಮಗನಾದ ನನಗೆ ಯಾವಾಗಲೂ ನಿರ್ಬಂಧಿತ ಪ್ರವೇಶವಿರುತ್ತದೆ." ಭಾರ್ಗವರಾಮ ಮತ್ತೆ ಮುನ್ನುಗ್ಗಲು ಯತ್ನಿಸಿದ.

"ನಿನಗೆ ಕನಿಷ್ಟ ಪಕ್ಷದ ಪ್ರಜ್ಞೆಯಾದರೂ ಇದ್ದಿರಬೇಕಿತ್ತು. ಶಾಸ್ತ್ರಗಳನ್ನೆಲ್ಲಾ ಓದಿ ತಿಳಿದಿರುವವನು."

"ಶಾಸ್ತ್ರಗಳು ವಿಧಿಸುವ ಕಟ್ಟುಪಾಡುಗಳು ಲೌಕಿಕರಿಗೆ. ಆಸೆಗಳನ್ನು ಮೀರಿ ಅಧ್ಯಾತ್ಮದ ಉತ್ತುಂಗಕ್ಕೇರಿರುವ ಸಾಧಕರಿಗೆ ಅವು ಯಾವುವೂ ಅನ್ವಯಿಸುವುದಿಲ್ಲ. ಜಗತ್ತಿಗೇ ಮಾತಾ ಪಿತೃಗಳಾದ ಆ ಪ್ರಕೃತಿ ಪುರುಷರ ಸಂಭೋಗವನ್ನು ನೋಡುವ ಸಂಯೋಗವೂ ನನ್ನ ಭಾಗ್ಯವೇ ಸರಿ."

"ನೀನು ಮುದುಕನಂತೆ ಕಾಣುತ್ತಿರುವೆಯಾದ್ದರಿಂದ ಬರಿದೆ ತಳ್ಳಿದೆನು. ನಿನ್ನ ದುರಹಂಕಾರದ ಕಥೆಯನ್ನು, ನಿನ್ನ ಹುಚ್ಚಾಟಗಳನ್ನು ಕೇಳಿ ತಿಳಿದಿದ್ದೆನು. ನೀನು ಅದನ್ನು ನಿರೂಪಿಸಿಬಿಟ್ಟೆ." ಭಾರ್ಗವನ ಕುತ್ತಿಗೆಯನ್ನು ಹಿಡಿದುಕೊಂಡು ಢುಂಢಿಯು ದರದರನೆ ತಳ್ಳಿಕೊಂಡು ಕೈಲಾಸ ಪ್ರದೇಶದ ಅಂಚಿಗೇ ಕೊಂಡೊಯ್ದುಬಿಟ್ಟನು.

ಭಾರ್ಗವನ ಕೋಪ ಮೇರೆ ಮೀರಿತು. ತನ್ನೆಲ್ಲಾ ತೋಳ್ಬಲವನ್ನು ಬಳಸಿ ಢುಂಢಿಯನ್ನು ಹಿಂದಕ್ಕೆ ತಳ್ಳಿದನು. ತಾನು ಹಿಂದಕ್ಕೆ ದೂಡಲ್ಪಟ್ಟೆನೆಂಬ ಭಾವ ಢುಂಢಿಯಲ್ಲಿ ಉಂಟಾಯಿತೇ ಹೊರತು ಬೀಳದೇ ಸಾವರಿಸಿಕೊಂಡನು. ಭಾರ್ಗವನಲ್ಲಿ ಹೋರಾಟದ ಅನುಭವವೇನೋ ಕಂಡರೂ ಅವನಲ್ಲಿ ವೃದ್ಧಾಪ್ಯದ ಬಳಲಿಕೆಯಿತ್ತು.

"ನಡೆ ಮುದುಕ." ಎಂದ ಢುಂಢಿ ಭಾರ್ಗವನ ಮತ್ತಷ್ಟು ಜೋರಾಗಿ ತಳ್ಳಿದ. ಕೆಳಗೆ ಬಿದ್ದ ಭಾರ್ಗವ ಮತ್ತೆ ಮೇಲೇಳುವಷ್ಟರಲ್ಲಿ ಅವನ ಕುತ್ತಿಗೆಯನ್ನು ಹಿಡಿದು ನೆಲದವರೆಗೂ ಅದುಮಿ ಒತ್ತರಿಸಿದ. ಢುಂಢಿಯ ಮುಷ್ಟಿಯಿಂದ ಬಿಡಿಸಿಕೊಳ್ಳಲು ಹೆಣಗಾಡಿದ ಭಾರ್ಗವ ತನ್ನೆಲ್ಲಾ ಬಲವನ್ನೂ ಪ್ರಯೋಗಿಸಿ ಢುಂಢಿಯ ಎದೆಯನ್ನು ತನ್ನ ಬೆನ್ನಿನಿಂದ ತಳ್ಳಿದ. ಢುಂಢಿಯು ತನ್ನ ಬಲಗೈಯಲ್ಲಿರುವ ಕೊಡಲಿಯನ್ನು ಬೀಸದೇ, ಎಡಗೈಯಿಂದ ಭಾರ್ಗವನ ಹಿಡಿಯಲು ಹೋದ. ಭಾರ್ಗವ ಎಡಪಕ್ಕಕ್ಕೆ ಸರಿದು ಅತ್ತಲೇ ಹೋಗುವಂತೆ ಮಾಡಿ, ನಂತರ ಕೂಡಲೇ ಬಲಕ್ಕೆ ಜಿಗಿದು ತನ್ನ ದಂಡ ಕಮಂಡಲುಗಳನ್ನು ಢುಂಢಿಯ ಮುಖದ ಮೇಲೆ ಎಸೆದು, ಢುಂಢಿ ಅವನ್ನು ನಿವಾರಿಸಿಕೊಂಡು ಎಚ್ಚೆತ್ತುಕೊಳ್ಳುವಷ್ಟರಲ್ಲಿ, ಭಾರ್ಗವ ಬಲವಾಗಿ ತನ್ನ ಕೊಡಲಿಯನ್ನು ಢುಂಢಿಯತ್ತ ಬೀಸಿದ. ಢುಂಢಿ ಅದೇಷ್ಟೇ ವೇಗವಾಗಿ ಏಟನ್ನು ತಪ್ಪಿಸಿಕೊಂಡು ಹಿಂದಕ್ಕೆ ಜಿಗಿದರೂ, ಕೊಡಲಿಯ ಮುಂಭಾಗ ಢುಂಢಿಯ ಬಾಯಿಗೆ ಬಡಿದಿತ್ತು. ಬಳಬಳನೆ ಬರುತ್ತಿದ್ದ ರಕ್ತವನ್ನು ತನ್ನ ಎಡಗೈಯಲ್ಲಿ ಹಿಡಿದುಕೊಂಡು ಬಾಯಿಯನ್ನು ಮುಟ್ಟಿಕೊಂಡ ಢುಂಢಿಯ ಬೆರಳುಗಳಿಗೆ ಅವನ ಮುರಿದ ಕೋರೆಹಲ್ಲು ಎಟುಕಿತ್ತು.

ರಕ್ತಸಿಕ್ತವಾದ ತನ್ನ ಕೈಗಳಲ್ಲಿ ತನ್ನ ಕೋರೆಹಲ್ಲನ್ನು ನೋಡಿಕೊಂಡ ಢುಂಢಿಗೆ ಈಗ ಆಗ್ರಹವು ಇಮ್ಮಡಿಯಾಗಿ, "ಹುಚ್ಚು ಬ್ರಾಹ್ಮಣ." ಎಂದು ಜೋರಾಗಿ ಕೂಗಿ ತನ್ನ ಕೈಯಲ್ಲಿದ್ದ ಕೊಡಲಿಯನ್ನು ಅವನತ್ತ ಬೀಸಿದ. ಸಮರ ಕಾಳಗದಲ್ಲಿ ಬಹು ನುರಿತ ಭಾರ್ಗವನೂ ಸಾಟಿಯಿಲ್ಲದಂತೆ ತನ್ನ ಕೊಡಲಿಯನ್ನು ಬೀಸಿದ. ನಂದಿ, ಭದ್ರ ಮತ್ತು ಇತರ ಗಣಗಳು ಕೂಗುತ್ತಾ ಅವರನ್ನು ತಡೆಯಲು ಬಂದರು. ಆದರೆ, ಅವರಿಬ್ಬರೂ ಯಾರ ತಡೆಗೂ ಎಡೆಗೊಡದೇ ಹೋರಾಡತೊಡಗಿದರು.

ನಂದಿ ಕೈಲಾಸಕ್ಕೆ ಓಡಿದ. ಭದ್ರ ಅಲ್ಲಿಯೇ ನಿಂತು ಯಾರಿಗೂ ಏಟಾಗದಂತೆ ಎಚ್ಚರವಹಿಸಲು ನೋಡಿದ. ಇನ್ನೂ ಕೆಲವರು ಓಡಿ ವಜ್ರನಿಗೆ ಸುದ್ಧಿ ಮುಟ್ಟಿಸಿದರು. ಸುದ್ಧಿಯನ್ನು ಕೇಳಿದೊಡನೆ ತನ್ನ ದಂಡಿನ ಸಮೇತ ಬಂದ ವಜ್ರ.

ಶಿವ ಮತ್ತು ಪಾರ್ವತಿಯರಿಗೆ ಕೇಳುವಂತೆ ನಂದಿಯು ದ್ವಾರದಲ್ಲಿ ನಿಂತು ಕೂಗಿ ಹೇಳಿದ.

"ಹೇ ಮಹಾದೇವ, ಪ್ರಭೂ.... ಭಾರ್ಗವರಾಮನೂ, ಗುಣೇಶನೂ ಹೋರಾಡುತ್ತಿದ್ದಾರೆ. ಬೇಗ ಬನ್ನಿ ಪ್ರಭೂ ಬೇಗ ಬನ್ನಿ." ಶಿವ ಮತ್ತು ಪಾರ್ವತಿಯರಿಬ್ಬರೂ ಕೂಡಲೇ ಹೊರಗೆ ಬಂದರು.

"ಏನಾಯ್ತು?" ಪಾರ್ವತಿ ಕೇಳಿದಳು.

"ದ್ವಾರದಲ್ಲಿ ಕಾವಲಿಗಿದ್ದ ಗುಣೇಶ ಒಳಗೆ ನುಗ್ಗುತಲಿದ್ದ ಭಾರ್ಗವನ ತಡೆದ. ಭಾರ್ಗವ ಗುಣೇಶನನ್ನು ಶೂದ್ರನೆಂದು ನಿಂದಿಸಿ, ಅವನನ್ನು ಕಡೆಗಣಿಸಿ ಒಳಕ್ಕೆ ನುಗ್ಗಲಿದ್ದ. ನಿಮಗೆ ರಸಭಂಗವಾಗಕೂಡದೆಂದು ಗುಣೇಶ ಅವನನ್ನು ಕೈಲಾಸದ ಅಂಚಿನವರೆಗೂ ತಳ್ಳಿಕೊಂಡು ಹೋಗಿ ದೂಡಿದ. ಭಾರ್ಗವರಾಮ ಗುಣೇಶನ ಮೇಲೆ ಕೊಡಲಿಯನ್ನು ಬೀಸಿ ಹಲ್ಲೊಂದನ್ನು ಮುರಿದ." ಶಿವ ಮತ್ತು ಪಾರ್ವತಿಯರಿಬ್ಬರೂ ಭಾರ್ಗವ ಮತ್ತು ಢುಂಢಿ ಹೋರಾಡುತ್ತಿದ್ದ ಸ್ಥಳಕ್ಕೆ ಓಡೋಡಿ ಬರುವಾಗ ಹಿಂದೆಯೇ ನಂದಿ ಎಲ್ಲವನ್ನೂ ಹೇಳುತ್ತಾ ಬಂದ.

"ನನ್ನ ಮಗನದೇನೂ ತಪ್ಪಿಲ್ಲ ಎಂದಾಯ್ತು." ಎಂದಳು ಪಾರ್ವತಿ.

ಅಲ್ಲಿಗೆ ಅವರು ಬರುಷ್ಟರಲ್ಲಿ ವಜ್ರನ ಸಹಾಯದಿಂದ ಭಾರ್ಗವ ರಾಮನನ್ನು ನೆಲಕ್ಕೆ ಕೆಡವಿದ್ದ ಢುಂಢಿ ಅವನನ್ನು ಹಗ್ಗದಿಂದ ಬಂಧಿಸಿದ್ದ.

"ಗಾಣಪತ್ಯ ಹೊಂದಿರುವ ಗುಣೇಶನ ಮಾತನ್ನು ಧಿಕ್ಕರಿಸಿ ಅತಿಕ್ರಮಣ ಮಾಡುವುದು ನಿನಗೆ ಹೇಗೆ ಸರಿ ಎನ್ನಿಸಿತು ಭಾರ್ಗವ?" ಪಾರ್ವತಿ ಕೇಳಿದಳು.

"ಹೊಸದಾಗಿ ಈಗ ಮೇಲೇಳುತ್ತಿರುವ ಈ ಹುಡುಗನಿಗೆ, ಹಿರಿಯರನ್ನು ತಡೆಯಬಾರದೆಂಬ ಪರಿಜ್ಞಾನವಿರಬೇಕಿತ್ತು ಹೇ ದೇವಿ." ಭಾರ್ಗವ ಹೇಳಿದ.

"ಹೇ ಭಾರ್ಗವ, ಅವನು ನನ್ನ ಮಗನೆಂಬುದನ್ನು ನೆನಪಿಡು. ಅವನು ನನ್ನ ಮಗ."

"ನಾನೂ ನಿನ್ನ ಮಗನೇ ಅಲ್ಲವೇ?"

"ನೀನು ನಿನ್ನ ಸೋದರನ ಶೂದ್ರನೆಂದು ಜರಿಯಬಹುದೇ?"

“ಅವನು ಜಾತ್ಯಾ ಅರಣ್ಯಕನಲ್ಲವೇ, ಶೂದ್ರನಲ್ಲವೇ?”

“ಜನ್ಮತಃ ಏನೇ ಆದರೂ, ಸಂಸ್ಕಾರ ಹೊಂದಿದ ಬಳಿಕ ಏನಾಗಿರುವರೋ ಅದಕ್ಕೆ ನೀನು ಗೌರವ ಸಲ್ಲಿಸಲು ಶಾಸ್ತ್ರ ಕೋವಿದನಾದ ನಿನಗೆ ಹೇಳಿಕೊಡಬೇಕೆ ಭಾರ್ಗವ?”

“ನಮ್ಮ ಮತ್ತು ನಿಮ್ಮ ಬಾಂಧವ್ಯದಲ್ಲಿ ಕಟ್ಟುಪಾಡು, ಶಾಸ್ತ್ರಗಳನ್ನು ಏಕೆ ತರುತ್ತಿರುವೆ ತಾಯಿ?”

“ನನ್ನ ಮಗ ಗುಣೇಶನಿಗೆ ನಾನು ದ್ವಾರವನ್ನು ಕಾಯಲು ಹೇಳಿದ್ದು. ಅವನು ನನ್ನ ಆಜ್ಞೆಯನ್ನು ಪಾಲಿಸಿದ್ದಾನಷ್ಟೇ. ಇನ್ನೇನೇ ಉದ್ಧಟತನ ಎಂದು ಅವನು ತೋರಿದ್ದೇ ಆದರೆ ಅದು ನಿನ್ನ ನಡುವಳಿಕೆಗೆ ಸಂದ ಪ್ರತಿಫಲವಷ್ಟೇ ಆಗಿರುತ್ತದೆ.”

“ಹೇ ಮಾತೇ, ಹಾಗಾದರೆ, ಈತ ನನ್ನ ಮೇಲೆ ಆಕ್ರಮಣ ಮಾಡಿದ್ದು ಸರಿ ಎನ್ನುವಿರೋ?”

“ಪ್ರಜ್ಞೆಯಿಂದ ನೀನು ವರ್ತಿಸದಿರುವುದಷ್ಟೇ ತಪ್ಪು ಎನ್ನುತ್ತಿದ್ದೇನೆ.” ಪಾರ್ವತಿ ಢುಂಢಿಯ ಬಳಿಗೆ ನಡೆದು ಅವನ ರಕ್ತಸಿಕ್ತವಾದ ಬಾಯನ್ನು ನೇವರಿಸಿ ಹೇಳಿದಳು. “ಹೇ ಭಾರ್ಗವ, ನನ್ನ ಮಗನ ದಂತಭಗ್ನ ಮಾಡಿದಂತ ನಿನ್ನ ಉದ್ಧಟತನವನ್ನು ನಾನು ಕ್ಷಮಿಸಲಾರೆ.” ನಂತರ ಅವಳು ರುದ್ರನತ್ತ ತಿರುಗಿದಳು. “ನೀವೇ ಹೇಳಿ. ನಿಮ್ಮ ಮಾತನ್ನು ಇಲ್ಲಿ ಹೇಳಿ. ಪತಿಯನ್ನು ಮಾತಿಂದ ಬಂಧಿಸಿ ತಾನೇ ಅಧಿಕಾರ ನಡೆಸುತ್ತಿದ್ದಾಳೆಂಬ ಅಪಕೀರ್ತಿ ನನಗೆ ಬೇಡ. ಈಗ ನಡೆದಿರುವ ಸಂಗತಿಯಲ್ಲಿ ಗುಣೇಶನ ತಪ್ಪೇನು, ಭಾರ್ಗವನ ತಪ್ಪೇನು ಹೇಳಿ.”

ರುದ್ರ ನಕ್ಕ. “ನಾನೇನು ಹೇಳುವುದು! ಗತಿಸಿದ ಸಂಗತಿಯನ್ನು ವಿವೇಚಿಸುವುದೇನಿದೆ? ಅವರವರ ಗಾಯಗಳಿಗೆ ತಕ್ಕನಾದ ಮದ್ದು ನೀಡಿ.”

“ಇಲ್ಲಿ ಮದ್ದು ನೀಡುವ ಸಲಹೆಯಲ್ಲ ನಿಮ್ಮಿಂದ ನಮಗೆ ಬೇಕಾಗಿರುವುದು. ಇಲ್ಲಿ ಉದ್ಧಟತನ ತೋರಿದ್ದು ಯಾರು? ಗುಣೇಶನೋ ಅಥವಾ ಭಾರ್ಗವನೋ? ಹೇಳಿ.” ಪಾರ್ವತಿಯ ಒತ್ತಾಯಕ್ಕೆ ರುದ್ರ ಅವಳ ಕಡೆ ತಿರುಗಿ ಹೇಳಿದ.

“ಹೇ ದೇವಿ. ನಾನು ಇಲ್ಲಿ ಹೇಳಿದ ಮೇಲೆ ಮುಂದೆ ತೀರ್ಮಾನ ಮಾಡುವುದೇನು? ಇಲ್ಲಿಗೆ ಈ ವಿಷಯವನ್ನು ಬಿಟ್ಟು ಅಗತ್ಯವಿರುವ ಸಂಗತಿಯನ್ನು ಪೋಷಿಸೋಣ.”

“ನನ್ನ ಆಜ್ಞೆಯಂತೆ ದ್ವಾರದಲ್ಲಿ ಕಾವಲು ನಿಂತ ಪ್ರಾಮಾಣಿಕ ಮಗನಿವನು. ನಿಮ್ಮಿಂದ ಅಭಿಷಿಕ್ತಗೊಂಡ ಗಣನಾಯಕನಿವನು. ಈ ಆಜ್ಞಾಧಾರಕನ ಅಣತಿಯನ್ನು ಭಾರ್ಗವನು ಉಲ್ಲಂಘಿಸಿದ್ದು ಎಷ್ಟರ ಮಟ್ಟಿಗೆ ಸರಿ ಎಂದು ನನ್ನ ಪ್ರಶ್ನೆ. ಮಹಾದೇವನಾದ ನೀನು ಈ ವಿಷಯದಲ್ಲಿ ಪ್ರವೇಶಿಸಲೇ ಬೇಕು.” ಪಾರ್ವತಿ ಪಟ್ಟು ಹಿಡಿದಳು.

“ಹಟ ಮಾಡಬೇಡ ಪಾರ್ವತಿ.” ರುದ್ರ ಭಾರ್ಗವ ರಾಮನ ಕಡೆ ತಿರುಗಿ ಇತರರಿಗೆ ಹೇಳಿದ. “ಅವನನ್ನು ಬಂಧನದಿಂದ ಬಿಡುಗಡೆಗೊಳಿಸಿ.”

ಭದ್ರ ಮತ್ತು ಇತರರು ಭಾರ್ಗವರಾಮನನ್ನು ಕಟ್ಟುಗಳಿಂದ ಬಿಡಿಸಿದರು.

“ಹೇಳು ಭಾರ್ಗವ. ಎಲ್ಲಿಂದ ಬಂದೆ? ಮಹೇಂದ್ರಾಚಲದಿಂದ ಬಂದೆಯೇನು? ನಿನ್ನ ತಪಶ್ಚರ್ಯೆಗಳು ಹೇಗೆ ನಡೆಯುತ್ತಿದ್ದವು.?” ರುದ್ರ ಅವನ ಹೆಗಲ ಮೇಲೆ ಕೈಯಿರಿಸಿ ಕೇಳಿದ.

“ಮಹಾದೇವ, ತಂದೇ, ತಮ್ಮ ಅನುಗ್ರಹದಿಂದ ಎಲ್ಲವೂ ಸುಸೂತ್ರವಾಗಿ ನಡೆಯುತ್ತಿದ್ದವು.” ಭಾರ್ಗವ ಮೊಣಕಾಲೂರಿ ರುದ್ರನಿಗೆ ಕೈ ಜೋಡಿಸಿ ವಂದಿಸಿದ.

“ಹೇ ಶಿವನೇ.” ಪಾರ್ವತಿ ಕೆರಳಿ ಸರಸರನೆ ನಡೆದು ರುದ್ರನನ್ನು ತನ್ನ ಕಡೆಗೆ ತಿರುಗಿಸಿಕೊಂಡಳು.

“ನಿನ್ನ ಕುಟುಂಬದವನೇ ಆದವನ ಆಜ್ಞೆಯನ್ನು ಧಿಕ್ಕರಿಸಿ, ನಿನ್ನ ಮಗನ ದಂತಭಗ್ನ ಮಾಡಿ, ಅನವಶ್ಯವಾದ ನಿಂದನೆ, ಹೋರಾಟಗಳನ್ನು ಮಾಡಿರುವ ಈ ಭಾರ್ಗವನು ನಿನಗೆ ಹೆಚ್ಚಾಗಿ ಹೋದನೇ?”

“ಹೇ ದೇವಿ. ತಾಪಸಿಯಾದ ನನಗೆ ಕುಟುಂಬವೆಂದರೆ ಯಾವುದು? ಈ ಭಾರ್ಗವನೂ ಕುಟುಂಬದವನೇ ಅಲ್ಲವೇ? ವಿಶ್ವವೇ ನಮ್ಮ ಕುಟುಂಬವಲ್ಲವೇ?” ರುದ್ರ ಅವಳನ್ನು ರಮಿಸುವ ಯತ್ನದಲ್ಲಿ ಅವಳ ತೋಳನ್ನು ಹಿಡಿದ.

“ಹಾಗಾದರೆ, ನೀನು ಈ ವಿಶ್ವ ಕುಟುಂಬದಲ್ಲಿಯೇ ಸುಖಿಯಾಗಿರು. ನಾನು ನನ್ನ ಮಗ ಈ ಕೈಲಾಸದಲ್ಲಿ ಒಂದು ಕ್ಷಣ ಮಾತ್ರವೂ ಇರುವುದಿಲ್ಲ. ಬಾ ಗುಣೇಶ. ಎಲ್ಲರನ್ನೂ ಗೌರವಿಸುವ ಭರದಲ್ಲಿ ನಿರ್ದಿಷ್ಟರಿಗೆ ಅವಮಾನವಾಗುವುದೆಂದೂ ಗಮನಿಸದ ವಿಶ್ವಕುಟುಂಬಿ ವಿಶ್ವನಾಥನ ಗೊಡವೆ ನಮಗೆ ಬೇಡ.” ಪಾರ್ವತಿ ಢುಂಢಿಯ ಕೈ ಹಿಡಿದು ದರದರನೆ ಮನೆಯ ಕಡೆಗೆ ನಡೆದಳು.

ರುದ್ರ ಭಾರ್ಗವನ ಹೆಗಲ ಮೇಲೆ ಕೈ ಹಾಕಿಕೊಂಡು ಬಿಲ್ವ ವೃಕ್ಷದಡಿಗೆ ಬಂದು ಕುಳಿತ.

ಸ್ವಲ್ಪ ಹೊತ್ತಿನಲ್ಲಿಯೇ ಪಾರ್ವತಿಯು ತನ್ನ ಅಶೋಕ ವೃಕ್ಷದ ಶಿಶುವನ್ನು ಜೋಪಾನ ಮಾಡಲು ಪಂಚಮಿಗೆ ಒಪ್ಪಿಸಿ, ಮನೆಯ ಹಿಂಬಾಗಿಲಿನಿಂದ ಗುಣೇಶನೊಂದಿಗೆ ಮತ್ತು ಕೆಲವು ಮಾತಂಗರೊಡನೆ ಹಿಮವಂತನ ಅರಮನೆಯಿರುವ ಶುಕ್ತಿಮತ್ ಕಡೆಗೆ ಪ್ರಯಾಣ ಬೆಳೆಸಿದಳು. ದನು ಪಾರ್ವತಿಯನ್ನು ಹಿಂಬಾಲಿಸಿದಳು.

ವಜ್ರ ಮತ್ತು ಭದ್ರ ಅಲ್ಲೇ ಉಳಿದರು. ಅಲ್ಲಿನ ಗಜಾರಣ್ಯವನ್ನು ಮತ್ತು ಗಾಣಪತ್ಯದ ವಿಷಯಗಳನ್ನು ಗಮನಿಸುವ ಅಗತ್ಯವಿತ್ತು.

ಪಾರ್ವತಿಯೊಡನೆ ಹೊರಡುತ್ತಿದ್ದ ಢುಂಢಿಯ ಕಿವಿಯಲ್ಲಿ ವಜ್ರ ಉಸುರಿದ್ದ. “ಅಲ್ಲಿ, ಶುಕ್ತಿಮತ್‌ನಲ್ಲಿ ನಮ್ಮ ಮಾತಂಗರ ಅಧೀನದಲ್ಲಿರುವ ಗಜಾರಣ್ಯವಿದೆ. ಇಲ್ಲಿ ಭದ್ರನಿಗೆ ಇಲ್ಲಿನ ವ್ಯವಸ್ಥೆಯನ್ನು ವಹಿಸಿ ನಾನು ಆಸುರ ಮತ್ತು ಮಾರರೊಡನೆ ಅಲ್ಲಿಗೆ ಬರುತ್ತೇನೆ.”

*

ಮಹರ್ಷಿ ವಾಮದೇವರು ಕುದುರೆಯ ಮೇಲೆ ಕುಳಿತು ಪ್ರಯಾಣ ಮಾಡಲು ನಿರಾಕರಿಸಿದರಿಂದ ಎಲ್ಲರೂ ಅವರ ಜೊತೆ ನಡೆದೇ ಹೊರಟಿದ್ದರು.

“ರುದ್ರಗಣ ಮತ್ತು ಶಕ್ತಿಗಣವೆಲ್ಲಾ ಬಂದಿರುವುದು ಸಂತೋಷ. ಈ ರುದ್ರನಿಗೆ ಗಾಣಪತ್ಯದ ವಿಷಯದಲ್ಲಿ ಆಸಕ್ತಿಯಿಲ್ಲ ಎಂದು ಭಾವಿಸಿದ್ದೆ.” ಎಂದ ಬದರೀಕ.

"ಈ ರುದ್ರ ಯಾರು? ಆ ರುದ್ರ ಯಾರು?" ಶಂಬರ ಕೇಳಿದ.

"ರುದ್ರನ ಪದವಿಗೆ ಬರುವವರೆಲ್ಲಾ ರುದ್ರರಾಗುತ್ತಾರೆ." ಬದರೀಕ ಹೇಳಿದ. "ಅವರು ಸಾಮಾನ್ಯವಾಗಿ ಅದೇ ಮಾರ್ಗದವರಾಗಿರುತ್ತಾರೆ ಅಥವಾ ಅವರ ಪುರಾತನರು ಅನುಸರಿಸಿದ ಮಾರ್ಗದಿಂದ ಅದೇ ಶಕ್ತಿಯುಳ್ಳವರಾಗುತ್ತಾರೆ. ಇಂದ್ರನ ಪದವಿಯೂ ಅಷ್ಟೇ. ಅದರಿಂದಲೇ ಯಾರೇ ಅಸುರರು, ಅನಾರ್ಯರು ಅಥವಾ ರಾಕ್ಷಸರು ಘೋರ ತಪಸ್ಸನ್ನೇನಾದರೂ ಆಚರಿಸಿದರೆ, ಅವನಿಗೆ ಭಯ ಬರುತ್ತದೆ. ಅವರು ಎಲ್ಲಿ ತನ್ನ ಪದವಿಯನ್ನು ಕಸಿದುಕೊಳ್ಳುವರೋ ಎಂದು. ಹೀಗೆ ವಿಷ್ಣುತ್ವ, ರುದ್ರತ್ವ, ಇಂದ್ರತ್ವ ಹಾಗೆಯೇ ದೇವಿಯ ಪದವಿಯೂ ಕೂಡ. ಈ ಹಿಂದೆ ಸತಿ ದಾಕ್ಷಾಯಣಿ ದೇವಿಯಾಗಿದ್ದಳು. ನಂತರ ಪಾರ್ವತಿ ದೇವಿಯಾದಳು. ಅವಳ ನಂತರ ಧೂಮಾವತಿ, ತದ ನಂತರ ಅಂಬಾ ಭವಾನಿ ಹೀಗೇ.... ಆರ್ಯರ ನಂಬುಗೆಯಂತೆ ಯಾವುದೇ ವಿಷ್ಣುವನ್ನು ಆರಾಧಿಸಿದರೂ ವಿಷ್ಣುತ್ವಕ್ಕೆ ಸಲ್ಲುವ ಆರಾಧನೆಯಾಗುತ್ತದೆ. ಯಾವುದೇ ವ್ಯಕ್ತಿಯು ತನ್ನ ತಪಸ್ಸಿನ ಸಾಮರ್ಥ್ಯದಿಂದ, ತನ್ನ ಏಕಾಗ್ರತೆಯ ಅಂತರ್ಯಜ್ಞದಿಂದ ಅಯಾಚಿತವಾಗಿ ದೈವತ್ವವನ್ನು ಪಡೆಯಬಹುದು."

ಶಂಬರನಿಗೆ ಆನಂದವಾಯಿತು. ಅವನಿಗೆ ಇಷ್ಟೆಲ್ಲಾ ವಿಷಯಗಳು ತಿಳಿದಿರಲಿಲ್ಲ. ಜೊತೆಗೆ ಇವು ಪದವಿಗಳೆಂದೂ ಅವನಿಗೆ ತಿಳಿದಿರಲಿಲ್ಲ. ಅವನ ತಲೆಯಲ್ಲಿ ಸಿಕ್ಕಂತಹ ಅಲ್ಪಸ್ವಲ್ಪ ವಿಷಯಗಳಿಂದ ಸ್ಪಷ್ಟತೆಯೆಂಬುದಿರದೇ ಎಲ್ಲವೂ ಕಲಸು ಮೇಲೋಗರವಾಗಿತ್ತು.

"ನೀನೊಬ್ಬ ವಿದ್ಯಾರ್ಥಿಯಾಗಿದ್ದರೂ ನಿನಗೆ ಈ ವಿಷಯದಲ್ಲಿ ಇರುವ ಪಾಂಡಿತ್ಯ ನನ್ನಲ್ಲಿ ಆಶ್ಚರ್ಯವನ್ನುಂಟುಮಾಡುತ್ತಿದೆ." ಎಂದ ಶಂಬರ.

"ಇದು ಪಾಂಡಿತ್ಯವೇನಲ್ಲ. ನನ್ನ ಗುರುಗಳಿಂದ ಉಂಟಾದ ಒಂದು ಸಣ್ಣ ಪ್ರಜ್ಞೆಯ ಕಿರಣ."

"ಆಚಾರ್ಯರು ನಮ್ಮ ಗುರುಗಳೂ ಸಹ." ಎಂದ ಯದು.

"ಆರ್ಯ ಋಷಿಗಳು ನಮ್ಮಂತಹ ಅನಾರ್ಯರಿಗೆ ಆಚಾರ್ಯರೆಂದರೆ ಆಶ್ಚರ್ಯವಾಗುತ್ತದೆ." ಎಂದ ಶಂಬರ.

ಮಹರ್ಷಿ ವಾಮದೇವರು, "ಗೆಳೆಯಾ, ಬಹುಪಾಲು ಋಷಿಗಳೆಲ್ಲರೂ ಅನಾರ್ಯರೇ. ವ್ಯಾಸ ಮಹರ್ಷಿಯ ತಾಯಿ ಸತ್ಯವತಿ. ಆಕೆ ಬೆಸ್ತರವಳು. ಆತನ ತಂದೆ ಪರಾಶರನೆಂಬ ಮುನಿ. ಮಾತಂಗ ಮಹರ್ಷಿಯ ತಾಯಿ ಶೂದ್ರಳು, ತಂದೆ ವೈಶ್ಯನು. ಮಹರ್ಷಿ ವಾಲ್ಮೀಕಿಯು ರತ್ನಾಕರನೆಂಬ ಚಾಂಡಾಲ ಮಾತ್ರವಲ್ಲದೇ ದಾರಿಗಳ್ಳನಾಗಿದ್ದವನು. ಮಹರ್ಷಿ ವಿಶ್ವಾಮಿತ್ರ ವಿಶ್ವರಥನೆಂಬ ಕ್ಷತ್ರಿಯನಾಗಿದ್ದವನು. ಆತನೇ ವೈದಿಕ ಬ್ರಾಹ್ಮಣರಿಗೆಲ್ಲಾ ಪರಮ ಪವಿತ್ರವಾದ ಗಾಯತ್ರೀಮಂತ್ರದ ಕರ್ತೃ. ಋಷ್ಯಶೃಂಗ ಜಿಂಕೆಗಣದ ಅರಣ್ಯಕ ಸ್ತ್ರೀಯಿಂದ ಹುಟ್ಟಿದವನಾದರೆ, ಕೌಶಿಕ ಕುಶಗಣದಲ್ಲಿ ಹುಟ್ಟಿದವನು. ಅಗಸ್ತ್ಯ ಕುಂಬಾರ ಸ್ತ್ರೀಯ ಮಗನಾದರೆ, ಕಶ್ಯಪ ಆಮೆಯ ಗಣದವನು. ವಶಿಷ್ಠ ಅಮರಾವತಿಯ ವೇಶ್ಯೆಯಾದ ಊರ್ವಶಿ ಎಚಿಬುವಳ ಮಗನು. ಹೀಗೆ ಗೆಳೆಯ, ಯಾರೇ ಯಾವುದೇ ಜಾತಿಯಲ್ಲಿ, ಯಾವುದೇ ವರ್ಣದಲ್ಲಿ, ಯಾವುದೇ ವರ್ಗದಲ್ಲಿ ಹುಟ್ಟಿದರೂ ತಾವು ಪಡೆಯುವ ಸಂಸ್ಕಾರದಿಂದ, ತಾವು ನಡೆಸುವ ಸದಾಚಾರದಿಂದ ಬ್ರಾಹ್ಮಣರಾಗುತ್ತಾರೆ. ಜಾತಿ ಎಂಬುದು ಕರ್ಮದಿಂದಾಗುವುದೇ ಹೊರತು ಹುಟ್ಟಿನಿಂದಲ್ಲ. ಇಡೀ ಅಸ್ತಿತ್ವವೇ ಬ್ರಹ್ಮನ್‌ದಾಗಿದ್ದು. ಅದರ ಅರಿವಿನ ಪಥವೇ ಬ್ರಾಹ್ಮಣತ್ವವೆಂದು ನನ್ನ ಭಾವನೆ. ಯಾರೇ

ಈ ಅಸ್ತಿತ್ವದ ಅರಿವಿನ ಪಥದಲ್ಲಿರುವರೋ ಅವರೆಲ್ಲರೂ ಬ್ರಾಹ್ಮಣರೇ. ಯಾರೋ ಕೆಲವು ವ್ಯಕ್ತಿಗಳ ಸಂಕುಲವು ಕುಲ ಗೋತ್ರಗಳಿತ್ಯಾದಿಯಾಗಿ ಆಗಬಹುದೇ ಹೊರತು ಅದನ್ನೇ ಬ್ರಾಹ್ಮಣಿಕೆ ಎಂದು ಹೇಗೆ ಕರೆಯುವುದು? ಇಷ್ಟಕ್ಕೂ ಆರ್ಯ ಎಂದರೆ ಯಾರು? ಯೋಗ್ಯನೂ, ಉದಾರನೂ, ಉತ್ತಮನೂ, ಶ್ರೇಷ್ಠನೂ ಯಾರೋ ಅವರೇ ಆರ್ಯರು. ಯಾವುದೇ ಜಾತಿಯಲ್ಲಿ, ಜನ್ಮದಲ್ಲಿ ನಾವು ಆರ್ಯರನ್ನು ಕಾಣಬಹುದು. ಅಪ್ರಬುದ್ಧನು, ಮೊಂಡನು, ಹಟಮಾರಿಯು, ಕನಿಷ್ಟನೂ, ಅನಾರ್ಯನೂ, ಅನಾರ್ಥನೂ ಆಗುತ್ತಾನೆ." ಎಂದರು.

ಅಂತರ್ವೇದಿಯನ್ನು ತಲುಪುವಷ್ಟರಲ್ಲಿ ರಾತ್ರಿ ಕಳೆದು ಬೆಳಕು ಹರಿದಿತ್ತು.

## ಅಧ್ಯಾಯ 18 ಗಜಾರಣ್ಯ

"ಈಗ ನಾಡಿಯ ಬಡಿತ ಹೇಗಿದೆ ವೈದ್ಯರೇ?" ವಾಮದೇವ ಢುಂಢಿಯನ್ನು ನಿರತವಾಗಿ ನೋಡಿಕೊಳ್ಳುತ್ತಿದ್ದ ಆರ್ಯ ವೈದ್ಯರನ್ನೂ ಮತ್ತು ನಿಷಾದರ ಬೇಷಜರನ್ನು ಕೇಳಿದರು.

"ನಾಭಿಯ ಭಾಗದಲ್ಲಿರುವ ಐದು ನಾಡಿಗಳು ಮಿಡಿಯುತ್ತಿದ್ದು, ಶಬ್ದ, ಸ್ಪರ್ಶ, ರೂಪ, ರಸ, ಗಂಧಾದಿ ಗುಣಗಳನ್ನು ಗ್ರಹಣ ಮಾಡುತ್ತಿದ್ದಾರೆ. ಸುಷುಮ್ನಾ ನಾಡಿಯೂ, ಅದನ್ನು ಬಳಸಿರುವಂತಹ ಇಳಾ ಮತ್ತು ಪಿಂಗಳಾ ನಾಡಿಗಳು ಕೂಡ ಸಂವೇದಿಸುತ್ತಿವೆ. ಸರಸ್ವತಿ, ಗಾಂಧಾರೀ, ಅಲಂಬುಸೆ, ಕೂಹೂ, ಪೂಷಾದಿ ನಾಡಿಗಳು ಸಂವೇದಿಸುತ್ತಿಲ್ಲವೆಂದು ಭಾಸವಾಗುತ್ತಿದೆ." ಎಂದರು ವೈದ್ಯರು.

ಢುಂಢಿಯನ್ನು ನೋಡಿದ ವಾಮದೇವರು ಕೆಲವು ಗಳಿಗೆಗಳ ಕಾಲ ಅಲ್ಲಿಯೇ ನಿಂತರು. ನಂತರ ನಿಧಾನವಾಗಿ ಗಣಪತಿ ಮಂಟಪದಿಂದ ಹೊರಗೆ ಬಂದರು.

ಕುಟೀರದೊಳಗೆ ಹೋಗಿ ವದೀರಜ್ಜನನ್ನು ಮತ್ತು ಬೆನಕನನ್ನು ಕಂಡರು.

"ಆಚಾರ್ಯಾ, ಈಗ ನಾವು ಏನು ಮಾಡಬೇಕು?" ಬೆನಕ ಮೆಲ್ಲನೆ ಕೇಳಿದ. "ಢುಂಢಿಗೆ ಸಾವೇಕೆ ಬರುತ್ತಿಲ್ಲ. ಆತ ಮರಣ ಯಾತನೆಯಲ್ಲಿ ಇದ್ದಾನೆಂದು ನಾನು ಬಲ್ಲೆ. ಆದರೆ, ಜೀವಂತವಾಗಿಯೂ ಇರಲಿಚ್ಚಿಸದೇ, ಮರಣವನ್ನೂ ಅಪ್ಪದೇ ಅತಂತ್ರವಾಗಿ ಇರುವುದೇಕೆ?"

"ಶಿವ ಪಾರ್ವತಿಯರೇ ಕಾರಣ. ಆ ಪರಮ ಪುರುಷ ಮತ್ತು ದೇವಿ ಪ್ರಕೃತಿಯೇ ಕಾರಣ." ಎಂದರು ವಾಮದೇವರು.

"ಹೇಗೆ? ಒಂದು ವೇಳೆ ಅವರ ವಿಷಯವೇ ಕಾರಣವಾದರೆ, ಅವರೀರ್ವರೂ ಈಗ ಇಲ್ಲವಲ್ಲ! ನಾವೇನು ಮಾಡಲು ಸಾಧ್ಯ?" ಎಂದ ಬೆನಕ.

"ಅವರನ್ನು ಇಲ್ಲವೆಂದರೆ ಇಲ್ಲ. ಇದ್ದಾರೆಂದರೆ ಇದ್ದಾರೆ. ಯಾರೊಬ್ಬರೂ ಹುಟ್ಟುವುದಿಲ್ಲ. ಯಾರೊಬ್ಬರೂ ನಾಶವಾಗುವುದೂ ಇಲ್ಲ. ಸ್ಥೂಲ ರೂಪದಲ್ಲಿ ಎಲ್ಲರಿಗೂ ಹುಟ್ಟು ಮತ್ತು ಸಾವುಗಳಿವೆ. ಸೂಕ್ಷ್ಮ ರೂಪದಲ್ಲಿ ಯಾರಿಗೂ ಹುಟ್ಟಿಲ್ಲ ಮತ್ತು ಸಾವೂ ಇಲ್ಲ." ಎಂದರು ವಾಮದೇವರು.

“ಹೇ ಮುನಿವರ್ಯಾ, ತಮ್ಮನ್ನು ಇಲ್ಲಿಗೆ ಕರೆಯಿಸಿದ ಬಹುಮುಖ್ಯ ಕಾರಣವೆಂದರೆ, ನಮ್ಮ ಗಣನಾಯಕನನ್ನು ಮರಣಮಂಚದಿಂದ ಮುಕ್ತಿಗೊಳಿಸಿ ಅಮರತ್ವವನ್ನು ಗಳಿಸುವಂತೆ ಮಾಡುವುದು. ನಮ್ಮ ಘುಂಢಿ ಗಣಪತಿಯು ದೇವರಾಗಬೇಕು.” ಏನೋ ರಹಸ್ಯ ಹೇಳುವಂತೆ ಬೆನಕ ವಾಮದೇವರ ಕಿವಿಯಲ್ಲಿ ಹೇಳಿದ.

ಅದಕ್ಕೆ ನಕ್ಕ ವಾಮದೇವ, “ಹೇ ಬೆನಕ ನಾಯಕ, ದೈವತ್ವವನ್ನು ಯಾರೂ ಕೊಡುವುದಲ್ಲ. ಯಾರೂ ಯಾರಿಗೂ ಆರೋಪಿಸುವಂತಹದ್ದಾಗಿದ್ದರೆ ಅದು ಮಹತ್ತರವಾದಂತಹ ದೈವತ್ವ ಹೇಗಾದೀತು? ದೈವತ್ವವೆನ್ನುವುದು ಕಾಣುವುದರಲ್ಲಿ ಅಥವಾ ಕಂಡುಕೊಳ್ಳುವುದರಲ್ಲಿ ಮಾತ್ರವಿರುವುದು. ಕಾಣುವವರು ಅನುಭವ ಪಡೆಯುತ್ತಾರೆ. ಕಂಡುಕೊಳ್ಳುವವರು ಅನುಭಾವ ಪಡೆಯುತ್ತಾರೆ.”

“ಹೇ ಯತಿರಾಜ, ನಾನು ಸಾಮಾನ್ಯ ಅರಣ್ಯಕನೂ, ನಿರಕ್ಷರನೂ ಆಗಿದ್ದು ತಾವು ಹೇಳಿದಂತಹ ವಿಷಯಗಳು ತಿಳಿಯುವುದಿಲ್ಲ. ದಯಮಾಡಿ, ನಮ್ಮ ಘುಂಢಿ ಗಣಪತಿಗೆ ನೋವಿನಿಂದ ಬಿಡುಗಡೆಯನ್ನೂ, ದೈವತ್ವದ ಕೀರ್ತಿಯನ್ನೂ ಹೇಗೆ ಕೊಡಿಸಬಹುದು ಎಂಬುದಾಗಿ ಆಲೋಚಿಸಿ ತ್ವರಿತವಾಗಿ ಕಾರ್ಯತತ್ಪರರಾಗಬೇಕು ಎಂದು ನಮ್ಮ ಬೇಡಿಕೆ.” ಎಂದು ಬೆನಕ ಅವರಿಗೆ ಕೈ ಮುಗಿದ.

ವಾಮದೇವ ಮಹರ್ಷಿ ಮೆಲ್ಲನೆ ಅಲ್ಲಿಂದ ಹೊರಗೆ ಹೋಗಿ ಗಣಪತಿಯ ಮಂಟಪಕ್ಕೆ ಹೋದರು. ಶಂಬರನೂ ಅವರ ನೆರಳಾಗಿದ್ದ.

ಘುಂಢಿಯ ಎಡಭಾಗದಲ್ಲಿ ನಿಂತ ಮಹರ್ಷಿಗಳು, “ಘುಂಢೀ... ಹೇ ಘುಂಢೀರಾಜ.” ಎಂದು ಮಧುರ ದನಿಯಲ್ಲಿ ಕರೆದರು.

“ಎಡಗಣ್ಣಿನಲ್ಲಿರುವ ಗಾಂಧಾರಿ ನಾಡಿಯು ಸ್ಪಂದಿಸುತ್ತಿಲ್ಲ. ಆದರೆ, ಬಲಗಣ್ಣಿನಲ್ಲಿರುವ ಹಸ್ತಿಜಿಹ್ವೆ ನಾಡಿಯು ಸಂವೇದನೆಯಲ್ಲಿದೆ. ಹಾಗೆಯೇ ಎಡಗಿವಿಯ ನಾಡಿಯಾದ ಯಶಸ್ವಿನಿಯು ಕೂಡ ಸಂವೇದನೆಯಲ್ಲಿದೆ. ನೀವು ಅವರಿಗೆ ಕಾಣುವಂತೆ ಬಲಗಣ್ಣಿನ ಬಳಿ ನಿಂತು ಮಾತನಾಡಬಹುದು. ಎಡಗಿವಿಯೂ ಕೇಳುತ್ತದೆ. ನಾಲಿಗೆಯಲ್ಲಿನ ಅಲಂಬುಸೆ ಕ್ರಿಯಾತ್ಮಕವಾಗಿಲ್ಲದ ಕಾರಣ ಮಾತನಾಡಲು ಸಾಧ್ಯವಿಲ್ಲ. ತಲೆಯ ಮೇಲಿನ ಶಂಖಿನಿ ನಾಡಿಯು ವ್ಯವಸ್ಥಿತವಾಗಿದೆ.”

ವೈದ್ಯರು ಹೇಳಿದ ದಿಕ್ಕಿನಲ್ಲಿ ಬಂದು ನಿಂತ ವಾಮದೇವ ಮಹರ್ಷಿಗಳು ನಿಧಾನವಾಗಿ ಕರೆದರು. “ಘುಂಢಿ, ದಯಮಾಡಿ ನಿನ್ನ ಮನಸ್ಸಿನಲ್ಲಿ ಇರುವ ವಿಷಯವನ್ನು ನನಗೆ ಹೇಳುವಂತವನಾಗು. ನಾನು ನಿನಗೆ ಅರಿಕೆ ಮಾಡಿಕೊಳ್ಳುತ್ತಿದ್ದೇನೆ. ದಯಮಾಡಿ ಹೇಳು ಘುಂಢಿ.” ಎಂದು ಎಷ್ಟೋ ಹೊತ್ತು ಮೌನವಾಗಿ ಘುಂಢಿಯ ಎದುರಿನಲ್ಲಿ ಧ್ಯಾನ ಮೂರ್ತಿಗಳಾಗಿದ್ದ ವಾಮದೇವ ಮಹರ್ಷಿ ಒಮ್ಮೆಲೆ ಮೇಲೆದ್ದು ಹೊರಗೆ ನಡೆದರು. ಶಂಬರ, ಯದು, ಕುಶಿಕ ಹಾಗೂ ಇತರರನ್ನು ಕರೆದು, “ಮಂಡಲಗಳನ್ನು ರಚಿಸಲು ಅರಿಸಿನ ಹಾಗೂ ಮೂಲಿಕೆಗಳಿಂದ ಮಾಡಿರುವ ಬಣ್ಣಗಳನ್ನು ತನ್ನಿ.” ಎಂದರು.

*

ತಾನು ತಿಳಿಸಿದಂತೆ ಒಂದು ಮಾಸದಲ್ಲಿಯೇ ಕೈಲಾಸದಿಂದ ಶುಕ್ತಿಮತ್‌ಗೆ ಬಂದಿಳಿದಿದ್ದ ವಜ್ರ. ಅವನೊಡನೆ ಮಾರ ಮತ್ತು ಆಸುರಾದಿಯಾಗಿ ಇನ್ನೂ ಕೆಲವು ಅರಣ್ಯಕರು ಬಂದರು.

ಅರಮನೆಯ ಅಂಗಳದಲ್ಲಿ ಅರಳಿದ್ದ ರಂಗವಲ್ಲಿಯ ಮೇಲೆ ಚಿತ್ತಾರದ ಬಿಂದುಗಳಲ್ಲಿ ಸಖಿಯರು ಉರಿಯುವ ದೀಪಗಳನ್ನಿಟ್ಟು ಸಿಂಗರಿಸುವುದನ್ನೇ ನೋಡುತ್ತಾ ಕುಳಿತಿದ್ದ ಪಾರ್ವತಿಯ ಹಿಂದೆ ಬಂದು ನಿಂತ ಮೇನಾದೇವಿ ಮೆಲ್ಲನೆ ಕರೆದಳು. "ಪಾರ್ವತೀ..."

"ಹೇಳಮ್ಮಾ." ಎಂದ ಪಾರ್ವತಿ ಮೆಲ್ಲನೆ ತಾಯಿಯ ಕಡೆಗೆ ನೋಡಿದಳು.

"ನೀನು ನನ್ನ ಜೊತೆ ಬಂದು ಗಳಿಗೆ ಕಾಲ ಮಾತನಾಡಬಾರದೇ?"

ಮೇನಾವತಿಯ ಮಾತಿಗೆ ಉತ್ತರವಾಗಿ ಪಾರ್ವತಿ ಮತ್ತೆ ರಂಗೋಲೆಯನ್ನು ಸಿಂಗರಿಸುತ್ತಿದ್ದವರ ಕಡೆಗೆ ನೋಡಿದಳು.

"ಪಾರ್ವತೀ, ಉಮಾ..." ಮತ್ತೆ ಮೆಲ್ಲನೆ ಕರೆದ ಮೇನಾದೇವಿ ಮೃದುವಾಗಿ ಪಾರ್ವತಿಯ ಗಲ್ಲವನ್ನು ಹಿಡಿದುಕೊಂಡು ತನ್ನತ್ತ ತಿರುಗಿಸಿಕೊಳ್ಳಲು ಯತ್ನಿಸಿದಳು. ಪಾರ್ವತಿ ತಾಯಿಯ ಕೈಯನ್ನು ಮೃದುವಾಗಿ ಪಕ್ಕಕ್ಕೆ ತಳ್ಳಿ, "ಅಮ್ಮಾ, ನಿನ್ನ ಆರ್ಯೋಕ್ತಿಗಳನ್ನು ಕೇಳಲು ನನಗೆ ತಾಳ್ಮೆಯಿಲ್ಲಮ್ಮ."

"ಅಲ್ಲಾ ಮಗಳೇ."

"ನಾನು ಇಲ್ಲಿರುವುದು ನಿನಗೆ ಸಹನೀಯವೋ ಅಥವಾ ಅಸಹನೀಯವೋ ಅಷ್ಟು ಮಾತ್ರ ಹೇಳು." ಎಂದಳು ಪಾರ್ವತಿ.

"ಇದು ನಿನ್ನ ಮನೆ ಮಗಳೇ." ಎಂದ ಮೇನಾದೇವಿ ಮೆಲ್ಲನೆ ಅಲ್ಲಿಂದ ಹೊರಟು ಹೋದಳು.

ರಂಗೋಲಿಯು ಪೂರ್ಣಗೊಂಡಾದ ಮೇಲೆ ಸಖಿಯರು ತಮ್ಮ ಕಾರ್ಯಕ್ಕೆ ಸಂದಬಹುದಾದ ಪ್ರಶಂಸೆಗಾಗಿ ಮೆಲ್ಲಮೆಲ್ಲನೆ ಆಗಾಗ ಪಾರ್ವತಿಯ ಕಡೆಗೆ ನೋಡುತ್ತಿದ್ದರು. ಆದರೆ, ಪಾರ್ವತಿಯ ಕಣ್ಣುಗಳು ಮಾತ್ರವೇ ರಂಗವಲ್ಲಿಯ ಕಡೆಗಿದ್ದದ್ದು. ಅವಳು ನೋಡುತ್ತಲಿದ್ದದ್ದು ಶಿವನ ಸಖ್ಯದಲ್ಲಿದ್ದ ಹೆಣ್ಣುಗಳ ಮುಖಗಳನ್ನು. ಅದೆಷ್ಟು ಹೆಣ್ಣುಗಳು! ಅವರಲ್ಲಿ ನಾನು ಯಾರು? ನಾನೂ ಒಬ್ಬಳು ಅಷ್ಟೇ! ಅವನಿಗೆ ಅವರಲ್ಲಿ ನಾನೂ ಒಬ್ಬಳು. ಆದರೆ ನನಗೆ ಅವನು ಒಬ್ಬನೇ! ಪ್ರೀತಿಯನ್ನು, ಕುಂಟುಂಬ ಬಂಧವನ್ನು ಗೃಹಸ್ಥನಾಗಿ ತಾನು ನೀಡಲಾರೆ ಎಂದು ಹೇಳಿದವನಿಂದ ಹೆಚ್ಚಾಗಿ ಬಯಸಿವುದು ನನ್ನ ವಿಪರೀತ ಬುದ್ಧಿಯೇ ಹೊರತು ಇನ್ನೇನೂ ಅಲ್ಲ. ಗುಣೇಶನಾದರೂ ಯಾಂತ್ರಿಕವಾಗಿ ನನ್ನ ನೆರಳಿನಂತೆ ಹಿಂಬಾಲಿಸುತ್ತಾನೆ. ಅವನಿಗೆ ನನ್ನ ಬಗ್ಗೆ ಆಶ್ರಯದಾತೆ ಎಂಬ ಕೃತಜ್ಞತೆಯಷ್ಟೇ ಇರುವುದು ಎಂದು ಅನಿಸುತ್ತದೆ. ಅಂತಿಲ್ಲದಿದ್ದರೆ, ಅವನು ಏಕೆ ಬೇರೆ ಮಕ್ಕಳ ಹಾಗೆ ನನ್ನ ಬಳಿ ಆಡನು? ನಾನು ಅವನ ಚುಂಬಿಸಿ, ನನ್ನೂ ಚುಂಬಿಸೆಂದು ಹೇಳಿದರೆ ಮಾತ್ರ ಮುತ್ತನ್ನು ಕೊಡುತ್ತಾನೆ. ಅಮ್ಮಾ, ಎಂದು ಬೇರೆ ಮಕ್ಕಳಂತೆ ಏಕೆ ಓಡಿಬಂದು ತೆಕ್ಕೆಗೆ ಬೀಳುವುದಿಲ್ಲ? ಅವನು ನನಗೆ ದೊರಕುವಾಗಲೇ ಆ ವಯಸ್ಸು ಮತ್ತು ಮನಸ್ಸು ಮೀರಿರುವವನಲ್ಲವೇ? ಹೌದು, ನಾನೇಕೆ ಅವನಲ್ಲಿ ಆ ಬಗೆಯದೆಲ್ಲಾ ನಿರೀಕ್ಷಿಸಬೇಕು? ನಾನು ಎಂತವಳು? ಯಾರಿಗೆ ಏನನ್ನು ಕೊಡಲಾರರೊ ಅದನ್ನೇ ಅವರಿಂದ ನಿರೀಕ್ಷಿಸುತ್ತಾ ನೋವು ತಂದುಕೊಳ್ಳುತ್ತೇನೆ. ಇದು ನನ್ನ ಅವಿವೇಕದ ಫಲ.' ಪಾರ್ವತಿಯ ಕಣ್ಣಂಚಿನಲ್ಲಿ ನೀರು

ಹನಿಯುತ್ತಿದ್ದುದ್ದನ್ನು ನೋಡಿದ ಸಖಿಯರು ತಾವು ನಿರೀಕ್ಷಿಸುತ್ತಿದ್ದ ಪ್ರಶಂಸೆಯ ಆಸೆಯನ್ನು ಕೈಬಿಟ್ಟು ಅಲ್ಲಿಂದ ಹೊರಟು ಹೋದರು.

ದ್ವಾರದಲ್ಲಿಯೇ ವಜ್ರ ಮತ್ತು ಘುಂಢಿಗೆ ಎದುರಾದ ಮೇನಾದೇವಿ ಘುಂಢಿಯನ್ನು ಕರೆದಳು. "ನಿನ್ನ ತಾಯಿಯ ಮನಸ್ಸು ಭಾರವಾಗಿದೆ. ಅವಳನ್ನು ಪ್ರಸನ್ನಗೊಳಿಸುವುದು ನಿನ್ನ ಕರ್ತವ್ಯ."

ವಜ್ರ ಮತ್ತು ಘುಂಢಿ ಒಬ್ಬರಿಗೊಬ್ಬರು ನೋಡಿಕೊಂಡರು. ವಜ್ರ ಘುಂಢಿಗೆ, "ಹೋಗು ತಾಯಿಯನ್ನು ಕರೆದುಕೊಂಡು ಗಜಾರಣ್ಯಕ್ಕೆ ಕರೆದುಕೊಂಡು ಬಾ. ನಾನು ಅಲ್ಲಿ ಎಲ್ಲಾ ಸಿದ್ಧತೆ ಮಾಡಿರುತ್ತೇನೆ." ಎಂದು ಹೇಳಿದವನೇ ಅಲ್ಲಿಂದ ಹೊರಟು ಹೋದ.

ಮೇನಾದೇವಿಯ ಅಣತಿಯ ಮೇರೆಗೆ ಸಖಿಯೊಬ್ಬಳು ಘುಂಢಿಯನ್ನು ಪಾರ್ವತಿ ಕುಳಿತಿರುವಲ್ಲಿಗೆ ಕರೆದೊಯ್ದಳು.

"ಅಮ್ಮಾ." ಎಂದ ಘುಂಢಿ ಅವಳ ಪಕ್ಕದಲ್ಲಿ ತನ್ನ ತಲೆಯ ಮೇಲ್ಭಾಗ ಅವಳ ಕೈಗೆ ಎಟಕುವಂತೆ ನೆಲದ ಮೇಲೆ ಕಾಲುಗಳನ್ನು ಮಡಿಸಿ ಕುಳಿತುಕೊಂಡ.

ಪಾರ್ವತಿ ಮೆಲ್ಲನೆ ತನ್ನ ಹಸ್ತವನ್ನು ಅವನ ಶಿರದ ಮೇಲೆ ಇರಿಸಿ ಮೆಲ್ಲನೆ ನೇವರಿಸಿದಳು.

"ಅಮ್ಮಾ, ಬಾ ಹೊರಗೆ. ಗಜಾರಣ್ಯಕ್ಕೆ ಹೋಗುವ."

"ಇಲ್ಲಿ ಅದನ್ನು ಕಂಡುಕೊಂಡಿಯೇನು? ವಜ್ರನೇ ನಿನಗೆ ತೋರಿಸಿರಬೇಕಷ್ಟೇ!" ಎಂದಳು ಪಾರ್ವತಿ.

"ಇಲ್ಲ. ಅವನಿನ್ನೂ ತೋರಿಸಿಲ್ಲ. ನಿನ್ನೊಂದಿಗೆ ಗಜಾರಣ್ಯಕ್ಕೆ ಬರಲು ಹೇಳಿ ಅವನು ಹೊರಟು ಹೋದ. ಬಾ, ನಾನೂ ನೀನೂ ಹೋಗುವ." ಎಂದ ಘುಂಢಿ ಪಾರ್ವತಿಯನ್ನು ಹೊರಡಿಸಿಕೊಂಡು ಮೇಲೆದ್ದ.

"ಈಗಾಗಲೇ ಸಂಜೆಯಾಗುತ್ತಿದೆ. ಈಗ ಗಜಾರಣ್ಯಕ್ಕೆ ಹೋಗಿ ಮಾಡುವುದೇನು?" ಎನ್ನುತ್ತಲೇ ಪಾರ್ವತಿ ಅವನೊಡನೆ ಅರಮನೆಯ ಹೊರಗೆ ನಡೆದಳು.

ಅವಳು ಘುಂಡಿಯೊಡನೆ ಹೊರಗೆ ನಡೆಯುತ್ತಿದ್ದಂತೆ, ಹೊರಗೆ ಅವರಿಗಾಗಿ ಕಾಯುತ್ತಿದ್ದ ದನು ಮತ್ತು ಇತರ ಸಖಿಯರು ಜೊತೆಗೆ ನಡೆದರು.

ಗಜಾರಣ್ಯದಲ್ಲಿ ಪಾರ್ವತಿಗೆ ಬಹುದೊಡ್ಡ ಆಶ್ಚರ್ಯ ಕಾದಿತ್ತು.

ಎಲ್ಲೆಡೆಯೂ ಉರಿಯುವ ದೊಂದಿಗಳು ಬೆಳಗುತ್ತಿದ್ದವು. ಆಘಟಿಯೇ ಮುಂತಾದ ಅನೇಕ ಕರತಾಲಗಳು, ಕೊಂಬುಗಳು, ಕಹಳೆಗಳು, ಢಕ್ಕೆ ಮತ್ತು ಡಮರುಗಗಳು ಅವಳನ್ನು ಸ್ವಾಗತಿಸಿದವು.

ವಿಶಾಲವಾದ ಆಸನದಲ್ಲಿ ಪಾರ್ವತಿಯೂ, ಘುಂಢಿಯೂ ಆಸೀನರಾದರು. ಅಂಗಳದಲ್ಲಿ ಉರಿಯುವ ಅಗ್ನಿಷ್ಟಿಕೆಯ ಸುತ್ತಲೂ ಮಾತಂಗರು ತಮ್ಮದೇ ಆದ ರೀತಿಯಲ್ಲಿ ಕುಣಿದರು. ಅವರನ್ನು ನೋಡುತ್ತಾ, ಘುಂಢಿಯೂ ಅವರ ಜೊತೆಗೂಡಿ ಅವರಂತಲ್ಲದ ನೃತ್ಯದ ಹೆಜ್ಜೆಗಳನ್ನು ಹಾಕಿ ಪಾರ್ವತಿಗೆ ನಗು ತರಿಸಿದ. ಘುಂಢಿಯು ನರ್ತಿಸುವ ರೀತಿಯನ್ನು ನೋಡಿ ಪಾರ್ವತಿಯು ಜೋರಾಗಿ ಚಪ್ಪಾಳೆ ತಟ್ಟುತ್ತಾ ನಗುತ್ತಿದ್ದಳು.

ಶಿವನು ಕೈಲಾಸದಲ್ಲಿ ಮತ್ತು ಪಾರ್ವತಿಯು ಶುಕ್ತಿಮತ್‌ನಲ್ಲಿ ಪ್ರತ್ಯೇಕವಾಗಿ ನೆಲಸಲಾರಂಭಿಸಿದ ಮೇಲೆ ಭದ್ರ ಮತ್ತು ಇತರ ಗಣಗಳಿಗೆ ಪರಶುರಾಮನ ವಿಷಯದಲ್ಲಿ ಅಸಮಾಧಾನ ಉಂಟಾಯಿತು. ಈ ಬಗೆಯ ಸನ್ನಿವೇಶಗಳು ಶಿವನ ತಪಸ್ಸಾಧನೆಗೆ ತೊಡಕಾಗುವುದು ಎಂದು ಕೆಲವರು ಅಂದುಕೊಂಡರೆ, ಶಿವನದು ರೂಪುಗೊಳ್ಳುತ್ತಿದ್ದ ಕುಟುಂಬದ ರಚನೆಗೆ ಅಡಚಣೆಯಾಯಿತು ಎಂದು ಬಹಿರಂಗವಾಗಿ ಪರಶುರಾಮನನ್ನು ದೂರತೊಡಗಿದರು.

ಭದ್ರನು ವಜ್ರ ಮತ್ತು ಇತರ ಮಾತಂಗರೊಡನೆ ಸೇರಿ ಸೋಮನಾಥದಲ್ಲಿರುವ ಗಣೇತರ ಆರ್ಯರಿಗೆ ಮತ್ತು ಬ್ರಾಹ್ಮಣರಿಗೆ ಕಿರುಕುಳ ಕೊಡಲಾರಂಭಿಸಿದ್ದರು. ಅಷ್ಟರಲ್ಲಾಗಲೇ ಯಾದವರ ಕೃಷ್ಣನ ಮನ ಗೆದ್ದಿದ್ದ ಆರ್ಯ ಮುಖಂಡರು ಮತ್ತು ಬ್ರಾಹ್ಮಣರು ಅವನಲ್ಲಿಗೆ ಹೋಗಿ ತಮಗಾಗುತ್ತಿದ್ದ ತೊಂದರೆಯನ್ನು ನಿವೇದಿಸಿಕೊಂಡರು.

ಕೃಷ್ಣನು ಶುಕ್ತಿಮತ್‌ಗೆ ತೆರಳಿ ಪಾರ್ವತಿಯ ಮನವೊಲಿಸಲು ಪ್ರಯತ್ನಿಸಿದ. ಆದರೆ, ಪಾರ್ವತಿ, "ಪರಶುರಾಮ ತಾನು ಬ್ರಾಹ್ಮಣನೆಂಬ ಮದದಲ್ಲಿ ನನ್ನ ಮಗನ ಅಧಿಕಾರವನ್ನು ಪ್ರಶ್ನಿಸಿದ. ನನ್ನ ಮಗನ ಅವಮಾನ ಮಾಡಿದ. ನನ್ನ ಆಜ್ಞೆಯನ್ನು ಉದ್ದೇಶಪೂರ್ವಕವಾಗಿ ಧಿಕ್ಕರಿಸಿದ. ಹೀಗಿರುವಾಗ ಅದರ ಪ್ರತಿಫಲವನ್ನು ಅವನೊಡನೆ ಗುರುತಿಸಿಕೊಂಡಿರುವವರೆಲ್ಲಾ ಅನುಭವಿಸಲಿ ಬಿಡು." ಎಂದುಬಿಟ್ಟಳು.

ಕೃಷ್ಣನು ಅಲ್ಲಿಂದ ಕೈಲಾಸಕ್ಕೆ ನಡೆದು, "ಪಾರ್ವತಿಯ ಕ್ರೋಧವು ಇನ್ನೂ ಕಡಿಮೆಯಾಗಿಲ್ಲ. ಅವನ ಮಗನನ್ನು ಅವಮಾನಿಸಿರುವ ಮತ್ತು ಅವಳ ಆಜ್ಞೆಯನ್ನು ಧಿಕ್ಕರಿಸಿರುವ ನೋವು ಅವಳಿಗೆ ಬಾಧಿಸುತ್ತಿದೆ." ಎಂದು ರುದ್ರನಲ್ಲಿ ಹೇಳಿದ.

"ಅದಕ್ಕೆ ನಾನೇನು ಮಾಡಲಿ?" ಎಂದ ರುದ್ರ.

"ವಿತರ್ಕವಾದ ಭಾವನೆಯಾಗಿರುವಲ್ಲಿ ಪ್ರತಿಪಕ್ಷವಾದ ಭಾವನೆಯನ್ನು ಉಂಟುಮಾಡಬೇಕು. ಅವಮಾನವಾಗಿರುವ ಎಡೆಯಲ್ಲಿ ಸನ್ಮಾನವಾಗಬೇಕು." ಎಂದ ಕೃಷ್ಣ.

"ಅವನೀಗ ಮಾತಂಗ ಗಣದ ನಾಯಕ. ಗಣಪತಿಯಾಗಿದ್ದಾನೆ." ಎಂದನು ರುದ್ರ.

"ಗಣಪತಿ ಮಹಾಗಣಪತಿಯಾಗಲಿ." ಎಂದ ಕೃಷ್ಣ.

ಕೂಡಲೇ ಭದ್ರ, ವೀರಭದ್ರ, ನಂದಿ ಮತ್ತು ಇತರ ಗಣಗಳೆಲ್ಲಾ ಚಪ್ಪಾಳೆ ತಟ್ಟಿ ಸಂತೋಷವನ್ನು ವ್ಯಕ್ತಪಡಿಸಿದರು.

ರುದ್ರನು ನಗುತ್ತಾ, "ಆಗಲಿ, ಆ ಗುಣೇಶನೇ ರುದ್ರ ಗಣವೂ ಸೇರಿದಂತೆ ಇತರ ಎಲ್ಲಾ ಗಣಗಳ ಅಧಿಪತಿಯಾಗಿರಲಿ." ಎಂದ. ಅವನಿಗೆ ಎಂದೂ ತಾನೊಂದು ಗಣವೊಂದರ ನಾಯಕನೆಂಬ ಭಾವನೆಯೇ ಇದ್ದಿರಲಿಲ್ಲ. ಆದರೆ, ಎಲ್ಲರೂ ತನ್ನನ್ನು ಹಾಗೆ ಸ್ವೀಕರಿಸಿದ್ದರ ಅರಿವು ಅವನಲ್ಲಿತ್ತು.

ಕೆಲವೇ ದಿನಗಳಲ್ಲಿ ಅಂಜನಾಗಿರಿಯಲ್ಲಿ ಗಣಪತಿಗೆ ಮಹಾಗಾಣಪತ್ಯದ ಅಧಿಕಾರ ಒದಗಿ ಮಹಾಗಣಪತಿಯಾದ.

ಈ ಗಾಣಪತ್ಯದ ಪಟ್ಟಾಭಿಷೇಕವಾದರೂ, ಪಾರ್ವತಿಯು ಶುಕ್ತಿಮತ್‌ನಲ್ಲಿಯೇ ಉಳಿದಿದ್ದಳು. ಆದರೆ, ಸೋಮನಾಥ, ಪ್ರಯಾಗ ಮತ್ತು ಇತರ ಕಡೆಗಳಲ್ಲಿ ರುದ್ರಗಣ ಮತ್ತು ಮಾತಂಗಗಣದವರಿಂದ ಬ್ರಾಹ್ಮಣರಿಗೆ ಆಗುತ್ತಿದ್ದ ಕಿರುಕುಳಗಳು ತಪ್ಪಿದವು.

ಹಿಮಾಲಯದ ಗಜಾರಣ್ಯದ ಮಾತಂಗರು ಢುಂಢಿಯ ಕಡೆಯವರೆಗೆ, ಅದರಲ್ಲೂ ವಯನದವರಿಗೆ ಆನೆಯಗಳ ಮೇಲೆ ಕುಳಿತು ಯುದ್ಧ ಮಾಡುವ ಕಲೆಯನ್ನು ಅಭ್ಯಾಸ ಮಾಡಿಸಿದರು. ಪ್ರತಿದಿನವೂ ಢುಂಢಿ ಮತ್ತು ಇತರರು  ಅಭ್ಯಾಸ ನಡೆಯುವಾಗ ಪಾರ್ವತಿಯೂ ಅಲ್ಲಿದ್ದು, ಎಲ್ಲವನ್ನೂ ಗಮನಿಸುತ್ತಿದ್ದಳು. ತಾನು ಕಲಿತಿರುವ ಯುದ್ಧತಂತ್ರಗಳನ್ನೂ ಅವರಿಗೆ ಹೇಳಿಕೊಡುತ್ತಿದ್ದಳು.

ಹಿಮಾಲಯದ ಮುಖ್ಯ ಭಾಗವಾದ ಶುಕ್ತಿಮತ್‌ನಲ್ಲಿ ಹೆಚ್ಚಿನ ಮಾತಂಗರು ಇದ್ದು, ತಮ್ಮ ನಾಯಕ ಢುಂಢಿ ಗಣಪತಿ ಬಂದನೆಂದು ಹೆಚ್ಚು ಹೆಚ್ಚು ಚಟುವಟಿಕೆಯಿಂದ ಕಾರ್ಯ ತತ್ಪರರಾದರು. ವಜ್ರನು ಅಲ್ಲಿನ ಮಾತಂಗದವರನ್ನೆಲ್ಲಾ ಪರಿಚಯಿಸಿ ಅದೂ ನಮ್ಮ ಗಣವೇ, ನಮ್ಮ ಗಾಣಪತ್ಯಕ್ಕೆ ಸೇರಿದ್ದೇ ಎಂದು ತಿಳಿಸುವವರೆಗೂ ಢುಂಢಿಗೆ ಅದರ ಕಲ್ಪನೆಯೂ ಇರಲಿಲ್ಲ.

ಅದೊಂದು ರಾತ್ರಿ ಢುಂಢಿ ಪಾರ್ವತಿಯೊಂದಿಗೆ ಪಗಡೆಯಾಟವನ್ನು ಆಡುತ್ತಾ ಅರಮನೆಯ ಅಂಗಳದಲ್ಲಿ ಕುಳಿತಿದ್ದ.

ದನು ಮೆಲ್ಲನೆ ಒಳಗೆ ಬಂದವಳೇ, “ಒಡತಿ, ವಯನದ ಆಸುರ ಮತ್ತು ಮಾರರಿಬ್ಬರೂ ತಮ್ಮನ್ನು ನೋಡಬೇಕೆಂದು ಬಯಸುತ್ತಿದ್ದಾರೆ.” ಎಂದು ಮೆಲ್ಲನೆ ಅವಳ ಕಿವಿಯ ಬಳಿ ಉಸುರಿದಳು.

ಗುಣೇಶನ ಸ್ನೇಹಿತರಾದ ಅವರು ತನ್ನ ಬಳಿ ಹೇಳುವಂತಹದ್ದೇನಿರಬಹುದು ಎಂದು ಪಾರ್ವತಿಯ ಹುಬ್ಬು ಮೇಲೇರಿದರೂ, ಬರಹೇಳಿದಳು.

ಏನೆಂದು ಢುಂಢಿಯನ್ನು ಕೇಳಿದರೂ ತಿಳಿಯದೆಂದು ಹೇಳಿದ ಅವನು ಆಡುವುದರ ಕಡೆಗೆ ತನ್ನ ಗಮನ ಹರಿಸಿದ.

ಒಳಗೆ ಬಂದ ಆಸುರ ಮತ್ತು ಮಾರ ಪಾರ್ವತಿ ಮತ್ತು ಢುಂಢಿಯ ಎದುರು ನೆಲದ ಮೇಲೆ ಆಸೀನರಾದರು.

“ಮಾರ, ಆಸುರ, ಏನು ವಿಷಯ?” ಪಾರ್ವತಿ ಪ್ರೀತಿಯಿಂದ ವಿಚಾರಿಸಿಕೊಂಡಳು.

“ಒಡತಿ, ನಾವು ವಯನವನ್ನು ಬಿಟ್ಟು ಬಂದ ಮೇಲೆ ಇದು ಮೂರನೆಯ ಮಳೆಗಾಲ. ಅಲ್ಲಿ ನಮ್ಮ ಕಾಡು, ನಮ್ಮ ಜನ ಹೇಗಿದ್ದಾರೋ ಏನೋ ನಾವು ಹೋಗಿ ನೋಡಿಯೇ ಇಲ್ಲ. ಢುಂಢಿ ಗಣಪತಿಯಾದ ಮೇಲೆ ವಯನದವರಿಗೆ ಏನಾದರೂ ಒಳಿತಾಗಬಹುದು ಮತ್ತು ಅವಿಮುಕ್ತದ ರಾಜರಿಂದಲೂ, ಅಲ್ಲಿನ ಆರ್ಯರಿಂದಲೂ ನಮಗೆ ತೊಂದರೆ ಇಲ್ಲದೇ ಹೋಗಬಹುದು ಎಂದು ತಿಳಿದಿದ್ದೆವು. ಆದರೆ, ಅಲ್ಲಿ ಏನಾಗುತ್ತಿದೆ ಎಂಬ ವಿಷಯ ನಮಗೆ ತಿಳಿಯದೇ ಹೋಗಿದೆ. ಅವಿಮುಕ್ತದ ಕಡೆಯಿಂದ ಬರುವ ಜನರು ಯಾರೂ ಇಲ್ಲಿಗೆ ಬರಲಿಲ್ಲ. ಕೆಲವು ದಿನಗಳ ಮಟ್ಟಿಗೆ ನಾವು ಅಲ್ಲಿಗೆ ಹೋಗಿ ಬರುವುದರಿಂದ ಅಲ್ಲಿನ

ವಿಷಯವು ಇಲ್ಲಿಗೆ ತಿಳಿಯುವುದು ಹಾಗೂ ನಮ್ಮ ಢುಂಢಿಯು ನಾಯಕನಾಗಿರುವ ವಿಷಯವನ್ನು ಅಲ್ಲಿ ಬಲಪಡಿಸಿ ಬರುವುದು ನಮ್ಮ ಉದ್ದೇಶ." ಎಂದ ಆಸುರ.

ಪಾರ್ವತಿ ಢುಂಢಿಯ ಮುಖವನ್ನು ನೋಡಿದಳು.

"ಗುಣೇಶ, ಏನು ಹೇಳುವೆ?"

"ಅಮ್ಮಾ, ಅಲ್ಲಿ ಗರ್ಭಿಣಿಯಾಗಿದ್ದ ಹೆಂಗಸರು ಇಲ್ಲಿ ತಾಯಿಗಳಾಗಿ ಅವರು ಮಕ್ಕಳು ಬೆಳೆಯುತ್ತಿದ್ದಾರೆ. ಅವರನ್ನು ರಕ್ಷಿಸಲೆಂದೇ ನಾವು ಮುಖ್ಯವಾಗಿ ಇಲ್ಲಿಗೆ ಬಂದಿದ್ದು. ಈಗ ನಾನು ಅವರನ್ನು ವಯನಕ್ಕೆ ಮರಳಿಸುತ್ತೇವೆ. ಅಥವಾ ಅವರು ಇಲ್ಲೇ ಇರಲು ಇಚ್ಛಿಸಿದರೆ, ಅವರನ್ನು ಇಲ್ಲೇ ಬಿಟ್ಟು, ನಾನೂ ಮತ್ತು ಇನ್ನಾರಾದರೂ ವಯನಕ್ಕೆ ಹೋಗುತ್ತೇವೆ. ಅವರಿಗೆ ಅಗತ್ಯವಿರುವ ಸಹಾಯ ಮಾಡುತ್ತೇವೆ. ಅಲ್ಲಿನ ವಿಷಯವನ್ನು ತಿಳಿದುಕೊಂಡು ಬರುತ್ತೇವೆ." ಎಂದನು ಢುಂಢಿ.

ಸರಿ ಎಂಬ ಅರ್ಥದಲ್ಲಿ ಮುಗುಳ್ನಕ್ಕಳು ಪಾರ್ವತಿ.

ಪ್ರಯಾಣಕ್ಕೆ ಸಿದ್ಧವಾಗುತ್ತಿದ್ದ ಸಮಯದಲ್ಲಿ ಢುಂಢಿಗೆ ವಯನಕ್ಕೆ ಹೋಗುವ ಸಂತೋಷವಿದ್ದರೂ ಪಾರ್ವತಿಯನ್ನು ಬಿಟ್ಟು ಹೋಗುತ್ತಿರುವ ಸಂಕಟವಿತ್ತು. ಪಾರ್ವತಿ ಮೌನವಾಗಿ ಅವನ ಸಿದ್ಧತೆಯನ್ನು ಗಮನಿಸುತ್ತಿದ್ದಳು.

ವಜ್ರನನ್ನೂ ತನ್ನ ಜೊತೆಗೆ ಕರೆದೊಯ್ಯಲು ಢುಂಢಿಗೆ ಇಷ್ಟವಿದ್ದರೂ ಗಾಣಪತ್ಯದ ವಿಚಾರಗಳನ್ನು ಗಮನಿಸಲು ಅವನು ಇಲ್ಲಿ ಇರಲೇ ಬೇಕಾಗಿತ್ತು.

ದನುವನ್ನು ವಯನಕ್ಕೆ ಹೋಗಗೊಡಲಿಲ್ಲ ಪಾರ್ವತಿ.

"ನನ್ನ ಪೂರ್ತಿ ಒಬ್ಬೊಂಟಿಯಾಗಿ ಮಾಡಿ ಹೋಗಿಬಿಡಬೇಕೇನು?"

ಈ ಮಾತಿಗೆ ದನು ತನ್ನ ತವರಿಗೆ ಹೋಗುವ ಆಸೆಯನ್ನು ತಡೆದುಕೊಂಡಳು.

ವ್ಯಕ್ತಿಗಳನ್ನು ಹೊತ್ತ ಕುದುರೆಗಳು ಮತ್ತು ವಸ್ತುಗಳನ್ನು ಹೊತ್ತ ಕತ್ತೆಗಳು ಪ್ರಯಾಣಕ್ಕೆ ಸಿದ್ಧವಾದಾಗ, ವಯನದವರಿಗಾಗಿ ಹಿಮಾಲಯದ ವಿಶೇಷ ತಳಿಯ ಹಾಲು ಕೊಡುವ ಹಸುಗಳನ್ನು, ಅವುಗಳ ಸಂತಾನಭಿವೃದ್ಧಿಗೆ ಅನುಕೂಲವಾಗಲು ಎತ್ತುಗಳನ್ನು, ಜೊತೆಗೆ ಮೇಕೆಗಳನ್ನೂ, ಅವುಗಳನ್ನು ಹೊಡೆದುಕೊಂಡು ಹೋಗುವ ಗೋಪಾಲಕರು ಮತ್ತು ಕುರುಬರು ಹಿಮವಂತನ ಕಣಿವೆಯಿಂದ ಪಾರ್ವತಿಯ ಅಣತಿಯ ಮೇರೆಗೆ ಅನುವಾಗಿ ನಿಂತರು.

ಹೊರಡುವ ಮುನ್ನ ಢುಂಢಿಯನ್ನು ತನ್ನ ಕೋಣೆಗೆ ಕರೆದೊಯ್ದು ಪಾರ್ವತಿ, "ಗುಣೇಶ, ನಿನಗಾಗಿ ಕಾಯುತ್ತಿರುತ್ತೇನೆ. ನನ್ನ ಮರೆಯದೇ ಬೇಗ ಬಂದು ಬಿಡು." ಎಂದು ಅವನ ಅಪ್ಪಿಕೊಂಡು ಕಣ್ಣೀರಿಟ್ಟಳು. "ನಿನ್ನ ತಾಯಿ ನಿನ್ನ ಹೊಟ್ಟೆಯಲ್ಲಿ ಇರಿಸಿಕೊಂಡಿದ್ದಾಗಲೂ ನಾನು ಇದೇ ರೀತಿ ಮರಳಿ ಬರಲು ಹೇಳಿ ಬೀಳ್ಕೊಟ್ಟಿದ್ದೆ. ಆದರೆ, ಅವಳೂ ಬರಲಿಲ್ಲ. ಮಗುವಾಗಿ ನೀನೂ ಬರಲಿಲ್ಲ. ಆದರೆ, ನಿನಗೆ ನಾನು ತಾಯಿಯಾಗಲೇ ಬೇಕೆಂಬ ವಿಧಿಯಿದ್ದುದರಿಂದ ನೀನು ನನಗೆ ದೊರಕಿದೆ. ಮತ್ತೆ ನಿನ್ನ ಕಳೆದುಕೊಳ್ಳುವ

ಶಕ್ತಿ ನನಗಿಲ್ಲ. ನಾನು ನಿನಗಾಗಿ ಇಲ್ಲೇ ಕಾಯುತ್ತಿರುತ್ತೇನೆ. ಎಷ್ಟು ಬೇಗ ಬರುತ್ತೀಯೋ ಬಂದುಬಿಡು. ನಾನು ನೀನಿಲ್ಲದೇ ಕೈಲಾಸಕ್ಕೆ ಹೋಗುವುದಿಲ್ಲ. ನೀನೇ ನನ್ನ ಕರೆದೊಯ್ಯಬೇಕು. ಶಿವನ ಮೇಲಿನ ನನ್ನ ಸಿಟ್ಟು ಹೊಸತಲ್ಲ. ಆ ಸಿಟ್ಟು ಆಗಿತ್ತು, ಅದು ಈಗಿಲ್ಲ. ಮುಂದೆ ಮತ್ತೆ ಬರಬಹುದು. ಆದರೆ ನಾನು ಅವನನ್ನು ನನ್ನ ಗಂಡನಾಗಿ ಪ್ರೀತಿಸುವುದು ಸೂರ್ಯನಷ್ಟೇ ಸತ್ಯ. ನನ್ನ ಹಟದ ಮೋಡಗಳು ಆಗ್ಗಾಗ್ಗೆ ನನ್ನ ಪ್ರೀತಿಯ ಸೂರ್ಯನನ್ನು ಮರೆಮಾಡುವವು. ಆದರೂ ನಾನು ನೀನಿಲ್ಲದೇ ಅಲ್ಲಿಗೆ ಹೋಗುವುದಿಲ್ಲ." ತನ್ನ ಮುಷ್ಟಿಯನ್ನು ತೆರೆದು ಅದರಲ್ಲಿರುವುದ ತೋರಿದಳು. "ಇದೋ ಅಭಿವರ್ತಮಣಿ ನಿನ್ನ ಕೊರಳಿನಲ್ಲಿರಲಿ. ಇದನ್ನು ಯಾವುದೇ ಕಾರಣಕ್ಕೂ ಬಿಚ್ಚಬೇಡ. ನಾನು ದೇವರ್ಷಿಗಳಿಂದ ನಿನಗಾಗಿ ಮಾಡಿಸಿವ ವಿಶೇಷ ತಾಯತ." ಎಂದು ಚಿನ್ನದ ತಾಯತವನ್ನು ಅವನ ಕೊರಳಿಗೆ ಕಟ್ಟಿದಳು.

"ಅಮ್ಮಾ, ನಾನು ಖಂಡಿತ ಆದಷ್ಟು ಬೇಗನೆ ಬರುತ್ತೇನೆ. ಆದರೆ, ನೀನು ಮಾತು ತಪ್ಪಬಾರದು. ನಾನು ಬರುವವರೆಗೂ ಎಲ್ಲಿಗೂ ಹೋಗಬಾರದು." ಢುಂಡಿ ಹೇಳಿದ.

"ಅಯ್ಯೋ ಗುಣೇಶ, ನಾನು ಎಲ್ಲಿಗೆ ಹೋಗಲಿ? ನನಗೆ ನನ್ನ ಮಗನೇ ದಿಕ್ಕು. ನೀನೇ ಬರಬೇಕು ಮಗನೇ." ಎಂದು ಅವನನ್ನು ಅಪ್ಪಿ ಮುದ್ದಾಡಿದಳು. ಢುಂಢಿಯ ಕಣ್ಣುಗಳಿಂದುದುರಿದ ನೀರಿನ ಹನಿಗಳು ಪಾರ್ವತಿಯ ನೆತ್ತಿಯನ್ನು ನೆನೆಸಿದವು.

ಇವರ ಪ್ರಯಾಣದ ತಂಡ ಹೊರಟು ಕಣ್ಣಿಂದ ಮರೆಯಾಗುವವರೆಗೂ ಪಾರ್ವತಿ ಅರಮನೆಯ ಮಹಡಿಯಿಂದ ನೋಡುತ್ತಲೇ ನಿಂತಿದ್ದಳು. ತಂಡವನ್ನು ಹಿಮಾಲಯದ ಅರಣ್ಯವನ್ನು ದಾಟಿಸಿದ ವಜ್ರ ಢುಂಢಿಯನ್ನು ಅಪ್ಪಿ ಬೀಳ್ಕೊಟ್ಟು ನಂತರ ಹಿಂದಿರುಗಿದ.

ಅವಿಮುಕ್ತದ ಹೊರವಲಯದ ಕೋಟೆಯ ಮೇಲೆ ಕಾವಲು ಕಾಯುತ್ತಿದ್ದ ಭಟರು ದೂರದಲ್ಲಿ ಒಂದು ದೊಡ್ಡ ತಂಡವೊಂದು ಕುದುರೆ ಮತ್ತು ಕತ್ತೆಗಳ ಮೇಲೆ ಬರುತ್ತಿದೆ ಬಹುಶಃ ಸಾರ್ಥವಿರಬೇಕು ಎಂದು ರಕ್ಷಣಾಧಿಕಾರಿಗಳು ತರ್ಕಿಸಿದರು. ಆದರೆ ದೊಡ್ಡ ದೊಡ್ಡ ಧ್ವಜಗಳನ್ನು ಹಿಡಿದಿದ್ದರಿಂದ ಅದು ಸಾರ್ಥವಾಗಿರಲಾರದು ಎಂದು ಭಾವಿಸಿ ಭಟರನ್ನು ವಿಚಾರಿಸಿಕೊಂಡು ಬರಲು ಕಳುಹಿಸಿದರು. ಎಲ್ಲರಿಗಿಂತ ಮುಂದೆ ಬರುತ್ತಿದ್ದ ಆಸುರ ತನ್ನ ಬಳಿಗೆ ಬಂದ ಅಶ್ವಾರೂಢ ಭಟನಿಗೆ ಹೇಳಿದ. "ಹೋಗು, ಹೇಳು ಹೋಗು. ನಿಮ್ಮ ಅರಸ ಮಹಿಪಾಲನಿಗೆ ಹೇಳು. ಮಾತಂಗ ಗಾಣಪತ್ಯದ ಅಧಿನಾಯಕ ವಯನದ ಢುಂಢಿ ಗಣಪತಿಯು ಬರುತ್ತಿದ್ದಾನೆ ಎಂದು ಹೇಳು ಹೋಗು."

ಭಟನು, "ಅಪ್ಪಣೆ" ಎಂದು ವಿನಮ್ರದಿಂದ ಒಪ್ಪಿಕೊಂಡು ಕುದುರೆಯನ್ನು ಹಿಂದಕ್ಕೆ ನಡೆಸಿದ. ವಿಷಯ ತಿಳಿದ ರಕ್ಷಣಾಧಿಕಾರಿಗಳು ಕೂಡಲೇ ಮಹಿಪಾಲನಿಗೆ ಸುದ್ಧಿ ಮುಟ್ಟಿಸಿದರು. ಮಹಿಪಾಲನೊಂದಿಗೆ ಆಸ್ಥಾನದಲ್ಲಿ ಸಂಬೋಧಿ ಮತ್ತು ರಾಜಗುರು ಆಚಾರ್ಯ ಸುದರ್ಶನದೇವರೂ ಇದ್ದರು.

"ಈಗೇನು ಮಾಡುವುದು ಆಚಾರ್ಯ?" ಎಂದು ಕೇಳಿದ ಮಹಿಪಾಲನ ದನಿಯಲ್ಲಿ ಆತಂಕವಿತ್ತು.

"ಸೇನೆಗೆ ಸಿದ್ಧವಾಗಲು ಹೇಳಿ." ಎಂದ ಸುದರ್ಶನದೇವ.

"ಅದರ ಅಗತ್ಯವಿಲ್ಲ." ತಟ್ಟನೆ ಹೇಳಿದ ಸಂಬೋಧಿ. "ಢುಂಢಿಯು ಈಗ ಮಾತಂಗ ಗಣಕ್ಕೆ ಮಾತ್ರ ಗಣಪತಿಯಲ್ಲ. ಹಲವು ಗಣಗಳ ಮಹಾಗಣಪತಿ. ತಾನು ಇಂಥಾ ಗಣನಾಯಕನಾದ ಬಳಿಕ ತನ್ನ ಹುಟ್ಟೆಡೆಗೆ ಹೋಗುತ್ತಿದ್ದಾನೆ. ದೊಡ್ಡ ಪ್ರಮಾಣದಲ್ಲಿ ಕುದುರೆ, ಕತ್ತೆಗಳು ಮತ್ತು ಹಸುಗಳೊಂದಿಗೆ ವಯನಕ್ಕೆ ಹೋಗಲು ಅವಿಮುಕ್ತವೇ ಮಾರ್ಗ. ನನ್ನ ದೃಷ್ಟಿಯಲ್ಲಿ ಅರಸರು ಆತನನ್ನು ಎದುರ್ಗೊಳ್ಳದಿದ್ದರೂ, ಸೌಜನ್ಯ ಪೂರ್ವಕವಾಗಿ ಆಸ್ಥಾನದ ಪರವಾಗಿ ನಾನು ಅವನಿಗೆ ಅಭಿನಂದಿಸುವುದು ಸೂಕ್ತವೆಂದು ನನ್ನ ಭಾವನೆ."

"ದುಷ್ಟ ಹಾವಿಗೆ ಹಾಲೆರೆಯಬೇಕೆಂದು ಮಂತ್ರಿಗಳು ಹೇಳುತ್ತಾರೆ." ಎಂದ ಸುದರ್ಶನದೇವ.

"ಹಾವು ಕಚ್ಚುವುದೇ ಆದರೂ ಅದು ಕೆಣಕಿದವರಿಗೆ ಮಾತ್ರವೇ. ಸೌಜನ್ಯಯುತವಾಗಿ ನಡೆದುಕೊಂಡರೆ ಅದೂ ತನ್ನ ಪಾಡಿಗೆ ತಾನಿರುತ್ತದೆ." ಸಂಬೋಧಿಯ ದನಿಯಲ್ಲಿ ಸ್ಪಷ್ಟತೆಯಿತ್ತು.

"ಈಗೇನು ಸಂಬೋಧಿ! ನಿನ್ನಿಚ್ಛೆಯಂತೆ ನೀನು ಅವನಿಗೆ ಅಭಿನಂದಿಸು." ಎಂದ ಮಹಿಪಾಲ ಆತುರಾತುರವಾಗಿ.

"ಇದು ನನ್ನ ಇಚ್ಛೆಯೆಂದಲ್ಲ ಪ್ರಭೂ. ಇದು ಆಸ್ಥಾನದ ಮರ್ಯಾದೆ ಮತ್ತು ನಾಡಿನ ಹಿತದ ಕಾರಣ." ಎಂದ ಸಂಬೋಧಿ.

"ನಡೆಯಲಿ ನಿಮ್ಮ ಓಲೈಕೆ." ಎಂದ ಸುದರ್ಶನದೇವ.

ಸಂಬೋಧಿ ಅಲ್ಲಿ ನಿಂತರೆ ಮಾತಿಗೆ ಮಾತು ಬೆಳೆಯುವ ಸೂಚನೆ ಕಂಡು ಅಲ್ಲಿಂದ ಕೂಡಲೇ ಹೊರಟ.

ರಕ್ಷಣಾಧಿಕಾರಿಗಳು ಕೋಟೆಯ ಬಾಗಿಲನ್ನು ತೆರವು ಮಾಡಿದ್ದರು.

ಸಂಬೋಧಿಯು ನಗುನಗುತ್ತಾ ಢುಂಢಿಗೆ ಎದುರ್ಗೊಂಡು ನಮಸ್ಕರಿಸಿದ. "ಸ್ವಾಗತ, ಸುಸ್ವಾಗತ ಢುಂಢಿ ಗಣಪತಿ, ಮಾತಂಗ ಗಾಣಪತ್ಯದ ಅಧಿಪತಿಯೇ ನಿನಗೆ ಆದರದ ಸುಸ್ವಾಗತ. ವಯನದ ವೀರನೇ ಮಹಾ ಗಣಪತಿಯಾದ ನಿನಗೆ ಅಭಿನಂದನೆಗಳು. ನಿನಗೆ ಜಯವಾಗಲಿ."

ಡಂಗೂರ ಸಾರುವನೊಬ್ಬ ಅತ್ಯಂತ ಉತ್ಸಾಹ ಹಾಗೂ ಆನಂದದಿಂದ ತಮಟೆಯನ್ನು ಬಾರಿಸುತ್ತಾ ಕೂಗುತ್ತಾ ಹೇಳುತ್ತಾ ಬಂದ. "ವಯನದ ಢುಂಢಿ ಮಾತಂಗದ ಗಣಪತಿಯಾಗಿ ಬರುತ್ತಿದ್ದಾನೆ. ಢುಂಢಿ ಹಲವು ಗಣಗಳ ಮಹಾಗಣಪತಿಯಾಗಿ ಬರುತ್ತಿದ್ದಾನೆ."

ರಸ್ತೆ ರಸ್ತೆಗಳಿಂದ ಜನರೆಲ್ಲಾ ಓಡೋಡಿ ಬಂದರು. ಅದರಲ್ಲೂ ರಥಕಾರರು, ಕುಂಬಾರರು, ಕಮ್ಮಾರರು, ನಿಷಾದರು, ಕಿರಾತರು, ಬಡಗಿಗಳು, ಪರ್ಣಕರು, ಪೌಲಸ್ಕರು, ಬೈಂದರು ಇತ್ಯಾದಿ ಶೂದ್ರ ವರ್ಣದವರೆಲ್ಲಾ, "ಢುಂಢಿ ಗಣಪತಿಗೆ ಜಯವಾಗಲಿ." ಎಂದು ಘೋಷಗಳನ್ನು ಕೂಗುತ್ತಾ ಕುಣಿದಾಡಿದರು.

ಗಂಗೆಯ ತಡೆಗಳಲ್ಲಿ ತಪಸ್ಸಾಧನೆಗಳನ್ನು ಮಾಡುತ್ತಿದ್ದ ಕಾಪಾಲಿಕರು, ತಾಂತ್ರಿಕರು, ಅಘೋರಿಗಳು ಮತ್ತು ಇತರ ಶೈವ ಹಾಗೂ ಶಾಕ್ತ ಸಾಧಕರುಗಳೆಲ್ಲಾ ಶಿವ ಮತ್ತು ಶಕ್ತಿಯರ ಮಗನು ಬಂದನೆಂದು ಆನಂದದಿಂದ ಗರ್ಜಿಸುತ್ತಾ ಕೊಂಬು ಮತ್ತು ಕಹಳೆಗಳನ್ನು ಊದುತ್ತಾ, ಡಮರುಗ ಮತ್ತು ಇತರ ಚರ್ಮ ವಾದ್ಯಗಳನ್ನು ನುಡಿಸುತ್ತಾ ಕುಣಿಕುಣಿದಾಡುತ್ತಾ ಢುಂಢಿಯನ್ನು ಇದುರ್ಗೊಂಡರು.

ಬ್ರಾಹ್ಮಣರು, ವೈಶ್ಯರು ಮತ್ತು ಕ್ಷತ್ರಿಯರು ದೂರದಲ್ಲಿಯೇ ನಿಂತು ಈ ವೈಭವವನ್ನು ಈಕ್ಷಿಸುತ್ತಿದ್ದರು.

ಆಸುರ, ಮಾರರಿಗೂ, ಸ್ವಯಂ ಢುಂಢಿಗೂ ಈ ಪರಿಯ ಸ್ವಾಗತ ಅನಿರೀಕ್ಷಿತ. ಕೈಲಾಸದಲ್ಲಿ ಈ ಬಗೆಯ ಸ್ವಾಗತವನ್ನು ಶಿವನಿಗೆ ಕೋರುತ್ತಾ ಹೋಗುವಾಗ, ಅವನು ವೃಷಭದ ಮೇಲೆ ಕುಳಿತುಕೊಂಡಿರುವ ಭಂಗಿಯನ್ನು ಕಣ್ಮುಂದೆ ತಂದುಕೊಂಡ. ಹಾಗೆಯೇ ರುದ್ರನಂತೆಯೇ ಕುಳಿತು ಆನಂದದಿಂದ ಕೈಗಳನ್ನು ಬೀಸುತ್ತಾ ಕುಳಿತಿದ್ದ ಕುದುರೆಯ ಮೇಲೆಯೇ ಕುಣಿಯುತ್ತಿದ್ದ.

ಅರಮನೆಯ ಉಪ್ಪರಿಗೆಯ ಮೇಲೆ ನಿಂತು ಮಹಿಪಾಲ ಸುದರ್ಶನ ದೇವ ಈ ಮೆರವಣಿಗೆಯನ್ನು ನೋಡುತ್ತಿದ್ದರು.

"ಶೂದ್ರನೊಬ್ಬ ನಾಯಕನಾದರೆ ಅವನು ಶೂದ್ರರಿಗೆ ಮಾತ್ರವೇ. ಆದರೆ, ಆರ್ಯನೊಬ್ಬ ನಾಯಕನಾದರೆ ಅವನು ಎಲ್ಲರಿಗೂ. ತೊಟ್ಟು ಕೊಟ್ಟದ್ದನು ಉಡುವ, ಬಿಟ್ಟದ್ದನ್ನು ಉಣ್ಣುವವನು ಇವನು. ಇವನೊಬ್ಬ ಉಚ್ಛಿಷ್ಟ ಗಣಪತಿ." ಎಂದು ನಕ್ಕ ಸುದರ್ಶನದೇವ.

ಈ ಮಟ್ಟಿಗಿನ ಸ್ವಾಗತವನ್ನು ಎದುರು ನೋಡಿರದಿದ್ದ ಮಹಿಪಾಲನಿಗೆ ಎದೆಯಲ್ಲಿ ಕೊಂಚ ಕಸಿವಿಸಿಯೂ ಆಯಿತು. ತಾನು ಸಂಬೋಧಿಯ ಮಾತು ಕೇಳಿ ಅಲ್ಲಿಗೆ ಹೋಗಬೇಕಿತ್ತು ಎಂದು ಅನ್ನಿಸಿತು. ಸಂಬೋಧಿಯು ಅಲ್ಲಿಗೆ ಹೋಗದೇ ನನ್ನಂತೆ ಇಲ್ಲಿಯೇ ಉಳಿದಿದ್ದರೆ, ಈ ಪರಿಯ ವೈಭವಕ್ಕೆ ಕಾರಣವಾಗುತ್ತಿರಲಿಲ್ಲವೋ ಏನೋ ಎಂದೂ ಅನ್ನಿಸಿತು.

"ಹೇ ರಾಜನ್, ಯಾವ ಆತಂಕವೂ ತಮ್ಮ ಮನಸ್ಸಿನಲ್ಲಿ ಇರುವುದು ಬೇಡ. ಇವನು ಬರಿಯ ಸಣ್ಣ ಗಣವೊಂದರ ಅಧಿಪತಿ. ಅವನು ರಾಜನೋ, ದೇವನೋ ಅಲ್ಲ. ಇವನಿಂದ ನಿಮಗೆ ಯಾವ ತೊಂದರೆಯೂ ಇಲ್ಲ. ಒಂದು ವೇಳೆ ತೊಂದರೆ ಉಂಟಾದರೆ, ಅಸುರಾಂತಕ ಹರಿಯು ಇದ್ದೇ ಇದ್ದಾನೆ." ಎಂದು ಸುದರ್ಶನದೇವ ನಕ್ಕ. ಆ ನಗುವಿನಲ್ಲಿ ಅಪರೂಪಕ್ಕೆ ದೊರಕಿದ ಅಲ್ಪರ ವೈಭವವನ್ನು ಅವಹೇಳನ ಮಾಡುವ ಛಾಯೆಯಿತ್ತು.

ಅವಿಮುಕ್ತದಲ್ಲಿ ಢುಂಢಿಯ ಮೆರವಣಿಗೆ ಮೆಲ್ಲಗೆ ಸಾಗುತ್ತಿದ್ದಂತೆ ಆಸುರ ಮುಂದಾಗಿ ಕುದುರೆಯ ಮೇಲೆ ಹೋಗಿ ವಯನಕ್ಕೆ ಸುದ್ದಿ ಮುಟ್ಟಿಸಿದ್ದ. ಇನ್ನೂ ಒಂದಷ್ಟು ದಾರಿ ಇದ್ದಂತೆಯೇ ವಯನದ ಮಂದಿ ತಮ್ಮ ತಮಟೆಗಳನ್ನು ಬಡಿದುಕೊಂಡು, ಕೊಂಬುಗಳನ್ನು ಊದಿಕೊಂಡು, ಕರತಾಲಗಳನ್ನು ಹಾಕುತ್ತಾ ಕುಣಿಕುಣಿದಾಡುತ್ತಾ ಢುಂಢಿಯನ್ನು ಸ್ವಾಗತಿಸಿದರು. ಕಾಡು ಹೂಗಳಿಂದ ಮಾಡಿದ ಮಾಲೆಯನ್ನು ಹಾಕಿದರು. ಎಲೆಗಳು ಮತ್ತು ಬಳ್ಳಿಗಳಿಂದ ಹೆಣೆದ ಕಿರೀಟವನ್ನು ಅವನ ಶಿರಕ್ಕೆ ತೊಡಿಸಿದರು. ಜಯಜಯಕಾರಗಳನ್ನು ಕೂಗಿದರು. ಮೂರುವರುಷಗಳ ನಂತರ ಬಂದ ಢುಂಢಿಗೆ ವಯನದಲ್ಲಿ ಏನೂ ಅಷ್ಟು ಹೆಚ್ಚಿನ ಬದಲಾವಣೆ ಕಾಣಲಿಲ್ಲ. ಹಿರಿಯರಾದವರು ಅಂತೆಯೇ ಇದ್ದರು. ಮಕ್ಕಳಲ್ಲಿ ಬೆಳವಣಿಗೆ ಕಂಡಿತಾದರೂ ಎಲ್ಲರನ್ನೂ ಗುರುತು ಹಿಡಿದು ಕರೆದ. ಎಲ್ಲರೊಡನೆ ಮಾತಾಡಿದ. ಆದರೆ ಬಹು ಮುಖ್ಯವಾಗಿ ವದೀರಜ್ಜ ಕಾಣಲಿಲ್ಲ.

“ವದೀರಜ್ಜ ಎಲ್ಲಿ?”

ಢುಂಢಿಯ ಪ್ರಶ್ನೆಗೆ ಆಸುರ ವದೀರಜ್ಜನ ಮನೆಯ ಕಡೆಗೆ ನೋಡಿದ.

“ವದೀರಜ್ಜಾ.” ಎಂದು ಢುಂಢಿ ವದೀರಜ್ಜನ ಮನೆಯೊಳಗೆ ಹೋಗುತ್ತಿದ್ದಂತೆ, ಸಿದ್ಧವಾಗಿಯೇ ಕುಳಿತಿದ್ದಂತಿದ್ದ ವದೀರಜ್ಜ ಕೋಲೊಂದನ್ನು ತೆಗೆದುಕೊಂಡು ಬಂದು ಬಿಡದೇ ಬಾರಿಸಿದರು. “ವದೀರಜ್ಜಾ, ವದೀರಜ್ಜಾ...” ಎಂದು ನಗುತ್ತಾ ಢುಂಢಿ ತಪ್ಪಿಸಿಕೊಳ್ಳಲು ಯತ್ನಿಸಿದರೂ ಅವನು ಬಿಡಲಿಲ್ಲ. ತನ್ನ ಮನಸೋ ಇಚ್ಛೆ ಬಾರಿಸಿದ ಮೇಲೆಯೇ ಕೋಲನ್ನು ಪಕ್ಕಕ್ಕೆ ಎಸೆದದ್ದು.

“ನೋಡು ನೀನು ನನ್ನ ಹಲ್ಲನ್ನು ಮುರಿದು ಬಿಟ್ಟೆ.” ಢುಂಢಿ ಮುನಿಸಿಕೊಂಡಂತೆ ಮಾಡಿ ತನ್ನ ಬಾಯಲ್ಲಿ ಮುರಿದಿದ್ದ ಕೋರೆ ಹಲ್ಲಿನ ಭಾಗ ತೋರಿದ.

“ಹೌದು, ರಕ್ತಬಾರದೇ ನಿನ್ನ ಹಲ್ಲು ಮುರಿಯಿತು.” ಪಟ್ಟನೆ ವದೀರಜ್ಜ ಅವನ ಭುಜಕ್ಕೆ ಅಪ್ಪಳಿಸಿ, “ಬ್ರಾಹ್ಮಣನ ಕೊಡಲಿಯೇಟಿಗೆ ಹಲ್ಲುದುರಿಸಿಕೊಂಡು ನಾಚಿಕೆಯಿಲ್ಲದೇ ಬಂದಿದ್ದೀಯ. ಈಗ ಬಂದಿದ್ದಾದರೂ ಏಕೆ?” ಢುಂಢಿಯ ಕುತ್ತಿಗೆಯನ್ನು ಹಿಡಿದು ಅಲ್ಲಾಡಿಸುತ್ತಾ ಕೇಳಿದ. “ರಾಜಗುರುವಾಗಿರುವ ಸುದರ್ಶನ ದೇವ ನಮ್ಮ ವಯನವನ್ನು ಉಳಿಸಿದ್ದಾನೆಯೋ ಅಥವಾ ಕಬಳಿಸಿದ್ದಾನೆಯೋ ಎಂದು ನೋಡಲು ಬಂದೆಯೇನೋ?”

ವದೀರಜ್ಜನ ಮಾತಿನಲ್ಲಿ ಆಗ್ರಹವಿಲ್ಲದಿದ್ದರೂ ಆಕ್ಷೇಪಣೆಯಿತ್ತು.

ತಲೆ ತಗ್ಗಿಸಿ ಕುಳಿತ ಢುಂಢಿ. ಅವನಲ್ಲಿ ಇದ್ದಕ್ಕಿದ್ದಂತೆ ಅಪರಾಧಿ ಪ್ರಜ್ಞೆ ಉದ್ಭವಿಸಿತ್ತು.

“ಇರಲಿ ಬಾ.” ವದೀರಜ್ಜ ಅವನ ಪ್ರೀತಿಯಿಂದ ಬಳಿಗೆ ಕರೆದ. “ನಮಗೇನೂ ತೊಂದರೆಯಾಗಲಿಲ್ಲ. ಹಾಗೊಂದು ವೇಳೆ ತೊಂದರೆ ಸಂಭವಿಸಿದ್ದೇ ಆದಲ್ಲಿ ನಾನು ಯಾರನ್ನಾದರೂ ಅಲ್ಲಿಗೇ ಕಳುಹಿಸಿರುತ್ತಿದ್ದೆ.”

“ಇಲ್ಲಿ ಸುದರ್ಶನದೇವ ಏನು ಮಾಡಿದ ವದೀರಜ್ಜ?” ಢುಂಢಿ ಕೇಳಿದ.

“ಏನೂ ಮಾಡಲಿಲ್ಲ ಎಂದು ಹೇಳಿದೆನಲ್ಲ. ಮಹಾವಿಷ್ಣುವನ್ನು ನೋಡಲು ಅವರ ನಿಯೋಗವೊಂದು ಹೋಗಿತ್ತಲ್ಲಾ? ಅವರು ಅಮರಾವತಿಯನ್ನು ದಾಟಿ ವೈಕುಂಠವನ್ನು ತಲುಪಿದ ಮೇಲೆ, ಈಗೆಲ್ಲಿ ಮಹಾವಿಷ್ಣು? ಕೃಷ್ಣನ ರೂಪದಲ್ಲಿ ಗೊಲ್ಲರ ಜೊತೆಯಲ್ಲಿಯೇ ಇದ್ದಾನಲ್ಲಾ, ಹೋಗಿ ನೋಡಿ ಎಂದು ದೇವತೆಗಳು ಸಲಹೆ ನೀಡಿದರಂತೆ. ಆದರೆ, ಇವರು ಕೃಷ್ಣನ ಬಳಿಗೆ ಹೋಗಿ ನೋಡಲು, ಅವನು ಇವರ ಕೈಗೇ ಸಿಗಲಿಲ್ಲವಂತೆ. ಅವನು ಪಾಂಡವರ ಮತ್ತು ಕೌರವರದೇನೋ ರಗಳೆಯನ್ನು ಬಗೆಹರಿಸಲು ಓಡಾಡುತ್ತಿದ್ದನಂತೆ. ಹಾಗಾಗಿ ಒಂದು ಮನವಿಯನ್ನು ಸಲ್ಲಿಸಿದಷ್ಟೇ ಇವರಿಗೆ ದೊರಕಿದ ಲಾಭ. ಕೃಷ್ಣ ಮತ್ತು ಪರಶುರಾಮರು ದೇಹದಲ್ಲಿ ಇರುವಾಗ, ಆ ಮಹಾವಿಷ್ಣು ನಿರ್ದೇಹನಾಗಿ ಇರುವನಂತೆ.”

ವದೀರಜ್ಜನ ಮಾತಿಗೆ ಎಲ್ಲರೂ ನಕ್ಕರು.

“ಕೃಷ್ಣನನ್ನು ಸಂಪೂರ್ಣ ಆರ್ಯದೇವತೆಯನ್ನಾಗಿ ಮಾಡುವ ಹುನ್ನಾರ.” ಎಂದ ವದೀರಜ್ಜ.

ಢುಂಢಿಗೆ ಗಾಣಪತ್ಯದ ಅಧಿಕಾರ ಒದಗಿದ ಮೇಲಂತೂ, ಮಹಿಪಾಲ ಮತ್ತು ಸುದರ್ಶನದೇವ ವಯನದ ತಂಟೆಗೆ ಹೋಗದೇ ಬೇರೊಂದು ಅರಣ್ಯದ ಭಾಗದಲ್ಲಿ ತಮ್ಮ ಉದ್ದೇಶಿತ ಕಾರ್ಯವನ್ನು ಮಾಡಿಕೊಂಡಿದ್ದರು.

ಒಂದು ವೇಳೆ ಕೃಷ್ಣನೇನಾದರೂ ಸುದರ್ಶನದೇವನ ತಂಡಕ್ಕೆ ದೊರಕಿದ್ದು, ಅವನು ಢುಂಢಿಯನ್ನು ಕೈಲಾಸದಲ್ಲಿ ನೋಡಿರದಿದ್ದಿದ್ದರೆ ಅವರೀರ್ವರ ನಡುವೆ ಕಾಳಗವಾಗುತ್ತಿತ್ತೇನೋ. ಆದರೆ, ಸುದರ್ಶನದೇವನ ಎಲ್ಲಾ ಲೆಕ್ಕಾಚಾರಗಳು ತಲೆಕೆಳಗಾಗಿದ್ದವು.

ಬರಿಯ ಆರ್ಯರ್ಷಿ ಅತಿಥಿಯಾಗಿ ಅವಿಮುಕ್ತಕ್ಕೆ ಬಂದು ಸ್ಥಳಾವಕಾಶ ಕೇಳಿದ್ದ ಸುದರ್ಶನದೇವ ಈಗ ಮಹಿಪಾಲನ ಆಸ್ಥಾನದ ರಾಜಗುರು. ಅವನು ಹೇಳುವ ಜ್ಯೋತಿಷ್ಯದಲ್ಲೇ ಅರಸನಿಗೆ ನಂಬುಗೆ. ಅವನಿಡುವ ಮುಹೂರ್ತದಲ್ಲಿಯೇ ಅವನು ಕೆಲಸ ಕಾರ್ಯಗಳನ್ನು ಮಾಡುವುದು. ಅವನು ಹೇಳುವ ಜನರನ್ನೇ ಕೆಲಸಗಳಿಗೆ ನೇಮಕ ಮಾಡುವುದು. ಸಂಬೋಧಿಯೊಬ್ಬನೇ ಮಂತ್ರಿಯಾಗಿ ಉಳಿದಿರುವುದು. ಮಿಕ್ಕವರೆಲ್ಲಾ ಸುದರ್ಶನದೇವನ ಕಡೆಯವರೇ ವಿವಿಧ ಅಧಿಕಾರಗಳಲ್ಲಿರುವುದು. ಅವರು ಆಗ್ಗಾಗ್ಗೆ ಯಜ್ಞ ಯಾಗಗಳನ್ನು ಮಾಡಿ ರಾಜನಿಗೆ ಮತ್ತು ರಾಜ್ಯಕ್ಕೆ ಸುಭೀಕ್ಷವನ್ನು ಉಂಟುಮಾಡುವನು. ದೇವತೆಗಳನ್ನು ಕರೆಯಿಸಿ ರಾಜನಿಗೆ ಶಕ್ತಿಯನ್ನು ನೀಡುವನು. ಅವಿಮುಕ್ತವೆಲ್ಲಾ ಈಗ ಆರ್ಯಮಯವೇ ಆಗಿದೆ. ಅವಿಮುಕ್ತದ ಉತ್ತರ ಮತ್ತು ಪೂರ್ವ ಭಾಗದಲ್ಲೆಲ್ಲಾ ಅರಣ್ಯಗಳನ್ನು ಸುಟ್ಟು ಆರ್ಯರ ವಸತಿ ಸಮುಚ್ಚಯಗಳು ಮೇಲೆಬ್ಬಿಸಿದ್ದಾರೆ. ಜೊತೆಗೆ ಕೃಷಿಗಾಗಿ ಭೂಮಿಯನ್ನು ಸಿದ್ಧ ಪಡಿಸಿ, ಅಲ್ಲಿ ಈಗ ವ್ಯವಸಾಯ ನಡೆಯುತ್ತಿದೆ. ಜವೆಗೋಧಿ, ಅಕ್ಕಿ ಮತ್ತು ಗೋಧಿಯನ್ನು ಬೆಳೆಯುತ್ತಿದ್ದಾರೆ. ಯಾಗ ಮಂಟಪಗಳು ಮತ್ತು ಋಷ್ಯಾಶ್ರಮಗಳು ನಿರ್ಮಾಣವಾಗಿವೆ. ಅಲ್ಲಿ ನಿತ್ಯ ಯಜ್ಞ-ಯಾಗಾದಿಗಳು ನಡೆಯುತ್ತಿರುವೆ. ವೇದಗಳ ಅಧ್ಯಯನಗಳು ನಡೆಯುತ್ತಿರುತ್ತವೆ. ಸಂಗೀತ ಮತ್ತು ನೃತ್ಯ ಕಲೆಗಳು ಬಹು ವ್ಯಾಪಕವಾಗಿ ಅಭ್ಯಾಸ ನಡೆಯುತ್ತಿವೆ. ರಥ ನಿರ್ಮಾಣಗಳೂ ಬಹಳ ಹೆಚ್ಚಿದ್ದು, ಆರ್ಯ ಸಂಪ್ರದಾಯದ ಕ್ರೀಡೆಗಳು ಆಗ್ಗಿಂದಾಗ್ಗೆ ನಡೆಯುತ್ತಿರುತ್ತವೆ. ಹೀಗೆ ಹತ್ತು ಹಲವು ಬಗೆಗಳಲ್ಲಿ ಅವಿಮುಕ್ತ ಮುಂದುವರೆದಿದೆ. ಆದರೆ, ವಯನ ಇದ್ದಂತೆಯೇ ಇದೆ. ಯಾವ ಬದಲಾವಣೆಯೂ ಇಲ್ಲದೆ, ಯಾವ ಹೊಸಬರ ಆಗಮನವೂ ಇಲ್ಲದೇ ಮೊದಲಿನಂತೆಯೇ ಇದೆ.

ಢುಂಢಿ ಎಲ್ಲಾ ವಿಷಯಗಳನ್ನು ಮನವಿಟ್ಟು ಕೇಳಿದ.

"ಈಗ ವಯನದ ವಿಷಯದಲಿ ನಾನು ಏನು ಮಾಡಬೇಕು?"

"ಏನೂ ಮಾಡುವಷ್ಟಿಲ್ಲ. ಅವರು ನಮ್ಮ ತಂಟೆಗೆ ಬರದಿದ್ದರೆ ಸಾಕು. ಅವರು ಹೇಗಾದರೂ ಏಳಿಗೆಯಾಗಲಿ. ಅದರ ಬಗ್ಗೆ ನಮಗೇನೂ ಅಸೂಯೆಯಿಲ್ಲ." ಎಂದ ವದೀರಜ್ಜ.

ಕೈಲಾಸ, ಶುಕ್ತಿಮತ್, ಸೋಮನಾಥ, ಅಮರಾವತಿ, ಅಲಕಾವತಿ; ಹೀಗೇ ಎಲ್ಲಿ ಏನೇ ನಡೆದರೂ ಅವಿಮುಕ್ತಕ್ಕೆ ಸುದ್ಧಿ ಮುಟ್ಟುತ್ತಿತ್ತು. ಬೇರೆ ಬೇರೆ ಕಡೆಗಳಲ್ಲಿರುವ ಸುದರ್ಶನ ದೇವನ ಕಡೆಯವರು ಅವಿಮುಕ್ತಕ್ಕೆ ಬಂದು ಹೋಗುವುದರಿಂದಲೂ, ಸಾರ್ಥದ ಜೊತೆಗೆ ಬರುವ ವಣಿಕರ ಗುಂಪಿನಿಂದಲೂ ಸುದ್ಧಿ ತಿಳಿಯುತ್ತಿತ್ತು. ಸುದ್ಧಿಯೊಮ್ಮೆ ಅವಿಮುಕ್ತಕ್ಕೆ ಬಂತೆಂದರೆ ಅಷ್ಟು ದೊಡ್ಡ ನಗರದಲ್ಲಿ ಬಾಯಿಂದ ಬಾಯಿಗೇ ವಿಷಯಗಳು ಹರಿದು ವಯನಕ್ಕೆ ಬರುತ್ತಿದ್ದವು.

ಆದರೆ, ಸಾಮಾನ್ಯ ಜನರಿಲ್ಲದ ಕೈಲಾಸದಲ್ಲಿ, ಶುಕ್ತಿಮತ್‌ನಲ್ಲಿ ಹಾಗಾಗುತ್ತಿರಲಿಲ್ಲ. ಅಲ್ಲಿರುವವರು ರುದ್ರಗಣದವರು ಹಾಗೂ ಮಾತಂಗ ಗಣದವರು. ಅವರಿಬ್ಬರಿಗೆ ಹೊರತಾದವರೆಂದರೆ ಶಕ್ತಿಗಣದ ಸ್ತ್ರೀ ಯೋಧರು ಮತ್ತು ಕೆಲವು ಸಿದ್ಧರು ಹಾಗೂ ಯೋಗಿಗಳು. ಸೋಮನಾಥವು ಅವಿಮುಕ್ತಕ್ಕೆ ಹೋಲುವ ನಗರವಾದರೂ, ಅಲ್ಲಿ ಹೆಚ್ಚಿನವರು ಸುರರು, ಆರ್ಯ ಮುಖಂಡರು ಮತ್ತು ಋಷಿ ಮುನಿಗಳು. ರುದ್ರನಿಂದಾಗಿ ಹಲವು ಸಾಧಕರು ಮತ್ತು ಯೋಗಿಗಳು ನೆಲಸಿದ್ದರೂ, ಅವರು ಅಲ್ಲಿಯೇ ನೆಲೆ ನಿಲ್ಲುತ್ತಿರಲಿಲ್ಲ. ಜಂಗಮಶೀಲನಾದ ರುದ್ರನು ಸಂಚರಿಸಿದಂತೆ ಅವರೂ ಸಂಚರಿಸುತ್ತಿದ್ದರು. ಒಮ್ಮೊಮ್ಮೆ ಗುಂಪಿನಲ್ಲಿರುತ್ತಿದ್ದರು. ಕೆಲವು ಸಲ ಒಬ್ಬೊಂಟಿಗರಾಗಿ ಸಾಧನೆ ಮಾಡುತ್ತಿದ್ದರು. ಅವರಲ್ಲಿ ಕೆಲವರು ಭಿಕ್ಷೆ ಬೇಡಿ ಜೀವಿಸುತ್ತಿದ್ದರೆ, ಕೆಲವರು ನಿಷಾದರಂತೆ ಬೇಟೆಯಾಡುತ್ತಿದ್ದರು. ಮತ್ತೆ ಕೆಲವರು ತತ್ಕಾಲಕ್ಕೆ ಕೃಷಿ ಕೆಲಸಗಳು ನಡೆಯುವ ಸ್ಥಳದಲ್ಲಿ ತಮ್ಮ ಸೇವೆ ಸಲ್ಲಿಸಿ ತಮ್ಮ ಹೊಟ್ಟೆ ಹೊರೆದುಕೊಳ್ಳುತ್ತಿದ್ದರು. ಹಾಗಾಗಿ ಸೋಮನಾಥದಲ್ಲಿಯೂ ಅವಿಮುಕ್ತಕ್ಕೆ ಹೋಲಿಸಿದರೆ ವಿಷಯದ ಸೋರಿಕೆ ಕಡಿಮೆಯೇ.

ಅವಿಮುಕ್ತದಲ್ಲಿಯೂ ಸೋಮನಾಥದಲ್ಲಿದ್ದಂತಹ ಯೋಗ ಸಾಧಕರು ಮತ್ತು ಹಟಯೋಗಿಗಳು ಇದ್ದರೂ, ಸಾಮಾನ್ಯ ಜನಸಂಖ್ಯೆ ವಿಪುಲವಾಗಿತ್ತು. ಅಲ್ಲಿಯೇ ಮೊದಲಿನಿಂದ ನೆಲೆಸಿರುವವರು ಇದ್ದರೂ, ಕಾಲದಿಂದ ಕಾಲಕ್ಕೆ ಬೇರೆ ಬೇರೆ ಪ್ರದೇಶಗಳಿಂದ ನಾನಾ ಕಾರಣಗಳಿಗಾಗಿ ಬರುತ್ತಿದ್ದ ಜನರ ಸಂಖ್ಯೆ ಹೆಚ್ಚಿತ್ತು. ಅಲ್ಲಿಂದ ಕೆಲವೇ ತಾಸುಗಳ ಪ್ರಯಾಣದ ದೂರದಲ್ಲಿದ್ದ ವಿರಾಟನಗರ ಅವಿಮುಕ್ತ ನಗರಕ್ಕೆ ಉಪನಗರವೆಂಬಂತಿತ್ತು. ಅವಿಮುಕ್ತದಲ್ಲಿ ಆಡಳಿತ ಕೇಂದ್ರವಿದ್ದು, ಸಾಂಸ್ಕೃತಿಕ, ಧಾರ್ಮಿಕ, ಯಾಜ್ಞಿಕ, ಸಾಹಿತ್ಯಕ ಚಟುವಟಿಕೆಗಳು ಹೇರಳವಾಗಿದ್ದರೆ, ವಿರಾಟನಗರವು ಮೋಜು ಮಾಡುವವರ, ಜೂಜುಕೋರರ ತಾಣವಾಗಿತ್ತು. ಅಲ್ಲಿ ಹೆಚ್ಚು ಪಾಲು ವಣಿಕರು, ಕ್ಷತ್ರಿಯರು ಹಾಗೂ ಗಣಿಕೆಯರೇ ನೆಲಸಿದ್ದರು. ಅವಿಮುಕ್ತದಲ್ಲಿ ತಿರಸ್ಕೃತರಾಗುವ ಶೂದ್ರ ಶ್ರೀಮಂತರೆಲ್ಲಾ ವಿರಾಟನಗರದಲ್ಲಿ ಮಾನ್ಯತೆ ಪಡೆಯುತ್ತಿದ್ದರು. ವಿರಾಟನಗರದಲ್ಲಿ ಹಣ, ಹೆಣ್ಣು, ಹೆಂಡಗಳೇ ಆಕರ್ಷಣೆಯ ಅಂಶಗಳಾಗಿದ್ದವು.

ವಯನದ ದಾರಿಯಾಗಿ ಅವಿಮುಕ್ತವಿದ್ದರೆ, ಜಹ್ನೂವಸ ಅರಣ್ಯಕ್ಕೆ ವಿರಾಟನಗರ ಸಮೀಪವಾಗಿತ್ತು. ಗಂಗಾನದಿಯ ಕವಲು ವಿರಾಟನಗರದಲ್ಲಿಯೂ ಹರಿಯುತ್ತಿತ್ತು. ಆದರೆ ಅವಿಮುಕ್ತದಲ್ಲಿ ಮುಖ್ಯಭಾಗವಾಗಿ ಹರಿಯುತ್ತಿದ್ದ ಗಂಗೆಯ ಪ್ರವಾಹವನ್ನು ನಿಯಂತ್ರಿಸಲು ಸ್ನಾನದ ಘಟ್ಟಗಳಂತೆ ಒಡ್ಡುಗಳನ್ನು ಪಾವಟಿಗೆಗಳ ರೀತಿಯಲ್ಲಿ ಕಟ್ಟಿದ್ದರು. ಘಟ್ಟಗಳ ಮೇಲ್ಭಾಗದಲ್ಲಿ ಉದ್ದಕ್ಕೂ ವಿವಿಧ ವರ್ಣದವರಿಗೆ ಹಾಗೂ ಸಾಧಕರಿಗೆ ವಿಶ್ರಾಂತಿ ಮಂದಿರಗಳನ್ನು ಕಟ್ಟಲಾಗಿತ್ತು. ಊರ ಹೊರಗಿನ ಸ್ಮಶಾನದಲ್ಲಿ ಆಗ್ಗಾಗ್ಗೆ ತನ್ನ ತಪಸ್ಸಾಧನೆಗೆ ಬರುತ್ತಿದ್ದ ರುದ್ರನಿಗಾಗಿ ಮಂದಿರವೊಂದನ್ನು ಕಟ್ಟಿದ್ದರು. ಬಹುತೇಕ ರುದ್ರನಿಗಾಗಿ ಎಲ್ಲಾ ಸ್ಮಶಾನಗಳಲ್ಲೂ ಒಂದು ಮಂಟಪವನ್ನು ಕಟ್ಟೇ ಇರುತ್ತಿದ್ದರು. ರುದ್ರನು ತನ್ನ ಗಣಗಳೊಂದಿಗೆ ಅಲ್ಲಿಗೆ ಬಂದಾಗ ಆ ಮಂಟಪದಲ್ಲಿ ಇದ್ದು ತನ್ನ ಯೋಗ ಮತ್ತು ಧ್ಯಾನ ಸಾಧನೆ ಮಾಡುತ್ತಿದ್ದನು. ಅವನು ಬರುವ ವೇಳೆಯಲ್ಲಿ ಯಾರೇ ಆ ಮಂಟಪದಲ್ಲಿ ಇದ್ದರೂ ಅವರಿಗೆ ತೊಂದರೆ ಕೊಡದೇ ಸ್ಮಶಾನದಲ್ಲಿ ಎಲ್ಲಿಯಾದರೂ ಅವನ ಪಾಡಿಗೆ ಅವನಿದ್ದುಕೊಂಡು ಸಾಧನೆ ಮಾಡುತ್ತಿದ್ದ. ತನ್ನ ಗಣ ಪ್ರಮಥರೊಂದಿಗೆ ಶಂಖ, ಕೊಂಬು, ಡಮರುಗಗಳ ನಾದಗಳೊಂದಿಗೆ ರುದ್ರ ವೃಷಭವನ್ನೇರಿ ಬರುತ್ತಿದ್ದರೂ, ಕೆಲವೊಮ್ಮೆ ಏಕಾಂಗಿಯಾಗಿಯೂ ಬರುತ್ತಿದ್ದ. ಹಾಗೆ ಬಂದಾಗ ಎಷ್ಟೋ ಬಾರಿ ಅವನನ್ನು ಯಾರೂ ಗುರುತಿಸಲೂ ಆಗುತ್ತಿರಲಿಲ್ಲ. ಅವನ ಪಾಡಿಗೆ ಅವನು ಯಾವುದೊ ಉರಿಯುತ್ತಿರುವ ಚಿತೆಗಳ ಬಳಿ ಇದ್ದು, ಚಿತಾಭಸ್ಮವನ್ನೇ ಬಳಿದುಕೊಂಡು ತಿರಿದುಂಡಿಕೊಂಡು ಹೋಗಿರುತ್ತಿದ್ದ. ಕೆಲವರು ಅವನನ್ನು ಗುರುತಿಸುತ್ತಿದ್ದರು. ಕೆಲವೊಮ್ಮೆ ಗುರುತಿಸಲಾಗುತ್ತಿರಲಿಲ್ಲ. ಯಾವಾಗಲೇ ಬಂದರೂ ಸ್ಮಶಾನವನ್ನು, ಆ ಮಂಟಪವನ್ನು ಬಿಟ್ಟು ನಗರ

ಪ್ರದೇಶಕ್ಕೆ ಬರುತ್ತಿರಲಿಲ್ಲ. ಅವನು ಬಂದಿರುವ ಸುಳಿವು ಸಿಕ್ಕಾಗ ಪುರಪ್ರಮುಖರು, ಅರಸರು, ಮಂತ್ರಿಗಳು, ರುದ್ರನ ಆರಾಧಿಸುವ ಬ್ರಾಹ್ಮಣರು ಭಿಕ್ಷೆಯನ್ನು ಒಯ್ದು, ಅವನ ಕಂಡು ನಮಸ್ಕರಿಸಿ, ಭಿಕ್ಷೆ ನೀಡಿ ಅವನ ಕೈಯಿಂದ ವಿಭೂತಿಯನ್ನು ಇರಿಸಿಕೊಂಡು ಬರುತ್ತಿದ್ದರು. ಕೆಲವು ಶಾಕ್ತ ಸಾಧಕಿಯರು ಅವನಿಂದ ಸಂಭೋಗ ಮಾಡಿಸಿಕೊಳ್ಳುತ್ತಿದ್ದರು.

ರುದ್ರನಂತೆ ಇತರ ಸಾಧಕರು ಸಾಧಕಿಯರೊಡನೆ ಸಂಭೋಗಿಸಿದರೂ ಹೆಚ್ಚಿನ ಬಾರಿ ಗಣಿಕೆಯರ ಬಳಿಗೆ ಹೋಗುತ್ತಿದ್ದರು. ಕೆಲವು ಗಣಿಕೆಯರು ಸಾಧಕರ ಕ್ರಮಕ್ಕೆ ತಕ್ಕಂತೆ ಮೈಥುನಕ್ಕಾಗಿ ಸ್ಮಶಾನಕ್ಕೂ ಬರುತ್ತಿದ್ದರು. ಕೈಲಾಸದ ಶಿವರುದ್ರನಂತೆ ಇತರ ರುದ್ರರೂ ಸ್ಮಶಾನಗಳಲ್ಲಿ ಸಾಧನೆಗಾಗಿ ಬರುತ್ತಿದ್ದುದರಿಂದಲೇ ಸ್ಮಶಾನವನ್ನು ರುದ್ರಭೂಮಿ ಎಂದೇ ಕರೆಯುತ್ತಿದ್ದರು.

“ಮೈಥುನಕ್ಕೆ ಏನು ಮಾಡುತ್ತೀಯಾ?” ವದೀರಜ್ಜ ಢುಂಢಿಯನ್ನು ಕೇಳಿದರು.

ಏನೂ ಇಲ್ಲವೆಂದು ತಲೆಯಾಡಿಸಿದ ಢುಂಢಿ.

“ನೋಡು, ವಯನದಲ್ಲಿ ನಮ್ಮ ಹುಡುಗಿಯರು ಯಾರಾದರೂ ನಿನ್ನ ಮನಸ್ಸಿಗೆ ಒಪ್ಪಿದರೇನು ಎಂದು.” ಎಂದು ಕೇಳಿದ ವದೀರಜ್ಜನ ಪ್ರಶ್ನೆಗೆ ಇಲ್ಲವೆಂದು ತಲೆಯಾಡಿಸಿದ ಢುಂಢಿ.

“ಅವಿಮುಕ್ತದಲ್ಲೋ, ವಿರಾಟನಗರದಲ್ಲೋ ನೋಡೋಣವೇ ಅಥವಾ ಸೋಮನಾಥದಲ್ಲೋ, ಕೈಲಾಸದಲ್ಲೋ ಅಥವಾ ಶುಕ್ತಿಮತ್‌ನಲ್ಲೋ ನೋಡಿಕೊಂಡಿದ್ದೀಯೋ?”

ಢುಂಢಿ ಸುಮ್ಮನೆಯೇ ಇದ್ದ.

“ಹೇಳು ಢುಂಢಿ, ಮೈಥುನವನ್ನು ತಡೆಯಬಾರದು. ಅದು ಆಗಲೇ ಬೇಕು. ಇಲ್ಲೆಂದರೆ, ಒಡೆಯನಿಗೆ ಹಿಡಿಸದು. ಅವನು ಗಂಡಸರಿಗೆ ಬೀಜಗಳನ್ನು ಕೊಡುವುದೇ ಹೆಂಗಸರ ಗುಳಿಯಲ್ಲಿ ಸುರಿಸಲಲ್ಲವೇ?” ವದೀರಜ್ಜನ ಮಾತಿಗೆ ಸುಮ್ಮನೆಯೇ ಕುಳಿತಿದ್ದ.

“ಕೂಡಿಕೆಯಾದರೂ ಮಾಡಿಕೋ ಅಥವಾ ನಿಮ್ಮವರ ಥರ ಮದುವೆಯಾದರೂ ಮಾಡಿಕೋ.” ವದೀರಜ್ಜ ಹೇಳಿದ.

“ನಿಮ್ಮವರು ಎಂದರೆ ಯಾರು?” ಢುಂಢಿ ಕೋಪದಿಂದ ಕೇಳಿದ.

“ಶಿವರುದ್ರ ಮತ್ತು ಪಾರ್ವತೀದೇವಿ.”

“ನಾನು ನಿಮ್ಮವನು ಅಲ್ಲವೋ?”

“ಅವರು ನಿನ್ನ ಮಗನಾಗಿ ಸ್ವೀಕರಿಸಿದ್ದಾರಲ್ಲವೋ?”

“ಅಷ್ಟಕ್ಕೆ?”

“ಅಷ್ಟಕ್ಕೆ ಅಲ್ಲ, ಅದಕ್ಕೇ ನೀನು ಅವರ ಮಗನು. ನಮ್ಮವನು ಯಾವಾಗಲೂ ಹೌದು.”

ಢುಂಢಿ ಸುಮ್ಮನೆ ಕುಳಿತ.

“ಮದುವೆ ಮಾಡಿಕೊಳ್ಳುವಂತಿದ್ದರೆ ಮಾಡಿಕೋ.”

ವದೀರಜ್ಜ ಅವನ ತಲೆ ನೇವರಿಸಿ ಹೇಳಿದ. “ಒಂದು ವೇಳೆ ಮದುವೆ ಅಂತ ಮಾಡಿಕೊಂಡರೆ, ಅದು ಒಂದು ದೊಡ್ಡ ಕಾರ್ಯವಾಗುತ್ತದೆ. ಬಹು ವೈಭವದ ಆ ಕಾರ್ಯವನ್ನು ನೋಡಲು ಸಂತೋಷವಾಗುತ್ತದೆ. ನಿನ್ನ ಮದುವೆಗೆ ದೇವತೆಗಳು, ರಾಕ್ಷಸರು, ರುದ್ರರು, ಶಕ್ತಿಗಳು, ಯೋಗಿಗಳು, ಎಲ್ಲಾ ಗಣಗಳೂ, ಋಷಿಗಳು, ರಾಜರು ಮತ್ತು ಸಾಮಾನ್ಯ ಜನರೂ ಬರುತ್ತಾರೆ. ಶಿವ ಮತ್ತು ಪಾರ್ವತಿಯ ಮಗನ ಮದುವೆಯೆಂದರೆ ಸಾಮಾನ್ಯವೇ?”

ವದೀರಜ್ಜನ ಮಾತಿಗೆ ಢುಂಢಿ ಬಹು ಸಣ್ಣಗೆ ಒಂದು ವಿಷಾದದ ನಗೆ ನಕ್ಕ. ಆದರೆ ಅದು ವದೀರಜ್ಜನ ಅನುಭವದ ಕಣ್ಣುಗಳಿಗೆ ಬೀಳದೇ ಹೋಗಲಿಲ್ಲ.

“ಯಾಕಾ? ಯಾರನ್ನಾದರೂ ಮನಸ್ಸಿನಲ್ಲಿ ಇಟ್ಟುಕೊಂಡಿದ್ದೀಯಾ?”

ಇಲ್ಲವೆಂದೇ ಢುಂಢಿ ತಲೆದೂಗಿದ.

“ಮತ್ತೆ? ಕೂಡಿಕೆ, ಮೈಥುನ, ಮದುವೆಗಳ ಬಗ್ಗೆ ನಿನಗೇಕೆ ನಿರಾಸೆ? ಹೇಳು, ನಿನಗೆ ಹೆಣ್ಣು ಹೇಗಿರಬೇಕು?”

ಢುಂಢಿಯ ಕಣ್ಣುಗಳ ಮುಂದೆ ಪಾರ್ವತಿಯು ಸುಳಿದಾಡುತ್ತಿದ್ದಳು.

“ನನ್ನ ತಾಯಿಯ ಹಾಗೆ ಇರಬೇಕು. ನಾನು ಕೂಡುವ ಹೆಣ್ಣು ನನ್ನ ತಾಯಿಯಂತೆ ಸುಂದರವಾಗಿರಬೇಕು.”

“ನಿನಗೆ ಇಬ್ಬರು ತಾಯಂದಿರು. ಯಾವ ತಾಯಿ? ಮಾಲಿನಿಯೋ? ಪಾರ್ವತಿಯೋ?”

“ಪಾರ್ವತಿ.”

“ಓಹ್!” ಎಂದ ವದೀರಜ್ಜ, “ನೋಡೋಣೇಳು. ಯಾವಳಾದರೂ ಪಾರ್ವತಿಯಂತೇ ಸುಂದರವಾಗಿರುವವಳು ಸಿಕ್ಕಾಳು.” ಎಂದು ಅಲ್ಲಿಗೆ ಆ ಸಂಭಾಷಣೆಗೆ ಪೂರ್ಣವಿರಾಮವಿಟ್ಟ.

ಆದರೆ ಢುಂಢಿಗೆ ಅಲ್ಲಿಗೆ ವಿರಮಿಸಲಾಗಲಿಲ್ಲ.

ವದೀರಜ್ಜನು ಎದ್ದು ತನ್ನ ಕುಟೀರದ ಒಳಗೆ ಹೋದ ಮೇಲೆ ನಿಧಾನವಾಗಿ ಮೇಲೆದ್ದು ಬಂದು ಕುದುರೆಯನ್ನೇರಿದ. ಢುಂಢಿ ಎತ್ತಲೋ ಹೋಗುವುದನ್ನು ಗಮನಿಸಿದ ಆಸುರ, ಮಾರನನ್ನು ಜಾಗೃತಗೊಳಿಸಿದ. ಇಬ್ಬರೂ ಕುದುರೆಗಳನ್ನೇರಿ ಢುಂಢಿಯನ್ನು ಹಿಂಬಾಲಿಸಿದರು. ತನ್ನನ್ನು ಹಿಂಬಾಲಿಸುತ್ತಿದ್ದವರನ್ನು ಗಮನಿಸಿದ ಢುಂಢಿ ಪರವಾಗಿಲ್ಲ ಬನ್ನಿ ಎಂದು ಕೈ ಎತ್ತಿದ.

ಅವಿಮುಕ್ತಕ್ಕೆ ಸಮೀಪವಾದ ಗಂಗೆಯ ತಟದಲ್ಲಿ ಕುದುರೆಯನ್ನು ನಿಲ್ಲಿಸಿ, ನದಿಯ ಬಳಿಗೆ ನಡೆದು ಬಂದ ಢುಂಢಿ ಮರವೊಂದರ ನೆರಳಿನಲ್ಲಿ, ಬಂಡೆಯೊಂದರ ಮೇಲೆ ಕುಳಿತು ವಿರಮಿಸುವಂತೆ ಕುಳಿತ. ಅವನ ಕಣ್ಣುಗಳು ಕೊಡಗಳನ್ನು ಹಿಡಿದು ಅಲ್ಲಿಗೆ ನೀರಿಗೆ ಬರುತ್ತಿದ್ದ ಹೆಂಗಸರ ಮೇಲೆ ಇತ್ತು.

“ಏನು ಢುಂಢಿ? ಯಾರನ್ನಾದರೂ ಕೂಡುವ ಯೋಚನೆ ಮಾಡುತ್ತಿದ್ದೀಯಾ?” ಎಂದು ಕೇಳಿದ ಆಸುರ ಅವನ ಪಕ್ಕದಲ್ಲಿ ಕುಳಿತುಕೊಳ್ಳುತ್ತಾ.

ಹೌದೆಂದು ತಲೆಯಾಡಿಸಿದ ಢುಂಢಿ.

“ಅದೋ ಅಲ್ಲಿ ನೋಡು, ಅವಳಿಗೆ ದಪ್ಪದಪ್ಪ ಮೊಲೆಗಳಿವೆ. ಕುಂಡಿಯೂ ಗುಂಡಗೆ ನೀಳವಾಗಿದೆ.” ಮಾರ ಒಂದು ಸುಂದರ ತರುಣಿಯನ್ನು ತೋರಿದ.

ಇಲ್ಲವೆಂಬಂತೆ ತಲೆಯಾಡಿಸಿದ.

“ಮದುವೆಯಾಗುತ್ತೀಯಾ ಢುಂಢೀ?” ಕೇಳಿದ ಆಸುರ.

“ಮದುವೆಗೋ, ಮಿಥುನಕ್ಕೋ, ಕೂಡಿಕೆಗೋ ಒಟ್ಟಾರೆ, ನನ್ನ ಹೆಣ್ಣು ನನ್ನ ತಾಯಿ ಪಾರ್ವತಿಯ ಹಾಗಿರಬೇಕು!”

“ಅವಳನ್ನೇ ಕೇಳಿಬಿಡಬೇಕಿತ್ತು.” ಎಂದ ಆಸುರ.

“ಅವಳು ಒಪ್ಪಲಿಲ್ಲ. ಬರಿಯ ತಾಯಿ ಮಾತ್ರವೇ ಆಗುತ್ತೇನೆ ಎಂದಳು.” ಎಂದ ಢುಂಢಿ.

“ಹಾಗೋ?” ಎಂದು ತಲೆದೂಗಿದ ಆಸುರ.

“ಹೇಯ್, ಅವರಲ್ಲೆಲ್ಲಾ ತಾಯಿ–ಮಗ, ತಂದೆ–ಮಗಳು ಮೈಥುನ ಮಾಡುವುದಿಲ್ಲ. ಈಗೆಲ್ಲಾ ನಮ್ಮಲ್ಲೂ ಒಪ್ಪುವುದಿಲ್ಲ!” ಅದೊಂದು ಬೇಡದ ಅಚ್ಚರಿಯೆಂಬಂತೆ ಹೇಳಿದ ಮಾರ, “ನಂಗಂತೂ ಯಾರಾದರೂ ಸರಿಯೇ. ಜಿನುಗುವ ಯೋನಿಯಾದರೆ ಆಯಿತು.” ಎಂದ.

ವಯನದಲ್ಲಿ ಮದುವೆಯ ವ್ಯವಸ್ಥೆಯಿಲ್ಲದಿದ್ದರೂ, ಇಬ್ಬರು ಒಟ್ಟಾಗಿ ಇರುವ ಪದ್ಧತಿಯಿದೆ. ಬೇರೆ ಪುರುಷನು ಆಕೆಯನ್ನು ಮೈಥುನಕ್ಕಾಗಿ ಕೂಡುವ ಪ್ರಸ್ತಾಪ ಮಾಡಬಹುದು. ಆದರೆ ಆಕೆ ಒಪ್ಪಿದರೆ ಮಾತ್ರ ಆತ ಮುಂದುವರಿಯಬಹುದು. ಹೆಂಗಸರೇ ಪ್ರಧಾನ ಪಾತ್ರ ವಹಿಸುವ ಅವರಲ್ಲಿ, ಕುಟುಂಬವೂ ಅವಳ ಇಚ್ಛೆಯ ಸದಸ್ಯರಿಂದಲೇ ರೂಪುಗೊಳ್ಳುವುದು.

ಢುಂಢಿ ಎಲ್ಲೇ ಹೋದರೂ ಹೆಂಗಸರು ಕಂಡರೆ ಅವರನ್ನೇ ಗಮನವಿಟ್ಟು ನೋಡುವನು. ನದಿದಡಕ್ಕೆ ನೀರಿಗೆ ಬರುವವರಲ್ಲಿ, ಗಣಿಕೆಯರ ಸಾಲುಗಳಲ್ಲಿ, ನರ್ತಿಸುವ ಅಭಿನೇತ್ರಿಗಳಲ್ಲಿ, ಸಂಗೀತ ಗೋಷ್ಠಿಗಳ ಹಾಡುವ ಹೆಂಗಸರಲ್ಲಿ ಪಾರ್ವತಿಯಂತವರನ್ನು ಹುಡುಕುವನು. ಆರ್ಯರಲ್ಲಿ, ಅರಣ್ಯಕರಲ್ಲಿ, ಬೆಟ್ಟಗಳಲ್ಲಿ ವಾಸಿಸುವ ಹೆಂಗಸರುಗಳಲ್ಲಿ, ಋಷ್ಯಾಶ್ರಮಗಳಲ್ಲಿರುವವರಲ್ಲಿ ದೇವತೆಗಳಲ್ಲಿ, ಅತಿ ಸುಂದರವಾಗಿ ಕಾಣುವ ಮತ್ಸ್ಯಗಂಧಿಗಳಾದ ಬೆಸ್ತ ಹೆಂಗಸರಲ್ಲಿ, ಶಕ್ತಿಗಣದ ಶಕ್ತಿಗಳಲ್ಲಿಯೇ ಕಾಣಲಾಗಲಿಲ್ಲವೆಂದರೆ, ವಯನದಂತಹ ಪುಟ್ಟ ಪ್ರದೇಶದಲ್ಲಿ ಪಾರ್ವತಿಯಂತಹ ರತಿ ಎಲ್ಲಿ ಕಂಡಾಳು? ಅವನು ಕಂಡಂತೆ ಪಾರ್ವತಿಯಂತಿರುವ ಹೆಂಗಸೆಂದರೆ ಪಾರ್ವತಿಯೊಬ್ಬಳೇ.

ವದೀರಜ್ಜನ ಕುಟೀರದಲ್ಲಿಯೇ ಮಲಗಿದ್ದ ಢುಂಢಿಯನ್ನು ಮಾರ ಮೆಲ್ಲನೆ ಎಬ್ಬಿಸಿದ.

"ಢುಂಢಿ ನಿನ್ನ ಕಾಣಲು ಯಾರೋ ಬಂದಿದ್ದಾರೆ."

ಏಳಲು ಮನಸಿಲ್ಲದ ಢುಂಢಿ ಪಕ್ಕಕ್ಕೆ ತಿರುಗಿ ಕಂಬಲವನ್ನು ಮತ್ತಷ್ಟು ಎಳೆದುಕೊಂಡು, "ಯಾರಾದರೂ, ವದೀರಜ್ಜನೊಂದಿಗೆ ಮಾತಾಡಲು ಹೇಳು." ಎಂದು ಗೊಣಗಿದ.

"ವದೀರಜ್ಜನೇ ಮಾತಾಡಿಸುತ್ತಿದ್ದಾನೆ. ಅವನೇ ನಿನ್ನ ಎಬ್ಬಿಸಲು ಹೇಳಿದ್ದು."

"ಯಾರದು?" ಮನಸ್ಸಿಲ್ಲದ ಮನಸ್ಸಿನಿಂದ ಮೇಲೆದ್ದ ಢುಂಢಿ ಮೇಲೆದ್ದು ಕಿಟಕಿಯಿಂದ ನೋಡಿದ. ನಾಲ್ಕಾರು ಕಾಪಾಲಿಕರಾದ ರುದ್ರರು, ನಾಲ್ವರು ಋಷಿ ಮುನಿಗಳು ಇದ್ದರು. ಅವರ ಮುಂದೆ ಹಣ್ಣುಹಂಪಲುಗಳನ್ನಿಡಲಾಗಿತ್ತು. ವದೀರಜ್ಜ ಮುನಿಕುಮಾರನೊಬ್ಬನ ಜೊತೆ ಮೆಲುದನಿಯಲ್ಲಿ ಮಾತಾಡುತ್ತಿದ್ದ.

ಢುಂಢಿ ಹೊರಗೆ ಬರುವುದನ್ನು ನೋಡುತ್ತಿದ್ದಂತೆ, "ಜಯ ಜಯ ಶಂಭೋ ಮಹಾದೇವ, ಜಯ ಜಯ ರುದ್ರ ಪಶುಪತೇ, ಜಯ ಜಯ ಢುಂಢಿ ಗಣಪತಿ ಎಂದು ಕಾಪಾಲಿಕರು ನಮಸ್ಕರಿಸಿದರು. ಅವರಿಗೆ ಪ್ರತಿ ವಂದಿಸಿದ ಢುಂಢಿ ಋಷಿ ಮುನಿಗಳ ಕಡೆಗೆ ತಿರುಗಿದ.

"ಜಯ ಜಯ ಶಿವ–ಪಾರ್ವತೀ ಸುತ ಢುಂಢಿರಾಜ!" ಎಂದು ಋಷಿ ಮುನಿಗಳೂ ವಂದಿಸಿದರು.

ಮಾರ ತಿಳಿಸಿದಂತೆ ಯಾರೋ ಇಬ್ಬರು ಢುಂಢಿಗೆ ಆಸನವನ್ನು ತಂದಿಟ್ಟರು. ಅವರ ಎದುರಿಗೆ ಕುಳಿತ ಢುಂಢಿ ವದೀರಜ್ಜನ ಕಡೆಗೆ ನೋಡಿದ.

"ಅವರು ನನ್ನ ಬಳಿ ಹೇಳಿದ್ದಾರೆ." ಎಂದ ವದೀರಜ್ಜ ಬಂದಿರುವ ಅತಿಥಿಗಳ ಕಡೆ ತಿರುಗಿದ. "ಆದರೆ, ನೀವೇ ಒಮ್ಮೆ ಹೇಳಿ."

"ಹೇ ಢುಂಢಿ ರಾಜ, ಗಣಪತಿಯೇ, ನಿನಗೆ ನಮ್ಮ ನಮನಗಳು ಸಲ್ಲಲಿ." ಎಂದು ವಂದಿಸಿದ ಮುನಿಗಳ ಪರವಾಗಿ ನೇತೃತ್ವ ವಹಿಸಿದ್ದ ಮುನಿಯು ಮಾತು ಮುಂದುವರಿಸಿದನು. "ನನ್ನ ಹೆಸರು ಸಮೂಲಾಚಾರ್ಯ. ನಾವು ನೈಮಿಷಾರಣ್ಯದಿಂದ ಬರುತ್ತಿದ್ದೇವೆ. ಮಹರ್ಷಿ ವಾಮದೇವರ ಆಶ್ರಮವಾಸಿಗಳು ನಾವು. ಶತರುದ್ರೀಯವನ್ನು, ರುದ್ರ ಚಮಕಗಳನ್ನು ಪಠಿಸುತ್ತಾ ಅಧ್ಯಾತ್ಮ ಸಾಧನೆ ಮಾಡುವ ರುದ್ರಪಶುಪತಿಯ ಆರಾಧಕರು ನಾವು.

ಈ ಹಿಂದೆ ಗಂಧರ್ವರಲ್ಲೊಬ್ಬನಾದ ಕ್ರೊಂಚನು ಅಮರಾವತಿಯ ದೇವಸಭೆಯಲ್ಲಿ ನಮ್ಮ ಮಹರ್ಷಿಗಳೊಂದಿಗೆ ಉಂಟಾದ ಮನಸ್ತಾಪದಿಂದ ನಾವಿರುವ ಸ್ಥಳದಲ್ಲಿ ಗಣವೊಂದನ್ನು ಕಟ್ಟಿಕೊಂಡು ನಮ್ಮ ಆಶ್ರಮದ ಕಾರ್ಯಗಳಿಗೆ ಭಂಗ ತರುತ್ತಿದ್ದಾನೆ. ಶಿವರುದ್ರನ ಆರಾಧಕರಾದ ನಮಗೆ ಅವನೇ ಗತಿಯೆಂದು ಮೊರೆಯಿಡಲು ಹೋಗುತ್ತಿದ್ದೆವು. ಆದರೆ, ನಾವು ಅವಿಮುಕ್ತದ ರುದ್ರಭೂಮಿಯ ಮಾರ್ಗವಾಗಿ ಹೋಗುತ್ತಿದ್ದಾಗ ಈ ರುದ್ರಸಾಧಕರೂ, ಹಟಯೋಗಿಗಳೂ ಆದ ಈ ಕಾಪಾಲಿಕರನ್ನು ಕಂಡೆವು. ಅವರು ಶಿವ ಮತ್ತು ಪಾರ್ವತಿಯರ ಪುತ್ರನಾದ ಢುಂಢಿ ಗಣಪತಿಯು ಇಲ್ಲಿಯೇ ವಾಸ್ತವ್ಯ ಹೂಡಿರುವುದಾಗಿ ತಿಳಿಸಿದರು. ಅದರಂತೆ ತಮ್ಮ ಬಳಿಯೇ ನಮ್ಮ ಮೊರೆಯನ್ನು ಕೇಳಿಸಲು ಇಲ್ಲಿಗೆ ಬಂದೆವು.

ಮಹರ್ಷಿ ವಾಮದೇವರನ್ನು ದೇವಸಭೆಯಲ್ಲಿ ಅಪಮಾನಿಸಿದ ಕಾರಣದಿಂದ ಗಂಧರ್ವ ಲೋಕದಿಂದ ಅವನನ್ನು ಕುಬೇರನು ನಿರಾಕರಿಸಿದ್ದನು. ಅದರ ಪ್ರತಿಫಲವಾಗಿ ದಕ್ಷಿಣ ಕಡುಕ್ರೂರಿಗಳಾದ ಮೂಷಿಕ ಗಣದವರ ಜೊತೆ ಸೇರಿಕೊಂಡು ನಮಗೆ ಉಪಟಳ ಕೊಡುತ್ತಿದ್ದಾನೆ. ಬಲಹೀನನಾಗಿದ್ದ ಮೂಷಿಕ ಗಣದ ನಾಯಕನನ್ನು ಕೊಂದು ಈಗ ಕ್ರೌಂಚನೇ ಅವರ ನಾಯಕನಾಗಿದ್ದಾನೆ."

ಢುಂಢಿ ವದೀರಜ್ಜನ ಕಡೆ ನೋಡಿದ.

"ತಾವು ಇಂದು ಇಲ್ಲಿಯೇ ವಿಶ್ರಮಿಸಿಕೊಳ್ಳಿ." ವದೀರಜ್ಜ ಅವರಿಗೆ ಹೇಳಿದ. "ನಾಯಕರು ಇಂದು ಸಂಜೆ ತಮ್ಮ ನಿರ್ಧಾರವನ್ನು ಹೇಳುತ್ತಾರೆ. ನಾಳೆ ನಸುಕಿನಲ್ಲಿ ತಾವು ಪ್ರಯಾಣ ಮಾಡಬಹುದು."

ಮುನಿಗಳು ಗಂಗಾನದಿಯಲ್ಲಿ ಸ್ನಾನ ಮಾಡಿ ತಮ್ಮ ಆಚಮನಗಳನ್ನು ಮುಗಿಸಿಕೊಂಡು ಬರುವುದಾಗಿ ಹೇಳಿ ಹೋದರು. ರುದ್ರರು ಅವಿಮುಕ್ತದ ತಮ್ಮ ರುದ್ರಭೂಮಿಗೆ ತೆರಳಿದರು.

ವದೀರಜ್ಜ ಅವರ ಈ ಕಾರ್ಯವನ್ನು ಕೈಗೂಡಿಸಿಕೊಡಲು ಒಂದು ಬಲವಾದ ಕಾರಣವನ್ನು ಹೇಳಿದ. "ನೈಮಿಷಾರಣ್ಯಕ್ಕೆ ಹೋಗುವ ಮಾರ್ಗದ ದಕ್ಷಿಣ ಭಾಗದಲ್ಲಿಯೇ ಗಜಾರಣ್ಯವೂ ಇದೆ. ಅಲ್ಲಿನ ಆನೆಗಳನ್ನು ಪಳಗಿಸುತ್ತಾ ಮಾತಂಗರ ಗುಂಪೊಂದು ಇದೆ. ಅವರಲ್ಲಿ ಸರಿಯಾದ ನಾಯಕತ್ವದ ಕೊರತೆಯಿದೆ. ಅವರ ಮುಖ್ಯಸ್ಥ ಚಂದು ಬಲಶಾಲಿಯಾಗಿದ್ದರೂ ನಾಯಕನಾಗಿರಲು ಸಮರ್ಥನಲ್ಲ. ಮಾತಂಗ ಗಣವೆಂದರೆ ಢುಂಢಿಯ ಒಂದೇ ಮಾತಂಗ ಗಣವಾಗಿರಬೇಕು. ಅಲ್ಲೊಂದು ಇಲ್ಲೊಂದು ಸ್ವತಂತ್ರ ಗಣಗಳು ಇರಕೂಡದು. ಆದ್ದರಿಂದ ಈಗ ಢುಂಢಿಯೊಂದಿಗಿರುವ ಮಾತಂಗರೊಡನೆ ಆ ಗಜಾರಣ್ಯದಲ್ಲಿರುವ ಚಂದುವಿನ ಗಣದ ಮೇಲೆ ಧಾಳಿ ಮಾಡಿ ಆ ಗಣವನ್ನೂ ಗಜಗಳನ್ನೂ ವಶಪಡಿಸಿಕೊಂಡರೆ ಢುಂಢಿಯ ಗಣವು ಬಲಯುತವಾಗುತ್ತದೆ. ನಂತರ ಅಲ್ಲಿಂದ ದಕ್ಷಿಣಕ್ಕೆ ಮುಂದುವರೆದು ಕ್ರೌಂಚನ ಮೂಷಿಕ ಗಣವನ್ನು ಮಟ್ಟ ಹಾಕಬೇಕು. ನಂತರ ಅಲ್ಲಿನ ಆನೆಗಳನ್ನು ಇಲ್ಲಿಗೇ ತರುವುದೋ ಅಥವಾ ನಮ್ಮವರನ್ನೇ ಅಲ್ಲಿ ಯಾರನ್ನಾದರೂ ಉಪನಾಯಕರನ್ನಾಗಿ ಇರಿಸುವುದು. ದಕ್ಷಿಣದಿಂದ ಬೀಸುವ ಗಾಳಿಯೂ ಒಳಿತಲ್ಲ. ದಕ್ಷಿಣದ ಗಣಗಳೂ ಒಳ್ಳೆಯವಲ್ಲ." ಇದು ವದೀರಜ್ಜನ ಸಲಹೆ. ವದೀರನ ಈ ಮಾತುಗಳು ಢುಂಢಿಗೆ ಕೊಂಚ ಅಚ್ಚರಿಯನ್ನು ಉಂಟುಮಾಡಿದವು. ಅವನು ಇದ್ದಕ್ಕಿದ್ದಂತೆ ಆರ್ಯರ ಹಾಗೆ ಮಾತಾಡುತ್ತಿದ್ದಾನೆ ಎಂದು ಅವನಿಗೆ ಅನ್ನಿಸಿತು. ಆದರೂ ವದೀರಜ್ಜ ಏನಾದರೂ ಹೇಳಿದರೆ ಅದು ಒಳ್ಳೆಯದಕ್ಕೇ ಎಂದುಕೊಂಡು ಸುಮ್ಮನಾದ.

ಆಚಮನಗಳನ್ನು ಪೂರೈಸಿಬಂದ ಮುನಿಗಳಿಗೆ ತಮ್ಮ ಒಪ್ಪಿಗೆ ತಿಳಿಸಿದ ವದೀರಜ್ಜ ಮೂಷಿಕ ಗಣದ ಕ್ರೌಂಚನನ್ನು ನಿವಾರಿಸಲು ತಮಗೆ ಗಜಾರಣ್ಯದಲ್ಲಿರುವ ಚಂದುವನ್ನು ಗೆಲ್ಲುವ ಅನಿವಾರ್ಯತೆಯಿರುವುದಾಗಿ ತಿಳಿಸಿ ಅದಕ್ಕೆ ಸಹಕರಿಸಬೇಕೆಂದು ಮನವಿ ಮಾಡಿದ. ನೈಮಿಷಾರಣ್ಯದ ಮುನಿಗಳು ಅದಕ್ಕೆ ಸಮ್ಮತಿಸಿದರು. ಅವರಲ್ಲಿ ಚೆನ್ನಾಗಿ ಮಾರ್ಗಗಳ ಹಾಗೂ ದಿಕ್ಕುಗಳ ಪರಿಚಯವಿರುವ ಸಮೂಲಾಚಾರ್ಯ ಅವರನ್ನು ಗಜಾರಣ್ಯಕ್ಕೆ ಒಯ್ಯುವ ಮಾತು ಕೊಟ್ಟ.

ಮರುದಿನ ಬೆಳಗ್ಗೆ ಢುಂಢಿ, ಮಾರ, ಆಸುರ, ಪಿಚುಡುಲ ಮತ್ತು ಢುಂಢಿಯ ಹಿಂಬಾಲಿಸಿ ಬಂದಿದ್ದ ಸಕಲ ಮಾತಂಗ ಗಣದವರೂ ಸಮರೋಪಾದಿಯಲ್ಲಿ ಸಿದ್ಧರಾದರು.

ಮುಂಭಾಗದಲ್ಲಿ ಸಮೂಲಾಚಾರ್ಯ ಕುದುರೆಯ ಮೇಲೆ ಕುಳಿತು ಧನುರ್ಧಾರಿಯಾಗಿದ್ದ. ಅವನ ಹಿಂದೆ ಮಾರ, ಆಸುರ ಮತ್ತು ಪಿಚುಡುಲರೂ ಅಶ್ವಾರೂಢರಾಗಿದ್ದರು. ಪಿಚುಡುಲ ಮಾತಂಗ ಗಣದ ಧ್ವಜವನ್ನು ಹಿಡಿದಿದ್ದ. ಅವರ ಹಿಂದೆ ಕೊಡಲಿಯನ್ನು ಭುಜಕ್ಕೇರಿಸಿಕೊಂಡ ಢುಂಢಿ ಕುದುರೆಯನ್ನೇರಿದ್ದ. ಢುಂಢಿಯ ಹಿಂದೆ ಮಾತಂಗ ಗಣದವರು ಮತ್ತು ಅವರ ನಡುವೆ ಪ್ರಯಾಣದಲ್ಲಿ ಅಗತ್ಯವಿರುವ ಆಹಾರ ಸಾಮಗ್ರಿಗಳು, ವಿಷಪೂರಿತ ಬಾಣಗಳು, ಬಿಲ್ಲುಗಳು, ಖಡ್ಗಗಳು ಮತ್ತು ಔಷಧಿಗಳಿರುವ ಬಿದಿರಿನ ಬಾಯಿಕಟ್ಟಿರುವ ನಾಳಗಳು ಕತ್ತೆಗಳ ಮೇಲೆ ಹೇರಲಾಗಿತ್ತು. ನೈಮಿಷಾರಣ್ಯದ ಮುನಿಗಳು ನಡುವಿದ್ದು, ಎಲ್ಲರ ಹಿಂದೆ ವಯನದ ಯುವಕರು ಬೆಂಗಾವಲಾಗಿದ್ದರು.

ರಣೋತ್ಸಾಹದಿಂದ ಢುಂಢಿಗೆ ಮತ್ತು ರುದ್ರನಿಗೆ ಹಾಗೂ ಶಕ್ತಿಯಾದ ಪಾರ್ವತಿಗೆ ಜಯಘೋಷಗಳನ್ನು ಕೂಗುತ್ತಾ ಎಲ್ಲರೂ ಹೊರಟರು. ಇವರನ್ನೆಲ್ಲಾ ನೋಡುತ್ತಿದ್ದ ವದೀರಜ್ಜನ ಎದೆ ಉಬ್ಬಿತು. ಅಂದು ತಾನು ಕೈಲಾಸದಲ್ಲಿರುವ ರುದ್ರನ ನೋಡಲು ಒಪ್ಪಿ ಜನರನ್ನು ಕಳುಹಿಸಿದರ ಪರಿಣಾಮ ಇಂದು ವಯನದ ಯುವಕನೊಬ್ಬ ಗಾಣಪತ್ಯ ವಹಿಸಿಕೊಂಡ. ಅತ್ಯಂತ ಬಲಶಾಲಿಯಾದ ಮಾತಂಗ ಗಣ ನಮ್ಮದಾಯಿತು. ಈಗ ಢುಂಢಿಯು ರಾಜನಂತೆ ದಿಗ್ವಿಜಯ ಮಾಡಲು ಹೊರಟಿದ್ದಾನೆ! ವದೀರಜ್ಜನ ಕಣ್ಣುಗಳು ಆನಂದದಿಂದ ಮಿನುಗಿತು.

ಇಪ್ಪತ್ತೆರಡು ದಿನಗಳ ಪ್ರಯಾಣದ ನಂತರ ಢುಂಢಿಯ ಪಡೆ ಗಜಾರಣ್ಯವನ್ನು ತಲುಪಿತು. ಸಮೂಲಾಚಾರ್ಯ ತಿಳಿಸಿದಂತೆ ಗಜಾರಣ್ಯಕ್ಕೆ ಇನ್ನೂ ಕೆಲವು ಸಮಯದ ದಾರಿಯಿದ್ದಂತೆ ಪಡೆಯ ನಿಲುಗಡೆಯಾಯಿತು. ಸೂರ್ಯಾಸ್ತಮದ ಸಮಯ. ಎಲ್ಲರೂ ವಿಶ್ರಮಿಸುವಾಗ ಸಮೂಲಾಚಾರ್ಯ ಚಂದು ಮತ್ತು ಇತರ ಮಾತಂಗರ ಕುಟೀರಗಳು ಮತ್ತು ಅವರ ಗಜ ಸಂಪತ್ತು ಇರುವ ದಿಕ್ಕುಗಳನ್ನು ತೋರಿದ. ಆದರೆ ಯುದ್ಧ ಪ್ರಾರಂಭಿಸುವುದು ಹೇಗೆ?

“ನೇರ ಆಕ್ರಮಣ.” ಢುಂಢಿ ಹೇಳಿದ. “ನಾನು ಚಂದುವನ್ನು ಕೊಲ್ಲುತ್ತೇನೆ. ಮಿಕ್ಕವರು ಇತರರನ್ನು ಮುಗಿಸಲಿ.”

“ಸಲ್ಲದು.” ಸಮೂಲಾಚಾರ್ಯ ಹೇಳಿದರು. “ಹೇ ಢುಂಢಿರಾಜ, ದಕ್ಷಿಣದ ಗಜಾರಣ್ಯದಲ್ಲಿರುವ ಇವರದೂ ಬಹು ಪುರಾತನವಾದ ಸಂಸ್ಕೃತಿ. ನೂರಾರು ತಲೆಮಾರುಗಳು ಈ ಅರಣ್ಯದಲ್ಲಿ ನೆಲೆಸಿ, ಬದುಕಿ ಹೊರಟು ಹೋಗಿವೆ. ಈ ಅರಣ್ಯದಲ್ಲಿ ಅರಣ್ಯದ ಸಂಸ್ಕೃತಿಯನ್ನು ಉಳಿಸಿಕೊಂಡು, ತಾವೂ ಅದರೊಂದಿಗೆ ಉಳಿದುಕೊಂಡು ಸಂತತಿಯನ್ನು ವೃದ್ಧಿಸಿಕೊಂಡಿರುವ ನಾಗರಿಕತೆ ಇದು. ಬರ್ಬರವಾಗಿ ಆಕ್ರಮಣ ಮಾಡುವುದಕ್ಕಿಂತ, ಸಮರ ನೀತಿಯಂತೆಯೇ ಅವರನ್ನು ಎದುರಿಸಿ. ಮುಖಕ್ಕೆ ಮುಖ ಮಾಡಿ, ಎದೆಗೆ ಎದೆಗೊಟ್ಟು ಹೋರಾಟ ಮಾಡಿ. ರಾಜನಿಗೆ ಸಾಮ್ರಾಜ್ಯ ವಿಸ್ತರಣೆ ಕ್ಷತ್ರಿಯ ಧರ್ಮವಾದರೂ ಪಶು ಸಮಾನ ಹೋರಾಟ ಸಲ್ಲದು.”

ನಾವೇನೂ ಕ್ಷತ್ರಿಯರಲ್ಲ ಎಂದುಕೊಂಡ ಪಿಚುಡುಲ, ಮಾರ, ಆಸುರ ಮತ್ತು ಇತರ ವಯನದವರಿಗೆ ನಿರಾಸೆಯಾದರೂ, ಢುಂಢಿಯು ಈಗ ಶಿವ ಮತ್ತು ಪಾರ್ವತಿಯ ಮಗನಾದ್ದರಿಂದ ಕೆಲವು ಕ್ರಮಗಳ ಬಗ್ಗೆ ಗಮನವಿರಬೇಕು ಎಂದೂ ತಮ್ಮ ತಮ್ಮಲ್ಲಿ ಮಾತಾಡಿಕೊಂಡು ಸುಮ್ಮನಾದರು.

ಆ ದಿನ ಹುಣ್ಣಿಮೆ. ಪ್ರತಿ ಹುಣ್ಣಿಮೆಯ ರಾತ್ರಿಯೂ ಚಂದುವಿನ ಎಲ್ಲಾ ಮಾತಂಗರೂ ಸೇರಿ ಗವುಡವನ್ನು ಕುಡಿಯುತ್ತಾ ಬೆಂಕಿಯ ಸುತ್ತಲೂ ವಾದ್ಯಗಳನ್ನು ನುಡಿಸುತ್ತಾ ಕುಣಿಯುತ್ತಾರೆ. ಹೆಂಗಸರು ಉರಿಯುವ

ಹಣತೆಗಳನ್ನು ಮುಂದಿಟ್ಟುಕೊಂಡು ಗಟ್ಟಿ ದನಿಯಲ್ಲಿ ಹಾಡುತ್ತಾರೆ. ಹುಣ್ಣಿಮೆಯ ದಿನ ಪಿತೃಗಳು ಬರುತ್ತಾರೆಂದು ನಂಬುವ ಅವರು ಆಕಾಶದಲ್ಲಿ ನೆರೆಯುವ ಆ ಪಿತೃಗಳ ಸಂತೃಪ್ತಿಗಾಗಿ ಆನೆಯ ದಂತವನು ಗಂಧದಂತೆ ತೇಯ್ದು ಅದನ್ನು ಹಣೆಗಿಟ್ಟುಕೊಂಡು ಆನೆಯ ದಂತದಿಂದ ಮಾಡಿರುವ ಕೊಂಬನ್ನು ಊದುತ್ತಾರೆ. ಈ ಸಮಯದಲ್ಲಿ ಆ ಗಜಾರಣ್ಯದ ಎಲ್ಲಾ ಮಾತಂಗರೂ ಒಟ್ಟಿಗೆ ಸೇರುತ್ತಾರೆ.

ಆಹಲೇ ಢುಂಢಿಯ ಗಣವು ನೇರವಾಗಿ ಆ ಸ್ಥಳವನ್ನು ಪ್ರವೇಶಿಸುವುದು. ಮುಂದೆ, ಸಮಯಾನುಸಾರವಾಗಿ ನಡೆಯುವುದು.

ನಡುರಾತ್ರಿಯಲ್ಲಿ ಚಂದುವಿನ ಕುಟೀರಗಳ ಕಡೆಯಿಂದ ಅಬ್ಬರ ಕೇಕೆಗಳು ಮತ್ತು ನಗಾರಿ ಕೊಂಬುಗಳ ದನಿಗಳನ್ನು ಕೇಳುತ್ತಿದ್ದಂತೆ, ಢುಂಢಿ ಮತ್ತು ಅವನ ಪಡೆ ಕುದುರೆಗಳಿಲ್ಲದೆಯೇ ಅತ್ತ ನಡೆದರು.

ಕೊಂಬು, ಹಲಗೆ, ಶಂಖ, ಭೇರಿ ಮತ್ತು ಜಯಘಂಟೆ ಎಂಬ ಜಾಗಟೆಗಳನ್ನು ಕೂಡಿದ ಪಂಚ ಮಹಾವಾದ್ಯಗಳನ್ನು ನುಡಿಸುತ್ತಿದ್ದರು. ಹೆಂಗಸರೇ ಅಲ್ಲಿ ಮುಂದಾಳತ್ವ ವಹಿಸಿರುವಂತೆ ತೋರುತ್ತಿತ್ತು. ಅವರೇ ಹೆಚ್ಚು ಚಟುವಟಿಕೆಯಿಂದ ಓಡಾಡುತ್ತಿದ್ದವರು. ಎಲ್ಲರ ಹಣೆಗೆ ಗಜದಂತ ಗಂಧವನ್ನು ಲೇಪಿಸುತ್ತಿದ್ದರು. ವಿಶಾಲವಾದ ಸ್ಥಳದಲ್ಲಿ, ಕುಟೀರಗಳಿಂದ ದೂರವಾಗಿ, ನದಿಗೆ ಕೊಂಚ ಹತ್ತಿರವಾಗಿದ್ದ ಅವರೆಲ್ಲರೂ ಉನ್ಮಾದದಲ್ಲಿದ್ದರು. ವರ್ತುಲಾಕಾರವಾಗಿ, ಆದರೆ ವಿರಳವಾಗಿದ್ದ ಅವರಲ್ಲಿ ಕೆಲವರು ಕುಳಿತಿದ್ದರು. ಮತ್ತೆ ಕೆಲವರು ನಿಂತಿದ್ದರು. ಬಹುಪಾಲು ಮಂದಿ ಅಗ್ನಿಯ ಸುತ್ತಲೂ ಕುಣಿಯುತ್ತಿದ್ದರು. ಪಂಚ ಮಹಾವಾದ್ಯಗಳ ಸದ್ದಿಗೆ ಕುಣಿಯುತ್ತಾ ಕುಡಿಯುತ್ತಿದ್ದ ಗೌಡವನ್ನು ಅಗ್ನಿಗೆ ಎರಚುತ್ತಿದ್ದರು.

ಕೊಡಲಿಯನ್ನೇರಿಸಿಕೊಂಡು ನಡೆದ ಢುಂಢಿಯ ಮುಂದಾಳತ್ವದಲ್ಲಿ ತಮ್ಮ ಮುಂದೆ ನಿಂತ ಪಡೆಯನ್ನು ನೋಡಿ ನಿಧಾನವಾಗಿ ಅವರ ಕುಣಿತ ಮತ್ತು ವಾದ್ಯಗಳು ನಿಂತವು. ಅವರೆಲ್ಲರೂ ಮೊದಲು ಗಮನಿಸಿದ್ದು ಗಜ ಲಾಂಛನದ ಬಾವುಟ.

ವಿರಳವಾಗಿ ಮತ್ತು ವರ್ತುಲಾಕಾರವಾಗಿದ್ದ ಎಲ್ಲರೂ ನಿಧಾನವಾಗಿ ಒಂದು ಕಡೆ ಒಟ್ಟಾಗಿ ಸೇರಿದರು. ಅವರಲ್ಲಿ ಹೆಂಗಸರು, ಮಕ್ಕಳು, ವೃದ್ಧರು, ಗಂಡಸರು ಎಲ್ಲರೂ ಇದ್ದರು.

ಎದುರುಬದುರಾಗಿದ್ದ ಎರಡೂ ಬದಿಗಳು ಮೌನವಾಗಿ ಪರಸ್ಪರ ವೀಕ್ಷಿಸಿದವು. ಎರಡೂ ಪಡೆಯವರು ಆ ಸಮಯದಲ್ಲಿ ಮಾಡಿದ್ದು ತಮ್ಮ ಎದುರಾಳಿಯ ಶಕ್ತಿಯ ಅಳತೆ.

"ಯಾರು ಚಂದು?" ಢುಂಢಿ ಕೇಳಿದ.

ಯಾರೂ ಮುಂದೆ ಬರಲಿಲ್ಲ.

"ನಾನು ಢುಂಢಿ ಗಣಪತಿ, ಶಿವರುದ್ರ ಮತ್ತು ಪಾರ್ವತೀ ದೇವಿಯ ಮಗ. ಮಾತಂಗ ಗಣದ ಗಾಣಪತ್ಯ ನನ್ನದು." ಎಂದ ಢುಂಢಿ.

"ನಾನು ಚಂದು." ತಲೆಯ ಮೇಲೆ ತುರುಬನ್ನು ಕಟ್ಟಿಕೊಂಡಿದ್ದು, ಸ್ವರ್ಣಾಭರಣಗಳನ್ನು ತೊಟ್ಟಿದ್ದು, ಎದೆಯ ಮೇಲೆ ಉಪವಸನವಿಲ್ಲದೇ, ಮೊಣಕಾಲಿನವರೆಗೂ ಬಿಳಿಯ ಬಟ್ಟೆಯನ್ನು ಸುತ್ತಿಕೊಂಡಿದ್ದವರಲ್ಲಿ ಒಬ್ಬ ಮುಂದೆ ಬಂದನು.

"ಇವಳು ನನ್ನ ತಾಯಿ ಕೇದಕಿ. ನಮ್ಮ ಮಾತಂಗ ಗಣದ ನಾಯಕಿ. ಅವರ ಪರವಾಗಿ ನಾನು ಕೆಲಸ ಮಾಡುತ್ತೇನೆ." ಎಂದು ತನ್ನ ಸನಿಹದಲ್ಲಿರುವ ವೃದ್ಧೆಯೊಬ್ಬಳನ್ನು ತೋರಿದ.

ಸಂಪೂರ್ಣ ಬಿಳಿಗೂದಲಿನ ಆ ವೃದ್ಧೆ ಸಾಲಕ್ಷಣವಾದ ಮುಖವನ್ನು ಹೊಂದಿದ್ದರು. ಅವರ ಕಿವಿಗಳಲ್ಲಿ ಮತ್ತು ಕುತ್ತಿಗೆಯಲ್ಲಿ ಸ್ವರ್ಣಾಭರಣಗಳಿದ್ದವು. ಅಲ್ಲಿದ್ದ ಹೆಂಗಸರಲ್ಲಿ ಯಾರೂ ಮೊಲೆಗಳನ್ನು ಕಟ್ಟಿರಲಿಲ್ಲ. ಆದರೆ, ಉಪವಸನಗಳನ್ನು ಎದೆಯ ಮೇಲೆ ಮರೆಯಾಗಿ ಹಾಕಿಕೊಂಡಿದ್ದರು. ಆಕೆ ಮುಂದೆ ಬಂದು, "ನಾನೇ ಕೇದಕಿ. ಈ ಮಾತಂಗ ಗಣದ ಯಜಮಾನಿ. ನೀವು ಉತ್ತರದ ಹಿಮಾಲಯದ ಕಡೆಯವರು. ನಾವು ದಕ್ಷಿಣದವರು. ನಿಮ್ಮ ಮಾತಂಗ ಗಣವು ನಮ್ಮದ್ದಕ್ಕೆ ಸಂಬಂಧಪಟ್ಟಿಲ್ಲದ್ದು. ನೀವೇಕೆ ಇಲ್ಲಿಗೆ ಬಂದಿರಿ? ಬರಿಯ ಅತಿಥಿಗಳಾಗಿ ಬಂದರೆ ನಿಮಗೆ ಸ್ವಾಗತ ಕೋರುತ್ತೇವೆ. ನೀವು ಉತ್ತರದ ಮೇಲ್ಭಾಗದಲ್ಲಿ ಇರುವವರು ಎಂದು ಅಧಿಕಾರದಲ್ಲಿ ಬಂದಿದ್ದರೆ, ನಿಮ್ಮನ್ನು ವಿರೋಧಿಸುತ್ತೇವೆ. ಯುದ್ಧದ ಆಕಾಂಕ್ಷೆಯಿಂದ ಬಂದಿದ್ದರೆ ನಿಮ್ಮ ಜೊತೆ ಹೋರಾಡುತ್ತೇವೆ. ಹೇಳಿ ನಿಮ್ಮ ಉದ್ದೇಶ." ಎಂದಳು ಕೇದಕಿ.

"ಯುದ್ಧ!" ಎಂದ ಢುಂಢಿ.

ಅವರ ಗುಂಪಿನಲ್ಲಿ ಕಲರವ ಏರ್ಪಟ್ಟಿತು. ಎಲ್ಲರೂ ಗುಸುಗುಸು ಮಾತಾಡಿಕೊಳ್ಳತೊಡಗಿದರು.

ಕೇದಕಿ ಹೇಳಿದಳು. "ಇವತ್ತು ಹುಣ್ಣಿಮೆ. ಊರ್ಧ್ವಲೋಕವಾದ ದೇವಲೋಕ, ಮಧ್ಯಲೋಕವಾದ ಪಿತೃಲೋಕ ಮತ್ತು ಅಧೋಲೋಕವಾದ ಭೂಲೋಕ ಈ ಮೂರರ ದ್ವಾರಗಳು ತೆರೆದಿರುತ್ತವೆ. ಇಂದು ಶತ್ರುವಿನ ಜೊತೆ ಹೋರಾಡುವುದು ಒಂದು ಗೌರವದ ಸಂಗತಿ. ಶತ್ರುವನ್ನು ಕೊಂದರೆ ಶತ್ರುವಿಗೆ ಸದ್ಗತಿಯೂ ದೊರಕುತ್ತದೆ ಮತ್ತು ವೀಕ್ಷಿಸುವ ಪಿತೃಗಳಿಗೆ ಸಂತೃಪ್ತಿಯಾಗುತ್ತದೆ. ಒಂದು ವೇಳೆ ಈ ಹೋರಾಟದಲ್ಲಿ ನಾವು ಸತ್ತರೆ ಮುಕ್ತದ್ವಾರಗಳಿಂದ ಪಿತೃಲೋಕವನ್ನೂ ಮತ್ತು ದೇವಲೋಕವನ್ನೂ ಸೇರುತ್ತೇವೆ."

ಢುಂಢಿ ಕೊಡಲಿಯನ್ನು ಹಿಡಿದು ಹೂಂಕರಿಸಿದ. ಕೇದಕಿ ಗರ್ಜಿಸಿದಳು. "ಇಂದು ಅಪೂರ್ವವಾದ ಹುಣ್ಣಿಮೆ ನಮಗೆ ಒದಗಿದೆ. ಆಕಾಶದಲ್ಲಿ ನೆರೆದಿರುವ ಪಿತೃಗಳ ಸಾಕ್ಷಿಯಾಗಿ ನಮ್ಮ ಮಾತಂಗ ಗಣದ ಘನತೆಗೆ ಧಕ್ಕೆ ಬಾರದಂತೆ ನಡೆದುಕೊಳ್ಳೋಣ. ಗೆದ್ದರೆ ಪಿತೃಗಳಿಗೆ ಸಂತೃಪ್ತಿ. ಸತ್ತರೆ ನಮಗೆ ಪಿತೃಗಳ ಲೋಕದಲ್ಲಿ ಸ್ಥಾನ. ಆದ್ದರಿಂದ ಎಲ್ಲರೂ ಆತ್ಮಗೌರವದಿಂದ ಹೋರಾಡೋಣ. ಇಂತಹ ಅಪೂರ್ವ ಅವಕಾಶವನ್ನು ನೀಡುತ್ತಿರುವ ಶತ್ರುವಿಗೆ ವಂದಿಸೋಣ. ಬನ್ನಿ. ತಮ್ಮ ತಮ್ಮ ಆಯುಧಗಳನ್ನು ತನ್ನಿ."

ಎಲ್ಲಾ ಪುರುಷರು, ಹೆಂಗಸರು, ವೃದ್ಧರು, ಮಕ್ಕಳು ದಿಕ್ಕುದಿಕ್ಕುಗಳಿಗೆ ಓಡಿದರು. ಈಟಿ, ಖಡ್ಗ, ಲೋಹದ ಉದ್ದನೆಯ ಚಾವುಟಿ, ಗದೆ, ಕೊಡಲಿ, ಭರ್ಜಿಯಂತೆಯೇ ಉದ್ದವಾಗಿರುವ ಅಂಕುಶಗಳು; ಇತ್ಯಾದಿಗಳನ್ನು ಹಿಡಿದು ಬಂದರು. ನಾಲ್ಕು ಅಥವಾ ಐದು ವಸಂತಗಳ ಮಕ್ಕಳೂ ಕಿರುಗತ್ತಿಗಳನ್ನು ಹಿಡಿದು ನಿಂತಿದ್ದರು. ಕೆಲವು ಹೆಂಗಸರು ತಿಂಗಳ ಮಕ್ಕಳನ್ನು ಎದೆಗೆ ಉಪವಸನದಿಂದ ಕಟ್ಟಿಕೊಂಡು ಆಯುಧಗಳನ್ನು ಹಿಡಿದು ಸಮರಕ್ಕೆ ಸಿದ್ಧವಾಗಿ ನಿಂತಿದ್ದರು. ಕುರುಡ ವೃದ್ಧನೊಬ್ಬನೂ ಕೈಯಲ್ಲಿ ಖಡ್ಗವನ್ನು ಹಿಡಿದು, ಆವೇಶದಿಂದ ಧುಮುಗುಡುತ್ತಾ ಹೋರಾಡುವಂತಹ ಹೆಮ್ಮೆಯ ಕರ್ತವ್ಯಕ್ಕೆ ದೀಕ್ಷಿತನಾಗಿರುವಂತೆ ಯಾವುದೋ ದಿಕ್ಕಿಗೆ ತಿರುಗಿ ನಿಂತಿದ್ದನು.

ಕೇದಕಿಯು ಮತ್ತು ಚಂದುವು ಕೈಗಳಲ್ಲಿ ಖಡ್ಗ ಮತ್ತು ಗುರಾಣಿಗಳನ್ನು ಹಿಡಿದು ಮುಂದೆ ನಿಂತಿದ್ದರು. ಅವರ ಪಕ್ಕದಲ್ಲಿ ಚಂದುವಿನ ಹೆಂಡತಿ ಅವರ ಗಣದ ಲಾಂಛನವಾದ ಆನೆಯ ಕೊಂಬಿನ ಚಿತ್ರವಿರುವ ಪತಾಕೆಯನ್ನು ಹಿಡಿದು ನಿಂತಿದ್ದಳು.

ಎರಡೂ ಪಡೆಗಳು ಸಿದ್ಧವಾಗಿ ನಿಂತಿದ್ದರು. ಎಲ್ಲರ ಮುಖಗಳಲ್ಲಿ ರಣೋತ್ಸಾಹ ಮತ್ತು ಕಣ್ಣುಗಳಲ್ಲಿ ಶೌರ್ಯದ ಕಾಂತಿ ಬೆಳಗುತ್ತಿದ್ದವು. ಎಲ್ಲರ ಎದೆಗಳು ಆತ್ಮಾಭಿಮಾನದ ಆವೇಶದಿಂದ ಏರಿಳಿಯುತ್ತಿತ್ತು. ಇನ್ನು ಯಾವುದೇ ಗಳಿಗೆಯಲ್ಲಿ ಎದುರಾಗುವ ಸಾವಂಚಿನ ಸಮರದ ಸಂಕೇತಕ್ಕಾಗಿ ಸನ್ನದ್ಧ ವೀರರು ಕಾಯುತ್ತಿದ್ದರು.

ಸಂಪೂರ್ಣ ಸ್ಥಿರವಾದ ಮನಸ್ಸಿನಿಂದ ಮತ್ತು ಆತ್ಮ ಗೌರವದಿಂದ ಮಾತಾಡಿದ್ದ ಕೇದಕಿಯನ್ನು ಮತ್ತು ಅಹಂಕಾರ ಹಾಗೂ ಕ್ರೌರ್ಯದ ಲೇಪವಿಲ್ಲದೇ ಮುಗುದ ಧೈರ್ಯದಿಂದ ನಿಂತಿರುವ ಹೆಂಗಸರು, ವೃದ್ಧರು ಮತ್ತು ಮಕ್ಕಳನ್ನು ನೋಡಿದ ಸಮೂಲಾಚಾರ್ಯ ಢುಂಢಿಯ ಬಳಿಗೆ ಬಂದು, "ಹೇ ಪಾರ್ವತೀ ಸುತ ಢುಂಢಿರಾಜನೇ, ಶಕ್ತಿಗಣದಿಂದ ಅನುಗ್ರಹಿತನಾಗಿರುವ ನಿನಗೆ ಸಾಕ್ಷಾತ್ ಪ್ರಕೃತಿಯಾದ ಪಾರ್ವತಿಯ ಮೂಲ ವರದಾನವೇ ನಿನಗೆ ಒದಗಿದೆ. ಅಂತಹುದರಲ್ಲಿ ಈಗ ಪ್ರಕೃತಿ ಸ್ವರೂಪಿಣಿಯರಾದ ಸ್ತ್ರೀಯರೊಡನೆ ಹೋರಾಡುವೆಯಾ?" ಎಂದು ಕೇಳಿದ.

"ಅವರು ಹೋರಾಡಿದರೆ, ಹೋರಾಡುವೆ." ಎಂದ ಢುಂಢಿ ಸರಳವಾಗಿ.

"ಕೂಡದು ಹೇ ಗಣನಾಥ. ಶಕ್ತಿ ಸ್ವರೂಪಿಣಿಯರಾದ, ಪ್ರಕೃತಿಯ ಸ್ವಭಾವಿಗಳಾದ ಸ್ತ್ರೀಯರ ರಕ್ತಪಾತ ನಿನ್ನ ತಾಯಿಯಾದ ಪಾರ್ವತಿಗೆ ಸಮ್ಮತಿಸುವುದಿಲ್ಲ. ಇದು ಎರಡು ಗಣಗಳ ಪ್ರತಿಷ್ಠೆಯ ಸಂಘರ್ಷವಾದ್ದರಿಂದ ಎರಡೂ ಗಣಗಳ ಪ್ರತಿನಿಧಿಗಳು ಹೋರಾಡಿ, ಅನಗತ್ಯವಾದ ರಕ್ತಪಾತವನ್ನು ತಪ್ಪಿಸಬೇಕಾಗಿ ನನ್ನ ಪ್ರಾರ್ಥನೆ." ಎಂದು ಸಮೂಲಾಚಾರ್ಯ ಮೊಣಕಾಲೂರಿ ಢುಂಢಿಯ ಮುಂದೆ ಕೈಗಳನ್ನು ಚಾಚಿ ಬೇಡಿದ.

"ನಾನು ಸಮ್ಮತಿಸುತ್ತೇನೆ. ಅವಳು ಒಪ್ಪುತ್ತಾಳೆಯೋ ಕೇಳಿ ತಿಳಿಯಿರಿ." ಎಂದ ಢುಂಢಿ ಕೇದಕಿಯ ಕಡೆ ನೋಡಿದ. ಸಮೂಲಾಚಾರ್ಯ ಅವಳ ಬಳಿಗೆ ಹೋಗಿ ಇದೇ ವಿಷಯವನ್ನು ಅರುಹಿದ.

"ಯುದ್ಧಕ್ಕೆ ಕರೆಯಿತ್ತವರು ಅವರು. ಅವರು ಒಪ್ಪಿದರೆ ನಾವೂ ಇದಕ್ಕೆ ಸಮ್ಮತವೇ. ಆದರೆ ಯಾವ ಬಗೆಯ ಕಾಳಗ?" ಎಂದಳು ಕೇದಕಿ.

ತಕ್ಷಣವೇ ಒಂದಿನಿತೂ ತಡಮಾಡದೇ, "ಗಜ ಕಾಳಗ!" ಎಂದು ಗರ್ಜಿಸಿದ ಢುಂಢಿ. ಅವನಿಗೆ ಸೋಮನಾಥದಲ್ಲಿ ವಿತೃಪನು ಏರ್ಪಡಿಸಿದ್ದ ಗಜಕಾಳಗವು ಮನಸೂರೆಗೊಂಡಿತ್ತು. ಅಂತಹದ್ದೊಂದು ಅವಕಾಶ ತನಗೆ ಒದಗಿ ಬರಲಿ ಎಂದು ಅವನು ಕಾದಿದ್ದನು.

"ಭಲೇ ಭಲೇ, ಮಾತಂಗ ಗಣದವರಿಗೆ ಶೋಭಿಸುವಂತಹ ಯುದ್ಧ!" ಕೇದಕಿಯೂ ಮತ್ತು ಇತರರೂ ರಣೋತ್ಸಾಹದಿಂದ ಕೂಗಿದರು.

ಎರಡು ರಾಜಲಕ್ಷಣದ ದೊಡ್ಡ ದೊಡ್ಡ ಸಲಗಗಳು ಎದುರಾದವು. ಹುಣ್ಣಿಮೆಯ ಬೆಳಕಿನಲ್ಲಿ ಅವುಗಳ ನೀಳವಾದ, ಭದ್ರವಾದ ದಂತಗಳು ಹೊಳೆಯುತ್ತಿದ್ದವು. ಅವುಗಳ ಕಣ್ಣುಗಳಲ್ಲಿ ದೊಂದಿಗಳ ಬೆಳಕು ಪ್ರತಿಫಲಿಸುತ್ತಿತ್ತು.

ಕೇದಕಿಯ ಪರವಾಗಿ ಚಂದು ಒಂದು ಗಜವನ್ನೇರಿದ್ದ. ಅದರ ಪಕ್ಕದಲ್ಲಿ ನಿಂತ ಕೇದಕಿ ಹೇಳಿದಳು. "ಹೇ ಢುಂಢಿ, ಈ ಎದುರು ಇರುವ ರಾಜ ಲಕ್ಷಣಗಳುಳ್ಳ ಗಜವು ನಿನಗಾಗಿ. ಆದರೆ, ಅದರ ಪಾಲಕರು ಇಬ್ಬರು. ನೀನು ಶತ್ರುವಾಗಿರುವ ಕಾರಣದಿಂದ ಅವರಿಂದ ಆ ಗಜವನ್ನು ಕೊಡುಗೆಯಾಗಿ ಪಡೆಯಲಾರೆ. ಮೊದಲು ಅವರನ್ನು ಮಣಿಸಿ ಆ ಗಜವನ್ನು ಏರಬೇಕು. ಒಂದು ವೇಳೆ ನೀನು ಅವರೊಡನೆ ಹೋರಾಡುವಲ್ಲಿ ಸೋತರೆ, ಗಜಕಾಳಗದ ಘನತೆ ನಿನಗೆ ದಕ್ಕುವುದಿಲ್ಲ. ಹಾಗೊಂದು ವೇಳೆ ನೀನು ಗೆದ್ದರೆ ಗಜಕಾಳಗದ ಸಾಹಸ ನಿನ್ನದಾಗುತ್ತದೆ. ಆ ಗಜಕಾಳಗದಲ್ಲಿ ನನ್ನ ಮಗ ಚಂದು ಕುಳಿತಿರುವ ಗಜವನ್ನು ನಿನ್ನ ಆನೆಯು ಮಣಿಸಿದರೆ, ನಾವು ನಿನ್ನ ಸಾರ್ವಭೌಮತ್ವವನ್ನು ಮನ್ನಿಸಿ, ಈ ಮಾತಂಗ ಗಣದ ಗಾಣಪತ್ಯವನ್ನು ನಿನಗೆ ಒಪ್ಪಿಸುವೆವು."

ಚಂದುವು ಏರಿದ್ದ ಆನೆಯ ಎದುರಿದ್ದ ಆನೆಯ ಎರಡೂ ಬದಿಗಳಲ್ಲಿ ಮಾತಂಗ ವೀರ ಯುವಕರು ಖಡ್ಗಗಳನ್ನು ಹಿಡಿದು ನಿಂತಿದ್ದರು.

ಢುಂಢಿ ತನ್ನ ಕಬ್ಬಿಣದ ಕೊಡಲಿಯನ್ನು ಭದ್ರವಾಗಿ ಹಿಡಿದು ಅವರ ಕಡೆಗೆ ನಡೆದ. ಅವನು ಸಮೀಪಿಸುತ್ತಿದ್ದಂತೆ ಅವರು ಅವನ ಮೇಲೆ ಎರಗಿದರು. ಮೂವರ ಮಧ್ಯೆ ಭೀಕರ ಹೋರಾಟ ನಡೆಯಿತು. ಒಬ್ಬ ಮಾತಂಗನ ಖಡ್ಗ ಹಿಡಿದಿದ್ದ ತೋಳು ಕಡಿದು ತುಂಡಾಗಿ ಕೆಳಗೆ ಬಿದ್ದರೆ, ಮತ್ತೊಬ್ಬನ ಭುಜ ಹರಿದಿತ್ತು. ಇಬ್ಬರು ಮಾತಂಗರೂ ನೆಲ ಕಚ್ಚಿದ್ದರು. ಆದರೆ, ಆನೆಯೇ ಢುಂಢಿಗೆ ತನ್ನ ಏರಲು ಅವಕಾಶ ಕೊಡಲಿಲ್ಲ. ಘೀಳಿಡುತ್ತಾ, ತನ್ನ ಎರಡೂ ಕಾಲುಗಳನ್ನೆತ್ತಿ ಢುಂಢಿಯನ್ನು ವಿರೋಧಿಸಿತು. ಢುಂಢಿಯು ಅದನ್ನು ಬಿಡದೇ ಅದರ ದಾಡೆಗಳನ್ನು ಹಿಡಿದು, ಕಿವಿಯ ಪಕ್ಕಕ್ಕೆ ತಿವಿದು, ಅದನ್ನು ಮಣಿಸಿ, ಕಾಲೂರಿ ನೆಲದ ಮೇಲೆ ಕೂರುವಂತೆ ಮಾಡಿದ. ಢುಂಢಿಯ ಪಡೆಯು ಆನಂದದಿಂದ ಜಯಘೋಷ ಮಾಡುತ್ತಿದ್ದರು. ಢುಂಢಿ ಆನೆಯನ್ನೇರಿ ಕುಳಿತ. ಅದರ ಕುಂಭ ಸ್ಥಾನದಲ್ಲಿ ಅಂಕುಶಕ್ಕೆ ಬದಲಾಗಿ ಕೊಡಲಿಯ ಕೆಳಭಾಗದಿಂದಲೇ ತಿವಿದ. ಅದರ ಕುತ್ತಿಗೆಗೆ ಕಟ್ಟಿದ್ದ ಹಗ್ಗವನ್ನು ಬಿಗಿಯಾಗಿ ಹಿಡಿದುಕೊಂಡು, ತನ್ನ ಎರಡೂ ಮೊಣಕಾಲುಗಳನ್ನು ಹಗ್ಗದ ಮತ್ತೊಂದು ಸುತ್ತಿನಲ್ಲಿ ಸೇರಿಸಿಕೊಂಡು ಆನೆಯನ್ನು ಚಂದುವಿನ ಕಡೆಗೆ ನಡೆಸಿದ.

ಎರಡೂ ಗಜಗಳ ನಡುವೆ ಭೀಕರ ಕಾಳಗ ಆರಂಭವಾಯಿತು. ಆನೆಗಳ ಮೇಲೆ ಕುಳಿತಿದ್ದ ಢುಂಢಿ ಮತ್ತು ಚಂದು ಜೋರಾಗಿ ಕೂಗುತ್ತಾ, ಆನೆಯ ಕುಂಭಸ್ಥಲವನ್ನು ತಿವಿಯುತ್ತಾ, ಆನೆಯನ್ನು ಪ್ರಚೋದಿಸುತ್ತಿದ್ದರು. ಆನೆಗಳು ಘೀಳಿಡುತ್ತಾ ಪರಸ್ಪರ ಹಣೆಗಳನ್ನು ಘಟ್ಟಿಸುತ್ತಿದ್ದವು. ಸೊಂಡಿಲುಗಳಿಂದ ಬಳಸಿ ಎಳೆದಾಡುತ್ತಿದ್ದವು. ಕೆಲವೊಮ್ಮೆ ಪಕ್ಕದಿಂದ ಪಕ್ಕಕ್ಕೆ ಬಂದು ಗುದ್ದಿಕೊಳ್ಳುತ್ತಿದ್ದವು. ಈ ಘರ್ಷಣೆಯಲ್ಲಿ ಢುಂಢಿಯೇರಿದ್ದ ಆನೆಯ ದಂತವೊಂದು ಮುರಿಯಿತು. ನೋವಿನಿಂದ ಉನ್ಮತ್ತವಾಗಿ ಕೂಗಿದ ಆ ಆನೆ ತನ್ನ ಮುಂಗಾಲುಗಳನ್ನೆತ್ತಿ ಚಂದುವಿನ ಆನೆಯ ಮೇಲೆ ದಾಳಿ ಮಾಡಿತು. ಏಕದಂತವಾದ ಢುಂಢಿಯ ಆನೆಯು ತನ್ನನ್ನು ಎತ್ತರಿಸಿಕೊಂಡು ಘರ್ಷಿಸಿದ ಪರಿಣಾಮವಾಗಿ ಚಂದುವಿನ ಆನೆಯ ಕಣ್ಣಿಗೆ ಅದರ ದಾಡೆಯು ತಿವಿಯಿತು. ಅದೂ ಕ್ರೋಧದಿಂದ ಉನ್ಮತ್ತವಾಗಿ ತನ್ನ ಹಣೆಯಿಂದ ಢುಂಢಿಯ ಆನೆಯ ಹಣೆಯನ್ನು ಗುದ್ದಿತು. ಅವುಗಳ ಘಾತಕ್ಕೆ ಢುಂಢಿ ಮತ್ತು ಚಂದು ಇಬ್ಬರೂ ಕುಳಿತಿರುವಲ್ಲಿಂದ

ಎಸೆಯುವಂತಾಗುತ್ತಿದ್ದರೂ, ತಮ್ಮ ಎಡಗೈಯಲ್ಲಿ ಬಹು ಭದ್ರವಾಗಿ ಆನೆಯ ಕೊರಳಿಗೆ ಕಟ್ಟಿದ್ದ ಹಗ್ಗವನ್ನು ಹಿಡಿದಿದ್ದು, ತಮ್ಮ ಕಾಲುಗಳನ್ನು ಮತ್ತೊಂದು ಹಗ್ಗದ ಸುತ್ತಿನಲ್ಲಿ ಸಿಲುಕಿಸಿಕೊಳ್ಳುತ್ತಿದ್ದರು.

ಒಮ್ಮೊಮ್ಮೆ ಆನೆಗಳು ಪ್ರಾಣಾಂತಕವಾಗಿ ಘರ್ಷಿಸಿದಾಗಲೂ ನೋಡುಗರು ಆತಂಕ ಮತ್ತು ರೋಮಾಂಚನದಿಂದ ಗರ್ಜಿಸುತ್ತಿದ್ದರು. ಢುಂಢಿಗೆ ಮತ್ತು ಚಂದುವಿಗೆ ವಿಜಯವನ್ನು ಕೋರಿ ಅವರವರ ಗಣಗಳು ಜಯಘೋಷ ಮಾಡುತ್ತಿದ್ದವು.

ಢುಂಢಿ ಮತ್ತು ಚಂದುವು ತಮ್ಮ ತಮ್ಮ ಆನೆಗಳನ್ನು ಹತ್ತಿಪ್ಪತ್ತು ಹೆಜ್ಜೆಗಳನ್ನು ಹಿಂದಕ್ಕೆ ಇರಿಸುವಂತೆ ನಡೆಸಿ, ನಂತರ ವೇಗವಾಗಿ ಓಡುತ್ತಾ ಬಂದು ರಭಸವಾಗಿ ಪರಸ್ಪರ ಘರ್ಷಿಸುವಂತೆ ಮಾಡುತ್ತಿದ್ದರು. ಎರಡೂ ಆನೆಗಳ ಹಣೆಗಳು ಘಾಸಿತವಾಗಿ ರಕ್ತ ಸೋರುತ್ತಿತ್ತು. ಹೀಗೆ ಹಲವು ಬಾರಿ ಆಯಿತು. ಇಂತದ್ದೇ ಸಮಯದ ಕೊನೆಯ ಹಂತವೇನೋ ಎಂಬಂತೆ, ಎರಡೂ ಆನೆಗಳು ಹಿಂದಕ್ಕೆ ನಡೆದಾಗ, ಚಂದುವಿನ ಆನೆಯು ಹಿಂದಕ್ಕೆ ನಡೆಯಿತು ಆದರೆ, ಮುಂದಕ್ಕೆ ವೇಗವಾಗಿ ಓಡಿ ಬರಲು ನಿರಾಕರಿಸಿತು.

ಢುಂಢಿಯ ಆನೆಯು ಮುಂದೆ ಓಡಿ ಬಂದು, ಪ್ರತಿರೋಧಕ್ಕೆ ಸಿದ್ಧವಿಲ್ಲದ ಚಂದುವಿನ ಆನೆಯ ಹಣೆಯನ್ನು ಘಟ್ಟಿಸಿತು. ಆ ರಭಸಕ್ಕೆ ಚಂದುವಿನ ಆನೆಯು ಮತ್ತಷ್ಟು ಹಿಂದಕ್ಕೆ ಸರಿಯಿತು. ಢುಂಢಿಯ ಆನೆಯು ಉನ್ಮತ್ತವಾಗಿ ಮತ್ತೆ ಮತ್ತೆ ಚಂದುವಿನ ಆನೆಯನ್ನು ಘಟ್ಟಿಸಿತು. ಚಂದುವಿನ ಆನೆ ಘೀಳಿಡುತ್ತಾ ಕೆಳಕ್ಕೆ ಬಿದ್ದುಬಿಟ್ಟಿತು. ಢುಂಢಿ ವಿಜಯೋನ್ಮಾದದಿಂದ ಗರ್ಜಿಸುತ್ತಾ ತನ್ನ ಆನೆಯನ್ನು ಮತ್ತೆ ಮುಂದಕ್ಕೆ ಹೋಗದಂತೆ ನಿಯಂತ್ರಿಸಿದ.

ಆ ಮಹಾಪತನದಲ್ಲಿ ನೆಲ ಕಚ್ಚಿದ ಚಂದು ಮೇಲಕ್ಕೆ ಏಳಲಾರದೇ ನೆಲದ ಮೇಲೆ ನರಳುತ್ತಾ ಬಿದ್ದಿದ್ದ. ಕೇದಕಿ ಮತ್ತು ಅವಳ ಕಡೆಯವರು ಸೋಲಿನಿಂದ ಮತ್ತು ಅವಮಾನದಿಂದ ಗಟ್ಟಿಯಾಗಿ ಕೂಗುತ್ತಾ ರೋಧಿಸಿದರು.

ಢುಂಢಿಯ ಪಡೆ ಆನಂದದಿಂದ, ವಿಜಯೋನ್ಮಾದದಿಂದ ಜಯ ಘೋಷಗಳನ್ನು ಕೂಗಿದರು.

ಎಲ್ಲರೂ ತಮ್ಮ ಸೋಲು ಗೆಲುವುಗಳ ಭಾವದಲ್ಲಿ ಉದ್ವಿಗ್ನರಾಗಿ ಕೂಗಾಡುತ್ತಿರುವಾಗಲೇ ಕೇದಕಿಯು, "ನಮ್ಮ ಗಾಣಪತ್ಯ ನಮಗಿಲ್ಲವಾಯಿತು. ನಮ್ಮ ಪಿತೃಗಳೇ ನಮ್ಮನ್ನು ಕ್ಷಮಿಸಿ." ಎಂದು ಕೂಗುತ್ತಾ ಖಡ್ಗವನ್ನು ಹಿಡಿದು ನೆಲಕಚ್ಚಿದ್ದ ಚಂದುವಿನ ಬಳಿಗೆ ಬಂದು ಅವನ ಎದೆಗೆ ಬಾರಿ ಬಾರಿ ತಿವಿದಳು. ಅವನ ಎದೆಯಿಂದ ಚಿಮ್ಮಿದ ರಕ್ತದಿಂದ ತೋಯ್ದ ಅವಳ ಮುಖ ವ್ಯಗ್ರವಾಗಿ ಕಾಣುತ್ತಿತ್ತು. "ಪಿತೃಗಳೇ ನನ್ನ ಕ್ಷಮಿಸಿ." ಎಂದು ಕೂಗುತ್ತಾ ಮತ್ತೊಂದು ಕಿರುಗತ್ತಿಯಿಂದ ತನ್ನ ಹೊಟ್ಟೆಗೆ ಇರಿದುಕೊಂಡು ಕೆಳಗುರುಳಿದಳು.

ಮರುದಿನ ಬೆಳಗ್ಗೆ ಢುಂಢಿಯ ಎದುರು ಚಂದುವಿನ ಅನೇಕ ಹೆಂಡತಿಯರು ಮತ್ತು ಮಕ್ಕಳು ನಿಂತಿದ್ದರು.

ಕೇದಕಿಯ ಸಹೋದರ ಹಸ್ತಿಪಾಲ ಢುಂಢಿಗೆ ವಂದಿಸಿ ಸ್ವರ್ಣಾಂಕುಶವನ್ನು ಅವನ ಕೈಗಿತ್ತು, "ಹೇ ಢುಂಢಿರಾಜ, ಇವರು ಚಂದುವಿನ ಪತ್ನಿಯರು ಮತ್ತು ಮಕ್ಕಳು. ಇನ್ನು ಮುಂದೆ ನಿನಗೆ ಬೇಕಾದ ಸೇವೆಯನ್ನು ಇವರಿಂದ ಪಡೆಯಬಹುದು." ಎಂದನು.

“ನನಗೆ ಇವರೆಲ್ಲಾ ಯಾರೂ ಬೇಡ.” ಢುಂಢಿ, “ನಿಮಗೆ?” ಎಂದು ಮಾರ, ಆಸುರರ ಕಡೆ ತಿರುಗಿದ.

ಸಮೂಲಾಚಾರ್ಯ ಬೇಡವೆಂಬಂತೆ ತೋರು ಬೆರಳಿನಿಂದ ಆಡಿಸಿ ಕಣ್ಣುಗಳನ್ನು ಅರಳಿಸಿದ. ಅದನ್ನು ನೋಡಿದ ಆಸುರ ಮತ್ತು ಮಾರ, “ಬೇಡ, ನಮಗೂ ಬೇಡ.” ಎಂದರು.

“ಇವರೆಲ್ಲಾ ಇಲ್ಲೇ ಇದ್ದುಕೊಳ್ಳಲಿ. ಇವರಲ್ಲಿ ಹೋರಾಡುವ ಪುರುಷರು ಆನೆಗಳೊಂದಿಗೆ ನಮ್ಮೊಂದಿಗೆ ಬರಲಿ. ಇಲ್ಲಿಂದ ಮುಂದೆ ನಾವು ಕ್ರೊಂಚನ ಕಡೆಗೆ ಸಾಗುತ್ತಿದ್ದೇವೆ. ಅಲ್ಲಿಂದ ಹಿಂದಕ್ಕೆ ಬರುವಾಗ ಇಲ್ಲಿನ ಗಣದ ಬಗ್ಗೆ ಆಲೋಚಿಸೋಣ.” ಎಂದ ಢುಂಢಿ.

ನಾಯಕಿ ಕೇದಕಿ ಮತ್ತು ಚಂದುವಿನ ಶವಗಳನ್ನು ಅವರಿಗೆ ತಕ್ಕ ಮರ್ಯಾದೆಗಳಿಂದ, ಅವರ ಪದ್ಧತಿಯಂತೆಯೇ ಹೂಳಲು ಬಿಟ್ಟರು. ಬಿದಿರಿನ ಸಸಿಗಳನ್ನು ನೆಟ್ಟು ಸಂಸ್ಕಾರ ಮಾಡಿದರು. ಸಂಸ್ಕಾರವು ಪೂರ್ಣವಾಗುವಾಗ ಢುಂಢಿಯೇ ಆ ಬಿದಿರಿನ ಸಸಿಗಳಿಗೆ ಆನೆಯ ಹಾಲನ್ನು ಎರೆಯುವ ಮೂಲಕ ಆ ಗಣದ ಮುಂದಿನ ನಾಯಕನಾಗಿ ಅಭಿಷಕ್ತಗೊಂಡ. ಎಲ್ಲರೂ, “ಜಯ ಜಯ ಢುಂಢಿ ಗಣಪತಿ, ಜಯ ಮಾತಂಗ ಗಣಾಧಿಪತಿ.” ಎಂದು ಒಕ್ಕೊರಲಿನಿಂದ ಕೂಗಿ ತಮ್ಮ ಸಮ್ಮತಿ ಸೂಚಿಸಿದರು.

ಆ ಗಣದ ಪಾಳಯದಲ್ಲಿ ನೂರಾರು ಆನೆಗಳಿದ್ದವು. ಆಯ್ದ ನಲವತ್ತೆರಡು ಆನೆಗಳ ಮೇಲೆ ಮಾತಂಗ ಗಣವು ಹೊರಟಿತು. ಚಂದುವಿನ ಪಡೆಯವರು ಢುಂಢಿಗೆ ತಮ್ಮ ನಿಷ್ಠೆಯನ್ನು ತೋರಿ ಮಾತಂಗ ಗಣದ ಬಾವುಟವನ್ನೆತ್ತಿದರು. ಢುಂಢಿಗೆ ಜಯ ಘೋಷಗಳನ್ನು ಮಾಡಿ ಅವನ ಹಿಂದೆ ಹೊರಟರು.

ಅಲ್ಲಿಂದ ಹದಿನೇಳು ದಿನಗಳ ಪ್ರಯಾಣದ ನಂತರ ಕ್ರೊಂಚನ ಆವಾಸಸ್ಥಾನವಾದ ಮೂಷಾದ್ರಿಯನ್ನು ತಲುಪಿದರು. ಅನತಿ ದೂರದಲ್ಲಿದ್ದ ವಾಮದೇವರ ಈಶಾಶ್ರಮಕ್ಕೆ ಪಡೆಯು ಬಂದಿತು. ಆಶ್ರಮಕ್ಕೆ ಬಹುದೂರದಲ್ಲಿಯೇ ಬಿಡಾರವನ್ನು ಹೂಡಿ, ಢುಂಢಿ ಮತ್ತು ಕೆಲವರು ಮಾತ್ರ ಸಮೂಲಾಚಾರ್ಯ ಮತ್ತು ಇತರ ಮುನಿಗಳ ಜೊತೆ ನಡೆದು ವಾಮದೇವರನ್ನು ಕಂಡರು.

“ಸುಸ್ವಾಗತ ಢುಂಢಿರಾಜ, ಶಿವ ಪಾರ್ವತಿಯರ ಮಿಲನ ಬಿಂದುವಿನಂತೆ ಶೋಭಿಸುತ್ತಿರುವ ನಿನಗೆ ಈಶಾಶ್ರಮವು ಸ್ವಾಗತವನ್ನು ಬಯಸುತ್ತಿದೆ. ನೀನು ಇಲ್ಲಿಗೆ ನಮ್ಮನ್ನು ನಮ್ಮ ಕಾರ್ಪಣ್ಯಗಳಿಂದ ಕಾಪಾಡುವ ಸಲುವಾಗಿ ಬರುವೆಯೆಂದು ಅವಿಮುಕ್ತದ ರುದ್ರರು ಸುದ್ದಿ ತಿಳಿಸಿದ್ದರು. ಈ ಸುದ್ದಿ ಈಗಾಗಲೇ ಕ್ರೊಂಚನಿಗೂ ತಲುಪಿದ್ದು, ಆತನು ಈಗಾಗಲೇ ಯುದ್ಧ ಸನ್ನಾಹದಲ್ಲಿದ್ದಾನೆ. ನಿನಗೆ ವಿಜಯವಾಗಲಿ. ಶಿವರುದ್ರ ಮತ್ತು ಪಾರ್ವತೀದೇವಿಯ ವರಪುತ್ರನಾದ ನೀನು ಮಹಾಗಣಪತಿಯಾಗು.” ವಾಮದೇವರು ಅವನಿಗೆ ಹಾರೈಸಿದರು.

ಮೂಷಾದ್ರಿಯ ಇಕ್ಕಟ್ಟಾದ ಕಣಿವೆಗಳಲ್ಲಿ ಮೂಷಕಗಣದವರು ಇದ್ದು, ಕ್ರೊಂಚನು ಅವರನ್ನು ವ್ಯವಸ್ಥಿತವಾಗಿ ಆಯಕಟ್ಟಿನ ಸ್ಥಳಗಳಲ್ಲಿ ಇರಿಸಿದ್ದ. ಆದರೆ ಅದು ಹೊರಗಿನಿಂದ ಕಾಣುವಂತಿರಲಿಲ್ಲ. ಆ ಕಣಿವೆಗಳು ಬಹು ಕಾಲದ ಹಿಂದೆ ಸಂಭವಿಸಿರುವ ಭೂ ಕುಸಿತಗಳಿಂದ ಉಂಟಾಗಿದ್ದು, ಮಳೆಗಾಲದಲ್ಲಿ ಹರಿದಂತಹ ನೀರಿನಿಂದಾಗಿ ಅವು ಮತ್ತಷ್ಟು ಆಳವಾಗಿದ್ದವು. ಅಂತಹ ಕೊರಕಲುಗಳಲ್ಲಿ ಆನೆಗಳು ಸಾಗುವುದಿರಲಿ, ಪ್ರವೇಶಿಸಲೂ ಸಾಧ್ಯವಾಗುತ್ತಿರಲಿಲ್ಲ.

ಮೂಷಾದ್ರಿಯ ಹೊರಗೆ, ಉತ್ತರ ಭಾಗದಲ್ಲಿ ಆನೆಗಳ ಮೇಲೆ ಯುದ್ಧವನ್ನು ಮಾಡಲು ಇಡಿಯ ಮಾತಂಗ ಗಣವು ಕಾದು ನಿಂತಿತ್ತು. ಯುದ್ಧಾಹ್ವಾನ ನೀಡುವಂತೆ ಮಾತಂಗ ಗಣವು ಕೊಂಬು ಮತ್ತು

ಕಹಳೆಗಳನ್ನು ಊದಿ, ರಣಭೇರಿಯನ್ನು ಬಾರಿಸಿತು. ಆದರೆ ಕ್ರೌಂಚನಾಗಲಿ ಅಥವಾ ಅವನ ಮೂಷಕಗಣವಾಗಲಿ ಹೊರಗೆ ಬರಲೇ ಇಲ್ಲ. ಅವರ ಕಡೆಯಿಂದ ಯಾವ ಸದ್ದೂ ಕೇಳಲಿಲ್ಲ.

"ಮೂಷಾದ್ರಿಯ ದಕ್ಷಿಣಭಾಗದಲ್ಲಿ ಮೂಷಕಗಣವು ಇರುವುದು. ಅದೂ ಕೂಡ ಕೊರಕಲುಗಳಿಂದ ಕೂಡಿರುವ ಕಣಿವೆಗಳೇ. ಆದರೆ, ಅವರಿರುವಂತಹ ದಕ್ಷಿಣ ಕಣಿವೆಯನ್ನು ಪೂರ್ವ ಮತ್ತು ಆಗ್ನೇಯ ದಿಕ್ಕುಗಳಿಂದ ಇದೇ ಮೂಷಾದ್ರಿಯು ಆವರಿಸಿದೆ." ಸಮೂಲಾಚಾರ್ಯ ವಿವರಿಸಿದ. "ಈಗ ನಾವು ಇಲ್ಲಿ ಉತ್ತರ ಭಾಗದಲ್ಲಿರುವುದು ಅವರ ಗಮನಕ್ಕೆ ಬಂದಿದ್ದು, ಅವರು ನಮಗಾಗಿ ಕಾಯುತ್ತಿದ್ದಾರೆ. ಪಶ್ಚಿಮದಲ್ಲಿ ಪೂರ್ವದಿಕ್ಕಿಗೆ ಮುಖ ಮಾಡಿರುವಂತಹ ನಮ್ಮ ಆಶ್ರಮವಿದೆ. ನಾವು ಪಶ್ಚಿಮ ಮತ್ತು ಉತ್ತರದಿಕ್ಕಿನಲ್ಲಿ ಮಾತ್ರವೇ ಇದ್ದೇವೆ ಎಂದು ತೋರ್ಪಡಿಸಿಕೊಂಡು ನಿಮ್ಮಲ್ಲಿ ಸಮರ್ಥ ವೀರರು ಪೂರ್ವ ಮತ್ತು ಆಗ್ನೇಯ ದಿಕ್ಕುಗಳಿಂದ ಪರ್ವತವನ್ನೇರಿ, ದಕ್ಷಿಣದ ಕಣಿವೆಗೆ ಇಳಿದು, ಅವರನ್ನು ಅಲ್ಲಿಂದ ಉತ್ತರಭಾಗಕ್ಕೆ ಅಟ್ಟಿಕೊಂಡು ಬಂದರೆ, ಇಲ್ಲಿ ಗಜಾರೂಢರು ಅವರೊಡನೆ ಯುದ್ಧ ಮಾಡಲು ಸಾಧ್ಯ."

ಸಮೂಲಾಚಾರ್ಯ ಹೇಳಿದ ಪ್ರಕಾರ ಯೋಜನೆ ಸಿದ್ಧವಾಗುತ್ತಿರುವಾಗ್ಗೆ ಮತ್ತೊಂದು ವಿಷಯವನ್ನೂ ಹೇಳಿದ. "ಮೂಷಕ ಗಣದವರು ಯುದ್ಧದ ವಿಷಯದಲ್ಲಿ ಕ್ಷತ್ರಿಯರಂತೆ ಕ್ರಮವರಿತಿರುವ ಯೋಧರಲ್ಲ. ಅವರಲ್ಲಿ ಉತ್ತಮವಾದಂತಹ ಅಸ್ತ್ರಗಳೂ ಇಲ್ಲ. ಅವರಲ್ಲಿ ಇರುವುದೆಂದರೆ, ಕೊಡಲಿ, ಬಿಲ್ಲು ಬಾಣಗಳು ಮತ್ತು ಖಡ್ಗಗಳು. ಕಪ್ಪಗೆ ಕುಳ್ಳಗಿರುವ ಆ ಜನರು ಮೊನಚು ಮೂಗಿನ ಬಾಗಿದ ಬೆನ್ನಿನವರಾಗಿದ್ದಾರೆ. ಅವರ ಹೋರಾಟದ ತಂತ್ರವೆಂದರೆ ಅಡಗು ತಾಣಗಳಿಂದ ಬಾಣಗಳನ್ನು ಪ್ರಯೋಗಿಸುವುದು. ಶೌರ್ಯಹೀನರಾದ ನಮ್ಮಂತವರೊಂದಿಗೆ ಕೊಡಲಿ ಮತ್ತು ಖಡ್ಗಗಳೊಡನೆ ನೇರವಾಗಿ ಹೋರಾಡುತ್ತಾರೆ. ಇತರ ಯೋಧರೊಡನೆ ಹೋರಾಡುವಾಗ ಅಡಗು ಯುದ್ಧಗಳನ್ನು ಮತ್ತು ತೀರಾ ಒರಟಾಗಿ ಸದೆ ಬಡಿಯುವಂತೆ ಹೊಡೆದಾಟಗಳನ್ನು ಮಾಡುತ್ತಾರೆ. ಎಚ್ಚರಿಕೆ!"

ಸೂರ್ಯಾಸ್ತಮವಾದ ಮೇಲೆ ಢುಂಢಿ, ಆಸುರ ಮತ್ತು ಮಾರ; ಈ ಮೂವರ ನೇತೃತ್ವದಲ್ಲಿ ಮೂವತ್ತೆಂಟು ಜನರ ಗುಂಪು ತಯಾರಾಯಿತು. ಗಜಪಡೆಯ ನೇತೃತ್ವವನ್ನು ಪಿಚುಡಲನಿಗೆ ವಹಿಸಿದ ಢುಂಢಿ. ಅವರು ಮೂಷಾದ್ರಿಯ ಪೂರ್ವ ಭಾಗಕ್ಕೆ ಚಲಿಸಿ ಬೆಟ್ಟವನ್ನು ಏರತೊಡಗಿದರು.

ಇತ್ತ ಮಾತಂಗ ಗಣದ ಗಜಪಡೆ ಬೀಡುಬಿಟ್ಟಿರುವ ಕಡೆಗೆ ಮೂಷಾದ್ರಿಯ ಕಣಿವೆಯ ಆರಂಭಗಳಲ್ಲಿ ಉರಿಯುವ ಪಂಜುಗಳನ್ನು ನೋಡಿ ಸಮೂಲಾಚಾರ್ಯನು ಪಿಚುಡಲ ಮತ್ತು ಇತರ ವೀರರನ್ನು ಎಚ್ಚರಿಸಿದರು. ಮಾತಂಗ ಗಣದ ಗಜ ಪಡೆ ಹೋರಾಟಕ್ಕೆ ಸಿದ್ಧವಾಯಿತು. ಮಾತಂಗ ಗಣ ಅವರನ್ನು ಎದುರಿಸಲು ತಮ್ಮ ತಮ್ಮ ಶಸ್ತ್ರಗಳನ್ನು ಎತ್ತಿಕೊಂಡು ಸಿದ್ಧರಾದರು. ಆದರೆ, ಮೂಷಕರು ನಿಂತಲ್ಲೇ ನಿಂತಿದ್ದರೇ ಹೊರತು ಮುಂದೆ ಬರಲಿಲ್ಲ. ದೂರದಲ್ಲಿ ಉರಿಯುವ ದೊಂದಿಗಳನ್ನು ಹಿಡಿದಿದ್ದ ಮನುಷ್ಯಾಕೃತಿಗಳನ್ನು ನೋಡುತ್ತಾ ಮಾತಂಗರೂ ನಿಂತಿದ್ದರು. ಮೂಷಕರ ಕಡೆಯಿಂದ ಕೊಂಬೊಂದು ಮೊಳಗಿತು. ಮಾತಂಗರೂ ಉತ್ತರವಾಗಿ ಕೊಂಬುಗಳನ್ನು ಮೊಳಗಿಸಿದರು, ನಗಾರಿ ಬಡಿದರು.

"ಅವರು ಯುದ್ಧಾಹ್ವಾನ ನೀಡುತ್ತಿದ್ದಾರೆ." ಎಂದ ಸಮೂಲಾಚಾರ್ಯ.

"ಮುಂದೆ ನುಗ್ಗೋಣವೇ?" ಪಿಚುಡಲ ಕೇಳಿದ.

"ಬೇಡ. ಅವರು ನಿಮ್ಮನ್ನು ತಮ್ಮ ಕಂದಕಗಳಲ್ಲಿ ಕೆಡವಲು ಹೊಂಚು ಹಾಕುತ್ತಿದ್ದಾರೆ. ಆದರೆ, ಏನಾದರಾಗಲಿ ಅವರು ಬಯಲು ಪ್ರದೇಶಕ್ಕೆ ಬರುವವರೆಗೂ ನೀವು ಒಂದು ಹೆಜ್ಜೆಯನ್ನೂ ಮುಂದಿಡಬೇಡಿ." ಎಂದ ಸಮೂಲಾಚಾರ್ಯ.

ಸಮೂಲಾಚಾರ್ಯನ ಊಹೆ ಸರಿಯಾಗಿತ್ತು. ಮತ್ತೆ ಮತ್ತೆ ಕೊಂಬನ್ನು ಊದುತ್ತಾ ಯುದ್ಧಾಹ್ವಾನವನ್ನು ನೀಡುತ್ತಿದ್ದ ಮೂಷಕರು ಮಾತಂಗರೇ ತಮ್ಮ ಬಳಿಗೆ ಬರಲೆಂಬ ಹೊಂಚು ಹಾಕಿದ್ದರು. ಗುಡ್ಡಗಾಡುಗಳಲ್ಲಿ ಅಡಗಿ ಹೋರಾಡುವಂತಹ ಯುದ್ಧತಂತ್ರವನ್ನು ಬಲ್ಲ ಅವರಿಗೆ ಬಯಲಿನಲ್ಲಿ ಇಷ್ಟು ದೊಡ್ಡ ದಂಡನ್ನು ಎದುರಿಸುವಂತಹ ಮಾನಸಿಕ ಸಿದ್ಧತೆಯಾಗಲಿ, ಯುದ್ಧಾನುಭವವಾಗಲಿ ಇರಲಿಲ್ಲ. ದಾಳಿ ಮಾಡುವುದು, ದೋಚುವುದು, ತಮ್ಮ ಕಣಿವೆಗಳ ಮೂಲಕ ಹಾದು ಹೋಗುವ ಸಾರ್ಥಗಳ ಮೇಲೆ ಬಿದ್ದು ವ್ಯಾಪಾರಿಗಳನ್ನು ದೋಚುವುದು ಇವರ ಮುಖ್ಯವಾದ ಕೆಲಸವಾಗಿತ್ತು.

ಢುಂಢಿ ಮತ್ತು ಇತರ ಮೂವತ್ತೇಳು ಜನರು ನಿಧಾನವಾಗಿ ಬೆಟ್ಟವನ್ನೇರುವ ಹೊತ್ತಿಗೆ ಅಪರಾತ್ರಿಯಾಗಿತ್ತು. ಪೂರ್ವದ ದಿಕ್ಕಿನಲ್ಲಿಯೇ ಅವರು ಹತ್ತ ತೊಡಗಿದ್ದರೂ, ಅವರು ಶಿಖರಾರೋಹಣದ ಅನುಕೂಲಗಳನ್ನು ಅನುಸರಿಸಿ ಹೋದ್ದರಿಂದ ಆಗ್ನೇಯ ದಿಕ್ಕಿಗೇ ಚಲಿಸಿದ್ದರು. ಅವರು ಆಗ್ನೇಯ ಮೂಲೆಯಲ್ಲಿ ನಿಲುಗಡೆ ಹೊಂದಿದರು. ಅವರಿಗೆ ಮೂಷಕರ ಪಾಳಯ ಸ್ಪಷ್ಟವಾಗಿ ಕಾಣುತ್ತಿತ್ತು. ಅವರು ಅಲ್ಲಿಂದ ಮುಂದೆ ಅತೀ ಎಚ್ಚರಿಕೆಯಿಂದ ಪಾಳಯದ ಹಿಂಬದಿಯಾದ ದಕ್ಷಿಣದಿಕ್ಕಿಗೆ ಇಳಿಯುತ್ತಾ ಬಂದರು. ಮೂಷಕರ ದಂಡು ಮತ್ತು ಗಮನ ಮೂಷಾದ್ರಿಯ ದ್ವಾರವಾದ ಉತ್ತರದಿಕ್ಕಿನಲ್ಲಿ ಕೇಂದ್ರೀಕೃತವಾಗಿತ್ತು.

ಪಾಳಯದ ಹಿಂಭಾಗದ ಕೆಲವು ಗಾವುಗಳಂತೂ ಗ್ರಾಮಗಳಂತೆ ವಾಸಸ್ಥಳವೇ ಆಗಿದ್ದರೂ ಸಧ್ಯಕ್ಕೆ ಸಂಪೂರ್ಣ ನಿರ್ಮಾನುಷ್ಯವಾಗಿತ್ತು.

ಇಬ್ಬರು ತೀರಾ ಹಣ್ಣಾದ ಇಬ್ಬರು ವೃದ್ಧರು ಬಿದಿರಿನ ಲಾಳದಲ್ಲಿರುವ ವಿಷದ ದ್ರವದಲ್ಲಿ ಬಾಣದ ತುದಿಗಳನ್ನು ಅದ್ದಿ ಪಕ್ಕಕ್ಕೆ ಇಡುತ್ತಿದ್ದರು.

ಢುಂಢಿ ಅವರ ಎದುರು ನಿಂತ.

"ಕ್ರೌಂಚ ಎಲ್ಲಿ?"

ಒಬ್ಬ ವೃದ್ಧನು ಉತ್ತರಕ್ಕೆ, ಮೂಷಾದ್ರಿಯ ದ್ವಾರದ ಕಡೆಗೆ ಕೈ ತೋರಿಸಿ, ತನ್ನ ಕೆಲಸವನ್ನು ಮುಂದುವರಿಸಿದ. ಢುಂಢಿ ಕೊಡಲಿಯನ್ನು ಬೀಸುತ್ತಾ ಮುಂದೆ ನಡೆದ. ಆಸುರ ಮತ್ತು ಮಾರರೂ ಮುಂದೆ ನಡೆದರು. ಮಾತಂಗ ಗಣದ ಕೆಲವರು ವೃದ್ಧರು ಅದ್ದಿ ಇಡುತ್ತಿದ್ದ ಬಾಣಗಳನ್ನು ಎತ್ತಿಕೊಂಡು ನಡೆದರು.

ಅತ್ತ ಕಡೆಯಿಂದ ಎದುರಾಗಿ ಬರುತ್ತಿದ್ದ ಮೂಷಿಕನೊಬ್ಬ ಅಪರಿಚಿತರನ್ನು ನೋಡಿ ಅವಕ್ಕಾಗಿ ನಿಂತ. ಅವನು ಜಾಗೃತವಾಗುವಷ್ಟರಲ್ಲಿ, "ನಾನು ಢುಂಢಿ." ಎಂದ ಢುಂಢಿ ಅವನ ಕುತ್ತಿಗೆಯ ಮೇಲೆ ಕೊಡಲಿಯನ್ನು ಬೀಸಿದ. ಆತ ಕೆಳಕ್ಕುರುಳುತ್ತಿದ್ದಂತೆ ಅವರ ಪಾಳಯದಲ್ಲಿ ಹಾಹಾಕಾರವೆದ್ದಿತು. ಹೆಂಗಸರ ಗುಂಪಿನ ಕಡೆಗೆ ಅವಿತುಕೊಳ್ಳಲು ಓಡುತ್ತಿದ್ದ ಕೆಲವು ಗಂಡಸರನ್ನು ಬಗ್ಗು ಬಡಿಯಲು ಢುಂಢಿ ಕೊಡಲಿಯನ್ನು ಬೀಸುತ್ತಾ ಅವರ ಹತ್ತಿರಕ್ಕೆ ಹೋದ.

ಹೆಂಗಸರ ಗುಂಪಿನಲ್ಲಿ ಚೀತ್ಕಾರವೆದ್ದಿತು. ಮಕ್ಕಳು ತಮ್ಮ ತಮ್ಮ ತಾಯಂದಿರ ಹಿಂದೆ ಬಚ್ಚಿಟ್ಟುಕೊಂಡರು. ಹತ್ತನ್ನೆರಡು ವರ್ಷದ ಹುಡುಗನೊಬ್ಬ ಅಲ್ಲಿ ಬಿದ್ದಿದ್ದ ಕಲ್ಲೊಂದನ್ನು ತೆಗೆದು ಢುಂಢಿಗೆ ಬೀಸಲು ಹೋದ. ಆದರೆ ಕಲ್ಲು ಕೈ ಜಾರಿ ಕೆಳಗೆ ಬಿದ್ದು, ಭಯದಿಂದ ಅದನ್ನು ಅಲ್ಲಿಯೇ ಬಿಟ್ಟು ಓಡಿಹೋಗಿ ತನ್ನ ತಾಯಿಯ ಹಿಂದೆ ಅವಿತುಕೊಂಡ. ಅದನ್ನು ನೋಡಿದ ಢುಂಢಿಯು ಕಾಲಿಂದ ಕಲ್ಲನ್ನು ಅವನತ್ತ ಒದ್ದು, "ಹೂಂ, ಕಲ್ಲು ಹೊಡಿ, ಬಾ ಹೋರಾಡು." ಎಂದು ಗರ್ಜಿಸಿದ.

ಮೂಷಿಕರು ಏನೆಂದು ತಿಳಿಯುವಷ್ಟರಲ್ಲಿ, ಮಾತಂಗರು ಅವರನ್ನು ದ್ವಾರದಿಂದ ಹೊರಕ್ಕೆ ತಳ್ಳಿದರು. ಕಾದಾಡುತ್ತಾ ಮೂಷಿಕರು ಬಯಲಿಗೆ ಬರಬೇಕಾಯ್ತು. ಎತ್ತರವಾದ ಬಂಡೆಯನ್ನೇರಿ, ಆನೆ ಘೀಳಿಡುವಂತೆ ಸದ್ದು ಮಾಡುವ ಕೊಂಬನ್ನು ಊದಿದ ಆಸುರ. ಉತ್ತರದಲ್ಲಿ ಕಾದಿದ್ದ ಮಾತಂಗರು ಬಯಲಿಗೆ ಬಂದ ಮೂಷಿಕರ ಮೇಲೆ ನುಗ್ಗಿದರು. ಮಾರ ಮತ್ತು ಇತರ ಮಾತಂಗರು ಬಂಡೆಗಳ ಮೇಲೆ ಮತ್ತು ಗಿರಿಗಳ ಎತ್ತರದ ಭಾಗಗಳಲ್ಲಿ ಅವಿತಿದ್ದ ಮೂಷಿಕರನ್ನು ಹುಡುಕಿ ಸದೆ ಬಡಿಯತೊಡಗಿದರೆ, ಢುಂಢಿ ತನ್ನ ಕೆಲವು ಮಾತಂಗರೊಡನೆ ಕ್ರೌಂಚನಿಗೆ ಎದುರಾದ. ನಸುಗಪ್ಪು ಬಣ್ಣದ ಕ್ರೌಂಚ ಸಾಮಾನ್ಯ ಅರಣ್ಯಕರಿಗಿಂತ ಸುಂದರನಾಗಿದ್ದ ಮತ್ತು ಬಲಾಢ್ಯನಾಗಿದ್ದ. ಢುಂಢಿಗಿಂತಲೂ ಎತ್ತರವಾಗಿದ್ದ.

ಭೂ ಕುಸಿತದಿಂದಾದ ಕೊರಕಲುಗಳಲ್ಲಿ ಢುಂಢಿ ಮತ್ತು ಕ್ರೌಂಚ ಹೊಡೆದಾಡಿದರು. ಆದರೆ, ಢುಂಢಿಯ ಒರಟು ಮತ್ತು ಬರ್ಬರ ಹೋರಾಟದ ಮುಂದೆ ಕ್ರೌಂಚನ ಬಲ ಸಾಕಾಗಲಿಲ್ಲ. ಅವನ ತೋಳು ಘಾಸಿತವಾಗಿ ಖಡ್ಗವು ಕೈಗಳಿಂದ ಕೆಳಗೆ ಬಿತ್ತು. ಅದನ್ನು ತೆಗೆದುಕೊಳ್ಳಲು ಹೋದ ಕ್ರೌಂಚ, "ನಿಲ್ಲು ಯುದ್ಧ ನೀತಿ ಪಾಲಿಸು." ಎಂದು ಕೂಗುತ್ತಾ ಢುಂಢಿಯನ್ನು ತಡೆಯಲು ಯತ್ನಿಸಿದ.

"ಅವೆಲ್ಲಾ ನನಗೆ ತಿಳಿಯವು." ಎಂದ ಢುಂಢಿ ಕ್ರೌಂಚನ ಶಿರ ತರಿದ.

ಕ್ರೌಂಚ ಕೆಳಗೆ ಬಿದ್ದಂತೆ, ಆಸುರ ಬಂಡೆಯನ್ನೇರಿ ಕೊಂಬನ್ನು ಊದಿದ. "ಕ್ರೌಂಚ ಸತ್ತ. ಢುಂಢಿ ಕ್ರೌಂಚನ ಕೊಂದ. ಜಯ ಜಯ ಢುಂಢಿ ಗಣಪತಿ." ಎಂದು ಘೋಷಿಸಿದ. ಮೂಷಿಕರು ಕೂಡಲೇ ಆಯುಧಗಳನ್ನು ತ್ಯಜಿಸಿ ಶರಣಾಗತರಾದರು. ಮಾತಂಗರು ವೀರಾವೇಶದಿಂದ ಜಯ ಘೋಷ ಮಾಡಿದರು.

"ಜಯ ಜಯ ಢುಂಢಿ ಗಣಪತಿ. ಜಯ ಜಯ ಮಾತಂಗಾಧಿಪತಿ."

ಎಲ್ಲರೂ ಜಯಘೋಷ ಮಾಡುತ್ತಾ ಕುಣಿದಾಡುತ್ತಿದ್ದಾಗ ಹಿರಿಯನಾಗಿದ್ದ ಓರ್ವ ಮೂಷಕ ಢುಂಢಿಯ ಬಳಿಗೆ ಬಂದು, "ಹೇ ಢುಂಢಿ ಗಣಪತಿ, ಕ್ರೌಂಚನ ವಧೆಯಿಂದಾಗಿ ಮೂಷಕಗಣವು ನಿನ್ನದಾಯಿತು. ದಯಮಾಡಿ ಅಶಕ್ತರನ್ನು, ವೃದ್ಧರನ್ನು, ಹೆಂಗಸರನ್ನು ತೊಂದರೆಗೊಳಮಾಡಬೇಡ. ಈಗ ನಮ್ಮಿಂದ ನಿನಗೆ ಏನಾಗಬೇಕು ಹೇಳು." ಎಂದು ನಿವೇದಿಸಿಕೊಂಡ.

"ನಿಮ್ಮಿಂದ ನಮಗೇನೂ ಆಗಬೇಕಿಲ್ಲ. ವಾಮದೇವ ಮಹರ್ಷಿಗಳ ಆಶ್ರಮಕ್ಕೆ ಇನ್ನು ಮುಂದೆ ಯಾವ ಉಪಟಳಗಳನ್ನೂ ಕೊಡಕೂಡದು. ಇಷ್ಟು ಸುಲಭದಲ್ಲಿ ನಿಮ್ಮನ್ನು ಸೋಲಗೊಟ್ಟ ಕ್ರೌಂಚ ಅವನೆಂತ ನಾಯಕ? ಮಾತಂಗ ಗಣದ ಗಾಣಪತ್ಯವನ್ನು ಒಪ್ಪಿ, ಅದಕ್ಕೆ ಅಧೀನರಾಗಿ ನೀವಿರಬೇಕು. ನೀವಿಲ್ಲಿದ್ದರೂ, ನಿಮ್ಮಲ್ಲಿಯ ಕೆಲವರನ್ನು ನಮ್ಮೊಂದಿಗೆ ಕಳುಹಿಸಬೇಕು. ಅವರು ನಮಗಾಗಿ ಕೆಲಸ ಮಾಡಬೇಕು. ನಮ್ಮ ವಾಹಕರಾಗಬೇಕು." ಎಂದ ಢುಂಢಿ.

ಆಸುರ ಢುಂಢಿಯನ್ನೇ ಬೆರಗಿನಿಂದ ನೋಡುತ್ತಿದ್ದ. ಅಂದೊಂದು ದಿನ ಅವಿಮುಕ್ತದ ಸೈನಿಕರ ಮೇಲೆ ಕಲ್ಲುಗಳನ್ನು ಎಸೆಯಲು ಪ್ರೇರೇಪಿಸಿದ ಗೆಳೆಯ ಇಂದು ಬಹುದೊಡ್ಡ ಗಣಾಧಿಪತಿಯಾಗಿ ಆಜ್ಞೆಗಳನ್ನು ಹೊರಡಿಸುತ್ತಿರುವುದನ್ನು ಈ ಹಿಂದೆ ಎಂದಿಗೂ ಊಹಿಸಿರಲಿಲ್ಲ. ಅವನ ಎದೆ ಹೆಮ್ಮೆಯಿಂದ ಉಬ್ಬಿತು.

ನಾಲ್ಕು ದಿನಗಳನ್ನು ಅಲ್ಲಿ ಕಳೆದ ಮಾತಂಗ ತಂಡಕ್ಕೆ ಮೂಷಕ ಗಣವು ಉಪಚಾರ ಮಾಡಿತು. ವಾಮದೇವರೂ ಆಶ್ರಮದ ಆತಿಥ್ಯ ನೀಡಿದರು. ಆದರೆ ಢುಂಢಿಗೆ ಅಷ್ಟು ಕಾಲ ಎಲ್ಲಿಯೂ ಮತ್ತು ಯಾರೊಂದಿಗೂ ಬರಿದೇ ನಿಲ್ಲಲು ಮನಸ್ಸಿರಲಿಲ್ಲ. ಅವನಿಗೆ ಬರಿದೇ ಎಲ್ಲಿಯಾದರೂ ಕೆಲಸವಿಲ್ಲದೇ ನಿಲ್ಲಲು ಸಾಧ್ಯವಾಗುವುದು ಪಾರ್ವತಿ ಮತ್ತು ವದೀರಜ್ಜನೊಂದಿಗೆ ಮಾತ್ರ.

ಬೃಹತ್ತಾಗಿ ತನ್ನ ದಂಡನ್ನು ಹಿಗ್ಗಿಸಿಕೊಂಡು ವಯನಕ್ಕೆ ಮರಳಿದ ಢುಂಢಿಗೆ ಭವ್ಯ ಸ್ವಾಗತ ದೊರಕಿತು. ವದೀರಜ್ಜ ಹಿರಿಹಿರಿ ಹಿಗ್ಗಿದ. ವಯನದ ಅರಣ್ಯಕರನ್ನು ಬೇಕಾದಂತೆ ಉಪಯೋಗಿಸಿಕೊಳ್ಳಬಹುದು ಎಂಬಂತಹ ಧೋರಣೆಯಲ್ಲಿದ್ದ ಅವಿಮುಕ್ತದ ರಾಜಸಭೆಯವರ ಎದೆಯಲ್ಲಿ ಭೀತಿ ಹುಟ್ಟಿಸುವಷ್ಟು ಢುಂಢಿ ಬೆಳೆದಿದ್ದಾನೆ ಎನ್ನುವುದೇ ವದೀರಜ್ಜನ ಮಹದಾನಂದ.

ವದೀರಜ್ಜ ಢುಂಢಿಯ ಏಳ್ಗೆಗೆ ಸಂತೋಷವಾಗಿದ್ದರೂ, ಯಾವುದೋ ಆತಂಕದಲ್ಲಿ ಇರುವಂತೆ ಕಂಡ. ತನ್ನ ಕುಟೀರದಲ್ಲಿಯೇ ಢುಂಢಿಯನ್ನು ಇರಿಸಿಕೊಂಡು ಯಾರೂ ಹೊರಗಿನವರು ಮಾತನಾಡಿಸದಂತೆ ನೋಡಿಕೊಂಡ. ಢುಂಢಿ ತನ್ನ ಗೆಳೆಯರೊಡನೆ ಅವಿಮುಕ್ತ ಅಥವಾ ವಿರಾಟನಗರದ ಕಡೆಗೆ ಹೋಗಬೇಕೆಂದರೆ ಅವಕಾಶ ಕೊಡದ ವದೀರಜ್ಜ, "ನಾನು ನಿನಗೆ ಏನೋ ಹೇಳಬೇಕು. ಆದರೆ, ಹೇಗೆ ಹೇಳುವುದು ಎಂದು ತಿಳಿಯುತ್ತಿಲ್ಲ." ಎನ್ನುತ್ತಿದ್ದ.

"ನಾನು ಬಂದು ಹತ್ತುದಿನಗಳಾದವು. ಹೀಗೇ ಹೇಳುತ್ತಿದ್ದೀಯ. ಏನು ಹೇಳು." ಎಂದು ಢುಂಢಿ ಗಟ್ಟಿಯಾಗಿ ವದೀರಜ್ಜನನ್ನು ಗದರಿದ.

"ನೀನು ನೈಮಿಷಾರಣ್ಯಕ್ಕೆ ಹೋದಾಗ ಶುಕ್ತಿಮತ್‌ನಿಂದ ವಜ್ರನೆಂಬ ಮಾತಂಗನು ಸಂದೇಶ ವಾಹಕನೊಬ್ಬನ ಮೂಲಕ ನಿನಗೆ ಸಂದೇಶ ಕಳುಹಿಸಿದ್ದ. ನೀನು ತ್ವರಿತವಾಗಿ ಶುಕ್ತಿಮತ್‌ಗೆ ಹಿಂದಿರುಗಬೇಕೆಂದು ಒತ್ತಾಯದ ಕರೆ ನೀಡಿದ್ದ. ಆದರೆ, ನನಗೆ ನಿನ್ನ ಕಳುಹಿಸಿಕೊಡಲು ಇಷ್ಟವಿಲ್ಲದೇ ಒದ್ದಾಡುತ್ತಿದ್ದೇನೆ." ಎಂದ ವದೀರಜ್ಜ.

"ನಾನು ಹೋಗಬೇಕು." ಎಂದ ಢುಂಢಿ.

"ಹೋಗಲೇಬೇಡ ಇಲ್ಲೇ ಇದ್ದುಬಿಡು. ನೀನು ಈಗ ಮಾತಂಗದ ಗಾಣಪತ್ಯವನ್ನು ವಹಿಸಿದ್ದೀಯ. ಇಲ್ಲಿಯೇ ಇದ್ದು ಅವಿಮುಕ್ತದವರನ್ನು ಇಲ್ಲಿಯ ಸುತ್ತಮುತ್ತಲಿನ ಅರಣ್ಯಕರನ್ನು ಅಧೀನದಲ್ಲಿ ಇಟ್ಟುಕೋ. ಪಾರ್ವತಿಯೂ ಬೇಡ. ಶಿವನೂ ಬೇಡ. ಇಲ್ಲೇ ಇದ್ದು ಬಿಡು. ನೀನು ವಯನದವನು." ಎಂದು ವದೀರಜ್ಜ ಹೇಳಿದ.

"ನೀನು ಕೇಡಿನ ಮುದುಕ." ಆಸುರ ತಡೆಯದಿದ್ದರೆ ಢುಂಢಿ ವದೀರಜ್ಜನ ಹೊಡೆದೇಬಿಡುತ್ತಿದ್ದ. "ಪಾರ್ವತಿ ನಾನು ಹೋಗುವಾಗ ಹೇಳಿದ್ದಳು. ಹೀಗಾಗಬಹುದೆಂದು ಅವಳು ಊಹಿಸಿದ್ದಳು. ನೀನೇ ಮಾಲಿನಿಯನ್ನೂ ಕಳುಹಿಸದೇ ಹೋದವನು ಎನಿಸುತ್ತದೆ. ನೀನು ಸ್ವಾರ್ಥಿ ಮುದುಕ. ನೀನು ಮೊದಲಿನಂತೆ ಇಲ್ಲ. ಆರ್ಯರ ಪುರೋಹಿತರಂತೆ ನೀನೂ ಕುಯುಕ್ತಿ ಮಾಡುವುದನ್ನು ಕಲಿತುಬಿಟ್ಟೆ." ಎಂದು ವದೀರಜ್ಜನ ಮೇಲೆ ಏರಿ ಹೋಗುತ್ತಿದ್ದವನನ್ನು ಮಾರ ತಡೆದು ಕುಟೀರದಿಂದ ಹೊರಕ್ಕೆ ಎಳೆದುಕೊಂಡು ಹೋದ.

ದುಃಖಿತನಾದ ವದೀರಜ್ಜನ ಸಮಾಧಾನ ಪಡಿಸಲು ಆಸುರ ಕುಟೀರದಲ್ಲಿಯೇ ಉಳಿದ.

"ವದೀರಜ್ಜಾ, ನೀನೇಕೆ ಹೀಗೆ ಮಾತಾಡುತ್ತಿದ್ದೀಯಾ?" ಎಂದು ಕೇಳಿದ ಆಸುರ.

"ನಾನು ಖಂಡಿತ ಹೋಗಲೇ ಬೇಕು." ಢುಂಢಿ ಹಟ ಹಿಡಿದ. "ವಜ್ರನು ಸಂದೇಶ ಕಳುಹಿಸಿದ್ದಾನೆಂದರೆ, ಅದು ಪಾರ್ವತಿಯದೇ ಆಗಿರುತ್ತದೆ. ನೀನು ನನಗೆ ಮೊದಲೇ ಹೇಳಬೇಕಿತ್ತು. ಇನ್ನು ಈಗ ತಡ ಮಾಡಲಾರೆ."

ಎರಡೇ ದಿನಗಳಲ್ಲಿ ಪಿಚುಡಲನಿಗೆ ವಯನದ ಉಸ್ತುವಾರಿಕೆ ವಹಿಸಿ, ಢುಂಢಿ ಮಾರ, ಕುಂಭಿ ಮತ್ತು ಆಸುರ ಹಾಗೂ ಇತರ ಮಾತಂಗ ಮತ್ತು ಮೂಷಿಕರೊಂದಿಗೆ ಶುಕ್ತಿಮತ್‌ಗೆ ಹೊರಟೇ ಬಿಟ್ಟ.

ಆ ಬಾರಿ ಅಲ್ಲಿಂದ ಹೋಗುವಾಗ ಢುಂಢಿ ವದೀರಜ್ಜನ ಜೊತೆ ಮಾತಾಡಲಿಲ್ಲ. ವದೀರಜ್ಜನೂ ಅವನನ್ನು ಕಳುಹಿಸಿಕೊಡಲು ತನ್ನ ಕುಟೀರದಿಂದ ಹೊರಗೆ ಬರಲಿಲ್ಲ.

"ಹೇ ಪಿಚುಡಲ, ಆ ಮುದುಕನಿಗೆ ಪಿತ್ತ ನೆತ್ತಿಗೇರಿದೆ. ಮದ್ದು ಕೊಡಿಸು." ಎಂದು ತನ್ನ ಕಳುಹಿಸಿಕೊಡಲು ಬಂದ ಪಿಚುಡಲನಿಗೆ ಹೇಳಿದ ಢುಂಢಿ ಆನೆಯನ್ನೇರಿದ್ದ.

ಕ್ಷೋಭೆಗೆ ಒಳಗಾಗಿದ್ದ ಢುಂಢಿಯನ್ನು ಅವಿಮುಕ್ತದ ದ್ವಾರದಿಂದ ಹಾದು ಹೋಗುವಾಗ ಸಂಬೋಧಿಯು ಅವನನ್ನು ಸಂಧಿಸುವ ಪ್ರಸ್ತಾಪವನ್ನು ಕಳುಹಿಸಿದ್ದ. ಆದರೆ, ಢುಂಢಿ ಸಮ್ಮತಿಸಲಿಲ್ಲ. ಅವಿಮುಕ್ತದ ಪ್ರಜೆಗಳು, ಅರಣ್ಯಕರು ಮತ್ತು ಇತರ ಶೂದ್ರರು ಢುಂಢಿಯನ್ನು ಜಯ ಘೋಷದೊಂದಿಗೇ ಬೀಳ್ಕೊಂಡರು. ಆದರೆ ಅದನ್ನು ಸಂತೋಷಿಸುವ ಅಥವಾ ಸ್ವೀಕರಿಸುವ ಮನಸ್ಸು ಅವನಿಗಿರಲಿಲ್ಲ. ವದೀರಜ್ಜನ ನೋಡದೇ, ಅವನ ಮಾತನಾಡಿಸದೇ, ಒಟ್ಟಾರೆ ಅವನಿಂದ ಸಂತಸದ ಬೀಳ್ಕೊಡುಗೆ ಪಡೆಯದೇ ಬಂದಿದ್ದು ಅವನಿಗೆ ಸಂಕಟವೇ ಆಗಿತ್ತು. ಇಷ್ಟಕ್ಕೂ ವದೀರಜ್ಜನು ಹಾಗೆ ಹೇಳಿದಾಗ, ತಾನು ಏಕೆ ಅಷ್ಟು ಕೋಪಗೊಂಡೆ ಎನ್ನುವುದು ಅವನಿಗೇ ಅರ್ಥವಾಗದ ವಿಷಯವಾಗಿ ಉಳಿದಿತ್ತು.

ಈಗ ಹೋಗುವ ದಾರಿ ಅಂದು ಬಂದ ದಾರಿಯಂತಿರಲಿಲ್ಲ. ಪ್ರವಾಹಕ್ಕೊಳಗಾಗಿ ಅನೇಕ ಮರಗಳು ನೆಲ ಕಚ್ಚಿದ್ದವು. ಆನೆಗಳು ನಡೆಯುವಷ್ಟು ಸರಾಗವಾಗಿರಲಿಲ್ಲ. ಪ್ರತಿಬಾರಿಯೂ ಪ್ರಯಾಣವನ್ನು ನಿಲ್ಲಿಸಿ ಬಿದ್ದಿರುವ ಮರಗಳನ್ನು ಸರಿಸಿಕೊಂಡು ದಾರಿ ಮಾಡಿಕೊಳ್ಳಬೇಕಾಗಿತ್ತು. ಪ್ರಯಾಣವು ದೀರ್ಘವಾದಂತೆ ಎಲ್ಲರಿಗೂ ಭಾಸವಾಯಿತು. ಪ್ರತಿ ಸಲವೂ ಪ್ರಯಾಣವು ನಿಂತಾಗ ಢುಂಢಿ ಸುರೆಯನ್ನಾಗಲಿ, ಗವುಡವನ್ನಾಗಲಿ ಕುಡಿದೇ ಕಾಲ ಕಳೆಯುತ್ತಿದ್ದ. ಅವನಿಗೆ ಇಡೀ ಪ್ರಯಾಣವೇ ಬೇಸರಿಕೆಯನ್ನುಂಟು ಮಾಡಿತು.

ದೀರ್ಘಕಾಲ ಬಿದ್ದಿರುವ ಮಳೆ ಮತ್ತು ಅಂಶುಮತಿ, ಬ್ರಹ್ಮಪುತ್ರಾ ಹಾಗೂ ಗಂಗಾ ನದಿಗಳಲ್ಲಿ ಹೆಚ್ಚಿದ್ದ ಪ್ರವಾಹದ ಪರಿಣಾಮವಾಗಿ ಭೂ ಕುಸಿತಗಳುಂಟಾಗಿದ್ದು, ಬೃಹತ್ ಗಾತ್ರದ ಮರಗಳು ನೆಲ ಕಚ್ಚಿದ್ದವು. ಆದರೆ, ನದಿ ಪಾತ್ರದ ಅರಣ್ಯಗಳೇ ಹೆಚ್ಚಾಗಿದ್ದ ಆ ಭೂಭಾಗದಲ್ಲಿ ಅದರ ಮೂಲಕವೇ ಹಾದು ಹೋಗದೇ ವಿಧಿಯಿರಲಿಲ್ಲ. ಗ್ರಾಮಗಳಾಗಿದ್ದ ಮತ್ತು ನಗರಗಳಾಗಿದ್ದ ಪ್ರದೇಶಗಳು ಇವರ ಪ್ರಯಾಣದ ದಾರಿಯಲ್ಲಿ ಅತ್ಯಲ್ಪವಾಗಿದ್ದವು. ಸಿಕ್ಕ ಗ್ರಾಮಗಳ ದಾರಿಗಳೂ ಅಷ್ಟೇನೂ ಸಮರ್ಪಕವಾಗಿರಲಿಲ್ಲ.

ಬಹು ದೀರ್ಘ ಪ್ರಯಾಣದ ನಂತರ ಮಾತಂಗರ ತಂಡ ಶುಕ್ತಿಮತನ್ನು ಸೇರುವ ದಾರಿಯನ್ನು ತಲುಪಿತು. ದಾರಿ ಬಹಳಷ್ಟು ದೂರವಿದ್ದಂತೆಯೇ ತಾವು ಬರುತ್ತಿರುವ ಸುದ್ದಿಯನ್ನು ಶುಕ್ತಿಮತ್‌ಗೆ ತಲುಪಲು ಕುದುರೆಯ ಮೇಲೆ ಸಂದೇಶವಾಹಕನನ್ನು ಕಳುಹಿಸಿದ ಢುಂಢಿ.

ಶುಕ್ತಿಮತನ್ನು ಗಣವು ಪ್ರವೇಶಿಸುವಷ್ಟರಲ್ಲಿ ವಜ್ರ ಮತ್ತು ಭದ್ರ ತಮ್ಮ ತಮ್ಮ ಕುದುರೆಗಳ ಮೇಲೇರಿ ಢುಂಢಿಗೆ ಎದುರಾದರು.

"ಅಹೋ ವಜ್ರ. ಗೆಳೆಯಾ..... ಅಹೋ ಭದ್ರ!" ಢುಂಢಿ ಉದ್ಗರಿಸುತ್ತಾ ತನ್ನ ಕೈಗಳನ್ನು ಎತ್ತಿ ಕೂಗಿದ. ವಜ್ರ ಮತ್ತು ಭದ್ರರೂ ಅಷ್ಟೇ ಸಂತೋಷದಿಂದ ಉದ್ಗರಿಸಿದರು. "ಇಳಿದು ಬಾ ಕೆಳಗೆ. ಮಾನಸ ಸರೋವರದ ಬಳಿಗೆ ಹೋಗಿ ಬರೋಣ." ಎಂದ ವಜ್ರ.

"ಅಮ್ಮ ಅಲ್ಲಿದ್ದಾಳೇನು?" ಎಂದು ಕೇಳಿದ ಢುಂಢಿ.

"ಇಲ್ಲ." ಎಂದು ವಜ್ರ ನುಡಿಯಲು, "ಹಾಗಾದರೆ ನಾನು ಮೊದಲು ಅಮ್ಮನನ್ನು ನೋಡಿ ನಂತರ ಬರುತ್ತೇನೆ." ಎಂದು ಢುಂಢಿ ಅರಮನೆಯ ದಿಕ್ಕಿಗೆ ತಿರುಗುತ್ತಾ ಕೂಗಿ ಹೇಳಿದ.

"ಒಡತಿ ಅರಮನೆಯಲ್ಲಿ ಇಲ್ಲ."

"ನಾನು ಬರುವವರೆಗೂ ಶುಕ್ತಿಮತನ್ನು ತೊರೆಯುವುದಿಲ್ಲ ಎಂದು ಹೇಳಿದ್ದಳು." ಎಂದ ಢುಂಢಿ ಕೋಪಗೊಂಡ.

"ನಿನಗೆ ಸುದ್ದಿ ಕಳುಹಿಸಿದ್ದೆ." ಎಂದ ವಜ್ರ.

"ಆದರೆ ಅವನಿಗೆ ತಿಳಿಸಲಾಗಲಿಲ್ಲ." ಎಂದು ಉತ್ತರಿಸಿದ್ದು ಆಸುರ.

ಢುಂಢಿ ಆನೆಯಿಂದ ಕೆಳಕ್ಕೆ ಇಳಿಯುವಾಗ ಕುದುರೆಯ ಮೇಲಿದ್ದ ಆಸುರ ವಜ್ರನನ್ನು ಸಮೀಪಿಸಿ ಹೇಳಿದ. "ನೀನು ಸುದ್ದಿ ಕಳುಹಿಸಿದಾಗ ನಾವು ನೈಮಿಷಾರಣ್ಯಕ್ಕೆ ಹೋಗಿದ್ದೆವು. ನಾವು ಹಿಂದಿರುಗಿ ಬರುವುದಕ್ಕೆ ತುಂಬಾ ಕಾಲವಾಗಿಬಿಟ್ಟಿತ್ತು. ವದೀರಜ್ಜ ಢುಂಢಿಗೆ ನೀನು ಕಳುಹಿಸಿದ ಸಂದೇಶವನ್ನು ಹೇಳಲಿಲ್ಲ. ಬದಲಾಗಿ ಇಲ್ಲಿಗೆ ಹೋಗದಿರುವಂತೆ ತಡೆಯಲು ಯತ್ನಿಸಿದ. ಇದಕ್ಕೆ ಕೋಪಗೊಂಡ ಢುಂಢಿ ವದೀರಜ್ಜನ ಮೇಲೆ ಏರಿ ಹೋದ. ಇದರಿಂದ ಬೇಸರಗೊಂಡ ವದೀರಜ್ಜನ ನಾನು ಸಮಾಧಾನ ಪಡಿಸುವಾಗ ನನಗೆ ವಿಷಯ ತಿಳಿಸಿದರು. ಬರುವ ಮಾರ್ಗ ಬಹಳ ಕಷ್ಟವಾಗಿತ್ತು. ಢುಂಢಿಯ ಮನಸ್ಸೂ ಸರಿಯಿರಲಿಲ್ಲ. ಹಾಗಾಗಿ ನಾನೂ ಏನೂ ಹೇಳಲಿಲ್ಲ. ಈಗ ನೀನೇ ಹೇಳಬೇಕು."

ತನ್ನ ಸಮೀಪಿಸಿದ ಢುಂಢಿಗೆ ವಜ್ರ ಹಿಂಬಾಲಿಸಲು ಹೇಳಿದ. ಗಣದವರೊಬ್ಬರು ಢುಂಢಿಗೆ ಕುದುರೆಯೊಂದನ್ನು ಬಿಟ್ಟುಕೊಟ್ಟರು. ಆಸುರ ಮತ್ತು ಮಾರರು ಅವರಿಬ್ಬರನ್ನು ಹಿಂಬಾಲಿಸಿದರು.

ಮಾನಸ ಸರೋವರವನ್ನು ತಲುಪುವವರೆಗೂ ಢುಂಢಿಯ ಹೊರತು ಯಾರೂ ಮಾತಾಡಲಿಲ್ಲ. ಢುಂಢಿ ಮಾತ್ರ, "ನಾನು ಬಂದೇ ಬರುವೆನೆಂದು ಹೇಳಿದ್ದೆ. ನಾನು ಬರುವವರೆಗೂ ಎಲ್ಲಿಗೂ ಹೋಗುವುದಿಲ್ಲ ಎಂದು ಅಮ್ಮ ಹೇಳಿದ್ದಳು. ಆದರೆ, ಅವಳು ಮಾಡಿದ್ದಾದರೂ ಏನು? ಈಗ ಎಲ್ಲಿಗೆ ಹೋದಳು?

ಅವಳನ್ನು ಹುಡುಕಿಕೊಂಡು ನಾನು ಎಲ್ಲಿ ಅಲೆಯಬೇಕು? ಮಾನಸ ಸರೋವರದಲ್ಲಿಯೇ ಇದ್ದಾಳೆಯೇನು?" ಎಂದು ಕೋಪದಿಂದ, ವಿಷಾದದಿಂದ ಬಡಬಡಿಸುತ್ತಿದ್ದ.

ಸಂಪೂರ್ಣ ನಿರ್ಜನವಾಗಿದ್ದ ಮಾನಸ ಸರೋವರದ ದಡದಲ್ಲಿ ಐವರೂ ಕುದುರೆಗಳಿಂದ ಇಳಿದರು.

*

ವಾಮದೇವರು ತಾವು ರಚಿಸಿದ ಮಂಡಲವನ್ನೊಮ್ಮೆ ನಿಂತು ನೋಡಿದರು.

ಒಂದು ತ್ರಿಕೋಣವು ಮೇಲ್ಮುಖವಾಗಿದ್ದು, ಮತ್ತೊಂದು ತ್ರಿಕೋಣವು ಕೆಳಮುಖವಾಗಿದ್ದು ನಕ್ಷತ್ರಾಕಾರವನ್ನು ಏರ್ಪಡಿಸಿದ್ದವು. ಆ ನಕ್ಷತ್ರದ ಮಧ್ಯೆ ಉಂಟಾಗಿರುವ ಷಣ್ಮುಖದ ಅವಕಾಶದಲ್ಲಿ ತ್ರಿಕೋಣವೊಂದನ್ನು ರಚಿಸಿದ್ದರು. ನಕ್ಷತ್ರದ ಹೊರ ಮೂಲೆಗಳನ್ನು ಸಮವಾಗಿ ಸ್ಪರ್ಶಿಸುವಂತೆ ವೃತ್ತವನ್ನು ರಚಿಸಿ, ವೃತ್ತದ ಸುತ್ತಲೂ ಹೂವಿನ ದಳಗಳಂತೆ ಬರೆದಿದ್ದರು.

(ಗಣಪತಿ ಮಂಡಲದ ಚಿತ್ರ)

## ಅಧ್ಯಾಯ 19 ಪ್ರಳಯ ತಾಂಡವ

"ಮಹರ್ಷಿ, ಇದೇನು?" ವಾಮದೇವರು ರಚಿಸಿದ ತ್ರಿಕೋನಗಳನ್ನು, ಕಮಲದ ದಳಗಳ ಚಿತ್ತಾರವನ್ನು ನೋಡಿದ ಬೆನಕ ವಾಮದೇವರನ್ನು ಕೇಳಿದ.

"ಇದು ಮಂಡಲ. ಗಣಪತಿ ಯಂತ್ರ." ವಾಮದೇವರು ಹೇಳಿದರು.

"ಇದು ಏಕೆ?" ಬೆನಕ ಮತ್ತೆ ಕೇಳಿದ.

"ಇಡೀ ವಿಶ್ವವು ಶಕ್ತಿಮಯವಾಗಿದೆ. ಈ ವಿಶ್ವದ ಶಕ್ತಿ ಸದಾ ಜಾಗೃತವಾಗಿಯೇ ಇರುತ್ತದೆ. ಹಾಗೂ ಶಕ್ತಿಯು ಸೂಕ್ಷ್ಮ ತರಂಗಗಳ ರೂಪದಲ್ಲಿ ಸದಾ ಸಂಚಲನಶೀಲವಾಗಿಯೇ ಇರುತ್ತದೆ. ನಾವೂ ಕೂಡ ಈ ಶಕ್ತಿಯ ತರಂಗಗಳಿಂದ ಹೊರತಾಗಿಲ್ಲ. ಈ ವಿಶ್ವದಲ್ಲಿ ಇರುವಂತೆ ನಮ್ಮಲ್ಲಿಯೂ ಶಕ್ತಿಯ ತರಂಗಗಳು ಇವೆ. ಇಡೀ ಅಸ್ತಿತ್ವದಲ್ಲಿರುವ ಶಕ್ತಿಯು ಏಕಮುಖವಾಗಿಯೋ ಅಥವಾ ಏಕಪ್ರಕಾರವಾಗಿ ಇಲ್ಲ. ಶಕ್ತಿಗಳಲ್ಲಿ ನಾನಾ ಪ್ರಕಾರಗಳೂ ಮತ್ತು ಪ್ರಕಟಣೆಗಳೂ ಇವೆ. ನಮ್ಮಲ್ಲಿ ಮೂಲಭೂತವಾಗಿರುವಂತಹ ಶಕ್ತಿಗಳ ಸ್ವಭಾವ ಮತ್ತು ಗುಣಗಳಿಗೆ ಅನುಗುಣವಾಗಿ ವಿಶ್ವದಲ್ಲಿರುವ ಶಕ್ತಿಗಳನ್ನು ಆಕರ್ಷಿಸಬಹುದು. ಹಾಗೆಯೇ ನಮ್ಮಲ್ಲಿ ನಿದ್ರಾವಸ್ಥೆಯಲ್ಲಿರುವ ಶಕ್ತಿಯನ್ನು ಉದ್ದೀಪನಗೊಳಿಸಿಕೊಳ್ಳಬಹುದು. ಹಾಗೆ ಶಕ್ತಿಯನ್ನು ಅವಗಾಹನೆಗೆ ತಂದುಕೊಂಡು ಆವಾಹನೆ ಮಾಡಿಕೊಂಡು ವ್ಯಕ್ತಿಗಳೂ ಶಕ್ತಿಗಳಾಗಲು ಯಂತ್ರ, ಮಂತ್ರ ಮತ್ತು ತಂತ್ರಗಳಿವೆ.

ಈಗ ನಾನು ರಚಿಸಿರುವುದು ಯಂತ್ರ. ಮೇಲ್ಮುಖವಾಗಿರುವ ತ್ರಿಕೋಣವು ಲಿಂಗ; ಪುರುಷ ಶಕ್ತಿಯಾದ ಶಿವನ ಸಂಕೇತ. ಹಾಗೆಯೇ ಕೆಳಮುಖವಾಗಿರುವ ತ್ರಿಕೋಣವು ಯೋನಿ; ಪ್ರಕೃತಿಯ ಶಕ್ತಿಯಾದ

ಪಾರ್ವತಿಯ ಸಂಕೇತ. ಈ ಎರಡರ ಸಮಾಗಮವೇ ಶಿವ–ಶಕ್ತಿಯರ ಅಥವಾ ಪುರುಷ–ಪ್ರಕೃತಿಯರ ಮಿಲನ ಫಲವಾದ ಸಂಯೋಗ ಶಕ್ತಿ. ಅದುವೇ ಬಿಂದು. ಯೋಗವೆಂದರೆ ಸೇರುವುದು. ಸಂಯೋಗವೆಂಬುದು ಮಹತ್ತರವಾದುದಕ್ಕಾಗಿ ಸೇರುವುದು. ಹಾಗೆ ಎರಡು ಸೇರಿದರೆ ಶಕ್ತಿಯ ಬಿಡುಗಡೆ.” ವಾಮದೇವರು ಹೇಳುತ್ತಾ ಹೇಳುತ್ತಾ ಹೋದಂತೆ ಭಾವಪರವಶರಾಗಿ ಕಣ್ಮುಚ್ಚಿದರು. ಅತಿಭೌತಿಕವಾದಂತಹ ಆನಂದದಲ್ಲಿ ತೇಲುತ್ತಾ ಹೋದಂತೆ, ದೇಹಭಾವವನ್ನು ಮೀರಿ, ಮನೋಪ್ರಜ್ಞೆಯನ್ನು ಮೀರಿ, ಶಬ್ದಗಳನ್ನು ಮೀರಿದ ಮೌನದಲ್ಲಿ ಸಂವಹನ ಮಾಡುತ್ತಾ ಸಮಾಧಿಗೇರಿದರು.

*

ಢುಂಢಿಯು ಶುಕ್ತಿಮತದಿಂದ ಹೊರಟ ಕೆಲವು ದಿನಗಳಲ್ಲಿಯೇ ದೇವತೆಗಳನ್ನೊಳಗೊಂಡ ಆರ್ಯಸಮೂಹ ಶಿವನ ಬಳಿಗೆ ಹೋಯಿತು. ಶಿವರುದ್ರನು ಆಗ ಪ್ರಯಾಗದಲ್ಲಿದ್ದ. ಅಂಶುಮತಿ, ಗಂಗಾ ಮತ್ತು ಸರಸ್ವತಿ ನದಿಗಳ ತ್ರಿವೇಣಿ ಸಂಗಮದಲ್ಲಿ ಧ್ಯಾನ ಸಮಾಧಿಯಲ್ಲಿದ್ದ.

ದಕ್ಷಿಣದಲ್ಲಿ ದುರ್ದರ ಪರ್ವತದಲ್ಲಿ ಒಂದು ಅರಣ್ಯಕರ ಮಹಿಷ ಗಣವಿದೆ. ಅದರ ಒಡೆಯನು ಅತ್ಯಂತ ಶಕ್ತಿಶಾಲಿಯಾಗಿದ್ದು, ಅನೇಕ ಆರ್ಯರ ಗ್ರಾಮಗಳಿಗೆ ಮತ್ತು ದೇವತೆಗಳ ಗೋಷ್ಠಿಗಳಿಗೆ ದಾಳಿ ಇಟ್ಟು ತನ್ನ ಪರಾಕ್ರಮವನ್ನು ಮೆರೆಯುತ್ತಿದ್ದಾನೆ. ಅವನನ್ನು ಎದುರಿಸಲು ಹೋದ ಗಣಗಳೆಲ್ಲಾ ಅವನಿಗೆ ಸೋತಿವೆ. ಈಗ ಅವನು ಮುಖ್ಯವಾದ ಗುರಿ ಆರ್ಯಾವರ್ತ. ನಂತರ ಕುಬೇರನ ಅಲಕಾಪುರಿ ಮತ್ತು ಇಂದ್ರನ ಅಮರಾವತಿ. ಆ ಬರ್ಬರ ಅಜ್ಞಾನಿಗಳ ತಂಡ ಇಂದ್ರನ ಮತ್ತು ಇತರ ದೇವತೆಗಳ ಮೇಲೆ ದಾಳಿ ಮಾಡುವ ಸಮಯವು ಸನ್ನಿಹಿತವಾಗಿದೆ. ಆದ್ದರಿಂದ ಅವನನ್ನು ಸಂಹರಿಸು ಎಂದು ದೇವತೆಗಳು ಶಿವನಲ್ಲಿಗೆ ಬಂದು ಬೇಡಿದರು.

ಶಿವ ದೇವತೆಗಳ ಮೇಲೆಯೇ ಕ್ಷುಬ್ಧಗೊಂಡನು.

“ನಿಮ್ಮ ವೈದಿಕ ಜನರಿಗೆ ಮೋಕ್ಷವೆಂಬುದೇ ತಿಳಿದಿಲ್ಲ. ನೀವು ಮಾಡುವ ಪ್ರಾರ್ಥನೆಗಳೆಲ್ಲವೂ ಲೌಕಿಕವಾದುವುಗಳು. ನನಗೆ ನಿಮ್ಮ ಲೌಕಿಕ ಬಂಧನ ಬೇಡ. ಹೆಸರಿಗಷ್ಟೇ ಆರ್ಯರಾಗಿರುವ ನೀವು ಲೌಕಿಕವಾಗಿಯೇ ಸದಾ ವ್ಯವಹರಿಸುವ ನೀವು ನನ್ನ ದೃಷ್ಟಿಯಲ್ಲಿ ಅನಾರ್ಯರು. ನೀವು ಯಾರನ್ನು ಅನಾರ್ಯರೆಂದು, ಅಸುರರೆಂದು ದೂರುತ್ತೀರೋ ಅವರು ನಿಜವಾಗಿಯೂ ಒಳಗೂ ಮತ್ತು ಹೊರಗೂ ಒಂದೇ ಭಾವದಲ್ಲಿದ್ದು ಮುಗ್ಧರಾಗಿಯೇ ಇದ್ದಾರೆ. ಅವರ ಮುಗ್ಧತೆಯನ್ನು ಅಜ್ಞಾನವೆನ್ನುವ ನೀವು ಅಜ್ಞಾನಿಗಳು. ಹೇ ಇಂದ್ರನೇ, ನೀನು ನಿಜಕ್ಕೂ ಪರಮಪುರುಷನೇ ಆಗಿದ್ದ ಪಕ್ಷದಲ್ಲಿ, ಪದವಿಯೊಂದಕ್ಕೆ ಪರಿತಪಿಸುವುದಾದರೂ ಏಕೆ? ಕ್ಷುದ್ರ ಜನರಂತೆ ತೊಂದರೆ ಬಂದಾಗೆಲ್ಲಾ ಸಹಾಯದ ಭಿಕ್ಷೆ ಬೇಡುವ ನೀವು ಎಂತಹ ದೇವತೆಗಳು? ನಿಮ್ಮನ್ನು ನಂಬಿ ಬಂದವರನ್ನು ನೀವು ಹೇಗೆ ರಕ್ಷಿಸುವಿರಿ? ಅಸೂಯೆ ಮತ್ತು ಅತಂತ್ರತೆಯ ರಾಜಕಾರಣ ಹಾಗೂ ಲೌಕಿಕತೆಯೇ ನಿಮ್ಮ ದೇವಸಭೆಯ ವ್ಯವಹಾರಗಳೇ? ಆರ್ಯರು, ಅವರ ವರ್ಣಗಳು, ದೇವತೆಗಳು, ಅವರ ವ್ಯವಹಾರಗಳು, ಶೂದ್ರರು, ಅರಣ್ಯಕರು, ಅವರೊಳಗಿನ ಬಡಿದಾಟಗಳು, ಮನೆಗಳು, ಮನೆಗಳ ಗೋಡೆಗಳು, ಗೋಡೆಗಳ ಮರೆಗಳಲ್ಲಿ ಋತುಗಳಿಗೆ ಅಂಜಿಕೊಂಡು, ಪ್ರಕೃತಿಯ ಕೊಡುಗೆಗಳನ್ನು ನಿರಾಕರಿಸಿಕೊಂಡು ಇರುವ ಮನುಷ್ಯರು, ಒಳಗೆ ಸತ್ಯವಾಗಿರುವ ಬೆತ್ತಲೆಯನ್ನು ಸದಾ ಮುಚ್ಚಿಡಲು ಹೆಣಗಾಡುವ ಶಿಷ್ಟರು, ಮಂತ್ರಗಳು, ಆರಾಧನೆಗಳು,

ಮಾಟಗಳು; ಇವೆಲ್ಲಾ ನನಗೆ ಸೋಜಿಗ ಉಂಟುಮಾಡುವವು. ನನಗೆ ಏನೂ ಬೇಡ. ನಾನು ಇವುಗಳಿಗಾವುದಕ್ಕೂ ಸೇರಿದವನಲ್ಲ. ನಾನು ಮುಕ್ತನು, ಅನಂತನು, ಹೌದು–ಇಲ್ಲಗಳೆರಡನ್ನೂ ಮೀರಿರುವವನು. ಪಕ್ಷಪಾತವಿಲ್ಲದವನು. ನಾನು ದೇವತೆಯಲ್ಲ. ಆರ್ಯನಲ್ಲ. ಋಷಿಯಲ್ಲ. ನೀವು ಹೇಳುವ ಯಾವುದೇ ಚೌಕಟ್ಟಿಗೆ ಸೇರಿದವನಲ್ಲ. ನನ್ನನ್ನೇಕೆ ನಿಮ್ಮ ಪಕ್ಷ ವಹಿಸಲು ಕಾಡುವಿರಿ? ಈ ಜಗತ್ತಿನಲ್ಲಿ ಸೃಷ್ಟಿಯಂತೆಯೇ ಲಯವೂ ಇದೆ. ಬೆಳಕಿನಂತೆ ಕತ್ತಲೂ ಇದೆ. ಗಿರಿಗಳು ಇರುವಂತೆ ಕಣಿವೆಗಳಿವೆ. ಕ್ಷುಬ್ಧ ಸಾಗರಗಳಿವೆ, ಶಾಂತ ಸರೋವರಗಳಿವೆ. ಆಗ್ರಹವೆಂಬುದು ಇದೆ. ಶಾಂತಿ ಎಂಬುದು ಇದೆ. ಲಲಿತ ಕಲೆಯಿದೆ, ಮಲಿನ ಕಲೆಯಿದೆ. ಬೆಂಕಿ, ಗಾಳಿ, ನೀರು, ಪ್ರಾಣಿಗಳು, ಪಕ್ಷಿಗಳು, ಕೀಟಗಳು, ಹೂವುಗಳು, ಎಲೆಗಳು, ಶಬ್ಧಗಳು, ಮೌನಗಳು ಎಲ್ಲವೂ ಇದೆ! ಇದೆ! ಇದೆ! ಇರಲಿ, ಅವುಗಳೆಲ್ಲವೂ ಅವುಗಳ ಪಾಡಿಗೆ ಅವು ಇರಲಿ! ಇರುವುದನ್ನೆಲ್ಲಾ ನೋಡಿ. ಬರಿದೇ ನೋಡಿ. ಸಾಕ್ಷಿಯಾಗಿರಿ. ನೋಡುತ್ತಾ ನೋಡುತ್ತಾ ಅವುಗಳಲ್ಲಿ ಪ್ರವೇಶಿಸಿ. ಅವೂ ನೀವೂ ಒಂದೇ ಎಂಬುವ ಮೂಲ ಸತ್ಯವನ್ನು ಸಾಕ್ಷಾತ್ಕರಿಸಿಕೊಳ್ಳಿ. ಮುಕ್ತರಾಗಿ. ಅದು ಇರಬಾರದು ಇದು ಇರಬಾರದು ಎಂದು ತೀರ್ಮಾನಿಸಲು ನೀವು ಯಾರು? ಇದು ಇರಬೇಕೆಂದರೆ, ಎಲ್ಲವೂ ಇರಬಹುದು. ಇದು ಇರಬಾರದೆಂದರೆ ಯಾವುದೂ ಇರಬಾರದು. ಆ ಮಹಿಷ ಗಣವು ಇರಲೇ ಬಾರದು ಎಂಬುದು ಈ ಅಸ್ತಿತ್ವದ ಸತ್ಯವಾಗಬೇಕಾದರೆ, ನೀವೂ ಇರಬಾರದು." ಎಂದು ಶಿವನು ತನ್ನ ಮೊನಚಾದ ತ್ರಿಶೂಲವನ್ನು ಎತ್ತಿ ಇಂದ್ರನ ಕುತ್ತಿಗೆಗೆ ಇಟ್ಟು ಕೊಲ್ಲುವಂತೆ ಹಿಡಿದ.

ದೇವತೆಗಳೆಲ್ಲರೂ ಅಲ್ಲಿಂದ ಹಿಂದಿರುಗದೇ ಬೇರೆ ದಾರಿಯಿರಲಿಲ್ಲ.

ಸಾಮಾನ್ಯವಾಗಿ ಅಸುರರೆಲ್ಲ ರುದ್ರನಭಿಮಾನಿಗಳಾದ್ದರಿಂದ, ರುದ್ರನೇ ಅಂತಹ ಅಸುರನೊಬ್ಬನಿಗೆ ತಿರುಗಿಬಿದ್ದರೆ, ಆ ಅಸುರನ ಧೈರ್ಯ ಅರ್ಧ ಅಣಗುತ್ತದೆ. ರುದ್ರನೇ ಆ ಅಸುರನ ಸಂಹಾರ ಮಾಡುವುದರಿಂದ ಆ ಅಸುರನ ಮುಂದಿನ ಸಂತತಿಯೋ ಅಥವಾ ಆತನ ಕಡೆಯವರೋ ಸುರರ ಮೇಲೆ ಸೇಡು ತೀರಿಸಿಕೊಳ್ಳುವುದು ತಪ್ಪುತ್ತದೆ. ಅದು ಅವರ ಲೆಕ್ಕಾಚಾರ!

ಆದರೆ, ರುದ್ರನು ಒಪ್ಪಲಿಲ್ಲವೆಂದರೆ, ಅಸುರರನ್ನು ಮಣಿಸಲು ರುದ್ರನಂತವರೇ ಅಥವಾ ರುದ್ರನಿಗೆ ಸಂಬಂಧಿಸಿದವರೇ ಆಗಬೇಕು. ಅದು ಪಾರ್ವತಿ. ಈ ಹಿಂದೆಯೂ ಪಾರ್ವತಿ ರುದ್ರನು ನಿರಾಕರಿಸಿರುವ ಕಾರ್ಯವನ್ನು ಮಾಡುವ ಮೂಲಕ ತನ್ನ ಶಕ್ತಿ ಮೆರೆದಿದ್ದಳು.

ದೇವತೆಗಳು ನೇರವಾಗಿ ಕೈಲಾಸಕ್ಕೆ ಬಂದರು. ಪಾರ್ವತಿಯು ಶುಕ್ತಿಮತ್‌ನಲ್ಲಿ ನೆಲಸಿರುವುದನ್ನು ತಿಳಿದು ಖಿನ್ನರಾದರು.

"ರುದ್ರನಿಂದ ತಿರಸ್ಕರಿಸಲ್ಪಟ್ಟರೂ ಮತ್ತೆ ಕೈಲಾಸಕ್ಕೆ ಬಂದಿರುವುದು ಯಾವ ರೀತಿಯಲ್ಲಿ ದೇವತೆಗಳಿಗೆ ಉಚಿತವಾಗಿ ತೋರುವುದು?" ಎಂಬುದು ಭದ್ರನ ಪ್ರಶ್ನೆಯಾಗಿತ್ತು.

"ಹೇ ಗಣಸೋದರ ಭದ್ರಾ, ತಂದೆಯು ಮುನಿದನೆಂದು ತಾಯಿ ಇರುವುದ ಮರೆತು ಗೃಹತ್ಯಾಗ ಮಾಡುವುದು ಯಾವ ಮನೆ ಮಕ್ಕಳಿಗೂ ಯೋಗ್ಯವಲ್ಲ." ಎಂದನು ಇಂದ್ರ. "ನನ್ನ ಸ್ಥಾನವನ್ನು ಮಹಿಷನಾಕ್ರಮಿಸಿರಲು ನಾನು ಹೋಗುವುದಾದರೂ ಎಲ್ಲಿಗೆ? ನನ್ನ ಮೇಲೆ ದುರಾಗ್ರಹವಿರುವ ಅವನು, ನಾನು ಎಲ್ಲಿಗೇ ಹೋದರೂ ನನ್ನ ಹಿಡಿಯುತ್ತಾನೆ, ಸದೆ ಬಡಿಯುತ್ತಾನೆ. ಶಿವಭಕ್ತ ಅಸುರನಾದ ಅವನು ಕೈಲಾಸಕ್ಕಂತೂ ಬರಲಾರ. ಒಂದು ವೇಳೆ ಬಂದರೂ ಈ ರುದ್ರಸ್ಥಾನದಲ್ಲಿ ನನ್ನ ವಧೆ ಮಾಡಲಾರ."

ಮನೋಕ್ಷೋಭೆಯಿಂದ ತನ್ನಲ್ಲೇ ಮಾತನಾಡಿಕೊಳ್ಳುವಂತೆ ಭದ್ರನ ಕಿವಿಗೆ ಈ ಮಾತುಗಳನ್ನು ಹಾಕುತ್ತಾ ಪಾರ್ವತಿಯು ತನ್ನ ಶಿಶುವೆಂದು ಸ್ವೀಕರಿಸಿರುವ ಅಶೋಕ ಗಿಡದ ಮುಂದೆ ಕುಳಿತುಬಿಟ್ಟ. "ಹೇ ಜಗನ್ಮಾತೇ, ಕೆಟ್ಟ ಮಕ್ಕಳಿಗೂ ಒಳ್ಳೆಯ ತಾಯಿಯೇ ಆಗಿರುವ ಪಾರ್ವತಿಯೇ, ನೀನು ಈ ವಿಶ್ವದ ನಾಶದ ದೇವರಿಗೆ ಎಡೆಯಾಗಿ ಹೋಗುತ್ತಿದ್ದ ಅಶೋಕನನ್ನು ನಿನ್ನ ಮಗುವನ್ನಾಗಿ ಸ್ವೀಕರಿಸಿ ಅದಕ್ಕೆ ತಾಯಿಯಾಗಿ ಪುನರ್ಜನ್ಮವ ನೀಡಿರುವೆ. ಈ ಅಶೋಕನ ಸೋದರನಾದ ಇಂದ್ರನೂ ಲಯದ ಸ್ವಾಮಿಯ ಕೆಂಗಣ್ಣಿಗೆ ಗುರಿಯಾಗಿ ಲಯವಾಗುತ್ತಲಿರುವನು. ನಿಷ್ಪಕ್ಷಪಾತಳಾದ ತಾಯಿಯಾಗಿ ನೀನು ಬಂದು ನನಗೆ ಪುನರ್ಜನ್ಮ ನೀಡದೇ ಹೋದರೆ, ಪ್ರಳಯಾಧಿಪತಿಯ ಮನೆಯಲ್ಲೇ ನನ್ನ ಲಯವಾಗಿ ಹೋಗಲಿ." ಎಂದು ಪಾರ್ವತಿಯನ್ನು ಕೊಂಡಾಡುತ್ತಾ ಅಲ್ಲಿಯೇ ಉಳಿದ.

ದೇವತೆಗಳು ಮತ್ತು ಪುರೋಹಿತರು ತಮ್ಮ ಕಾರ್ಯ ಸಾಧಿಸಿಕೊಳ್ಳಲು ಹೀಗೆ ಹೊಗಳುವುದರಲ್ಲಿ ನಿಸ್ಸೀಮರು ಎಂದು ಭದ್ರನು ಅವರನ್ನು ಲಘುವಾಗಿ ಕಂಡರೂ, ಇಂದ್ರನು ಎಣಿಸಿದಂತೆ ಈ ಸುದ್ಧಿ ಭದ್ರನಿಂದನೇ ಪಾರ್ವತಿಗೆ ಮುಟ್ಟಿತು. ಹಾಗೆಯೇ ಪ್ರಯಾಗದಲ್ಲಿದ್ದ ಶಿವನ ಕಿವಿಯನ್ನೂ ತಲುಪಿತು.

"ವಿಸ್ತಾರವಾದ ವಿಶ್ವದಲ್ಲಿನ ವೈಶಾಲ್ಯದಲ್ಲಿ ನೆಲೆ ಕಾಣದವನು ಕೈಲಾಸವೆಂಬ ಪುಟ್ಟ ಗೂಡಿನಲ್ಲಿ ಅವನು ಏನು ಮಾಡುವನೋ!" ಎಂದು ನಕ್ಕ ರುದ್ರ ತನ್ನ ಸಾಧನಾದಿಗಳನ್ನು ಮುಂದುವರಿಸಿದ.

ಆದರೆ, ಅದೇ ರೀತಿ ಪಾರ್ವತಿಗೆ ಶುಕ್ತಿಮತ್‌ನಲ್ಲಿ ಇರಲಾಗಲಿಲ್ಲ. ಅಲ್ಲಿಂದ ಹೊರಟು ನೇರವಾಗಿ ದನು ಮತ್ತು ಧೂಮಾವತಿಯರೊಡನೆ ಕೈಲಾಸಕ್ಕೆ ಬಂದುಬಿಟ್ಟಳು. ಪಾರ್ವತಿಯು ಇಲ್ಲದಿದ್ದಾಗ ಭದ್ರನ ಕಿವಿಗೆ ಬೀಳುವಂತೆ ಅದೇನೇನು ನುಡಿಯಾಡಿದ್ದನೋ ಅದನ್ನೇ ಮತ್ತೆ ಮತ್ತಷ್ಟು ದೀನನಾಗಿ ಇಂದ್ರ ಹೇಳಿದ.

"ಹೇ ದೇವಿ, ನೀನು ಸೃಷ್ಟಿಯನ್ನು ಪಾಲಿಸುವ ಪ್ರಕೃತಿ. ರುದ್ರನು ಪ್ರಳಯಾಧಿಪತಿ. ನಾಶದ ದೇವರ ಆಗ್ರಹವನ್ನು ತಡೆಯಲು ಸಾಧ್ಯವಾಗುವುದು ನಿನಗೊಬ್ಬಳಿಗೇ ತಾಯಿ."

ದೇವತೆಗಳೆಲ್ಲರೂ ಇಂದ್ರನೊಡನೆ ಸೇರಿ ಅವಳನ್ನು ಹೊಗಳಿದರು.

ಪಾರ್ವತಿಯು ಶುಕ್ತಿಮತ್‌ನಿಂದ ಕೈಲಾಸಕ್ಕೆ ಹೊರಡುತ್ತಿದ್ದಂತೆ, ಭದ್ರನು ಈ ವಿಷಯವನ್ನು ರುದ್ರನಿಗೆ ತಲುಪಿಸಿದ.

"ಪ್ರಭೂ, ಪಾರ್ವತಿಯನ್ನು ತಮ್ಮ ದೀನ ಧ್ವನಿಗಳಿಂದ ದೇವತೆಗಳು ಒಲಿಸಿಕೊಳ್ಳುತ್ತಿದ್ದಾರೆ. ಒಡತಿ ಪಾರ್ವತಿಯು ಮನಕರಗಿ ಅವರ ಮನವಿಗೆ ಒಪ್ಪುವಂತೆ ಕಾಣುತ್ತಿದ್ದಾಳೆ." ಭದ್ರನು ತಿಳಿಸಿದ. "ಪ್ರಭೂ ತಮ್ಮಿಂದ ಒಡತಿಗೆ ಯಾವ ಸಂದೇಶವನ್ನು ಒಯ್ಯಲಿ?"

ಶಿವ ಏನೂ ಪ್ರತಿಕ್ರಿಯಿಸಲಿಲ್ಲ. ಆ ಮಹಿಷ ಗಣವು ಇರಲೇ ಬಾರದು ಎಂಬುದು ಈ ಅಸ್ತಿತ್ವದ ಸತ್ಯವಾಗಬೇಕಾದರೆ, ನೀವೂ ಇರಬಾರದು ಎಂದು ಇಂದ್ರನ ಕುತ್ತಿಗೆಗೆ ಗುರಿಯಿಟ್ಟ ತ್ರಿಶೂಲವನ್ನು ಭದ್ರನ ಕೈಗಿಟ್ಟು ತಾನು ತನ್ನ ಧ್ಯಾನಕ್ಕೆ ಹಿಂದಿರುಗಿದ.

ಶಿವನಿಲ್ಲದ, ಗುಣೇಶನಿಲ್ಲದ ಪಾರ್ವತಿಗೆ ಏನು ಹೇಳುವುದೆಂದೇ ತಿಳಿಯದಾಯ್ತು. ಮೌನವಾಗಿ ಮನೆಯ ಹಿಂದುಗಡೆ ನಡೆದು ತನ್ನ ಅಶೋಕ ಶಿಶುವಿನ ಬಳಿಯೇ ಕುಳಿತಳು. ಅದರ ಪಕ್ಕದಲ್ಲಿಯೇ ಹೂಗಳನ್ನು ಕಟ್ಟುತ್ತಿದ್ದ ಪಂಚಮಿಗೆ ಅಶೋಕಕ್ಕೆರೆಯಲು ಹಾಲು ತರಲು ಹೇಳಿದಳು. ಪಂಚಮಿ ಕಟ್ಟುತ್ತಿದ್ದ

ಹೂಮಾಲೆಯನ್ನು ಅಲ್ಲಿಯೇ ಬಿಟ್ಟು ಸ್ಥಾಲಿಯನ್ನು ಕೈಗೆತ್ತಿಕೊಂಡು ಹಾಲು ಕರೆಯಲು ಕೊಟ್ಟಿಗೆಯೊಳಗೆ ಹೋದಳು.

ಮನೆಯ ಮುಂಭಾಗದಲ್ಲಿ ಅವಳಿಗಾಗಿ ಕಾಯುತ್ತಿದ್ದ ದೇವತೆಗಳ ಮತ್ತು ಆರ್ಯ ಮುಖಂಡರ ಗುಂಪು ಶಿವನ ತ್ರಿಶೂಲವನ್ನು ಕೈಯಲ್ಲಿ ಹಿಡಿದುಕೊಂಡು ಬಂದ ಭದ್ರನ ಕಂಡು ದೇವತೆಗಳು ಒಬ್ಬರಿಗೊಬ್ಬರು ಮುಖ ನೋಡಿಕೊಂಡರು.

"ಏನಿದು ಭದ್ರ?" ಎಂದು ಇಂದ್ರ ಕೇಳಿದ.

"ನಿಮ್ಮ ಕೋರಿಕೆಗೆ ಶಿವನು ಪಾರ್ವತಿಗೆ ಕಳುಹಿಸಿರುವ ಸಂದೇಶ." ಎಂದು ನಿಲ್ಲದೆಯೇ ಪಾರ್ವತಿಯ ಬಳಿಗೆ ಬಂದ. ಪಂಚಮಿಯ ಹೂಕಟ್ಟುವ ಕೆಲಸವನ್ನು ತಾನು ಮುಂದುವರಿಸಿದ್ದ ಪಾರ್ವತಿಯು ಭದ್ರನ ಕೈಯಲ್ಲಿರುವ ಶಿವನ ತ್ರಿಶೂಲವನ್ನು ನೋಡಿ ಅಚ್ಚರಿಗೊಂಡಳು.

"ಏನಿದು ಭದ್ರ?"

"ಶಿವನು ನಿಮಗೆ ಕಳುಹಿಸಿರುವ ಸಂದೇಶ." ಭದ್ರ ತನ್ನ ಕೈಯಲ್ಲಿರುವ ತ್ರಿಶೂಲವನ್ನು ಅವಳ ಮುಂದೆ ಹಿಡಿದ. ಕೈಯಲ್ಲಿರುವ ಹೂಮಾಲೆಯನ್ನು ಕೆಳಗಿಟ್ಟು ಪಾರ್ವತಿ ಶಿವನ ತ್ರಿಶೂಲವನ್ನು ಕೈಗೆತ್ತಿಕೊಂಡಳು.

ಅಲ್ಲಿಗೇ ಬಂದ ದೇವತೆಗಳೆಲ್ಲರೂ ಹರ್ಷೋದ್ಗಾರ ಮಾಡಿದರು. "ಶಿವನೇ ನಿನಗೆ ತನ್ನ ಶಕ್ತಿಯನ್ನು ನೀಡಿದ್ದಾನೆ. ಅಸುರ ಸಂಹಾರಕ್ಕೆ ಒಪ್ಪಿಗೆ ನೀಡಿ ತನ್ನ ಶಕ್ತಿಯನ್ನೇ ನಿನಗೆ ಧಾರೆಯೆರೆದಿದ್ದಾನೆ." ಎಂದು ಇಂದ್ರನು ಪಾವರ್ತಿಗೆ ನಮಸ್ಕರಿಸಿ, ತನ್ನ ಕೈಯಲ್ಲಿದ್ದ ವಜ್ರಾಯುಧವನ್ನು ಅವಳ ಕೈಗಿತ್ತ. "ತಾಯೇ ನಾನೂ ನನ್ನ ಶಕ್ತಿಯನ್ನು ನಿನಗೊಪ್ಪಿಸುತ್ತಿದ್ದೇನೆ." ಅವನನ್ನೇ ಅನುಸರಿಸಿದ ದೇವತೆಗಳೆಲ್ಲರೂ ತಮ್ಮ ತಮ್ಮ ಆಯುಧಗಳನ್ನು ಅವಳಿಗೆ ಒಪ್ಪಿಸುತ್ತಾ ಜಯ ಜಯಕಾರ ಮಾಡಿದರು.

ಪಂಚಮಿ ಅಶೋಕ ಶಿಶುವಿಗೆ ಎರೆಯಲು ಸ್ಥಾಲಿಯಲ್ಲಿ ಹಾಲನ್ನು ತಂದಳು. ಅದನ್ನು ಸ್ವೀಕರಿಸಬೇಕಾಗಿದ್ದ ಪಾರ್ವತಿಯು ಕೈಯಲ್ಲಿ ತ್ರಿಶೂಲವನ್ನು ಹಿಡಿದು ಮುಂದೆ ನಡೆದಳು. ಅಶೋಕ ವೃಕ್ಷಕ್ಕೆ ಎರೆಯಬೇಕಾಗಿದ್ದ ಹಾಲಿನ ಮಡಿಕೆ ಪಂಚಮಿಯಲ್ಲಿಯೇ ಉಳಿಯಿತು.

ಶಿವ, ಪಾರ್ವತಿ ಮತ್ತು ಗುಣೇಶರಿಲ್ಲದ ಕೈಲಾಸದಲ್ಲಿ ಅಶೋಕ ಮತ್ತು ಪಂಚಮಿಯರನ್ನು ಬಿಟ್ಟು ಭದ್ರ ನಿಧಾನವಾಗಿ ಮತ್ತೆ ಪ್ರಯಾಗದ ಕಡೆಗೆ ನಡೆಯತೊಡಗಿದ. ಶಿವನಿಗೆ ಏನು ಹೇಳುವುದು ಎಂದೇ ತಿಳಿಯದಾಯ್ತು. ಏಕೋ ಅವನಿಗೆ ತಾನು ಏನನ್ನೂ ಹೇಳಲಾರೆ ಎಂದು ಅವನಿಗೆ ಅನ್ನಿಸಿತು.

ಆಕಾಶದಲ್ಲಿ ಮೇಘಗಳು ಆವರಿಸುತ್ತಿದ್ದವು. ಮೇಘಗಳ ಸಂದಣಿಯು ದಟ್ಟವಾಗುತ್ತಾ ಕಪ್ಪಾಗಿ ಗಾಢವಾಗತೊಡಗಿದವು. ಒಮ್ಮಿಂದೊಮ್ಮೆಲೇ ಧಾರಾಕಾರವಾಗಿ ಮಳೆ ಸುರಿಯಲಾರಂಭಿಸಿತು. ಸುರಿಯುವ ಮಳೆಯಲ್ಲಿ ನೆನೆಯುತ್ತಲೇ ಭದ್ರ ಪ್ರಯಾಗದ ಕಡೆ ನಡೆಯತೊಡಗಿದ. ದಾರಿಯಲ್ಲಿ ಪ್ರಯಾಗದಲ್ಲಿದ್ದ ನಂದಿಯು ಮತ್ತು ಇನ್ನಿತರ ಗಣಗಳು ಶಿವನ ಮುಂದಾಳತ್ವವಿಲ್ಲದೇ ಎತ್ತಲೋ ಹೋಗುತ್ತಿರುವುದನ್ನು ಕಂಡು ಅವರತ್ತ ಓಡಿದ.

"ನಂದಿ!"

"ಪ್ರಯಾಗದ ತ್ರಿವೇಣಿ ಸಂಗಮದ ಹೆಬ್ಬಂಡೆಯ ಮೇಲೆ ಶಿವನು ಊರ್ಧ್ವಪಾದದಲ್ಲಿ ನಿಂತು ನಮ್ಮೆಲ್ಲರನ್ನೂ ಕರೆದ ದಿಕ್ಕುಗಳಿಗೆ ಹೋಗೆಂದು ಅಪ್ಪಣೆಕೊಟ್ಟನು. ದೇವಗಣವಾಗಲಿ, ಆರ್ಯಬಣವಾಗಲಿ, ಅಸುರರ ಪಂಗಡವಾಗಲಿ, ನರರ ಸಂಕುಲವಾಗಲಿ, ಮುನಿಗಳ ತಂಡವಾಗಲಿ, ಯೋಧರ ಪಡೆಯಾಗಲಿ, ಯತಿಗಳ ವೃಂದವಾಗಲಿ, ನೃತ್ಯ–ಸಂಗೀತ ಕಲಾವಿದರ ಗೋಷ್ಠಿಯಾಗಲಿ; ಯಾವುವೂ ನಮ್ಮವಲ್ಲ. ಯಾವುದರಲ್ಲೂ ನಾವು ಹೊಂದುವುದಿಲ್ಲ. ಹೊಂದಲೂಬಾರದು. ಭೂಮಿಯ ಭೌತಿಕತೆಯಲ್ಲೊಂದು ಪಾದ, ಆಕಾಶದ ಅನಂತತೆಯಲ್ಲೊಂದು ಪಾದವಾಗಿ ಇಹಪರಗಳ ನಡುವೆ ಸೇತುವಾಗಿ, ಆ ಸೇತುವೆಯು ಅಸ್ತಿತ್ವದ ಅನಂತತೆಯ ಪ್ರವಹನೆಯಲ್ಲಿ ಲಯವಾಗಿ ಎರಡು ಒಂದಾಗಬೇಕು. ಒಂದು ಇಲ್ಲವಾಗಬೇಕು ಎಂದು ಹೇಳಿ ನಮ್ಮನ್ನು ಕಳುಹಿಸಿಬಿಟ್ಟ. ನಾವುಗಳೆಲ್ಲರೂ ಗಾಳಿಯು ತಳ್ಳಿದ ದಾರಿಯಲ್ಲಿ, ಸೆಳೆದುಕೊಳ್ಳುತ್ತಿರುವ ದಿಕ್ಕುಗಳಿಗೆ ಮುಖ ಮಾಡಿ ಉದ್ದೇಶರಹಿತವಾಗಿ ಜಂಗಮರಾಗಿದ್ದೇವೆ." ಎಂದು ನಂದಿ ಮುಂದೆ ನಡೆದ.

ಮಳೆಯ ರಭಸ ಕಡಿಮೆಯಾಯಿತು. ಭದ್ರ ಪ್ರಯಾಗದ ಕಡೆಗೆ ತನ್ನ ಕಾಲಿನ ವೇಗವನ್ನು ಹೆಚ್ಚಿಸಿದ.

ಕಣ್ಣಿನ ಗುಡ್ಡೆಗಳನ್ನು ಮೇಲಕ್ಕೆಳೆದುಕೊಂಡು, ರೆಪ್ಪೆಗಳನ್ನು ಮುಚ್ಚಿ, ನಾಲಗೆಯ ತುದಿಯನ್ನು ಅಂಗುಳಕ್ಕೆ ಏರಿಸಿಕೊಂಡು, ಗುದದ್ವಾರವನ್ನು ಒಳ್ಮುಖವಾಗಿ ಎಳೆದುಕೊಂಡು, ಬಲಗಾಲನ್ನು ಬಂಡೆಯ ಮೇಲಿರಿಸಿ ನಿಂತು, ಎಡಗಾಲನ್ನು ಸಮಾನಾಂತರವಾಗಿ ಮೇಲಕ್ಕೆತ್ತಿ ಪಾದವು ಮೇಲ್ಮುಖವಾಗಿರುವಂತಿರಿಸಿ ಕಪಾಲಕ್ಕೆ ಒತ್ತರಿಸಿಕೊಂಡು ಶಿವನು ಹೆಬ್ಬಂಡೆಯ ಮೇಲೆ ನಿಂತಿದ್ದನು.

ನಭದಲ್ಲಿ ಕವಿಯುತ್ತಿದ್ದ ಕರಿಮೋಡಗಳು ಆನೆಗಳು ಗುಂಪುಗುಂಪಾಗಿ ಚಲಿಸುತ್ತಿದ್ದಂತೆ ಕಾಣುತ್ತಿದ್ದವು. ಅವುಗಳ ಸಂದುಗಳಿಂದ ಅಥವಾ ಅಂಚುಗಳಿಂದ ಸೋರುತ್ತಿದ್ದ ರವಿಕಿರಣಗಳು ಹೆಬ್ಬಂಡೆಯ ಸುತ್ತಲೂ ಆವರಿಸಿದ್ದ ನೀರಿನ ಮೇಲಿನ ಅಲೆಗಳನ್ನು ಬೆಳ್ಳಿಯ ಮೆರುಗಿನಿಂದ ಹೊಳೆಯುವಂತೆ ಮಾಡಿದ್ದವು. ನೀರಿನ ಮೇಲಿನ ಅಲೆಗಳ ಮತ್ತು ಬಂಡೆಯ ಮೇಲಿನ ಬೆಳ್ಳಿಯ ಹೊಳಪು ಕ್ರಮೇಣ ಮಾಸುತ್ತಾ ಬೂದುಬಣ್ಣದ ಲಘು ಮೆರುಗಿಗೆ ತಿರುಗಿದ್ದವು. ಮೇಘಗಳು ಗಾಢವಾದಂತೆ ಸಂಜೆಯೇ ರಾತ್ರಿಯಾದಂತೆ ಕತ್ತಲಾಗತೊಡಗಿತ್ತು. ಲಘುವಾಗಿ ಮಿಂಚತೊಡಗಿತ್ತು.

ದೂರದಲ್ಲೆಲ್ಲಿಂದಲೋ ಉರುಳಿಕೊಂಡು ಬರುವಂತೆ ಗುಡುಗಿನ ಸದ್ದೊಂದು ಶಿವನ ಹಾದು ಹೋಯಿತು. ಅದನ್ನು ಕೇಳುತ್ತಾ ಮೆಲ್ಲನೆ ಕಣ್ಬಿಟ್ಟ ಶಿವನ ಹಿಂಬದಿಯೇ ಕೋಲ್ಮಿಂಚು ಹೊಳೆದು, ಹಿಂದೆಯೇ ಮತ್ತೊಂದು ಸಣ್ಣ ಗುಡುಗೊಂದು ಹಾದು ಹೋಯಿತು.

ಶಿವ ಊರ್ಧ್ವಮುಖವಾಗಿದ್ದ ಕಾಲನ್ನು ಕೆಳಕ್ಕಿಳಿಸಿ ಗುಡುಗಿನ ಸದ್ದಿಗಾಗಿ ಕಾದ, ಅದರ ಸದ್ದನ್ನು ಆನಂದಿಸಲು ಕಾಯುತ್ತಾ ನಿಂತ. ಆದರೆ, ಮಿಂಚಾಗಲಿ, ಗುಡುಗಾಗಲಿ ಮತ್ತೆ ಕೇಳಲಿಲ್ಲ. ಮೋಡಗಳು ಮಾತ್ರ ದಟ್ಟವಾಗುತ್ತಾ ಗಾಢವಾಗುತ್ತಾ ಕಪ್ಪಾಗತೊಡಗಿದ್ದವು. ಗುಡುಗಿನ ಸದ್ದನ್ನು ತಾನೇ ಹೊರಡಿಸಲು ಶಿವ ತನ್ನ ಡಮರುಗ ತೆಗೆದ.

ಡಮರುಗ 'ಡಮಡಮಡಮಡಮ' ನಾದ ಹೊರಡಿಸಲಾರಂಭಿಸಿತು. ಅವನ ಕಣ್ಣುಗಳ ಮಿಂಚು ಹೆಚ್ಚುತ್ತಿದ್ದಂತೆ, ಡಮರುಗ ನಾದವೂ ತನ್ನ ವೇಗವನ್ನು ಹೆಚ್ಚಿಸಿಕೊಂಡಿತು. ಡಮರುಗದ ನಾದಕ್ಕೆ ತಕ್ಕಂತೆ ಶಿವ ತನ್ನ ಪಾದಗಳನ್ನು ಘಟ್ಟಿಸತೊಡಗಿದ. ಎರಡೂ ಪಾದಗಳನ್ನು ಒಂದಾದ ಮೇಲೊಂದರಂತೆ ಆನಂದದಿಂದ ಘಟ್ಟಿಸುತ್ತಾ, ಬಂಡೆಯ ಮೇಲೆ ತಿರುಗತೊಡಗಿದ. ಅವನ ಜಟೆಗಳು ಅವನು ತಿರುಗುವ ವೇಗಕ್ಕೆ ಹಾರಾಡುತ್ತಾ, ಜ್ವಾಲೆಗಳಂತೆ ಏರಿಳಿಯುತ್ತಿದ್ದವು. ಅವನ ಕಾಲುಗಳಲ್ಲಿ ಕಟ್ಟಿದ್ದ ಜಂಗು ಅವನು

ಕುಣಿಯುತ್ತಾ ತಿರುಗುವ ರಭಸಕ್ಕೆ ನಾದ ಹೊರಡಿಸಲಾಗದೇ ಮೂಕವಾಗಿದ್ದವು. ಅವನು ಬಾಗುವ, ಏಳುವ ಬಿರುಸಿಗೆ ಕಟ್ಟಿದ್ದ ಚರ್ಮಾಂಬರವು ಕಿತ್ತು ದಿಗಂಬರನಾಗಿದ್ದ. ಅವನ ತಾಂಡವದ ಬಿರುಸ ಬಿಸಿಯಿಂದ ನೆತ್ತಿಯಿಂದ ಹುಟ್ಟಿದ್ದ ಬೆವರಿನ ಧಾರೆ ಮುಖದ ಮೇಲೆಲ್ಲಾ ಹರಿಯುತ್ತಾ, ತಲೆಯಿಂದ ಗಂಗೆಯೇ ಉಕ್ಕಿ ಹರಿದಂತೆ ಅವನ ಇಡೀ ದೇಹವನ್ನು ತೋಯಿಸುತ್ತಿತ್ತು.

ಅವನ ಡಮರುಗ ದನಿಗೆ ಬಹುದೊಡ್ಡ ದನಿಯ ಬಹುಮಾನ ಕೊಡಲು ಆಕಾಶದಲ್ಲಿ ಒತ್ತೊಟ್ಟಾಗಿದ್ದ ಮೇಘಗಳು ಸ್ಫೋಟಿಸಿದವು. ಅವನ ಬಿಸಿಯೇರಿದ ಮೈಯನ್ನು ತಂಪು ಮಾಡುವಂತೆ ಒಮ್ಮಿಂದೊಮ್ಮೆಲೇ ಆಕಾಶಗಂಗೆ ನೆಲಕ್ಕಿಳಿದಂತೆ ಮಳೆ ಸುರಿಯತೊಡಗಿತು.

ಶಿವನ ಕೈಯೊಳಗಿನ ಡಮರುಗದ ನಾದ ನಿಂತಿತು. ಶಿವನಿಗಿನ್ನು ಬೇಡದ ಚರ್ಮದ ಡಮರುಗವನ್ನು ನೀರಿನ ಅಲೆಗಳು ಹೊತ್ತೊಯ್ದವು. ಶಿವನ ತಾಂಡವ ನಿಲ್ಲಲಿಲ್ಲ. ಜಾರುತ್ತಾ, ಭ್ರಮರಿಗಳನ್ನು ಸುತ್ತುತ್ತಾ, ಪಾದಗಳನ್ನು ತಟ್ಟುತ್ತಾ, ಹಿಮ್ಮಡಿಗಳನ್ನು ನಾಟುತ್ತಾ, ಕೈಗಳನ್ನು ದಶ ದಿಕ್ಕುಗಳಿಗೂ ಚಾಚುತ್ತಾ, ಮಡಿಸುತ್ತಾ, ಎರಡೂ ಕೈಗಳನ್ನು ಸೇರಿಸುತ್ತಾ, ರೆಕ್ಕೆಗಳಂತೆ ಬಿಚ್ಚುತ್ತಾ, ನಾಗದಂತೆ ಹರಿಸುತ್ತಾ, ಹಗ್ಗಗಳಂತೆ ಎಸೆಯುತ್ತಾ ಕುಣಿಯುತ್ತಲೇ ಹೋದ.

ಹಸ್ತಗಳು ವರದವಾದವು, ಅಭಯವಾದವು, ಗಾಳಿಯನ್ನು ಅಪ್ಪಳಿಸಿತು, ವರ್ಷಪಾತವನ್ನು ಚಿಮ್ಮಿತು. ಆಕಾಶವನ್ನು ಕರೆಯಿತು, ಭೂಮಿಯನ್ನು ತಡೆಯಿತು. ಸುರಿಯುವ ಮಳೆಯೋ ಅವನಿಗೆ ಮಹಾ ಮಸ್ತಕಾಭಿಷೇಕವಾಗಿತ್ತು.

ರುದ್ರಪಾದಗಳ ಕೆಳಗೆ ಹೆಬ್ಬಂಡೆಗೆ ಅವನ ತಾಂಡವದ ಭಾರವು ಹೆಚ್ಚು-ಹೆಚ್ಚುತ್ತಾ ಕುಸಿಯುತ್ತಿತ್ತೋ ಎಂಬಂತೆ ನದಿಯಲ್ಲಿನ ನೀರಿನ ಮಟ್ಟವು ಏರುತ್ತಿತ್ತು. ಆಕಾಶದಲ್ಲಿನ ಮೋಡಗಳು ಅಲ್ಲಿಂದ ನೀರೆರಚಲಾರದೇ ತಾವೇ ಕೆಳಗಿಳಿದು ನೀರಾಗಿ ತ್ರಿವೇಣಿ ಸಂಗಮದಲ್ಲಿ ಅಲೆಗಳಾಗಿದ್ದವು. ನದಿ ನೀರ ಅಲೆಗಳೋ ಇಳಿಯುತ್ತಿದ್ದ ಮುಸುಲಧಾರೆಗಳ ಹಗ್ಗಗಳನ್ನು ಹಿಡಿದು ಮೇಲೇರುತ್ತಿದ್ದವು.

ಪೂರ್ಣ ಕತ್ತಲಾಗಿದ್ದರೂ ಒಂದಾದ ಮೇಲೊಂದರಂತೆ ಮಿಂಚುತ್ತಲೇ ಇದ್ದ ಆ ಬೆಳಕಿನಲ್ಲಿ ರುದ್ರನ ತಾಂಡವದ ಲಯವು ವಿಶ್ವಾಲಯದ ಪ್ರಳಯದಾಳದಲ್ಲಿ ಸಾಕ್ಷಿಗೆ ತೋರುತ್ತಿತ್ತು. ಆ ತಾಂಡವಕ್ಕೆ ತಾಡನವೊದಗಿಸಲು ಗುಡುಗುಗಳ ಮದ್ದಲೆಗಳು ಮೊಳುಗುತ್ತಲೇ ಇದ್ದವು. ಸಮುದ್ರವನ್ನು ಸೇರುವ ನದಿಗಳು ತಾವೇ ಸಮುದ್ರವಾಗಿದ್ದವು.

ಮಹಾ ಮಿಂಚೊಂದು ಮಿಂಚಿದಾಗ ಅಲ್ಲಿ ಹೆಬ್ಬಂಡೆಯೂ ಕಾಣಲಿಲ್ಲ. ಅದರ ಮೇಲೆ ತಾಂಡವವಾಡುತ್ತಿದ್ದ ರುದ್ರನೂ ಕಾಣಲಿಲ್ಲ.

ಊರ್ಧ್ವಪಾದದಲ್ಲಿ ಧ್ಯಾನಸ್ಥನಾಗಿದ್ದ ರುದ್ರನ ಸಮೀಪಿಸಲು ಹಿಂಜರಿದು ದೂರದಲ್ಲೇ ನಿಂತಿದ್ದ ಭದ್ರ ಕಂಡದ್ದನ್ನು ಭರಿಸಲಾಗದೇ ಭಯದಿಂದ ಪ್ರಭೂ ಎಂದು ಕೂಗಿದ್ದು ಸ್ವಯಂ ಅವನ ಕಿವಿಗೇ ಕೇಳಲಾಗಲಿಲ್ಲ ಮಹಾಗುಡುಗಿನ ಸದ್ದಿನಲ್ಲಿ.

ಲಯದಲ್ಲಿ ಲಯವಾಗಲು ಬೋಧಿಸಿದ್ದ ಯೋಗಿ ಪ್ರಳಯದಲ್ಲಿ ಪ್ರಳಯವಾಗಿದ್ದ.

ದಕ್ಷಿಣದ ಮಹಿಷೂರಿನಲ್ಲಿರುವ ಮಹಾಬಲಾದ್ರಿಯಲ್ಲಿ, ಪಾರ್ವತಿಯು ದೇವತೆಗಳು ಬಿಡದೇ ಕುಡಿಸಿದ ಸುರೆಯ ಮತ್ತಿನಲ್ಲಿ ಮಹಿಷಗಣದ ಅಸುರಾರಸನ ಕೊಂದಳು.

ಲಾವಣ್ಯದ ಗಿರಿಕನ್ಯೆಯು, ಆರ್ಯ ಮಾತೆಯು, ಸುಂದರ ಕಾಳಿಯು ಯುದ್ಧದಲ್ಲಿ ಬರ್ಬರವಾಗಿ ಅಸುರರನ್ನು ಕೊಚ್ಚಿ ರಕ್ತವನ್ನು ಕುಡಿದಳು. ಆ ಉನ್ಮಾದದಲ್ಲಿ ಶಿವನ ಮೇಲಿದ್ದ ತನ್ನ ಪ್ರೇಮವನ್ನು, ಢುಂಢಿಯ ಮೇಲಿದ್ದ ವಾತ್ಸಲ್ಯವನ್ನು, ಅಶೋಕದ ಮೇಲಿದ್ದ ಮಮತೆಯನ್ನು ಮರೆತಂತಾಗಿ, ಗರ್ಜಿಸುವ ಸಿಂಹದ ಕೇಸರವನ್ನು ಹಿಡಿದು ಮಹಿಷೂರಿನ ಆಗ್ನೇಯಕ್ಕಿರುವ ದುರ್ದರವೆಂಬ ಬೆಟ್ಟದ ಕಾಡುಗಳಲ್ಲೆಲ್ಲೋ ಮರೆಯಾಗಿಬಿಟ್ಟಳು. ಅದನ್ನು ಢುಂಢಿಗೆ ಹೇಳಲೆಂದೇ ಉಸಿರು ಹಿಡಿದಿದ್ದ ದನು ಶುಕ್ತಿಮತ್‌ಗೆ ಬಂದು ವಜ್ರನಿಗೆ ವರದಿಯೊಪ್ಪಿಸಿ ಮನೋಭಾರದಿಂದ ಮಾನಸಸರೋವರದಲ್ಲಿ ಮುಳುಗಿ ತನ್ನ ಒಡತಿಯನ್ನು ಸೇರಿದ್ದಳು.

ಲಯದಲ್ಲಿ ಲಯವಾದ ಮಹಾದೇವನ, ಪ್ರಕೃತಿಯಲ್ಲಿ ಪ್ರಕೃತಿಯಾಗಿಹೋದ ಪಾರ್ವತಿಯ ವೃತ್ತಾಂತವನ್ನು ಅವರ ಉತ್ತರಾಧಿಕಾರಿಯಾದ ಢುಂಢಿಗೆ ಹೇಳಲೆಂದು ಅಂತಹ ಜಲಪ್ರಳಯದಲ್ಲೂ ಭದ್ರ ಮತ್ತು ವಜ್ರರು ಮರಣ ಮೃದಂಗದ ನಾದಕ್ಕೆ ಕಿವುಡಾಗಿ, ಆಲದ ಮರಗಳು ಉರುಳಿದರೂ, ಹೆಣಗಳ ರಾಶಿಗಳಲ್ಲಿ ಗರಿಕೆಗಳಂತೆ ಜೀವಂತವಾಗಿ ಕಾದಿದ್ದರು.

ಇವರು ಕಳುಹಿಸಿದಂತಹ ಈ ಸುದ್ದಿಯನ್ನು ಸಂಪೂರ್ಣವಾಗಿ ತಿಳಿದ ವದೀರಜ್ಜ ಈ ಪ್ರಳಯದ ಸ್ಥಳಕ್ಕೆ ಕಳುಹಿಸದೇ ಢುಂಢಿಯನ್ನು ತಮ್ಮಲ್ಲೇ ಇಟ್ಟುಕೊಳ್ಳುವ ಉದ್ದೇಶ ಹೊಂದಿದ್ದೇ ಅವನನ್ನು ತಡೆಯಲು ಮುಖ್ಯ ಕಾರಣವಾಗಿತ್ತು. ಆರ್ಯರ ರಾಜಕೀಯವು ಶಿವ ಪಾರ್ವತಿಯರನ್ನೇ ಬಿಡದಿರುವಾಗ ಢುಂಢಿಯಂತಹ ಅಮಾಯಕನನ್ನು ಬಿಟ್ಟಾರೆಯೇ ಎಂಬುದು ಅವನ ಆಲೋಚನೆಯಾಗಿತ್ತು.

ಮಾನಸ ಸರೋವರದ ಪ್ರೇತತಂಪಿನಲ್ಲಿ ಢುಂಢಿ ಮರಗಟ್ಟಿಹೋಗಿದ್ದ. ಕಣ್ಣುಗಳಲ್ಲಿ ನೀರು ಬೀಳಲಾರದೇ ಸ್ಫಟಿಕವಾಗಿತ್ತು. ಅವನ ಕಣ್ಣುಗಳಲ್ಲಿ ನರ್ತಿಸುತ್ತಿದ್ದ ಅವನ ತಾಯಿ ಪಾರ್ವತಿ ವಿಗ್ರಹವಾಗಿ ತಣ್ಣಗೆ ಕೊರೆಯುತ್ತಿದ್ದಳು. ಕೊಟ್ಟ ವಚನವನ್ನು ಮುರಿದವಳನ್ನು ಪ್ರಶ್ನಿಸಲು ಹೋಗುವುದೆಲ್ಲಿ? ತಾನು ಕೊಟ್ಟ ಮಾತನ್ನು ಉಳಿಸಿಕೊಂಡಿರುವುದ ಪ್ರಶಂಸೆ ಪಡೆಯಲು ಕೇಳುವುದೆಲ್ಲಿ? ಶಿವನು ತಾನು ತನ್ನಲ್ಲಿ, ಪಾರ್ವತಿಯೂ ತಾನು ತನ್ನಲ್ಲಿ ಒಂದಾಗಿ ತನ್ನ ಬಿಟ್ಟಿರುವುದೆಲ್ಲಿ? ಒಳಗಿರುವ ಭಾವಗಳನ್ನೆಲ್ಲಾ ಬಾರದ ಭಾಷೆಯನ್ನು ಕಲಿತು ಒಪ್ಪಿಸುವ ಮುನ್ನವೇ ಕಿವುಡಾದ ಅವರೀರ್ವರನೂ ಕಾಣುವುದೆಲ್ಲಿ?

ಢುಂಢಿಯ ಶಿರ ನಡುಗಿತು. ಹೆಪ್ಪುಗಟ್ಟಿದ್ದ ಕಣ್ಣೀರು ಧುಮುಕಿಬಿಟ್ಟಿತು. ತೆರೆದಿದ್ದ ಕೆಂಗಣ್ಣುಗಳಲ್ಲಿ ಯಾವುದನ್ನೂ ನೋಡಲಾಗದ ಕತ್ತಲಾವರಿಸಿತು. ಮಡುಗಟ್ಟಿದ್ದ ಭಾವವು ಭಾಷೆಯ ಒಡ್ಡುಗಳನ್ನು ಒಡೆದು ಹೊರಕ್ಕೆ ಪ್ರವಹಿಸಿತು. ತನ್ನ ಕೈಯಲ್ಲಿದ್ದ ಕೊಡಲಿಯನ್ನು ಬೀಸುತ್ತಾ, ಗಾಳಿಯಲ್ಲಿ ಕಾಣದವರ ಶಿರಗಳನ್ನು ಕತ್ತರಿಸುತ್ತಾ, ಆರ್ಭಟಿಸುತ್ತಾ, ಜೋರಾಗಿ ಕೂಗುತ್ತಾ ಮಾನಸ ಸರೋವರದಲ್ಲಿ ನುಗ್ಗಿದ. ಅವನ ಅಳುವಿನ ಹನಿಗಳನ್ನು ಸರೋವರವು ನುಂಗಿತು.

ಢುಂಢಿಯ ಭಾವಾವೇಶಕ್ಕೆ ಬರಿದೇ ಸಂಕಟದ ಸಾಕ್ಷಿಯಾಗದೇ ಉಳಿದವರಿಗೆ ಬೇರೆ ಮಾರ್ಗವಿರಲಿಲ್ಲ.

*

ವಾಮದೇವರು ಸೂಚಿಸಿದಂತೆ ಅವರು ರಚಿಸಿದ ಮಂಡಲದ ಮೇಲೆ ಢುಂಢಿಯನ್ನು ಮಲಗಿಸಲಾಗಿತ್ತು. ಅಲ್ಲಿ ಢುಂಢಿ ಮತ್ತು ವಾಮದೇವರ ಹೊರತಾಗಿ ಯಾರೂ ಇರಲಿಲ್ಲ.

"ಶಿವನು ಊರ್ಧ್ವಗಾಮಿಯಾಗಿ ಹೊರಟು ಲಯದಲ್ಲಿ ಲಯವಾದ. ಪಾರ್ವತಿಯು ಅಧೋಗಾಮಿಯಾಗಿ ಹರಿದು ಈ ಧರೆಯ ಪ್ರಕೃತಿಯಲ್ಲಿ ಪ್ರಕೃತಿಯಾದಳು. ಆದರೆ ಶಿವನು ಮೇಲಿಂದ ಕೆಳಗೆ ಬಾಗುತ್ತಾನೆ. ಪಾರ್ವತಿಯು ಕೆಳಗಿಂದ ಮೇಲೇಳುತ್ತಾಳೆ. ಹಾಗೆ ಮತ್ತೆ ಅವರಿಬ್ಬರ ನಡುವೆ ಆದ ಐಕ್ಯದಲ್ಲಿ ಶಕ್ತಿಯಾದರು. ದೇಹಗಳು ಒಂದಾದರೆ ಅದು ಮಿಲನ. ಚೈತನ್ಯಗಳು ಒಂದಾದರೆ ಅದು ಐಕ್ಯ.

ಹೇ ಢುಂಢೀರಾಜ, ಹೇ ಗಣಪತಿ, ನೀನು ಈ ಇಬ್ಬರ ನಡುವೆ ಸೇತುಸ್ಥಿತಿಯಾಗಿರುವೆ. ನಿನ್ನಲ್ಲೇ ಇಬ್ಬರೂ ಇದ್ದಾರೆ. ಅವರಿಬ್ಬರನ್ನೂ ಒಂದಾಗಿಸಲು ನಡುವಿನ ಭೌತಿಕ ಸೇತುವೆಯು ಕರಗಬೇಕು. ಹೌದು ಢುಂಢಿ, ಅವರಿಬ್ಬರ ನಡುವಲ್ಲಿ ಕರಗಿ ಬರಿದಾಗಲು ನೀನು ಸಮ್ಮತಿಸಬೇಕು. ದಯಮಾಡಿ ಸಮ್ಮತಿಸು. ಕರಗುವುದೇ, ಬರಿದಾಗುವುದೇ ಮುಕ್ತಿ. ದಯಮಾಡಿ ಮುಕ್ತನಾಗು ಢುಂಢಿ." ವಾಮದೇವ ಮಹರ್ಷಿಗಳು ಕೈ ಮುಗಿದು ಬೇಡಿಕೊಂಡರು.

## ಅಧ್ಯಾಯ 20 ದಕ್ಷಿಣೆ

ಮಂಡಲದ ಮೇಲೆ ಮಲಗಿದ್ದ ಢುಂಢಿಯ ಎದುರಿಗೆ ವಾಮದೇವರು ಒಂದು ಯಜ್ಞಕುಂಡವನ್ನು ನಿರ್ಮಿಸಿದರು. ಢುಂಢಿಯು ಉಪಯೋಗಿಸುತ್ತಿದ್ದ ಘಾತುಕ ಕೊಡಲಿ, ಅಂಕುಶ, ಸುರಪಾತ್ರೆ, ಪಾಶಗಳು ಮತ್ತು ಮೋದಕಗಳನ್ನು ತರಿಸಿದರು. ಢುಂಢಿಯ ತೆರೆದ ಕಣ್ಣುಗಳ ಮುಂದೆ ಆ ಎಲ್ಲಾ ವಸ್ತುಗಳನ್ನು ಇಟ್ಟರು.

*

ಗವುಡವೋ, ಸುರೆಯೋ, ಸೋಮವೋ ಏನಾದರೂ ಸರಿ ಗಂಟಲಿಗೆ ಸುರಿದುಕೊಳ್ಳಲೇ ಬೇಕು ಢುಂಢಿಗೆ. ಊಟವಿಲ್ಲದಿದ್ದರೂ ಸಹಿಸಿಕೊಳ್ಳುತ್ತಿದ್ದ ಅವನು ಅವನ್ನು ತಂದಿರಿಸದಿದ್ದರೆ ಮಾರನಿಗೂ, ಆಸುರನಿಗೆ ಹೊಡೆದುಬಿಡುತ್ತಿದ್ದನು. ಕುಂಭಿಯು ಸಂಪೂರ್ಣವಾಗಿ ಢುಂಢಿಗೆ ಸುರೆ ನೀಡುವವನಾಗಿ ನೇಮಕವಾಗಿಬಿಟ್ಟ. ಢುಂಢಿ ಅದು ಏನೆಂದೂ ಕೂಡ ಕೇಳದೇ ಬರಿದೇ ಸೇವಿಸುತ್ತಿದ್ದ.

ನಾಗಲೋಕದವರು ಸುಮುಖೇಶ್ವರನ ಮತ್ತು ಭದ್ರನ ಮೇಲ್ವಿಚಾರಣೆಯಲ್ಲಿ ತಮ್ಮ ವ್ಯವಸ್ಥೆಯನ್ನು ಮತ್ತೆ ಕಟ್ಟಿಕೊಳ್ಳುತ್ತಿದ್ದರು. ಢುಂಢಿ ನಾಗಲೋಕದ ಅಂಜನಾ ಗಿರಿಯಲ್ಲಿಯೇ ಈಗೀಗ ಹೆಚ್ಚು ಇರತೊಡಗಿದ್ದು. ಕೈಲಾಸಕ್ಕಾಗಲಿ, ಶುಕ್ತಿಮತ್‌ಗಾಗಲಿ ಅಥವಾ ಮಾನಸ ಸರೋವರಕ್ಕಾಗಲಿ ಹೋಗಲು ಇಷ್ಟಪಡುತ್ತಿರಲಿಲ್ಲ. ಕೈಲಾಸದಲ್ಲಿ ಮತ್ತು ಶುಕ್ತಿಮತ್‌ನಲ್ಲಿ ಗಜಾರಣ್ಯಗಳಿರುವುದರಿಂದ ಅಗತ್ಯವಿರುವಾಗ ಸುಮುಖೇಶ್ವರರ ಬಲವಂತಕ್ಕೆ ಹೋಗುತ್ತಿದ್ದ. ಹಾಗೆ ಹೋದರೂ ಹೆಚ್ಚು ಕಾಲ ಅಲ್ಲಿ ತಂಗುತ್ತಿರಲಿಲ್ಲ.

ಪಾರ್ವತಿಯ ನಿರ್ಗಮನದ ತರುವಾಯ ಪಂಚಮಿಯನ್ನೋ ಅಥವಾ ಧೂಮಾವತಿಯನ್ನೋ ಶಕ್ತಿಗಣಕ್ಕೆ ಅಧಿಪತಿಯನ್ನಾಗಿ ಮಾಡುವ ಪ್ರಸ್ತಾಪವನ್ನು ಸುಮುಖೇಶ್ವರರು ಢುಂಢಿಯ ಮುಂದಿಟ್ಟರು. ಪಂಚಮಿಯು

ತಾನು ಕೈಲಾಸವನ್ನು ಬಿಟ್ಟು ಬರುವುದಿಲ್ಲವೆಂದಳು. ಪಾರ್ವತಿಯ ವೃಕ್ಷಶಿಶು ಅಶೋಕದೊಂದಿಗೆ ನೂರಾರು ಮರಗಳಾಗುವಂತಹ ಸಸಿಗಳನ್ನು ನೆಡುತ್ತಿರುವ ಕೈಂಕರ್ಯದಲ್ಲಿ ತೊಡಗಿರುವುದರಿಂದ ಎಲ್ಲಿಗೂ ಬರಲಾಗದೆಂದು ಹೇಳಿ ನಾಯಕಿಯ ಪಟ್ಟವನ್ನು ನಿರಾಕರಿಸಿದಳು. ಹಾಗಾಗಿ ಧೂಮಾವತಿಯು ಶಕ್ತಿಗಣದ ನಾಯಕಿಯಾಗಿ ಅಭಿಷಕ್ತಳಾದಳು.

ಸೋಮನಾಥದಲ್ಲಿ ಭದ್ರನು ಗಣಾಧಿಪತಿಯಾಗಿ ಭದ್ರೇಶ್ವರನಾದನು. ವಜ್ರನು ಹೆಚ್ಚುಹೆಚ್ಚಾಗಿ ಕೈಲಾಸದಲ್ಲಿರುವ ಮುನಿಗಳ ಸಾಧನೆಗಳನ್ನು ಹೆಚ್ಚು ಗಮನಿಸುತ್ತಿದ್ದನು. ಮಾತಂಗ ಗಣದ ನಿರ್ವಹಣೆಗಿಂತ ಹೆಚ್ಚಾಗಿ ಮುನಿಗಳ ಜೊತೆ ತಪಶ್ಚರ್ಯೆಗಳಲ್ಲಿ ಆಸಕ್ತಿ ತಳೆದ ವಜ್ರನು ಕಾಲಕ್ರಮೇಣ ವಜ್ರಮುನಿಯೆಂದೆನಿಸಿದ. ವಜ್ರಮುನಿಯು ನಿಧಾನವಾಗಿ ಢುಂಢಿಯನ್ನು ಕಾಣಲು ಬರುವುದನ್ನೂ ನಿಲ್ಲಿಸಿಬಿಟ್ಟ.

ಮಾರ, ಆಸುರ ಮತ್ತು ಇತರರೇ ಮಾತಂಗ ಗಣವನ್ನು ಸಂಪೂರ್ಣ ಗಮನಿಸುತ್ತಿದ್ದದ್ದು. ತನ್ನ ಗೆಳೆಯ ವಜ್ರನು ಗಣವನ್ನು ನಿರ್ಲಕ್ಷಿಸಿದ ಕಾರಣಕ್ಕೆ ಕೋಪಗೊಂಡ ಢುಂಢಿಯು ಒಂದು ದಿನ ತಾನೇ ಕೈಲಾಸದ ಗಜಾರಣ್ಯಕ್ಕೆ ಬಂದ. ಕಂದಮೂಲಗಳನ್ನು ಮಣ್ಣಿನಿಂದ ತೆಗೆದು ತೊಳೆಯುತ್ತಿದ್ದ ವಜ್ರಮುನಿಯನ್ನು ಗದರಿಸಿ ಕೇಳಿದ. “ವಜ್ರಾ, ನಿನಗೇನಾಯ್ತು? ನೀನು ಮಾಡಬೇಕಾದ ಕೆಲಸ ಇದಲ್ಲ. ಮೊದಲು ನಡೆ, ನಿನ್ನ ಅಂಕುಶವನ್ನು ಹಿಡಿ. ನಡೆ, ನೀನಿಲ್ಲದೇ ಮಾತಂಗಗಣವೆಲ್ಲಿಯದು?” ಹಾಗೆಂದರೂ, “ಬಾರೋ...” ಎಂದು ಅವನು ಕರೆದ ರೀತಿಯಲ್ಲಿ ಅಧಿಕಾರಕ್ಕಿಂತ ಗೆಳೆತನದ ಸಲುಗೆಯಿತ್ತು.

ವಜ್ರಮುನಿಯು ನಗುತ್ತಾ, “ನಾನು ಎಲ್ಲಿಗೂ ಹೋಗಿಲ್ಲ ಢುಂಢಿ, ಇಲ್ಲೇ ಇದ್ದೇನೆ. ಅಂಕುಶವಿಲ್ಲದೇ ಆನೆಗಳೊಂದಿಗೆ ಮಾತಾಡಲು ಯತ್ನಿಸುತ್ತಿದ್ದೇನೆ. ಪಾಶಗಳಿಲ್ಲದೇ ಅವುಗಳನ್ನು ನನ್ನೊಡನೆ ಇರಿಸಿಕೊಳ್ಳಲು ಆಶಿಸಿದ್ದೇನೆ. ನಿನ್ನ ಬಿಟ್ಟು, ಈ ಮಾತಂಗವನ್ನು ಬಿಟ್ಟು ನಾನೆಲ್ಲಿಗೆ ಹೋಗಲಿ? ಹಾಗೆ ಹೋದರೂ ನೀವು ನನ್ನನ್ನು ಬಿಡುವರೇನು?” ಎಂದ.

“ಹಾಗಾದರೆ, ಸರಿ, ನೀನು ಏನಾದರೂ ಮಾಡಿಕೋ. ಸುಮುಖೇಶ್ವರರು ಇನ್ನೂ ಬದುಕಿದ್ದಾರೆ. ಅವರೂ ಇಲ್ಲವಾಗುವ ಮುನ್ನವೇ ನಿನಗೆ ಕೈಲಾಸದ ಗಜಾರಣ್ಯದ ಅಧಿಕಾರ ವಹಿಸಲು ಅವರನ್ನು ಕೇಳುತ್ತೇನೆ.” ಢುಂಢಿಯು ಸುಮುಖೇಶ್ವರರಿಗೆ ಹೇಳಿ ವಜ್ರಮುನಿಗೆ ಕೈಲಾಸದಲ್ಲಿರುವ ಗಣಗಳ ಮತ್ತು ಗಜಾರಣ್ಯದಲ್ಲಿರುವ ಮಾತಂಗಗಣದ ಅಧಿಕಾರವನ್ನು ನೀಡಿ ಪಟ್ಟ ಕಟ್ಟಿದರು. ವಜ್ರಮುನಿಯು ವಜ್ರಮುನೇಶ್ವರನಾದ.

ಇಷ್ಟಾದ ಮೇಲೆ ಢುಂಢಿಯು ಅಂಜನಾಗಿರಿಯನ್ನು ಬಿಟ್ಟು ಹೊರಗೆಲ್ಲೂ ಹೋಗುತ್ತಿರಲಿಲ್ಲ. ನಾಗಬಣದ ನಾಗರು ಸದಾ ಇವನೊಡನೆ ಬಂದಿರುತ್ತಿದ್ದರು. ಅವರ ಕುಣಿತ, ಅವರು ಮಾಡುವ ಅಡುಗೆಗಳು, ಅವರ ಕ್ರೀಡೆಗಳೆಂದರೆ ಢುಂಢಿಗೆ ಬಹುಪ್ರಿಯವಾಗಿತ್ತು. ಈ ಮಧ್ಯೆ ಆರ್ಯರ ಮುಖಂಡರಾಗಲಿ, ದೇವತೆಗಳಾಗಲಿ, ಬೇರೆ ಯಾರೇ ಜನರಾಗಲಿ ಇವನನ್ನು ಕಾಣಲು ಬರಲಿಲ್ಲ. ಹಾಗೊಂದು ವೇಳೆ ಬಂದರೂ ಆಸುರ ಮತ್ತು ಮಾರರು ದ್ವಾರದಲ್ಲಿಯೇ ತಡೆದು ಹಿಂದಕ್ಕೆ ಕಳುಹಿಸಿ ಬಿಡುತ್ತಿದ್ದರು.

ಢುಂಢಿಯನ್ನು ಎಷ್ಟೋ ವರ್ಷಗಳ ಕಾಲ ಯಾರೂ ನೋಡಲು ಸಾಧ್ಯವಾಗಲೇ ಇಲ್ಲ. ಅಂಜನಾಗಿರಿಯಲ್ಲಿ ಮಾತಂಗರಿಗೆ ಬೇಕಾದುದೆಲ್ಲಾ ಒದಗುತ್ತಿತ್ತು. ಆಸುರ, ಕುಂಭಿ, ಮಾರಾದಿ ಯುವ ಮತ್ತು ನಡುವಯಸ್ಸಿನ ಮಾತಂಗರು ನಾಗ ಕನ್ನಿಕೆಯರೊಡನೆ ಕೂಡಿಕೆಗಳನ್ನಿಟ್ಟುಕೊಂಡು, ಹಳೆಯ ಮಾತಂಗರೊಡನೆ ಗಜ

ಕ್ರೀಡೆಗಳನ್ನು ಆಡಿಕೊಂಡು ಸುಖವಾಗಿದ್ದರು. ಸುಮುಖೇಶ್ವರರು ಕಾಲವಾದ ಮೇಲೆ ಢುಂಢಿ ಕೈಲಾಸ, ಸೋಮನಾಥ, ಪ್ರಯಾಗ, ಶುಕ್ತಿಮತ್‌ಗಳಿಗೆ ಹೋಗಿಬರುತ್ತಿದ್ದ. ಇತ್ತೀಚೆಗೆ ಸಹ್ಯಾದ್ರಿಯ ದಕ್ಷಿಣ ಭಾಗದ ಮಲಯದಲ್ಲಿರುವ ಆಸಕ್ತಿಯನ್ನೂ ತೋರುತ್ತಿದ್ದ.

ಭದ್ರೇಶ್ವರನು ಸೋಮನಾಥ ಮತ್ತು ಪ್ರಯಾಗಗಳಲ್ಲಿಯೇ ತನ್ನ ಸಾಧನೆಗಳನ್ನು ಮಾಡಿಕೊಂಡಿರುತ್ತಿದ್ದರಿಂದ ಬಹುಪಾಲು ರುದ್ರಗಣ ಆ ಭಾಗದಲ್ಲಿಯೇ ನೆಲೆಸಿತ್ತು. ಬ್ರಹ್ಮಾವರ್ತವೋ, ಆರ್ಯಾವರ್ತವೋ ಅದಾವುದನ್ನೂ ಶಿವನಂತೆಯೇ ಇವರೂ ಗಣಿಸುತ್ತಿರಲಿಲ್ಲ. ಆದರೆ, ಪ್ರಯಾಗದ ತ್ರಿವೇಣಿ ಸಂಗಮದಲ್ಲಿ ಕೂಡುತ್ತಿದ್ದ ರುದ್ರರು ಕೆಲವೊಮ್ಮೆ ಅಹೋರಾತ್ರಿ ತಾಂಡವಾದಿಗಳನ್ನು ಮಾಡುತ್ತಾ ಸಮಾಧಿಗಿಳಿಯುತ್ತಿದ್ದರು. ಹಟಯೋಗಿಗಳೂ ಅಲ್ಲಿ ಸೇರಿ ತಮ್ಮ ತಪಸ್ಸನ್ನು ಇತರ ಯೋಗಿಗಳ ಕೂಡ ಮಾಡುತ್ತಿದ್ದರು.

ಅಂಜನಾಗಿರಿಯಲ್ಲಿ ಒಮ್ಮೆ ಢುಂಢಿ ತನ್ನ ನೆಚ್ಚಿನ ಗಜಾರೋಹಣ ಮಾಡುತ್ತಿದ್ದ. ಅಲ್ಲಿಯೇ ಅನತಿ ದೂರದಲ್ಲಿ ಮಾತಂಗರಲ್ಲಿ ಹಲವರು ಬೇರೆ ಅರಣ್ಯಗಳಿಂದ ಹೊಸದಾಗಿ ಸೇರ್ಪಡೆಯಾಗಿದ್ದ ಆನೆಗಳನ್ನು ಪಳಗಿಸುತ್ತಿದ್ದರು. ಅಂಜನಾಗಿರಿಯ ಕಣಿವೆಯಲ್ಲಿ ಆನೆಗಳನ್ನು ಒತ್ತೊಟ್ಟಾಗಿ ಮತ್ತು ಸಾಲಾಗಿ ನಿಲ್ಲಲು ಕಲಿಸುತ್ತಿದ್ದರು. ಅವುಗಳಲ್ಲಿ ಕೆಲವು ಸಲಗಗಳು ಸುಲಭವಾಗಿ ಮಾತುಕೇಳದೇ ತುಡುಗುತನ ಮಾಡುತ್ತಿದ್ದವು.

ದೂರದಲ್ಲಿ ಹಲವು ಕುದುರೆಗಳು ಕೆನೆಯುತ್ತಾ, ಕೊಂಬು ಕಹಳೆಗಳೊಡನೆ ಸದ್ದು ಮಾಡುತ್ತಾ ಗುಂಪೊಂದು ಬರುತ್ತಿತ್ತು. ಇದರಿಂದ ಬೆಚ್ಚಿದ ಆನೆಗಳು ಸಾಲು ತಪ್ಪಿ ದಿಕ್ಕಾಪಾಲಾಗಿ ಓಡತೊಡಗಿದವು. ಇದನ್ನು ಕಂಡು ಕೆರಳಿದ ಢುಂಢಿ ಈ ರಾದ್ಧಾಂತಕ್ಕೆ ಕಾರಣವಾದ ಆ ಅಶ್ವಸಮೂಹವಾವುದು ಎಂದು ನೋಡಲು ತನ್ನ ಆನೆಯನ್ನು ಕಣಿವೆಯ ಮಾರ್ಗಕ್ಕೆ ಇಳಿಸಿದ.

ಸುರಪಡೆಯು ಇಂದ್ರನ ನೇತೃತ್ವದಲ್ಲಿ, ಬಹು ವೀರಾವೇಶದಿಂದ ಕಹಳೆಗಳನ್ನು ಊದುತ್ತಾ ಮತ್ತು ನಗಾರಿಗಳನ್ನು ಬಡಿಯುತ್ತಾ ವಿವಿಧ ರಥಗಳಲ್ಲಿ ನಡೆಯುತ್ತಿದ್ದರು.

ಮಾರ್ಗದಲ್ಲಿ ಆನೆಯ ಮೇಲೆ ಕುಳಿತು ಎದುರಾದ ಢುಂಢಿಯನ್ನು ನೋಡಿದರು. ಅವರಲ್ಲಿ ಹಲವರಿಗೆ ಢುಂಢಿಯನ್ನು ನೋಡಿ ಪರಿಚಯವಿರುವುದಾದರೂ ಆಗ ಗುರುತಿಸಲಿಲ್ಲ.

"ಯಾರವನು, ದಾರಿಬಿಟ್ಟು ಅತ್ತ ಸರಿ." ಎಂದು ಬೊಬ್ಬಿಡುತ್ತಾ ತಮ್ಮ ಆಯುಧಗಳನ್ನು ಝಳಪಳಿಸಿದರು. ಢುಂಢಿ ರೌದ್ರವಾಗಿ ನೋಡುತ್ತಾ ಹಾಗೆಯೇ ಆನೆಯ ಮೇಲೆಯೇ ಕುಳಿತಿದ್ದ. ನಿಧಾನವಾಗಿ ಆನೆಯಿಂದ ಕೆಳಗಿಳಿದು ತನ್ನ ಕೊಡಲಿಯನ್ನು ಹಿಡಿದುಕೊಂಡು ಮುಖ್ಯವಾಗಿ ಪ್ರಧಾನವಾಗಿ ಕಾಣುತ್ತಿದ್ದ ಇಂದ್ರನ ರಥದ ಬಳಿಗೆ ನಡೆದುಕೊಂಡು ಬಂದ.

"ಢುಂಢಿ ಗಣಪತಿ, ಪಾರ್ವತೀ ಸುತ ಗುಣೇಶ!" ಅವರಲ್ಲಿ ಕೆಲವರು ಉದ್ಗಾರ ತೆಗೆದರು. ಆದರೆ ಯಾರೂ ರಥದಿಂದ ಕೆಳಗಿಳಿಯಲಿಲ್ಲ.

"ಹೇ ಗಣಪತಿ, ಯಜ್ಞಫಲಗಳನ್ನು ಸ್ವೀಕರಿಸಲು ಹೋಗುತ್ತಿರುವ ನಮ್ಮ ದಾರಿಗೆ ವಿಘ್ನವಾಗಿ ಒದಗಬೇಡ. ಅತ್ತ ಸರಿ." ಎಂದ ಇಂದ್ರ.

ಅಷ್ಟರಲ್ಲಿ ಅಲ್ಲಿ ಸೇರಿದ್ದ ಮಾತಂಗರು ರಥದ ಕೀಲುಗಳನ್ನು ತೆಗೆದು, ಕುದುರೆಯ ಲಗಾಮುಗಳನ್ನು ಕತ್ತರಿಸಿದರು. ಢುಂಢಿ ತನ್ನ ಕೈಯಲ್ಲಿನ ಕೊಡಲಿಯನ್ನು ಹಿಡಿದು ತನ್ನ ಸನಿಹಕ್ಕೇ ಬರುತ್ತಿರುವುದನ್ನು ಕಂಡ ಇಂದ್ರನು ತನ್ನ ವಜ್ರಾಯುಧವನ್ನು ಹಿಡಿದು ರಥದಿಂದ ಕೆಳಕ್ಕೆ ಇಳಿದ. ನಗುತ್ತಿದ್ದ ಮಾತಂಗರ ಗುಂಪು ದೇವತೆಗಳ ಮುಕುಟ ಮತ್ತು ಆಭರಣಗಳನ್ನು ಕಸಿದುಕೊಳ್ಳುವುದು, ನಗಾರಿಗಳ ಚರ್ಮವನ್ನು ಹರಿಯುವುದು, ಕಹಳೆಯನ್ನು ನೆಲಕ್ಕೆ ಬಡಿಯುವುದು; ಹೀಗೆ ವಿವಿಧ ಚೇಷ್ಟೆಗಳಲ್ಲಿ ತೊಡಗಿತ್ತು.

"ನಾನು ದೇವತೆಗಳ ರಾಜನಾದ ಇಂದ್ರ." ಎಂದ ಇಂದ್ರನು ತನ್ನ ವಜ್ರಾಯುಧವನ್ನು ಮೇಲೆತ್ತಿದ. ಅದಕ್ಕೆ ನಕ್ಕ ಢುಂಢಿ, "ನಾನು ನಿನ್ನ ವಿಲಾಸಿ ದೇವತೆಯರಲ್ಲಿ ಒಬ್ಬನಲ್ಲ. ಇದು ನಾನಿರುವ ಅಂಜನಾಗಿರಿ, ನಿನ್ನ ಅಮರಾವತಿಯಲ್ಲ. ನೀನು ಸ್ವೇಚ್ಛೆಯಿಂದ ಹೇಗೆ ನಿನ್ನ ಮಾರ್ಗವನ್ನು ನಮ್ಮ ವಲಯದಲ್ಲಿ ಮಾಡಿಕೊಂಡೆ?" ಎಂದು ಢುಂಢಿ ಕೊಡಲಿಯನ್ನು ಬೀಸುತ್ತಾ ಇಂದ್ರನ ಬಳಿಗೆ ನಡೆದ.

ನಡೆಯುತ್ತಿರುವ ವಿದ್ಯಮಾನವನ್ನು ಗಮನಿಸಿದ ದೇವ ಪುರೋಹಿತ ತಾನೂ ರಥದಿಂದ ಇಳಿದು ಢುಂಢಿಯ ಬಳಿಗೆ ಬಂದ. "ಹೇ ಗಣಪತಿ, ಹೇ ಮಾತಂಗ ವೀರನೇ, ದಯಮಾಡಿ ನಮ್ಮ ಮಾರ್ಗವನ್ನು ಸುಗಮಗೊಳಿಸು. ನಿನ್ನ ಪರಿಗಣಿಸದೇ ಹೋದ ನಮ್ಮನ್ನು ಕ್ಷಮಿಸು." ಎಂದು ಕೈ ಮುಗಿದು ಬೇಡಿದ. ಪುರೋಹಿತನ ಸೂಕ್ಷ್ಮತೆಯನ್ನು ಅರಿತ ಇಂದ್ರ ವಜ್ರಾಯುಧವನ್ನು ಕೆಳಗಿಳಿಸಿ, "ಹೇ ಪಾರ್ವತೀ ಸುತ ಗಣೇಶನೇ, ನಮ್ಮನ್ನು ಮನ್ನಿಸು." ಎಂದ.

ಇಂದ್ರನನ್ನು ಒಂದಷ್ಟು ಕಾಡಿದ ಢುಂಢಿಯು ಕೊನೆಗೆ ಅವರನ್ನು ಹೋಗಗೊಟ್ಟ. ಅವರ ಮುಕುಟ ಮತ್ತು ಆಭರಣಗಳನ್ನು ಹಿಂದಿರುಗಿಸಲಿಲ್ಲ. ತೆಗೆದಿದ್ದ ರಥದ ಕೀಲುಗಳನ್ನು ದಿಕ್ಕಾಪಾಲಾಗಿ ಎಸೆದು ಮಾತಂಗರು ಹೊರಟು ಹೋದರು.

ಈ ಘಟನೆಯ ನಂತರ ದೇವತೆಗಳಾಗಲಿ, ಆರ್ಯರ ಮುಖಂಡರಾಗಲಿ, ಬ್ರಾಹ್ಮಣ ಪುರೋಹಿತರಾಗಲಿ ಅತ್ತ ಬರುತ್ತಿರಲಿಲ್ಲ.

ವಯನದಿಂದ ಒಮ್ಮೆ ಪಿಚುಡುಲ ಬಂದ. ಢುಂಢಿಗೆ ಅವನನ್ನು ನೋಡಿ ಮಹಾನಂದವಾಯಿತು. "ಹೇಗಿದ್ದಾನೆ ನನ್ನ ವದೀರಜ್ಜ?" ಎಂದು ಕೇಳಿದ. ಪಿಚುಡಲನಿಗೆ ಢುಂಢಿಯನ್ನು ಗುರುತಿಸಲೇ ಸಮಯ ಹಿಡಿಯಿತು. ಎಳೆಯ ಯುವಕನಾಗಿದ್ದು ಕಪ್ಪು ಸುಂದರನಾಗಿದ್ದ. ಆದರೆ ಈಗ ವಿಪರೀತವಾಗಿ ಬೆಳೆದಿರುವ ದೇಹ, ಹೊರಕ್ಕೆ ಚಾಚಿರುವಂತಹ ಕೆಂಪಾದ ಕಣ್ಗುಡ್ಡೆಗಳು, ಇಳಿಬಿದ್ದಿರುವ ಎದೆ ಮತ್ತು ಹೊಟ್ಟೆ.

ಪಿಚುಡಲ ನಿಟ್ಟುಸುರು ಬಿಟ್ಟ.

"ವದೀರಜ್ಜನೂ ಹಣ್ಣಾಗಿದ್ದಾನೆ. ನಿನ್ನ ನೋಡಬೇಕೆಂದು ತುಂಬಾ ಆಸೆಪಡುತ್ತಿದ್ದಾನೆ. ಅವನಿಗೂ ನೂರು ವಸಂತಗಳಿಗಿಂತ ಹೆಚ್ಚಾಗಿದೆ. ಕೆಲವೊಮ್ಮೆ ಜಡ್ಡು ಹಿಡಿದರೆ ಬಹಳ ದಿನಗಳು ಏಳುವುದೇ ಇಲ್ಲ. ನೀನೊಮ್ಮೆ ಬಂದು ನೋಡಿದರೆ, ಅವನಿಗೆ ಸಂತೋಷವಾಗುವುದು. ನೀನು ಕಳೆದ ಸಲ ಬರುವಾಗ ಒಳ್ಳೆಯ ಬೀಳ್ಕೊಡುಗೆ ಅವನಿಂದ ನಿನಗೆ ಸಿಕ್ಕಿರಲಿಲ್ಲ. ಆ ನೋವೂ ಅವನ ಮನಸ್ಸಿನಲ್ಲಿದೆ."

"ಅವಿಮುಕ್ತದವರ ಕಾಟವೇನೂ ಇಲ್ಲವೇ?" ಢುಂಢಿ ಕೇಳಿದ.

“ನಮ್ಮ ತಂಟೆಗೆ ಬರುವುದಿಲ್ಲ. ನಮ್ಮ ಗಜಾರಣ್ಯ ವಿಶಾಲವಾಗಿ ಬೆಳೆದಿದೆ. ನಮ್ಮ ಗಜಗಳನ್ನು ತೆಗೆದುಕೊಳ್ಳಲು ಮಹಿಪಾಲನೂ ಮತ್ತು ಸಂಬೋಧಿಯೂ ಬಂದಿದ್ದರು. ಇಪ್ಪತ್ತೆರಡು ಆನೆಗಳನ್ನು ತೆಗೆದುಕೊಂಡರು.” ಎಂದ ಪಿಚುಡಲ.

“ಅದಕ್ಕೆ ಏನು ಕೊಟ್ಟರು?” ಮಾರ ಮತ್ತು ಆಸುರ ಒಟ್ಟಿಗೆ ಕೇಳಿದರು.

“ಏನೂ ಕೊಡಲಿಲ್ಲ.”

“ಏಕೆ?” ಮಾರ ಮತ್ತು ಆಸುರ ಮತ್ತೆ ಒಟ್ಟಿಗೆ ಪ್ರಶ್ನಿಸಿದರು.

“ಅವಿಮುಕ್ತದ ನಾಡಿನಲ್ಲಿ ವಯನ ಒಂದು ಅರಣ್ಯ ಪ್ರದೇಶ. ಅದು ರಾಜ ಆಡಳಿತದ ಅಧಿಕಾರದಲ್ಲಿಯೇ ಇರುವುದು ಹೊರತು, ಗಣಗಳಿಗೆ ಹಕ್ಕಿಲ್ಲ ಎಂದರು. ಗಣಗಳೇನೇ ಇದ್ದರೂ ಅರಣ್ಯದೊಳಗಿನ ಗುಂಪುಗಳು, ಅವುಗಳೆಲ್ಲವೂ ರಾಜರ ಅಧೀನದಲ್ಲಿಯೇ ಇರುತ್ತವೆ ಎಂದರು.” ಎಂದ ಪಿಚುಡಲ.

“ಹೌದೇ?” ಎಂದ ಢುಂಢಿ. ಅವನಿಗೆ ಇದುವರೆಗೂ ಈ ವಿಷಯದ ಬಗ್ಗೆ ಆಲೋಚನೆಯೇ ಬಂದಿರಲಿಲ್ಲ.

“ಇಲ್ಲಿ ಯಾರು ಅರಸರು?” ಪಿಚುಡಲ ಕೇಳಿದ.

“ಯಾರು?” ಢುಂಢಿ, ಆಸುರ ಮತು ಮಾರ ಈ ಮೂವರಿಗೂ ತಿಳಿದಿರಲಿಲ್ಲ.

“ಯಾರಾದರೂ ಆಗಿರಲಿ, ಅವರು ನಮ್ಮ ತಂಟೆಗೆ ಬಂದಿಲ್ಲ.” ಎಂದ ಢುಂಢಿ.

“ಪ್ರಯಾಗದ ಬಳಿ ಹಸ್ತಿನಾಪುರವೋ ಏನೋ, ಒಟ್ಟಿನಲ್ಲಿ ಒಂದು ನಾಡಿದೆ. ಅವಿಮುಕ್ತದಂತೆ ಅಲ್ಲಿಯೂ ಅರಸನಿದ್ದಾನೆ. ಆದರೆ, ಅವರು ಯಾರೂ ಗಣಗಳ ತಂಟೆಗೆ ಬಂದಂತಿಲ್ಲ. ಅಥವಾ ನಮ್ಮವರೆಗಂತೂ ಬಂದಿಲ್ಲ.” ಎಂದ ಮಾರ.

“ಬಂದಾಗ ನೋಡಿಕೊಳ್ಳೋಣ.” ಎಂದ ಆಸುರ.

“ರಾಜ್ಯಗಳಿವೆ, ರಾಜರುಗಳಿದ್ದಾರೆ, ಅವರ ನಡುವೆ ಯುದ್ಧಗಳಾಗುತ್ತಿವೆ. ಹೀಗೇ ಏನೇನೋ ಆಗುತ್ತಿವೆ.” ಎಂದ ಪಿಚುಡಲ ನಿಟ್ಟುಸುರುಬಿಟ್ಟು ಹೇಳಿದ. “ಬಹುಪಾಲು ಕ್ಷತ್ರಿಯರೇ ರಾಜ್ಯಗಳನ್ನು ಆಳುತ್ತಿರುವುದು. ಆ ಕ್ಷತ್ರಿಯರನ್ನು ಆಳುತ್ತಿರುವುದು ಬ್ರಾಹ್ಮಣರು. ಅದಿರಲಿ, ನೀನು ಯಾವಾಗ ಬರುತ್ತೀಯಾ?”

“ನೀನು ಇಲ್ಲಿನ ನಾಗಲೋಕದ ಅತಿಥಿಯಾಗಿ ಕೆಲವು ಕಾಲ ಇರು. ನಾನು ನಿನ್ನ ಜೊತೆ ಬರುತ್ತೇನೆ.” ಎಂದ ಢುಂಢಿ.

ಎರಡು ಹುಣ್ಣಿಮೆಗಳ ನಂತರ ಪಿಚುಡಲನೊಂದಿಗೆ ಢುಂಢಿ ಆನೆಗಳ ಮೇಲೇರಿ ಹೊರಟ. ಮಾರನು ಅಲ್ಲಿಯೇ ಉಳಿದು ಮಾತಂಗರನ್ನು ನೋಡಿಕೊಳ್ಳುವ ಹೊಣೆಗಾರಿಕೆ ಹೊತ್ತುಕೊಂಡ. ಆಸುರ ಢುಂಢಿಯ ಬೆಂಗಾವಲಾಗಿ ನಡೆದ.

ಢುಂಢಿಯು ತನ್ನ ಅಭ್ಯಾಸದಂತೆ ಗಂಗಾ ನದಿಯ ಮಾರ್ಗವಾಗಿ ಅವಿಮುಕ್ತವನ್ನು ತಲುಪಿದ. ಇನ್ನೂ ಬಹುದೂರವಿದ್ದಂತೆ ಢುಂಢಿಯ ಅಶ್ವಾರೂಢ ವರ್ತಮಾನಕಾರ ಗಣಪತಿಯ ಬರವನ್ನು ರಕ್ಷಣಾಧಿಕಾರಿಗಳಿಗೆ ಸೂಚಿಸಿದ. ಕೋಟೆಯ ಬಾಗಿಲುಗಳಲ್ಲಿ ನಿಂತಿದ್ದ ದ್ವಾರರಕ್ಷಕರು ನಿಧಾನವಾಗಿ

ಕೋಟೆಯ ಬಾಗಿಲನ್ನು ಹಾಕಿದರು. ಅವರ ಈ ವರ್ತನೆ ಆಸುರ ಮತ್ತು ಪಿಚುಡಲರಿಗೆ ಆಶ್ಚರ್ಯವಾಯಿತು.

ಢುಂಢಿಯು ಪಾನಮತ್ತನಾಗಿ ಆನೆಯ ಮೇಲೆ ಕಟ್ಟಿದ್ದ ತೊಟ್ಟಿಲಿನಂತಹ ಆಸನದಲ್ಲಿ ನಿದ್ರಿಸುತ್ತಿದ್ದ. ಆಸುರ ತನ್ನ ಆನೆಯ ಮೇಲಿಂದ ಕೆಳಗೆ ಇಳಿದು ದ್ವಾರರಕ್ಷಕರ ಕಡೆ ನಡೆದ. ಇವನು ಬರುತ್ತಿರುವುದನ್ನು ಕಂಡು ಅಧಿಕಾರಿಯೊಬ್ಬ ತಾನೇ ಇವನ ಕಡೆಗೆ ನಡೆದ.

"ಕೋಟೆಯ ಬಾಗಿಲೇಕೆ ಹಾಕಿದಿರಿ?" ಆಸುರ ಕೇಳಿದ.

"ಮಹಿಪಾಲ ಅರಸರು ಪಂಚಗವಮಾಯನ ಯಜ್ಞವನ್ನು ನಡೆಸುತ್ತಿದ್ದಾರೆ. ಇಂದು ಅದರ ಕೊನೆಯ ದಿನ. ದೇವತೆಗಳಾದ ಮಿತ್ರ, ವರುಣರೆಲ್ಲಾ ಇಂದು ನೆರೆದಿದ್ದಾರೆ. ನಿಮ್ಮ ಮೆರವಣಿಗೆಯು ಸಮಾರಂಭದ ನಡುವಿನಲ್ಲಿ ಬಂದರೆ ಬಹಳ ವಿಜೃಂಭಣೆಯಿಂದ ನಡೆಯುತ್ತಿರುವ ಈ ಉತ್ಸವದ ಗಮನ ಪಲ್ಲಟವಾಗುವುದೆಂದು ಕೋಟೆಯ ಬಾಗಿಲನ್ನು ಮುಚ್ಚಲಾಯಿತು." ಅಧಿಕಾರಿ ಹೇಳಿದ.

"ಬಂದಿರುವುದು ಢುಂಢಿ ಗಣಪತಿ." ಎಂದ ಆಸುರ.

"ತಿಳಿದಿದೆ. ತಮ್ಮ ವಕ್ತಾರನು ನಮ್ಮ ಕಡೆ ಬಂದು ಹೇಳುವ ಮುನ್ನವೇ, ನಿಮ್ಮ ಬರುವಿಕೆಯನ್ನು ನಮಗೆ ನಮ್ಮ ಚಾರರು ಅರುಹಿದ್ದರು. ದಯಮಾಡಿ ಮನ್ನಿಸಿ. ಮುಖ್ಯರಕ್ಷಣಾಧಿಕಾರಿಗಳ ಹಾಗೂ ರಾಜಗುರುಗಳ ಆದೇಶದಂತೆ ಹೀಗೆ ಮಾಡಲಾಗಿದೆ."

"ನಾವು ಹೇಗೆ ಹೋಗಬೇಕು?"

"ದಕ್ಷಿಣಕ್ಕೆ ತಿರುಗಿ ವಿರಾಟನಗರದ ಮಾರ್ಗವಾಗಿ ವಯನಕ್ಕೆ ಹೋಗಬಹುದು. ಅಥವಾ ಉತ್ಸವ ಮುಗಿಯುವವರೆಗೂ ಕಾಯಬೇಕು."

"ಉತ್ಸವ ಯಾವಾಗ ಮುಗಿಯುತ್ತದೆ?"

"ಇಂದು ರಾತ್ರಿ."

ಆಸುರನಿಗೆ ಕೋಪ ಬಂದರೂ ಢುಂಢಿಯ ಅನುಮತಿಯಿಲ್ಲದೇ ಏನನ್ನಾದರೂ ಮಾಡುವುದಾಗಲಿ ಅಥವಾ ಹೇಳುವುದಾಗಲಿ ತಪ್ಪಾಗುವುದೆಂದು ಹಲ್ಲು ಕಚ್ಚಿಕೊಂಡು ತಂಡಕ್ಕೆ ಮರಳಿದ.

ಸುಡುವ ಬಿಸಿಲಿಗೆ ಎಚ್ಚರಗೊಂಡ ಢುಂಢಿಗೆ ತಮ್ಮ ಪ್ರಯಾಣ ನಿಂತಿರುವುದು ಅರಿವಿಗೆ ಬಂದು ತನ್ನ ಆಸನದಿಂದ ಬಗ್ಗಿ ಕೇಳಿದ.

"ಏಕೆ ನಿಂತಿರುವುದು?"

ಅವನ ಆನೆಯನ್ನು ನಡೆಸುತ್ತಿದ್ದ ಮಾವುತ ಹೇಳಿದ. "ಅವಿಮುಕ್ತದ ದ್ವಾರವು ತೆರೆದಿಲ್ಲ."

"ಏಕೆ?" ಎಂದ ಢುಂಢಿ ಆನೆಯನ್ನು ಕೂರಿಸಲು ಹೇಳಿ, ತಾನು ಗಜಪೀಠದಿಂದ ಕೆಳಗೆ ಇಳಿದ.

ಅಧಿಕಾರಿಯೊಡನೆ ಆಗ ತಾನೇ ಮಾತನಾಡಿ ಬಂದ ಆಸುರ ಢುಂಢಿಗೆ ವಿಷಯ ತಿಳಿಸಿದ.

ಕೋಪಗೊಂಡ ಢುಂಢಿ ಆಸುರನ ಝಾಡಿಸಿ ಒದ್ದ. "ನೀನು ಅವನ ಕೊಲ್ಲದೆಯೇ ಹೇಗೆ ಬಂದೆ?" ಎಂದವನೇ ಕೊಡಲಿಯನ್ನು ಹೆಗಲಿಗೇರಿಸಿಕೊಂಡು ದ್ವಾರದ ಕಡೆಗೆ ನಡೆದ. ಇವನ ಈ ಪ್ರತಿಕ್ರಿಯೆಯನ್ನು ಎದುರು ನೋಡದ ಅಧಿಕಾರಿ ತಕ್ಷಣವೇ ಮಾಡುವುದೇನೆಂದು ಕೇಳಲು ತನ್ನ ಚಾರನನ್ನು ಯಜ್ಞಶಾಲೆಯಲ್ಲಿದ್ದ ಮುಖ್ಯರಕ್ಷಣಾಧಿಕಾರಿಯತ್ತ ಅಟ್ಟಿದ. ಅಷ್ಟರಲ್ಲಿ ಢುಂಢಿ ಅವನೆದುರು ನಿಂತಿದ್ದ.

"ಬಾಗಿಲು ತೆರೆಯೋ."

ಅದಕ್ಕುತ್ತರವಾಗಿ ಅಧಿಕಾರಿ ತನ್ನ ಒರೆಯಿಂದ ಖಡ್ಗವನ್ನು ಹೊರಗೆಳೆದ.

"ಓಹೋ, ಇದೋ ನಿನ್ನ ಉತ್ತರ? ಸರಿ." ಎಂದ ಢುಂಢಿ ಬೀಸಿದ ಮೊದಲನೆಯ ಏಟಿಗೆ ಅಧಿಕಾರಿಯ ಖಡ್ಗವು ತುಂಡಾಯ್ತು. ಎರಡನೆಯ ಏಟಿಗೆ ಅವನ ಶಿರವು ಹೋಳಾಯ್ತು.

ಅಷ್ಟರಲ್ಲಿ ಮಾತಂಗರೂ ಯುದ್ಧಕ್ಕೆ ಸಿದ್ಧವಾಗಿ ಢುಂಢಿಯ ಹಿಂದೆ ನಡೆದಿದ್ದರು. ಕೋಟೆಯ ಮೇಲೆ ಅಪಾಯದ ಕಹಳೆಯನ್ನು ಊದಿದರು. ಪಹರೆಯವರು ಮಾತಂಗರ ಮೇಲೆ ಬಾಣಗಳನ್ನು ಬಿಡಲಾರಂಭಿಸಿದರು. ಅದಕ್ಕೆ ಪ್ರತಿಯಾಗಿ ಮಾತಂಗರೂ ಶರಸಂಧಾನ ಮಾಡಿದರು. ಮಾತಂಗರಲ್ಲಿ ಕೆಲವರು ಕೆಳಗುರುಳಿದರು. ಕೋಟೆಯ ಮೇಲಿದ್ದ ಪಹರೆಯವರೂ ಶವಗಳಾಗಿ ಕೆಳಗುರುಳಿದರು.

ಕಿರುಬಾಗಿಲಿನ ರಕ್ಷಕರನ್ನು ಕೊಂದ ಮಾತಂಗರು ಪಿಚುಡಲ ಮತ್ತು ಆಸುರರು ಒಳಗೆ ಪ್ರವೇಶಿಸಲು ಅನುವು ಮಾಡಿದರು. ಅವರ ಹಿಂದೆಯೇ ಒಳಹೊಕ್ಕ ಮಾತಂಗರು ದ್ವಾರರಕ್ಷಕರನ್ನು ಕೊಂದು ಕೋಟೆಯ ಬಾಗಿಲನ್ನು ತೆರೆದರು.

ಢುಂಢಿ ಗಜಪಡೆಯೊಡನೆ ಒಳಗೆ ಹೊಕ್ಕ. ನೇರವಾಗಿ ಯಾಗಮಂಟಪದ ಕಡೆಗೆ ನಡೆದ. ಮಂಟಪದ ರಕ್ಷಣೆಗೆ ಅವಿಮುಕ್ತದ ಸೈನಿಕರು ಮುಂದಾದರು ಢುಂಢಿ ಒಬ್ಬೊಬ್ಬರನ್ನು ನಿವಾರಿಸಿಕೊಂಡು ನೇರವಾಗಿ ಯಾಗ ನಡೆಯುತ್ತಿದ್ದ ಕಡೆಗೆ ನಡೆದ. ಮಾತಂಗರ ಗಜಪಡೆಗಳು ಯಾಗಮಂಟಪದ ಕಡೆಗೆ ನುಗ್ಗಿಬರುತ್ತಿದ್ದಂತೆ ಹಾಹಾಕಾರ ಮಾಡುತ್ತಾ ಜನರು ದಿಕ್ಕಾಪಾಲಾಗಿ ಓಡತೊಡಗಿದರು. ಮಹಿಪಾಲನು ಮತ್ತು ಸುದರ್ಶನ ದೇವನೂ ಯಾಗಪೀಠದಿಂದ ಮೇಲೆದ್ದರು. ಢುಂಢಿ, "ಎಷ್ಟೋ ಧೈರ್ಯ ನಿನಗೆ ನಮ್ಮ ಬರುವಿಕೆಗೆ ಅಡ್ಡಿಪಡಿಸಲು?" ಎಂದು ಕೊಡಲಿಯನ್ನು ಬೀಸುತ್ತಾ ಮಹಿಪಾಲ ಮತ್ತು ಸುದರ್ಶನದೇವನ ಕಡೆಗೆ ನುಗ್ಗಿದ. ನಿಶಸ್ತ್ರನಾಗಿದ್ದ ಮಹಿಪಾಲ ಮತ್ತು ಸುದರ್ಶನದೇವ ಅಲ್ಲಿಂದ ಓಡಿದರು.

ಸಂಬೋಧಿಯು, "ಹೇ ಢುಂಢಿ ಗಣಪತಿ, ಸಾವಧಾನ, ಸಾವಧಾನ." ಎಂದು ಕೂಗುತ್ತಾ ಅವನ ಹತ್ತಿರಕ್ಕೆ ಬಂದ. ಆದರೆ ಅವನ ರಕ್ಷಣೆಗೆ ಅಡ್ಡ ಬಂದ ರಕ್ಷಣಾಧಿಕಾರಿ ತನ್ನ ಖಡ್ಗವನ್ನು ಹಿರಿದು ಮುಂದೆ ಬಂದುದರಿಂದ ಢುಂಢಿಯ ಗಮನ ಅತ್ತ ಹರಿಯಿತು. ಅಲ್ಲಿ ನಡೆದ ಕಾಳಗದಲ್ಲಿ ರಕ್ಷಣಾಧಿಕಾರಿ ಹತನಾದ.

"ಯಾವನೋ ಇಲ್ಲಿ ದೇವತೆ?" ಢುಂಢಿ ತನ್ನ ಕೊಡಲಿಯನ್ನು ಆಡಿಸುತ್ತಾ ಸುತ್ತಲೂ ನೋಡಲು ದೇವತೆಗಳೆಲ್ಲರೂ ತಮ್ಮನ್ನು ರಕ್ಷಿಸಿಕೊಳ್ಳಲು ನೆಲೆಗಳನ್ನು ಹುಡುಕುತ್ತಾ ಓಡಿದರು. ಆನೆಗಳು ಯಾಗಮಂಟಪವನ್ನು ಧ್ವಂಸ ಮಾಡಿದವು.

ಅವಿಮುಕ್ತದ ರುದ್ರರು ಮತ್ತು ಶಿವಯೋಗಿಗಳು, "ಶಂಭೋ ಶಂಕರ, ಜಯ ಜಯ ಢುಂಢಿ ಗಣಪತಿ." ಎಂದು ಘೋಷಗಳನ್ನು ಮಾಡುತ್ತಿದ್ದರು. ಮಾತಂಗರು ಯಾಗ ಮಂಟಪವನ್ನು ಸಂಪೂರ್ಣ ಧ್ವಂಸ

ಮಾಡಿದ ನಂತರ ಅಲ್ಲಿಂದ ವಯನದ ಮಾರ್ಗ ಹಿಡಿದರು. ಮಾತಂಗರ ಒರಟು ಆಕ್ರಮಣಕ್ಕೆ ನಾಯಕತ್ವವಿಲ್ಲದ ಅವಿಮುಕ್ತದ ಸೇನೆ ದಿಕ್ಕೆಟ್ಟಿತ್ತು. ಯಾಗಮಂಟಪದಲ್ಲಿ ಹೆಣಗಳು ಉರುಳಿದ್ದವು.

ವಯನಕ್ಕೆ ಬಂದ ಢುಂಢಿ ವದೀರಜ್ಜನ ಮನೆಯಲ್ಲಿ ಕಂಬಲದ ಮೇಲೆ ಉರುಳಿಕೊಂಡ. ಅವನಾಗೇ ಏಳುವವರೆಗೂ ಎಬ್ಬಿಸುವುದು ಬೇಡವೆಂದು ವದೀರಜ್ಜನೂ ಸುಮ್ಮನಾದ.

ಸಂಜೆ ಸೂರ್ಯ ಮುಳುಗುವಾಗ ಮೆಲ್ಲನೆ ತನ್ನ ಮೈ ಝಾಡಿಸಿದ ಢುಂಢಿ, ಎಚ್ಚರವಾದರೂ ಮೇಲೇಳಲು ಮನಸ್ಸು ಮಾಡಲಿಲ್ಲ. ಪಕ್ಕಕ್ಕೆ ಹೊರಳಿಕೊಂಡು ನಿರುದ್ದೇಶವಾಗಿ ಬರಿದೇ ಮೂಲೆಯೊಂದನ್ನು ನೋಡಿಕೊಂಡು ಹಾಗೆಯೇ ಬಿದ್ದುಕೊಂಡಿದ್ದ. ಕತ್ತಲಲ್ಲಿ ಹೊಳೆಯುವ ಅವನ ಕಣ್ಣುಗಳನ್ನು ನೋಡಿ ವದೀರಜ್ಜ, “ಢುಂಢೀ.” ಎಂದು ಕರೆದ.

“ಹೇಳು ವದೀರಜ್ಜಾ.” ಎಂದು ಮಗ್ಗಲು ಬದಲಾಯಿಸಿದ ಢುಂಢಿ ಮೇಲೇಳಲಿಲ್ಲ.

“ಬಾ ಹೊಳೆ ಕಡೆಗೆ ಹೋಗೋಣ.” ಎಂದ ವದೀರ.

ಜೋರಾಗಿ ಶಬ್ಧದೊಡನೆ ಆಕಳಿಸಿದ ಢುಂಢಿ ಮೇಲೆದ್ದು ಮೈಮುರಿಯುತ್ತಾ ತನ್ನ ತೋಳುಗಳನ್ನು ಝಾಡಿಸಿದ. ಎಳೆಯ ಯುವಕನಾಗಿ ನೋಡಿದ್ದವನ ಇಂದು ದೈತ್ಯಾಕಾರಕ್ಕೆ ಬೆಳೆದು ನಿಂತವನ ಬೆರಗಿನಿಂದ ನೋಡಿದ ವದೀರಜ್ಜ.

ಢುಂಢಿ ನದಿಯ ಕಡೆಗೆ ನಡೆದ. ವದೀರನ ನಡಿಗೆಯಲ್ಲಿ ಈಗ ಹೆಚ್ಚಿನ ಬಿರುಸಿಲ್ಲ. ದನಿಯೂ ಕ್ಷೀಣವಾಗುತ್ತಿದೆ. ನಿಧಾನವಾಗಿ ಢುಂಢಿಯ ಹಿಂದೆ ಕೋಲೂರಿಕೊಂಡು ನಡೆದ ವದೀರ, ಹೊರಗೆ ಕಾಯುತ್ತಿದ್ದ ಅವನ ಹಿಂಬಾಲಿಸಲು ಬಂದ ಆಸುರನನ್ನು ತಡೆದ. ನೀವು ಯಾರೂ ಬರಬೇಡಿ ಎಂದು ಸಂಜ್ಞೆಯಲ್ಲೇ ಸೂಚಿಸಿದ ವದೀರ ಹೊಳೆಯ ಕಡೆಗೆ ನಡೆದ.

ಹೊಳೆಯಲ್ಲಿ ಧುಮುಕಿ ಸ್ವಲ್ಪ ಹೊತ್ತು ಈಜಾಡಿದ ಢುಂಢಿ ದಡದ ಮೇಲೆ ಕುಳಿತ. ಅದೇ ಬಂಡೆಯ ಮೇಲೆ ಅವನು ಸಣ್ಣವನಾಗಿದ್ದಾಗ ವದೀರಜ್ಜನ ಜೊತೆ ಕುಳಿತು ಅದೆಷ್ಟೋ ದಿನಗಳನ್ನು ಮತ್ತು ರಾತ್ರಿಗಳನ್ನು ಕಳೆದಿರುವುದು. ತನ್ನ ಹಡೆದವ್ವ ಮಾಲಿನಿಯ, ಅವಿಮುಕ್ತಕ್ಕೆ ಬಂದ ಆರ್ಯರ ಕಥೆಗಳನ್ನು ಕೇಳಿದ್ದು. ಕಾಣದಿರುವ ಕಾಡಿನ ಒಡೆಯನ ಬಗ್ಗೆ ತಿಳಿದಿದ್ದು. ಆದರೆ ಅವೇನೂ ಢುಂಢಿಗೆ ಈಗ ನೆನಪಿಗೇನೂ ಬರಲಿಲ್ಲ. ಅವನು ಈಗ ಬಂಡೆಯ ಮೇಲೆ ಬಿದ್ದುಕೊಂಡಿರುವುದಷ್ಟೇ ಅವನಿಗೆ ತಿಳಿದಿರುವುದು. ಅವನ ಮನಸ್ಸಿನಲ್ಲಿ ಏನಾಗುತ್ತಿದೆ? ಏನನ್ನು ಆಲೋಚಿಸುತ್ತಿದ್ದಾನೆ ಎಂದು ಬೇರೆಯವರಿಗೆ ತಿಳಿಯುವುದಿರಲಿ, ಸ್ವಯಂ ಅವನಿಗೇ ಅರಿವಿರುವುದಿಲ್ಲವೇನೋ ಎಂದೆನಿಸುತ್ತದೆ.

“ಢುಂಢಿ.” ಎಂದ ವದೀರಜ್ಜ ಮೆಲ್ಲನೆ.

“ಹೇಳು.” ಎಂದ ಢುಂಢಿ.

“ಅಂಜನಾಗಿರಿಯಲ್ಲಿ ಎಲ್ಲವೂ ಹೇಗೆ ನಡೆಯುತ್ತಿದೆ?” ವದೀರಜ್ಜ ಮೆಲ್ಲನೆ ಕೇಳಿದ.

“ಹೂಂ.” ಎಂದ ಢುಂಢಿ. ಈ ಹೂಂಕಾರದ ಅರ್ಥವೆಂದರೆ ಎಲ್ಲವೂ ಚೆನ್ನಾಗಿದೆ ಎಂದೇ ಅರ್ಥ.

“ನಿನ್ನೆ ಆಗಿದ್ದನ್ನೆಲ್ಲಾ ಆಸುರ ಹೇಳಿದ.”

"ಹೂಂ."

"ಏನೂ ಯೋಚನೆಯಿಲ್ಲದೇ ಕೆಲವು ದಿನಗಳವರೆಗೆ ವಿಶ್ರಾಂತಿ ತೆಗೆದಿಕೋ. ನಂತರ ನೋಡೋಣ."

"ನಾಳೆಯೇ ನಮ್ಮ ಆನೆಗಳಿಗೆ ಸಂದಾಯವಾಗಬೇಕಾಗಿರುವುದನ್ನು ನಾನು ಪಡೆದು ಬರುತ್ತೇನೆ." ಎಂದ ಢುಂಢಿ.

"ಅದು ಅವರ ಸೊತ್ತೇ ಢುಂಢಿ." ಎಂದ ವದೀರಜ್ಜ.

"ಹೇಗಾದೀತು?" ಮೆಟ್ಟಿ ಬಿದ್ದವನಂತೆ ಮೇಲೆದ್ದ ಢುಂಢಿ. "ಕಾಡುಗಳಲ್ಲಿ ಆನೆಗಳನ್ನು ಹಿಡಿದವರು ನಾವು. ಅವನ್ನು ಪಳಗಿಸಿರುವವರು ನಾವು."

"ಆದರೆ, ಅವಿಮುಕ್ತದ ಕಾಡೇ ನಾವಿರುವ ವಯನ. ನೀನು ಈ ಪಾಳಯಕ್ಕೆ ನಾಯಕನಾದರೂ ರಾಜನಲ್ಲ." ಎಂದ ವದೀರ.

"ನಾನು ಈ ಪಾಳಯಕ್ಕೆ ಮಾತ್ರ ನಾಯಕನಲ್ಲ. ಎಲ್ಲಾ ಗಣಗಳಿಗೂ ನಾಯಕ."

"ಇರಬಹುದು. ಆದರೆ, ರಾಜನಲ್ಲ. ಅದರದೇ ಆಡಳಿತ ವ್ಯವಸ್ಥೆ ಬೇರೆಯಿದೆ. ನೀನು ಅರಣ್ಯಕರ ಗುಂಪಿನ ಗಾಣಪತ್ಯ ಸಂಪಾದಿಸಿರಬಹುದು. ಆದರೆ, ರಾಜರಾಗುವವರ ವಿಷಯವೇ ಬೇರೆ." ಎಂದ ವದೀರಜ್ಜ.

"ವಾಮದೇವ ನನಗೆ ಢುಂಢೀರಾಜನೆನ್ನುತ್ತಾನೆ."

"ಗೌರವಕ್ಕೆ ಹಾಗೆನ್ನುತ್ತಾನೆ. ನಮ್ಮಲ್ಲಿ ಅವರಲ್ಲಿರುವಂತಹ ಸ್ವರ್ಣಾಯಸಗಳಿಲ್ಲ. ಅವರುಗಳಲ್ಲಿರುವಂತೆ ಬೇರೆ ನಿಧಿಗಳಿಲ್ಲ. ಅವರಲ್ಲಿರುವಂತೆ ಎಲ್ಲಾ ವಿಷಯಗಳಿಗೂ ಅಧಿಕಾರಿಗಳಿಲ್ಲ. ಮಿಗಿಲಾಗಿ ಅವರಿಗೆ ತಿಳಿದಿರುವ ವಿದ್ಯೆಯೇ ನಮಗೆ ತಿಳಿದಿಲ್ಲ."

"ಅದಕ್ಕೆ ಏನು ಮಾಡಬೇಕು?"

"ಮಾಡುವುದೇನೂ ಇಲ್ಲ. ಅವರದು ಅವರದೇ ಆದ ಬದುಕು. ನಮ್ಮದು ನಮ್ಮದೇ ಆದ ಬದುಕು. ಅವರು ನಮ್ಮ ಅರಣ್ಯ ಜೀವನಕ್ಕೆ ಭಂಗ ತರದಿದ್ದರೆ ಸಾಕು." ಎಂದ ವದೀರಜ್ಜ.

"ನೀನೇ ದಾಳಿ ಮಾಡಲು ಹೇಳುತ್ತೀಯ. ಮತ್ತೆ ಹೀಗೆ ಸುಮ್ಮನೆ ಇರಲೂ ಹೇಳುತ್ತೀಯ." ಢುಂಢಿ ಸಿಡಿಮಿಡಿಗೊಂಡ.

"ನುಡಿಯುವವನು ನಾನಲ್ಲ ಢುಂಢಿ. ಹೇಳದೆಯೇ ತಿಳಿಸುವ ಒಡೆಯನ ಮಾತನ್ನು ನಾನು ನಿನಗೆ ಹೇಳಿರುತ್ತೇನೆ. ಹಾಗೆ ಹೇಳುವುದು, ಹೀಗೆ ತಿಳಿಸುವುದು ಎಲ್ಲವೂ ಆ ಒಡೆಯನದೇ ಕಾರ್ಯ. ಇರಲಿ, ಈ ಕಾಡು ಅರಸರ ನಾಡಿನ ಗಡಿ. ಆ ನಾಡನ್ನು ಕಾಯಲು ನಾವು ಈ ಕಾಡಿನಲ್ಲಿರುವುದು. ನಾವೇ ಅವರ ಮೇಲೆ ಬಿದ್ದರೆ ಅವರನ್ನು ಕಾಯುವವರು ಯಾರು?" ಎಂದ ವದೀರಜ್ಜ.

"ಯಾವುದು ಮೊದಲು ಬಂದಿದ್ದು? ಕಾಡೋ ನಾಡೋ? ನಾಡನ್ನು ನಾಶ ಮಾಡಿ ಕಾಡನ್ನು ಬೆಳೆದಿದ್ದೋ ಅಥವಾ ಕಾಡನ್ನು ನಾಶ ಮಾಡಿ ನಾಡು ಬೆಳೆದಿರುವುದೋ?" ಢುಂಢಿ ಕೇಳಿದ್ದಕ್ಕೆ ವದೀರಜ್ಜನಲ್ಲಿ ಉತ್ತರವಿತ್ತು ಆದರೆ ಈಗ ಸಧ್ಯಕ್ಕೆ ಹೇಳುವ ಸ್ಥಿತಿಯಲ್ಲಿ ಅವನಿರಲಿಲ್ಲ. "ಹೇ ವದೀರ, ನೀನೇ ನನಗೆ

ಇವೆಲ್ಲವನ್ನೂ ತಿಳಿಸಿದವನು. ನೀನೇ ಈಗ ಏನೇನೋ ಮಾತಾಡುತ್ತೀಯ! ನಾನು ಮಲಗಿರುವಾಗ ರಾಜನ ಕಡೆಯವರೇನಾದರೂ ಬಂದಿದ್ದರೋ ಹೇಗೆ?"

"ಹೌದು." ವದೀರಜ್ಜ ಹೇಳಿದ. "ನಾವು ಅವರ ಕೆಲಸಗಳಿಗೆ ಅಡ್ಡಿ ಪಡಿಸದೇ ಹೋದರೆ ಅವರು ನಮ್ಮ ಕೆಲಸಗಳಿಗೆ ಅಡ್ಡಿ ಮಾಡುವುದಿಲ್ಲ. ಇವತ್ತು ನೀನು ಅವರ ಯಾಗಭಂಗವನ್ನು ಮಾಡಿದ್ದೀಯ. ದೇವತೆಗಳು ಮತ್ತು ಅರಸರು ನಮ್ಮ ಮೇಲೆ ಮುನಿದರೆ ಏನಾಗುವುದೆಂದು ಏನಾದರೂ ಯೋಚಿಸಿದ್ದೀಯಾ?"

"ಅವರು ನಮ್ಮ ಬಗ್ಗೆ ಯಾವಾಗಲೂ ಪ್ರಸನ್ನವಾಗಿ ಇಲ್ಲವೇ ಇಲ್ಲ. ಆದರೂ ಸುಮ್ಮನಿದ್ದಾರೆಂದರೆ ನಮ್ಮ ಬಗ್ಗೆ ಭಯದಿಂದ ಇದ್ದಾರೆ ಎಂದು ಅರ್ಥ. ಅವರು ನಮ್ಮ ಪ್ರತಾಪವನ್ನು ಒಪ್ಪಿಕೊಂಡಿದ್ದಾರೆಂದು ಅರ್ಥ. ನಾನು ಇಂದು ನೋಡಲಿಲ್ಲವೇ ಅವರ ಶಕ್ತಿಯನ್ನು!" ಢುಂಢಿ ಮೇಲೆದ್ದು ಮನೆಯ ಕಡೆಗೆ ನಡೆದ.

"ನಾಳೆ ನಾವು ರಾಜ ಸಭೆಗೆ ಹೋಗಬೇಕು. ಇಲ್ಲವಾದರೆ ಅವರು ನಮ್ಮನ್ನು ಬಂಧಿಸಲು ಸೈನ್ಯವನ್ನು ಕಳುಹಿಸುತ್ತಾರೆ." ಎಂದ ವದೀರಜ್ಜ.

"ಹೌದೇನು?" ಢುಂಢಿ ನಕ್ಕು ಹೇಳಿದ. "ಸರಿ, ಕಳುಹಿಸಲಿ."

ಮನೆಗೆ ಬಂದವನೇ ತನಗಾಗಿ ಕಾಯುತ್ತಿದ್ದ ಅಡುಗೆಯನ್ನು ಊಟ ಮಾಡಿ ಗವುಡ ಕುಡಿದ.

"ಈಗ ನಮ್ಮಲ್ಲಿರುವ ಮೂಷಿಕರಲ್ಲಿ ಯಾರು ಪರಾಕ್ರಮಿಗಳು?" ಆಸುರನ ಢುಂಢಿ ಕೇಳಿದ.

ಆಸುರ ಚೇರುದಿಯೆಂಬ ಎಳೆಯ ಯುವಕನ ಕರೆತಂದು ಢುಂಢಿಯ ಮುಂದೆ ನಿಲ್ಲಿಸಿದ. "ಇವನು ಸಮರಾಭ್ಯಾಸದಲ್ಲಿ ಬಹಳ ಚುರುಕಾಗಿದ್ದಾನೆ. ಪ್ರತಿಯೊಂದನ್ನು ಗಮನಿಸಿ ಕೇಳುತ್ತಾನೆ. ಇವನಲ್ಲಿ ವಿಷಯ ಸಂಗ್ರಹಣೆ ಚೆನ್ನಾಗಿದೆ. ಹೇಳಿದ್ದನ್ನು ಚಾಚೂ ತಪ್ಪದೆ ಮಾಡುತ್ತಾನೆ." ಎಂದ ಆಸುರ.

ಮೂಷಕರ ತಂಡಗಳು ಹತ್ತಿರದ ಕಾಡುಗಳಲ್ಲಿ ಎಲ್ಲೆಲ್ಲಿವೆ ಎಂದು ವಿಚಾರಿಸಿಕೊಂಡ ಢುಂಢಿ, "ನೀನು ಈಗಲೇ ನಾಲ್ವರೊಂದಿಗೆ ನಿನ್ನ ಪ್ರಯಾಣಕ್ಕೆ ಸಿದ್ಧವಾಗಿ ಹೊರಡು. ನಿನ್ನವರೊಂದಿಗೆ ಇಲ್ಲಿಗೆ ಆದಷ್ಟು ಬೇಗ ಮರಳಿ ಬಾ. ಹೋರಾಡಲಾಗುವ ಎಲ್ಲರೂ ಇಲ್ಲಿಗೆ ಬರಲಿ." ಎಂದು ಚೇರುದಿಗೆ ತನ್ನ ಜನರೊಂದಿಗೆ ಇಲ್ಲಿಗೆ ಎಷ್ಟು ಬೇಗ ಬರಬೇಕು, ಬಂದು ಏನು ಮಾಡಬೇಕು ಎಂಬುದನ್ನೆಲ್ಲಾ ಹೇಳಿ ಕಳುಹಿಸಿದ.

ಚೇರುದಿ ನಾಲ್ವರು ಮೂಷಕರೊಂದಿಗೆ ಕುದುರೆಗಳ ಮೇಲೇರಿ ತನ್ನ ಪಾಳಯದ ಕಡೆ ಪ್ರಯಾಣ ಬೆಳೆಸಿದ.

ಚಂದುವಿನ ಗಣದ ಮುಖ್ಯನಾದ ಹಸ್ತಿದಂತನನ್ನು ಕರೆದು ಆನೆಗಳ ಪಡೆಗಳೊಡನೆ ವಿರಾಟನಗರಕ್ಕೆ ಹೋಗಿ ಅಲ್ಲಿ ಏನು ಮಾಡಬೇಕು ಎಂದು ಹೇಳಿದ.

ಮರುದಿನ ಅವಿಮುಕ್ತದಿಂದ ಚಾರನೊಬ್ಬ ಬಂದು ರಾಜಸಭೆಯಲ್ಲಿ ವಿಚಾರಣೆಗಾಗಿ ಕಾಯುತ್ತಿದ್ದಾರೆ ಎಂದು ಹೇಳಿದ.

ವದೀರಜ್ಜ ತಾನು ಢುಂಢಿಯನ್ನು ಕರೆದುಕೊಂಡು ಬರುವುದಾಗಿ ತಿಳಿಸಿ ಅವನನ್ನು ಕಳುಹಿಸಲು ನೋಡುತ್ತಿದ್ದಂತೆ, ಢುಂಢಿ ಮನೆಯಿಂದ ಹೊರಗೆ ಬಂದು, "ನಾನು ಬರುವುದಿಲ್ಲ. ನಿಮ್ಮ ಮಹಿಪಾಲನ ತೋಳಲ್ಲಿ ಬಲವಿದ್ದರೆ, ನಿಮ್ಮ ನರಿಬುದ್ಧಿಯ ಸುದರ್ಶನ ದೇವನಿಗೆ ಬುದ್ಧಿ ಇದ್ದರೆ ಇಲ್ಲಿಗೇ ಬಂದು ನನ್ನ ಎದುರಿಸಲಿ." ಎಂದು ಗದರಿಸಿ ಕಳುಹಿಸಿದ.

ಹೆದರಿದ ಚಾರ ಅಲ್ಲಿಂದ ಕೂಡಲೇ ಹೊರಟ.

ಸಂಜೆಯ ವೇಳೆಗೆ ಅವಿಮುಕ್ತದ ಸೇನೆ ವಯನದ ಕಡೆಗೆ ನಡೆದಿತ್ತು. ಹಿಂದಿನ ದಿನ ಘುಂಢಿಯ ಕೈಯಿಂದ ಹತನಾಗಿದ್ದ ರಕ್ಷಣಾಧಿಕಾರಿಯ ಮಗನೇ ಈಗ ನೇತೃತ್ವವನ್ನು ವಹಿಸಿದ್ದ. ಅವನಲ್ಲಿ ತನ್ನ ತಂದೆಯ ಸಾವಿನ ಪ್ರತಿಕಾರವನ್ನು ತೀರಿಸಿಕೊಳ್ಳಬೇಕೆಂಬ ಹಟವಿತ್ತು. ವಯನದಲ್ಲಿ ಪಾಳಯದ ಹೊರಗೆ ಸೇನೆ ನಿಂತಿತು. ಅರಣ್ಯಕರ ಗಣ ಈಗ ಬೆಳೆದಿರುವುದರಿಂದ ಅಲ್ಲಿರುವವರ ಶಕ್ತಿಯನ್ನು ಅರಿಯದೇ ನುಗ್ಗುವುದು ಬೇಡವೆಂದು ಸಂಬೋಧಿಯು ಸೇನಾಧಿಕಾರಿಗೆ ಎಚ್ಚರಿಸಿದ್ದನು.

ತಮ್ಮ ಪಾಳಯದ ಸುತ್ತಲೂ ಮಾತಂಗರು ಗದೆ, ಖಡ್ಗ, ಪರಶು ಇತ್ಯಾದಿ ಆಯುಧಗಳೊಂದಿಗೆ ನಿಂತಿದ್ದರು. ವದೀರಜ್ಜನ ಕುಟೀರದಲ್ಲಿ ಮಾಂಸವನ್ನು ಕಡಿಯುತ್ತಾ, ಸುರೆಯನ್ನು ಕುಡಿಯುತ್ತಾ ಕುಳಿತಿದ್ದ ಘುಂಢಿಯ ಎದುರಿನಲ್ಲಿ ಆಸುರ, ಪಿಚುಡಲ ಮತ್ತು ವದೀರಜ್ಜ ಕುಳಿತಿದ್ದರು. ಆಸುರ ಮತ್ತು ಪಿಚುಡಲ ಸುರೆಯನ್ನು ಸೇವಿಸುತ್ತಿದ್ದರು. ವದೀರಜ್ಜನ ಕಣ್ಣುಗಳಲ್ಲಿ ನೀರು ತುಂಬಿತ್ತು.

“ಈ ಅಳುವ ಮುದುಕನ ಹೊರಗೆ ಕಳುಹಿಸಿ.” ಎಂದ ಘುಂಢಿ ಆಸುರನ ಕಡೆಗೆ ತಿರುಗಿ.

“ನೀನೇ ಅವನ ಕುಟೀರ ಬಿಟ್ಟು ಹೊರಗೆ ಬಾ.” ಎಂದ ಆಸುರ ನಗುತ್ತಾ.

“ಹೌದು. ನಾಳೆ ವಯನದ ಹೊರಗೆ ನಾನು ಮನೆ ಕಟ್ಟಿಕೊಳ್ಳುತ್ತೇನೆ.” ಎಂದ ನಗುತ್ತಾ ಘುಂಢಿ.

ವದೀರಜ್ಜನು ಕುಟೀರದಲ್ಲಿಯೇ ಕುಳಿತಿದ್ದ. ಘುಂಢಿಯು ಎದ್ದು ಹೊರಗೆ ಬಂದು ಬಿಸಿಲಿಗೆ ಮೈಯೊಡ್ಡಿ ಕೈ ಕಾಲುಗಳನ್ನು ಝಾಡಿಸಿ ಆಕಳಿಸಿದ. ಅವನ ರೀತಿ ಅರ್ಥವಾಗದೇ ಅವಿಮುಕ್ತದ ಸೇನೆ ಕಾದು ನೋಡುತ್ತಿತ್ತು. ಆಸುರ ಮತ್ತು ಪಿಡುಡಲ ತಮ್ಮ ತಮ್ಮ ಸುರೆಯ ಗಡಿಗೆಗಳನ್ನು ಹಿಡಿದುಕೊಂಡು ಹೊರಗೆ ಬಂದರು.

ಸೇನಾಧಿಪತಿಗೆ ಇವರು ತಮ್ಮ ಎದುರು ಸುರೆಯನ್ನು ಕುಡಿಯುತ್ತಾ ತಮ್ಮ ಇಷ್ಟದಂತೆ ವರ್ತಿಸಿಕೊಂಡು ತಮ್ಮನ್ನು ಲಕ್ಷಿಸದೇ ಇರುವುದು ಕೋಪವನ್ನು ಹೆಚ್ಚಿಸುತ್ತಿತ್ತು. ಘುಂಢಿ ಮತ್ತೊಂದು ಗಡಿಗೆ ಸುರೆಯನ್ನು ತನ್ನ ಹೊಟ್ಟೆಗೆ ಸುರಿದುಕೊಂಡು ಕೊಡಲಿಯನ್ನು ಹೆಗಲಿಗೇರಿಸಿಕೊಂಡ. ಅವನು ಕೊಡಲಿಯನ್ನು ಹೆಗಲಿಗೇರಿಸಿಕೊಂಡಂತೆ ಮಾತಂಗರು ಜಯ ಘೋಷಗಳನ್ನು ಕೂಗಿದರು. ಜಯ ಘೋಷಗಳನ್ನು ಕೂಗುತ್ತಿದ್ದಂತೆ ಕೊಂಬನ್ನು ಊದಿದರು. ಭೇರಿಯನ್ನು ಬಡಿಯ ತೊಡಗಿದರು. ಇತ್ತಲೂ ಅವಿಮುಕ್ತದ ಸೇನೆಯನ್ನು ಎಚ್ಚರಿಸಲು ಅವರ ಕಡೆಯಿಂದ ಯುದ್ಧದ ಕಹಳೆ ಮೊಳಗಿತು. ರಣಭೇರಿ ಮೊಳಗತೊಡಗಿತು.

ವಯನದ ಕಡೆಯಿಂದ ಮಾತಂಗರು ಬಾಣಗಳನ್ನು ಸುರಿಸತೊಡಗಿದರು. ಅವಿಮುಕ್ತದ ಸೈನ್ಯವೂ ಶರಸಂಧಾನ ಮಾಡುತ್ತಾ ಮೆಲ್ಲ ಮೆಲ್ಲನೆ ವಯನದ ಕಡೆಗೆ ನಡೆದು ಬರುತ್ತಿತ್ತು. ಘುಂಢಿ ಕೊಡಲಿಯನ್ನು ಹೆಗಲಿಗೇರಿಸಿಕೊಂಡು ಬರಿದೇ ನೋಡುತ್ತಾ ನಿಂತಿದ್ದ. ಯೋಜನೆಯನ್ನು ಅರಿತಿದ್ದ ಆಸುರ ಮತ್ತು ಪಿಚುಡಲರೂ ತಮ್ಮ ತಮ್ಮ ಆಯುಧಗಳಾದ ಖಡ್ಗ ಮತ್ತು ಗುರಾಣಿಯನ್ನು ಹಿಡಿದು ಕಾಯುತ್ತಿದ್ದರು.

ಅವಿಮುಕ್ತದ ಸೈನ್ಯವು ಬಾಣಗಳನ್ನು ಸುರಿಸುತ್ತಲೇ ಮಾತಂಗರ ಪಾಳಯವನ್ನು ಸಮೀಪಿಸುತಿತ್ತು. ಆಗಲೇ ಅವರಿಗೆ ಆಘಾತವಾಗುವಂತೆ, ಅವಿಮುಕ್ತದ ಕಡೆಯಿಂದ ನಾಲ್ವರು ಅಶ್ವಾರೂಢ ಚಾರರು ಕೊಂಬನ್ನು

ಊದುತ್ತಾ, ಸೈನ್ಯವು ಹಿಂದಕ್ಕೆ ಬರುವಂತೆ ಸೂಚಿಸುತ್ತಾ ವೇಗವಾಗಿ ಇವರ ಕಡೆಗೇ ಬರುತ್ತಿದ್ದರು. ಸೈನ್ಯಾಧ್ಯಕ್ಷ ದಿಕ್ಕೆಟ್ಟುನಿಂತ.

ಅಶ್ವಾರೂಢ ಚಾರರು ಸೈನ್ಯವನ್ನು ಕೂಗಿ ಹಿಂದಕ್ಕೆ ಕರೆಯುತ್ತಿದ್ದರು. "ನಾಡಿನಲ್ಲಿ ದಾಳಿ, ಮೂಷಿಕರ ದಾಳಿ. ಬನ್ನಿ, ಬೇಗ ಬನ್ನಿ."

ಆಗಲೇ ವಿರಾಟನಗರದಿಂದ ಅವಿಮುಕ್ತಕ್ಕೆ ಚಾರರು ಬೊಬ್ಬೆಯಿಡುತ್ತಾ ಬಂದಿದ್ದರು.

"ವಿರಾಟನಗರದ ಮೇಲೆ ಗಜಾರೂಢ ಮಾತಂಗರು ದಾಳಿ ಮಾಡಿದ್ದಾರೆ."

ಈ ಹೊತ್ತಿಗೆ ಢುಂಢಿ ಕೊಡಲಿ ಬೀಸುತ್ತಾ ಸೈನ್ಯಾಧ್ಯಕ್ಷನ ಕಡೆಗೆ ನಡೆದ. ಸೈನ್ಯಾಧ್ಯಕ್ಷ ಢುಂಢಿಯೊಡನೆ ಕಾಳಗಕ್ಕೆ ನಿಂತ. ಆಸುರ ಮತ್ತು ಪಿಚುಡಲ ಉಳಿದವರ ಕಡೆ ಗಮನ ಹರಿಸಿದರು. ಸೈನ್ಯ ಇಬ್ಭಾಗವಾಯ್ತು. ಒಂದು ಪಡೆ ಅವಿಮುಕ್ತನಗರದ ಕಡೆ ಓಡಿದರೆ, ಮತ್ತೊಂದು ಪಡೆ ವಯನದ ಮಾತಂಗರ ಕಡೆ ನಡೆದು ಪೆಟ್ಟು ತಿಂದಿತು.

ಸೈನ್ಯವು ಅವಿಮುಕ್ತವನ್ನು ತಲುಪುವಷ್ಟರಲ್ಲಿ ಚೇರುದಿಯ ನೇತೃತ್ವದಲ್ಲಿ ಮೂಷಕರು ಆರ್ಯರ ಶ್ರೀಮಂತಿಕೆಯ ಮನೆಗಳನ್ನು ಕೊಳ್ಳೆ ಹೊಡೆದಿದ್ದರು. ಅವರನ್ನು ತಡೆಯಲು ಅಲ್ಲಿದ್ದ ಸೈನ್ಯವು ಸಾಕಾಗಿರಲಿಲ್ಲ.

ವಿರಾಟನಗರದಲ್ಲಿ ಗಜಾರೂಢ ಮಾತಂಗರು ಹಸ್ತಿದಂತನ ನೇತೃತ್ವದಲ್ಲಿ ಮನೆಗಳನ್ನು ಮತ್ತು ಮಾರುಕಟ್ಟೆಗಳನ್ನು ಧ್ವಂಸ ಮಾಡಿದ್ದರು. ಅಶ್ವಾರೂಢ ಮಾತಂಗರು ಸ್ವರ್ಣಾಭರಣಗಳನ್ನು, ವಸ್ತ್ರಗಳನ್ನು ಮತ್ತು ಆಯುಧಗಳನ್ನು ದೋಚಿದ್ದರು.

ಹೊಸ ಸೈನ್ಯಾಧಿಕಾರಿಯೂ ಹತನಾದ. ಸೈನ್ಯವು ಹಿಮ್ಮೆಟ್ಟಿತು. ಎರಡನೆಯ ಬಾರಿ ಅವಿಮುಕ್ತದ ಸೈನ್ಯಕ್ಕೆ ಮುಖಭಂಗವಾಗಿತ್ತು.

ಮಹಿಪಾಲ ಢುಂಢಿಯ ಮೇಲೆಷ್ಟು ಸಿಟ್ಟಾಗಿದ್ದನೋ ಸುದರ್ಶನದೇವನ ಮೇಲೆ ಅದಕ್ಕಿಂತಲೂ ಹೆಚ್ಚು ಸಿಟ್ಟಾಗಿದ್ದನು.

"ನೀನು…" ತಾವು ಎಂದು ಬಳಸುತ್ತಿದ್ದ ಎಡೆಯಲ್ಲಿ, "ನಮ್ಮ ಅವಿಮುಕ್ತವನ್ನೇ ಸರ್ವನಾಶ ಮಾಡಲು ಬಂದಿರುವ ಬ್ರಾಹ್ಮಣ. ನಾವೂ ಅರಣ್ಯಕರೊಂದಿಗೆ ಸಂಬಂಧ ಗುರುತಿಸಿಕೊಂಡು ನಾಯಕರಾಗಿದ್ದೆವು. ನಮ್ಮನ್ನು ಆರ್ಯರನ್ನಾಗಿ ಮಾಡಿ, ಕ್ಷತ್ರಿಯರೆಂದು ಗುರುತಿಸಿ, ಇಂದು ನಮ್ಮನ್ನು ಕಾಯುತ್ತಿದ್ದವರೊಂದಿಗೇ ಹಗೆತನ ಕಟ್ಟಿಕೊಳ್ಳುವಂತೆ ಮಾಡಿದಿರಿ. ಇದಕ್ಕಿಂತ ಸರ್ವನಾಶ ಇನ್ನೇನಾಗಬೇಕು. ನಮಗೆ ದೇವತೆಗಳಿಂದ ಶಕ್ತಿಪ್ರಸಾದಗಳನ್ನು ಕೊಡುತ್ತೇವೆಂದು ಹೇಳಿ, ಶತ್ರುಗಳನ್ನು ಕಂಡರೆ ನರ ಮನುಷ್ಯರಿಗಿಂತಲೂ ವೇಗವಾಗಿ ಓಡುವ ಧೈರ್ಯಹೀನರನ್ನು ದೇವತೆಗಳೆಂದು ಕರೆದು ನಮ್ಮನ್ನು ಬಲಹೀನರನ್ನಾಗಿ ಮಾಡಿದಿರಿ." ಮಹಿಪಾಲ ಇಷ್ಟು ವರ್ಷಗಳಿಗೆ ಮೊದಲಬಾರಿಗೆ ಗಟ್ಟಿಯಾಗಿ ಸುದರ್ಶನದೇವನನ್ನು ಆರೋಪಿಸಿದ.

"ಹೇ ರಾಜನ್, ಇಂತಹ ಸೂಚನೆಗಳನ್ನು ಅರಿತೇ ನಾನು ಮಹಾವಿಷ್ಣುವಿನ ಚೈತನ್ಯವು ದೇಹರೂಪದಲ್ಲಿರುವ ಶ್ರೀಕೃಷ್ಣನಿಗೆ ಸಂದೇಶ ಕಳುಹಿಸಿದ್ದೇನೆ. ಕುರುಕ್ಷೇತ್ರದ ಯುದ್ಧವು ಮುಗಿದು ಪಾಂಡವರಿಗೆ ತಾನು ಮಾತುಕೊಟ್ಟಂತೆ ರಾಜ್ಯವನ್ನು ಮರಳಿಸಿಕೊಟ್ಟಿರುವ ಭಗವಂತನೇ ಅವನು.

ದುಷ್ಟರನ್ನು ದಂಡಿಸಿ, ಶಿಷ್ಟರನ್ನು ರಕ್ಷಿಸುವವನು ಆ ಮಧುಸೂದನ. ಹೆದರಬೇಡ ಮಹಿಪಾಲ. ನನ್ನ ನಂಬು. ಇಂದು ಅಥವಾ ನಾಳೆಯೊಳಗೆ ಶ್ರೀ ಕೃಷ್ಣನು ಬರಲಿದ್ದಾನೆ." ಎಂದನು ಸುದರ್ಶನದೇವ.

ಸುದರ್ಶನದೇವ ಮಹಿಪಾಲನನ್ನು ಸಮಾಧಾನಿಸಿ ನಿಧಾನವಾಗಿ ದ್ವಾರದ ಕಡೆಗೆ ನಡೆಯುತ್ತಿದ್ದಂತೆ ಅವನ ಚಾರನು ಓಡೋಡಿ ಬಂದ. "ಆಚಾರ್ಯ, ಆಚಾರ್ಯ, ಪ್ರಮಾದವಾಯಿತು."

"ಏನಾಯಿತು? ಶ್ರೀಕೃಷ್ಣ ಬರಲೊಪ್ಪಲಿಲ್ಲವೇ?" ಸುದರ್ಶನ ದೇವ ಗಾಬರಿಯಿಂದ ಕೇಳಿದ.

"ಆಚಾರ್ಯರೇ, ಶ್ರೀಕೃಷ್ಣನನ್ನು ಕಪಟಿಯೆಂದು, ಪಕ್ಷಪಾತಿಯೆಂದು, ದೇವ ಪದವಿಯ ಆಸೆಗೆ ಆರ್ಯರೊಂದಿಗೆ ಒಡಂಬಡಿಕೆ ಮಾಡಿಕೊಂಡಿರುವ ಕುತಂತ್ರಿಯೆಂದೂ ವ್ಯಾಧರ ಗಣವೊಂದು ಅವನನ್ನು ಕಾಡಿನಲ್ಲಿಯೇ ಕೊಲೆ ಮಾಡಿದ್ದಾರೆ. ಅವನ ಜನರಾದ ಯಾದವರೇ ಅವನ ಮಾತು ಕೇಳದೇ ಸುರೆ ಕುಡಿದುಕೊಂಡು, ಬಡಿದಾಡಿಕೊಂಡು ಸತ್ತರು." ಬಂದವನು ಅರುಹಿದ.

"ಹರಿ, ಹರಿ..." ಸುದರ್ಶನ ದೇವ ಕುಸಿದು ಕುಳಿತ.

"ಇಷ್ಟಕ್ಕೇ ಸಾಲದಂತೆ, ಉಕ್ಕಿದ ಮಹಾಪ್ರವಾಹದಿಂದ ದ್ವಾರಕಾನಗರಿಯೇ ಕೊಚ್ಚಿಹೋಯಿತು."

"ಮಹಾವಿಷ್ಣುವಿನ ಅವತಾರವಾದ ಕೃಷ್ಣನ ಮಾಯಾ ಜಾದುವೆಲ್ಲಾ ಹೀಗೇಕೆ ಮುಗಿದುಹೋಯಿತು ಆಚಾರ್ಯರೇ?" ಮಹಿಪಾಲ ಇನ್ನಷ್ಟು ಕ್ರೋಧದಿಂದ ಕೇಳಿದ. "ಯಾವನೋ ವಿಷ್ಣು, ಯಾವನೋ ಮಿತ್ರ, ಯಾವನೋ ವರಣರನ್ನು ಎಲ್ಲಿಂದಲೋ ಕರೆತರುವ ಆಸೆ ತೋರಿಸಿ, ನಾನು ನನ್ನ ಜನರೊಂದಿಗೆ ಬದುಕುವುದನ್ನು ಇಷ್ಟೂ ವರುಷವೂ ಹಾಳು ಮಾಡಿದೆ." ಮಹಿಪಾಲ ತನ್ನ ಒರೆಯಿಂದ ಖಡ್ಗವನ್ನು ಹೊರತೆಗೆದು ಸುದರ್ಶನದೇವನ ಗುರಿಯಾಗಿಸಿಕೊಂಡು ನಡೆದ.

"ಹೇ ರಾಜನ್, ದಯೆತೋರು. ಬ್ರಾಹ್ಮಣ ಹತ್ಯೆ ಮಹಾಪಾಪ. ಬ್ರಹ್ಮಹತ್ಯಾ ದೋಷವು ನಿನ್ನ ಆವರಿಸಿ ಜನ್ಮಾಂತರದವರೆಗೂ ಕಾಡುತ್ತದೆ. ಅತಲವಾದ ಪಾತಾಳದ ನರಕವೇ ನಿನಗೆ ಗತಿಯಾಗುತ್ತದೆ." ಎಂದು ಸುದರ್ಶನದೇವ ಭಯದಿಂದ ಕೂಗಿದ.

"ತಳವೇ ಇಲ್ಲದ ನರಕದ ಪಾತಾಳದಲ್ಲಿ ಜನ್ಮಾಂತರವೂ ಬೀಳುತ್ತಲೇ ಇದ್ದರೂ, ನನ್ನ ಜನರಿಗೆ ನಿನ್ನ ಸ್ವಾರ್ಥಪರ ಪೌರೋಹಿತ್ಯದಿಂದ ಬಿಡುಗಡೆಗೊಳಿಸುತ್ತೇನೆ." ಎನ್ನುತ್ತಾ ಮಹಿಪಾಲನು ಖಡ್ಗ ಬೀಸುವ ತೋಳನ್ನು ಸಂಬೋಧಿಯು ಹಿಡಿದ.

"ಪ್ರಭೂ, ಆವೇಶದಲ್ಲಿ ಅನರ್ಥವಾಗಕೂಡದು."

"ಇನ್ನಾವ ಅನರ್ಥವಾಗಬೇಕು ಹೇಳು ಸಂಬೋಧಿ." ಮಹಿಪಾಲ ಖಡ್ಗವನ್ನು ನೆಲದ ಮೇಲೆ ಒಗೆದು ಮಗುವಿನಂತೆ ಅಳುತ್ತಾ ಕುಳಿತುಬಿಟ್ಟ. "ಈ ನೀಚ ತೋರಿಸುತ್ತಿದ್ದ ಹೊಳೆಹೊಳೆಯುವ ದೈವತ್ವದ ಪದವಿಗಾಗಿ ಆಸೆ ಪಡುತ್ತಾ ಮೂರ್ಖನಾದೆ. ಮೋಸ ಹೋದೆ."

"ಆಚಾರ್ಯಾ." ಸಂಬೋಧಿಯು ಸುದರ್ಶನದೇವನಲ್ಲಿ ಕೈ ಮುಗಿದು ಕೇಳಿಕೊಂಡ. "ಕ್ಷಮಿಸಿ, ಆಗ್ರಹದಲ್ಲಿ ಪ್ರಭುಗಳು ದುಡುಕುತ್ತಿದ್ದರು. ಅರಿವಿನಲ್ಲಿ ಶಿಖಾಮಣಿಯಾಗಿರುವ ತಾವು ಅವರ ಈ ಸಂದರ್ಭದಲ್ಲಿ

ಉಂಟಾಗಿರುವ ಮನೋವ್ಯಾಕುಲವನ್ನು ಬಲ್ಲವರಾಗಿರುವಿರಿ. ದಯವಿಟ್ಟು ತಮ್ಮ ಕುಟೀರಕ್ಕೆ ತೆರಳಿ. ವಾತಾವರಣ ತಿಳಿಯಾದ ಮೇಲೆ ಮತ್ತೆ ಕಾಣೋಣ."

ಅಂಗರಕ್ಷಕರೊಡನೆ ಸುದರ್ಶನದೇವನನ್ನು ಕಳುಹಿಸಿಕೊಡಲಾಯಿತು.

"ಪ್ರಭೂ, ಮೂರ್ಖರಾಗುವ ದುರ್ಬಲ ಮನಸ್ಸಿನವರಿರುವರೆಗೂ ಮೂರ್ಖರನ್ನಾಗಿಸುವಂತವರು ಹುಟ್ಟಿಕೊಳ್ಳುತ್ತಲೇ ಇರುತ್ತಾರೆ. ಮೋಸಗೊಳಿಸುವುದು ಎಷ್ಟು ಅಪರಾಧವೋ ಅದಕ್ಕಿಂತ ಹೆಚ್ಚಿನ ಅಪರಾಧವೆಂದರೆ ಮೋಸ ಮಾಡಲು ಅವಕಾಶ ನೀಡುವುದು. ನಾವೇ ಅವರಿಗೆ ಅವಕಾಶವನ್ನು ನೀಡಿ, ಅವರನ್ನೇ ದೂರುವುದರಲ್ಲಿ ಅರ್ಥವಿಲ್ಲ. ಮಿಗಿಲಾಗಿ, ನಮ್ಮ ಅವಿಮುಕ್ತದಲ್ಲಿ ಬ್ರಾಹ್ಮಣರ ಮತ್ತು ಆರ್ಯರ ಪ್ರಾಬಲ್ಯದ ಹೆಚ್ಚುವರಿಯನ್ನು ಈಗಾಗಲೇ ಸ್ಪಷ್ಟವಾಗಿ ಕಾಣುತ್ತಿದ್ದೇವೆ. ಈಗಾಗಲೇ ಅರಣ್ಯಕರ ವಿರೋಧವನ್ನು ಕಟ್ಟಿಕೊಂಡು ಸಂಕಷ್ಟದಲ್ಲಿ ಸಿಲುಕಿರುವ ನಾವು, ಸುದರ್ಶನ ದೇವನ ಕೊಲೆಯಿಂದ ಆರ್ಯರೊಡನೆಯೂ ಸಂಘರ್ಷವನ್ನು ಎದುರಿಸಬೇಕಾಗುತ್ತದೆ." ಎಂದು ಸಂಬೋಧಿಯು ಮಹಿಪಾಲನನ್ನು ಸಮಾಧಾನಪಡಿಸಿದನು.

ವಿರಾಟನಗರ ಮತ್ತು ಅವಿಮುಕ್ತವನ್ನು ಕೊಳ್ಳೆ ಹೊಡೆದ ಮಾತಂಗರು ಮತ್ತು ಮೂಷಿಕರು ವಿಜಯೋತ್ಸವದಿಂದ ವಯನಕ್ಕೆ ಹಿಂದಿರುಗಿದರು. ಢುಂಢಿಯು ವಿಜಯೋನ್ಮಾದದಿಂದ ಬೀಗಿದ. ಪಾಳಯದಲ್ಲಿ ಎಲ್ಲರೂ ಗೌಡವನ್ನು ಕುಡಿಯುತ್ತಾ, ಕುಣಿಯುತ್ತಾ ಸಂಭ್ರಮಿಸುತ್ತಿದ್ದರೆ ವದೀರಜ್ಜನೊಬ್ಬನೇ ಹೊಳೆಯ ದಂಡೆಯ ಮೇಲೆ ಕುಳಿತಿದ್ದ.

ಯಾವುದೇ ಆರ್ಯರ ಮನೆಯಲ್ಲಾಗಲಿ, ಬ್ರಾಹ್ಮಣರ ಮನೆಯಲ್ಲಾಗಲಿ ಸಂಪತ್ತಿರುವುದು ಗಮನಕ್ಕೆ ಬಂದರೆ, ಢುಂಢಿಯ ಗುಂಪು ಅಥವಾ ಢುಂಢಿಯೇ ದಾಳಿಯಿಟ್ಟು ದೋಚಿಕೊಂಡು ಬರುತ್ತಿದ್ದರು. ಅವಿಮುಕ್ತದಿಂದ ಅಂತರ್ವೇದಿಯವರೆಗೂ ಯಾವ ಬ್ರಾಹ್ಮಣರೂ, ಆರ್ಯಮುಖಂಡರೂ ತಮ್ಮ ಸಂಪತ್ತನ್ನು ಹೊರತೆಗೆಯುವಂತಿರಲಿಲ್ಲ.

ಢುಂಢಿ ಈಗ ವಯನದಲ್ಲಿ ಮಾತ್ರವೇ ಇರುತ್ತಿರಲಿಲ್ಲ. ಅಂತರ್ವೇದಿ, ಶುಕ್ತಿಮತ್, ಸೋಮನಾಥ, ಪ್ರಯಾಗ ಎಲ್ಲಾ ಕಡೆಯೂ ತನ್ನ ದಾಳಿಯನ್ನು ಮಾಡುತ್ತಿದ್ದ. ಆರ್ಯಸಮಾಜವು ಅವನನ್ನು ಎದುರಿಸಲು ಪಡೆಯನ್ನೇ ರಚಿಸಿದರೂ ಅವನ ಗಜದಾಳಿಯ ಮುಂದೆ ಅವರು ಎದುರು ನಿಲ್ಲಲು ಆಗುತ್ತಿರಲಿಲ್ಲ. ಅವರಿಗೆ ಅತ್ಯಮೂಲ್ಯವಾದ ಗ್ರಂಥಗಳನ್ನು, ಆಭರಣ ಮತ್ತು ರತ್ನಗಳನ್ನು, ವಸ್ತ್ರಗಳನ್ನು ಗುಪ್ತವಾಗಿ ಬಚ್ಚಿಡುತ್ತಿದ್ದರು. ಪಿಚುಡಲ, ಆಸುರಾದಿ ಅನೇಕ ವಿನಾಯಕರು ವಿದ್ಯಾವಂತ ಬ್ರಾಹ್ಮಣನು ತನ್ನ ಶಿಷ್ಯರೊಡನೆ ಕುಳಿತು ಶಿಕ್ಷಣ ನೀಡಲೂ ಬಿಡುತ್ತಿರಲಿಲ್ಲ, ಕೃಷಿಯೇ ಮೊದಲಾದ ಯಾವುದೇ ಕೆಲಸ ಕಾರ್ಯಗಳನ್ನು ಮಾಡಿಕೊಳ್ಳಲು ಬಿಡುತ್ತಿರಲಿಲ್ಲ. ಈ ಮಾತಂಗರಿಗೆ ಕೃಷಿಯೇನೂ ಅಷ್ಟು ಮುಖ್ಯವಾಗಿರಲಿಲ್ಲ. ಅವರಿನ್ನೂ ಬೇಟೆಯಾಡುತ್ತಿದ್ದರು. ಬೇಕಾದ್ದನ್ನು ತಮಗೆ ಬೇಕಾದಷ್ಟನ್ನು ತಾವು ಬೆಳೆದುಕೊಳ್ಳುತ್ತಿದ್ದರು.

ಮದುವೆ, ಪುಂಸವನ, ಉಪನಯನ, ಯಜ್ಞ, ಯಾಗ ಇತ್ಯಾದಿ ಮಂಗಳ ಕಾರ್ಯಗಳ ಸಂದರ್ಭಗಳಲ್ಲಿ ಆರ್ಯರು ತಾವು ಅಡಗಿಸಿಟ್ಟಿದ್ದ ಸಂಪತ್ತನ್ನು ಹೊರಗೆ ತೆಗೆಯಲೇ ಬೇಕಾಗುತ್ತಿತ್ತು. ಆಗ ಢುಂಢಿಯ ಕಡೆಯವರು ಅಥವಾ ಸ್ವಯಂ ಢುಂಢಿಯೇ ಬಂದು ಗಲಭೆಯೆಬ್ಬಿಸಿ, ಅಡ್ಡ ಬಂದವರನ್ನು ಕೊಂದು, ಸಂಪತ್ತನ್ನು ಕೊಳ್ಳೆ ಹೊಡೆದು ಹೋಗುತ್ತಿದ್ದರು. ಹಾಗಾಗಿ ಅವರ ಎಲ್ಲಾ ಮಂಗಳಕಾರ್ಯಗಳೂ

ಅಮಂಗಳಕರವಾಗಿ ಕೊನೆಗಾಣುತ್ತಿದ್ದವು. ಕೆಲವೊಮ್ಮೆ ಎದುರಿಸಿ ಕಾದಾಡುವ ಎಳೆಯ ಹುಡುಗರನ್ನು, ನರ್ತಕಿಯರನ್ನು, ಸಂಗೀತಗಾರರನ್ನು ಹಗ್ಗಗಳಿಂದ ಬಂಧಿಸಿ ತಮ್ಮ ಎಡೆಯಲ್ಲಿ ದೂಡಿಟ್ಟುಕೊಳ್ಳುತ್ತಿದ್ದರು. ಅವರಿಂದ ಹಾಡಿಸಿ, ಕುಣಿಸಿ, ತಮ್ಮ ಕೆಲಸಗಳನ್ನು ಮಾಡಿಸಿಕೊಂಡು ವಿನೋದವನ್ನು ಹೊಂದುತ್ತಿದ್ದರು.

ಅದೊಂದು ದಿನ ಸಂಬೋಧಿಯು ಅಂತರ್ವೇದಿಯಲ್ಲಿದ್ದ ಢುಂಢಿಯನ್ನು ಕಾಣಲು ಬಂದ. "ಜಯ ಜಯ ಢುಂಢಿ ಗಣಪತಿ." ಹಾಗೆಂದ ಅವನ ಜಯಕಾರವನ್ನು ಸ್ವೀಕರಿಸಿದ ಢುಂಢಿ ಅವನನ್ನು ನೇರವಾಗಿ ದಿಟ್ಟಿಸಿದ. ಅವನ ದೃಷ್ಟಿ ಏನಾಗಬೇಕಿತ್ತೆಂದು ಕೇಳುವಂತಿತ್ತು.

"ಮುಂದಿನ ಪೂರ್ಣಿಮೆಯ ದಿನ ನನ್ನ ಮೊಮ್ಮಗನ ಮದುವೆಯ ಶುಭಕಾರ್ಯ ನಡೆಯಲಿದೆ. ನೀನು ದಯಮಾಡಿ ಬಂದು ಮದುಮಕ್ಕಳನ್ನು ಆಶೀರ್ವಾದಿಸಬೇಕು." ಎಂದು ಹರಿವಾಣದ ತುಂಬಿದ ಆಭರಣಗಳನ್ನು, ಫಲಗಳನ್ನು, ವಸ್ತ್ರಗಳನ್ನು ಇತ್ತು ನಮಸ್ಕರಿಸಿ ಹೇಳಿದ.

"ಹೇ ಸಂಬೋಧಿ, ನಾನೇನು ಬ್ರಾಹ್ಮಣ ಪುರೋಹಿತನೇ ನಿನ್ನ ಮೊಮ್ಮಗನ ಮದುವೆಗೆ ಬಂದು ಮಂತ್ರಗಳನ್ನು ಹೇಳಿ ಆಶೀರ್ವಾದಿಸಲು? ಹೋಗು ಹೋಗು. ಆ ಕೆಲಸವನ್ನು ಸುದರ್ಶನದೇವನಂತಹ ನರಿಗಳು ಮಾಡುವರು." ಎಂದು ಢುಂಢಿ ನಕ್ಕ. ಅವನೊಂದಿಗೆ ಆಸುರ, ಪಿಚುಡಲ, ಚೇರುದಿ ಇತರರೆಲ್ಲಾ ನಕ್ಕರು.

"ಹಾಗೆನ್ನಬೇಡಿ. ನನಗೆ ನಿಮ್ಮ ಮೇಲೆ ಅಭಿಮಾನವಿದೆ. ನೀವೆಲ್ಲರೂ ಖಂಡಿತ ಮದುವೆಗೆ ಬರಲೇಬೇಕು ಮತ್ತು ಮದುಮಕ್ಕಳಿಗೆ ಎಲ್ಲವೂ ಒಳ್ಳೆಯದಾಗಲಿ ಎಂದು ಆಶೀರ್ವಾದ ಮಾಡಲೇಬೇಕು. ಆಗಲೇ ಅವರಿಗೆ ಶ್ರೇಯಸ್ಸು." ಎಂದು ಬಿನ್ನವಿಸಿಕೊಂಡನು.

ಮದುವೆಯ ದಿನ ಆಸುರ ಢುಂಢಿಗೆ ನೆನಪಿಸಿದ ಸಂಬೋಧಿಯ ಮೊಮ್ಮಗನ ಮದುವೆಯೆಂದು.

"ನೀವು ಹೋಗಿ ಬನ್ನಿ. ನಾನು ಬರಲಾರೆ. ಮದುವೆಯನ್ನೂ, ಮೈಥುನವನ್ನೂ ಅನುಭವಿಸದವನು ನಾನು ಬಂದು ಅಸೂಯೆಯ ಆಶೀರ್ವಾದ ಮಾಡಲಾರೆ. ಹೊತ್ತುಗೊತ್ತಿಲ್ಲದೇ ಮೈಥುನ ಮಾಡಿಕೊಂಡಿರುವ ನೀವು ಹರಸಬಹುದೇನೋ ನೋಡಿ." ಎಂದು ನಕ್ಕ ಢುಂಢಿ.

ಆಸುರ ಮತ್ತು ಪಿಚುಡಲರೊಂದಿಗೆ ಅನೇಕ ಗಣಮುಖ್ಯರು ಮದುವೆಗೆ ಅತಿಥಿಗಳಾಗಿ ಹೋದರು. ಅಲ್ಲಿ ಸಂಬೋಧಿಯಾದಿಯಾಗಿ ಎಲ್ಲರೂ ಅವರನ್ನು ಬಹು ಆದರಾತಿಥ್ಯಗಳಿಂದ ಸತ್ಕರಿಸಿದರು.

ಢುಂಢಿಯ ದಾಳಿಯನ್ನು ತಪ್ಪಿಸಿಕೊಂಡ ಸಂಬೋಧಿಯ ಪರಿಯನ್ನು ಆರ್ಯರೆಲ್ಲರೂ ಗುಪ್ತವಾಗಿ ಕೊಂಡಾಡಿದರು.

ಇದಾದ ಮೇಲೆ ಸುದರ್ಶನ ದೇವನ ಮೊಮ್ಮಗನ ಉಪನಯಕ್ಕೆ ಢುಂಢಿಗೆ ಕಾಣಿಕೆಗಳೊಂದಿಗೆ ಆಹ್ವಾನ ಬಂತು. ಕಾಣಿಕೆಗಳನ್ನು ಸ್ವೀಕರಿಸಿದ ಢುಂಢಿ ಅವನ ಶುಭಕಾರ್ಯದ ಮೇಲೆ ದಾಳಿ ಮಾಡಲಿಲ್ಲ. ಆದರೆ ಖಂಡಿತವಾಗಿ ಯಾರೂ ಹೋಗಲಿಲ್ಲ.

ವಿಘ್ನವನ್ನು ತಂದೊಡ್ಡದಿರಲು ಪ್ರಾರ್ಥಿಸುವಂತೆ ಅವನಲ್ಲಿ ಕಾಣಿಕೆಗಳನ್ನು ಅರ್ಪಿಸಿ ಬರುವುದು ಆರ್ಯರಲ್ಲಿ ಪರಿಪಾಟವಾಗಿಹೋಯ್ತು. ದಾಳಿ ಮಾಡದೆಯೇ ಬರುವ ಕಾಣಿಕೆಗಳನ್ನು ಸ್ವೀಕರಿಸುವುದರಲ್ಲಿ ಮಾತಂಗರ ಆಯುಧಗಳು ತುಕ್ಕು ಹಿಡಿಯತೊಡಗಿದವು.

ಆಸುರ, ಮಾರ, ಕುಂಭಿ, ಪಿಚುಡಲ, ಹಸ್ತಿಪಾಲ, ಲೋಮಹಿತ ಮತ್ತು ಚೇರುದಿಯೇ ಮೊದಲಾದವರು ಸಹ್ಯಾದ್ರಿ, ಶುಕ್ತಿಮತ್, ಕೈಲಾಸ, ನೈಮಿಷಾರಣ್ಯದ ಗಜಾರಣ್ಯಗಳು ಹಾಗೂ ವಯನದ ಅರಣ್ಯಪ್ರದೇಶಗಳನ್ನು ತಮ್ಮ ಅಂಕೆಯಲ್ಲಿರಿಸಿಕೊಂಡರು. ಈಗ ಢುಂಢಿಯು ಎಲ್ಲಿಗೂ ತಾನೇ ಹೋಗುವಷ್ಟಿರಲಿಲ್ಲ. ಅವನ ಹೆಸರೊಂದಿದ್ದರೆ ಸಾಕಿತ್ತು ಆರ್ಯ ಮುಖಂಡರಲ್ಲಿ, ನರರಲ್ಲಿ, ಸುರರಲ್ಲಿ ಮತ್ತು ವೈದಿಕ ಬ್ರಾಹ್ಮಣರಲ್ಲಿ ಭಯ ಹುಟ್ಟಿಸಲು.

ಮಾತಂಗರಲ್ಲಿ ಹಲವಾರು ಜನ ಮದುವೆಗಳಾದರು ಮತ್ತು ತಮ್ಮದೇ ಆದ ಕುಟುಂಬವನ್ನು ಗಮನಿಸಲು ತೊಡಗಿದಾಗ, ಮೂಷಿಕನಾದ ಚೇರುದಿ ಮಾತ್ರ ಢುಂಢಿಯ ಜೊತೆಯಲ್ಲಿಯೇ ಇದ್ದನು. ಅವನ ಅಂಗರಕ್ಷಕ ಮಾತಂಗರೂ ಬೆಂಗಾವಲಿಗೆ ಇದ್ದರು. ಢುಂಢಿಯು ಚೇರುದಿಯೊಂದಿಗೆ ಸಹ್ಯಾದ್ರಿಯ ದಕ್ಷಿಣಭಾಗದ ಮಲಯದ ಗಜಾರಣ್ಯಗಳಲ್ಲಿ ಅಲೆಯುತ್ತಾಗೊಮ್ಮೆ ಆಯಾಸದಿಂದಲೋ ಅಥವಾ ಅನಾರೋಗ್ಯದಿಂದಲೋ ನದಿಯ ದಂಡೆಯಲ್ಲಿ ಬಿದ್ದುಬಿಟ್ಟನು. ವಾಂತಿಯಾಗುತ್ತಿದ್ದು, ತಿಂದುದ್ದನೆಲ್ಲಾ ಕಕ್ಕಿಬಿಡುತ್ತಿದ್ದನು. ಎದೆಗುಂದದ ಚೇರುದಿ ಎಂಟು ದಿನಗಳ ಕಾಲ ನಾಲ್ಕು ಕಂಭಗಳ ಮಂಟಪವೊಂದರಲ್ಲಿ ಢುಂಢಿಯನ್ನಿಟ್ಟುಕೊಂಡು ಉಪಚರಿಸಿದನು. ಪ್ರತಿದಿನವೂ ಢುಂಢಿಯನ್ನು ನದಿಗೆ ಕರೆದೊಯ್ದು, ಸ್ನಾನ ಮಾಡಿಸಿ, ಮಂಟಪಕ್ಕೆ ಕರೆದುಕೊಂಡು ಬರುತ್ತಿದ್ದನು. ಅಲ್ಲಿ ಚರ್ಮದ ಹಾಸಿನ ಮೇಲೆ ದರ್ಭೆಗಳನ್ನು ಹರಡಿಸಿ ಅದರ ಮೇಲೆ ಮಲಗಿಸುತ್ತಿದ್ದನು. ನಂತರ ಅಲ್ಲಿನ ಬೆಟ್ಟಗಳಲ್ಲಿ ಸಿಗುವ ಸೀತಾಫಲ ಮತ್ತು ಸೀಬೇ ಹಣ್ಣುಗಳನ್ನು ತಂದು ಅವನಿಗೆ ಉಣಿಸುತ್ತಿದ್ದನು. ಢುಂಢಿಯು ಚೇತರಿಸಿಕೊಂಡ ಸಮಯದಲ್ಲಿ ಇಬ್ಬರೂ ಕುಳಿತುಕೊಂಡು ಮಾತಾಡುತ್ತಿದ್ದರು. ಅಥವಾ ನೆಲದ ಮೇಲೆ ಚೌಕಟ್ಟಿನ ಮನೆಗಳನ್ನು ಬರೆದುಕೊಂಡು ಚೌಕಾಬಾರ ಆಡುತ್ತಿದ್ದರು.

ಹುಣ್ಣಿಮೆಯ ರಾತ್ರಿಯೊಂದರಲ್ಲಿ ಢುಂಢಿ ನಿದ್ರೆ ಸರಿಯಾಗಿ ಬಾರದೇ ಮಂಟಪದಲ್ಲಿ ಎದ್ದು ಕುಳಿತ. ಚೇರುದಿ ಅನತಿದೂರದಲ್ಲಿ ಅಗ್ಗಿಷ್ಟಿಕೆಯನ್ನು ಹಾಕಿಕೊಂಡು ಎಚ್ಚರವಾಗಿ ಕುಳಿತಿದ್ದ. ಚೇರುದಿ ಸಂಪೂರ್ಣ ಸಮರ್ಪಣಾ ಮನೋಭಾವದಿಂದ ತನ್ನ ಸೇವೆಯನ್ನು ಮಾಡುತ್ತಿದ್ದುದ್ದನ್ನು ನೋಡಿ ಢುಂಢಿ ಅವನನ್ನು ಹತ್ತಿರಕ್ಕೆ ಕರೆದ.

"ನಾವು ಅಂದು ಮೂಷಾದ್ರಿಯ ಮೇಲೆ ಆಕ್ರಮಣ ಮಾಡಿದಾಗ ನೀನು ಮೂಷಕಗಣದಲ್ಲಿ ಎಲ್ಲಿದ್ದೆ?"

"ನಾನು ಚಿಕ್ಕ ಹುಡುಗ, ನಿನಗೆ ಕಲ್ಲು ಹೊಡೆಯಲು ಬಂದೆ. ಆದರೆ ಅದು ಕೈಜಾರಿದಾಗ ಹೆದರಿಕೊಂಡು ನನ್ನ ತಾಯಿಯ ಹಿಂದೆ ಅವಿತು ನೋಡುತ್ತಿದ್ದೆ. ನೀನು ನನ್ನ ನೋಡಿ ನಾನು ಬಿಟ್ಟುಬಂದ ಕಲ್ಲನ್ನು ನನ್ನ ಕಡೆಗೆ ಒದ್ದು ಹೂಂ, ಕಲ್ಲು ಹೊಡಿ ಬಾ ಎಂದಿದ್ದೆ."

"ನೀನು ಕಲ್ಲು ಹೊಡೆದೆಯಾ?"

"ಇಲ್ಲ."

"ಏಕೆ ನಿನಗೆ ಸಿಟ್ಟು ಬರಲಿಲ್ಲವಾ?"

"ನನಗೆ ಭಯ ಬಂತು."

“ಭಯವಾಗುವ ಬದಲು ಸಿಟ್ಟು ಬಂದಿದ್ದರೆ, ನೀನು ನಾಯಕನಾಗುತ್ತಿದ್ದೆ.” ಎಂದು ನಕ್ಕ ಢುಂಢಿ ಅವನ ಕೆನ್ನೆಗಳ ಮೇಲೆ ಪ್ರೀತಿಯಿಂದ ತಟ್ಟಿದ. “ಮೂಷಿಕ ಮಾತಂಗವನ್ನು ನೋಡಿಕೊಳ್ಳುತ್ತಿದೆ. ಇಲಿಯು ಆನೆಯನ್ನು ಕಾಪಾಡುತ್ತಿದೆ.” ಎಂದು ಜೋರಾಗಿ ನಕ್ಕ ಢುಂಢಿ ಹೇಳಿದ. “ಈಗ ಕತ್ತಿಯನ್ನು ಎತ್ತಿಕೊಂಡು ನನ್ನ ಮೇಲೆ ಬೀಸಿ ಕೊಲ್ಲು.”

“ಅದಾಗದು. ಹೋರಾಡುವಾಗ ಮಾತ್ರ ಹೋರಾಟ. ಕೊಂದರೆ ಹೋರಾಡುವ ಬಿಸಿಯಲ್ಲಿ ಕೊಲ್ಲಬೇಕು. ತಣ್ಣಗೆ ಕೊಲ್ಲುವುದಾದರೆ ಅದು ಸಂಚು. ಸಂಚು ವೀರರ ಲಕ್ಷಣವಲ್ಲ.” ಎಂದ ಚೇರುದಿ.

ಅದಕ್ಕೆ ನಕ್ಕ ಢುಂಢಿ ಸ್ವಲ್ಪ ಹೊತ್ತಾದ ಮೇಲೆ ಎದ್ದು ಮಂಟಪದಿಂದ ಹೊರಗೆ ಬಂದ. ತನ್ನ ಹಿಂದೆಯೇ ಎದ್ದು ಬರುವ ಚೇರುದಿಯನ್ನು ನೋಡಿ, “ನೀನು ಮಲಗಿ ಸ್ವಲ್ಪ ವಿಶ್ರಾಂತಿ ತೆಗೆದಿಕೋ. ನಾನು ಒಬ್ಬನೇ ಕೆಲಕಾಲ ಓಡಾಡಬೇಕು.” ಎಂದ. ಅದಕ್ಕೆ ಚೇರುದಿ ಸಮ್ಮತಿಸಿ ಮಂಟಪದಲ್ಲೇ ಉಳಿದರೂ ಮಲಗಲಿಲ್ಲ. ಉಳಿದಲ್ಲಿಯೇ ಕುಳಿತುಕೊಂಡು ಢುಂಢಿಯನ್ನು ನೋಡುತ್ತಿದ್ದ.

ನದಿಯ ದಂಡೆಗೆ ಬಂದ ಢುಂಢಿ ಹುಣ್ಣಿಮೆಯ ಚಂದಿರನನ್ನೇ ನೋಡುತ್ತಾ ನಿಂತುಬಿಟ್ಟ. ಬಹುಹೊತ್ತಿನ ನಂತರ ಕಣ್ಣು ಕತ್ತಲಾದಂತಾಗಿ ಕುಸಿದು ನೀರಿನಲ್ಲಿ ಬಿದ್ದ.

ಅವನಿಗೆ ಮತ್ತೆ ಎಚ್ಚರವಾದಾಗ ಬೆಳಗಾಗಿತ್ತು. ಚೇರುದಿ ಮತ್ತು ಇತರ ಮಾತಂಗರು ಉಪಚರಿಸುತ್ತಿದ್ದರು.

ಢುಂಢಿಯ ಇಚ್ಛೆಯಂತೆ ಸಹ್ಯಾದ್ರಿಯನ್ನು ತೊರೆದು ಅವಿಮುಕ್ತಕ್ಕೆ ಬಂದರು. ಅಲ್ಲಿ ಢುಂಢಿ ದಿನದ ಬಹುಪಾಲು ಸಮಯವನ್ನು ರುದ್ರಭೂಮಿಯಲ್ಲಿ ಕಾಪಾಲಿಕರೊಂದಿಗೆ ಕಳೆಯುತ್ತಿದ್ದ. ವದೀರಜ್ಜನು ತಯಾರಿಸಿದ್ದ ಗೋದಾವನ್ನು ನುಡಿಸುವುದು, ಕೆಲವೊಮ್ಮೆ ನುಡಿಸುವುದನ್ನು ಕೇಳುವುದು ಅವನ ನೆಚ್ಚಿನ ಹವ್ಯಾಸವಾಗತೊಡಗಿತು. ರುದ್ರರೊಂದಿಗೆ, ಭೈರವರೊಂದಿಗೆ ಅವನೂ ಮೈಗೆಲ್ಲಾ ಬೂದಿ ಬಳಿದುಕೊಂಡು ರುದ್ರಭೂಮಿಯಲ್ಲಿ ಇರುತ್ತಿದ್ದ. ಚಿತೆಯ ಸುತ್ತಲೂ ಕುಣಿಯುತ್ತಿದ್ದ. ಹೆಣಗಳ ಹೊಕ್ಕಳ ಮೇಲೆ ಕುಳಿತು ಅವರಿಂದ ಕಲಿತ ಬೀಜ ಮಂತ್ರಗಳನ್ನು ಕೂಗಿ ಹೇಳುತ್ತಿದ್ದ. ಕೆಲವೊಮ್ಮೆ ಯಾವ ಮಾತಂಗರಿಗೂ, ಚೇರುದಿಗೂ ಸಿಗದಂತೆ ಒಬ್ಬನೇ ರುದ್ರಭೂಮಿಗೆ ಹೋಗಿ ಚಿತಾಭಸ್ಮದಲ್ಲಿ ಮಲಗಿರುತ್ತಿದ್ದನು. ಕಣ್ಣೆವೆ ಅಲುಗಿಸದೇ ನೆಟ್ಟ ನೋಟವನ್ನು ಎತ್ತಲೋ ನೆಟ್ಟು ಸಮಾಧಿಯಲ್ಲಿರುತ್ತಿದ್ದನು.

ಅಂತಹದ್ದೊಂದು ದಿನ ಚಿತಾಭಸ್ಮದಲ್ಲಿ ಉರುಳಿಬಿದ್ದಿದ್ದ ಢುಂಢಿ ಎಷ್ಟು ಹೊತ್ತಾದರೂ ಮೇಲೇಳಲಿಲ್ಲ. ಚೇರುದಿ ಢುಂಢಿಯು ಮರಣಿಸಿದನೆಂದೇ ಭಾವಿಸಿ ಎಲ್ಲರನ್ನೂ ಕೂಗಿ ಕರೆದಿದ್ದನು. ಆದರೆ ಬೇಷಜರು ಢುಂಢಿಯನ್ನು ಪರೀಕ್ಷಿಸಿ, ಮರಣಿಸಿಲ್ಲವೆಂದು ಘೋಷಿಸಿ ಚಿಕಿತ್ಸೆ ನೀಡಲು ಪ್ರಾರಂಭಿಸಿದ್ದರು. ಅವಿಮುಕ್ತ ಅಥವಾ ವಯನಕ್ಕಿಂತ ಅಂತರ್ವೇದಿಯು ಹೆಚ್ಚು ಪ್ರಶಾಂತವಾಗಿಯೂ, ಚಿಕಿತ್ಸೆಗೆ ಅಗತ್ಯವಾದ ಗಿಡಮೂಲಿಕೆಗಳಿರುವುದರಿಂದ ಅಲ್ಲಿಗೇ ಢುಂಢಿಯನ್ನು ಸಾಗಿಸಿದರು. ಚೇರುದಿಯು ಅಲ್ಲೂ ಅಗ್ನಿಷ್ಟಿಕೆಯೊಂದನ್ನು ಹೊತ್ತಿಸಿ ಢುಂಢಿಗೆ ಕಾವಲಾಗಿಯೇ ಕುಳಿತನು.

*

ಢುಂಢಿಯ ಆಯುಧವನ್ನು, ಪಾಶಗಳನ್ನು, ಕೊಳ್ಳೆಹೊಡೆದು ತಂದಿರುವ ಅಥವಾ ಕಾಣಿಕೆಗಳಾಗಿ ಬಂದಿರುವ ಸ್ವರ್ಣಾಭರಣಗಳನ್ನು ಉರಿಯುತ್ತಿರುವ ಅಗ್ನಿಕುಂಡದಲ್ಲಿ ವಾಮದೇವರು ಸಮರ್ಪಿಸಿದರು.

ಮಂಡಲದಲ್ಲಿ ಮಲಗಿದ್ದ ಘುಂಢಿಯ ಕಣ್ಣುಗಳಲ್ಲಿ ಅಗ್ನಿಯ ಜ್ವಾಲೆಯು ಹೊಳೆಯುತ್ತಿತ್ತು.

## ಅಧ್ಯಾಯ 21 ಉಪಸಂಹಾರ

"ಶಂಬರ, ಶಂಬರ..." ಯದು ಅವನನ್ನು ಮೆಲ್ಲನೆ ತಟ್ಟಿ ಎಬ್ಬಿಸಿದ. ಇನ್ನೂ ಸಂಪೂರ್ಣವಾಗಿ ಬೆಳಕು ಹರಿದಿರಲಿಲ್ಲ. ಗಣಪತಿಯ ಮಂಟಪದ ಬಳಿ ಹೆಂಗಸರು ಮತ್ತು ಗಂಡಸರು ಅಳುತ್ತಿರುವ ಸದ್ದು ಕೇಳಿತು.

"ದೇಹಾಂತವಾಯಿತೇ?" ಶಂಬರ ಕೇಳಿದ.

"ಹೌದು."

ಹೊರಕ್ಕೆ ನಡೆದ ಯದುವನ್ನು ಶಂಬರ ಹಿಂಬಾಲಿಸಿದ. ಯಾಜ್ಞಿಕನೂ ಲಗುಬಗೆಯಿಂದ ತನ್ನ ಬ್ರಾಹ್ಮಣ ಮಿತ್ರನೊಡನೆ ಬರುತ್ತಿದ್ದ.

"ಹೇ ಗೋಮತ್, ಘುಂಢಿಗೆ ಪಾರ್ವತಿಯ ಮಾತೃಪ್ರೇಮವನ್ನು ಗಮನಿಸು. ಶಕ್ತಿಗಣದ ದೇವಿಯು ಈ ವನದೊಳಗೆ ಪ್ರವೇಶಿಸುತ್ತಿದ್ದಂತೆ ಇಲ್ಲಿ ಘುಂಢಿಯ ದೇಹಾಂತವಾಯಿತು." ಎಂದ ಮೆಲ್ಲನೆ ಯಾಜ್ಞಿಕ.

ಶಂಬರನು ತನಗೆ ಬಂದ ನಗುವನ್ನು ತೋರಿಸಿಕೊಳ್ಳುವ ಪರಿಸ್ಥಿತಿ ಅಲ್ಲಿರಲಿಲ್ಲ.

ವಾಮದೇವರು ರಚಿಸಿದ್ದ ಮಂಡಲದ ಮೇಲೆಯೇ ಘುಂಢಿಯ ಶವವಿತ್ತು. ಎಷ್ಟೋ ವರುಷಗಳ ಕಾಲ ಆರ್ಯರ, ಅದರಲ್ಲೂ ವೈದಿಕ ಬ್ರಾಹ್ಮಣರ ಭದ್ರಕೋಟೆಯನ್ನು ಒಡೆದಿದ್ದ ಶೂದ್ರರ, ಅರಣ್ಯಕರ ಬಂಡಾಯದ ದಳಪತಿಯನ್ನು ಎಲ್ಲರೂ ನೋಡಲು ಭಾವಾವೇಶದಲ್ಲಿ ನುಗ್ಗುತ್ತಿದ್ದರು. ಅದೆಷ್ಟೋ ಮಂದಿ ಬಿಕ್ಕಿ ಬಿಕ್ಕಿ ಅಳುತ್ತಿದ್ದರು. ವದೀರಜ್ಜನ ಘುಂಢಿಯ ದೇಹದ ಎದುರೇ ವದೀರಜ್ಜನ ಕೂರಿಸಿದ್ದರು. ಚೇರುದಿಯೂ ಪಕ್ಕದಲ್ಲಿಯೇ ನಿಂತಿದ್ದನು. ಅವನ ಮುಖದಲ್ಲಿ ಏನೂ ವ್ಯತ್ಯಾಸವಿರಲಿಲ್ಲ. ವಯಸ್ಸಾಗಿದ್ದ ಆಸುರ, ಪಿಚುಡಲ, ಮಾರ, ಹಸ್ತಿದಂತ ಮುಂತಾದ ಮಾತಂಗರು ಒಬ್ಬೊಬ್ಬರಾಗಿ ತಮ್ಮ ಕುಟುಂಬಗಳ ಸಮೇತ ಬರುತ್ತಿದ್ದರು.

ಘುಂಢಿಯ ಪಾದಗಳಿಗೆ ನಮಸ್ಕರಿಸಿದ ಶಂಬರ ವದೀರಜ್ಜನ ಪಕ್ಕಕ್ಕೆ ಹೋಗಿ ನಿಂತ. ಮೆಲ್ಲನೆ ಬಾಗಿ ವದೀರಜ್ಜನ ಮುಖವನ್ನು ಗಮನಿಸಿದ. ವದೀರಜ್ಜನ ಕಣ್ಣುಗಳು ತುಂಬಿದ್ದವು. ಧುಮುಕಲು ಸಿದ್ಧವಿರುವ ಕಣ್ಣೀರು ಬೀಳುವ ಮುನ್ನವೇ ಬತ್ತುತ್ತಿದ್ದಂತಿತ್ತು.

ಧೂಮಾವತಿ ನಂತರದ ಶಕ್ತಿಗಣದ ಈಗಿನ ನಾಯಕಿ ಭವಾನಿಯನ್ನು, ರುದ್ರಗಣದ ರುದ್ರನನ್ನು ಮತ್ತು ಮಾತಂಗ ಗಾಣಪತ್ಯದ ಬೆನಕನನ್ನು ಇನ್ನೊಂದು ಮಂಟಪದಲ್ಲಿ ಗಣಪ್ರಮುಖರು ಸುತ್ತುವರೆದು ಅಂತ್ಯಕ್ರಿಯೆಗೆ ಸಂಬಂಧಿಸಿದಂತೆ ವಿವಿಧ ವಿಷಯಗಳನ್ನು ಚರ್ಚಿಸುತ್ತಿದ್ದರು. ಮಾತಂಗರ ಪದ್ಧತಿಯಂತೆ ಹೆಣಗಳನ್ನು ಹೂಳುವುದೇ ಆಗಿದ್ದರೂ, ವಯನದವರು ಪುರುಷರನ್ನು ಬಾಳೆದಿಂಡಿನ ಮಂಚವನ್ನು ಕಟ್ಟಿ ಅದರಲ್ಲಿ ಶವವನ್ನು ಇಟ್ಟು ನದಿಗೆ ಬಿಡುತ್ತಿದ್ದರು. ಆದರೆ, ಈಗ ವಾಮದೇವರು ಮತ್ತು ಆರ್ಯ ಸಮುದಾಯದ ಇತರರು ಆರ್ಯರ ಪದ್ಧತಿಯಂತೆ ಚಿತೆಗಿಡುವ ಸೂಚನೆ ನೀಡಿದರು. ನಂತರ ಆ

ಚಿತಾಭಸ್ಮವನ್ನು ಪ್ರಯಾಗದಲ್ಲಿ ತ್ರಿವೇಣಿ ಸಂಗಮದಲ್ಲಿ ಬಿಡುವುದು ಎಂದು ಸೂಚಿಸಿದರು. ಆದರೆ, ಪಿಚುಡಲ, ಆಸುರ, ಮಾರ ಮತ್ತು ಹಸ್ತಿಪಾಲರು ಒಪ್ಪಲಿಲ್ಲ. ವಯನದವರ ಪ್ರಕಾರವೇ ನಡೆಯಬೇಕು ಎಂದು ಹಟ ಹಿಡಿದರು.

ಶಂಬರ ನಿಧಾನವಾಗಿ ಅಲ್ಲಿಂದ ಹೊರಗೆ ನಡೆದ. ಅವನು ಮಂಟಪದ ಹೊರಗೆ ನಡೆಯುವುದನ್ನು ಕಂಡ ಯಾಜ್ಞಿಕನೂ ಅವನನ್ನು ಹಿಂಬಾಲಿಸಿದ. ಒಂದು ಮಹಾಕಾಲವೇ ಮುಗಿದಿರುವಂತಹ ಭಾವ. ಕಾಡಿನ ಯಾವುದೋ ಮೂಲೆಯಲ್ಲಿದ್ದವನಿಗೆ ವಿಶ್ವದ ಪ್ರವಾಹದಲ್ಲಿ ಹರಿದುಹೋಗಲಿದ್ದ ಒಂದು ಮಹಾಕಥೆಯನ್ನು ಅನುಭವಿಸುವಂತೆ ಮಾಡಿದ ಯಾಜ್ಞಿಕನ ನೆನೆದು ಶಂಬರ ಕೃತಜ್ಞತೆಯಿಂದ ನಮಸ್ಕರಿಸಿದ.

ಯಾಜ್ಞಿಕ ಹೇಳಿದ. "ನಾನೊಂದು ನೆಪಮಾತ್ರ. ಈ ಒಂದು ಮಹಾನ್ ವಿಷಯದ ಅನುಭೂತಿಯನ್ನು ನೀನು ಪಡೆಯಬೇಕೆಂದು ನಿನ್ನ ವಿಧಿಯಾಗಿತ್ತು." ಗಣಪತಿಯ ಬಂಡಾಯದ ಕಥೆಯನ್ನು ಸ್ಮರಿಸುತ್ತಾ ಯಾಜ್ಞಿಕ, "ಇದು ಒಂದು ಮಹತ್ತರವಾದ ದಿನ. ಶಿವ ಶಕ್ತಿಯರನ್ನು, ವಿವಿಧ ಋಷಿಗಳನ್ನು, ದೇವತೆಗಳನ್ನು, ರಾಕ್ಷಸರನ್ನು, ಅರಣ್ಯಕರನ್ನು, ಗಣಾಧಿಪತಿಗಳನ್ನು ರಾಜರುಗಳನ್ನು, ಸಾಮಾನ್ಯ ಜನರನ್ನು; ಒಂದೇ ಕಡೆ ನೋಡಲು ಸಾಧ್ಯವಾಗಿದ್ದು. ಈ ಸಮಾಗಮ ಢುಂಢಿ ಗಣಪತಿಗಲ್ಲದೇ ಬೇರೆ ಯಾರಿಗೂ ಲಭ್ಯವಿಲ್ಲ ಎಂದೇ ನನ್ನ ಭಾವನೆ."

ಶಂಬರ ತಲೆದೂಗಿದ.

"ಶಕ್ತಿಗಣದ ದೇವಿ ಸಾಕ್ಷಾತ್ ಭವಾನಿಯು ಸಿಂಹದ ಮೇಲೇರಿ ಇಲ್ಲಿಗೆ ಬಂದಿದ್ದಾಳೆ. ಡಿಂಡಿಬಾಸುರನನ್ನು ಕೊಂದ ದೇವಿ, ಪಾರ್ವತಿಯ ಮುಂದಿನ ಅವತಾರ. ನಿಜವಾಗಿಯೂ ಈ ನನ್ನ ಜನ್ಮ ಧನ್ಯ!" ಯಾಜ್ಞಿಕ ಕೈ ಮುಗಿದು ತನ್ನ ಮಾತನ್ನು ಮುಂದುವರಿಸಿದ. "ಶಕ್ತಿಗಣವೆಂದರೆ ಮಾತೃಗಣ, ರುದ್ರಗಣ ಪಿತೃಗಣ. ಹೇ ಗೋಮತ್, ಬಾ, ಮತ್ತೆ ಆಕೆಯ ದರುಶನ ಮಾಡೋಣ."

ಶಂಬರ ತಕ್ಷಣ ಹೊರಡಲಿಲ್ಲ. ಅಲ್ಲಿಯೇ ಕುಳಿತಿದ್ದ.

"ಹೇ ಗೋಮತ್, ಇಲ್ಲಿ ಕುಳಿತು ಏನು ಮಾಡುವೆ? ಮೇಲೇಳು ಹೋಗೋಣ." ಯಾಜ್ಞಿಕ ಮತ್ತೆ ಅವನನ್ನು ಕರೆದ.

"ಯಾಜ್ಞಿಕ, ನೀನು ಹೋಗು. ಅಲ್ಲಿ ಮುಖ್ಯವಾದ ಕಾರ್ಯ ನಡೆಯುವಾಗ ನನ್ನ ಕರೆ. ನಾನು ಕೆಲಸಮಯ ಏಕಾಂತದಲ್ಲಿ ಕುಳಿತುಕೊಳ್ಳಬೇಕೆಂದು ಬಯಸುತ್ತೇನೆ." ಎಂದ ಶಂಬರನನ್ನು ಬಿಟ್ಟು ಯಾಜ್ಞಿಕ ಗಣಪತಿ ಮಂಟಪದ ಬಳಿಗೆ ನಡೆದ.

ಶಂಬರನಿಗೆ ಒಂದು ಮಹಾ ಓಘದಲ್ಲಿ ತಾನೊಂದು ಭಾಗವಾದಂತೆ ಭಾಸವಾಗಿ ಅಂಗಾತ ಮಲಗಿದ. ಆಕಾಶದಲ್ಲಿ ನಿಧಾನವಾಗಿ ಸೂರ್ಯನ ವಿವಿಧ ರಂಗಿನ ಛಾಯೆ ನಿಧಾನವಾಗಿ ಪಸರಿಸುತ್ತಿತ್ತು. ಹಕ್ಕಿಗಳ ಚಿಲಿಪಿಲಿ ಗಾನವು ಹೆಚ್ಚುತ್ತಾ ಹೋಗುತ್ತಿತ್ತು. ಮರಗಳ ಮೇಲೆ, ಹುಲ್ಲುಹಾಸಿನ ಮೇಲೆ, ಹರಿಯುತ್ತಿರುವ ನದಿ ನೀರಿನ ಅಲೆಗಳ ಮೇಲೆ ಥಳಥಳಿಸುತ್ತಿದ್ದ ಹೊನ್ನಿನ ಕಾಂತಿಯನ್ನು ನೋಡುತ್ತಾ ಶಂಬರ ಕಣ್ತುಂಬಿಕೊಂಡ.

ಗಣಪತಿ ಮಂಟಪದಲ್ಲಿ ಶಂಖಗಳು, ಕೊಂಬು ಮತ್ತು ಕಹಳೆಗಳು ಮೊಳಗಿದವು. ಡಮರುಗ, ಢಕ್ಕೆ, ನಗಾರಿಗಳ ತಾಡನದ ಸದ್ದು ಕೇಳಿಬರತೊಡಗಿತು. ಗಂಟೆಗಳ ನಾದವು ಮೊಳಗುತ್ತಿದ್ದವು. ಜಯ ಜಯ ಢುಂಢಿ ಗಣಪತಿ, ಜಯ ಜಯ ಮಾತಂಗಾಧಿಪತಿ, ಜಯ ಜಯ ಗಣನಾಯಕ ಇತ್ಯಾದಿ ಜಯ ಘೋಷಗಳು ಮೊಳಗುತ್ತಿದ್ದವು.

ಶಂಬರ ಮೇಲೆದ್ದ.

ನರ, ಸುರ, ಮುನಿ, ಗಣಗಳೆಲ್ಲರೂ ನದಿಯ ದಡದಲ್ಲಿ ನಿಂತು ಘೋಷಗಳನ್ನು ಕೂಗುತ್ತಿದ್ದರು. ಶಂಬರ ಅಲ್ಲಿಗೆ ಹೋದ. ಬಾಳೆದಿಂಡುಗಳಿಂದ ಮಾಡಿದ ಮಂಚದ ಮೇಲೆ ಢುಂಢಿಯ ದೇಹವನ್ನು ಇಟ್ಟರು. ಆಸುರ, ಮಾರ, ಹಸ್ತಿಪಾಲ, ಚೇರುದಿ, ಕುಂಭಿ, ಪಿಚುಡಲ ಮತ್ತು ಇತರ ವಿನಾಯಕರು ಶವ ಮಂಚವನ್ನು ನೀರಿನಲ್ಲಿಳಿಸಿದರು. ನೀರು ಭೋರ್ಗರೆಯುತ್ತಾ ಹರಿಯುವ ಎಡೆಯಲ್ಲಿ ಬಿಟ್ಟುಬಿಟ್ಟರು. ಢುಂಢಿ ನೀರಿನ ಪ್ರವಾಹದಲ್ಲಿ, ಹೊನಲಿನಲ್ಲಿ ಹರಿದು ಹೋದ.

ನಿಧಾನವಾಗಿ ಸುತ್ತಲೂ ನೆರೆದಿರುವವರೂ ಕರಗತೊಡಗಿದರು.

ಸಿಂಹವನ್ನೇ ಏರಿ ಕುಳಿತಿದ್ದ ದೇವಿಯು ಹಿಂದಿರುಗಿ ಹೊರಡುವ ಸೂಚನೆ ತೋರಿದಾಗ ಇಡೀ ಶಕ್ತಿಗಣವೇ ಜಯ ಜಯ ಭವಾನಿ, ಜಯ ಜಯ ಭವಾನಿ ಎಂದು ಕೂಗುತ್ತಾ ಹೊರಟರು.

ಆ ದೇವಿಯು ಢುಂಢಿಯನ್ನು ಜಲ ಸಮಾಧಿ ಮಾಡಿದ ಕಡೆ ಕೈಗಳನ್ನು ಚಾಚಿ ಹರಸುವಂತೆ ಮಾಡಿ ಹಿಂದಕ್ಕೆ ತಿರುಗುವಾಗ, ಆ ಮುಖ! ಶಂಬರನಿಗೆ ಬೆರಗಾಯಿತು.

ಹೌದು, ಅದೇ ಮುಖವೇ ಅಥವಾ ಅದೇ ರೀತಿಯ ಮುಖವೇ?

ಮುಂದೆ ಮುಂದೆ ನಡೆದ.

ಅವಳ ಹಿಂದೆ ಜಯಕಾರಗಳನ್ನು ಹಾಕಿಕೊಂಡು, ವಾದ್ಯಗಳನ್ನು ನುಡಿಸಿಕೊಂಡು ನಡೆಯುತ್ತಿದ್ದ ಶಕ್ತಿಗಣ ಮತ್ತು ಇತರರನ್ನು ಹಾದು ಹೋಗುವುದು ಶಂಬರನಿಗೆ ಸುಲಭವಾಗಲಿಲ್ಲ. ಆದರೂ ಅವರ ಗುಂಪಿನಲ್ಲಿ ಕಷ್ಟಪಟ್ಟು ನುಗ್ಗುತ್ತಾ ಹೋದ. ದೇವಿಯನ್ನು ಹೊತ್ತಿದ್ದ ಆ ಸಿಂಹವು ನಿಧಾನವಾಗಿಯೇನೂ ನಡೆಯುತ್ತಿರಲಿಲ್ಲ.

ಶಂಬರನಿಗೆ ತನಗೆ ಅಷ್ಟು ಬೇಗ ಬೇಗ ನಡೆಯಲಾರದೇ ಹೋದಾಗ, “ಅಂಬಾ, ಅಂಬಾ...” ಎಂದು ಜೋರಾಗಿ ಕೂಗಿದ.

ಸಿಂಹವಾಹಿನಿ ವಸುಮಾ ಹಿಂದಿರುಗಿ ನೋಡಿದಳು.

ಶಂಬರ, “ಅಂಬಾ, ಅಂಬಾ...” ಎಂದು ಕೈಚಾಚಿ ಆನಂದದಿಂದ ಕೂಗಿದ. ಅವನ ಕಣ್ಣುಗಳಿಂದ ನೀರು ಹರಿಯುತ್ತಿತ್ತು.

ಅವನನ್ನು ನೋಡುತ್ತಲೇ ವಸುಮಾ ನಸುನಕ್ಕು ಮುಂದೆ ತಿರುಗಿದಳು.

ಶಂಬರನ ಆನಂದ ಆಕ್ರಂದನಕ್ಕೆ ತಿರುಗಿತು.

"ಅಂಬಾ ನಾನು ಶಂಬರ. ಅಂಬಾ, ವಸುಮಾ, ಮಾತೇ....... ನಾನು ಶಂಬರ. ಅಂಬಾ..." ಎಂದು ಕೂಗುತ್ತಲೇ ಅವಳ ಹಿಂದೆ ಓಡಿದ. ಶಕ್ತಿಗಣವು ಹೊರಗೆ ನಡೆಯಿತು. ಶಂಬರನೂ ಹೊರಗೆ ಓಡಿದ. ಏನೇ ಆಗಲಿ ಅವಳನ್ನು ಸಮೀಪಿಸಿಯೇ ತೀರಬೇಕೆಂದು ಶಂಬರ ಹಟ ತೊಟ್ಟಿದ್ದ.

"ಶಂಬರ." ಶಕ್ತಿಗಣದ ಹೆಂಗಸೊಂದು ಅವನ ರಟ್ಟೆ ಹಿಡಿದೆಳೆದಳು.

"ಶಂಬರ, ನಿನ್ನ ತಾಯಿ ಈಗ ಲೋಕಕ್ಕೆಲ್ಲಾ ತಾಯಿ. ಶಕ್ತಿಗಣದ ಅಧಿದೇವತೆ. ಅವಳು ಬರಿಯ ಅಂಬಾ ಅಲ್ಲ. ಎಲ್ಲರ ಅಂಬಾ ಭವಾನಿ. ಢಂಢಿಬಾಸುರನನ್ನು ಕೊಂದು ಲೋಕಕಲ್ಯಾಣ ಮಾಡಿರುವವಳು." ಆಕೆ ಶಂಬರನನ್ನು ಸಮಾಧಾನಿಸಿದಳು.

"ನಿನಗೆ ನನ್ನ ನೆನಪಿದೆಯೇ?" ಎಂದವಳ ಮುಖವನ್ನು ಅಳುತ್ತಿದ್ದ ಶಂಬರ ದಿಟ್ಟಿಸಿ ನೋಡಿದ.

ಮಸುಕು ಮಸುಕಾದ ನೆನಪು ಸ್ಪಷ್ಟವಾಯಿತು.

ಅಂದು ತನ್ನ ವಸುಮಾಳನ್ನು ಕರೆದೊಯ್ದುವಳಲ್ಲವೇ ಇವಳು? ವಯಸ್ಸಾಗಿದ್ದರೂ, ಸ್ಥೂಲಕಾಯವಾಗಿದ್ದರೂ ಗುರುತಿಸಲು ಸಾಧ್ಯವಾಗಿತ್ತು. ಹೇಗೆ ಮರೆಯಲಾದೀತು ತನ್ನ ತಾಯಿಯನ್ನು ತನ್ನಿಂದ ಬೇರ್ಪಡಿಸಿ ಕರೆದುಕೊಂಡು ಹೋದವಳನ್ನು!

ಶಂಬರ ಕ್ರೋಧದಿಂದ ಮೇಲೆದ್ದ. ಆದರೆ, ಅವಳು ಸ್ಥಿರವಾಗಿ ನಿಂತಿರುವ ಪರಿಯನ್ನು ಕಂಡು ಅವನಿಗೇನೂ ಮಾಡಲಾಗಲಿಲ್ಲ. ಅವಳೇ ಅವನನ್ನು ಹೊಳೆಯ ಕಡೆಗೆ ಕರೆದುಕೊಂಡು ಹೋದಳು.

"ನಾನೂ ಕೂಡ ಈಗ ಅದೇ ಶಕ್ತಿಗಣದವಳೇ. ನಾವು ಕಾಮರೂಪದವರು. ಕಾಮಾಕ್ಷ ಪ್ರದೇಶವನ್ನು ದಾಟಿ ಹೋದರೆ ಈಶಾನ್ಯದ ದಿಕ್ಕಿನಲ್ಲಿ ಗಾರೋ ಎಂಬ ಪರ್ವತವಿದೆ. ಅಲ್ಲಿಯೇ ನಾವೆಲ್ಲರೂ ಹುಟ್ಟಿದ್ದು ಬೆಳೆದಿದ್ದು. ನಮ್ಮದು ಸ್ತ್ರೀಪ್ರಧಾನವಾದ ಬುಡಕಟ್ಟು. ಅಲ್ಲಿ ಎಲ್ಲವನ್ನೂ ನಾವೇ ಮಾಡುತಲಿದ್ದು. ಸಮರಕಲೆಯನ್ನೂ ನಾವು ಅಲ್ಲಿ ಕಲಿತಿದ್ದೆವು. ಆದರೆ, ಅಲ್ಲಿ ನಾವು ಇಚ್ಛಿಸುವಂತಹ ಪೌರುಷದ ಪುರುಷರು ಸಿಗುವುದೂ ದುರ್ಲಭವಾಗಿತ್ತು. ಹಾಗಾಗಿ ನಮ್ಮ ಒಂದು ಹುಡುಗಿಯರ ತಂಡವು ನಮ್ಮ ನಮ್ಮ ತಾಯಂದಿರ ಜೊತೆಗೂಡಿ ಬ್ರಹ್ಮಾವರ್ತದ ಕಡೆಗೆ ಬಂದೆವು. ಅಲ್ಲಿ ನಿನ್ನ ತಾಯಿ ಮತ್ತು ನಾವು ಕೆಲವರು ಒಬ್ಬ ಶ್ರೀಮಂತ ಪುರೋಹಿತನಾದ ವೈದಿಕ ಬ್ರಾಹ್ಮಣನ ಮನೆಯಲ್ಲಿ ಕೆಲಸ ಮಾಡುತ್ತಿದ್ದೆವು.

ಆ ಬ್ರಾಹ್ಮಣ ಗೃಹದ ಎಲ್ಲಾ ಪುರುಷರಿಗೂ ನಿನ್ನ ತಾಯಿಯ ಮೇಲೆ ಮೋಹ. ದಾಸಿಯಾದ್ದರಿಂದ ಅವಳನ್ನು ಅವರು ಬಳಸಿಕೊಂಡರು.

ದಸ್ಯುವಾದ ಶಂಬರನೆಂಬುವನು ಆ ಬ್ರಾಹ್ಮಣರಿಂದ ನಮ್ಮೆಲ್ಲರನ್ನೂ ಬಿಡಿಸಿ ಕಾಡಿಗೆ ಕರೆದುಕೊಂಡು ಹೋಗಿ ಹೊಸ ಜೀವನ ನಡೆಸುವ ಭರವಸೆ ನೀಡಿದ್ದ.

ಅವನ ಮೇಲೆ ನಿನ್ನ ತಾಯಿ ವಸುಮಾಗೆ ಪ್ರೇಮವಿತ್ತು. ಆದರೆ, ಅವಳು ಯಾವುದೋ ಬ್ರಾಹ್ಮಣನಿಂದ ಬಸುರಾಗಿದ್ದಳು. ಅವನು ಆ ಬ್ರಾಹ್ಮಣರನ್ನು ಕೊಂದು ಅವನ ಎಲ್ಲಾ ವಸ್ತುಗಳನ್ನು ದೋಚಿ, ಅವರೆಲ್ಲಾ ಗೋಸಂಪತ್ತನ್ನೂ ತನ್ನ ಸಹಾಯಕರಿಂದ ಅಪಹರಿಸಿ, ಒಂದು ಅಶ್ವರಥದಲ್ಲಿ ಗರ್ಭಿಣಿ ವಸುಮಾಳೊಡನೆ ಪಲಾಯನ ಮಾಡಿ ಜಹ್ನೂವಸ ಅರಣ್ಯದಲ್ಲಿ ಅವಳನ್ನು ಇರಿಸಿದ. ಅಲ್ಲಿಯೇ ಮನೆಯನ್ನು ಮಾಡಿ ಅವಳನ್ನು ನೋಡಿಕೊಂಡ.

ನೀನು ಹುಟ್ಟಿದೆ. ಆಗ ನಮ್ಮೆಲ್ಲರನ್ನೂ ಕರೆದುಕೊಂಡು ಬರಲು ಅವನು ಬ್ರಹ್ಮಾವರ್ತಕ್ಕೆ ಬಂದಾಗ ಅವನ ಕೃತ್ಯವನ್ನು ಬಲ್ಲ ಆರ್ಯರು ಅವನನ್ನು ಕೊಂದು ಹಾಕಿದರು. ನಾವು ವಿವಿಧ ಸ್ಥಳಗಳಿಗೆ ಚದುರಿಹೋದೆವು. ಆದರೆ, ಒಬ್ಬೊಬ್ಬರನ್ನೂ ಸಂಪರ್ಕದಲ್ಲಿ ಇರಿಸಿಕೊಂಡಿದ್ದೆವು.

ಕಾಮಾಕ್ಷದಲ್ಲಿ ನಮ್ಮ ತಾಯಂದಿರನ್ನು ನೋಡಲು ನಾವು ಒಟ್ಟಾಗಿ ಹೋದೆವು. ನಮ್ಮ ತಾಯಂದಿರನ್ನು ಕಂಡು, ಅವರೊಂದಿಗೆ ಕಾಲ ಕಳೆದು ನಾವು ಮರಳಿ ಬರುವಾಗ ಶರವಣ ಪರ್ವತದ ಕಣಿವೆಯಲ್ಲಿ ಡಿಂಡಿಭನೆಂಬುವನು ಗುಂಪು ಕಟ್ಟಿಕೊಂಡು ಅಲ್ಲಿನ ಗಿರಿಜನರನ್ನು ಹಿಂಸಿಸುತ್ತಿದ್ದ. ಹಾಗೂ ಅವನನ್ನು ನಿಗ್ರಹಿಸಲು ಅಲ್ಲಿನ ಜನರು ಶಕ್ತಿಗಣದ ಧೂಮಾವತಿಯನ್ನು ಮೊರೆ ಹೋದರು.

ಡಿಂಡಿಭನಿಗೆ ಹದಿನೆಂಟು ಜನ ಸೋದರರು. ಅವರೆಲ್ಲರೂ ಪಶುಪ್ರವೃತ್ತಿಯ ಕ್ರೂರಿಗಳು. ಪಾರ್ವತೀದೇವಿಯ ಶಕ್ತಿಗಣದ ಧೂಮಾವತಿಯ ಸಂಪರ್ಕಕ್ಕೆ ಬಂದ ನಾವು ಸಮರ ಕಲೆ ತಿಳಿದವರಾದ್ದರಿಂದ ಅವರೊಂದಿಗೆ ಸೇರಿದೆವು.

ಧೂಮಾವತಿಯು ಹಲವರನ್ನು ಸಂಹರಿಸಿದಳು. ಈ ಶಕ್ತಿಗಣದ ಜೊತೆಗಿನ ಆ ಅಸುರರ ಸಮರ ಹಲವು ವರ್ಷಗಳ ಕಾಲ ನಡೆಯಿತು. ಧೂಮಾವತಿಯೂ ಕಾಲವಾದ ಮೇಲೆ ವಸುಮಾ ಶಕ್ತಿಗಣದ ನಾಯಕಿಯಾದಳು. ಡಿಂಡಿಭನನ್ನು ಕೊಂದಳು. ಅವಳು ಶಕ್ತಿಗಣದ ನಾಯಕಿಯಾಗಿಯೇ ಉಳಿದು ಶಾಕ್ತಳಾಗಿ ತನ್ನ ತಪಸ್ಸನ್ನು ಮುಂದುವರೆಸಿದ್ದಾಳೆ. ಅವಳೇ ಈಗ ದೇವಿ. ಅವಳೇ ಜಗನ್ಮಾತೆ. ಅವಳು ನಿನಗೊಬ್ಬಳಿಗೆ ಮಾತ್ರ ತಾಯಿಯಲ್ಲ. ಎಲ್ಲರಿಗೂ ತಾಯಿ. ಅವಳೇ ಪ್ರಕೃತಿ. ಭವಾನಿ. ನಿನ್ನ ಅಂಬಾ ಭವಾನಿ."

ಕುಸಿದು ಕುಳಿತಿದ್ದ ಶಂಬರನ ಬಿಟ್ಟು ಆಕೆಯೂ ಹೊರಟು ಹೋದಳು.

ಮಟಮಟ ಮಧ್ಯಾಹ್ನದ ಬಿಸಿಲಿನಲ್ಲಿ ನೆರಳಿಗಾಗಿಯೂ ನೋಡದೇ ಕುಳಿತಲ್ಲಿಯೇ ಕುಳಿತಿದ್ದ ಶಂಬರ.

"ಹೇ ಗೋಮತ್, ನೀವಿಲ್ಲಿದ್ದೀರಿ!"

ಯಾಜ್ಞಿಕ ಕೈಯಲ್ಲಿ ಫಲಗಳನ್ನು ಹಿಡಿದು ಓಡೋಡಿ ಬಂದ.

"ನಾನು ನಿಮ್ಮನ್ನು ಸಾಕಷ್ಟು ಹುಡುಕಿದೆ. ಅಂತ್ಯಕ್ರಿಯೆಯ ನಂತರ ಸ್ನಾನ ಮುಗಿಸಿ ನಿಮಗೆ ಈ ಫಲಗಳನ್ನು ಕೊಡಲು ಅಲೆದಾಡಿದೆ. ನಿಮ್ಮದು ಸ್ನಾನವಾಯಿತೇನು?"

ಇಲ್ಲವೆಂಬಂತೆ ತಲೆಯಾಡಿಸಿದ ಶಂಬರ.

"ಹೋಗಿ ಸ್ನಾನ ಮುಗಿಸಿ ಬನ್ನಿ." ಎಂದ ಯಾಜ್ಞಿಕ. ಮಾಡಲು ಮನಸ್ಸಿಲ್ಲದ ಶಂಬರ ಹಾಗೆಯೇ ಕುಳಿತಿದ್ದ.

"ಹೇ ಗೋಮತ್, ದಯಮಾಡಿ ಹೋಗಿ. ಢುಂಢಿ ಗಣಪತಿಯ ದೇಹಾಂತವು ಎಲ್ಲರಿಗೂ ಘಾಸಿ ಮಾಡಿರುವಂತಹುದೇ. ಆದರೆ, ಅದು ತಪ್ಪಿಸಲಾಗದ್ದು. ದಯಮಾಡಿ ಏಳಿ. ಹೋಗಿ." ಎಂದ ಯಾಜ್ಞಿಕ.

ಶಂಬರ ಮೌನವಾಗಿ ಹೋಗಿ ನದಿಯಲ್ಲಿ ಸ್ನಾನ ಮಾಡಿದ.

ಹಣ್ಣುಗಳನ್ನು ಸೇವಿಸುತ್ತಾ ಯಾಜ್ಞಿಕ ಕೇಳಿದ.

“ಹೇ ಗೋಮತ್, ನಾನು ಅಶ್ವದೊಂದಿಗೆ ನನ್ನ ಸ್ವಸ್ಥಳಕ್ಕೆ ಹೋಗಿ ಬರಲೇ? ಬಹು ಬೇಗನೆ ಹಿಂದಿರುಗುತ್ತೇನೆ.”

ಒಪ್ಪಿದ ಶಂಬರ ಅವನಿಂದ ಬೀಳ್ಕೊಂಡು ಯದು, ಕುಶಿಕ, ಶಕಧೂಮ ಮತ್ತು ವದೀರಜ್ಜರನ್ನು ಕಂಡು ಅವರಿಂದ ಬೀಳ್ಕೊಂಡು ತನ್ನ ಕುದುರೆಯನ್ನೇರಿ ಜಹ್ನೂವಸುವಿನ ಮಾರ್ಗ ಹಿಡಿದ.

*

ಸುವಾಸ್ತುವಿನ ದ್ವಾರದ ಬಳಿ ಶಂಬರನ ಕುದುರೆ ನಿಂತಾಗ, ಹೊರಗಡೆಯೇ ಕಟ್ಟಿಗೆ ಸೀಳುತ್ತಿದ್ದ ಅಮ್ಮಿತ ಓಡೋಡಿ ಬಂದು, “ಅಗ್ರಜಾ...” ಎಂದು ಅವನನ್ನು ಅಪ್ಪಿಕೊಂಡ.

“ಅನುಜಾ.” ಎಂದು ಅವನನ್ನು ಗಾಢವಾಗಿ ತಬ್ಬಿಕೊಂಡ ಶಂಬರ ಕೆಲಕಾಲ ಹಾಗೆಯೇ ಭಾವಪರವಶನಾಗಿ ಇದ್ದ.

“ಅಗ್ರಜಾ, ನೀನು ಹೇಳಿದಂತೆ ಕಾಮರೂಪದಿಂದ ಯಾವ ಹೆಂಗಸರ ಗುಂಪೂ ಬರಲಿಲ್ಲ. ನಿಮ್ಮ ಅಂಬಾ ಎನ್ನುವ ಕರು ಇಲ್ಲೇ ಎಲ್ಲೋ ಹೋಗಿದೆ ಎನ್ನುವ ಮಾತು ಕೇಳುವಂತವರಾರೂ ಬರಲಿಲ್ಲ.” ಎಂದು ನಿಧಾನವಾಗಿ ಹೇಳಿದ ಅಮ್ಮಿತ.

“ಪರವಾಗಿಲ್ಲ. ಅಗ್ರಜನೆನ್ನುವ ಅನುಜನಿದ್ದಾನಲ್ಲವೇ! ಅಷ್ಟೇ ಸಾಕು.”

ಶಂಬರ ಅವನನ್ನು ಪದೇ ಪದೇ ಅಪ್ಪಿಕೊಂಡು ನಂತರ ಕುಟೀರದೊಳಗೆ ಕರೆದುಕೊಂಡ ಹೋದ.

“ಬಾ ನಿನಗೆ ನಿನ್ನ ಢುಂಢಿ ಗಣಪತಿಯ ಕಥೆ ಹೇಳುತ್ತೇನೆ.”

**ಮುಕ್ತಾಯ**

**ಈ ಕಾದಂಬರಿಯ ಚಿಂತನೆಗೆ ಅಥವಾ ಮೂಲಗ್ರಾಸ ಒದಗಿಸಿದ ಕೆಲವು ಪುಸ್ತಕಗಳು**


**ದೇವರು:** ಎ ಎನ್ ಮೂರ್ತಿರಾವ್

**ದೇವಾಲಯಗಳು ಮತ್ತು ಲೈಂಗಿಕ ಶಿಲ್ಪ:** ಎಸ್ ಆರ್ ಶಾಸ್ತ್ರಿ (ಮೂಲ: ತಾಪಿ ಧರ್ಮಾರಾವ್)

**ಗಣಪತಿ:** ಪುರಾಣಂ ಸುಬ್ರಹ್ಮಣ್ಯ ಶರ್ಮಾ (ಮೂಲ: ದೇವಿಪ್ರಸಾದ ಚಟ್ಟೋಪಧ್ಯಾಯ)

**ಗೋವು ಪವಿತ್ರ ಎಂಬ ಮಿಥ್ಯೆ:** ನಾ. ದಿವಾಕರ (ಮೂಲ: ಡಿ ಎನ್ ಝಾ)

**ಪ್ರಾಚೀನ ಭಾರತದಲ್ಲಿ ಶೂದ್ರರು:** ಡಾ. ಜೆ ಶ್ರೀನಿವಾಸಮೂರ್ತಿ, ಡಾ. ಆರ್ ಶೋಭಾ, ಡಾ. ಎಸ್. ಗುರುದತ್, ಡಾ. ಜಿ ರಾಮಕೃಷ್ಣ (ಮೂಲ: ಆರ್ ಎಸ್ ಶರ್ಮ)

**ವೇದಗಳಲ್ಲಿ ಜನಸಾಮಾನ್ಯರು:** ಬಿ ವಿ ವೀರಭದ್ರಪ್ಪ

**ರಾಮಾಯಣ ವಿಷವೃಕ್ಷ:** ಡಾ. ಬಂಜಗೆರೆ ಜಯಪ್ರಕಾಶ (ಮೂಲ: ರಂಗನಾಯಕಮ್ಮ)

**ವಿಶ್ವವ್ಯಾಪಿ ಗಣೇಶ:** ಸಂಪಾದಕರು: ಕೀರ್ತಿನಾಥ ಕುರ್ತಕೋಟಿ

**ವೋಲ್ಗಾ ಗಂಗಾ:** ಬಿ ಎಂ ಶರ್ಮಾ (ಮೂಲ: ರಾಹುಲ ಸಾಂಕೃತ್ಯಾಯನ)

**Lokayata : A study in ancient indian materialism:** Debiprasad Chattopadhyaya

**Ganesa: Lord of obstacles, Lord of beginnings:** Paul B. Courtright

**Shiva to Shankara: Decoding the phallic symbol:** Dr. Devdutt Pattanaik